UNIVERSAL
LIBRARY
OU_200990
LIBRARY
UNIVERSAL

OSMANIA UNIVERSITY LIBRARY

Call No. K349.547 D98M    Accession No K4543

Author [illegible]

Title [illegible] 1948

This book should be returned on or before the date last marked below

॥ ಶ್ರೀ ॥

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯಾ ೩೩

ಶ್ರೀಮದ್ವೇದವ್ಯಾಸಮುನಿಪ್ರಣೀತಂ

# ಶ್ರೀಮತ್ಸ್ಯಮಹಾಪುರಾಣಂ

(ಕನ್ನಡ ಅನುವಾದಸಹಿತ)

ಸಂಪುಟ ೭

ಅಧ್ಯಾಯಗಳು ೨೫೨–೨೯೧

ಅನುವಾದಕ

**ವಾಜಪೇಯಂ ಶ್ರೀರಂಗಾಚಾರ್**

ಸಾಹಿತ್ಯವಿದ್ವಾನ್, ಕನ್ನಡ ಪಂಡಿತ

ಮೈಸೂರು

ಶ್ರೀನಿವಾಸ್ ಎಲೆಕ್ಟ್ರಿಕ್ ಪ್ರೆಸ್

೧೯೪೮

# ಪೀಠಿಕೆ

ಮತ್ಸ್ಯಪುರಾಣದ ಮಂದಿರಕ್ಕೆ ಏಳನೆಯ ಕಲಶವನ್ನು ಇಟ್ಟದ್ದಾಯಿತು ಕನ್ನಡದೇವಿಯ ವೈಭವವನ್ನು ಮೆರೆಸುವ ಸುಯೋಗವು ಇದಕ್ಕೆ ಒದಗಿತು

ಇದು ಕೊನೆಯ ಸಂಪುಟ ಇದರಲ್ಲಿ ವಾಸ್ತುಶಿಲ್ಪ, ಪ್ರತಿಮಾಲಕ್ಷಣ, ಪ್ರತಿಷ್ಠಾವಿಧಿ, ರಾಜವಂಶವರ್ಣನ, ಮಹಾದಾನಾನುಕೀರ್ತನ ಎಂಬ ವಿಷಯಗಳು ವಿವರಿಸಲ್ಪಟ್ಟಿವೆ

ವಾಸ್ತುಶಿಲ್ಪವು ಜನಜೀವನಕ್ಕೆ ಅತ್ಯಂತ ನಿಕಟವಾಗಿ ಸಂಬಂಧಿಸಿದ ಶಾಸ್ತ್ರ ಮನೆಯ ನಿವೇಶನದ ಅಳತೆ ಎಷ್ಟಿರಬೇಕು ? ಅಲ್ಲಿ ಮನೆಯನ್ನು ಕಟ್ಟಿದರೆ ಶುಭವೆ ಅಶುಭವೆ ! ಅದನ್ನು ತಿಳಿಯುವ ರೀತಿ ಹೇಗೆ ? ಬಾಗಿಲು ಯಾವ ಕಡೆಗೆ ಇರಬೇಕು ? ಅದರ ಪ್ರಮಾಣವೇನು ? ಮನೆಯ ಮುಟ್ಟುಗಳಿಗೆ ಯಾವ ಯಾವ ಜಾತಿಯ ಮರಗಳು ಒಳ್ಳೆಯವು ? ಗೃಹಾರಂಭಕ್ಕೆ ಉಚಿತವಾದ ಕಾಲ ಯಾವುದು ? ಗ್ರಾಮವನ್ನು ನಿರ್ಮಿಸುವ ಕ್ರಮವೇನು ? ಮುಂತಾದ ಎಷ್ಟೋ ವಿಷಯಗಳನ್ನು ಈ ಪ್ರಕರಣವು ತಿಳಿಸುತ್ತದೆ

ಇಂದಿನ ಸಮಾಜಜೀವನಕ್ಕೆ ಮೇಲಿನ ಹಲವು ನಿಯಮಗಳು ಸರಿಹೋಗುವುದಿಲ್ಲ ಎಷ್ಟೋ ಜನರಿಗೆ ತಮ್ಮ ಮನೆಯ ನಿವೇಶನವನ್ನು ಆರಿಸಿಕೊಳ್ಳಲು ಅವಕಾಶವೇ ಇರುವುದಿಲ್ಲ ದೊರೆತ ನಿವೇಶನದಲ್ಲಿ ಮನೆಯನ್ನು ಕಟ್ಟಿಕೊಳ್ಳಬೇಕಾಗುತ್ತದೆ ಅದರ ಅಳತೆ, ದಿಕ್ಕು, ಆಕಾರ ಮುಂತಾದುವೆಲ್ಲ ಕೆಲವು ಬಾಹ್ಯ ನಿಯಮಗಳನ್ನು ಅನುಸರಿಸಬೇಕಾಗಿದೆ ಆದರೂ ಪ್ರಾಚೀನಕಾಲದ ಜನಜೀವನದ ರೀತಿಯನ್ನು ತಿಳಿಯಲು ಈ ಶಾಸ್ತ್ರವು ಬಹು ಸಹಕಾರಿಯಾಗಿದೆ ಇದರಲ್ಲಿ ಹೇಳಿರುವ ವಾಸ್ತುಶಾಂತಿ, ಬಲಿದಾನ ಮುಂತಾದ ಶಾಂತಿಕರ್ಮಗಳು ಆಸ್ತಿಕರಿಗೆ ಶ್ರೇಯಸ್ಸನ್ನು ಉಂಟುಮಾಡುವುದರಲ್ಲಿ ಸಂದೇಹವಿಲ್ಲ

ದೇವಾಲಯಗಳ ಮತ್ತು ಮಂಟಪಗಳ ಲಕ್ಷಣವನ್ನು ಸಹ ಈ ಪ್ರಕರಣದಲ್ಲಿ ಹೇಳಿದೆ ವಿಗ್ರಹಕ್ಕೂ ಆಲಯಕ್ಕೂ ಇರಬೇಕಾದ ಆನುರೂಪ್ಯ, ಮೇರು, ಮಂದರ, ಕೈಲಾಸ ಮೊದಲಾದ ವಿಧವಿಧವಾದ ಪ್ರಾಸಾದಗಳು, ಪುಷ್ಪಕ, ಪುಷ್ಪಭದ್ರ ಮುಂತಾದ ಮೂವತ್ತುಬಗೆಯ ಮಂಟಪಗಳು, ಸ್ಥಂಡಿಲಾ, ವಾಪೀ,

ಯಕ್ಷೀ ಮೊದಲಾದ ಹತ್ತು ವಿಧದ ಪೀಠಗಳು ಇವುಗಳ ವಿವರಣವೆಲ್ಲವೂ ಈ ಭಾಗದಲ್ಲಿ ತಿಳಿಯುತ್ತದೆ ನಮ್ಮ ವಾಸ್ತುಶಾಸ್ತ್ರವು ಎಷ್ಟುಮಟ್ಟಿಗೆ ಪರಿಷ್ಕೃತ ವಾಗಿದ್ದಿತೆಂಬುದು ಇದರಿಂದ ವ್ಯಕ್ತವಾಗುತ್ತದೆ

ಶಿಲ್ಪಿಗೂ ಉಪಾಸಕನಿಗೂ ದೇವತಾಮೂರ್ತಿಯ ರೂಪಲಕ್ಷಣಗಳ ಜ್ಞಾನವು ಅವಶ್ಯಕ ಶಿಲ್ಪಿಗೆ ಅದು ಎಷ್ಟು ಪರಿಪೂರ್ಣವಾಗಿರುವುದೋ ಮೂರ್ತಿಯು ಅಷ್ಟು ಪ್ರಶಸ್ತವಾಗುತ್ತದೆ ದೇವಾಲಯಗಳಲ್ಲಿ ನಾವು ಸಾಧಾರಣವಾಗಿ ಪೂಜಿಸುವ ನಾನಾವಿಧವಾದ ದೇವತಾವಿಗ್ರಹಗಳ ಲಕ್ಷಣವು ಇಲ್ಲಿ ವಿವರವಾಗಿ ವರ್ಣಿಸಲ್ಪಟ್ಟಿದೆ ವಾರಾಹ, ನಾರಸಿಂಹ, ವಾಸುದೇವ ಮುಂತಾದ ವೈಷ್ಣವಮೂರ್ತಿಗಳು—ಅರ್ಧ ನಾರೀಶ್ವರ, ತಾಂಡವೇಶ್ವರ, ಹರಿಹರೇಶ್ವರ ಮುಂತಾದ ಶೈವಮೂರ್ತಿಗಳು— ಪಾರ್ವತಿ, ಚಾಮುಂಡಿ, ಲಕ್ಷ್ಮಿ ಮೊದಲಾದ ಸ್ತ್ರೀಮೂರ್ತಿಗಳು ಇವೆಲ್ಲ ಸಲಕ್ಷಣ ವಾಗಿ, ಸಪ್ರಮಾಣವಾಗಿ ನಿರೂಪಿತವಾಗಿವೆ ಇಷ್ಟೇ ಅಲ್ಲ, ಈ ವಿಗ್ರಹಗಳನ್ನು ಪ್ರತಿಷ್ಠೆಮಾಡುವ ವಿಧಾನ, ಅದರಿಂದ ಉಂಟಾಗುವ ಅತಿಶಯವಾದ ಫಲ ಇವುಗಳೂ ಸಹ ವರ್ಣಿಸಲ್ಪಟ್ಟಿವೆ

ಮುಂದಿನ ಪ್ರಕರಣವು ರಾಜರ ಸಂತತಿಯನ್ನು ವಿವರಿಸುತ್ತದೆ ಇತಿಹಾಸ ಸಂಶೋಧಕರಿಗೆ ಈ ಭಾಗವು ಆಸಕ್ತಿಯನ್ನು ಉಂಟುಮಾಡತಕ್ಕುದಾಗಿದೆ ಪೌರವರು ಐಕ್ಷ್ವಾಕರು, ಮಾಗಧರು ಅಥವಾ ಬೃಹದ್ರಥರು ನಮ್ಮ ದೇಶದ ಬೇರೆ ಬೇರೆ ಪ್ರಾಂತಗಳಲ್ಲಿ ಆಳಿದರು ಅವರಲ್ಲಿ ಅನೇಕರು ಚರಿತ್ರೆಯ ಕಾಲಕ್ಕಿಂತ ಹಿಂದಿನವರು ಶಾಕ್ಯ, ಶುದ್ಧೋದನ, ಸಿದ್ಧಾರ್ಥ ಮುಂತಾದ ಐತಿಹಾಸಿಕ ರಾಜರು ಇಕ್ಷ್ವಾಕುವಂಶದವರು ಇವರು ಮಧ್ಯದೇಶದಲ್ಲಿ ರಾಜ್ಯಭಾರವನ್ನು ಮಾಡಿದರು ಮಗಧರಾಜ್ಯದಲ್ಲಿ ಶಿಶುನಾಕರ ಮತ್ತು ನಂದರ ಸಂತತಿಯವರು ಆಳಿದರು ಕೌಟಿಲ್ಯನಿಂದ ನಂದರ ವಧೆ ಆಯಿತು ಮೌರ್ಯಚಕ್ರಾಧಿಪತ್ಯವು ಸ್ಥಾಪಿಸಲ್ಪಟ್ಟಿತು ಮೌರ್ಯರ ಅನಂತರ ಶುಂಗರೂ, ಕಣ್ವರೂ ರಾಜ್ಯಭಾರವನ್ನು ನಡಸಿದರು ಕೊನೆಗೆ ಆಂಧ್ರರು ಮಗಧರಾಜ್ಯವನ್ನು ಆಕ್ರಮಿಸಿದರು ಇವರಲ್ಲದೆ ಇನ್ನೂ ಹಲವು ಜನ ರಾಜರು ಅಲ್ಲಲ್ಲಿ ಆಳುತ್ತಿದ್ದರು ಅವರು "ಕ್ಷುದ್ರರಾಜರು"

ಮೇಲಿನ ವಿಷಯಗಳ ಆಧಾರದಿಂದ ಪುರಾಣದ ಕಾಲವನ್ನು ನಿಷ್ಕರ್ಷಿಸಲು ಆಧುನಿಕ ವಿದ್ವಾಂಸರು ಪ್ರಯತ್ನಿಸಿದ್ದಾರೆ ಪ್ರಾಚೀನ ಸಂಪ್ರದಾಯದಂತೆ ಪುರಾಣ ಗಳೆಲ್ಲವೂ ವ್ಯಾಸಮಹರ್ಷಿಯಿಂದ ಪ್ರಣೀತವಾದುವು ಅವುಗಳೆಲ್ಲ ವೇದ

ಗಳಂತೆಯೇ ಅನಾದಿಯಾಗಿವೆ ಆದರೆ ವಿಮರ್ಶಕರು ಈ ಅಭಿಪ್ರಾಯವನ್ನು ಒಪ್ಪುವುದಿಲ್ಲ ಅವರ ವಾದದ ರೀತಿ ಹೀಗಿರುವುದು "ಪುರಾಣಗಳ ಶೈಲಿಯನ್ನೂ ವಿಷಯಗಳನ್ನೂ ಗಮನಿಸಿದರೆ ಅವು ಬೇರೆಬೇರೆ ಕಾಲಗಳಲ್ಲಿ ಬೇರೆಬೇರೆಯವರಿಂದ ರಚಿತವಾದುವೆಂದು ಹೇಳಬಹುದು ಶ್ಲೋಕಗಳ ಸಂಖ್ಯೆಯಲ್ಲಿ ಅವು ಹೆಚ್ಚುತ್ತಲೂ ಕುಗ್ಗುತ್ತಲೂ ಬಂದಿವೆ ವಿಷ್ಣುಪುರಾಣದಲ್ಲಿ ೨೩ ಸಾವಿರ ಶ್ಲೋಕಗಳಿದ್ದುವೆಂದು ಹೇಳಿದೆ ಆದರೆ ಈಗ ಅದರಲ್ಲಿ ಇರುವುದು ಏಳುಸಾವಿರ ಶ್ಲೋಕಗಳು ಮಾತ್ರ ಭವಿಷ್ಯಪುರಾಣದಲ್ಲಿ ಹಳೆಯ ವಿಷಯಗಳು ಎಷ್ಟೋ ಲುಪ್ತವಾಗಿವೆ ಹೊಸ ಹೊಸ ವಿಷಯಗಳು ಸೇರಿಕೊಂಡಿವೆ ಆದುದರಿಂದ ಅವುಗಳ ಕಾಲವನ್ನು ಸ್ಥೂಲವಾಗಿ ಮಾತ್ರ ಹೇಳಬಹುದು ಪುರಾಣಗಳೆಲ್ಲ ಕ್ರಿ ಶ ಆರನೆಯ ಶತಮಾನಕ್ಕಿಂತ ಈಚಿನವು ಎಂಬ ಪ್ರೊ|| ವಿಲ್ಸನ್‌ರವರ ಅಭಿಪ್ರಾಯವು ಸರ್ವಸಮ್ಮತವಲ್ಲ ಏಕೆಂದರೆ ಇದಕ್ಕಿಂತ ಹಿಂದೆಯೇ ಪುರಾಣಗಳು ಇದ್ದುವೆಂಬುದಕ್ಕೆ ಆಧಾರಗಳಿವೆ ಆಪಸ್ತಂಭ ಧರ್ಮಸೂತ್ರದಲ್ಲಿ (II, ೯, ೨೪೬) ಭವಿಷ್ಯಪುರಾಣದ ವಿಷಯವು ಉಲ್ಲೇಖಿತವಾಗಿದೆ ಆದುದರಿಂದ ಅದು ಕ್ರಿ ಪೂ ೩ನೆಯ ಶತಮಾನಕ್ಕಿಂತ ಹಿಂದಿನದಾಗಿರಬೇಕು ಮತ್ಸ್ಯಪುರಾಣದಲ್ಲಿ ಆಂಧ್ರರಾಜರ ಆಳ್ವಿಕೆಯವರೆಗೆ ಚಾರಿತ್ರಾಂಶವು ಸೂಚಿತವಾಗಿದೆ ಆದಕಾರಣ ಅದು ಕ್ರಿ ಶ ೩ನೆಯ ಶತಮಾನದ ಮಧ್ಯಭಾಗಕ್ಕಿಂತ ಪ್ರಾಚೀನವಾಗಿರಲಾರದು" ಎಂದು ಹೇಳುತ್ತಾರ

ಆಕ್ಸ್‌ಫರ್ಡ್ ಯೂನಿವರ್ಸಿಟಿಯ ಸುಪ್ರಸಿದ್ಧ ವಿದ್ವಾಂಸರಾದ ಪ್ರೊ|| ಪಾರ್ಜಿಟರ್‌ರವರು "Puranic Text of the Dynasty of the Kali Age" ಎಂಬ ತಮ್ಮ ಗ್ರಂಥದ ಪೀಠಿಕೆಯಲ್ಲಿ ಈ ರೀತಿಯಾಗಿ ಬರೆದಿರುವರು "ಮತ್ಸ್ಯ, ವಾಯು ಮತ್ತು ಬ್ರಹ್ಮಾಂಡಪುರಾಣಗಳಲ್ಲಿ ರಾಜವಂಶದ ವರ್ಣನವು ಒಂದೇರೀತಿಯಾಗಿದೆ ಈ ಮೂರು ಪುರಾಣಗಳಿಗೂ ಈ ವಿಷಯದಲ್ಲಿ ಭವಿಷ್ಯಪುರಾಣವೇ ಮೂಲವೆನ್ನಬಹುದು ಅದರಲ್ಲಿ ಮೊತ್ತಮೊದಲು ಕ್ರಿ ಶ ೩ನೆಯ ಶತಮಾನದ ಮಧ್ಯಭಾಗದ ವರೆಗೆ ಆಳಿದ ರಾಜರ ಹೆಸರುಗಳು ಮಾತ್ರ ಸೂಚಿತವಾಗಿದ್ದುವು ಮತ್ಸ್ಯಪುರಾಣದಲ್ಲಿ ಇಷ್ಟೇ ವಿಷಯವು ಎಂದರೆ ಆಂಧ್ರರಾಜರ ಆಳ್ವಿಕೆಯ ವರೆಗೆ ಹೇಳಲ್ಪಟ್ಟಿದೆ ಬಳಿಕ ಭವಿಷ್ಯಪುರಾಣಕ್ಕೆ ಮತ್ತಷ್ಟು ಸಂಗತಿಗಳನ್ನು ಕೂಡಿಸಿ ಐತಿಹಾಸಿಕಾಂಶಗಳನ್ನು ಗುಪ್ತರ ಕಾಲದ ವರೆಗೂ ಬೆಳಸಿದರು ಆಗ ವಾಯು ಮತ್ತು ಬ್ರಹ್ಮಾಂಡಪುರಾಣಗಳಲ್ಲಿ ಈ ಭಾಗವು ಸೇರಿತು ಭವಿಷ್ಯತ್ಪುರಾಣವೆಂಬ ಹೆಸರನ್ನು ಅನ್ವರ್ಥವಾಗಿ ಮಾಡಬೇಕೆಂಬ ಉದ್ದೇಶದಿಂದ ಮುಂದಿನ ಬರೆಹ

ಗಾರರು ಅದಕ್ಕೆ ಆಗಾಗ್ಗೆ ಚರಿತ್ರಾಂಶಗಳನ್ನು ಕೂಡಿಸುತ್ತಲೇ ಬಂದರು ಇದರ ಪರಿಣಾಮವಾಗಿ ಹತ್ತೊಂಬತ್ತನೆಯ ಶತಮಾನದವರೆಗಿನ ರಾಜರ ಹೆಸರುಗಳನ್ನು ಕೂಡ ಅದರಲ್ಲಿ ಕಾಣಬಹುದು "

ಒಟ್ಟಿನಲ್ಲಿ ಕ್ರಿ ಪೂ ಒಂದು ಅಥವಾ ಎರಡನೆಯ ಶತಮಾನದಿಂದ ಆರಂಭವಾಗಿ ಪುರಾಣಗಳು ಒಂದಾಗುತ್ತಲೊಂದು ರಚಿತವಾದುವೆಂಬುದು ವಿಮರ್ಶಕರ ಅಭಿಪ್ರಾಯವೆನ್ನಬಹುದು

ತುಲಾಪುರುಷದಾನ, ಹಿರಣ್ಯಾಶ್ವದಾನ ಮುಂತಾದ ಷೋಡಶಮಹಾದಾನಗಳನ್ನು ಮುಂದೆ ವರ್ಣಿಸಿದೆ ಮತ್ಸ್ಯಪುರಾಣದಲ್ಲಿ ಪ್ರತಿಪಾದಿತವಾದ ಮುಖ್ಯ ವಿಷಯಗಳ ಅನುಕ್ರಮಣಿಕೆಯನ್ನು ಹೇಳಿ, ಪುರಾಣಶ್ರವಣದಿಂದ ಬರುವ ಫಲವನ್ನೂ ಪುರಾಣವನ್ನು ಕೇಳುವಾಗ ಅನುಸರಿಸಬೇಕಾದ ನಿಯಮಗಳನ್ನೂ ತಿಳಿಸಿ ಗ್ರಂಥವು ಸಮಾಪ್ತವಾಗುತ್ತದೆ

ಅಮೋಘವಾದ ಈ ಮಹಾಪುರಾಣವು ನಿರ್ವಿಘ್ನವಾಗಿಯೂ ಸಾಂಗವಾಗಿಯೂ ಕನ್ನಡಭಾಷೆಗೆ ಅನುವಾದವಾದುದು ಆಳುವ ಮಹಾಪ್ರಭುಗಳಾದ ಶ್ರೀಮಜ್ಜಯಚಾಮರಾಜೇಂದ್ರಒಡೆಯರ್ ಬಹದ್ದೂರ್, ಜಿ ಸಿ ಬಿ , ಜಿ ಸಿ ಎಸ್ ಐ ರವರ ಔದಾರ್ಯದಿಂದ ಕನ್ನಡ ಸಾಹಿತ್ಯದ ಏಳ್ಗೆಯಲ್ಲಿ ಅವರಿಗೆ ಇರುವ ಅಪಾರವಾದ ಆಸಕ್ತಿಯಿಂದ ಜಗದೀಶ್ವರನು ಅವರಿಗೆ ಸಕಲವಿಧವಾದ ಮಂಗಳವನ್ನೂ ಕರುಣಿಸಲಿ

ಸರ್ವಧಾರಿ ಸಂವತ್ಸರ,<br>
ಆಶ್ವಯುಜ ಶುದ್ಧ ಪಾಡ್ಯ ಭಾನುವಾರ,<br>
೩—೧೦—೧೯೪೮

**ವಾಜಪೇಯಂ ಶ್ರೀರಂಗಾಚಾರ್,**<br>
ಅನುವಾದಕ

# ವಿಷಯ ಸೂಚಿಕೆ


| ಅಧ್ಯಾಯ | ವಿಷಯ | ಪುಟ |
|---|---|---|
| ೨೫೨ | ವಾಸ್ತುಶಾಸ್ತ್ರ<br>ವಾಸ್ತುಶಾಸ್ತ್ರಪ್ರವರ್ತಕರು ವಾಸ್ತುಪುರುಷನ ಉತ್ಪತ್ತಿ | ೧ |
| ೨೫೩ | ವಾಸ್ತುಶಾಸ್ತ್ರ<br>ಏಕಾಶೀತಿಪದವಾಸ್ತು ನಿರ್ಣಯ—ಗೃಹಾರಂಭಕ್ಕೆ ಉಚಿತವಾದ ಕಾಲ, ಮಾಸಫಲ, ನಕ್ಷತ್ರಫಲ, ವಾರಫಲ | ೬ |
| ೨೫೪ | ವಾಸ್ತುಶಾಸ್ತ್ರ<br>ಗೃಹಮಾನನಿರ್ಣಯ ಚತುಃಶಾಲ ಮುಂತಾದ ಬಗೆಬಗೆಯ ಕಟ್ಟಡಗಳ ಸ್ವರೂಪ ಮಂತ್ರಿ, ಸೇನಾಪತಿ ಮೊದಲಾದವರ ಮನೆಗಳ ಅಳತೆ | ೧೭ |
| ೨೫೫ | ವಾಸ್ತುಶಾಸ್ತ್ರ<br>ವೇಧವರ್ಜನ ಸ್ತಂಭಪ್ರಮಾಣ, ಸ್ತಂಭಭೇದಗಳು | ೨೭ |
| ೨೫೬. | ವಾಸ್ತುಶಾಸ್ತ್ರ<br>ಗೃಹನಿರ್ಣಯ ಕಂಬಗಳನ್ನು ನಿಲ್ಲಿಸುವ ಕ್ರಮ ಗೃಹಾರಂಭ ಕಾಲದಲ್ಲಿ ಆಗುವ ಶುಭಾಶುಭ ನಿಮಿತ್ತಗಳು ಅಡಿಗೆ ಮನೆ, ನೀರುಮನೆ ಮುಂತಾದುವು ಇರಬೇಕಾದ ದಿಕ್ಕುಗಳು | ೩೩ |
| ೨೫೭. | ವಾಸ್ತುಶಾಸ್ತ್ರ<br>ಮನೆಯನ್ನು ಕಟ್ಟುವುದಕ್ಕೆ ಮರವನ್ನು ತರುವ ಕ್ರಮ ಪ್ರಶಸ್ತವಾದ ಮರಗಳು ಎಂಟುಬಗೆಯ ಆಯಗಳು, ಅವುಗಳ ಲಕ್ಷಣ ಮತ್ತು ಫಲ | ೩೪ |

## ವಿಷಯ ಸೂಚಿಕೆ


| ಅಧ್ಯಾಯ | ವಿಷಯ | ಪುಟ |
|---|---|---|
| ೨೫೮. | ವಾಸ್ತುಶಾಸ್ತ್ರ<br>ದೇವತಾಮೂರ್ತಿಗಳ ಪ್ರತಿಷ್ಠೆ, ಆರಾಧನ, ಉತ್ಸವಗಳಿಂದ ಬರುವ ಫಲ ವಾಸುದೇವಮೂರ್ತಿಯ ಲಕ್ಷಣ, ಅವಯವಗಳ ಪ್ರಮಾಣ ಸ್ತ್ರೀವಿಗ್ರಹಗಳಿಗೂ ಪುರುಷವಿಗ್ರಹಗಳಿಗೂ ಇರಬೇಕಾದ ವ್ಯತ್ಯಾಸಗಳು | ೫೮ |
| ೨೫೯ | ವಾಸ್ತುಶಾಸ್ತ್ರ<br>ಪ್ರತಿಮಾಲಕ್ಷಣ—ದೇವತಾಮೂರ್ತಿಗಳ ಆಕಾರವಿಶೇಷಗಳು ರಾಮ, ವಾರಾಹ, ನಾರಸಿಂಹ ಮುಂತಾದ ಮೂರ್ತಿಗಳ ಪ್ರಮಾಣ ತಾಂಡವೇಶ್ವರ, ಭೈರವ, ಜ್ಞಾನಯೋಗೇಶ್ವರ ಮುಂತಾದ ಈಶ್ವರಪ್ರತಿಮಾಭೇದಗಳು ಅವುಗಳ ಲಕ್ಷಣ ಸೌಮ್ಯ ಮತ್ತು ಉಗ್ರಮೂರ್ತಿಗಳ ನಿರ್ಮಾಣದಲ್ಲಿ ಗಮನಿಸಬೇಕಾದ ಮುಖ್ಯವಿಷಯಗಳು ವಿಗ್ರಹಗಳ ಲಕ್ಷಣದಲ್ಲಿ ನ್ಯೂನಾತಿರೇಕಗಳು ಉಂಟಾದರೆ ಆಗುವ ಅನರ್ಥಗಳು | ೬೪ |
| ೨೬೦ | ವಾಸ್ತುಶಾಸ್ತ್ರ<br>ಪ್ರತಿಮಾಲಕ್ಷಣ—ಅರ್ಧನಾರೀಶ್ವರ, ಉಮಾಮಹೇಶ ರ, ಶಿವನಾರಾಯಣ, ಮಹಾವರಾಹ, ನಾರಸಿಂಹ, ತ್ರಿವಿಕ್ರಮ ಬ್ರಹ್ಮ, ಷಣ್ಮುಖ, ವಿನಾಯಕ, ಕಾತ್ಯಾಯನಿ, ದೇವೇಂದ್ರ ಇವರ ಪ್ರತಿಮೆಗಳ ಲಕ್ಷಣಗಳು | ೭೧ |
| ೨೬೧ | ವಾಸ್ತುಶಾಸ್ತ್ರ<br>ಪ್ರತಿಮಾಲಕ್ಷಣ—ಅಷ್ಟದಿಕ್ಪಾಲಕರು, ಸೂರ್ಯ, ಸಪ್ತಮಾತೃಗಳು, ಲಕ್ಷ್ಮಿ, ಯಕ್ಷಿಣಿ, ಮನ್ಮಥ ಇವರ ಪ್ರತಿಮೆಗಳ ಲಕ್ಷಣ | ೮೬ |
| ೨೬೨. | ವಾಸ್ತುಶಾಸ್ತ್ರ<br>ಪೀಠಲಕ್ಷಣ ಬಗೆಬಗೆಯ ಪೀಠಗಳು ಅವುಗಳ ಲಕ್ಷಣ ಮತ್ತು ಫಲ ವಿಗ್ರಹಕ್ಕೂ ಪೀಠಕ್ಕೂ ಇರಬೇಕಾದ ಅನುರೂಪ್ಯ | ೯೯ |

# ವಿಷಯ ಸೂಚಿಕೆ


| ಅಧ್ಯಾಯ | ವಿಷಯ | ಪುಟ |
|---|---|---|
| ೨೬೩ | ವಾಸ್ತುಶಾಸ್ತ್ರ<br>ಲಿಂಗಲಕ್ಷಣ—ಆಲಯಕ್ಕೂ ಲಿಂಗಕ್ಕೂ ಪ್ರಮಾಣದಲ್ಲಿ ಅನುಗುಣ್ಯ ನವವಿಧಲಿಂಗಗಳು ಲಿಂಗನಿರ್ಮಾಣಕ್ಕೆ ಅರ್ಹವಾದ ದ್ರವ್ಯಗಳು | ೧೦೫ |
| ೨೬೪. | ವಾಸ್ತುಶಾಸ್ತ್ರ<br>ಪ್ರತಿಷ್ಠಾವಿಧಿ–ದೇವತಾಪ್ರತಿಷ್ಠೆಗೆ ಪ್ರಶಸ್ತವಾದ ಕಾಲ ಕುಂಡ, ಮಂಟಪ, ವೇದಿಕೆ ಇವುಗಳ ಪ್ರಮಾಣ ನೇತ್ರೋನ್ಮೀಲನ | ೧೧೧ |
| ೨೬೫ | ವಾಸ್ತುಶಾಸ್ತ್ರ<br>ಪ್ರತಿಷ್ಠಾವಿಧಿ—ಋತ್ವಿಕ್ಕುಗಳ ಲಕ್ಷಣ ಅಧಿವಾಸನದ ವಿಧಾನ ಕಾಲಪರಿಮಿತಿ ಅಧಿವಾಸನ ಫಲ | ೧೨೦ |
| ೨೬೬. | ವಾಸ್ತುಶಾಸ್ತ್ರ<br>ಪ್ರತಿಷ್ಠಾಪ್ರಯೋಗ ಕೂರ್ಮಶಿಲೆ ಮತ್ತು ಬ್ರಹ್ಮಶಿಲೆಗಳ ಸ್ಥಾಪನೆ ಪೀಠಪ್ರತಿಷ್ಠೆ ಬೀಜನ್ಯಾಸರತ್ನನ್ಯಾಸಗಳು, ವಿಗ್ರಹಸ್ಥಾಪನ ಪ್ರತಿಷ್ಠಾಮಹೋತ್ಸವ | ೧೩೧ |
| ೨೬೭ | ವಾಸ್ತುಶಾಸ್ತ್ರ<br>ಅಭಿಷೇಕವಿಧಾನ | ೧೪೬ |
| ೨೬೮ | ವಾಸ್ತುಶಾಸ್ತ್ರ<br>ವಾಸ್ತುಶಾಂತಿವಿಧಾನ | ೧೫೪ |
| ೨೬೯. | ವಾಸ್ತುಶಾಸ್ತ್ರ<br>ದೇವಾಲಯದ ಪ್ರಭೇದಗಳು ಮೇರು, ಮಂದರ, ಕೈಲಾಸ ಮುಂತಾದ ಆಲಯಗಳ ಲಕ್ಷಣ ಅವುಗಳಲ್ಲಿ ಪ್ರತಿಷ್ಠಿಸಬಹುದಾದ ದೇವತಾಮೂರ್ತಿಗಳು | ೧೬೨ |
| ೨೭೦. | ವಾಸ್ತುಶಾಸ್ತ್ರ<br>ಮಂಟಪಲಕ್ಷಣ ಪುಷ್ಪಕ, ಪುಷ್ಪಭದ್ರ, ಸುವ್ರತ ಮೊದಲಾದ ಇಪ್ಪತ್ತೇಳುಬಗೆಯ ಮಂಟಪಗಳು ಜ್ಯೇಷ್ಠ, ಮಧ್ಯ, ಕನಿಷ್ಠಗಳೆಂಬ ಮೂರುಬಗೆಯ ಬಾಗಿಲುಗಳು | ೧೭೪ |

## ವಿಷಯ ಸೂಚಿಕೆ


| ಅಧ್ಯಾಯ | ವಿಷಯ | ಪುಟ |
|---|---|---|
| ೨೭೧. | ರಾಜವಂಶವರ್ಣನ<br>ಕಲಿಯುಗದಲ್ಲಿ ಆಳುವ ಇಕ್ಷ್ವಾಕುವಂಶದ ಮತ್ತು ಮಗಧ ಸಂತತಿಯ ಭವಿಷ್ಯದ್ರಾಜರು | ೧೮೩ |
| ೨೭೨. | ರಾಜವಂಶವರ್ಣನ<br>ಬೃಹದ್ರಥರು, ಪುಲಕರು, ಶಿಶುನಾಕರು, ನಂದರು ಮುಂತಾದ ಬೇರೆಬೇರೆ ವಂಶದ ರಾಜರ ವರ್ಣನೆ | ೧೯೦ |
| ೨೭೩ | ರಾಜವಂಶವರ್ಣನ<br>ಕಾಣ್ವಾಯನರು, ಆಂಧ್ರರು, ಯವನರು, ಮ್ಲೇಚ್ಛರು ಮುಂತಾದ ರಾಜರ ವರ್ಣನ ಕಲಿಯುಗದ ಲಕ್ಷಣ ಮತ್ತು ಪ್ರಮಾಣ | ೧೯೯ |
| ೨೭೪. | ಮಹಾದಾನಾನುಕೀರ್ತನ<br>ಹದಿನಾರು ಬಗೆಯ ಮಹಾದಾನಗಳು ತುಲಾಪುರುಷದಾನ | ೨೧೬ |
| ೨೭೫. | ಮಹಾದಾನಾನುಕೀರ್ತನ<br>ಹಿರಣ್ಯಗರ್ಭದಾನ | ೨೩೯ |
| ೨೭೬. | ಮಹಾದಾನಾನುಕೀರ್ತನ<br>ಬ್ರಹ್ಮಾಂಡದಾನ | ೨೪೭ |
| ೨೭೭. | ಮಹಾದಾನಾನುಕೀರ್ತನ<br>ಕಲ್ಪವೃಕ್ಷದಾನ | ೨೫೩ |
| ೨೭೮. | ಮಹಾದಾನಾನುಕೀರ್ತನ<br>ಗೋಸಹಸ್ರದಾನ | ೨೫೯ |
| ೨೭೯. | ಮಹಾದಾನಾನುಕೀರ್ತನ<br>ಕಾಮಧೇನುದಾನ | ೨೬೭ |

# ವಿಷಯ ಸೂಚಿಕೆ


| ಅಧ್ಯಾಯ | ವಿಷಯ | ಪುಟ |
|---|---|---|
| ೨೮೦. | ಮಹಾದಾನಾನುಕೀರ್ತನ<br>ಹಿರಣ್ಯಾಶ್ವದಾನ | ೨೭೨ |
| ೨೮೧ | ಮಹಾದಾನಾನುಕೀರ್ತನ<br>ಹಿರಣ್ಯಾಶ್ವರಥದಾನ | ೨೭೭ |
| ೨೮೨. | ಮಹಾದಾನಾನುಕೀರ್ತನ<br>ಸುವರ್ಣಗಜರಥದಾನ | ೨೮೨ |
| ೩೮೩. | ಮಹಾದಾನಾನುಕೀರ್ತನ<br>ಸುವರ್ಣಲಾಂಗಲ (ನೇಗಿಲು) ದಾನ | ೨೮೭ |
| ೨೮೪. | ಮಹಾದಾನಾನುಕೀರ್ತನ<br>ಸುವರ್ಣಭೂಮಂಡಲದಾನ | ೨೯೩ |
| ೨೮೫. | ಮಹಾದಾನಾನುಕೀರ್ತನ<br>ವಿಶ್ವಚಕ್ರದಾನ | ೨೯೯ |
| ೨೮೬. | ಮಹಾದಾನಾನುಕೀರ್ತನ<br>ಸುವರ್ಣಕಲ್ಪಲತಾದಾನ | ೩೦೫ |
| ೨೮೭ | ಮಹಾದಾನಾನುಕೀರ್ತನ<br>ಸಪ್ತಸಾಗರದಾನ | ೩೧೧ |
| ೨೮೮. | ಮಹಾದಾನಾನುಕೀರ್ತನ<br>ರತ್ನಧೇನುದಾನ | ೩೧೬ |
| ೨೮೯. | ಮಹಾದಾನಾನುಕೀರ್ತನ ...<br>ಮಹಾಭೂತಘಟದಾನ | .. ೩೨೧ |

## ವಿಷಯ ಸೂಚಿಕೆ


| ಅಧ್ಯಾಯ | ವಿಷಯ | ಪುಟ |
|---|---|---|
| ೨೯೦. | ಕಲ್ಪಕಥನ | ೩೨೬ |
| | ಶ್ವೇತ, ನೀಲಲೋಹಿತ ಮೊದಲಾದ ಮೂವತ್ತು ಕಲ್ಪಗಳು | |
| | ಸಾತ್ವಿಕ, ರಾಜಸ ಮತ್ತು ತಾಮಸಗಳೆಂಬ ಕಲ್ಪಗಳ ಮತ್ತು ಪುರಾಣಗಳ ಪ್ರಭೇದಗಳು | |
| ೨೯೧. | ಅನುಕ್ರಮಣಿಕಾಧ್ಯಾಯ | ೩೩೩ |
| | ಮತ್ಸ್ಯಮಹಾಪುರಾಣದಲ್ಲಿ ಹೇಳಿರುವ ವಿಷಯಗಳ ಸೂಚಿಕೆ | |
| | ಪುರಾಣಶ್ರವಣದಿಂದ ಬರುವ ಫಲ | |
| | ಪುರಾಣವನ್ನು ಕೇಳುವಾಗ ಅನುಸರಿಸಬೇಕಾದ ನಿಯಮಗಳು | ೩೪೨ |

|| ಶ್ರೀ ||

ಓಂ ತತ್ಸದ್ಬ್ರಹ್ಮಣೇ ನಮಃ

# ಶ್ರೀಮದ್ದ್ವೈಪಾಯನಮುನಿಪ್ರಣೀತಂ

# ಶ್ರೀಮತ್ಸ್ಯಮಹಾಪುರಾಣಂ

---

## ಅಥ ದ್ವಿಪಂಚಾಶದಧಿಕದ್ವಿಶತತಮೋಽಧ್ಯಾಯಃ

|| ಋಷಯ ಊಚುಃ ||

ಪ್ರಾಸಾದಭವನಾದೀನಾಂ ನಿವೇಶಂ ವಿಸ್ತರಾದ್ವದ ।
ಕುರ್ಯಾತ್ಕೇನ ವಿಧಾನೇನ ಕಶ್ಚ ವಾಸ್ತುರುದಾಹೃತಃ || ೧ ||

|| ಸೂತ ಉವಾಚ ||

ಭೃಗುರತ್ರಿರ್ವಸಿಷ್ಠಶ್ಚ ವಿಶ್ವಕರ್ಮಾ ಮಯಸ್ತಥಾ ।
ನಾರದೋ ನಗ್ನಜಿಚ್ಚೈವ ವಿಶಾಲಾಕ್ಷಃ ಪುರಂದರಃ || ೨ ||

ಬ್ರಹ್ಮಾ ಕುಮಾರೋ ನಂದೀಶಃ ಶೌನಕೋ ಗರ್ಗ ಏವ ಚ ।
ವಾಸುದೇವೋಽನಿರುದ್ಧಶ್ಚ ತಥಾ ಶುಕಬೃಹಸ್ಪತೀ || ೩ ||

---

೧ ಋಷಿಗಳು ಹೇಳಿದರು —ದೇವಾಲಯಗಳು, ಮನೆಗಳು ಮುಂತಾದ ಕಟ್ಟಡಗಳ ಸನ್ನಿವೇಶವನ್ನು ನಮಗೆ ವಿಸ್ತಾರವಾಗಿ ತಿಳಿಸು ಅವುಗಳ ನಿರ್ಮಾಣದ ರೀತಿ ಹೇಗೆ? ವಾಸ್ತುಪುರುಷನ ಸ್ವರೂಪವೇನು?

೨-೩ ಸೂತಪೌರಾಣಿಕನು ಹೇಳಿದನು —ಭೃಗು, ಅತ್ರಿ, ವಸಿಷ್ಠ, ವಿಶ್ವಕರ್ಮ, ಮಯ, ನಾರದ, ನಗ್ನಜಿತ್, ವಿಶಾಲಾಕ್ಷ, ಪುರಂದರ, ಬ್ರಹ್ಮ, ಕುಮಾರ, ನಂದೀಶ್ವರ, ಶೌನಕ, ಗರ್ಗ, ವಾಸುದೇವ, ಅನಿರುದ್ಧ, ಶುಕ್ರ, ಬೃಹಸ್ಪತಿ ಈ ಹದಿನೆಂಟು ಮಂದಿಯೂ ವಾಸ್ತುಶಾಸ್ತ್ರವನ್ನು ಲೋಕಕ್ಕೆ ಉಪದೇಶ ಮಾಡಿ ಪ್ರಚಾರಕ್ಕೆ ತಂದವರೆಂದು ಪ್ರಖ್ಯಾತರಾಗಿರುವರು

ಅಷ್ಟಾದಶೈತೇ ವಿಖ್ಯಾತಾ ವಾಸ್ತುಶಾಸ್ತ್ರೋಪದೇಶಕಾಃ ।
ಸಂಕ್ಷೇಪೇಣೋಪದಿಷ್ಟಂ ಯನ್ಮನವೇ ಮತ್ಸ್ಯರೂಪಿಣಾ ॥ ೪ ॥

ತದಿದಾನೀಂ ಪ್ರವಕ್ಷ್ಯಾಮಿ ವಾಸ್ತುಶಾಸ್ತ್ರಮನುತ್ತಮಂ ।
ಪುರಾಂಧಕವಧೇ ಘೋರೇ ಘೋರರೂಪಸ್ಯ ಶೂಲಿನಃ ॥ ೫ ॥

ಲಲಾಟಸ್ವೇದಸಲಿಲಮಪತದ್ಭುವಿ ಭೀಷಣಂ ।
ಕರಾಲವದನಂ ತಸ್ಮಾದ್ಭೂತಮುದ್ಭೂತಮುಲ್ಬಣಂ ॥ ೬ ॥

ಗ್ರಸಮಾನಮಿವಾಕಾಶಂ ಸಪ್ತದ್ವೀಪಾಂ ವಸುಂಧರಾಂ ।
ತತೋಽಂಧಕಾನಾಂ ರುಧಿರಮಪಿಬತ್ಪತಿತಂ ಕ್ಷಿತೌ ॥ ೭ ॥

ತೇನ ತತ್ಸಮರೇ ಸರ್ವಂ ಪತಿತಂ ಯನ್ಮಹೀತಲೇ ।
ತಥಾಪಿ ತೃಪ್ತಿಮಗಮನ್ನ ತದ್ಭೂತಂ ಯದಾ ತದಾ ॥ ೮ ॥

---

೪ ಮತ್ಸ್ಯರೂಪಧಾರಿಯಾದ ಶ್ರೀಮನ್ನಾರಾಯಣನು ಮನುಚಕ್ರವರ್ತಿಗೆ ಸಂಕ್ಷೇಪವಾಗಿ ಉಪದೇಶಿಸಿದ ಅತಿಶ್ರೇಷ್ಠವಾದ ವಾಸ್ತುಶಾಸ್ತ್ರವನ್ನೇ ಈಗ ನಿಮಗೆ ವಿವರಿಸಿ ಹೇಳುತ್ತೇನೆ

೫ ಪೂರ್ವದಲ್ಲಿ ಬಹು ಭಯಂಕರಸ್ವರೂಪನಾದ ಅಂಧಕಾಸುರನ ವಧವು ನಡೆದಾಗ ಪರಮೇಶ್ವರನು ಉಗ್ರನಾದ ರೂಪವನ್ನು ತಾಳಿದನಷ್ಟೆ ! ಅವನ ಹಣೆಯಿಂದ ಬೆವರು ಸೋರಿ ನಲದ ಮೇಲೆ ಬಿದ್ದಿತು ಅದು ಭೀಕರರೂಪವನ್ನು ತಾಳಿತು

೬-೭ ಆ ಬೆವರಿನಿಂದ ಭಯಂಕರವಾದ ಮುಖವುಳ್ಳ ದೊಡ್ಡದೊಂದು ಪ್ರಾಣಿ ಹುಟ್ಟಿತು ಅದು ಆಕಾಶವನ್ನೂ ಸಪ್ತದ್ವೀಪಸಹಿತವಾದ ಭೂಮಿಯನ್ನೂ ನುಂಗಿಬಿಡುವಂತಿತ್ತು ನೆಲದ ಮೇಲೆ ಬಿದ್ದ ಅಂಧಕರ ರಕ್ತವನ್ನು ಅದು ಕುಡಿಯಿತು

೮-೯ ಆ ಯುದ್ಧಭೂಮಿಯಲ್ಲಿ ಬಿದ್ದ ರಕ್ತವೆಲ್ಲವನ್ನು ಆ ಅದ್ಭುತ ಪ್ರಾಣಿ ಕುಡಿಯಿತು ಆದರೂ ಅದಕ್ಕೆ ತೃಪ್ತಿಯಾಗಲಿಲ್ಲ ಆಗ ಅದು ಹಸಿವನ್ನು

ಸದಾಶಿವಸ್ಯ ಪುರತಸ್ತಪಶ್ಚಕ್ರೇ ಸುದಾರುಣಂ ।
ಕ್ಷುಧಾವಿಷ್ಟಂ ತು ತದ್ಭೂತಮಾಹರ್ತುಂ ಜಗತೀತ್ರಯಂ ॥ ೯ ॥

ತತಃ ಕಾಲೇನ ಸಂತುಷ್ಟೋ ಭೈರವಸ್ತಸ್ಯ ಚಾಹ ವೈ ।
ವರಂ ವೃಣೀಷ್ವ ಭದ್ರಂ ತೇ ಯದಭೀಷ್ಟಂ ತವಾನಘ ॥೧೦॥

ತಮುವಾಚ ತತೋ ಭೂತಂ ತ್ರೈಲೋಕ್ಯಗ್ರಸನಕ್ಷಮಂ ।
ಭವೇಯಂ ದೇವದೇವೇಶ ತಥೇತ್ಯುಕ್ತಂ ಚ ಶೂಲಿನಾ ॥೧೧॥

ತತಸ್ತು ತ್ರಿದಿವಂ ಸರ್ವಂ ಭೂಮಂಡಲಮಶೇಷತಃ ।
ಸ್ವದೇಹೇನಾಂತರಿಕ್ಷಂ ಚ ರುಂಧಾನಂ ಪ್ರಾಪತದ್ಭುವಿ ॥೧೨॥

ಭೀತಭೀತೈಸ್ತತೋ ದೇವೈರ್ಬ್ರಹ್ಮಣಾ ಚಾಥ ಶೂಲಿನಾ ।
ದಾನವಾಸುರರಕ್ಷೋಭಿರವಷ್ಟಬ್ಧಂ ಸಮಂತತಃ ॥೧೩॥

---

ತಡೆಯಲಾರದೆ ಮೂರು ಲೋಕವನ್ನೂ ತಿಂದುಬಿಡಬೇಕೆಂಬ ಅಪೇಕ್ಷೆಯಿಂದ ಈಶ್ವರನ ಮುಂದೆ ಕುಳಿತು ಅತ್ಯುಗ್ರವಾದ ತಪಸ್ಸನ್ನು ಮಾಡಿತು

೧೦ ಕೆಲಕಾಲ ಕಳೆದ ಬಳಿಕ ಪರಮೇಶ್ವರನು ಸಂತುಷ್ಟನಾಗಿ ಅದಕ್ಕೆ ಹೇಳಿದನು "ನಿನಗೆ ಮಂಗಳವಾಗಲಿ ಎಲೈ ಪೂತಾತ್ಮನೇ, ಬೇಕಾದ ವರವನ್ನು ಕೇಳು"

೧೧ "ದೇವದೇವಾ, ಮೂರು ಲೋಕವನ್ನೂ ನುಂಗಿಬಿಡುವ ಸಾಮರ್ಥ್ಯವು ನನಗೆ ಉಂಟಾಗಬೇಕು" ಎಂದು ಆ ಭೂತವು ಬೇಡಿಕೊಳ್ಳಲು, ಮಹಾದೇವನು "ಹಾಗೆಯೇ ಆಗಲಿ" ಎಂದನು

೧೨ ಬಳಿಕ ಸ್ವರ್ಗವನ್ನೂ, ಸಕಲಭೂಮಂಡಲವನ್ನೂ ಅಂತರಿಕ್ಷವನ್ನೂ ತನ್ನ ದೇಹದಿಂದ ಆಕ್ರಮಿಸಿಕೊಂಡು, ಆ ಮಹಾಭೂತವು ಒಂದು ಸಾರಿ ಮೇಲಕ್ಕೆ ಹಾರಿ ನೆಲದ ಮೇಲೆ ಬಿದ್ದಿತು

೧೩ ಅನಂತರ ದೇವತೆಗಳು, ಬ್ರಹ್ಮ, ಈಶ್ವರ, ದಾನವರು, ಅಸುರರು, ರಾಕ್ಷಸರು ಇವರೆಲ್ಲರೂ ಬಲು ಹೆದರಿದರು ಆದರೂ ಒಟ್ಟುಗೂಡಿ ಆ ಪ್ರಾಣಿಯನ್ನು ಅಲುಗಾಡದಂತೆ ಬಲವಾಗಿ ಕಟ್ಟಿಹಾಕಿದರು

ಯೇನ ಯತ್ರೈವ ಚಾಕ್ರಾಂತಂ ಸ ತತ್ರೈವಾವಸತ್ಪುನಃ ।
ನಿವಾಸಾತ್ಸರ್ವದೇವಾನಾಂ ವಾಸ್ತುರಿತ್ಯಭಿಧೀಯತೇ ||೧೪||

ಅವಷ್ಟಬ್ಧೇನ ತೇನಾಪಿ ವಿಜ್ಞಪ್ತಾಃ ಸರ್ವದೇವತಾಃ ।
ಪ್ರಸೀದಧ್ವಂ ಸುರಾಃ ಸರ್ವೇ ಯುಷ್ಮಾಭಿರ್ನಿಶ್ಚಲೀಕೃತಃ ||೧೫||

ಸ್ಥಾಸ್ಯಾಮ್ಯಹಂ ಕಿಮಾಹಾರೋ ಹ್ಯವಷ್ಟಬ್ಧೋ ಹ್ಯಧೋಮುಖಃ ।
ತತೋ ಬ್ರಹ್ಮಾದಿಭಿಃ ಪ್ರೋಕ್ತಂ ವಾಸ್ತುಮಧ್ಯೇ ತು ಯೋ ಬಲಿಃ ||೧೬||

ಆಹಾರೋ ವೈಶ್ವದೇವಾಂತೇ ನೂನಮಸ್ಯ ಭವಿಷ್ಯತಿ ।
ವಾಸ್ತೂಪಶಮನೋ ಯಜ್ಞಸ್ತವಾಹಾರೋ ಭವಿಷ್ಯತಿ ||೧೭||

ಯಜ್ಞೋತ್ಸವಾದೌ ಚ ಬಲಿಸ್ತವಾಹಾರೋ ಭವಿಷ್ಯತಿ ।
ವಾಸ್ತುಪೂಜಾಮಕುರ್ವಾಣಸ್ತವಾಹಾರೋ ಭವಿಷ್ಯತಿ ||೧೮||

---

೧೪ ಆ ಭೂತವನ್ನು ಆಕ್ರಮಿಸಿ ಹಿಡಿದವರೆಲ್ಲರೂ ತಾವು ಎಲ್ಲೆಲ್ಲಿದ್ದರೋ ಅಲ್ಲೇ ನೆಲಸಿದರು ಅಲ್ಲಿಂದ ಕದಲಲಿಲ್ಲ ಹೀಗೆ ಸಕಲ ದೇವತೆಗಳಿಗೂ ವಾಸಕ್ಕೆ ಎಡೆಗೊಟ್ಟ ಕಾರಣ ಅದು ವಾಸ್ತು ಎನಿಸಿಕೊಂಡಿತು

೧೫ ಅಲುಗಾಡಲಾರದೆ ಬಿದ್ದಿದ್ದ ಆ ಭೂತವು ದೇವತೆಗಳೆಲ್ಲರನ್ನೂ ಪ್ರಾರ್ಥಿಸಿತು "ಓ ದೇವತೆಗಳಿರಾ, ಪ್ರಸನ್ನರಾಗಿ ಅತ್ತಿತ್ತ ಚಲಿಸದಂತ ಮುಖ ಕೆಳಗಾಗಿ ನನ್ನನ್ನು ಕಟ್ಟಿಹಾಕಿರುವಿರಲ್ಲಾ ! ನಾನು ಯಾವ ಆಹಾರದಿಂದ ಜೀವಿಸಲಿ ?"

೧೬-೧೭ ಬಳಿಕ ಬ್ರಹ್ಮಾದಿಗಳು ಹೇಳಿದರು ವೈಶ್ವದೇವದ (ಗೃಹಸ್ಥನು ದಿನದಿನವೂ ಮಾಡಬೇಕಾದ ಒಂದು ಕರ್ಮ) ಕೊನೆಯಲ್ಲಿ ಮನೆಯ ಅಂಗಳದ ನಡುವೆ ಹಾಕುವ ಬಲಿಯೂ, ವಾಸ್ತುಶಾಂತಿರೂಪವಾದ ಯಜ್ಞವೂ ನಿನಗೆ ಆಹಾರವಾಗಲಿ

೧೮ ಯಜ್ಞ, ದೇವತೆಗಳ ಉತ್ಸವ ಮುಂತಾದ ಸಮಾರಂಭಗಳಲ್ಲಿ ಕೊಡುವ ಬಲಿಯೂ ನಿನಗೆ ಆಹಾರವೇ ಆಗುವುದು ಮನೆಯನ್ನು ಕಟ್ಟುವುದಕ್ಕೆ ಪ್ರಾರಂಭಿಸುವಾಗ ನಿನ್ನನ್ನು ಪೂಜಿಸದ ಮನುಷ್ಯನನ್ನೂ, ಶಾಸ್ತ್ರವಿಧಿಯನ್ನು ಗಮನಿಸದೆ ಮಾಡಿದ ಯಜ್ಞವನ್ನೂ ನೀನು ಭಕ್ಷಿಸು

**ಅಜ್ಞಾನಾತ್ತು ಕೃತೋ ಯಜ್ಞಸ್ತವಾಹಾರೋ ಭವಿಷ್ಯತಿ ।**
**ಏವಮುಕ್ತಸ್ತತೋ ಹೃಷ್ಟಃ ಸ ವಾಸ್ತುರಭವತ್ತದಾ ।**
**ವಾಸ್ತುಯಜ್ಞಃ ಸ್ಮೃತಸ್ತಸ್ಮಾತ್ತತಃ ಪ್ರಭೃತಿ ಶಾಂತಯೇ ॥೧೯॥**

**ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ವಾಸ್ತುಭೂತೋದ್ಭವೋ ನಾಮ ದ್ವಿಪಂಚಾಶದಧಿಕದ್ವಿಶತತಮೋಽಧ್ಯಾಯಃ**

---

೧೯ ದೇವತೆಗಳು ಹೀಗೆ ಹೇಳಲು, ಆ ವಾಸ್ತುಪುರುಷನಿಗೆ ಸಂತೋಷವಾಯಿತು ಅದು ಮೊದಲುಗೊಂಡು ಅವನ ಶಾಂತಿಗಾಗಿ ಮಾಡುವ ಕರ್ಮವು ವಾಸ್ತುಯಜ್ಞವೆನಿಸಿಕೊಂಡಿತು

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ವಾಸ್ತುಪುರುಷನ ಉತ್ಪತ್ತಿಯನ್ನು ಹೇಳಿದೆ

ಅಂಧಕಾಸುರನ ಸಂಹಾರಕಾಲದಲ್ಲಿ ಈಶ್ವರನ ಹಣೆಯಿಂದ ಬೆವರು ನೆಲಕ್ಕೆ ತೊಟ್ಟಿಕ್ಕಿತು ಆದರಿಂದ ಅತ್ಯದ್ಭುತಾಕಾರದ ಮಹಾಭೂತವೊಂದು ಹುಟ್ಟಿತು ಕ್ಷುದ್ಬಾಧೆಯಿಂದ ಅದು ಮೂರು ಲೋಕವನ್ನೂ ನುಂಗಬೇಕೆಂದು ಬಯಸಿತು ಆಗ ಬ್ರಹ್ಮಾದಿದೇವತೆಗಳೆಲ್ಲ ಸೇರಿ ಅದನ್ನು ಅಲುಗಾಡದಂತೆ ಮುಖಕೆಳಗಾಗಿ ನೆಲದಮೇಲೆ ಬಿಗಿದುಕಟ್ಟಿದರು ತನಗೆ ಆಹಾರವನ್ನು ಕೊಡಬೇಕೆಂದು ಅದು ಬೇಡಿಕೊಂಡಿತು ವೈಶ್ವದೇವಕರ್ಮವನ್ನು ಮಾಡುವಾಗ ಅಂಗಳದ ನಡುವೆ ಹಾಕುವ ಬಲಿಯಿಂದಲೂ, ವಾಸ್ತುಯಜ್ಞ ಮುಂತಾದುವುಗಳಿಂದಲೂ ತೃಪ್ತಿಪಡಬೇಕೆಂದು ಅವರು ಅನುಗ್ರಹಿಸಿದರು

ಶ್ರೀಮತ್ಸ್ಯಮಹಾಪುರಾಣದಲ್ಲಿ ವಾಸ್ತುಭೂತೋದ್ಭವವೆಂಬ ಇನ್ನೂರೈವತ್ತೆರಡನೆಯ ಅಧ್ಯಾಯವು ಮುಗಿದುದು

ಯೇನ ಯತ್ರೈವ ಚಾಕ್ರಾಂತಂ ಸ ತತ್ರೈವಾವಸತ್ಪುನಃ ।
ನಿವಾಸಾತ್ಸರ್ವದೇವಾನಾಂ ವಾಸ್ತುರಿತ್ಯಭಿಧೀಯತೇ ||೧೪||

ಅವಷ್ಟಬ್ಧೇನ ತೇನಾಪಿ ವಿಜ್ಞಪ್ತಾಃ ಸರ್ವದೇವತಾಃ ।
ಪ್ರಸೀದಧ್ವಂ ಸುರಾಃ ಸರ್ವೇ ಯುಷ್ಮಾಭಿರ್ನಿಶ್ಚಲೀಕೃತಃ ||೧೫||

ಸ್ಥಾಸ್ಯಾಮ್ಯಹಂ ಕಿಮಾಹಾರೋ ಹ್ಯವಷ್ಟಬ್ಧೋ ಹ್ಯಧೋಮುಖಃ ।
ತತೋ ಬ್ರಹ್ಮಾದಿಭಿಃ ಪ್ರೋಕ್ತಂ ವಾಸ್ತುಮಧ್ಯೇ ತು ಯೋ ಬಲಿಃ ||೧೬||

ಆಹಾರೋ ವೈಶ್ವದೇವಾಂತೇ ನೂನಮಸ್ಯ ಭವಿಷ್ಯತಿ ।
ವಾಸ್ತೂಪಶಮನೋ ಯಜ್ಞಸ್ತವಾಹಾರೋ ಭವಿಷ್ಯತಿ ||೧೭||

ಯಜ್ಞೋತ್ಸವಾದೌ ಚ ಬಲಿಸ್ತವಾಹಾರೋ ಭವಿಷ್ಯತಿ ।
ವಾಸ್ತುಪೂಜಾಮಕುರ್ವಾಣಸ್ತವಾಹಾರೋ ಭವಿಷ್ಯತಿ ||೧೮||

---

೧೪ ಆ ಭೂತವನ್ನು ಆಕ್ರಮಿಸಿ ಹಿಡಿದವರೆಲ್ಲರೂ ತಾವು ಎಲ್ಲೆಲ್ಲಿದ್ದರೋ ಅಲ್ಲೇ ನೆಲಸಿದರು ಅಲ್ಲಿಂದ ಕದಲಲಿಲ್ಲ ಹೀಗೆ ಸಕಲ ದೇವತೆಗಳಿಗೂ ವಾಸಕ್ಕೆ ಎಡೆಗೊಟ್ಟ ಕಾರಣ ಅದು ವಾಸ್ತು ಎನಿಸಿಕೊಂಡಿತು

೧೫ ಅಲುಗಾಡಲಾರದೆ ಬಿದ್ದಿದ್ದ ಆ ಭೂತವು ದೇವತೆಗಳೆಲ್ಲರನ್ನೂ ಪ್ರಾರ್ಥಿಸಿತು "ಓ ದೇವತೆಗಳಿರಾ, ಪ್ರಸನ್ನರಾಗಿ ಅತ್ತಿತ್ತ ಚಲಿಸದಂತೆ ಮುಖ ಕೆಳಗಾಗಿ ನನ್ನನ್ನು ಕಟ್ಟಿಹಾಕಿರುವಿರಲ್ಲಾ! ನಾನು ಯಾವ ಆಹಾರದಿಂದ ಜೀವಿಸಲಿ?"

೧೬-೧೭ ಬಳಿಕ ಬ್ರಹ್ಮಾದಿಗಳು ಹೇಳಿದರು ವೈಶ್ವದೇವದ (ಗೃಹಸ್ಥನು ದಿನದಿನವೂ ಮಾಡಬೇಕಾದ ಒಂದು ಕರ್ಮ) ಕೊನೆಯಲ್ಲಿ ಮನೆಯ ಅಂಗಳದ ನಡುವೆ ಹಾಕುವ ಬಲಿಯೂ, ವಾಸ್ತುಶಾಂತಿರೂಪವಾದ ಯಜ್ಞವೂ ನಿನಗೆ ಆಹಾರವಾಗಲಿ

೧೮ ಯಜ್ಞ, ದೇವತೆಗಳ ಉತ್ಸವ ಮುಂತಾದ ಸಮಾರಂಭಗಳಲ್ಲಿ ಕೊಡುವ ಬಲಿಯೂ ನಿನಗೆ ಆಹಾರವೇ ಆಗುವುದು ಮನೆಯನ್ನು ಕಟ್ಟುವುದಕ್ಕೆ ಪ್ರಾರಂಭಿಸುವಾಗ ನಿನ್ನನ್ನು ಪೂಜಿಸದ ಮನುಷ್ಯನನ್ನೂ, ಶಾಸ್ತ್ರವಿಧಿಯನ್ನು ಗಮನಿಸದೆ ಮಾಡಿದ ಯಜ್ಞವನ್ನೂ ನೀನು ಭಕ್ಷಿಸು.

**ಅಜ್ಞಾನಾತ್ತು ಕೃತೋ ಯಜ್ಞಸ್ತವಾಹಾರೋ ಭವಿಷ್ಯತಿ ।**
**ಏವಮುಕ್ತಸ್ತತೋ ಹೃಷ್ಟಃ ಸ ವಾಸ್ತುರಭವತ್ತದಾ ।**
**ವಾಸ್ತುಯಜ್ಞಃ ಸ್ಮೃತಸ್ತಸ್ಮಾತ್ತತಃ ಪ್ರಭೃತಿ ಶಾಂತಯೇ ॥೧೯॥**

**ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ವಾಸ್ತುಭೂತೋದ್ಭವೋ ನಾಮ ದ್ವಿಪಂಚಾಶದಧಿಕದ್ವಿಶತತಮೋಽಧ್ಯಾಯಃ**

---

೧೯ ದೇವತೆಗಳು ಹೀಗೆ ಹೇಳಲು, ಆ ವಾಸ್ತುಪುರುಷನಿಗೆ ಸಂತೋಷವಾಯಿತು ಅದು ಮೊದಲುಗೊಂಡು ಅವನ ಶಾಂತಿಗಾಗಿ ಮಾಡುವ ಕರ್ಮವು ವಾಸ್ತುಯಜ್ಞವೆನಿಸಿಕೊಂಡಿತು

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ವಾಸ್ತುಪುರುಷನ ಉತ್ಪತ್ತಿಯನ್ನು ಹೇಳಿದೆ

ಅಂಧಕಾಸುರನ ಸಂಹಾರಕಾಲದಲ್ಲಿ ಈಶ್ವರನ ಹಣೆಯಿಂದ ಬೆವರು ನೆಲಕ್ಕೆ ತೊಟ್ಟಿಕ್ಕಿತು ಅದರಿಂದ ಅತ್ಯದ್ಭುತಾಕಾರದ ಮಹಾಭೂತವೊಂದು ಹುಟ್ಟಿತು ಕ್ಷುದ್ಬಾಧೆಯಿಂದ ಅದು ಮೂರು ಲೋಕವನ್ನೂ ನುಂಗಬೇಕೆಂದು ಬಯಸಿತು ಆಗ ಬ್ರಹ್ಮಾದಿದೇವತೆಗಳೆಲ್ಲ ಸೇರಿ ಅದನ್ನು ಅಲುಗಾಡದಂತೆ ಮುಖಕೆಳಗಾಗಿ ನೆಲದಮೇಲೆ ಬಿಗಿದುಕಟ್ಟಿದರು ತನಗೆ ಆಹಾರವನ್ನು ಕೊಡಬೇಕೆಂದು ಅದು ಬೇಡಿಕೊಂಡಿತು ವೈಶ್ವದೇವಕರ್ಮವನ್ನು ಮಾಡುವಾಗ ಅಂಗಳದ ನಡುವೆ ಹಾಕುವ ಬಲಿಯಿಂದಲೂ, ವಾಸ್ತುಯಜ್ಞ ಮುಂತಾದುವುಗಳಿಂದಲೂ ತೃಪ್ತಿಪಡಬೇಕೆಂದು ಅವರು ಅನುಗ್ರಹಿಸಿದರು

ಶ್ರೀಮತ್ಸ್ಯಮಹಾಪುರಾಣದಲ್ಲಿ ವಾಸ್ತುಭೂತೋದ್ಭವವೆಂಬ
ಇನ್ನೂರೈವತ್ತೆರಡನೆಯ ಅಧ್ಯಾಯವು ಮುಗಿದುದು

## ಅಥ ತ್ರಿಪಂಚಾಶದಧಿಕದ್ವಿಶತತಮೋಽಧ್ಯಾಯಃ

॥ ಸೂತ ಉವಾಚ ॥

ಅಥಾತಃ ಸಂಪ್ರವಕ್ಷ್ಯಾಮಿ ಗೃಹಕಾಲವಿನಿರ್ಣಯಂ ।
ಯಥಾಕಾಲಂ ಶುಭಂ ಜ್ಞಾತ್ವಾ ಸದಾ ಭವನಮಾರಭೇತ್ ॥ ೧ ॥

ಚೈತ್ರೇ ವ್ಯಾಧಿಮವಾಪ್ನೋತಿ ಯೋ ಗೃಹಂ ಕಾರಯೇನ್ನರಃ ।
ವೈಶಾಖೇ ಧೇನುರತ್ನಾನಿ ಜ್ಯೇಷ್ಠೇ ಮೃತ್ಯುಂ ತಥೈವ ಚ ॥ ೨ ॥

ಆಷಾಢೇ ಭೃತ್ಯರತ್ನಾನಿ ಪಶುವರ್ಗಮವಾಪ್ನುಯಾತ್ ।
ಶ್ರಾವಣೇ ಭೃತ್ಯಲಾಭಂ ತು ಹಾನಿಂ ಭಾದ್ರಪದೇ ತಥಾ ॥ ೩ ॥

ಪತ್ನೀನಾಶಶ್ಚಾಶ್ವಯುಜೇ ಕಾರ್ತಿಕೇ ಧನಧಾನ್ಯಕಂ ।
ಮಾರ್ಗಶೀರ್ಷೇ ತಥಾ ಭಕ್ತಂ ಪೌಷೇ ತಸ್ಕರತೋ ಭಯಂ ॥ ೪ ॥

---

೧ ಸೂತಪೌರಾಣಿಕನು ಹೇಳಿದನು —ಇನ್ನುಮುಂದೆ ಮನೆ ಕಟ್ಟುವುದಕ್ಕೆ ಉಚಿತವಾದ ಕಾಲದ ನಿರ್ಣಯವನ್ನು ಹೇಳುವೆನು ಯಾವಾಗಲೂ ಒಳ್ಳೆಯ ವೇಳೆಯನ್ನು ನೋಡಿ ಮನೆಯನ್ನು ಕಟ್ಟಲು ಪ್ರಾರಂಭಿಸಬೇಕು

೨ ಚೈತ್ರಮಾಸದಲ್ಲಿ ಮನೆಯನ್ನು ಕಟ್ಟಿಸುವವನು ರೋಗಗ್ರಸ್ತನಾಗುತ್ತಾನೆ ವೈಶಾಖದಲ್ಲಿ ಉತ್ತಮವಾದ ಹಸುವನ್ನು ಪಡೆಯುತ್ತಾನೆ ಜ್ಯೇಷ್ಠದಲ್ಲಾದರೋ ಮೃತ್ಯುವಿಗೆ ತುತ್ತಾಗುತ್ತಾನೆ

೩ ಆಷಾಢದಲ್ಲಿ ಒಳ್ಳೆಯ ಭೃತ್ಯರ ಮತ್ತು ಪಶುಗಳ ಲಾಭವಾಗುವುದು ಶ್ರಾವಣದಲ್ಲಿ ಭೃತ್ಯಪ್ರಾಪ್ತಿಯೂ ಭಾದ್ರಪದದಲ್ಲಿ ಹಾನಿಯೂ ಒದಗುವುವು

೪ ಆಶ್ವಯುಜಮಾಸದಲ್ಲಿ ಪತ್ನಿಗೆ ಕೇಡು ಸಂಭವಿಸುವುದು ಕಾರ್ತಿಕದಲ್ಲಿ ಧನಧಾನ್ಯಗಳ ಲಾಭವಾಗುವುದು ಮಾರ್ಗಶೀರ್ಷದಲ್ಲಿ ಅನ್ನಪ್ರಾಪ್ತಿಯೂ ಪುಷ್ಯಮಾಸದಲ್ಲಿ ಚೋರಭಯವೂ ಉಂಟಾಗುವುವು

ಲಾಭಂ ಚ ಬಹುಶೋ ವಿಂದ್ಯಾದಗ್ನಿಂ ಮಾಘೇ ವಿನಿರ್ದಿಶೇತ್ ।
ಫಾಲ್ಗುನೇ ಕಾಚನಂ ಪುತ್ರಾನಿತಿ ಕಾಲಬಲಂ ಸ್ಮೃತಂ ॥ ೫ ॥

ಅಶ್ವಿನೀ ರೋಹಿಣೀ ಮೂಲಮುತ್ತರಾತ್ರಯಮೈಂದವಂ ।
ಸ್ವಾತೀ ಹಸ್ತೋಽನುರಾಧಾ ಚ ಗೃಹಾರಂಭೇ ಪ್ರಶಸ್ಯತೇ ॥ ೬ ॥

ಆದಿತ್ಯಭೌಮವರ್ಜಂ ತು ಸರ್ವೇ ವಾರಾಃ ಶುಭಾವಹಾಃ ।
ವರ್ಜಂ ವ್ಯಾಘಾತಶೂಲೇ ಚ ವ್ಯತೀಪಾತಾತಿಗಂಡಯೋಃ ॥ ೭ ॥

ವಿಷ್ಕಂಭಗಂಡಪರಿಘವಜ್ರಯೋಗೇಷು ಕಾರಯೇತ್ ।
ಶ್ವೇತೇ ಮೈತ್ರೇಽಥ ಮಾಹೇಂದ್ರೇ ಗಾಂಧರ್ವಾಭಿಜಿತಿ ರೌಹಿಣೇ ॥ ೮ ॥

ತಥಾ ವೈರಾಜಸಾವಿತ್ರೇ ಮುಹೂರ್ತೇ ಗೃಹಮಾರಭೇತ್ ।
ಚಂದ್ರಾದಿತ್ಯಬಲಂ ಲಬ್ಧ್ವಾ ಶುಭಲಗ್ನಂ ನಿರೀಕ್ಷಯೇತ್ ॥ ೯ ॥

---

೫ ಮಾಘಮಾಸದಲ್ಲಿ ಹಲವು ವಿಧಗಳಿಂದ ಲಾಭವೇನೋ ಆಗುವುದು ಆದರ ಅಗ್ನಿಯಿಂದ ಬಾಧೆಯುಂಟಾಗುವುದು ಫಾಲ್ಗುನದಲ್ಲಿ ಬಂಗಾರವು ಸಿಕ್ಕುವುದು, ಸಂತಾನವು ಅಭಿವೃದ್ಧಿಯಾಗುವುದು

೬ ಅಶ್ವಿನಿ, ರೋಹಿಣಿ, ಮೂಲ, ಉತ್ತರಫಲ್ಗುನಿ, ಉತ್ತರಾಷಾಢ, ಉತ್ತರಾಭಾದ್ರೆ, ಮೃಗಶಿರ, ಸ್ವಾತಿ, ಹಸ್ತ, ಅನೂರಾಧೆ ಈ ನಕ್ಷತ್ರಗಳು ಗೃಹಾರಂಭಕ್ಕೆ ಪ್ರಶಸ್ತವಾದುವು

೭ ಭಾನುವಾರ, ಮಂಗಳವಾರ ಹೊರತು ಉಳಿದ ವಾರಗಳೆಲ್ಲ ಶುಭಪ್ರದವಾದುವು ವ್ಯಾಘಾತ, ಶೂಲ, ವ್ಯತೀಪಾತ, ಗಂಡ ಈ ಯೋಗಗಳು ಅಶುಭವಾದುವು

೮-೯ ವಿಷ್ಕಂಭ, ಗಂಡ, ಪರಿಘ, ವಜ್ರಗಳೆಂಬ ಯೋಗಗಳಲ್ಲೂ ಶ್ವೇತ, ಮೈತ್ರ, ಮಾಹೇಂದ್ರ, ಗಾಂಧರ್ವ, ಅಭಿಜಿತ್, ರೌಹಿಣ, ವೈರಾಜ ಮತ್ತು ಸಾವಿತ್ರಗಳೆಂಬ ಮುಹೂರ್ತಗಳಲ್ಲೂ ಮನೆಕಟ್ಟಲು ಪ್ರಾರಂಭಿಸಬೇಕು ಚಂದ್ರ ಸೂರ್ಯರ ಬಲವಿರುವ ಶುಭಲಗ್ನವನ್ನು ಆರಿಸಬೇಕು

**ಸ್ತಂಭೋಚ್ಛ್ರಾಯಾದಿ ಕರ್ತವ್ಯಮನ್ಯತ್ರ ಪರಿವರ್ಜಯೇತ್ ।**
**ಪ್ರಾಸಾದೇಷ್ವೇವಮೇವಂ ಸ್ಯಾತ್ಕೂಪವಾಪೀಷು ಚೈವ ಹಿ ॥೧೦॥**

**ಪೂರ್ವಂ ಭೂಮಿಂ ಪರೀಕ್ಷೇತ ಪಶ್ಚಾದ್ವಾಸ್ತುಂ ಪ್ರಕಲ್ಪಯೇತ್ ।**
**ಶ್ವೇತಾ ರಕ್ತಾ ತಥಾ ಪೀತಾ ಕೃಷ್ಣಾ ಚೈವಾನುಪೂರ್ವಶಃ ॥೧೧॥**

**ವಿಪ್ರಾದೇಃ ಶಸ್ಯತೇ ಭೂಮಿರತಃ ಕಾರ್ಯಂ ಪರೀಕ್ಷಣಂ ।**
**ವಿಪ್ರಾಣಾಂ ಮಧುರಾಸ್ವಾದಾ ಕಟುಕಾ ಕ್ಷತ್ರಿಯಸ್ಯ ತು ॥೧೨॥**

**ತಿಕ್ತಾ ಕಷಾಯಾ ಚ ತಥಾ ವೈಶ್ಯಶೂದ್ರೇಷು ಶಸ್ಯತೇ ।**
**ಅರತ್ನಿಮಾತ್ರೇ ವೈ ಗರ್ತೇ ಸ್ವನುಲಿಪ್ತೇ ಚ ಸರ್ವಶಃ ॥೧೪॥**

---

೧೦ ಮೊತ್ತಮೊದಲು ಕಂಬ, ನಿಲುವು ಮುಂತಾದುವನ್ನು ನಿಲ್ಲಿಸುವುದು ಹೊರತು ಮತ್ತೇನನ್ನೂ ಮಾಡಬಾರದು ದೇವಾಲಯ, ಕೊಳ, ಬಾವಿ ಮುಂತಾದುವುಗಳ ನಿರ್ಮಾಣಕ್ಕೂ ಮೇಲೆ ಹೇಳಿದ ಶುಭಲಗ್ನಗಳೇ ತಕ್ಕುವು

೧೧ ಮೊದಲು ಭೂಮಿಯನ್ನು ಪರೀಕ್ಷಿಸಬೇಕು ಅನಂತರ ಕಟ್ಟಡವನ್ನು ರಚಿಸಬೇಕು ಬ್ರಾಹ್ಮಣಾದಿ ನಾಲ್ಕು ವರ್ಣದವರಿಗೆ ಕ್ರಮವಾಗಿ ಬಿಳುಪು, ಕೆಂಪು, ಹಳದಿ, ಮತ್ತು ಕಪ್ಪುಬಣ್ಣದ ನೆಲವು ಪ್ರಶಸ್ತವಾದುದು ಆದುದರಿಂದ ಭೂಮಿಯನ್ನು ಪರೀಕ್ಷಿಸುವುದು ಆವಶ್ಯಕ

೧೨ ಕಟ್ಟಡವನ್ನು ಕಟ್ಟುವ ನೆಲದ ಮಣ್ಣು ಸಿಹಿಯಾಗಿದ್ದರೆ ಬ್ರಾಹ್ಮಣನಿಗೂ, ಉಪ್ಪಾಗಿದ್ದರೆ ಕ್ಷತ್ರಿಯನಿಗೂ, ಕಹಿಯಾಗಿದ್ದರೆ ವೈಶ್ಯನಿಗೂ, ಒಗಚಾಗಿದ್ದರೆ ಶೂದ್ರನಿಗೂ ಒಳ್ಳೆಯದು

೧೩-೧೪ ಭೂಮಿಯನ್ನು ಪರೀಕ್ಷಿಸುವ ರೀತಿ ಹೇಗೆಂದರೆ —ಒಂದುಮೊಳ ಆಳದ ಹಳ್ಳವನ್ನು ತೋಡಿ, ಅದರ ಸುತ್ತಲೂ ಚೆನ್ನಾಗಿ ಸಾರಿಸಿ, ಹಸಿಯಮಣ್ಣಿನ ಶ್ರಾವೆಯಲ್ಲಿ ತುಪ್ಪವನ್ನು ತುಂಬಿ, ಅದಕ್ಕೆ ನಾಲ್ಕು ದಿಕ್ಕಿಗೂ ನಾಲ್ಕು ಬತ್ತಿಗಳನ್ನು ಹಾಕಿ ಹಳ್ಳದಲ್ಲಿಟ್ಟು ಹತ್ತಿಸಬೇಕು ಪೂರ್ವ, ದಕ್ಷಿಣ, ಪಶ್ಚಿಮ ಮತ್ತು ಉತ್ತರ ದಿಕ್ಕುಗಳಲ್ಲಿ ಯಾವಕಡೆಯ ಬತ್ತಿ ಚೆನ್ನಾಗಿ ಉರಿಯುವುದೋ ಅದನ್ನು ಗಮನಿಸಿ,

ಘೃತಮಾಮಶರಾವಸ್ಥಂ ಕೃತ್ವಾ ವರ್ತಿಚತುಷ್ಟಯಂ ।
ಜ್ವಾಲಯೇದ್ಭೂಪರೀಕ್ಷಾರ್ಥಂ ತತ್ಪೂರ್ಣಂ ಸರ್ವದಿಙ್ಮುಖಂ ||೧೪||

ದೀಪ್ತೌ ಪೂರ್ವಾದಿ ಗೃಹ್ಣೀಯಾದ್ವರ್ಣಾನಾಮಾನುಪೂರ್ವಶಃ ।
ವಾಸ್ತುಃ ಸಾಮೂಹಿಕೋ ನಾಮ ದೀಪ್ಯತೇ ಸರ್ವತಸ್ತು ಸಃ ||೧೫||

ಶುಭದಃ ಸರ್ವವರ್ಣಾನಾಂ ಪ್ರಾಸಾದೇಷು ಗೃಹೇಷು ಚ ।
ರತ್ನಿಮಾತ್ರಮಧೋ ಗರ್ತೇ ಪರೀಕ್ಷ್ಯಂ ಖಾತಪೂರಣೇ ||೧೬||

ಅಧಿಕೇ ಶ್ರಿಯಮಾಪ್ನೋತಿ ನ್ಯೂನೇ ಹಾನಿಂ ಸಮೇ ಸಮಂ ।
ಫಾಲಕೃಷ್ಟೇಽಥವಾ ದೇಶೇ ಸರ್ವಬೀಜಾನಿ ವಾಪಯೇತ್ ||೧೭||

---

ಪೂರ್ವದಿಕ್ಕಿನಲ್ಲಿ ಪ್ರಕಾಶವು ಹೆಚ್ಚಾಗಿದ್ದರೆ ಆ ನಿವೇಶನವು ಬ್ರಾಹ್ಮಣನಿಗೆ ಪ್ರಶಸ್ತವಾದುದೆಂದೂ, ದಕ್ಷಿಣದಲ್ಲಿ ಪ್ರಕಾಶವು ಅಧಿಕವಾಗಿದ್ದರೆ ಕ್ಷತ್ರಿಯನಿಗೆ ಒಳ್ಳೆಯದೆಂದೂ ತಿಳಿಯಬೇಕು ಹೀಗೆಯೇ ಪಶ್ಚಿಮ ಮತ್ತು ಉತ್ತರ ದಿಕ್ಕುಗಳು ಕ್ರಮವಾಗಿ ವೈಶ್ಯಶೂದ್ರರಿಗೆ ಶುಭವಾದುವೆಂದು ಅರಿಯಬೇಕು

೧೫ ಎಲ್ಲ ದಿಕ್ಕುಗಳಲ್ಲಿಯೂ ದೀಪವು ಚೆನ್ನಾಗಿ ಉರಿದರೆ ಸಾಮೂಹಿಕ ವಾಸ್ತುವೆನಿಸುವುದು ಅದು ದೇವಾಲಯಗಳನ್ನೂ ಉಪ್ಪರಿಗೆ ಮನೆಗಳನ್ನೂ ಕಟ್ಟಲು ಸರ್ವವರ್ಣದವರಿಗೂ ಶುಭಕರವಾದುದು

೧೬ ತರುವಾಯ ಒಂದು ಮೊಳದಾಳದ ಆ ಹಳ್ಳವನ್ನು ಪರೀಕ್ಷೆಗೋಸುಗ ಮುಚ್ಚಬೇಕು ತೋಡಿದ ಮಣ್ಣು ಉಳಿದರೆ ಸಂಪತ್ತು ಉಂಟಾಗುವುದು ಸಾಲದೆ ಬಂದರೆ ಹಾನಿ ಸಂಭವಿಸುವುದು ಹೆಚ್ಚುಕಡಿಮೆಯಾಗದಂತೆ ಸರಿಹೋದರೆ ಲಾಭ ನಷ್ಟಗಳು ಸಮನಾಗುವುವು

೧೭-೧೮ ಇದಿಲ್ಲದಿದ್ದರೆ ಮತ್ತೊಂದು ಬಗೆಯ ಪರೀಕ್ಷೆಯುಂಟು ನಿವೇಶನದಲ್ಲಿ ಸ್ವಲ್ಪ ಸ್ಥಳವನ್ನು ನೇಗಲಿನಿಂದ ಉತ್ತು ಅದರಲ್ಲಿ ಬಗೆಬಗೆಯ ಬೀಜಗಳನ್ನು ಬಿತ್ತಬೇಕು ಅವು ಮೂರು, ಐದು ಅಥವಾ ಏಳು ದಿನಗಳಲ್ಲಿ ಮೊಳೆಯುವುವು

ತ್ರಿಪಂಚಸಪ್ತರಾತ್ರೇ ಚ ಯತ್ರಾರೋಹಂತಿ ತಾನ್ಯಪಿ ।
ಜ್ಯೇಷ್ಠೋತ್ತಮಾ ಕನಿಷ್ಠಾ ಭೂರ್ವರ್ಜನೀಯತರಾ ಸದಾ ॥೧೮॥

ಪಂಚಗವ್ಯೌಷಧಿಜಲೈಃ ಪರೀಕ್ಷಿತ್ವಾ ಚ ಸೇಚಯೇತ್ ।
ಏಕಾಶೀತಿಪದಂ ಕೃತ್ವಾ ರೇಖಾಭಿಃ ಕನಕೇನ ಚ ॥೧೯॥

ಪಶ್ಚಾತ್ಪಿಷ್ಟೇನ ಚಾಲಿಖ್ಯ ಸೂತ್ರೇಣಾಲೋಡ್ಯ ಸರ್ವತಃ ।
ದಶ ಪೂರ್ವಾಯತಾ ಲೇಖಾ ದಶ ಚೈವೋತ್ತರಾಯತಾಃ ॥೨೦॥

ಸರ್ವವಾಸ್ತುವಿಭಾಗೇಷು ವಿಜ್ಞೇಯಾ ನವಕಾ ನವ ।
ಏಕಾಶೀತಿಪದಂ ಕೃತ್ವಾ ವಾಸ್ತುವಿತ್ಸರ್ವವಾಸ್ತುಷು ॥೨೧॥

ಪದಸ್ಥಾನ್ ಪೂಜಯೇದ್ದೇವಾಂಸ್ತ್ರಿಂಶತ್ಪಂಚದಶೈವ ತು ।
ದ್ವಾತ್ರಿಂಶದ್ಬಾಹ್ಯತಃ ಪೂಜ್ಯಾಃ ಪೂಜ್ಯಾಶ್ಚಾಂತಸ್ತ್ರಯೋದಶ ॥೨೨॥

---

ಬಲುಬೇಗನೆ ಮೊಳೆತರೆ ಭೂಮಿ ಉತ್ತಮವಾದುದು ಬಲು ತಡವಾದರೆ ಆ ನೆಲವು ಪ್ರಶಸ್ತವಲ್ಲ ಅದನ್ನು ಖಂಡಿತವಾಗಿ ಬಿಟ್ಟುಬಿಡಬೇಕು

೧೯-೨೦ ಹಿಂದೆ ಹೇಳಿದಂತೆ ಪರೀಕ್ಷೆಮಾಡಿದ ಬಳಿಕ ನೆಲವನ್ನು ಮೂಲಿಕೆಗಳ ಜಲದಿಂದಲೂ ಪಂಚಗವ್ಯದಿಂದಲೂ ಪ್ರೋಕ್ಷಿಸಬೇಕು ತರುವಾಯ ವಾಸ್ತು ಪೂಜೆಗಾಗಿ ಎಂಬತ್ತೊಂದು ಮನಗಳುಳ್ಳ ಚೌಕವನ್ನು ರಚಿಸಬೇಕು ಅದೆಂತೆಂದರೆ ಪೂರ್ವಪಶ್ಚಿಮವಾಗಿ ಹತ್ತು ಗೆರೆಗಳನ್ನೂ ದಕ್ಷಿಣೋತ್ತರವಾಗಿ ಹತ್ತು ಗೆರೆಗಳನ್ನೂ ಎಳೆಯಬೇಕ ಮೊದಲು ಚಿನ್ನದ ಸಲಾಕೆಯಿಂದಲೂ ಅದರ ಮೇಲೆ ಹಿಟ್ಟಿನಿಂದಲೂ ರೇಖೆಗಳನ್ನು ರಚಿಸಬೇಕು ಸುತ್ತಲೂ ದಾರವನ್ನು ಕಟ್ಟಬೇಕು

೨೧-೨೨ ಎಲ್ಲಬಗೆಯ ಕಟ್ಟಡಗಳ ವಾಸ್ತುಪೂಜೆಯಲ್ಲಿಯೂ ಹೀಗೆ ದಕ್ಷಿಣೋತ್ತರವಾಗಿ ಒಂಬತ್ತು, ಪೂರ್ವಪಶ್ಚಿಮವಾಗಿ ಒಂಬತ್ತು ಒಟ್ಟು ಎಂಬತ್ತೊಂದು ಮನೆಗಳುಳ್ಳ ಚೌಕವೇ ಆಗಬೇಕು ವಾಸ್ತುಶಾಸ್ತ್ರದ ವಿಧಿಯನ್ನು ಅರಿತು ಈ ಮನೆಗಳಲ್ಲಿ ನಲವತ್ತೈದು ಮಂದಿ ದೇವತೆಗಳನ್ನು—ಹೊರಸುತ್ತಿನಲ್ಲಿ ಮೂವತ್ತೆರಡು ಮಂದಿ, ಒಳಗಡೆ ಹದಿಮೂರುಮಂದಿ—ಆವಾಹನ ಮಾಡಿ ಪೂಜಿಸಬೇಕು

ನಾಮತಸ್ತಾ್ ಪ್ರವಕ್ಷ್ಯಾಮಿ ಸ್ಥಾನಾನಿ ಚ ನಿಬೋಧತ ।
ಈಶಾನಕೋಣಾದಿಷು ತಾ್ ಪೂಜಯೇದ್ಧವಿಷಾ ನರಃ ॥೨೩॥

ಶಿಖೀ ಚೈವಾಥ ಪರ್ಜನ್ಯೋ ಜಯಂತಃ ಕುಲಿಶಾಯುಧಃ ।
ಸೂರ್ಯಃ ಸತ್ಯೋ ಭೃಶಶ್ಚೈವ ಆಕಾಶೋ ವಾಯುರೇವ ಚ ॥೨೪॥

ಪೂಷಾ ಚ ವಿತಥಶ್ಚೈವ ಗೃಹಕ್ಷತಯಮಾವುಭೌ ।
ಗಂಧರ್ವೋ ಭೃಂಗರಾಜಶ್ಚ ಮೃಗಃ ಪಿತೃಗಣಸ್ತಥಾ ॥೨೫॥

ದೌವಾರಿಕೋಽಥ ಸುಗ್ರೀವಃ ಪುಷ್ಪದಂತೋ ಜಲಾಧಿಪಃ ।
ಅಸುರಃ ಶೇಷಪಾಪೌ ಚ ರೋಗೋಽಹಿರ್ಮುಖ್ಯ ಏವ ಚ ॥೨೬॥

ಭಲ್ಲಾಟಃ ಸೋಮಸರ್ಪೌ ಚ ಅದಿತಿಶ್ಚ ದಿತಿಸ್ತಥಾ ।
ಬಹಿರ್ದ್ವಾತ್ರಿಂಶದೇತೇ ತು ತದಂತಸ್ತು ತತಃ ಶೃಣು ॥೨೭॥

ಈಶಾನಾದಿಚತುಷ್ಕೋಣಸಂಸ್ಥಿತಾ್ ಪೂಜಯೇದ್ಬುಧಃ ।
ಆಪಶ್ಚೈವಾಥ ಸಾವಿತ್ರೋ ಜಯೋ ರುದ್ರಸ್ತಥೈವ ಚ ॥೨೮॥

---

೨೩ ಆ ದೇವತೆಗಳ ಹೆಸರನ್ನೂ ಸ್ಥಾನಗಳನ್ನೂ ಹೇಳುವೆನು ಕೇಳಿ ಈಶಾನ್ಯ ಮೊದಲಾದ ಮೂಲೆಗಳಲ್ಲಿ ಅವರನ್ನು ಆವಾಹಿಸಿ ಹವಿಸ್ಸಿನಿಂದ ಪೂಜಿಸಬೇಕು

೨೪-೨೭ ಅಗ್ನಿ, ಪರ್ಜನ್ಯ, ಜಯಂತ, ಇಂದ್ರ, ಸೂರ್ಯ, ಸತ್ಯ, ಭೃಶ, ಆಕಾಶ, ವಾಯು, ಪೂಷ, ವಿತಥ, ಗೃಹಕ್ಷತ, ಯಮ, ಗಂಧರ್ವ, ಭೃಂಗರಾಜ, ಮೃಗ, ಪಿತೃಗಣ, ದೌವಾರಿಕ, ಸುಗ್ರೀವ, ಪುಷ್ಪದಂತ, ವರುಣ, ಅಸುರ, ಶೇಷ, ಪಾಪ, ರೋಗ, ಅಹಿ, ಮುಖ್ಯ, ಭಲ್ಲಾಟ, ಸೋಮ, ಸರ್ಪ, ಅದಿತಿ, ದಿತಿ ಈ ಮೂವತ್ತೆರಡು ಮಂದಿಯೂ ಹೊರಸುತ್ತಿನಲ್ಲಿ ಪೂಜಿಸಲ್ಪಡಬೇಕಾದವರು ಇನ್ನು ಒಳಗಡೆಯಲ್ಲಿ ಆವಾಹಿಸಬೇಕಾದ ದೇವತೆಗಳ ಹೆಸರನ್ನು ಹೇಳುವೆನು ಕೇಳು

೨೮ ಆಪ, ಸಾವಿತ್ರ, ಜಯ, ರುದ್ರ ಈ ನಾಲ್ವರನ್ನೂ ಕ್ರಮವಾಗಿ ಈಶಾನ್ಯ, ಆಗ್ನೇಯ, ನೈಋತ್ಯ ಮತ್ತು ವಾಯವ್ಯ ಮೂಲೆಗಳಲ್ಲಿ ಪೂಜಿಸಬೇಕು

ಮಧ್ಯೇ ನವಪದೇ ಬ್ರಹ್ಮಾ ತಸ್ಯಾಷ್ಟೌ ಚ ಸಮೀಪಗಾಃ ।
ಸಾಧ್ಯಾನೇಕಾಂತರಾನ್ ವಿದ್ಯಾತ್ಪೂರ್ವಾದ್ಯಾನ್ನಾಮತಃ ಶೃಣು ॥೨೯॥

ಅರ್ಯಮಾ ಸವಿತಾ ಚೈವ ವಿವಸ್ವಾನ್ ವಿಬುಧಾಧಿಪಃ ।
ಮಿತ್ರೋಽಥ ರಾಜಯಕ್ಷ್ಮಾ ಚ ತಥಾ ಪೃಥ್ವೀಧರಃ ಕ್ರಮಾತ್ ॥೩೦॥

ಅಷ್ಟಮಶ್ಚಾಪವತ್ಸಸ್ತು ಪರಿತೋ ಬ್ರಹ್ಮಣಃ ಸ್ಮೃತಾಃ ।
ಆಪಶ್ಚೈವಾಪವತ್ಸಶ್ಚ ಪರ್ಜನ್ಯೋಽಗ್ನಿರ್ದಿತಿಸ್ತಥಾ ॥೩೧॥

ಪದಿಕಾನಾಂ ತು ವರ್ಗೋಽಯಮೇವಂ ಕೋಣೇಷ್ವಶೇಷತಃ ।
ತನ್ಮಧ್ಯೇ ತು ಬಹಿರ್ವಂಶಾದ್ದ್ವಿಪದಾಸ್ತೇ ತು ಸರ್ವಶಃ ॥೩೨॥

ಅರ್ಯಮಾ ಚ ವಿವಸ್ವಾಂಶ್ಚ ಮಿತ್ರಃ ಪೃಥ್ವೀಧರಸ್ತಥಾ ।
ಬ್ರಹ್ಮಣಃ ಪರಿತೋ ದಿಕ್ಷು ತ್ರಿಪದಾಸ್ತೇ ತು ಸರ್ವಶಃ ॥೩೩॥

---

೨೯ ನಡುವಣ ಒಂಬತ್ತು ಮನೆಗಳಲ್ಲಿ ಬ್ರಹ್ಮನೂ, ಅವನ ಸುತ್ತಲೂ ನೆರೆಯ ಮನೆಗಳಲ್ಲಿ ಒಂದನ್ನು ಬಿಟ್ಟು ಮತ್ತೊಂದರಲ್ಲಿ ಎಂಟುಜನ ಸಾಧ್ಯರೂ ಇರುವರೆಂದು ಅರಿಯಬೇಕು ಪೂರ್ವದಿಕ್ಕಿನಿಂದ ಪ್ರಾರಂಭಿಸಿ ಅವರ ಹೆಸರುಗಳನ್ನು ಹೇಳುವೆನು ಕೇಳು

೩೦ ಅರ್ಯಮ, ಸವಿತೃ, ವಿವಸ್ವಂತ, ವಿಬುಧಾಧಿಪ, ಮಿತ್ರ, ರಾಜಯಕ್ಷ್ಮ, ಪೃಥ್ವೀಧರ, ಅಪವತ್ಸ ಈ ಎಂಟುಮಂದಿಯೂ ಬ್ರಹ್ಮನ ಸುತ್ತಲೂ ಇರುವರು

೩೧ ಆಪ, ಅಪವತ್ಸ, ಪರ್ಜನ್ಯ, ಅಗ್ನಿ, ದಿತಿ ಎಂಬ ಐವರು ಅಂಕಣದ ಅಧಿಪತಿಗಳು ಇವರು ಒಂದು ಗುಂಪಿನವರು ಹೀಗೆ ಎಲ್ಲ ಮೂಲೆಗಳಲ್ಲಿಯೂ ಅಂಕಣದ ಅಧಿಪತಿಗಳ ವರ್ಗಗಳು ಇವೆಯೆಂದು ತಿಳಿಯಬೇಕು

೩೨-೩೩ ಈ ಕೋಣವರ್ಗಗಳ ನಡುವೆ ಬ್ರಹ್ಮಪದದ ಸುತ್ತ ನಾಲ್ಕು ಕಡೆಗಳಲ್ಲಿಯೂ ಎರಡು ಮನೆಗಳ ಅಗಲ ಮತ್ತು ಮೂರು ಮನೆಗಳ ಉದ್ದವಿರುವ ಪ್ರದೇಶವು ಏರ್ಪಡುವುದು ಪೂರ್ವದಿಕ್ಕಿನಿಂದ ಕ್ರಮವಾಗಿ ಅರ್ಯಮ, ವಿವಸ್ವಂತ, ಮಿತ್ರ, ಪೃಥ್ವೀಧರ ಎಂಬ ನಾಲ್ವರು ದೇವತೆಗಳು ಇವುಗಳಿಗೆ ಅಧಿಪತಿಗಳಾಗಿರುವರು

ವಂಶಾನಿದಾನೀಂ ವಕ್ಷ್ಯಾಮಿ ಋಜೂನಪಿ ಪೃಥಕ್ಪೃಥಕ್ ।
ವಾಯುಂ ಯಾವತ್ತಥಾ ರೋಗಾತ್ಪಿತೃಭ್ಯಃ ಶಿಖಿನಃ ಪುನಃ ॥೩೪॥
ಮುಖ್ಯಾದ್ಭೃಶಂ ತಥಾ ಶೇಷಾದ್ವಿತಥಂ ಯಾವದೇವ ತು ।
ಸುಗ್ರೀವಾದದಿತಿಂ ಯಾವನ್ಮೃಗಾತ್ಪರ್ಜನ್ಯಮೇವ ಚ ॥೩೫॥
ಏತೇ ವಂಶಾಃ ಸಮಾಖ್ಯಾತಾಃ ಕ್ವಚಿಚ್ಚ ಜಯಮೇವ ತು ।
ಏತೇಷಾಂ ಯಸ್ತು ಸಂಪಾತಃ ಪದಂ ಮಧ್ಯಂ ಸಮಂ ತಥಾ ॥೩೬॥
ಮರ್ಮ ಚೈತತ್ಸಮಾಖ್ಯಾತಂ ತ್ರಿಶೂಲಂ ಕೋಣಗಂ ಚ ಯತ್ ।
ಸ್ತಂಭನ್ಯಾಸೇಷು ವರ್ಜ್ಯಾನಿ ತುಲಾವಿಧಿಷು ಸರ್ವದಾ ॥೩೭॥
ಕೀಲೋಚ್ಛಿಷ್ಟೋಪಘಾತಾದಿ ವರ್ಜಯೇದ್ಯತ್ನತೋ ಜನಃ ।
ಸರ್ವತ್ರ ವಾಸ್ತುರ್ನಿರ್ದಿಷ್ಟೋ ಪಿತೃವೈಶ್ವಾನರಾಯತಃ ॥೩೮॥

---

೩೪-೩೫ ವಾಸ್ತುಚಕ್ರದಲ್ಲಿ ನೇರವಾಗಿ ಎಳೆಯಬೇಕಾದ ರೇಖೆಗಳನ್ನು ಈಗ ಹೇಳುವೆನು ಕೇಳು ವಾಯುದೇವತಾಕವಾದ ಮನೆಯಿಂದ ರೋಗದೇವತಾಕವಾದ ಮನೆಯವರೆಗೆ ಸರಳರೇಖೆಯನ್ನು ಎಳೆಯಬೇಕು ಹೀಗೆಯೇ ಪಿತೃವಿನಿಂದ ಅಗ್ನಿಗೂ, ಮುಖ್ಯದಿಂದ ಭೃಶಕ್ಕೂ, ಶೇಷದಿಂದ ವಿತಥಕ್ಕೂ, ಸುಗ್ರೀವದಿಂದ ಅದಿತಿಗೂ, ಮೃಗದಿಂದ ಪರ್ಜನ್ಯಕ್ಕೂ ರೇಖೆಗಳನ್ನು ಎಳೆಯಬೇಕು ಇವುಗಳಿಗೆ ವಂಶರೇಖೆಗಳೆಂದು ಹೆಸರು ಕೆಲವುವೇಳೆ ಜಯದವರೆಗೆ ಮಾತ್ರ ಎಳೆಯುವುದೂ ಉಂಟು

೩೬ ಈ ರೇಖೆಗಳ ಸಂಧಿಪ್ರದೇಶದಲ್ಲಿ ಪದ, ಮಧ್ಯ, ಸಮ, ಮರ್ಮ ಎಂಬ ನಾಲ್ಕು ಚೌಕಗಳು ಏರ್ಪಡುವುವು ಕೋಣಸ್ಥಾನಗಳನ್ನು ತ್ರಿಶೂಲವೆನ್ನುವರು

೩೭ ಕಂಬಗಳನ್ನು ನೆಡುವಾಗಲೂ ತೊಲೆಗಳನ್ನು ಏರಿಸುವಾಗಲೂ ನೆಲದೊಳಗೆ ಮೊಳೆ, ಮೂಳೆ ಮೊದಲಾದ ಅಶುಚಿಯಾದ ಪದಾರ್ಥಗಳು ಇಲ್ಲದಂತೆ ಶೋಧಿಸಬೇಕು

೩೮-೪೨ ವಾಸ್ತುಪುರುಷನು ಹಿಂದೆ ಹೇಳಿದ ಸಕಲ ದೇವತೆಗಳ ಸ್ವರೂಪದಿಂದಿರುವನು ಪಿತೃಪದದಿಂದ ಅಗ್ನಿಪದದವರೆಗೆ ಇರುವ ಅಂತರವೇ ಅವನ ಎತ್ತರ

ಮೂರ್ಧನ್ಯಗ್ನಿಃ ಸಮಾದಿಷ್ಟೋ ಮುಖೇ ಚಾಪಃ ಸಮಾಶ್ರಿತಃ ।
ಪೃಥ್ವೀಧರೋಽರ್ಯಮಾ ಚೈವ ಸ್ಕಂಧಯೋಸ್ತಾವಧಿಷ್ಠಿತೌ ||೩೯||

ವಕ್ಷಃಸ್ಥಲೇ ಚಾಪವತ್ಸಃ ಪೂಜನೀಯಃ ಸದಾ ಬುಧೈಃ ।
ನೇತ್ರಯೋರ್ದಿತಿಪರ್ಜನ್ಯೌ ಶ್ರೋತ್ರೇಽದಿತಿಜಯಂತಕೌ ||೪೦||

ಸರ್ಪೇಂದ್ರಾವಂಸಸಂಸ್ಥೌ ತು ಪೂಜನೀಯೌ ಪ್ರಯತ್ನತಃ ।
ಸೂರ್ಯಸೋಮಾದಯಸ್ತದ್ವದ್ಬಾಹ್ವೋಃ ಪಂಚ ಚ ಪಂಚ ಚ ||೪೧||

ರುದ್ರಶ್ಚ ರಾಜಯಕ್ಷ್ಮಾ ಚ ವಾಮಹಸ್ತೇ ಸಮಾಸ್ಥಿತೌ ।
ಸಾವಿತ್ರಃ ಸವಿತಾ ತದ್ವದ್ಧಸ್ತಂ ದಕ್ಷಿಣಮಾಸ್ಥಿತೌ ||೪೨||

ವಿವಸ್ವಾನಥ ಮಿತ್ರಶ್ಚ ಜಠರೇ ಸಂವ್ಯವಸ್ಥಿತೌ ।
ಪೂಷಾ ಚ ಪಾಪಯಕ್ಷ್ಮಾ ಚ ಹಸ್ತಯೋರ್ಮಣಿಬಂಧನೇ ||೪೩||

ತಥೈವಾಸುರಶೇಷೌ ಚ ವಾಮಪಾರ್ಶ್ವಂ ಸಮಾಶ್ರಿತೌ ।
ಪಾರ್ಶ್ವೇ ತು ದಕ್ಷಿಣೇ ತದ್ವದ್ವಿತಥಃ ಸಗೃಹಕ್ಷತಃ ||೪೪||

---

ಅಗ್ನಿಯು ಅವನ ತಲೆ ಆಪನು ಮುಖ ಪೃಥ್ವೀಧರ, ಅರ್ಯಮ ಇವರಿಬ್ಬರೂ ಹೆಗಲುಗಳು ಆಪವತ್ಸನು ವಕ್ಷಸ್ಥಲದಲ್ಲಿಯೂ, ದಿತಿ ಮತ್ತು ಪರ್ಜನ್ಯರು ಕಣ್ಣುಗಳಲ್ಲಿಯೂ ಅದಿತಿ ಮತ್ತು ಜಯಂತರು ಕಿವಿಗಳಲ್ಲಿಯೂ ನೆಲಸಿರುವರು ಸರ್ಪ ಮತ್ತು ಇಂದ್ರರನ್ನು ಭುಜಗಳಲ್ಲಿಯೂ ಸೂರ್ಯ, ಸತ್ಯ, ಭೃಶ, ಆಕಾಶ, ವಾಯು ಈ ಐವರನ್ನು ಬಲದೋಳಿನಲ್ಲೂ ಸೋಮ, ಭಲ್ಲಾಟ, ಮುಖ್ಯ, ಅಹಿ, ರೋಗ ಈ ಐವರನ್ನು ಎಡದೋಳಿನಲ್ಲಿಯೂ ಧ್ಯಾನಿಸಬೇಕು ರುದ್ರ, ರಾಜಯಕ್ಷ್ಮ ಇವರು ಎಡಗೈಯನ್ನೂ ಸಾವಿತ್ರ, ಸವಿತೃ ಇವರು ಬಲಗೈಯನ್ನೂ ಆಶ್ರಯಿಸಿರುವರು

೪೩-೪೪ ವಿವಸ್ವಂತನೂ ಮಿತ್ರನೂ ಜಠರದಲ್ಲಿ ವಾಸಿಸುವರು ಪೂಷನೂ ಪಾಪಯಕ್ಷ್ಮನೂ ಕೈಗಳ ಮಣಿಕಟ್ಟುಗಳಲ್ಲಿ ನೆಲಸಿರುವರು ಅಸುರ, ಶೇಷ ಇವರಿಬ್ಬರೂ ಎಡಪಕ್ಕದಲ್ಲೂ ವಿತಥ, ಗೃಹಕ್ಷತ ಇವರಿಬ್ಬರೂ ಬಲಪಕ್ಕದಲ್ಲೂ ಸೇರಿರುವರು

ಊರ್ವೋರ್ಯಮವರುಣೌ ಜ್ಞೇಯೌ ಜಾನ್ವೋರ್ಗಂಧರ್ವಪುಷ್ಪಕೌ ।
ಜಂಘಯೋರ್ಭೃಂಗಸುಗ್ರೀವೌ ಸ್ಫಿಕ್‌ಸ್ಥೌ ದೌವಾರಿಕೋಮೃಗಃ ॥೪೫॥
ಜಯಶಕ್ರೌ ತಥಾ ಮೇಢ್ರೇ ಪಾದಯೋಃ ಪಿತರಸ್ತಥಾ ।
ಮಧ್ಯೇ ನವಪದೇ ಬ್ರಹ್ಮಾ ಹೃದಯೇ ಸ ತು ಪೂಜ್ಯತೇ ॥೪೬॥
ಚತುಃಷಷ್ಟಿಪದೋ ವಾಸ್ತುಃ ಪ್ರಾಸಾದೇ ಬ್ರಹ್ಮಣಾ ಸ್ಮೃತಃ ।
ಬ್ರಹ್ಮಾ ಚತುಷ್ಪದಸ್ತತ್ರ ಕೋಣೇಷ್ವರ್ಧಪದಾಸ್ತಥಾ ॥೪೭॥
ಬಹಿಷ್ಕೋಣೇಷು ಚಾಷ್ಟೌ ತು ಸಾರ್ಧಾಶ್ಚೋಭಯಸಂಸ್ಥಿತಾಃ ।
ವಿಂಶತಿರ್ದ್ವಿಪದಾಶ್ಚೈವ ಚತುಃಷಷ್ಟಿಪದೇ ಸ್ಮೃತಾಃ ॥೪೮॥
ಗೃಹಾರಂಭೇಷು ಕಂಡೂತಿಃ ಸ್ವಾಮ್ಯಂಗೇ ಯತ್ರ ಜಾಯತೇ ।
ಶಲ್ಯಂ ತ್ವಪನಯೇತ್ತತ್ರ ಪ್ರಾಸಾದೇ ಭವನೇ ತಥಾ ॥೪೯॥

---

೪೫-೪೬ ಯಮ ಮತ್ತು ವರುಣರನ್ನು ತೊಡೆಗಳಲ್ಲಿಯೂ, ಗಂಧರ್ವ ಮತ್ತು ಪುಷ್ಪಕರನ್ನು ಮಂಡಿಗಳಲ್ಲಿಯೂ, ಭೃಂಗ ಮತ್ತು ಸುಗ್ರೀವರನ್ನು ಮೊಣಕಾಲುಗಳಲ್ಲಿಯೂ, ದೌವಾರಿಕ ಮತ್ತು ಮೃಗರನ್ನು ಪೃಷ್ಠಭಾಗದಲ್ಲಿಯೂ ಧ್ಯಾನಿಸಬೇಕು ಜಯ, ಶಕ್ರ ಇವರು ಮೇಢ್ರವನ್ನೂ ಪಿತೃಗಳು ಪಾದಗಳನ್ನೂ ಆಶ್ರಯಿಸಿರುವರು ನಡುವೆ ಒಂಬತ್ತು ಮನೆಗಳಲ್ಲಿ ಬ್ರಹ್ಮನು ನೆಲಸಿರುವನು ಅವನನ್ನು ಹೃದಯಸ್ಥಾನದಲ್ಲಿ ಧ್ಯಾನಿಸಿ ಪೂಜಿಸಬೇಕು

೪೭-೪೮ ಅರಮನೆಗಳನ್ನು ನಿರ್ಮಿಸುವಾಗ ರಚಿಸಬೇಕಾದ ವಾಸ್ತು ಮಂಡಲವು ಅರವತ್ತನಾಲ್ಕು ಚೌಕಗಳುಳ್ಳದು ಮೂಲೆಗಳಲ್ಲಿ ಒಂದೊಂದು ಮನೆಯಲ್ಲಿಯೂ, ಒಬ್ಬೊಬ್ಬ ದೇವತೆಗೆ ಅರ್ಧಭಾಗವು ಮಾತ್ರ ಸೇರಿರುವುದು, ಹೊರಗಡೆಯ ನಾಲ್ಕು ಮೂಲೆಯ ಮನಗಳಲ್ಲಿ ಎಂಟು ಜನ ದೇವತೆಗಳು ಆವಾಹಿಸಲ್ಪಡುವರು ಬ್ರಹ್ಮಸ್ಥಾನದ ಉಭಯ ಪಾರ್ಶ್ವಗಳಲ್ಲಿಯೂ ಇಪ್ಪತ್ತು ಇಪ್ಪತ್ತು ಮನೆಗಳು ಏರ್ಪಡುವುವು

೪೯ ದೇವಾಲಯದ, ಅರಮನೆಯ ಅಥವಾ ಮನೆಯ ನಿರ್ಮಾಣಕ್ಕೆ ಪ್ರಾರಂಭಿಸಿದಾಗ ಯಜಮಾನನಿಗೆ ಯಾವ ಅವಯವದಲ್ಲಿ ನವೆ ಹುಟ್ಟುವುದೋ ವಾಸ್ತುಪುರುಷನ ಅಂಗಭೂತವಾದ ಆ ಪ್ರದೇಶವನ್ನು ಶೋಧಿಸಿ ಅಲ್ಲಿರುವ ಮೊಳೆ, ಮೂಳೆ ಮುಂತಾದುವನ್ನು ತೆಗೆದು ಹಾಕಬೇಕು ಏಕೆಂದರೆ ಶಲ್ಯವೇನಾದರೂ ಇದ್ದರೆ ಭಯಪ್ರಾಪ್ತಿಯಾಗುವುದು ಇಲ್ಲದಿದ್ದರೆ ಕ್ಷೇಮವಾಗುವುದು

**ಸಶಲ್ಯಂ ಭಯದಂ ಯಸ್ಮಾದಶಲ್ಯಂ ಶುಭದಾಯಕಂ ।**
**ಹೀನಾಧಿಕಾಂಗತಾಂ ವಾಸ್ತೋಃ ಸರ್ವಥಾ ತು ವಿವರ್ಜಯೇತ್ ॥೫೦॥**

**ನಗರಗ್ರಾಮದೇಶೇಷು ಸರ್ವತ್ರೈವಂ ವಿವರ್ಜಯೇತ್ ।**
**ಚತುಃಶಾಲಂ ತ್ರಿಶಾಲಂ ಚ ದ್ವಿಶಾಲಂ ಚೈಕಶಾಲಕಂ ।**
**ನಾಮತಸ್ತಾ ಪ್ರವಕ್ಷ್ಯಾಮಿ ಸ್ವರೂಪೇಣ ದ್ವಿಜೋತ್ತಮಾಃ ॥೫೧॥**

**ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ಏಕಾಶೀತಿಪದವಾಸ್ತು ನಿರ್ಣಯೋ ನಾಮ ತ್ರಿಪಂಚಾಶದಧಿಕದ್ವಿಶತತಮೋಽಧ್ಯಾಯಃ**

---

೫೦-೫೧ ಏನೇ ಆಗಲಿ, ವಾಸ್ತುಪುರುಷನ ಅಂಗಗಳಲ್ಲಿ ಹೆಚ್ಚು ಕಡಿಮೆಯನ್ನು ಮಾಡಬಾರದು ನಗರ, ಗ್ರಾಮ ಮತ್ತು ದೇಶಗಳ ನಿರ್ಮಾಣವನ್ನು ಮಾಡುವಾಗಲೆಲ್ಲ ಈ ಬಗೆಯ ನ್ಯೂನಾತಿರೇಕಗಳು ಬಾರದಂತೆ ನೋಡಿಕೊಳ್ಳಬೇಕು ಓ ಬ್ರಾಹ್ಮಣೋತ್ತಮರೇ, ಚತುಶ್ಶಾಲ, ತ್ರಿಶಾಲ, ದ್ವಿಶಾಲ ಮತ್ತು ಏಕಶಾಲಗಳೆಂಬ ಶಾಲಾಪ್ರಭೇದಗಳನ್ನೂ ಅವುಗಳ ಲಕ್ಷಣವನ್ನೂ, ಹೆಸರನ್ನೂ ಹೇಳುವೆನು ಕೇಳಿ

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಗೃಹಾರಂಭಕ್ಕೆ ಪ್ರಶಸ್ತವಾದ ಕಾಲವನ್ನೂ ನಿವೇಶನವನ್ನು ಪರೀಕ್ಷಿಸುವ ರೀತಿಯನ್ನೂ, ವಾಸ್ತುಮಂಡಲದ ಸ್ವರೂಪವನ್ನೂ ವರ್ಣಿಸಿದೆ

ಶಾಸ್ತ್ರೋಕ್ತವಾದ ಕಾಲದಲ್ಲಿ ಕಟ್ಟಡವನ್ನು ಕಟ್ಟಲು ಪ್ರಾರಂಭಿಸಬೇಕು ನಿವೇಶನವನ್ನು ಪರೀಕ್ಷಿಸುವುದಕ್ಕೆ ಹಲವು ಉಪಾಯಗಳಿವೆ ವಾಸ್ತುಪುರುಷನು ದೇವತಾಸ್ವರೂಪನಾಗಿದ್ದಾನೆ ಅವನನ್ನು ಮೊದಲು ಪೂಜಿಸಬೇಕು ವಾಸ್ತುಮಂಡಲವು ಏಕಾಶೀತಿಪದ ಮತ್ತು ಚತುಃಷಷ್ಟಿಪದವೆಂದು ಎರಡು ವಿಧವಾಗಿದೆ ಅದನ್ನು ವಿರಚಿಸಿ ಆಯಾಯಾ ಸ್ಥಾನದಲ್ಲಿ ದೇವತೆಗಳನ್ನು ಆವಾಹನಮಾಡಿ ಶಾಂತಿಕರ್ಮವನ್ನು ನೆರವೇರಿಸಬೇಕು

ಶ್ರೀಮತ್ಸ್ಯಮಹಾಪುರಾಣದಲ್ಲಿ ಏಕಾಶೀತಿಪದವಾಸ್ತುನಿರ್ಣಯವೆಂಬ ಇನ್ನೂರ ಐವತ್ತಮೂರನೆಯ ಅಧ್ಯಾಯವು ಮುಗಿದುದು

## ಅಥ ಚತುಃಪಂಚಾಶದಧಿಕದ್ವಿಶತತಮೋಽಧ್ಯಾಯಃ

॥ ಸೂತ ಉವಾಚ ॥

ಚತುಃಶಾಲಂ ಪ್ರವಕ್ಷ್ಯಾಮಿ ಸ್ವರೂಪಂ ನಾಮತಸ್ತಥಾ ।
ಚತುಃಶಾಲಂ ಚತುರ್ದ್ವಾರೈರಲಿಂದೈಃ ಸರ್ವತೋಮುಖಂ ॥ ೧ ॥

ನಾಮ್ನಾ ತತ್ಸರ್ವತೋಭದ್ರಂ ಶುಭಂ ದೇವನೃಪಾಲಯೇ ।
ಪಶ್ಚಿಮದ್ವಾರಹೀನಂ ಚ ನಂದ್ಯಾವರ್ತಂ ಪ್ರಚಕ್ಷತೇ ॥ ೨ ॥

ದಕ್ಷಿಣದ್ವಾರಹೀನಂ ತು ವರ್ಧಮಾನಮುದಾಹೃತಂ ।
ಪೂರ್ವದ್ವಾರವಿಹೀನಂ ತತ್ಸ್ವಸ್ತಿಕಂ ನಾಮ ವಿಶ್ರುತಂ ॥ ೩ ॥

ರುಚಕಂ ಚೋತ್ತರದ್ವಾರವಿಹೀನಂ ತತ್ಪ್ರಚಕ್ಷತೇ ।
ಸೌಮ್ಯಶಾಲಾವಿಹೀನಂ ಯತ್ತ್ರಿಶಾಲಂ ಧಾನ್ಯಕಂ ಚ ತತ್ ॥ ೪ ॥

---

೧ ಸೂತಪೌರಾಣಿಕನು ಹೇಳಿದನು —ಚತುಶ್ಶಾಲವನ್ನೂ, ಅದರ ಸ್ವರೂಪವನ್ನೂ, ಹೆಸರನ್ನೂ ಹೇಳುವೆನು ಕೇಳು ನಾಲ್ಕುದಿಕ್ಕಿನಲ್ಲೂ ಬಾಗಿಲುಗಳೂ ಕೈಸಾಲೆಗಳೂ ಇದ್ದರೆ ಆ ಕಟ್ಟಡವು ಚತುಶ್ಶಾಲವೆನಿಸುವುದು ಅದಕ್ಕೆ ಸರ್ವತೋಭದ್ರವೆಂದು ಹೆಸರು ದೇವಸ್ಥಾನ, ಅರಮನೆ ಇಂತಹವುಗಳಿಗೆ ಈ ಬಗೆಯ ಕಟ್ಟಡವು ಶುಭಪ್ರದವಾದದು

೨-೩ ಪಶ್ಚಿಮದಿಕ್ಕಿನಲ್ಲಿ ಬಾಗಿಲಿಲ್ಲದಿದ್ದರೆ ನಂದ್ಯಾವರ್ತವೆಂದೂ, ದಕ್ಷಿಣದಲ್ಲಿ ಇಲ್ಲದಿದ್ದರೆ ವರ್ಧಮಾನವೆಂದೂ, ಪೂರ್ವದಲ್ಲಿಲ್ಲದಿದ್ದರೆ ಸ್ವಸ್ತಿಕವೆಂದೂ, ಉತ್ತರದಿಕ್ಕಿನಲ್ಲಿಲ್ಲದಿದ್ದರೆ ರುಚಕವೆಂದೂ ಹೆಸರು

೪ ಉತ್ತರದಿಕ್ಕು ಹೊರತಾಗಿ ಉಳಿದ ಮೂರು ದಿಕ್ಕುಗಳಲ್ಲಿ ಕೈಸಾಲೆಯಿದ್ದರೆ ಅದನ್ನು ಧಾನ್ಯಕವೆನ್ನುತ್ತಾರೆ ಅದು ಮನುಷ್ಯರಿಗೆ ಕ್ಷೇಮವನ್ನೂ ಏಳಿಗೆಯನ್ನೂ ಕೊಡುತ್ತದೆ ಅನೇಕ ಪುತ್ರಲಾಭವನ್ನೂ ಉಂಟುಮಾಡುತ್ತದೆ

**ಕ್ಷೇಮವೃದ್ಧಿಕರಂ ನೃಣಾಂ ಬಹುಪುತ್ರಫಲಪ್ರದಂ ।**
**ಶಾಲಯಾ ಪೂರ್ವಯಾ ಹೀನಂ ಸುಕ್ಷೇತ್ರಮಿತಿ ವಿಶ್ರುತಂ ॥ ೫ ॥**

**ಧನ್ಯಂ ಯಶಸ್ಯಮಾಯುಷ್ಯಂ ಶೋಕಮೋಹವಿನಾಶನಂ ।**
**ಶಾಲಯಾ ಯಾಮ್ಯಯಾ ಹೀನಂ ಯದ್ವಿಶಾಲಂ ತು ಶಾಲಯಾ ॥ ೬ ॥**

**ಕುಲಕ್ಷಯಕರಂ ನೃಣಾಂ ಸರ್ವವ್ಯಾಧಿಭಯಾವಹಂ ।**
**ಹೀನಂ ಪಶ್ಚಿಮಯಾ ಯತ್ತು ಪಕ್ಷಘ್ನಂ ನಾಮ ತತ್ಪುನಃ ॥ ೭ ॥**

**ಮಿತ್ರಬಂಧುಸುತಾನ್ ಹಂತಿ ತಥಾ ಸರ್ವಭಯಾವಹಂ ।**
**ಯಾಮ್ಯಾಪರಾಭ್ಯಾಂ ಶಾಲಾಭ್ಯಾಂ ಧನಧಾನ್ಯಫಲಪ್ರದಂ ॥ ೮ ॥**

**ಕ್ಷೇಮವೃದ್ಧಿಕರಂ ನೃಣಾಂ ತಥಾ ಪುತ್ರಫಲಪ್ರದಂ ।**
**ಯಮಸೂರ್ಯಂ ಚ ವಿಜ್ಞೇಯಂ ಪಶ್ಚಿಮೋತ್ತರಶಾಲಕಂ ॥ ೯ ॥**

---

೫ ಪೂರ್ವದಿಕ್ಕಿನ ಕೈಸಾಲೆಯಿಲ್ಲದ ಕಟ್ಟಡವು ಸುಕ್ಷೇತ್ರವೆಂದು ಪ್ರಸಿದ್ಧವಾಗಿದೆ ಇದು ಯಶಸ್ಸನ್ನೂ ಆಯುಸ್ಸನ್ನೂ ಬೆಳಸುವುದು ಜನ್ಮಕ್ಕೆ ಸಾಫಲ್ಯವನ್ನು ಕೊಡುವುದು ಶೋಕವನ್ನೂ ಮೋಹವನ್ನೂ ಕಳೆಯುವುದು

೬ ದಕ್ಷಿಣದಿಕ್ಕಿನ ಶಾಲೆಯಿಲ್ಲದ ಮನೆಯನ್ನು ವಿಶಾಲವೆಂದು ಹೇಳುತ್ತಾರೆ ಇದು ಮನುಷ್ಯರ ವಂಶವನ್ನು ನಾಶಮಾಡುವುದು ಸಕಲ ವಿಧವಾದ ರೋಗಗಳ ಭೀತಿಯನ್ನು ಉಂಟುಮಾಡುವುದು

೭ ಪಶ್ಚಿಮದಿಕ್ಕಿನ ಕೈಸಾಲಯಿಲ್ಲದಿದ್ದರೆ ಪಕ್ಷಘ್ನವೆಂದು ಕರೆಯುತ್ತಾರೆ ಅದು ಮಿತ್ರರನ್ನೂ, ಬಂಧುಗಳನ್ನೂ, ಪುತ್ರರನ್ನೂ ನಾಶಮಾಡುತ್ತದೆ ಸಕಲ ವಿಧವಾದ ಭೀತಿಯನ್ನೂ ತರುತ್ತದೆ

೮ ದಕ್ಷಿಣ ಮತ್ತು ಪಶ್ಚಿಮದ ಕೈಸಾಲೆಗಳಿಂದ ಕೂಡಿದ ಮನೆಯು ಮನುಜರಿಗೆ ಧನಧಾನ್ಯಗಳನ್ನು ಕೊಡುವುದು , ಕ್ಷೇಮವನ್ನು ಹೆಚ್ಚಿಸುವುದು ಮತ್ತು ಸಂತಾನ ಲಾಭವನ್ನುಂಟುಮಾಡುವುದು

೯ ಪಶ್ಚಿಮದಲ್ಲೂ ಉತ್ತರದಲ್ಲೂ ಕೈಸಾಲೆಗಳಿದ್ದರೆ ಆ ಕಟ್ಟಡವನ್ನು ಯಮಸೂರ್ಯವೆನ್ನುತ್ತಾರೆ ಅದರಲ್ಲಿ ವಾಸಮಾಡುವವರಿಗೆ ರಾಜನಿಂದಲೂ ಅಗ್ನಿಯಿಂದಲೂ ಭಯವುಂಟು ಅವರ ವಂಶವು ಅಭಿವೃದ್ಧಿಯಾಗುವುದಿಲ್ಲ

ರಾಜಾಗ್ನಿಭಯದಂ ನೃಣಾಂ ಕುಲಕ್ಷಯಕರಂ ಚ ಯತ್ ।
ಉದಕ್ಪೂರ್ವೇ ತು ಶಾಲೇ ದ್ವೇ ದಂಡಾಖ್ಯೇ ಯತ್ರ ತದ್ಭವೇತ್ ॥೧೦॥

ಅಕಾಲಮೃತ್ಯುಭಯದಂ ಪರಚಕ್ರಭಯಾವಹಂ ।
ಧನಾಖ್ಯಂ ಪೂರ್ವಯಾಮ್ಯಾಭ್ಯಾಂ ಶಾಲಾಭ್ಯಾಂ ಚ ದ್ವಿಶಾಲಕಂ ॥೧೧॥

ತಚ್ಛಸ್ತ್ರಭಯದಂ ನೃಣಾಂ ಪರಾಭವಭಯಾವಹಂ ।
ಚುಲ್ಲೀ ಪೂರ್ವಾಪರಾಭ್ಯಾಂ ತು ಸಾ ಭವೇನ್ಮೃತ್ಯುಸೂಚನೀ ॥೧೨॥

ವೈಧವ್ಯದಾಯಕಂ ಸ್ತ್ರೀಣಾಮನೇಕಭಯಕಾರಕಂ ।
ಕಾರ್ಯಮುತ್ತರಯಾಮ್ಯಾಭ್ಯಾಂ ಶಾಲಾಭ್ಯಾಂ ಭಯದಂ ನೃಣಾಂ ॥೧೩॥

---

೧೦ ಉತ್ತರದಲ್ಲಾಗಲಿ ಪೂರ್ವದಲ್ಲಾಗಲಿ ಕೈಸಾಲೆಗಳಿದ್ದರೆ ದಂಡವೆನಿಸುವುದು ಅಲ್ಲಿ ಅಕಾಲಮೃತ್ಯುಭೀತಿಯೂ, ಪರಸೈನ್ಯದ ಭಯವೂ ಉಂಟಾಗುವುವು

೧೧ ಪೂರ್ವದಕ್ಷಿಣಗಳೆರಡರಲ್ಲೂ ಕೈಸಾಲೆಗಳುಳ್ಳ ಭವನವನ್ನು ಧನವೆನ್ನುತ್ತಾರೆ ಅದು ಜನರಿಗೆ ಶಸ್ತ್ರಭಯವನ್ನೂ ಅವಮಾನವನ್ನೂ ತರುವುದು

೧೨ ಪೂರ್ವ ಪಶ್ಚಿಮ ದಿಕ್ಕುಗಳಲ್ಲಿ ಕೈಸಾಲೆಯಿದ್ದರೆ ಆ ಮನೆಯನು ಚುಲ್ಲಿಯೆನ್ನುವರು ಅದು ಮೃತ್ಯುಭಯವನ್ನೂ, ಸ್ತ್ರೀಯರಿಗೆ ವೈಧವ್ಯವನ್ನೂ ಉಂಟುಮಾಡುವುದು ಅಷ್ಟೇ ಅಲ್ಲ, ನಾನಾ ವಿಧವಾದ ಭಯವನ್ನೂ ತರುವುದು

೧೩ ಉತ್ತರ ಮತ್ತು ದಕ್ಷಿಣ ದಿಕ್ಕಿನ ಕೈಸಾಲೆಗಳಿರುವ ಮನೆ ಕಾರ್ಯವೆನಿಸುವುದು ಅದರಿಂದ ಮನುಷ್ಯರಿಗೆ ಭಯವುಂಟು ವಿವೇಕಿಗಳು ಎರಡು ಕಡೆ ಕೈಸಾಲೆಗಳಿರುವ ಮನೆಗಳಲ್ಲಿ ಸಿದ್ಧಾರ್ಥ ಮತ್ತು ವಜ್ರವೆಂಬತಕ್ಕವನ್ನು ಯಾವಾಗಲೂ ಬಿಡಬೇಕು

ಸಿದ್ಧಾರ್ಥವಜ್ರವರ್ಜ್ಯಾನಿ ದ್ವಿಶಾಲಾನಿ ಸದಾ ಬುಧೈಃ ।
ಅಥಾತಃ ಸಂಪ್ರವಕ್ಷ್ಯಾಮಿ ಭವನಂ ಪೃಥಿವೀಪತೇಃ ||೧೪||

ಪಂಚಪ್ರಕಾರಂ ತತ್ಪ್ರೋಕ್ತಮುತ್ತಮಾದಿವಿಭೇದತಃ ।
ಅಷ್ಟೋತ್ತರಂ ಹಸ್ತಶತಂ ವಿಸ್ತಾರಶ್ಚೋತ್ತಮೋ ಮತಃ ||೧೫||

ಚತುರ್ಷ್ವಂತೇಷು ವಿಸ್ತಾರೋ ಹೀಯತೇ ಚಾಷ್ಟಭಿಃ ಕರೈಃ ।
ಚತುರ್ಥಾಂಶಾಧಿಕಂ ದೈರ್ಘ್ಯಂ ಪಂಚಸ್ವಪಿ ನಿಗದ್ಯತೇ ||೧೬||

ಯುವರಾಜಸ್ಯ ವಕ್ಷ್ಯಾಮಿ ತಥಾ ಭವನಪಂಚಕಂ ।
ಷಡ್ಭಿಃ ಷಡ್ಭಿಸ್ತಥಾಶೀತಿರ್ಹೀಯತೇ ತತ್ರ ವಿಸ್ತರಾತ್ ||೧೭||

ತ್ರ್ಯಂಶೇನ ಚಾಧಿಕಂ ದೈರ್ಘ್ಯಂ ಪಂಚಸ್ವಪಿ ನಿಗದ್ಯತೇ ।
ಸೇನಾಪತೇಃ ಪ್ರವಕ್ಷ್ಯಾಮಿ ತಥಾ ಭವನಪಂಚಕಂ ||೧೮||

---

೧೪-೧೫ ಇನ್ನುಮುಂದೆ ರಾಜಭವನದ ಲಕ್ಷಣವನ್ನು ಹೇಳುವೆನು ಅದು ಉತ್ತಮ ಮೊದಲಾದ ಪ್ರಭೇದಗಳಿಂದ ಐದು ತೆರನಾಗಿರುವುದು ಒಂದುನೂರೆಂಟು ಮೊಳಗಳ ಅಳತೆಯುಳ್ಳದು ಉತ್ತಮವೆನಿಸುವುದು

೧೬ ಉಳಿದ ನಾಲ್ಕರಲ್ಲೂ ಅಗಲವು ಕ್ರಮವಾಗಿ ಒಂದಕ್ಕಿಂತ ಮತ್ತೊಂದರಲ್ಲಿ ಎಂಟೆಂಟು ಮೊಳ ಕಡಿಮೆಯಾಗುವುದು ಐದು ಬಗೆಗಳಲ್ಲಿಯೂ ಉದ್ದವು ಅಗಲಕ್ಕಿಂತ ಕಾಲುಪಾಲು ಅಧಿಕವಾಗಿರುವುದು

೧೭ ಇನ್ನು ಯುವರಾಜನ ವಾಸಗೃಹದ ಪ್ರಮಾಣವನ್ನು ಹೇಳುವೆನು ಅದೂ ಸಹ ಐದು ವಿಧವಾಗಿರುವುದು ಮೊದಲನೆಯದರ ಅಗಲ ಎಂಬತ್ತು ಮೊಳ ಉಳಿದುವು ಕ್ರಮವಾಗಿ ಆರಾರು ಮೊಳ ಕಡಿಮೆಯಾಗುತ್ತ ಹೋಗುವುವು ಐದು ಬಗೆಗಳಲ್ಲಿಯೂ ಉದ್ದವು ಅಗಲಕ್ಕಿಂತ ಮೂರನೆಯ ಒಂದು ಪಾಲು ಅಧಿಕವಾಗಿರುವುದು

೧೮-೧೯ ಸೇನಾಪತಿಯ ಮನೆಯ ಅಳತೆಯನ್ನು ಹೇಳುವೆನು ಅದೂ ಕೂಡ ಐದು ತೆರನಾಗಿರುವುದು ಮೊದಲನೆಯದು ಅರವತ್ತನಾಲ್ಕು ಮೊಳ ಅಗಲ

ಚತುಃಷಷ್ಟಿಸ್ತು ವಿಸ್ತಾರಾತ್ ಷಡ್ಭಿಃ ಷಡ್ಭಿಸ್ತು ಹೀಯತೇ ।
ಪಂಚಸ್ವೇತೇಷು ದೈರ್ಘ್ಯಂ ಚ ಷಡ್ಭಾಗೇನಾಧಿಕಂ ಭವೇತ್ ॥೧೯॥

ಮಂತ್ರಿಣಾಮಥ ವಕ್ಷ್ಯಾಮಿ ತಥಾ ಭವನಪಂಚಕಂ ।
ಚತುಶ್ಚತುರ್ಭಿರ್ಹೀನಾ ಸ್ಯಾತ್ಕರಷಷ್ಟಿಃ ಪ್ರವಿಸ್ತರೇ ॥೨೦॥

ಅಷ್ಟಾಂಶೇನಾಧಿಕಂ ದೈರ್ಘ್ಯಂ ಪಂಚಸ್ವಪಿ ನಿಗದ್ಯತೇ ।
ಸಾಮಂತಾಮಾತ್ಯಲೋಕಾನಾಂ ವಕ್ಷ್ಯೇ ಭವನಪಂಚಕಂ ॥೨೧॥

ಚತ್ವಾರಿಂಶತ್ತಥಾಷ್ಟೌ ಚ ಚತುರ್ಭಿರ್ಹೀಯತೇ ಕ್ರಮಾತ್ ।
ಚತುರ್ಥಾಂಶಾಧಿಕಂ ದೈರ್ಘ್ಯಂ ಪಂಚಸ್ವೇತೇಷು ಶಸ್ಯತೇ ॥೨೨॥

ಶಿಲ್ಪಿನಾಂ ಕಂಚುಕೀನಾಂ ಚ ವೇಶ್ಯಾನಾಂ ಗೃಹಪಂಚಕಂ ।
ಅಷ್ಟಾವಿಂಶತ್ಕರಾಣಾಂ ತು ಧ್ವಿಹೀನಂ ವಿಸ್ತರೇ ಕ್ರಮಾತ್ ॥೨೩॥

---

ವಾಗಿಯೂ ಉಳಿದುವು ಕ್ರಮವಾಗಿ ಆರಾರು ಮೊಳ ಕಡಿಮೆಯಾಗಿಯೂ ಇರುವುವು. ಇವುಗಳಲ್ಲೆಲ್ಲ ಉದ್ದವು ಅಗಲಕ್ಕಿಂತ ಆರರಲ್ಲೊಂದು ಪಾಲು ಅಧಿಕವಾಗಿರುವುದು

೨೦ ಇನ್ನು ಮಂತ್ರಿಗಳಿಗೆ ವಾಸಾರ್ಹವಾದ ಐದು ವಿಧವಾದ ಮನೆಗಳನ್ನು ಹೇಳುವೆನು ಅವುಗಳ ಅಗಲವು ಅರವತ್ತು ಮೊಳದಿಂದ ಪ್ರಾರಂಭಿಸಿ ಕ್ರಮವಾಗಿ ನಾಲ್ಕುನಾಲ್ಕು ಮೊಳ ಕಡಿಮೆಯಾಗುವುದು ಐದು ಮನೆಗಳ ಉದ್ದವೂ ಅಗಲದ ಎಂಟರಲ್ಲೊಂದು ಭಾಗ ಹೆಚ್ಚಾಗಿರುವುದು

೨೧-೨೨ ಸಾಮಂತರು, ಅಮಾತ್ಯರು ಇವರ ಮನೆಗಳೂ ಸಹ ಐದು ತೆರನಾಗಿವೆ ಇವುಗಳ ಅಗಲ ನಾಲ್ವತ್ತೆಂಟು ಮೊಳದಿಂದ ಪ್ರಾರಂಭವಾಗಿ ನಾಲ್ಕು ನಾಲ್ಕು ಮೊಳ ಕುಗ್ಗುತ್ತಾ ಹೋಗುವುದು ಈ ಐದರಲ್ಲೂ ಉದ್ದವು ಅಗಲದ ಕಾಲುಪಾಲಿನಷ್ಟು ಹೆಚ್ಚಾಗಿರುವುದು

೨೩ ಶಿಲ್ಪಿಗಳು, ಕಂಚುಕಿಗಳು, ವೇಶ್ಯೆಯರು ಇವರ ಮನೆಗಳೂ ಸಹ ಐದು ಬಗೆಯಾಗಿರುವುವು ಇವುಗಳ ಅಗಲ ಇಪ್ಪತ್ತೆಂಟು ಮೊಳದಿಂದ ತೊಡಗಿ ಕ್ರಮಕ್ರಮವಾಗಿ ಎರಡೆರಡು ಮೊಳ ಕಡಿಮೆಯಾಗುವುದು ಉದ್ದವು ಅಗಲದ ಎರಡರಷ್ಟಿರುವುದು ಮಧ್ಯಮ ಪಕ್ಷದ ಕಟ್ಟಡಗಳಲ್ಲೆಲ್ಲ ಹೀಗೆಯೇ

**ದ್ವಿಗುಣಂ ದೈರ್ಘ್ಯಮೇವೋಕ್ತಂ ಮಧ್ಯಮೇಷ್ವೇವಮೇವ ತು ।**
**ದೂತೀಕರ್ಮಾಂತಿಕಾದೀನಾಂ ವಕ್ಷ್ಯೇ ಭವನಪಂಚಕಂ ॥೨೪॥**

**ಚತುರ್ಥಾಂಶಾಧಿಕಂ ದೈರ್ಘ್ಯಂ ವಿಸ್ತಾರೋ ದ್ವಾದಶೈವ ತು ।**
**ಅರ್ಧಾರ್ಧಕರಹಾನಿಃ ಸ್ಯಾದ್ವಿಸ್ತಾರಾತ್ಪಂಚಶಃ ಕ್ರಮಾತ್ ॥೨೫॥**

**ದೈವಜ್ಞಗುರುವೈದ್ಯಾನಾಂ ಸಭಾಸ್ತಾರಪುರೋಧಸಾಂ ।**
**ತೇಷಾಮಪಿ ಪ್ರವಕ್ಷ್ಯಾಮಿ ತಥಾ ಭವನಪಂಚಕಂ ॥೨೬॥**

**ಚತ್ವಾರಿಂಶತ್ತು ವಿಸ್ತಾರಾಚ್ಚತುರ್ಭಿರ್ಹೀಯತೇ ಕ್ರಮಾತ್ ।**
**ಪಂಚಸ್ವೇತೇಷು ದೈರ್ಘ್ಯಂ ಚ ಷಡ್ಭಾಗೇನಾಧಿಕಂ ಭವೇತ್ ॥೨೭॥**

**ಚತುರ್ವರ್ಣಸ್ಯ ವಕ್ಷ್ಯಾಮಿ ಸಾಮಾನ್ಯಂ ಗೃಹಪಂಚಕಂ ।**
**ದ್ವಾತ್ರಿಂಶತಃ ಕರಾಣಾಂ ತು ಚತುರ್ಭಿರ್ಹೀಯತೇ ಕ್ರಮಾತ್ ॥೨೮॥**

---

೨೪-೨೫ ದೂತಿ, ಸೇವಕ ಮುಂತಾದವರ ಮನೆಗಳೂ ಸಹ ಐದು ವಿಧವಾಗಿವೆ ಅವು ಹನ್ನೆರಡು ಮೊಳಗಳಿಂದ ಉಪಕ್ರಮಿಸಿ ಅರ್ಧ ಮೊಳದಂತೆ ಕಡಿಮೆಯಾಗುತ್ತ ಹೋಗುವುವು ಐದು ಬಗೆಗಳಲ್ಲಿಯೂ ಉದ್ದವು ಅಗಲದ ನಾಲ್ಕರಲ್ಲೊಂದು ಪಾಲಿನಷ್ಟು ಹೆಚ್ಚಾಗಿರುವುದು

೨೬ ಜ್ಯೋತಿಷಿಕ, ಗುರು, ವೈದ್ಯ, ಸಭಾಸದ, ಪುರೋಹಿತ ಇವರ ವಸತಿಗಳೂ ಕೂಡ ಐದು ಪ್ರಕಾರವಾಗಿರುವುವು ಅವುಗಳನ್ನು ಹೇಳುವೆನು

೨೭ ಮೊದಲನೆಯದರ ಅಗಲ ನಲವತ್ತು ಮೊಳ ಉಳಿದುವು ಕ್ರಮವಾಗಿ ನಾಲ್ಕು ಮೊಳ ಕಡಿಮೆಯಾಗುವುವು ಈ ಐದು ಬಗೆಗಳಲ್ಲಿಯೂ ಉದ್ದವು ಅಗಲದ ಆರರಲ್ಲೊಂದು ಪಾಲಿನಷ್ಟು ಅಧಿಕವಾಗಿರುವುದು

೨೮ ಬ್ರಾಹ್ಮಣಾದಿ ನಾಲ್ಕುವರ್ಣದವರಿಗೂ ಸಾಮಾನ್ಯವಾದ ಐದು ಬಗೆಯ ಮನೆಗಳನ್ನು ಹೇಳುವೆನು ಅವುಗಳ ಅಗಲವು ಮೂವತ್ತೆರಡು ಮೊಳದಿಂದ ಪ್ರಾರಂಭವಾಗಿ ನಾಲ್ಕು ನಾಲ್ಕು ಮೊಳಗಳಂತೆ ಹದಿನಾರು ಮೊಳದ ವರೆಗೂ ಇಳಿಯುವುದು ಚಂಡಾಲರ ಮನೆಯ ಅಳತೆ ಇದಕ್ಕಿಂತ ಕಡಿಮೆಯಾಗಿರುವುದು

ಆಷೋಡಶಾದಿತಿ ಪರಂ ನ್ಯೂನಮಂತ್ಯಾವಸಾಯಿನಾಂ ।
ದಶಾಂಶೇನಾಷ್ಟಭಾಗೇನ ತ್ರಿಭಾಗೇಣಾಥ ಪಾದಿಕಂ ॥೨೯॥

ಅಧಿಕಂ ದೈರ್ಘ್ಯಮಿತ್ಯಾಹುರ್ಬ್ರಾಹ್ಮಣಾದೇ ಪ್ರಶಸ್ಯತೇ ।
ಸೇನಾಪತೇರ್ನೃಪಸ್ಯಾಪಿ ಗೃಹಯೋರಂತರೇಣ ತು ॥೩೦॥

ನೃಪವಾಸಗೃಹಂ ಕಾರ್ಯಂ ಭಾಂಡಾಗಾರಂ ತಥೈವ ಚ ।
ಸೇನಾಪತೇರ್ಗೃಹಸ್ಯಾಪಿ ಚಾತುರ್ವರ್ಣ್ಯಸ್ಯ ಚಾಂತರೇ ।
ವಾಸಾಯ ಚ ಗೃಹಂ ಕಾರ್ಯಂ ರಾಜಪೂಜ್ಯೇಷು ಸರ್ವದಾ ॥೩೧॥

ಅಂತರಪ್ರಭವಾಣಾಂ ಚ ಸ್ವಪಿತುರ್ಗೃಹಮಿಷ್ಯತೇ ।
ತಥಾ ಹಸ್ತಶತಾದರ್ಧಂ ಗದಿತಂ ವನವಾಸಿನಾಂ ॥೩೨॥

ಸೇನಾಪತೇರ್ನೃಪಸ್ಯಾಪಿ ಸಪ್ತತ್ಯಾ ಸಹಿತೇಽನ್ವಿತೇ ।
ಚತುರ್ದಶಹೃತೇ ವ್ಯಾಸೇ ಶಾಲಾನ್ಯಾಸಃ ಪ್ರಕೀರ್ತಿತಃ ॥೩೩॥

---

೨೯ ಬ್ರಾಹ್ಮಣ ಮೊದಲಾದ ನಾಲ್ಕು ವರ್ಣದವರ ಮನೆಗಳ ಉದ್ದವು ಕ್ರಮವಾಗಿ ಅಗಲಕ್ಕಿಂತ ಹತ್ತರಲ್ಲೊಂದು ಪಾಲು, ಎಂಟರಲ್ಲೊಂದು ಪಾಲು, ಮೂರರಲ್ಲೊಂದು ಪಾಲು ಮತ್ತು ನಾಲ್ಕರಲ್ಲೊಂದು ಪಾಲಿನಷ್ಟು ಹೆಚ್ಚಾಗಿರುವುದು

೩೦-೩೧ ಸೇನಾಪತಿಯ ಮನೆಗೂ ಅರಮನೆಗೂ ನಡುವೆ ರಾಜನ ವಾಸ ಗೃಹವನ್ನೂ ಬೊಕ್ಕಸವನ್ನೂ ಏರ್ಪಡಿಸಬೇಕು ಸೇನಾಪತಿಯ ಮನೆಗೂ ಬ್ರಾಹ್ಮಣಾದಿ ಚಾತುರ್ವರ್ಣ್ಯದವರ ಮನೆಗಳಿಗೂ ಮಧ್ಯದಲ್ಲಿ ರಾಜನಿಗೆ ಪೂಜ್ಯರಾಗಿರುವವರು ವಾಸಿಸಲು ವಸತಿಯನ್ನು ನಿರ್ಮಿಸಬೇಕು

೩೨ ಮಂತ್ರಿ, ಸೇನಾಪತಿ ಮುಂತಾದವರ ಮಕ್ಕಳ ಮನೆಯ ಅಳತೆಯು ಅವರ ತಂದೆಯ ಮನೆಯ ಅಳತೆಯಷ್ಟೇ ಇರುವುದು ವನವಾಸಿಗಳ ಗೃಹದ ಪ್ರಮಾಣವು ಐವತ್ತು ಮೊಳವಿರಬೇಕು

೩೩ ಸೇನಾಪತಿಯ ಅಥವಾ ರಾಜನ ಮನೆಯ ಅಳತೆಗೆ ಎಪ್ಪತ್ತನ್ನು ಸೇರಿಸಿ ಮೊತ್ತವನ್ನು ಹದಿನಾಲ್ಕರಿಂದ ಭಾಗಿಸಿ ಬರುವ ಲಬ್ಧವನ್ನು ವ್ಯಾಸವಾಗಿ ಇಟ್ಟುಕೊಂಡು ಶಾಲೆಯನ್ನು ರಚಿಸಬೇಕು ಆ ಅಳತೆಗೆ ಮೂವತ್ತೈದನ್ನು ಕೂಡಿಸಿದರೆ ಬರುವ ಲಬ್ಧವು ಕೈಸಾಲೆಯ ಅಳತೆಯೆಂದು ತಿಳಿಯಬೇಕು

**ಪಂಚತ್ರಿಂಶಾನ್ವಿತೇ ತಸ್ಮಿನ್ನಲಿಂದಃ ಸಮುದಾಹೃತಃ ।**
**ತಥಾ ಷಟ್ತ್ರಿಂಶದ್ಧಸ್ತಾ ತು ಸಪ್ತಾಂಗುಲಸಮನ್ವಿತಾ ॥೩೪॥**

**ವಿಪ್ರಸ್ಯ ಮಹತೀ ಶಾಲಾ ನ ದೈರ್ಘ್ಯಂ ಪರತೋ ಭವೇತ್ ।**
**ದಶಾಂಗುಲಾಧಿಕಾ ತದ್ವತ್ಕ್ಷತ್ರಿಯಸ್ಯ ವಿಧೀಯತೇ ॥೩೫॥**

**ಪಂಚತ್ರಿಂಶತ್ಕರಾ ವೈಶ್ಯೇ ಅಂಗುಲಾನಿ ತ್ರಯೋದಶ ।**
**ತಾವತ್ಕರೈವ ಶೂದ್ರಸ್ಯ ಯುತಾ ಪಂಚದಶಾಂಗುಲೈಃ ॥೩೬॥**

**ಶಾಲಾಯಾಸ್ತು ವಿಭಾಗೇನ ಯಸ್ಯಾಗ್ರೇ ವೀಥಿಕಾ ಭವೇತ್ ।**
**ಸೋಷ್ಣೀಷಂ ನಾಮ ತದ್ವಾಸ್ತು ಪಶ್ಚಾಚ್ಛ್ರೇಯೋಚ್ಛ್ರಯಂ ಭವೇತ್ ॥**

**ಪಾರ್ಶ್ವಯೋರ್ವೀಥಿಕಾ ಯತ್ರ ಸಾವಷ್ಟಂಭಂ ತದುಚ್ಯತೇ ।**
**ಸಮಂತಾದ್ವೀಥಿಕಾ ಯತ್ರ ಸುಸ್ಥಿತಂ ತದಿಹೋಚ್ಯತೇ ॥೩೮॥**

---

೩೪-೩೫ ಹಾಗೆಯೇ ಬ್ರಾಹ್ಮಣನು ಕಟ್ಟಿಕೊಳ್ಳಬಹುದಾದ ಕೈಸಾಲೆಯು ಪರಮಾವಧಿಯ ಆಕೃತಿ ಮೂವತ್ತಾರು ಮೊಳ ಏಳು ಅಂಗುಲ ಅದಕ್ಕಿಂತ ಉದ್ದವಾಗಿರಬಾರದು ಕ್ಷತ್ರಿಯನ ಶಾಲಾಪ್ರಮಾಣವು ಇದಕ್ಕಿಂತ ಹತ್ತಂಗುಲ ಅಧಿಕವಾಗಿರುವುದು

೩೬ ಇದೇ ಆಕೃತಿಯು ವೈಶ್ಯರಿಗಾದರೆ ಇಪ್ಪತ್ತೈದು ಮೊಳ ಹದಿಮೂರು ಅಂಗುಲವೂ, ಶೂದ್ರರಿಗಾದರೆ ಇಪ್ಪತ್ತೈದು ಮೊಳ ಹದಿನೈದು ಅಂಗುಲವೂ ಇರುವುದು

೩೭ ಮನೆಯ ಆವರಣಕ್ಕೆ ಸೇರವಂತೆ ಮುಂಭಾಗದಲ್ಲಿ ಬೀದಿಯಿದ್ದರೆ ಅದು ಸೋಷ್ಣೀಷವೆನಿಸುವುದು ಹಿಂಭಾಗದಲ್ಲಿದ್ದರೆ ಶ್ರೇಯೋಚ್ಛ್ರಯವೆನಿಸಿಕೊಳ್ಳುವುದು

೩೮ ಮನೆಯ ಎಡಬಲಗಳಲ್ಲಿ ಬೀದಿಗಳಿದ್ದರೆ ಅದಕ್ಕೆ ಸಾವಷ್ಟಂಭವೆಂದೂ, ನಾಲ್ಕುಕಡೆಯೂ ಇದ್ದರೆ ಸುಸ್ಥಿತವೆಂದೂ ಹೆಸರು ಈ ನಾಲ್ಕುಬಗೆಯ ಮನೆಗಳು ಬ್ರಾಹ್ಮಣಾದಿ ನಾಲ್ಕುವರ್ಣದವರಿಗೂ ಶ್ರೇಯಸ್ಕರವಾದುವು

ಶುಭದಂ ಸರ್ವಮೇತತ್ಸ್ಯಾಚ್ಚಾತುರ್ವರ್ಣ್ಯೇ ಚತುರ್ವಿಧಂ ।
ವಿಸ್ತಾರಾತ್ಷೋಡಶೋ ಭಾಗಸ್ತಥಾ ಹಸ್ತಚತುಷ್ಟಯಂ ॥೩೯॥

ಪ್ರಥಮೋ ಭೂಮಿಕೋಚ್ಛ್ರಾಯ ಉಪರಿಷ್ಟಾತ್ಪ್ರಹೀಯತೇ ।
ದ್ವಾದಶಾಂಶೇನ ಸರ್ವಾಸು ಭೂಮಿಕಾಸು ತಥೋಚ್ಛ್ರಯಃ ॥೪೦॥

ಪಕ್ವೇಷ್ಟಕಾ ಭವೇದ್ಭಿತ್ತಿಃ ಷೋಡಶಾಂಶೇನ ವಿಸ್ತರಾತ್ ।
ದಾರವೈರಪಿ ಕಲ್ಪ್ಯಾ ಸ್ಯಾತ್ತಥಾ ಮೃನ್ಮಯಭಿತ್ತಿಕಾ ॥೪೧॥

ಗರ್ಭಮಾನೇನ ಮಾನಂ ತು ಸರ್ವವಾಸ್ತುಷು ಶಸ್ಯತೇ ।
ಗೃಹವ್ಯಾಸಸ್ಯ ಪಂಚಾಶದಷ್ಟಾದಶಭಿರಂಗುಲೈಃ ॥೪೨॥

ಸಂಯುತೋ ದ್ವಾರವಿಷ್ಕಂಭೋ ದ್ವಿಗುಣಶ್ಚೋಚ್ಛ್ರಯೋ ಭವೇತ್ ।
ದ್ವಾರಶಾಖಾಸು ಬಾಹುಲ್ಯಮುಚ್ಛ್ರಾಯಕರಸಂಮಿತೈಃ ॥೪೩॥

---

೩೯-೪೦ ಮನೆಯ ವಿಸ್ತಾರವನ್ನು ಹದಿನಾರುಪಾಲುಮಾಡಿ ಬರುವ ಲಬ್ಧಕ್ಕೆ ನಾಲ್ಕನ್ನು ಕೂಡಿಸಿದರೆ ಆಗುವ ಮೊತ್ತವೇ ಮೊದಲನೆಯ ಉಪ್ಪರಿಗೆಯ ಎತ್ತರ ಮುಂದಿನ ಉಪ್ಪರಿಗೆಯ ಎತ್ತರವು ಇದಕ್ಕಿಂತ ಕಡಿಮೆಯಾಗುವುದು ಅದು ಮನೆಯ ವಿಸ್ತಾರದ ಹನ್ನೆರಡನೆಯ ಒಂದು ಭಾಗವಿರಬೇಕು ಎಲ್ಲ ಮಹಡಿಗಳಿಗೂ ಹೀಗೆಯೇ

೪೧ ಗೋಡೆಯನ್ನು ಸುಟ್ಟ ಇಟ್ಟಿಗೆಗಳಿಂದಾಗಲಿ, ಮರದ ತುಂಡುಗಳಿಂದಾಗಲಿ, ಮಣ್ಣಿನಿಂದಾಗಲಿ ಕಟ್ಟಬಹುದು ಅದರ ದಪ್ಪ ವಿಸ್ತಾರದ ಹದಿನಾರನೆಯ ಒಂದು ಭಾಗ

೪೨ ಎಲ್ಲಬಗೆಯ ಕಟ್ಟಡಗಳಲ್ಲಿಯ ಊ ಮನೆಯ ವಿಸ್ತಾರವು ನಡುಮನೆಯ ಅಳತೆಯನ್ನು ಅನುಸರಿಸಿ ಇರಬೇಕು ಬಾಗಿಲಿನ ಅಳತೆ ಅರವತ್ತೆಂಟು ಅಂಗುಲಗಳು ಮನೆಯ ಎತ್ತರವು ಇದರ ಇಮ್ಮಡಿಯಾಗಿರಬೇಕು

೪೩-೪೪ ಸಾಮಾನ್ಯವಾಗಿ ಬಾಗಿಲು ಎಷ್ಟುಮೊಳ ಎತ್ತರವಾಗಿರುವುದೋ, ಕದವು ಅಷ್ಟು ಅಂಗುಲ ದಪ್ಪವಾಗಿರುವುದು ಈ ನಿಯಮವು ಎಲ್ಲಕಟ್ಟಡಗಳಿಗೂ

**ಅಂಗುಲ್ಯೈಃ ಸರ್ವವಾಸ್ತೂನಾಂ ಪೃಥುತ್ವಂ ಶಸ್ಯತೇ ಬುಧೈಃ ।**
**ಉದುಂಬರೋತ್ತಮಾಂಗಂ ಚ ತದರ್ಧಾರ್ಧಪ್ರವಿಸ್ತರಾತ್ ॥೪೪॥**

**ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ವಾಸ್ತುವಿದ್ಯಾಸು ಗೃಹಮಾನ ನಿರ್ಣಯೋ ನಾಮ ಚತುಷ್ಪಂಚಾಶದಧಿಕದ್ವಿಶತತಮೋಽಧ್ಯಾಯಃ**

---

ಅನ್ವಯಿಸುವುದು ಒಳಗಡೆ ಬಾಗಿಲಿನ ಮೇಲೆ ಹಾಕುವ ಅಡ್ಡಪಟ್ಟಿಯು (ತಾರಂಬ) ಹಿಂದೆ ಹೇಳಿದ ಕದದ ಅಳತೆಯಲ್ಲಿ ನಾಲ್ಕರಲ್ಲೊಂದು ಪಾಲು ಇರಬೇಕು ಅದನ್ನು ಅತ್ತಿಯ ಮರದಿಂದ ಮಾಡಬೇಕು

**ಅಧ್ಯಾಯದ ಸಾರಾಂಶ**

ಚತುಶ್ಶಾಲ, ತ್ರಿಶಾಲ, ದ್ವಿಶಾಲ ಮತ್ತು ಏಕಶಾಲಗಳೆಂದು ಕಟ್ಟಡಗಳಲ್ಲಿ ಹಲವು ವಿಧಗಳಿವೆ ಒಂದೊಂದರಲ್ಲೂ ಅನೇಕ ಪ್ರಭೇದಗಳುಂಟು ರಾಜ, ಸೇನಾಪತಿ, ಮಂತ್ರಿ, ಅಮಾತ್ಯ ಮುಂತಾದವರ ವಾಸಗೃಹಗಳ ಅಳತೆಗಳು ಬೇರೆ ಬೇರೆಯಾಗಿವೆ ಹೀಗೆಯೇ ಮಹಡಿ, ಗೋಡೆ ಇವುಗಳ ಪ್ರಮಾಣವೂ ಸಹ ಇಷ್ಟೇ ಇರಬೇಕೆಂದು ಉಕ್ತವಾಗಿದೆ

ಶ್ರೀಮತ್ಸ್ಯಮಹಾಪುರಾಣದಲ್ಲಿ ವಾಸ್ತುಶಾಸ್ತ್ರದಲ್ಲಿ ಗೃಹಮಾನ ನಿರ್ಣಯವೆಂಬ ಇನ್ನೂರ ಐವತ್ತನಾಲ್ಕನೆಯ ಅಧ್ಯಾಯವು ಮುಗಿದುದು

## ಅಥ ಪಂಚಪಂಚಾಶದಧಿಕದ್ವಿಶತತಮೋಽಧ್ಯಾಯಃ

॥ ಸೂತ ಉವಾಚ ॥

ಅಥಾತಃ ಸಂಪ್ರವಕ್ಷ್ಯಾಮಿ ಸ್ತಂಭಮಾನವಿನಿರ್ಣಯಂ ।
ಕೃತ್ವಾ ಸ್ವಭವನೋಚ್ಛ್ರಾಯಂ ಸದಾ ಸಪ್ತಗುಣಂ ಬುಧೈಃ ॥ ೧ ॥
ಅಶೀತ್ಯಂಶಃ ಪೃಥುತ್ವೇ ಸ್ಯಾದಗ್ರೇ ನವಗುಣೇ ಸತಿ ।
ರುಚಕಶ್ಚತುರಃ ಸ್ಯಾತ್ತು ಅಷ್ಟಾಸ್ರೋ ವಜ್ರ ಉಚ್ಯತೇ ॥ ೨ ॥
ದ್ವಿವಜ್ರಃ ಷೋಡಶಾಸ್ರಸ್ತು ದ್ವಾತ್ರಿಂಶಾಸ್ರಃ ಪ್ರಲೀನಕಃ ।
ಮಧ್ಯಪ್ರದೇಶೇ ಯಃ ಸ್ತಂಭೋ ವೃತ್ತೋ ವೃತ್ತ ಇತಿ ಸ್ಮೃತಃ ॥ ೩ ॥
ಏತೇ ಪಂಚ ಮಹಾಸ್ತಂಭಾಃ ಪ್ರಶಸ್ತಾಃ ಸರ್ವವಾಸ್ತುಷು ।
ಪದ್ಮವಲ್ಲೀಲತಾಕುಂಭಪತ್ರದರ್ಪಣರೂಪಿತಾಃ ॥ ೪ ॥

---

೧-೨ ಸೂತಪೌರಾಣಿಕನು ಹೇಳಿದನು —ಇನ್ನು ಮುಂದೆ ಕಂಬದ ಅಳತೆಯನ್ನು ನಿಷ್ಕರ್ಷೆಮಾಡಿ ಹೇಳುವೆನು ಮನೆಯ ಎತ್ತರವನ್ನು ಏಳರಿಂದ ಗುಣಿಸಿ ಲಬ್ಧವನ್ನು ಎಂಭತ್ತರಿಂದ ಭಾಗಿಸಿದರೆ ಬರುವ ಅಳತೆಯೇ ಕಂಬದ ದಪ್ಪವೆಂದು ತಿಳಿಯಬೇಕು ಒಂಬತ್ತರಿಂದ ಗುಣಿಸಿ ಎಂಬತ್ತರಿಂದ ಭಾಗಿಸಿದರೆ ಅದು ಕಂಬದ ಬುಡದ ದಪ್ಪವಾಗುವುದು ಕಂಬಗಳಲ್ಲಿ ಹಲವು ಬಗೆಗಳುಂಟು ನಾಲ್ಕು ಮೂಲೆಗಳಿದ್ದರೆ ರುಚಕವೆಂದೂ ಎಂಟು ಮೂಲೆಗಳಿದ್ದರೆ ವಜ್ರವೆಂದೂ ಹೆಸರು

೩ ಹದಿನಾರು ಪಟ್ಟಿಯ ಕಂಬವು ದ್ವಿವಜ್ರವೆನಿಸಿಕೊಳ್ಳುತ್ತದೆ ಮೂವತ್ತೆರಡು ಪಟ್ಟಿಗಳಿದ್ದರೆ ಪ್ರಲೀನಕವೆಂದು ಹೇಳುತ್ತಾರೆ ಮಧ್ಯಭಾಗದಲ್ಲಿ ಮಾತ್ರ ಗುಂಡಾಗಿರುವ ಕಂಬಕ್ಕೆ ವೃತ್ತವೆಂದು ಹೆಸರು

೪ ಕಂಬಗಳಲ್ಲಿ ಈ ಐದು ಜಾತಿಗಳೇ ಪ್ರಸಿದ್ಧವಾದುವು ಇವುಗಳನ್ನು ಎಲ್ಲ ಬಗೆಯ ಕಟ್ಟಡಗಳಲ್ಲಿಯೂ ಉಪಯೋಗಿಸಬಹುದು ತಾವರೆಯ ಬಳ್ಳಿ, ಇತರ ಹೂಬಳ್ಳಿಗಳು, ಕಲಶ, ಕನ್ನಡಿ, ಎಲೆ ಮುಂತಾದ ವಿಧವಿಧವಾದ ನಕಾಸಿನ ಚಿತ್ರಗಳಿಂದ ಇವುಗಳನ್ನು ಅಲಂಕರಿಸಬಹುದು

ಸ್ತಂಭಸ್ಯ ನವಮಾಂಶೇನ ಪದ್ಮಕುಂಭಾಂತರಾಣಿ ತು ।
ಸ್ತಂಭತುಲ್ಯಾ ತುಲಾ ಪ್ರೋಕ್ತಾ ಹೀನಾ ಚೋಪತುಲಾ ತತಃ ॥ ೫ ॥

ತ್ರಿಭಾಗೇನೇಹ ಸರ್ವತ್ರ ಚತುರ್ಭಾಗೇನವಾ ಪುನಃ ।
ಹೀನಂ ಹೀನಂ ಚತುರ್ಥಾಂಶಾತ್ತಥಾ ಸರ್ವಾಸು ಭೂಮಿಷು ॥ ೬ ॥

ವಾಸಗೇಹಾನಿ ಸರ್ವೇಷಾಂ ಪ್ರವಿಶೇದ್ದಕ್ಷಿಣೇನ ತು ।
ದ್ವಾರಾಣಿ ತು ಪ್ರವಕ್ಷ್ಯಾಮಿ ಪ್ರಶಸ್ತಾನೀಹ ಯಾನಿ ತು ॥ ೭ ॥

ಪೂರ್ವೇಣೇಂದ್ರಂ ಜಯಂತಂ ಚ ದ್ವಾರಂ ಸರ್ವತ್ರ ಶಸ್ಯತೇ ।
ಯಾಮ್ಯಂ ಚ ವಿತಥಂ ಚೈವ ದಕ್ಷಿಣೇನ ವಿದುರ್ಬುಧಾಃ ॥ ೮ ॥

ಪಶ್ಚಿಮೇ ಪುಷ್ಪದಂತಂ ಚ ವಾರುಣಂ ಚ ಪ್ರಶಸ್ಯತೇ ।
ಉತ್ತರೇಣ ತು ಭಲ್ಲಾಟಂ ಸೌಮ್ಯಂ ತು ಶುಭದಂ ಭವೇತ್ ॥ ೯ ॥

---

೫ ಕಂಬದ ಒಂಬತ್ತನೆಯ ಒಂದು ಭಾಗವು ಹಿಂದೆ ಹೇಳಿದಂತೆ ಪದ್ಮ ಕುಂಭಾದಿಗಳಿಂದ ಅಲಂಕರಿಸಲ್ಪಡಬಹುದು ತೊಲೆಯು ಅಳತೆಯಲ್ಲಿ ಕಂಬಕ್ಕೆ ಸಮಾನವಾಗಿರುವುದು ಸರವು ಅದಕ್ಕಿಂತ ಕಿರಿದು

೬ ಸರದ ಅಳತೆ ತೊಲೆಯ ಅಳತೆಗಿಂತ ಮೂರು ಅಥವಾ ನಾಲ್ಕರಲ್ಲಿ ಒಂದು ಪಾಲು ಕಡಿಮೆಯಾಗಿರುವುದು ಮೇಲಮೇಲಿನ ಉಪ್ಪರಿಗೆಗಳು ಕೆಳಗಿನವುಗಳಿಗಿಂತ ಕಾಲುಪಾಲಿನಷ್ಟು ಕಿರಿದಾಗುತ್ತ ಹೋಗುವುವು

೭ ಎಲ್ಲ ವಾಸಗೃಹಗಳನ್ನೂ ದಕ್ಷಿಣದ ಕಡೆಯಿಂದ ಪ್ರವೇಶಿಸಬೇಕು ಇನ್ನು ಮುಂದೆ ಪ್ರಶಸ್ತವಾದ ಲಕ್ಷಣವುಳ್ಳ ಬಾಗಿಲುಗಳನ್ನು ಹೇಳುತ್ತೇನೆ

೮-೯ ಪೂರ್ವದಿಕ್ಕಿಗೆ ಅಭಿಮುಖವಾಗಿರುವ ಬಾಗಿಲನ್ನು ಇಂದ್ರವೆಂದೂ ಜಯಂತವೆಂದೂ ಹೇಳುವರು ಇದು ಎಲ್ಲ ವಿಷಯಗಳಲ್ಲೂ ಶ್ಲಾಘ್ಯವಾದುದು ದಕ್ಷಿಣಾಭಿಮುಖವಾದುದನ್ನು ಶಾಸ್ತ್ರಜ್ಞರು ಯಾಮ್ಯವೆಂದೂ ವಿತಥವೆಂದೂ ಹೇಳುತ್ತಾರೆ ಪಶ್ಚಿಮಾಭಿಮುಖವಾದ ಬಾಗಿಲನ್ನು ಪುಷ್ಪದಂತವೆಂದೂ ವಾರುಣವೆಂದೂ ಕರೆಯುತ್ತಾರೆ ಉತ್ತರ ದಿಕ್ಕಿಗೆ ಎದುರಾದುದು ಭಲ್ಲಾಟವೆಂದೂ ಸೌಮ್ಯವೆಂದೂ ಎನಿಸಿಕೊಳ್ಳುತ್ತದೆ

ತಥಾ ವಾಸ್ತುಷು ಸರ್ವತ್ರ ವೇಧಂ ದ್ವಾರಸ್ಯ ವರ್ಜಯೇತ್ ।
ದ್ವಾರೇ ತು ರಥ್ಯಯಾ ವಿದ್ಧೇ ಭವೇತ್ಸರ್ವಕುಲಕ್ಷಯಃ ॥೧೦॥

ತರುಣಾ ದ್ವೇಷಬಾಹುಲ್ಯಂ ಶೋಕಃ ಪಂಕೇನ ಜಾಯತೇ ।
ಅಪಸ್ಮಾರೋ ಭವೇನ್ನೂನಂ ಕೂಪವೇಧೇನ ಸರ್ವದಾ ॥೧೧॥

ವ್ಯಥಾ ಪ್ರಸ್ರವಣೇನ ಸ್ಯಾತ್ಕೀಲೇನಾಗ್ನಿಭಯಂ ಭವೇತ್ ।
ವಿನಾಶೋ ದೇವತಾವಿದ್ಧೇ ಸ್ತಂಭೇನ ಸ್ತ್ರೀಕೃತೋ ಭವೇತ್ ॥೧೨॥

ಗೃಹಭರ್ತುರ್ವಿನಾಶಃ ಸ್ಯಾದ್ಗೃಹೇಣ ಚ ಗೃಹೇ ಕೃತೇ ।
ಅಮೇಧ್ಯಾವಸ್ಕರೈರ್ವಿದ್ಧೇ ಗೃಹಿಣೀ ಬಂಧಕೀ ಭವೇತ್ ॥೧೩॥

ತಥಾ ಶಸ್ತ್ರಭಯಂ ವಿಂದ್ಯಾದಂತ್ಯಜಸ್ಯ ಗೃಹೇಣ ತು ।
ಉಚ್ಛ್ರಾಯಾದ್ವಿಗುಣಂ ಭೂಮಿಂ ತ್ಯಕ್ತ್ವಾ ವೇಧೋ ನ ಜಾಯತೇ ॥

---

೧೦ ಯಾವ ಬಗೆಯ ಮನೆಯೇ ಆಗಲಿ, ಬಾಗಿಲಿಗೆ ನೇರವಾಗಿ ಯಾವ ಅಡ್ಡಿಯೂ ಇರಬಾರದು ಬಾಗಿಲಿಗೆ ರಸ್ತೆ ಅಡ್ಡಲಾದರೆ ಕುಲವು ನಿಶ್ಶೇಷವಾಗಿ ಕ್ಷಯಿಸುವುದು

೧೧ ಮರವು ಅಡ್ಡಲಾಗಿದ್ದರೆ ದ್ವೇಷವು ಹೆಚ್ಚುವುದು ಹೀಗೆಯೇ ಕೆಸರಿದ್ದರೆ ದುಃಖವೂ, ಬಾವಿಯಿದ್ದರೆ ಅಪಸ್ಮಾರರೋಗದ ಭೀತಿಯೂ ತಪ್ಪದೆ ಉಂಟಾಗುವುವು

೧೨ ಜಲಪ್ರವಾಹದಿಂದ ವ್ಯಥೆಯೂ ಗೂಟದಿಂದ ಅಗ್ನಿಭಯವೂ ಒದಗುವುವು ದೇವತಾ ಮೂರ್ತಿಯಿದ್ದರೆ ವಿನಾಶವೂ ಕಂಬವಿದ್ದರೆ ಸ್ತ್ರೀ ಪ್ರಯುಕ್ತವಾದ ದುಃಖವೂ ಉಂಟಾಗುವುವು

೧೩ ಮನೆಯ ಬಾಗಿಲಿಗೆ ನೇರವಾಗಿ ಮತ್ತೊಂದು ಮನೆ ಅಡ್ಡಿಯಾಗಿದ್ದರೆ ಮನೆಯ ಯಜಮಾನನಿಗೆ ಕೇಡುಂಟಾಗುವುದು ಹೇಸಿಗೆ, ಗೊಬ್ಬರದಗುಂಡಿ ಮುಂತಾದವುಗಳಿದ್ದರೆ ಮನೆಯ ಯಜಮಾನಿ ಸ್ವೈರಿಣಿಯಾಗುತ್ತಾಳೆ

೧೪ ಚಂಡಾಲನ ಮನೆ ಬಾಗಿಲಿಗೆ ನೇರವಾಗಿದ್ದರೆ ಶಸ್ತ್ರಭಯವು ಉಂಟಾಗುತ್ತದೆ ಆದರೆ ಮನೆಯ ಎತ್ತರದ ಎರಡರಷ್ಟು ದೂರ ಬಿಟ್ಟಿದ್ದರೆ ಈ ಮೇಲೆಹೇಳಿದ ಅಡ್ಡಿಯ ದೋಷವಿಲ್ಲ

**ಸ್ವಯಮುದ್ಘಾಟಿತೇ ದ್ವಾರ ಉನ್ಮಾದೋ ಗೃಹವಾಸಿನಾಂ ।
ಸ್ವಯಂ ವಾ ಪಿಹಿತೇ ವಿದ್ಯಾತ್ಕುಲನಾಶಂ ವಿಚಕ್ಷಣಃ ॥೧೫॥**

**ಮಾನಾಧಿಕೇ ರಾಜಭಯಂ ನ್ಯೂನೇ ತಸ್ಕರತೋ ಭವೇತ್ ।
ದ್ವಾರೋಪರಿ ಚ ಯದ್ದ್ವಾರಂ ತದಂತಕಮುಖಂ ಸ್ಮೃತಂ ॥೧೬॥**

**ಪದ್ಮನೋ ಮಧ್ಯದೇಶೇ ತು ಅಧಿಕೋ ಯಸ್ಯ ವಿಸ್ತರಃ ।
ವಜ್ರಂ ತು ಸಂಕಟಂ ಮಧ್ಯೇ ಸದ್ಯೋ ಭರ್ತುರ್ವಿನಾಶನಂ ॥೧೭॥**

**ತಥಾನ್ಯಪೀಡಿತಂ ದ್ವಾರಂ ಬಹುದೋಷಕರಂ ಭವೇತ್ ।
ಮೂಲದ್ವಾರಾತ್ತಥಾನ್ಯತ್ತು ನಾಧಿಕಂ ಶೋಭನಂ ಭವೇತ್ ॥೧೮॥**

---

೧೫ ಬಾಗಿಲಿನ ಅಳತೆಯು ವಾಸ್ತುಶಾಸ್ತ್ರದಲ್ಲಿ ಹೇಳಿರುವುದಕ್ಕಿಂತ ಅಧಿಕವಾಗಿದ್ದರೆ ರಾಜಭಯವೂ, ಕಡಿಮೆಯಾಗಿದ್ದರೆ ಚೋರಭಯ ಉಂಟಾಗುವುವು ಬಾಗಿಲಿನ ಮೇಲೆ ಮತ್ತೊಂದು ಬಾಗಿಲಿದ್ದರೆ ಅದನ್ನು ಮೃತ್ಯುಮುಖವೆನ್ನುವರು

೧೬ ಬಾಗಿಲಿನ ಅಳತೆಯು ವಾಸ್ತುಶಾಸ್ತ್ರದಲ್ಲಿ ಹೇಳಿರುವುದಕ್ಕಿಂತ ಅಧಿಕವಾಗಿದ್ದರೆ ರಾಜಬಯವೂ, ಕಡಿಮೆಯಾಗಿದ್ದರೆ ಚೋರಭಯವೂ ಉಂಟಾಗುವುವು ಬಾಗಿಲಿನ ಮೇಲೆ ಮತ್ತೊಂದು ಬಾಗಿಲಿದ್ದರೆ ಅದನ್ನು ಮೃತ್ಯುಮುಖವೆನ್ನುವರು

೧೭ ಮನೆಯ ಒಳಗಡೆಯ ಬಾಗಿಲು ಹೊರಬಾಗಿಲಿಗಿಂತ ಅಳತೆಯಲ್ಲಿ ದೊಡ್ಡದಾಗಿದ್ದರೆ ಅದನ್ನು ವಜ್ರವೆಂದೂ ಸಂಕಟವೆಂದೂ ಕರೆಯುತ್ತಾರೆ ಅದರಿಂದ ಮನೆಯ ಯಜಮಾನನಿಗೆ ಕೂಡಲೆ ವಿನಾಶವೊಧಗುವುದು

೧೮ ಆದುದರಿಂದ ಉಳಿದ ಬಾಗಿಲುಗಳಿಗಿಂತ ಹೊರಬಾಗಿಲು ಕಿರಿದಾಗಿದ್ದರೆ ಬಹು ದೋಷವುಳ್ಳದಾಗುವುದು ಮುಖ್ಯವಾದ ಬಾಗಿಲಗಿಂತ ಉಳಿದುವುಗಳನ್ನು ದೊಡ್ಡವಾಗಿ ಮಾಡುವುದು ಒಳ್ಳೆಯದಲ್ಲ

ಕುಂಭಶ್ರೀಪರ್ಣಿವಲ್ಲೀಭಿರ್ಮೂಲದ್ವಾರಂ ತು ಶೋಭಯೇತ್ ।
ಪೂಜಯೇಚ್ಚಾಪಿ ತನ್ನಿತ್ಯಂ ಬಲಿನಾ ಚಾಕ್ಷತೋದಕೈಃ ॥೧೯॥

ಭವನಸ್ಯ ವಟಃ ಪೂರ್ವೇ ದಿಗ್ಭಾಗೇ ಸಾರ್ವಕಾಮಿಕಃ ।
ಉದುಂಬರಸ್ತಥಾ ಯಾಮ್ಯೇ ವಾರುಣ್ಯಾಂ ಪಿಪ್ಪಲಃ ಶುಭಃ ॥೨೦॥

ಪ್ಲಕ್ಷಶ್ಚೋತ್ತರತೋ ಧನ್ಯೋ ವಿಪರೀತಾಸ್ತ್ವಸಿದ್ಧಯೇ ।
ಕಂಟಕೀ ಕ್ಷೀರವೃಕ್ಷಶ್ಚ ಹ್ಯಾಸನಃ ಸಫಲೋ ದ್ರುಮಃ ॥೨೧॥

ಭಾರ್ಯಾಹಾನೌ ಪ್ರಜಾಹಾನೌ ಭವೇತಾಂ ಕ್ರಮಶಸ್ತದಾ ।
ನ ಚ್ಛಿಂದ್ಯಾದ್ಯದಿ ತಾನನ್ಯಾನಂತರೇ ಸ್ಥಾಪಯೇಚ್ಛುಭಾನ್ ॥೨೨॥

ಪುನ್ನಾಗಾಶೋಕಬಕುಲಶಮೀತಿಲಕಚಂಪಕಾನ್ ।
ದಾಡಿಮೀಪಿಪ್ಪಲೀದ್ರಾಕ್ಷಾಸ್ತಥಾ ಕುಸುಮಮಂಡಪಾನ್ ॥೨೩॥

---

೧೯ ಮುಂಬಾಗಿಲಲ್ಲಿ ಕುಂಭ, ಶ್ರೀಪರ್ಣಿ, ಲತಾವಿಶೇಷಗಳು ಇವುಗಳನ್ನು ಕೆತ್ತಿ ಅಲಂಕಾರಮಾಡಬೇಕು ಅದನ್ನು ರಂಗವಲ್ಲಿಗಳಿಂದಲೂ, ಅಕ್ಷತೆಗಳಿಂದಲೂ ಜಲದಿಂದಲೂ ನಿತ್ಯವೂ ಪೂಜಿಸಬೇಕು

೨೦ ಮನೆಗೆ ಪೂರ್ವದಲ್ಲಿ ಆಲ, ದಕ್ಷಿಣದಲ್ಲಿ ಅತ್ತಿ, ಪಶ್ಚಿಮದಲ್ಲಿ ಅರಳಿ, ಉತ್ತರದಲ್ಲಿ ಬಸರಿ ಈ ಮರಗಳಿದ್ದರೆ ಒಳ್ಳೆಯದು ಮನೋರಥಗಳೆಲ್ಲ ಈಡೇರುವುವು ಹಾಗಿಲ್ಲದಿದ್ದರೆ ಇಷ್ಟಸಿದ್ಧಿಯಾಗುವುದಿಲ್ಲ

೨೧-೨೨ ಕಗ್ಗಲೀಮರ, ಮತ್ತೀಮರ, ಹೊನ್ನೇಮರ, ಅಲ್ಲದೆ ಇನ್ನಾವುದಾದರೂ ಹಣ್ಣುಬಿಟ್ಟಿರುವ ನಿಷಿದ್ಧವಾದ ಮರ ಇವು ಮನೆಯಬಳಿ ಇದ್ದರೆ ಭಾರ್ಯಾಹಾನಿಯೂ ಸಂತಾನನಾಶವೂ ಆಗುವುವು ಆದರೆ ಈ ಮರಗಳನ್ನು ಕಡಿಯಬಾರದು ಅವುಗಳ ಬಳಿಯಲ್ಲಿ ಒಳ್ಳೆಯ ಮರಗಳನ್ನು ನೆಡಬೇಕು

೨೩ ಸುರಹೊನ್ನೆ, ಅಶೋಕ, ಪಗಡೆ, ಬನ್ನಿ, ತಿಲಕ, ಸಂಪಗೆ, ದಾಳಿಂಬೆ, ಹಿಪ್ಪಲಿ, ದ್ರಾಕ್ಷಿ, ಹೂಗಿಡಗಳ ಹಂದರ ಇವನ್ನು ಮನೆಯ ಸುತ್ತಲೂ ಹಾಕಿಸುವುದು ಒಳ್ಳೆಯದು

**ಜಂಬೀರಪೂಗಪನಸದ್ರುಮಕೇತಕೀಭಿ**
**ರ್ಜಾತೀಸರೋಜ ಶತಪತ್ರಿಕಮಲ್ಲಿಕಾಭಿಃ ।**
**ಯನ್ನಾರಿಕೇಲಕದಲೀದಲಪಾಟಲಾಭಿ**
**ರ್ಯುಕ್ತಂ ತದತ್ರ ಭವನಂ ಶ್ರಿಯಮಾತನೋತಿ ॥೨೪॥**

**ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ವಾಸ್ತುವಿದ್ಯಾಸು ವೇಧ ಪರಿವರ್ಜನಂ ನಾಮ ಪಂಚಪಂಚಾಶದಧಿಕದ್ವಿಶತತಮೋಽಧ್ಯಾಯಃ**

---

೨೪ ನಿಂಬೆ, ಅಡಕೆ, ಹಲಸು, ತಾಳೆ, ಜಾಜಿ, ತಾವರೆ, ಸೇವಂತಿಗೆ, ಮಲ್ಲಿಗೆ, ತೆಂಗು, ಬಾಳೆ, ಪಾದರಿ ಮುಂತಾದ ಗಿಡಮರಗಳನ್ನು ಮನೆಯ ಸುತ್ತಲೂ ಬೆಳೆಸಿದರೆ ಶ್ರೇಯಸ್ಸುಂಟಾಗುವುದು

**ಅಧ್ಯಾಯದ ಸಾರಾಂಶ**

ಕಂಬಗಳನ್ನು ಅವುಗಳ ಪ್ರಮಾಣಾನುಸಾರವಾಗಿ ಐದು ವಿಧವಾಗಿ ವಿಂಗಡಿಸಿರುವರು ಪೂರ್ವ ಮೊದಲಾದ ಬೇರೆ ಬೇರೆ ದಿಕ್ಕುಗಳಿಗೆ ಅಭಿಮುಖವಾದ ಬಾಗಿಲುಗಳಿಗೆ ಹೆಸರುಗಳೂ ಬೇರೆ ಬೇರೆಯಾಗಿವೆ ಬಾಗಿಲಿಗೆ ನೇರವಾಗಿ ಯಾವ ಬಗೆಯ ಅಡ್ಡಿಯೂ ಇರಬಾರದು ಮನೆಯ ಸಮೀಪದಲ್ಲಿ ಶುಭಪ್ರದವಾದ ಗಿಡಮರಗಳನ್ನು ಬೆಳೆಯಿಸಬೇಕು

ಶ್ರೀಮತ್ಸ್ಯಮಹಾಪುರಾಣದಲ್ಲಿ ವಾಸ್ತುಶಾಸ್ತ್ರದಲ್ಲಿ ವೇದಪರಿವರ್ಜನವೆಂಬ ಇನ್ನೂರೈವತ್ತೈದನೆಯ ಅಧ್ಯಾಯವು ಮುಗಿದುದು

## ಅಥ ಷಟ್ಪಂಚಾಶದಧಿಕದ್ವಿಶತತಮೋಽಧ್ಯಾಯಃ

### ॥ ಸೂತ ಉವಾಚ ॥

ಉದಗಾದಿಪ್ಲವಂ ವಾಸ್ತು ಸಮಾನಶಿಖರಂ ತಥಾ ।
ಪರೀಕ್ಷ್ಯ ಪೂರ್ವವತ್ಕುರ್ಯಾತ್ಸ್ತಂಭೋಚ್ಛ್ರಾಯಂ ವಿಚಕ್ಷಣಃ ॥ ೧ ॥

ನ ದೇವಧೂರ್ತಸಚಿವಚತ್ವರಾಣಾಂ ಸಮೀಪತಃ ।
ಕಾರಯೇದ್ಭವನಂ ಪ್ರಾಜ್ಞೋ ದುಃಖಶೋಕಭಯಂ ತತಃ ॥ ೨ ॥

ತಸ್ಯ ಪ್ರದೇಶಾಶ್ಚತ್ವಾರಸ್ತಥೋತ್ಸರ್ಗೋಽಗ್ರತಃ ಶುಭಃ ।
ಪೃಷ್ಠತಃ ಪೃಷ್ಠಭಾಗಸ್ತು ಸವ್ಯಾವರ್ತಃ ಪ್ರಶಸ್ಯತೇ ॥ ೩ ॥

ಅಪಸವ್ಯೋ ವಿನಾಶಾಯ ದಕ್ಷಿಣೇ ಶೀರ್ಷಕಸ್ತಥಾ ।
ಸರ್ವಕಾಮಫಲೋ ನೃಣಾಂ ಸಂಪೂರ್ಣೋ ನಾಮತಃ ಸ್ಮೃತಃ ॥ ೪ ॥

---

೧ ಸೂತಪೌರಾಣಿಕನು ಹೇಳಿದನು —ನಿವೇಶನದಲ್ಲಿ ಬಿದ್ದ ನೀರು ಉತ್ತರ ಅಥವಾ ಈಶಾನ್ಯದಿಕ್ಕಿಗೆ ಹರಿಯುವಂತೆ ಇರಬೇಕು ಅದರ ಮೇಲ್ಮೈ ಮಟ್ಟವಾಗಿರಬೇಕು ಇಂತಹ ಸ್ಥಳವನ್ನು ಪರೀಕ್ಷಿಸಿ ನೋಡಿ ಹಿಂದೆ ಹೇಳಿದಂತೆ ಕಂಬಗಳನ್ನು ನಿಲ್ಲಿಸಬೇಕು ವಾಸ್ತುಶಾಸ್ತ್ರವನ್ನು ಬಲ್ಲವನು ಮಾಡಬೇಕಾದ ಕೆಲಸವಿದು

೨ ವಿವೇಕಿಯಾದವನು ಮನೆಯನ್ನು ದೇವಾಲಯ, ಜೂಜುಕೋರನ ಮನೆ, ಮಂತ್ರಿಯ ಮನೆ, ನಾಲ್ಕು ಬೀದಿಗಳು ಸೇರುವ ಚೌಕ ಇವುಗಳ ಹತ್ತಿರ ಕಟ್ಟಬಾರದು ಅದರಿಂದ ದುಃಖವೂ, ಭೀತಿಯೂ ಉಂಟಾಗುವುವು

೩-೪ ನಿವೇಶನವನ್ನು ನಾಲ್ಕು ವಿಧವಾಗಿ ವಿಂಗಡಿಸಬಹುದು ಬಚ್ಚಲ ನೀರು ಮುಂಭಾಗದಲ್ಲಿ ನಿಲ್ಲದೆ ಹರಿದುಹೋಗುವಂತಿದ್ದರೆ ಒಳ್ಳೆಯದು ಹಿಂಭಾಗದಲ್ಲಿ ಹರಿದರೆ ಸವ್ಯಾವರ್ತವೆನಿಸಿಕೊಳ್ಳುವುದು ಎಡಗಡೆಯಲ್ಲಿ ಹರಿಯುವುದರಿಂದ ಕೇಡುಂಟಾಗುವುದು ಬಲಗಡೆಯಲ್ಲಾದರೆ ಎಲ್ಲಬಗೆಯ ಇಷ್ಟಾರ್ಥಗಳೂ ಈಡೇರುವುವು ಇಂತಹುದಕ್ಕೆ ಸಂಪೂರ್ಣವೆಂದು ಹೆಸರು

ಏವಂ ಪ್ರದೇಶಮಾಲೋಕ್ಯ ಯತ್ನೇನ ಗೃಹಮಾರಭೇತ್ ।
ಅಥ ಸಾಂವತ್ಸರಪ್ರೋಕ್ತೇ ಮುಹೂರ್ತೇ ಶುಭಲಕ್ಷಣೇ ॥ ೫ ॥

ರತ್ನೋಪರಿ ಶಿಲಾಂ ಕೃತ್ವಾ ಸರ್ವಬೀಜಸಮನ್ವಿತಾಂ ।
ಚತುರ್ಭಿರ್ಬ್ರಾಹ್ಮಣೈಃ ಸ್ತಂಭಂ ಕಾರಯಿತ್ವಾ ಸುಪೂಜಿತಂ ॥ ೬ ॥

ಶುಕ್ಲಾಂಬರಧರಃ ಶಿಲ್ಪಿಸಹಿತೋ ವೇದಪಾರಗಃ ।
ಸ್ನಾಪಿತಂ ವಿನ್ಯಸೇತ್ತದ್ವತ್ಸರ್ವೌಷಧಿಸಮನ್ವಿತಂ ॥ ೭ ॥

ನಾನಾಕ್ಷತಸಮೋಪೇತಂ ವಸ್ತ್ರಾಲಂಕಾರಸಂಯುತಂ ।
ಬ್ರಹ್ಮಘೋಷೇಣ ವಾದ್ಯೇನ ಗೀತಮಂಗಲನಿಸ್ವನೈಃ ॥ ೮ ॥

ಪಾಯಸಂ ಭೋಜಯೇದ್ವಿಪ್ರಾನ್ ಹೋಮಂ ತು ಮಧುಸರ್ಪಿಷಾ ।
ವಾಸ್ತೋಷ್ಪತೇ ಪ್ರತಿಜಾನೀಹಿ ಮಂತ್ರೇಣಾನೇನ ಸರ್ವದಾ ॥ ೯ ॥

---

೫ ಹೀಗೆ ಸ್ಥಳವನ್ನು ಆರಿಸಿ ಜ್ಯೌತಿಷಿಕನು ಹೇಳಿದ ಶುಭಲಕ್ಷಣಯುಕ್ತವಾದ ಮುಹೂರ್ತದಲ್ಲಿ ಮನೆಯ ಕೆಲಸವನ್ನು ಆರಂಭಿಸಬೇಕು

೬-೮ ನಾಲ್ವರು ಬ್ರಾಹ್ಮಣರು ಕಂಬವನ್ನು ಶಾಸ್ತ್ರೋಕ್ತವಾಗಿ ಪೂಜಿಸುವರು ನೆಲದಲ್ಲಿ ರತ್ನವನ್ನು ಹರಡಿ ಅದರ ಮೇಲೆ ಸಕಲ ಬೀಜಗಳ ಸಹಿತವಾಗಿ ಅಡಿಗಲ್ಲನ್ನು ಇರಿಸಬೇಕು ಯಜಮಾನನು ಶುಭ್ರವಸ್ತ್ರವನ್ನು ಧರಿಸಿ ಶಿಲ್ಪಿಯೊಡಗೂಡಿ ಕಂಬಕ್ಕೆ ಅಭಿಷೇಕವನ್ನು ಮಾಡಿ, ಅಕ್ಷತೆಗಳಿಂದಲೂ ವಸ್ತ್ರಭೂಷಣಗಳಿಂದಲೂ ಅಲಂಕರಿಸಿ, ಎಲ್ಲ ಬಗೆಯ ಮೂಲಿಕೆಗಳ ಸಹಿತವಾಗಿ ಅದನ್ನು ಆ ಕಲ್ಲಿನ ಮೇಲೆ ನಿಲ್ಲಿಸಬೇಕು ವೇದಘೋಷವೂ, ವಾದ್ಯಧ್ವನಿಗಳೂ, ಮಂಗಳಗೀತಗಳೂ ನಡೆಯುತ್ತಿರಬೇಕು

೯ ಬ್ರಾಹ್ಮಣರನ್ನು ಪಾಯಸಸಹಿತವಾದ ಭೋಜನದಿಂದ ತೃಪ್ತಿಪಡಿಸಬೇಕು "ವಾಸ್ತೋಷ್ಪತೇ ಪ್ರತಿಜಾನೀಹಿ" ಎಂಬ ಮಂತ್ರದಿಂದ ತುಪ್ಪದ ಮತ್ತು ಜೇನುತುಪ್ಪಗಳ ಹೋಮವನ್ನು ಮಾಡಬೇಕು

ಸೂತ್ರಪಾತೇ ತಥಾ ಕಾರ್ಯಮೇವಂ ಸ್ತಂಭೋಚ್ಛ್ರಯೇ ಪುನಃ ।
ದ್ವಾರಬಂಧೋಚ್ಛ್ರಯೇ ತದ್ವತ್ಪ್ರವೇಶಸಮಯೇ ತಥಾ ॥೧೦॥

ವಾಸ್ತೂಪಶಮನೇ ತದ್ವದ್ವಾಸ್ತುಯಜ್ಞಸ್ತು ಪಂಚಧಾ ।
ಈಶಾನೇ ಸೂತ್ರಪಾತಃ ಸ್ಯಾದಾಗ್ನೇಯೇ ಸ್ತಂಭರೋಪಣಂ ॥೧೧॥

ಪ್ರದಕ್ಷಿಣಂ ಪ್ರಕುರ್ವೀತ ವಾಸ್ತೋಃ ಪದವಿಲೇಖನಂ ।
ತರ್ಜನೀ ಮಧ್ಯಮಾ ಚೈವ ತಥಾಂಗುಷ್ಠಸ್ತು ದಕ್ಷಿಣೇ ॥೧೨॥

ಪ್ರವಾಲರತ್ನಕನಕಫಲಂ ಪುಷ್ಪಾಕ್ಷತೋದಕಂ ।
ಸರ್ವವಾಸ್ತುವಿಭಾಗೇಷು ಶಸ್ತಂ ಪದವಿಲೇಖನಂ ॥೧೩॥

ನ ಭಸ್ಮಾಂಗಾರಕಾಷ್ಠೇನ ನಖಶಸ್ತ್ರೇಣ ಚರ್ಮಭಿಃ ।
ನ ಶೃಂಗಾಸ್ಥಿಕಪಾಲೈಶ್ಚ ಕ್ವಚಿದ್ವಾಸ್ತು ವಿಲೇಖಯೇತ್ ॥೧೪॥

---

೧೦ ವಾಸ್ತುಯಜ್ಞವು ಐದು ಸಂದರ್ಭಗಳಲ್ಲಿ ನಡೆಯುವುದು ನಿವೇಶನವನ್ನು ಅಳತೆಮಾಡಿ ದಾರವನ್ನು ಕಟ್ಟಿದಾಗ, ಕಂಬವನ್ನು ನೆಡುವಾಗ, ಬಾಗಿಲವಾಡವನ್ನು ನಿಲ್ಲಿಸುವಾಗ, ಮನೆಯನ್ನು ಕಟ್ಟಿದ ಮೇಲೆ ಅದನ್ನು ಪ್ರವೇಶಿಸುವಾಗ, ವಾಸ್ತುಶಾಂತಿಯನ್ನು ನೆರವೇರಿಸುವಾಗ ವಾಸ್ತುಯಜ್ಞವನ್ನು ತಪ್ಪದೆ ನಡೆಸಬೇಕು

೧೧ ಅಳತೆಮಾಡಿ ದಾರವನ್ನು ಕಟ್ಟುವುದಕ್ಕೆ ಈಶಾನ್ಯದಿಂದ ತೊಡಗಬೇಕು ಕಂಬವನ್ನು ಆಗ್ನೇಯ ದಿಕ್ಕಿನಲ್ಲಿ ಮೊದಲು ನಿಲ್ಲಿಸಬೇಕು ವಾಸ್ತುಚಕ್ರದ ಪದಗಳನ್ನು ಪ್ರದಕ್ಷಿಣವಾಗಿ ಬರೆಯಬೇಕು

೧೨-೧೩ ರೇಖೆಗಳನ್ನು ಎಳೆಯುವುದಕ್ಕೆ ಬಲಗೈಯ ಹೆಬ್ಬೆರಳು, ಅದರ ಮಗ್ಗುಲಬೆರಳು ಇವುಗಳನ್ನು ಉಪಯೋಗಿಸಬೇಕು ಹವಳ, ರತ್ನ, ಚಿನ್ನ, ಹೂ, ಹಣ್ಣು, ಅಕ್ಷತೆ, ಜಲ ಇವುಗಳನ್ನು ಸಾಧನವಾಗಿ ಇಟ್ಟುಕೊಳ್ಳಬಹುದು ಎಲ್ಲ ವಿಧವಾದ ಕಟ್ಟಡಗಳಿಗೂ ವಾಸ್ತುಚಕ್ರವನ್ನು ಬರೆಯುವಾಗ ಈ ನಿಯಮವನ್ನು ಅನುಸರಿಸುವುದು ಒಳ್ಳೆಯದು

೧೪ ಬೂದಿ, ಇದ್ದಿಲು, ಸೌದೆ, ಉಗುರು, ಆಯುಧ, ಚರ್ಮ, ಕೊಂಬು, ಮೂಳೆ, ಓಡು ಇವುಗಳಿಂದ ಎಂದಿಗೂ ವಾಸ್ತುಚಕ್ರವನ್ನು ಬರೆಯಬಾರದು ಹಾಗೆ ಬರೆದರೆ ದುಃಖ, ಕಷ್ಟ, ಭೀತಿ ಮುಂತಾದುವು ಒದಗುವುವು

ಏಭಿರ್ವಿಲಿಖಿತಂ ಕುರ್ಯಾದ್ದುಃಖಶೋಕಭಯಾದಿಕಂ ।
ಯದಾ ಗೃಹಪ್ರವೇಶಃ ಸ್ಯಾಚ್ಛಿಲ್ಪೀ ತತ್ರಾಪಿ ಲಕ್ಷಯೇತ್ ||೧೫||

ಸ್ತಂಭಸೂತ್ರಾದಿಕೇ ತದ್ವಚ್ಛುಭಾಶುಭಫಲೋದಯಂ ।
ಆದಿತ್ಯಾಭಿಮುಖಂ ರೌತಿ ಶಕುನಿಃ ಪುರುಷಂ ಯದಿ ||೧೬||

ತುಲ್ಯಕಾಲಂ ಸ್ಪುರೇದಂಗಂ ಗೃಹಭರ್ತುರ್ಯದಾತ್ಮನಃ ।
ವಾಸ್ತ್ವಂಗೇ ತದ್ವಿಜಾನೀಯಾನ್ನರಶಲ್ಯಂ ಭಯಪ್ರದಂ ||೧೭||

ಅಂಕನಾನಂತರಂ ಯತ್ರ ಹಸ್ತ್ಯಶ್ವಶ್ವಾಪದಂ ಭವೇತ್ ।
ತದಂಗಸಂಭವಂ ವಿಂದ್ಯಾತ್ತತ್ರ ಶಲ್ಯಂ ವಿಚಕ್ಷಣಃ ||೧೮||

ಪ್ರಸಾರ್ಯಮಾಣೇ ಸೂತ್ರೇ ತು ಶ್ವಾ ಗೋಮಾಯುರ್ವಿಲಂಘ್ಯತೇ ।
ತತ್ರ ಶಲ್ಯಂ ವಿಜಾನೀಯಾತ್ಖರಶಬ್ದೇಽತಿಭೈರವೇ ||೧೯||

---

೧೫ ಗೃಹಪ್ರವೇಶಕಾಲದಲ್ಲೂ ಕಂಬವನ್ನು ನಿಲ್ಲಿಸುವುದು, ಸೂತ್ರವನ್ನು ಕಟ್ಟುವುದು ಮುಂತಾದ ವೇಳೆಗಳಲ್ಲಿಯೂ ಆಗುವ ಶಕುನಗಳನ್ನು ಶಿಲ್ಪಿಯು ಗಮನಿಸಬೇಕು ಅವುಗಳಿಂದ ಶುಭಫಲಗಳೂ ಅಶುಭಫಲಗಳೂ ಉಂಟಾಗುವುವು

೧೬-೧೭ ಸೂರ್ಯನಿಗೆ ಎದುರಾಗಿ ಪಕ್ಷಿಯು ಭಯಂಕರವಾಗಿ ಕೂಗಿದರೆ ಭೀತಿ ಒದಗುವುದು ಅಲ್ಲದೆ ಮೇಲೆ ಹೇಳಿದ ಸಮಯಕ್ಕೆ ಸರಿಯಾಗಿ ಮನೆಯ ಯಜಮಾನನ ಯಾವುದಾದರೂ ಅಂಗವು ಅದುರಿದರೆ, ವಾಸ್ತುಪುರುಷನ ಆ ಅಂಗವೆನಿಸಿದ ಮನೆಯ ಅಂಕಣದಲ್ಲಿ ಮನುಷ್ಯನ ಮೂಳೆಯು ನೆಲದೊಳಗ ಇದೆಯೆಂದು ತಿಳಿಯಬೇಕು

೧೮ ನಿವೇಶನದಲ್ಲಿ ಅಂಕಣಗಳನ್ನು ಗುರುತುಮಾಡಿದ ತರುವಾಯ ಆನೆ, ಕುದುರೆ, ಯಾವುದಾದರೂ ಘಾತುಕಪ್ರಾಣಿಗ ಇವು ಬಂದು ನಿಂತರೆ ಆ ಸ್ಥಳದಲ್ಲಿ ಆ ಪ್ರಾಣಿಗಳ ಮೂಳೆಯಿದೆಯೆಂದು ತಿಳಿದುಕೊಳ್ಳಬೇಕು

೧೯ ಗುರುತಿಗಾಗಿ ದಾರವನ್ನು ಕಟ್ಟಿರುವಾಗ ನಾಯಿನರಿಗಳು ಅದನ್ನು ಹಾರಿದರೂ, ಕತ್ತೆಯು ಬಹು ಭಯಂಕರವಾಗಿ ಕೂಗಿದರೂ ಅವುಗಳ ಮೂಳೆಯು ನೆಲದಲ್ಲಿದೆಯೆಂದು ಭಾವಿಸಬೇಕು

ಯದೀಶಾನೇ ತು ದಿಗ್ಭಾಗೇ ಮಧುರಂ ರೌತಿ ವಾಯಸಃ ।
ಧನಂ ತತ್ರ ವಿಜಾನೀಯಾದ್ಭಾಗೇ ವಾ ಸ್ವಾಮ್ಯಧಿಷ್ಠಿತೇ ॥೨೦॥

ಸೂತ್ರಚ್ಛೇದೇ ಭವೇನ್ಮೃತ್ಯುರ್ವ್ಯಾಧಿಃ ಕೀಲೇ ತ್ವಧೋಮುಖೇ ।
ಅಂಗಾರೇಷು ತಥೋನ್ಮಾದಂ ಕಪಾಲೇಷು ಚ ಸಂಶಯಂ ॥೨೧॥

ಕಂಬುಶಲ್ಯೇಷು ಜಾನೀಯಾತ್ಪೌಂಶ್ಚಲ್ಯಂ ಸ್ತ್ರೀಷು ವಾಸ್ತುವಿತ್ ।
ಗೃಹಭರ್ತುರ್ಗೃಹಸ್ಯಾಪಿ ವಿನಾಶಃ ಶಿಲ್ಪಿಸಂಭ್ರಮೇ ॥೨೨॥

ಸ್ತಂಭಸ್ಕಂಧಚ್ಯುತೇ ಕುಂಭೇ ಶಿರೋರೋಗಂ ವಿನಿರ್ದಿಶೇತ್ ।
ಕುಂಭಾಪಹಾರೇ ಸರ್ವಸ್ಯ ಕುಲಸ್ಯಾಪಿ ಕ್ಷಯೋ ಭವೇತ್ ॥೨೩॥

ಮೃತ್ಯುಂ ಸ್ಥಾನಚ್ಯುತೇ ಕುಂಭೇ ಸ್ತಂಭಭಗ್ನೇ ತಥಾ ವಿದುಃ ।
ಕರಸಂಖ್ಯಾವಿನಾಶೇ ತು ನಾಶಂ ಗೃಹಪತೇರ್ವಿದುಃ ॥೨೪॥

---

೨೦ ಈಶಾನ್ಯದಿಕ್ಕಿನಲ್ಲಿ ಕಾಗೆಯು ಸೌಮ್ಯವಾಗಿ ಕೂಗಿದರೆ ಅದೇ ಸ್ಥಳದಲ್ಲೋ ಅಥವಾ ಈಶಾನನ ಆಧಿಪತ್ಯಕ್ಕೆ ಸೇರಿದ ಅದರ ಸಮೀಪದ ಪ್ರದೇಶದಲ್ಲೋ ಧನವಿದೆಯೆಂದು ಅರಿಯಬೇಕು

೨೧ ಗುರುತಿಗಾಗಿಯೂ ಅಳತೆಗಾಗಿಯೂ ಕಟ್ಟಿದ್ದ ದಾರವು ಕಿತ್ತುಹೋದರೆ ಯಜಮಾನನ ಮನೆಯಲ್ಲಿ ಮರಣವು ಸಂಭವಿಸುವುದು ಗೂಟವು ತಲೆಕೆಳಗಾದರೆ ರೋಗಪ್ರಾಪ್ತಿಯಾಗುವುದು ನೆಲದೊಳಗೆ ಇದ್ದಿಲು ಸಿಕ್ಕಿದರೆ ಉನ್ಮಾದವೂ, ಮಡಕೆಗಳ ಚೂರು ದೊರೆತರೆ ಸಂಶಯವೂ ಒದಗುವುವು

೨೨ ನಲದಲ್ಲಿ ಕಪ್ಪೆಯಚಿಪ್ಪು, ಶಂಖ ಇವು ಇದ್ದರೆ ಆ ಮನೆಯ ಸ್ತ್ರೀಯರು ಜಾರಿಣಿಗಳಾಗುವರು ಶಿಲ್ಪಿಯು ತಬ್ಬಿಬ್ಬಾದರೆ ಯಜಮಾನನಿಗೂ ಮನೆಗೂ ಕೇಡು ಸಂಭವಿಸುವುದು

೨೩ ಸುಣ್ಣಪಾದದ ಕಲ್ಲಿನ ಮೇಲೆ ಇರಿಸಿದ ಕಂಬವು ಜಾರಿದರೆ ತಲೆನೋವು ಬರುವುದು ಅದು ಕಳವಾದರೆ ವಂಶವೇ ಹಾಳಾಗುವುದು

೨೪ ಸುಣ್ಣಪಾದದ ಕಲ್ಲು ತನ್ನ ಜಾಗದಿಂದ ಕದಲಿದರೂ, ಕಂಬವು ಮುರಿದು ಬಿದ್ದರೂ ಮೃತ್ಯುಭೀತಿಯು ಒದಗುವುದು ಕರಸಂಖ್ಯೆ ಹಾಳಾದರೆ ಮನೆಯ ಯಜಮಾನನಿಗೆ ಕೇಡು ಸಂಭವಿಸುವುದು

**ಬೀಜೌಷಧಿವಿಹೀನೇ ತು ಭೂತೇಭ್ಯೋ ಭಯಮಾದಿಶೇತ್ ।**
**ಪ್ರಾಗ್ದಕ್ಷಿಣೇನ ವಿನ್ಯಸ್ಯ ಸ್ತಂಭೇ ಛತ್ರಂ ನಿವೇಶಯೇತ್ ।**
**ತತಃ ಪ್ರದಕ್ಷಿಣೇನಾನ್ಯಾನ್ ನ್ಯಸೇತ್ಸ್ತಂಭಾನ್ ವಿಚಕ್ಷಣಃ ॥೨೫॥**

**ಯಸ್ಮಾದ್ಭಯಂಕರಾ ನೄಣಾಂ ಯೋಜಿತಾ ಹ್ಯಪ್ರದಕ್ಷಿಣಂ ।**
**ರಕ್ಷಾಂ ಕುರ್ವೀತ ಯತ್ನೇನ ಸ್ತಂಭೋಪದ್ರವನಾಶಿನೀಂ ॥೨೬॥**

**ತಥಾ ಫಲವತೀಂ ಶಾಖಾಂ ಸ್ತಂಭೋಪರಿ ನಿವೇಶಯೇತ್ ।**
**ಪ್ರಾಗುದಕ್ಪ್ರವಣಂ ಕುರ್ಯಾದ್ದಿಙ್ಮೂಢಂ ತು ನ ಕಾರಯೇತ್ ॥೨೭॥**

**ಸ್ತಂಭಂ ವಾ ಭವನಂ ವಾಪಿ ದ್ವಾರಂ ವಾಸಗೃಹಂ ತಥಾ ।**
**ದಿಙ್ಮೂಢೇ ಕುಲನಾಶಃ ಸ್ಯಾನ್ನ ಚ ಸಂವರ್ಧಯೇದ್ಗೃಹಂ ॥೨೮॥**

---

೨೫ ಬೀಜಗಳನ್ನೂ ಮೂಲಿಕೆಗಳನ್ನೂ ಕಂಬದ ಅಡಿಯಲ್ಲಿ ಇಡದಿದ್ದರೆ ಭೂತಗಳಿಂದ ಭೀತಿಯುಂಟಾಗುವುದು ಮೊದಲು ಆಗ್ನೇಯ ದಿಕ್ಕಿನಲ್ಲಿ ಕಂಬವನ್ನು ಸ್ಥಾಪಿಸಿ, ಅದರ ಮೇಲೆ ಕಾಗೆ, ಗೂಬೆ ಮುಂತಾದುವುಗಳು ಕುಳಿತುಕೊಳ್ಳದಂತೆ ಮರಗಾಗಿ ಕೊಡೆಯನ್ನು ಕಟ್ಟಬೇಕು ತರುವಾಯ ಪ್ರದಕ್ಷಿಣವಾಗಿ ಉಳಿದ ಕಂಬಗಳನ್ನೂ ನಿಲ್ಲಿಸಬೇಕು

೨೬ ಅಪ್ರದಕ್ಷಿಣವಾಗಿ ನಿಲ್ಲಿಸಿದರೆ ಅದರಿಂದ ಮನುಷ್ಯರಿಗೆ ಭಯವುಂಟಾಗುವುದು ಆದುದರಿಂದ ಈ ಬಗೆಯ ಕೇಡು ಒದಗದಂತೆ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು

೨೭ ಕಂಬದ ಮೇಲ್ಗಡೆ ಹಣ್ಣುಕಾಯಿಗಳಿಂದ ಕೂಡಿದ ಮರದ ರೆಂಬೆಯೊಂದನ್ನು ಕಟ್ಟಬೇಕು ಕಂಬ, ಆಲಯ, ಬಾಗಿಲು, ವಾಸಗೃಹ ಇವೆಲ್ಲವೂ ಸ್ವಲ್ಪಮಟ್ಟಿಗೆ ಈಶಾನ್ಯ ದಿಕ್ಕನ್ನು ನೋಡುವಂತಿರಬೇಕು ನಿಷಿದ್ಧವಾದ ದಿಕ್ಕಿಗೆ ಅಭಿಮುಖವಾಗಿ ಮಾತ್ರ ಇರಲೇಬಾರದು

೨೮-೨೯ ಶಾಸ್ತ್ರನಿಷಿದ್ಧವಾದ ದಿಕ್ಕಿಗೆ ಅಭಿಮುಖವಾದರೆ ಕುಲವು ನಾಶವಾಗುವುದು ಮನೆಯನ್ನು ಕಟ್ಟಿದ ಬಳಿಕ ಅದಕ್ಕೆ ಸ್ವಲ್ಪಭಾಗವನ್ನು ಪುನಃ ಸೇರಿಸಿ

ಯದಿ ಸಂವರ್ಧಯೇದ್ಗೇಹಂ ಸರ್ವಮೇವ ವಿವರ್ಧಯೇತ್ ।
ಪೂರ್ವೇಣ ವರ್ಧಿತಂ ವಾಸ್ತು ಕುರ್ಯಾದ್ವೈರಾಣಿ ಸರ್ವದಾ ॥೨೯॥

ದಕ್ಷಿಣೇ ವರ್ಧಿತಂ ವಾಸ್ತು ಮೃತ್ಯವೇ ಸ್ಯಾನ್ನ ಸಂಶಯಃ ।
ಪಶ್ಚಾದ್ವಿವೃದ್ಧಂ ಯದ್ವಾಸ್ತು ತದರ್ಥಕ್ಷಯಕಾರಕಂ ॥೩೦॥

ವರ್ಧಾಪಿತಂ ತಥಾ ಸೌಮ್ಯೇ ಬಹುಸಂತಾಪಕಾರಕಂ ।
ಆಗ್ನೇಯೇ ಯತ್ರ ವೃದ್ಧಿಃ ಸ್ಯಾತ್ತದಗ್ನಿಭಯದಂ ಭವೇತ್ ॥೩೧॥

ವರ್ಧಿತಂ ರಾಕ್ಷಸೇ ಕೋಣೇ ಶಿಶುಕ್ಷಯಕರಂ ಭವೇತ್ ।
ವರ್ಧಾಪಿತಂ ತು ವಾಯವ್ಯೇ ವಾತವ್ಯಾಧಿಪ್ರಕೋಪಕೃತ್ ॥೩೨॥

ಈಶಾನ್ಯಾಮನ್ನಹಾನಿಃ ಸ್ಯಾದ್ವಾಸ್ತೌ ಸಂವರ್ಧಿತೇ ಸದಾ ।
ಈಶಾನೇ ದೇವತಾಗಾರಂ ತಥಾ ಶಾಂತಿಗೃಹಂ ಭವೇತ್ ॥೩೩॥

---

ದೊಡ್ಡದು ಮಾಡಬಾರದು, ಹಾಗೆ ಮಾಡಬೇಕಾಗಿ ಬಂದಾಗ ಪ್ರಮಾಣಾನುಸಾರವಾಗಿ ಎಲ್ಲಕಡೆಯೂ ಮನೆಯನ್ನು ವಿಸ್ತರಿಸಬೇಕು ಪೂರ್ವದ ಕಡೆಗೆ ಬೆಳಸಿದರೆ ಯಾವಾಗಲೂ ದ್ವೇಷಕ್ಕೆ ತುತ್ತಾಗಿರಬೇಕಾಗುವುದು

೩೦ ದಕ್ಷಿಣದಿಕ್ಕಿಗೆ ಮನೆಯನ್ನು ಹೆಚ್ಚಿಸಿದರೆ ಮೃತ್ಯುವಿನ ಭೀತಿ ತಪ್ಪುವುದಿಲ್ಲ, ಪಶ್ಚಿಮಕ್ಕೆ ಬೆಳಸಿದರೆ ದ್ರವ್ಯನಾಶವಾಗುವುದು

೩೧ ಉತ್ತರದ ಕಡೆಗೆ ಹೆಚ್ಚಿಸಿ ಕಟ್ಟಿದರೆ ಸಂತಾಪವು ಬಹಳವಾಗುತ್ತದೆ ಆಗ್ನೇಯ ದಿಕ್ಕಿಗೆ ಬೆಳಸಿದರೆ ಅಗ್ನಿಭೀತಿ ಒದಗುತ್ತದೆ

೩೨ ನೈಋತ್ಯದಿಕ್ಕಿನಲ್ಲಿ ಮನೆಯನ್ನು ಬೆಳಸಿ ಕಟ್ಟಿದರೆ ಮಕ್ಕಳು ಏಳಿಗೆಗೆ ಬರುವುದಿಲ್ಲ ವಾಯುವ್ಯದಲ್ಲಾದರೋ ವಾತರೋಗ ಪ್ರಾಪ್ತವಾಗುತ್ತದೆ

೩೩ ವಾಸಗೃಹವನ್ನು ಮತ್ತೆ ಈಶಾನ್ಯದಿಕ್ಕಿಗೆ ಬೆಳಸಿದರೆ ಅನ್ನಹಾನಿಯಾಗುತ್ತದೆ ಆ ದಿಕ್ಕಿನಲ್ಲಿ ದೇವರ ಮನೆಯೂ, ಶಾಂತಿಗೃಹವೂ ಇರಬೇಕು

ಮಹಾನಸಂ ತಥಾಗ್ನೇಯೇ ತತ್ಪಾರ್ಶ್ವೇ ಚೋತ್ತರೇ ಜಲಂ ।
ಗೃಹಸ್ಯೋಪಸ್ಕರಂ ಸರ್ವಂ ನೈಋತ್ಯೇ ಸ್ಥಾಪಯೇದ್ಬುಧಃ ॥೩೪॥

ಸರ್ವಸ್ಥಾನಂ ಬಹಿಃ ಕುರ್ಯಾತ್ಸ್ನಾನಮಂಡಪಮೇವ ಚ ।
ಧನಧಾನ್ಯಂ ಚ ವಾಯವ್ಯೇ ಕರ್ಮಶಾಲಾಂ ತತೋ ಬಹಿಃ ।
ಏವಂ ವಾಸ್ತುನಿವೇಶಃ ಸ್ಯಾದ್ಗೃಹಭರ್ತುಃ ಸುಖಾವಹಃ ॥೩೫॥

ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ವಾಸ್ತುವಿದ್ಯಾಸು ಗೃಹನಿರ್ಣಯೋ
ನಾಮ ಷಟ್ಪಂಚಾಶದಧಿಕದ್ವಿಶತತಮೋಽಧ್ಯಾಯಃ

---

೩೪ ಆಗ್ನೇಯದಿಕ್ಕಿನಲ್ಲಿ ಅಡಿಗೆಯಮನೆಯೂ ಅದರ ಸಮೀಪದಲ್ಲೇ ಸ್ವಲ್ಪ ಉತ್ತರಕ್ಕೆ ಬಾವಿಯೂ ಇರಬೇಕು ಮನೆಯ ಸಾಮಾನುಗಳೆಲ್ಲವನ್ನೂ ನೈಋತ್ಯದಿಕ್ಕಿನ ಉಗ್ರಾಣದಲ್ಲಿರಿಸಬೇಕು

೩೫ ಬಂದು ಹೋಗುವವರೆಲ್ಲರೂ ಕುಳಿತುಕೊಳ್ಳುವ ಕೊಠಡಿಯನ್ನು ಹೊರಗಡೆ ಕಟ್ಟಬೇಕು ಸ್ನಾನದ ಮನೆಯೂ ಹೊರಗಡೆಯೇ ಇರಬೇಕು ಧನ ಧಾನ್ಯಗಳನ್ನು ಸುರಕ್ಷಿತವಾಗಿ ಇಡುವ ಮನೆ ವಾಯುವ್ಯದಲ್ಲೂ, ಕರ್ಮಶಾಲೆಯು ಅದರ ಹೊರಭಾಗದಲ್ಲೂ ಇರಬೇಕು ಯಜಮಾನನಿಗೆ ಕ್ಷೇಮವನ್ನುಂಟುಮಾಡ ತಕ್ಕ ಗೃಹರಚನಾವಿಧಿಯೆಂದರೆ ಇದೇ

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಗೃಹನಿರ್ಣಯವನ್ನು ಹೇಳಿದೆ

ನೆರೆಹೊರೆ ಪ್ರಶಸ್ತವಾಗಿರುವ ಕಡೆ ಮನೆಯನ್ನು ಕಟ್ಟಬೇಕು ಸುಮುಹೂರ್ತ ದಲ್ಲಿ ಶಾಸ್ತ್ರೋಕ್ತವಾಗಿ ಕಂಬವನ್ನು ನಿಲ್ಲಿಸಬೇಕು ಮೊದಲನೆಯ ಕಂಬವನ್ನು

## ಅಧ್ಯಾಯ ೨೫೬

ಆಗ್ನೇಯದಲ್ಲಿ ನೆಟ್ಟು ಉಳಿದವುಗಳನ್ನು ಪ್ರದಕ್ಷಿಣವಾಗಿ ನಿಲ್ಲಿಸುತ್ತ ಹೋಗಬೇಕು ಕಂಬ, ಸುಣ್ಣಪಾದದಕಲ್ಲು ಮುಂತಾದವು ಮುರಿದರೆ, ಅಥವಾ ಜಾರಿದರೆ ಯಜಮಾನನಿಗೆ ಹಾನಿಯುಂಟಾಗುತ್ತದೆ ಒಂದುಸಾರಿ ಕಟ್ಟಿದ ಮನೆಯನ್ನು ಮತ್ತೆ ಕಟ್ಟಡಗಳನ್ನು ಸೇರಿಸಿ ದೊಡ್ಡದು ಮಾಡಬಾರದು ಹಾಗೆ ಬೆಳೆಸಬೇಕಾದರೆ ಎಲ್ಲ ದಿಕ್ಕುಗಳಲ್ಲೂ ವಿಸ್ತರಿಸಬೇಕು ಮನೆಯ ಒಂದೊಂದು ಭಾಗವನ್ನು ಒಂದೊಂದು ಕಾರ್ಯಕ್ಕೆ ಉಪಯೋಗಿಸಬೇಕು

ಶ್ರೀಮತ್ಸ್ಯಮಹಾಪುರಾಣದಲ್ಲಿ ವಾಸ್ತುಶಾಸ್ತ್ರದಲ್ಲಿ ಗೃಹನಿರ್ಣಯವೆಂಬ
ಇನ್ನೂರೈವತ್ತಾರನೆಯ ಅಧ್ಯಾಯವು ಮುಗಿದುದು

## ಅಥ ಸಪ್ತಪಂಚಾಶದಧಿಕದ್ವಿಶತತಮೋಽಧ್ಯಾಯಃ

॥ ಸೂತ ಉವಾಚ ॥

ಅಥಾತಃ ಸಂಪ್ರವಕ್ಷ್ಯಾಮಿ ದಾರ್ವಾಹರಣಮುತ್ತಮಂ ।
ಧನಿಷ್ಠಾಪಂಚಕಂ ಮುಕ್ತ್ವಾ ವಿಷ್ಟ್ಯಾದಿಕಮತಃ ಪರಂ ॥ ೧ ॥

ತತಃ ಸಾಂವತ್ಸರಾದಿಷ್ಟೇ ದಿನೇ ಯಾಯಾದ್ವನಂ ಬುಧಃ ।
ಪ್ರಥಮಂ ಬಲಿಪೂಜಾಂ ಚ ಕುರ್ಯಾದ್ವೃಕ್ಷಸ್ಯ ಸರ್ವದಾ ॥ ೨ ॥

ಪೂರ್ವೋತ್ತರೇಣ ಪತಿತಂ ಗೃಹದಾರು ಪ್ರಶಸ್ಯತೇ ।
ಅನ್ಯಥಾ ನ ಶುಭಂ ವಿದ್ಯಾದ್ಯಾಮ್ಯೋಪರಿ ನಿಪಾತನಂ ॥ ೩ ॥

ಕ್ಷೀರವೃಕ್ಷೋದ್ಭವಂ ದಾರು ನ ಗೃಹೇ ವಿನಿವೇಶಯೇತ್ ।
ಕೃತಾಧಿವಾಸಂ ವಿಹಗೈರನಿಲಾನಲಪೀಡಿತಂ ॥ ೪ ॥

ಗಜಾವರುಗ್ಣಂ ಚ ತಥಾ ವಿದ್ಯುನ್ನಿರ್ಘಾತಪೀಡಿತಂ ।
ಅರ್ಧಶುಷ್ಕಂ ತಥಾ ದಾರು ಭಗ್ನಶುಷ್ಕಂ ತಥೈವ ಚ ॥ ೫ ॥

---

೧-೨ ಸೂತಪೌರಾಣಿಕನು ಹೇಳಿದನು —ಇನ್ನು ಮುಂದೆ ಮನೆಯ ಮರಮುಟ್ಟುಗಳಿಗಾಗಿ ಮರವನ್ನು ತರುವ ವಿಧಾನವನ್ನು ಹೇಳುವೆನು ಧನಿಷ್ಠೆಯಿಂದ ಹಿಡಿದು ಐದು ನಕ್ಷತ್ರಗಳನ್ನೂ, ವಿಷ್ಟಿ ಮೊದಲಾದ ನಿಷಿದ್ಧವಾದ ವೇಳೆಗಳನ್ನೂ ಬಿಟ್ಟು, ಜ್ಯೋತಿಷಿಕನು ಹೇಳಿದ ಒಳ್ಳೆಯ ದಿನದಲ್ಲಿ ವಾಸ್ತುಶಾಸ್ತ್ರಜ್ಞನಾದ ವಿವೇಕಿಯು ಕಾಡಿಗೆ ಹೋಗಬೇಕು ಮೊತ್ತಮೊದಲು ಮರವನ್ನು ಪೂಜಿಸಬೇಕು

೩ ಮನೆಯ ಮುಟ್ಟಿಗೋಸ್ಕರವಾಗಿ ಕಡಿದ ಮರವು ಪೂರ್ವಕ್ಕೋ ಉತ್ತರಕ್ಕೋ ಬಿದ್ದರೆ ಒಳ್ಳೆಯದು ಹಾಗಲ್ಲದೆ ದಕ್ಷಿಣದ ಕಡೆಗೆ ತಿರುಗಿಕೊಂಡು ಬಿದ್ದರೆ ಶುಭವಲ್ಲ

೪-೬ ಆಲ, ಗೋಣಿ, ಅರಳಿ ಮೊದಲಾದ ಹಾಲುಮರಗಳಿಂದ ಆದ ಸಾಮಾನುಗಳನ್ನು ಮನೆಗೆ ಉಪಯೋಗಿಸಬಾರದು ಪಕ್ಷಿಗಳಿಗೆ ನಿರಂತರವಾಗಿ ವಾಸಸ್ಥಾನವಾದ, ಬೆಂಕಿಯಿಂದ ಸುಟ್ಟ, ಗಾಳಿಯಿಂದ ಬಿದ್ದ, ಆನೆಯು ತಿಕ್ಕಿ

ಚೈತ್ಯದೇವಾಲಯೋತ್ಪನ್ನಂ ನದೀಸಂಗಮಜಂ ತಥಾ ।
ಶ್ಮಶಾನಕೂಪನಿಲಯಂ ತಡಾಗಾದಿಸಮುದ್ಭವಂ ॥ ೬ ॥

ವರ್ಜಯೇತ್ಸರ್ವಥಾ ದಾರು ಯದೀಚ್ಛೇದ್ವಿಪುಲಾಂ ಶ್ರಿಯಂ ।
ತಥಾ ಕಂಟಕಿನೋ ವೃಕ್ಷಾನ್ನೀಪನಿಂಬವಿಭೀತಕಾಃ ॥ ೭ ॥

ಶ್ಲೇಷ್ಮಾತಕಾನಾಮ್ರತರೂನ್ವರ್ಜಯೇದ್ಗೃಹಕರ್ಮಣಿ ।
ಅಸನಾಶೋಕಮಧುಕಸರ್ಜಶಾಲಾಃ ಶುಭಾವಹಾಃ ॥ ೮ ॥

ಚಂದನಂ ಪನಸಂ ಧನ್ಯಂ ಸುರದಾರುಹರಿದ್ರವಃ ।
ದ್ವಾಭ್ಯಾಮೇಕೇನ ವಾ ಕುರ್ಯಾತ್ತ್ರಿಭಿರ್ವಾ ಭವನಂ ಶುಭಂ ॥ ೯ ॥

ಏಕೈವ ಶಿಂಶುಪಾ ಧನ್ಯಾ ಶ್ರೀಪರ್ಣೀ ತಿಂದುಕೀ ತಥಾ ॥೧೦॥

ಏತಾ ನಾನ್ಯಸಮಾಯುಕ್ತಾಃ ಕದಾಚಿಚ್ಛುಭಕಾರಿಕಾಃ ।
ಸ್ಯಂದನಃ ಪನಸಸ್ತದ್ವತ್ಸರಲಾರ್ಜುನಪದ್ಮಕಾಃ ॥೧೧॥

---

ಉರುಳಿಸಿದ, ಸಿಡಿಲು ಬಡಿದ, ಅರ್ಧ ಒಣಗಿದ, ಮುರಿದು ಬಿದ್ದು ಒಣಗಿದ, ಬಸದಿ, ದೇವಸ್ಥಾನ, ನದೀಸಂಗಮ, ಶ್ಮಶಾನ, ಬಾವಿ, ಮತ್ತು ಕೆರೆಕಟ್ಟೆಗಳಲ್ಲಿ ಬೆಳೆದ ಮರಗಳನ್ನು ಖಂಡಿತವಾಗಿಯೂ ಉಪಯೋಗಿಸಬಾರದು ಉಪಯೋಗಿಸಿದರೆ ಐಶ್ವರ್ಯವೆಲ್ಲ ನಾಶವಾಗುವುದು

೭ ಮುಳ್ಳುಮರಗಳನ್ನೂ ಕಡಹ, ಬೇವು, ತಾರೆ, ಚಳ್ಳೆ ಮತ್ತು ಮಾವಿನ ಮರಗಳನ್ನೂ ಮನೆಕಟ್ಟುವುದಕ್ಕೆ ಉಪಯೋಗಿಸಬಾರದು

೮-೯ ಹೊನ್ನೆ, ಅಶೋಕ, ಹಿಪ್ಪೆ, ಮತ್ತಿ, ಶ್ರೀಗಂಧ ಹಲಸು, ಧನ್ಯ, ದೇವದಾರು, ಪೀತದಾರು ಈ ಮರಗಳು ಒಳ್ಳೆಯವು ಯಾವುದಾದರೂ ಒಂದು, ಎರಡು ಅಥವಾ ಮೂರು ಜಾತಿಯ ಮರಗಳಿಂದ ಮನೆಯನ್ನು ಕಟ್ಟಬೇಕು ಅದೇ ಶುಭಕರ

೧೦-೧೧ ಶಿಂಶಪ, ಧನ್ಯ, ಶಿವನೆ, ತೂಬರ, ಹುಲಿಗೆ, ಹಲಸು, ತಿಗಡೆ, ಮತ್ತಿ ಮತ್ತು ಪದ್ಮಕ ಈ ಮರಗಳಲ್ಲಿ ಒಂದೊಂದನ್ನೇ ಮನೆಯ ಮುಟ್ಟುಗಳಿಗೆ ಉಪಯೋಗಿಸಿದರೆ ಒಳ್ಳೆಯದು ಬೇರೆ ಜಾತಿಯ ಮರಗಳೊಡನೆ ಬೆರೆಸಬಾರದು

ಏತೇ ನಾನ್ಯಸಮಾಯುಕ್ತಾ ವಾಸ್ತುಕಾರ್ಯಫಲಪ್ರದಾಃ ।
ತರುಚ್ಛೇದೇ ಮಹಾಪೀತೇ ಗೋಧಾ ವಿಂದ್ಯಾದ್ವಿಚಕ್ಷಣಃ ॥೧೩॥

ಮಾಂಜಿಷ್ಠವರ್ಣೇ ಭೇಕಃ ಸ್ಯಾನ್ನೀಲೇ ಸರ್ಪಾದಿ ನಿರ್ದಿಶೇತ್ ।
ಅರುಣೇ ಸರಟಂ ವಿದ್ಯಾನ್ಮುಕ್ತಾಭೇ ಶುಕಮಾದಿಶೇತ್ ॥೧೪॥

ಕಪಿಲೇ ಮೂಷಕಾನ್ ವಿದ್ಯಾದ್ವಜ್ರಾಭೇ ಜಲಮಾದಿಶೇತ್ ।
ಏವಂವಿಧಂ ಸಗರ್ಭಂ ತು ವರ್ಜಯೇದ್ವಾಸ್ತುಕರ್ಮಣಿ ॥೧೫॥

ಪೂರ್ವಚ್ಛಿನ್ನಂ ತು ಗೃಹ್ಣೀಯಾನ್ನಿಮಿತ್ತಶಕುನೈಃ ಶುಭೈಃ ।
ವ್ಯಾಸೇನ ಗುಣಿತೇ ದೈರ್ಘ್ಯೇ ಅಷ್ಟಾಭಿರ್ವಿಹೃತೇ ತಥಾ ॥೧೬॥

ಯಚ್ಛೇಷಮಾಯುತಂ ವಿಂದ್ಯಾದಷ್ಟಭೇದಂ ವದಾಮಿ ವಃ ।
ಧ್ವಜೋ ಧೂಮ್ರಶ್ಚ ಸಿಂಹಶ್ಚ ಖರಃ ಶ್ವಾ ವೃಷ ಏವ ಚ ॥೧೭॥

---

೧೩-೧೪ ಮರವನ್ನು ಕಡಿದಾಗ ಅದು ಅರಸಿನದ ಒಣ್ಣವಾಗಿದ್ದರೆ ಅದರಲ್ಲಿ ಉಡವೂ, ಮಂಜಿಷ್ಠವರ್ಣವಾಗಿದ್ದರೆ ಕಪ್ಪೆಯೂ ನೀಲವರ್ಣವಾಗಿದ್ದರೆ ಹಾವು ಮುಂತಾದುವುಗಳೂ, ಕೆಂಪಗಿದ್ದರೆ ಹೆಂಟೆಗೊದ್ದವೂ, ಮುತ್ತಿನ ಬಣ್ಣವಾಗಿದ್ದರೆ ಗಿಳಿಯೂ ವಾಸಿಸುತ್ತಿವೆಯೆಂದು ತಿಳಿಯಬೇಕು

೧೫ ಕಪಿಲವರ್ಣವಾಗಿದ್ದರೆ ಇಲಿಗಳು ವಾಸಿಸುವುವೆಂದೂ ವಜ್ರದ ಬಣ್ಣವಾಗಿದ್ದರ ನೀರು ನಿಂತಿದೆಯೆಂದೂ ತಿಳಿಯಬೇಕು ಈ ರೀತಿಯಲ್ಲಿ ಗರ್ಭದಿಂದ ಕೂಡಿದ ಮರವನ್ನು ಮನೆಕಟ್ಟುವುದಕ್ಕೆ ಉಪಯೋಗಿಸಬಾರದು ಮೊದಲೇ ಮರವನ್ನು ಕಡಿದುಹಾಕಿದ್ದರ ಒಳ್ಳೆಯ ಶಕುನಗಳನ್ನು ನೋಡಿ ಅದನ್ನು ತೆಗೆದುಕೊಳ್ಳಬಹುದು

೧೬ ಮನೆಯ ನಿವೇಶನದ ಉದ್ದವನ್ನು ಅದರ ಅಗಲದಿಂದ ಗುಣಿಸಿ ಎಂಟರಿಂದ ಭಾಗಿಸಿದರೆ ಬರುವ ಶೇಷವನ್ನು ಆಯತವೆಂದು ತಿಳಿಯಬೇಕು ಅದು ಎಂಟು ವಿಧವಾಗಿರುವುದು ಅದನ್ನು ಹೇಳುವೆನು ಕೇಳಿ

೧೭ ಶೇಷದ ಪ್ರಮಾಣವನ್ನು ಅನುಸರಿಸಿ ಧ್ವಜ, ಧೂಮ್ರ, ಸಿಂಹ, ಖರ, ಶ್ವಾ, ವೃಷಭ, ಹಸ್ತಿ, ಧ್ವಾಂಕ್ಷ ಎಂಬ ಎಂಟು ಬಗೆಯ ಆಯಗಳುಂಟು ಇವು ಒಂದೊಂದೂ ಪೂರ್ವ ಮೊದಲಾದ ಒಂದೊಂದು ದಿಕ್ಕನ್ನು ಸೂಚಿಸುವುವು ಈ ಶೇಷವು ಮೊಳದ ಅಳತೆಯೆಂದರಿಯಬೇಕು

ಹಸ್ತೀ ಧ್ವಾಂಕ್ಷಶ್ಚ ಪೂರ್ವಾದ್ಯಾಃ ಕರಶೇಷಾ ಭವಂತ್ಯಮೀ ।
ಧ್ವಜಃ ಸರ್ವಮುಖೋ ಧನ್ಯಃ ಪ್ರತ್ಯಗ್ದ್ವಾರೋ ವಿಶೇಷತಃ ॥೧೭॥

ಉದಙ್ಮುಖೋ ಭವೇತ್ಸಿಂಹಃ ಪ್ರಾಙ್ಮುಖೋ ವೃಷಭೋ ಭವೇತ್ ।
ದಕ್ಷಿಣಾಭಿಮುಖೋ ಹಸ್ತೀ ಸಪ್ತಭಿಃ ಸಮುದಾಹೃತಃ ॥೧೮॥

ಏಕೇನ ಧ್ವಜ ಉದ್ದಿಷ್ಟಸ್ತ್ರಿಭಿಃ ಸಿಂಹಃ ಪ್ರಕೀರ್ತಿತಃ ।
ಪಂಚಭಿರ್ವೃಷಭಃ ಪ್ರೋಕ್ತೋ ವಿಕೋಣಸ್ಥಾಂಶ್ಚ ವರ್ಜಯೇತ್ ॥೧೯॥

ತಮೇವಾಷ್ಟಗುಣಂ ಕೃತ್ವಾ ಕರರಾಶಿಂ ವಿಚಕ್ಷಣಃ ।
ಸಪ್ತವಿಂಶಾಹೃತೇ ಭಾಗೇ ಋಕ್ಷಂ ವಿದ್ಯಾದ್ವಿಚಕ್ಷಣಃ ॥೨೦॥

---

೧೭-೧೮ ಆಯುವು ಧ್ವಜಸಂಜ್ಞಕವಾಗಿದ್ದರೆ ಯಾವಕಡೆಗೆ ಬೇಕಾದರೂ ಬಾಗಿಲನ್ನು ಇಡಬಹುದು ಪಶ್ಚಿಮ ದಿಕ್ಕಿಗೆ ಇಟ್ಟರೆ ಮತ್ತಷ್ಟು ಒಳ್ಳೆಯದು ಸಿಂಹದ ಆಯಕ್ಕೆ ಉತ್ತರಮುಖವೂ, ವೃಷಭದ ಆಯಕ್ಕೆ ಪೂರ್ವಮುಖವೂ ಶ್ರೇಷ್ಠವಾದುವು ಹಸ್ತಿಯೆಂಬ ಆಯಕ್ಕೆ ದಕ್ಷಿಣದ ಬಾಗಿಲು ಶ್ಲಾಘ್ಯವಾದುದು ಶೇಷವು ಏಳು ಉಳಿದರೆ ಆ ಆಯುವು ಹಸ್ತಿಯೆನಿಸುವುದು

೧೯ ಒಂದು ಶೇಷವು ಉಳಿದರೆ ಧ್ವಜವೆಂದೂ ಮೂರಾದರೆ ಸಿಂಹವೆಂದೂ, ಐದಾದರೆ ವೃಷಭವೆಂದೂ ಹೇಳಬೇಕು ಧೂಮ, ಖರ, ಶ್ವಾ, ಮತ್ತು ಧ್ವಾಂಕ್ಷ ಗಳೆಂಬ ಮಿಕ್ಕ ನಾಲ್ಕು ಆಗ್ನೇಯಾದಿಮೂಲೆಗಳನ್ನು ಸೂಚಿಸುವಂತಹವು ಅವು ಗಳನ್ನು ವರ್ಜಿಸಬೇಕು

೨೦-೨೧ ಹಿಂದೆ ಹೇಳಿದಂತೆ ಅಗಲವನ್ನೂ ಉದ್ದವನ್ನೂ ಗುಣಿಸಿ ಬಂದ ಮೊಳಗಳ ಮೊತ್ತವನ್ನು ಎಂಟರಿಂದ ಮತ್ತೆ ಗುಣಿಸಿ ಆ ಲಬ್ಧವನ್ನು ಇಪ್ಪತ್ತೇಳರಿಂದ ಭಾಗಿಸಿದರೆ ಬರುವ ಭಾಗಲಬ್ಧವು ಋಕ್ಷವೆನಿಸಿಕೊಳ್ಳುವುದು ಈ ಋಕ್ಷವನ್ನು ಎಂಟರಿಂದ ಭಾಗಿಸಿದರೆ ಉಳಿಯುವ ಶೇಷಕ್ಕೆ ವ್ಯಯವೆಂದು ಹೆಸರು ವ್ಯಯಸಂಖ್ಯೆ

**ಅಷ್ಟಭಿರ್ಭಾಜಿತೇ ಋಕ್ಷೇ ಯಃ ಶೇಷಃ ಸ ವ್ಯಯೋ ಮತಃ ।**
**ವ್ಯಯಾಧಿಕಂ ನ ಕುರ್ವೀತ ಯತೋ ದೋಷಕರಂ ಭವೇತ್ ।**
**ಆಯಾಧಿಕೇ ಭವೇಚ್ಛಾಂತಿರಿತ್ಯಾಹ ಭಗವಾನ್ ಹರಿಃ ॥೨೧॥**

**ಕೃತ್ವಾಗ್ರತೋ ದ್ವಿಜವರಾನಥ ಪೂರ್ಣಕುಂಭಂ**
**ದಧ್ಯಕ್ಷತಾಮ್ರದಲಪುಷ್ಪಫಲೋಪಶೋಭಂ ।**
**ದತ್ವಾ ಹಿರಣ್ಯವಸನಾನಿ ತದಾ ದ್ವಿಜೇಭ್ಯೋ**
**ಮಾಂಗಲ್ಯಶಾಂತಿನಿಲಯಾಯ ಗೃಹಂ ವಿಶೇತ್ತು ॥೨೨॥**

**ಗೃಹ್ಯೋಕ್ತಹೋಮವಿಧಿನಾ ಬಲಿಕರ್ಮ ಕುರ್ಯಾ**
**ತ್ಪ್ರಾಸಾದವಾಸ್ತುಶಮನೇ ಚ ವಿಧಿರ್ಯ ಉಕ್ತಃ ।**
**ಸಂತರ್ಪಯೇದ್ದ್ವಿಜವರಾನಥ ಭಕ್ಷ್ಯಭೋಜ್ಯೈಃ**
**ಶುಕ್ಲಾಂಬರಃ ಸ್ವಭವನಂ ಪ್ರವಿಶೇತ್ಸಧೂಪಂ ॥೨೩॥**

**ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ವಾಸ್ತುವಿದ್ಯಾನುಕೀರ್ತನಂ**
**ನಾಮ ಸಪ್ತಪಂಚಾಶದಧಿಕದ್ವಿಶತತಮೋಽಧ್ಯಾಯಃ**

---

ಹೆಚ್ಚಾದರೆ ಕೇಡುಂಟಾಗುವುದೆಂದೂ ಆಯವು ಅಧಿಕವಾದರೆ ಶಾಂತಿಯಾಗುವುದೆಂದೂ ಪೂಜ್ಯನಾದ ವಿಷ್ಣು ಹೇಳಿದ್ದಾನೆ

೨೨ ಬ್ರಾಹ್ಮಣರನ್ನೂ ಮೊಸರು, ಅಕ್ಷತೆ, ಮಾವಿನೆಲೆ, ಪುಷ್ಪ ಮತ್ತು ಫಲಗಳಿಂದ ಅಲಂಕೃತವಾದ ಪೂರ್ಣಕುಂಭವನ್ನೂ ಮುಂದೆ ಬಿಟ್ಟುಕೊಂಡು ಸ್ಥಿರವಾದ ಸುಖಶಾಂತಿಗಳನ್ನು ಅನುಭವಿಸುವ ಉದ್ದೇಶದಿಂದ ಹೊಸಮನೆಗೆ ಪ್ರವೇಶಮಾಡಬೇಕು ಆ ಶುಭಸಮಯದಲ್ಲಿ ಬ್ರಾಹ್ಮಣರಿಗೆ ಸುವರ್ಣವಸ್ತ್ರಾದಿಗಳನ್ನು ವಿಶೇಷವಾಗಿ ದಾನಮಾಡಬೇಕು

೨೩ ಗ್ರಹ್ಯಸೂತ್ರದಲ್ಲಿ ಹೇಳಿರುವಂತೆ ಹೋಮವನ್ನೂ ಬಲಿಕರ್ಮವನ್ನೂ ಮಾಡಿ ವಿಧ್ಯುಕ್ತವಾಗಿ ವಾಸ್ತುಶಾಂತಿಯನ್ನು ನಡೆಸಬೇಕು ಶುಭ್ರವಸ್ತ್ರಧಾರಿಯಾಗಿ ಧೂಪದ ಪರಿಮಳವು ಮನೋಹರವಾಗಿ ಪ್ರಸರಿಸುತ್ತಿರಲು, ತನ್ನ ಮನೆಯನ್ನು ಪ್ರವೇಶಿಸಿ ವಿಧವಿಧವಾದ ಭಕ್ಷ್ಯಭೋಜ್ಯಗಳಿಂದ ಬ್ರಾಹ್ಮಣರನ್ನು ತೃಪ್ತಿಪಡಿಸಬೇಕು

## ಅಧ್ಯಾಯದ ಸಾರಾಂಶ

ಮನೆಗಾಗಿ ಮರವನ್ನು ತರುವ ವಿಧಾನವನ್ನು ಈ ಅಧ್ಯಾಯದಲ್ಲಿ ಹೇಳಿದೆ

ಮನೆಕಟ್ಟುವುದಕ್ಕೆ ಬೇಕಾದ ಮರವನ್ನು ತರುವುದಕ್ಕಾಗಿ ಒಳ್ಳೆಯ ಮುಹೂರ್ತದಲ್ಲಿ ಕಾಡಿಗೆ ಹೋಗಬೇಕು ಮರವನ್ನು ಕಡಿದು ಶುಭಪ್ರದವಾದ ದಿಕ್ಕಿನ ಕಡೆಗೇ ಬೀಳಿಸಬೇಕು ಅದರ ಗುಣದೋಷಗಳನ್ನು ಪರೀಕ್ಷಿಸುವ ವಿಧಾನವನ್ನೂ, ಮುಟ್ಟುಗಳನ್ನು ಮಾಡಲು ಪ್ರಶಸ್ತವಾದ ಮರಗಳ ಜಾತಿಗಳನ್ನೂ ಯಜಮಾನನು ತಿಳಿದಿರಬೇಕು ಆಯ, ಋಕ್ಷ, ವ್ಯಯ ಮುಂತಾದುವುಗಳ ಲಕ್ಷಣವನ್ನು ಅರಿತು ಅವುಗಳಿಂದ ಶುಭಾಶುಭಗಳು ಹೇಗೆ ಉಂಟಾಗುವುವೆಂಬುದನ್ನು ತಿಳಿಯಬಹುದು ವೇದಪಾರಂಗತರಾದ ಬ್ರಾಹ್ಮಣರನ್ನೂ ಪೂರ್ಣಕುಂಭವನ್ನೂ ಮುಂದೆ ಬಿಟ್ಟುಕೊಂಡು ಶುಭಮುಹೂರ್ತದಲ್ಲಿ ನೂತನ ಗೃಹವನ್ನು ಪ್ರವೇಶಿಸಬೇಕು ಗೃಹ್ಯಸೂತ್ರದಲ್ಲಿ ಹೇಳಿರುವಂತೆ ವಾಸ್ತುಶಾಂತಿಯನ್ನು ನಡೆಸಬೇಕು

ಶ್ರೀಮತ್ಸ್ಯಮಹಾಪುರಾಣದಲ್ಲಿ ವಾಸ್ತುವಿದ್ಯಾನುಕೀರ್ತನವೆಂಬ
ಇನ್ನೂರೈವತ್ತೇಳನೆಯ ಅಧ್ಯಾಯವು ಮುಗಿದುದು

## ಅಥಾಷ್ಟಪಂಚಾಶದಧಿಕದ್ವಿಶತತಮೋಽಧ್ಯಾಯಃ

|| ಋಷಯ ಊಚುಃ ||

ಕ್ರಿಯಾಯೋಗಃ ಕಥಂ ಸಿಧ್ಯೇದ್ಗೃಹಸ್ಥಾದಿಷು ಸರ್ವದಾ ।
ಜ್ಞಾನಯೋಗಸಹಸ್ರಾದ್ಧಿ ಕರ್ಮಯೋಗೋ ವಿಶಿಷ್ಯತೇ || ೧ ||

|| ಸೂತ ಉವಾಚ ||

ಕ್ರಿಯಾಯೋಗಂ ಪ್ರವಕ್ಷ್ಯಾಮಿ ದೇವತಾರ್ಚಾನುಕೀರ್ತನಂ ।
ಭುಕ್ತಿಮುಕ್ತಿಪ್ರದಂ ಯಸ್ಮಾನ್ನಾನ್ಯಲ್ಲೋಕೇ ವಿಶಿಷ್ಯತೇ || ೨ ||

ಪ್ರತಿಷ್ಠಾಯಾಂ ಸುರಾಣಾಂ ತು ದೇವತಾರ್ಚಾನುಕೀರ್ತನಂ ।
ದೇವಯಜ್ಞೋತ್ಸವಂ ಚಾಪಿ ಬಂಧನಾದ್ಯೇನ ಮುಚ್ಯತೇ || ೩ ||

ವಿಷ್ಣೋಸ್ತಾವತ್ಪ್ರವಕ್ಷ್ಯಾಮಿ ಯಾದೃಗ್ರೂಪಂ ಪ್ರಶಸ್ಯತೇ ।
ಶಂಕಚಕ್ರಧರಂ ಶಾಂತಂ ಪದ್ಮಹಸ್ತಂ ಗದಾಧರಂ || ೪ ||

---

೧ ಋಷಿಗಳು ಹೇಳಿದರು —ಸಾವಿರ ಜ್ಞಾನಯೋಗಗಳಿಗಿಂತ ಕರ್ಮಯೋಗವು ಶ್ರೇಷ್ಠವೆಂದು ಹೇಳುತ್ತಾರಷ್ಟೆ! ಅಂತಹ ಕರ್ಮಯೋಗವು ಗೃಹಸ್ಥ ಮೊದಲಾದವರಿಗೆ ಸಿದ್ಧಿಸುವ ಬಗೆಯೆಂತು ?

೨ ಸೂತಪೌರಾಣಿಕನು ಹೇಳಿದನು —ದೇವತಾಮೂರ್ತಿಗಳ ಸ್ವರೂಪ ವರ್ಣನ ರೂಪವಾದ ಕರ್ಮಯೋಗವನ್ನು ಹೇಳುವೆನು ಐಹಿಕಾಮುಷ್ಮಿಕ ಸುಖಗಳಿಗೂ ಮೋಕ್ಷಕ್ಕೂ ಇದಕ್ಕಿಂತ ಉತ್ತಮವಾದ ಸಾಧನವು ಲೋಕದಲ್ಲಿ ಮತ್ತೊಂದಿಲ್ಲ

೩ ದೇವತಾ ವಿಗ್ರಹಗಳನ್ನು ಪ್ರತಿಷ್ಠೆಮಾಡಬೇಕಾದರೆ ಅವುಗಳ ಸ್ವರೂಪ ವರ್ಣನವು ಆವಶ್ಯಕ ಆ ಮೂರ್ತಿಗಳಿಗೆ ಬ್ರಹ್ಮೋತ್ಸವಾದಿಗಳನ್ನು ನಡೆಸಿ ಸಂಸಾರಬಂಧನದಿಂದ ಪಾರಾಗಬೇಕು

೪-೫ ವಿಷ್ಣುಪ್ರತಿಮೆಯ ರೂಪವು ಹೇಗಿರಬೇಕೆಂಬುದನ್ನು ಹೇಳುವೆನು ಕೈಗಳಲ್ಲಿ ಶಂಖ, ಚಕ್ರ, ಪದ್ಮ ಮತ್ತು ಗದೆಗಳನ್ನು ಧರಿಸಿ ಶಾಂತಮೂರ್ತಿ

ಛತ್ರಾಕಾರಂ ಶಿರಸ್ತಸ್ಯ ಕಂಬುಗ್ರೀವಂ ಶುಭೇಕ್ಷಣಂ ।
ತುಂಗನಾಸಂ ಶುಕ್ತಿಕರ್ಣಂ ಪ್ರಶಾಂತೋರುಭುಜಕ್ರಮಂ ॥ ೫ ॥

ಕ್ವಚಿದಷ್ಟಭುಜಂ ಕುರ್ಯಾಚ್ಚತುರ್ಭುಜಮಥಾಪಿ ವಾ ।
ದ್ವಿಭುಜಶ್ಚಾಪಿ ಕರ್ತವ್ಯೋ ಭವನೇಷು ಪುರೋಧಸಾ ॥ ೬ ॥

ದೇವಸ್ಯಾಷ್ಟಭುಜಸ್ಯಾಸ್ಯ ಯಥಾಸ್ಥಾನಂ ನಿಬೋಧತ ।
ಖಡ್ಗೋ ಗದಾ ಶರಃ ಪದ್ಮಂ ದೇಯಂ ದಕ್ಷಿಣತೋ ಹರೇಃ ॥ ೭ ॥

ಧನುಶ್ಚ ಖೇಟಕಂ ಚೈವ ಶಂಖಚಕ್ರೇ ಚ ವಾಮತಃ ।
ಚತುರ್ಭುಜಸ್ಯ ವಕ್ಷ್ಯಾಮಿ ಯಥೈವಾಯುಧಸಂಸ್ಥಿತಿಂ ॥ ೮ ॥

ದಕ್ಷಿಣೇನ ಗದಾ ಪದ್ಮಂ ವಾಸುದೇವಸ್ಯ ಕಾರಯೇತ್ ।
ವಾಮತಃ ಶಂಖಚಕ್ರೇ ಚ ಕರ್ತವ್ಯೇ ಭೂತಿಮಿಚ್ಛತಾ ॥ ೯ ॥

---

ಯಾಗಿರಬೇಕು ತಲೆ ಕೊಡೆಯ ಆಕಾರವಾಗಿಯೂ, ಕುತ್ತಿಗೆಯು ಶಂಖದ ಆಕಾರವಾಗಿಯೂ ಇರಬೇಕು ಕಣ್ಣುಗಳು ಶುಭವಾಗಿಯೂ, ಮೂಗು ಎತ್ತರವಾಗಿಯೂ, ಕಿವಿಗಳು ಮುತ್ತಿನ ಚಿಪ್ಪಿನಂತೆಯೂ ಇರಬೇಕು ಭುಜಗಳು ಗಂಭೀರವಾಗಿಯೂ ದಪ್ಪವಾಗಿಯೂ ಇರಬೇಕು

೬ ಮನೆಯಲ್ಲಿ ಪೂಜಿಸುವುದಕ್ಕಾಗಿ ನಿರ್ಮಿಸುವ ವಿಷ್ಣುಪ್ರತಿಮೆಗೆ ಶಾಸ್ತ್ರಜ್ಞನು ಎಂಟು, ನಾಲ್ಕು ಅಥವಾ ಎರಡು ತೋಳುಗಳನ್ನು ಇಡಬಹುದು

೭ ವಿಷ್ಣುವಿನ ಅರ್ಚಾಮೂರ್ತಿಗೆ ಎಂಟು ತೋಳುಗಳಿದ್ದರೆ ಕತ್ತಿ, ಗದೆ, ಬಾಣ ಮತ್ತು ಪದ್ಮಗಳನ್ನು ಬಲಗೈಗಳಲ್ಲೂ ಬಿಲ್ಲು, ಗುರಾಣಿ, ಶಂಖ ಮತ್ತು ಚಕ್ರಗಳನ್ನು ಎಡಗೈಗಳಲ್ಲೂ ಇರಿಸಬೇಕು

೮-೯ ನಾಲ್ಕು ತೋಳುಗಳಿದ್ದರೆ ಆಯುಧಗಳು ಇರಬೇಕಾದ ರೀತಿಯನ್ನು ಹೇಳುವೆನು ಕೇಳು ವಾಸುದೇವವಿಗ್ರಹದ ಬಲಗಡೆ ಗದಾಪದ್ಮಗಳೂ ಎಡಗಡೆ ಶಂಖಚಕ್ರಗಳೂ ಇರಬೇಕು ಶ್ರೇಯಸ್ಕಾಮನಾದವನು ಗಮನಿಸಬೇಕಾದ ವಿಷಯವಿದು

ಕೃಷ್ಣಾವತಾರೇ ತು ಗದಾ ವಾಮಹಸ್ತೇ ಪ್ರಶಸ್ಯತೇ ।
ಯಥೇಚ್ಛಯಾ ಶಂಖಚಕ್ರೇ ಚೋಪರಿಷ್ಟಾತ್ಪ್ರಕಲ್ಪಯೇತ್ ॥೧೦॥

ಅಧಸ್ತಾತ್ಪೃಥಿವೀ ದೇವೀ ಕರ್ತವ್ಯಾ ಪಾದಮಧ್ಯತಃ ।
ದಕ್ಷಿಣೇ ಪ್ರಣತಂ ತದ್ವದ್ಗರುತ್ಮಂತಂ ನಿವೇಶಯೇತ್ ॥೧೧॥

ವಾಮತಸ್ತು ಭವೇಲ್ಲಕ್ಷ್ಮೀಃ ಪದ್ಮಹಸ್ತಾ ಶುಭಾನನಾ ।
ಗರುತ್ಮಾನಗ್ರತೋ ವಾಪಿ ಸಂಸ್ಥಾಪ್ಯೋ ಭೂತಿಮಿಚ್ಛತಾ ॥೧೨॥

ಶ್ರೀಶ್ಚ ಪುಷ್ಟಿಶ್ಚ ಕರ್ತವ್ಯೇ ಪಾರ್ಶ್ವಯೋಃ ಪದ್ಮಸಂಯುತೇ ।
ತೋರಣಂ ಚೋಪರಿಷ್ಟಾತ್ತು ವಿದ್ಯಾಧರಸಮನ್ವಿತಂ ॥೧೩॥

ದೇವದುಂದುಭಿಸಂಯುಕ್ತಂ ಗಂಧರ್ವಮಿಥುನಾನ್ವಿತಂ ।
ಪತ್ರವಲ್ಲೀಸಮೋಪೇತಂ ಸಿಂಹವ್ಯಾಘ್ರಸಮನ್ವಿತಂ ॥೧೪॥

---

೧೦ ಕೃಷ್ಣವಿಗ್ರಹದಲ್ಲಾದರೋ ಗದೆಯು ಎಡಗೈಯಲ್ಲಿರುವುದೇ ಪ್ರಶಸ್ತವಾದುದು ಮೇಲ್ಗಡೆ ಶಂಖಚಕ್ರಗಳನ್ನು ಇಷ್ಟಾನುಸಾರವಾಗಿ ಎಡಗೈಯಲ್ಲೋ ಬಲಗೈಯಲ್ಲೋ ಇಡಬಹುದು

೧೧ ಕೆಳಗಡೆ ಪಾದಗಳ ಮಧ್ಯದಲ್ಲಿ ಭೂದೇವಿಯನ್ನು ನಿರ್ಮಿಸಬೇಕು ಬಲಗಡೆ ಗರುಡನು ನಮಸ್ಕರಿಸುತ್ತಿರುವಂತೆ ಕಲ್ಪಿಸಬೇಕು

೧೨ ಲಕ್ಷ್ಮೀದೇವಿಯು ಕೈಯಲ್ಲಿ ತಾವರೆಯನ್ನು ಹಿಡಿದು ಸೌಮ್ಯಮುಖದಿಂದ ಎಡಗಡೆಯಲ್ಲಿರಬೇಕು ಐಶ್ವರ್ಯಕಾಮನು ಗರುಡದೇವನನ್ನು ಮುಂಭಾಗದಲ್ಲಿ ಬೇಕಾದರೂ ನಿಲ್ಲಿಸಬಹುದು

೧೩, ೧೪ ಶ್ರೀಯೂ ಪುಷ್ಟಿಯೂ ತಾವರೆಗಳನ್ನು ಕೈಯಲ್ಲಿ ಹಿಡಿದುಕೊಂಡು ಎರಡು ಪಕ್ಕಗಳಲ್ಲಿಯೂ ಕಂಗೊಳಿಸುತ್ತಿರಬೇಕು ದೇವತೆಗಳು ನಗಾರಿಯನ್ನು ಬಾರಿಸುತ್ತಿರಲು, ಗಂಧರ್ವ ದಂಪತಿಗಳು ಸ್ತುತಿಸುತ್ತಿರಲು, ವಿದ್ಯಾಧರರು ಗಾನಮಾಡುತ್ತಿರಲು, ಎಲೆಗಳೂ ಬಳ್ಳಿಗಳೂ ವಿರಾಜಿಸುತ್ತಿರಲು, ಸಿಂಹವೂ ಹುಲಿಯೂ ಮೆರೆಯುತ್ತಿರಲು, ಕಲ್ಪತೆಗಳು ಹಬ್ಬಿಕೊಂಡಿರಲು, ದೇವಪ್ರಮುಖರು ಸ್ತೋತ್ರಮಾಡುತ್ತಿರಲು, ಆನಂದವನ್ನು ಬೀರುವ ಅಂದವಾದ ತೋರಣವನ್ನು ಮೇಲ್ಗಡೆಯಲ್ಲಿ ನಿರ್ಮಿಸಬೇಕು

ತಥಾ ಕಲ್ಪಲತೋಪೇತಂ ಸ್ತುವದ್ಭಿರಮರೇಶ್ವರೈಃ ।
ಏವಂವಿಧೋ ಭವೇದ್ವಿಷ್ಣೋಃ ಸ್ತ್ರಿಭಾಗೇಣಾಸ್ಯ ಪೀಠಿಕಾ ||೧೫||

ನವತಾಲಪ್ರಮಾಣಂ ತು ದೇವದಾನವಕಿಂನರಾಃ ।
ಅತಃ ಪರಂ ಪ್ರವಕ್ಷ್ಯಾಮಿ ಮಾನೋನ್ಮಾನಂ ವಿಶೇಷತಃ ||೧೬||

ಜಾಲಾಂತರಪ್ರವಿಷ್ಟಾನಾಂ ಭಾನೂನಾಂ ಯದ್ರಜಃ ಸ್ಫುಟಂ ।
ತ್ರಸರೇಣುಃ ಸ ವಿಜ್ಞೇಯೋ ವಾಲಾಗ್ರಂ ತೈರಥಾಷ್ಟಭಿಃ ||೧೭||

ತದಷ್ಟಕೇನ ಲಿಕ್ಷ್ಯಾ ತು ಯೂಕಾ ಲಿಕ್ಷ್ಯಾಷ್ಟಕೈರ್ಮತಾ ।
ಯವೋ ಯೂಕಾಷ್ಟಕಂ ತದ್ವದಷ್ಟಭಿಸ್ತೈಸ್ತ್ರದಂಗುಲಂ ||೧೮||

ಸ್ವಕೀಯಾಂಗುಲಿಮಾನೇನ ಮುಖಂ ಸ್ಯಾದ್ದ್ವಾದಶಾಂಗುಲಂ ।
ಮುಖಮಾನೇನ ಕರ್ತವ್ಯಾ ಸರ್ವಾವಯವಕಲ್ಪನಾ ||೧೯||

---

೧೫ ವಿಷ್ಣುವಿನ ಅರ್ಚಾವಿಗ್ರಹವು ಈ ರೀತಿಯಾಗಿರಬೇಕು ಪೀಠದ ಪ್ರಮಾಣವು ಮೂರರಲ್ಲೊಂದು ಪಾಲಿರುವುದು ದೇವತೆಗಳ, ದಾನವರ ಮತ್ತು ಕಿನ್ನರರ ಪ್ರಮಾಣ ಒಂಬತ್ತು ಚೋಟು

೧೬-೧೭ ಇನ್ನುಮುಂದೆ ಉದ್ದಳತೆಯ ಪ್ರಮಾಣವನ್ನು ವಿವರವಾಗಿ ಹೇಳುವೆನು ಕಿಟಿಕಿಯಿಂದ ಒಳಕ್ಕೆ ಬಂದ ಸೂರ್ಯನ ಕಿರಣಗಳಲ್ಲಿ ಸ್ಫುಟವಾಗಿ ಕಾಣುವ ಧೂಳಿಗೆ ತ್ರಸರೇಣುವೆಂದು ಹೆಸರು ಅವು ಎಂಟು ಕೂಡಿದರೆ ವಾಲಾಗ್ರವೆನಿಸಿಕೊಳ್ಳುವುದು

೧೮ ಎಂಟು ವಾಲಾಗ್ರಗಳಿಗೆ ಒಂದು ಲಿಕ್ಷ್ಯೆಯೂ, ಎಂಟು ಲಿಕ್ಷ್ಯೆಗಳಿಗೆ ಒಂದು ಯೂಕೆಯೂ ಆಗುವುವು ಎಂಟು ಯೂಕೆಗಳಿಗೆ ಒಂದು ಯವವೆಂದೂ ಅಂತಹ ಎಂಟು ಯವಗಳಿಗೆ ಒಂದು ಅಂಗುಲವೆಂದೂ ಹೆಸರು

೧೯ ತನ್ನ ಕೈಬೆರಳಿನ ಅಳತೆಯಲ್ಲಿ ಪ್ರತಿಮೆಯ ಮುಖವು ಹನ್ನೆರಡು ಅಂಗುಲವಿರಬೇಕು ಮುಖದ ಪ್ರಮಾಣಕ್ಕೆ ತಕ್ಕಂತೆ ಉಳಿದ ಎಲ್ಲ ಅವಯವಗಳನ್ನೂ ನಿರ್ಮಿಸಬೇಕು

**ಸೌವರ್ಣೀ ರಾಜತೀ ವಾಪಿ ತಾಮ್ರೀ ರತ್ನಮಯೀ ತಥಾ ।**
**ಶೈಲೀ ದಾರುಮಯೀ ಚಾಪಿ ಲೋಹಸೀಸಮಯೀ ತಥಾ ॥೨೦॥**

**ರೀತಿಕಾ ಧಾತುಯುಕ್ತಾ ಚ ತಾಮ್ರಕಾಂಸ್ಯಮಯೀ ತಥಾ ।**
**ಶುಭದಾರುಮಯೀ ಚಾಪಿ ದೇವತಾರ್ಚಾ ಪ್ರಶಸ್ಯತೇ ॥೨೧॥**

**ಅಂಗುಷ್ಠಪರ್ವಾದಾರಭ್ಯ ವಿತಸ್ತಿರ್ಯಾವದೇವ ತು ।**
**ಗೃಹೇಷು ಪ್ರತಿಮಾ ಕಾರ್ಯಾ ನಾಧಿಕಾ ಶಸ್ಯತೇ ಬುಧೈಃ ॥೨೨॥**

**ಆಷೋಡಶಾ ತು ಪ್ರಾಸಾದೇ ಕರ್ತವ್ಯಾ ನಾಧಿಕಾ ತತಃ ।**
**ಮಧ್ಯೋತ್ತಮಕನಿಷ್ಠಾ ತು ಕಾರ್ಯಾ ವಿತ್ತಾನುಸಾರತಃ ॥೨೩॥**

**ದ್ವಾರೋಚ್ಛ್ರಾಯಸ್ಯ ಯನ್ಮಾನಮಷ್ಟಧಾ ತತ್ತು ಕಾರಯೇತ್ ।**
**ಭಾಗಮೇಕಂ ತತಸ್ತ್ಯಕ್ತ್ವಾ ಪರಿಶಿಷ್ಟಂ ತು ಯದ್ಭವೇತ್ ॥೨೪॥**

---

೨೦-೨೧ ಚಿನ್ನ, ಬೆಳ್ಳಿ, ತಾಮ್ರ, ರತ್ನ, ಮರ, ಕಬ್ಬಿಣ, ಸೀಸ, ಹಿತ್ತಾಳೆ, ಕಾವಿ ಮೊದಲಾದ ಧಾತು, ತಾಮ್ರಮಿಶ್ರವಾದ ಇತರ ಲೋಹ ಮುಂತಾದುವುಗಳಿಂದ ನಿರ್ಮಿತವಾದ ಅರ್ಚಾವಿಗ್ರಹವು ಶ್ಲಾಘ್ಯವಾದುದು.

೨೨ ಮನೆಯಲ್ಲಿ ಆರಾಧಿಸುವ ಪ್ರತಿಮೆ ಹೆಬ್ಬೆರಳಿನ ಗಿಣ್ಣಿನಿಂದ ತೊಡಗಿ ಒಂದು ಗೇಣುದ್ದದವರೆಗೂ ಎತ್ತರವಿರಬಹುದು ಅದಕ್ಕಿಂತ ಹೆಚ್ಚಾಗಿರಬಾರದೆಂದು ಶಾಸ್ತ್ರಜ್ಞರು ಹೇಳುವರು

೨೩ ದೇವಾಲಯಗಳಲ್ಲೀ ಎಂದರೆ ಹದಿನಾರು ಗೇಣುಗಳ ವರೆಗೂ ವಿಗ್ರಹವು ಎತ್ತರವಾಗಿರಬಹುದು ಅದಕ್ಕಿಂತ ಹೆಚ್ಚಾಗಿರಬಾರದು ದ್ರವ್ಯಾನುಕೂಲ್ಯಕ್ಕೆ ತಕ್ಕಂತೆ ಪ್ರತಿಮೆಗಳನ್ನು ಉತ್ತಮ, ಮಧ್ಯಮ ಮತ್ತು ಕನಿಷ್ಠ ಪ್ರಮಾಣದಲ್ಲಿ ನಿರ್ಮಿಸಬೇಕು

೨೪-೨೫ ದೇವಾಲಯದ ಬಾಗಿಲಿನ ಎತ್ತರವನ್ನು ಎಂಟುಭಾಗ ಮಾಡಬೇಕು ಅದರಲ್ಲಿ ಐದು ಭಾಗವನ್ನು ಬಿಟ್ಟು ಉಳಿದ ಏಳು ಭಾಗಗಳಲ್ಲಿ ಎರಡು ಭಾಗದಷ್ಟು

ಭಾಗದ್ವಯೇನ ಪ್ರತಿಮಾ ತ್ರಿಭಾಗೀಕೃತ್ಯ ತತ್ಪುನಃ ।
ಪೀಠಿಕಾ ಭಾಗತಃ ಕಾರ್ಯಾ ನಾತಿನೀಚಾ ನ ಚೋಚ್ಛ್ರಿತಾ ॥೨೫॥

ಪ್ರತಿಮಾಮುಖಮಾನೇನ ನವ ಭಾಗಾನ್ ಪ್ರಕಲ್ಪಯೇತ್ ।
ಚತುರಂಗುಲಾ ಭವೇದ್ಗ್ರೀವಾ ಭಾಗೇನ ಹೃದಯಂ ಪುನಃ ॥೨೬॥

ನಾಭಿಸ್ತಸ್ಮಾದಧಃ ಕಾರ್ಯಾ ಭಾಗೇನೈಕೇನ ಶೋಭನಾ ।
ನಿಮ್ನತ್ವೇ ವಿಸ್ತರತ್ವೇ ಚ ಅಂಗುಲಂ ಪರಿಕೀರ್ತಿತಂ ॥೨೭॥

ನಾಭೇರಧಸ್ತಥಾ ಮೇಢ್ರಂ ಭಾಗೇನೈಕೇನ ಕಲ್ಪಯೇತ್ ।
ದ್ವಿಭಾಗೇನಾಯತಾವೂರೂ ಜಾನುನೀ ಚತುರಂಗುಲೇ ॥೨೮॥

ಜಂಘೇ ದ್ವಿಭಾಗೇ ವಿಖ್ಯಾತೇ ಪಾದೌ ಚ ಚತುರಂಗುಲೌ ।
ಚತುರ್ದಶಾಂಗುಲಸ್ತದ್ವನ್ಮೌಲಿರಸ್ಯ ಪ್ರಕೀರ್ತಿತಃ ॥೨೯॥

---

ಎತ್ತರವಾಗಿ ವಿಗ್ರಹವನ್ನು ರಚಿಸಬೇಕು. ಪೀಠವು ವಿಗ್ರಹದ ಮೂರರಲ್ಲೊಂದು ಪಾಲು ಎತ್ತರವಾಗಿಬೇಕು. ಅದು ಬಲು ತಗ್ಗಾಗಿಯಾಗಲಿ ಬಲು ಎತ್ತರವಾಗಿಯಾಗಲಿ ಇರಬಾರದು.

೨೬. ಮುಖದ ಅಳತೆಯನ್ನು ಅನುಸರಿಸಿ ಅದರ ಒಂಬತ್ತರಷ್ಟು ಉನ್ನತವಾಗಿ ಪ್ರತಿಮೆಯನ್ನು ರಚಿಸಬಹುದು. ಇದು ಮತ್ತೊಂದು ವಿಧ. ಈ ರೀತಿಯಲ್ಲಾದರೆ ಕುತ್ತಿಗೆ ನಾಲ್ಕು ಅಂಗುಲವೂ ಹೃದಯವು ಒಂದು ಭಾಗವೂ ಇರಬೇಕು.

೨೭. ಅದರ ಕೆಳಗೆ ಒಂದು ಭಾಗದ ಅಳತೆಯಷ್ಟು ದೂರದಲ್ಲಿ ಹೊಕ್ಕುಳನ್ನು ನಿರ್ಮಿಸಬೇಕು. ಅದು ಒಂದು ಅಂಗುಲ ಆಳವೂ ಒಂದು ಅಂಗುಲ ಅಗಲವೂ ಇರಬೇಕು.

೨೮. ಹೊಕ್ಕುಳಿನ ಕೆಳಗೆ ಒಂದು ಭಾಗದ ಪ್ರಮಾಣದಲ್ಲಿ ಮೇಢ್ರಾವಯವವನ್ನು ರಚಿಸಬೇಕು. ಬಳಿಕ ಎರಡು ಭಾಗಗಳಷ್ಟು ಉದ್ದವಾಗಿ ತೊಡೆಗಳನ್ನೂ ನಾಲ್ಕು ಅಂಗುಲ ಉದ್ದವಾಗಿ ಮಂಡಿಗಳನ್ನೂ ನಿರ್ಮಿಸಬೇಕು.

೨೯. ಮೊಣಕಾಲು ಎರಡು ಭಾಗಗಳಷ್ಟಿರುವುವು. ಪಾದಗಳು ನಾಲ್ಕು ಅಂಗುಲವೂ ಶಿರಸ್ಸು ಹದಿನಾಲ್ಕು ಅಂಗುಲವೂ ಇರುವುವು.

ಊರ್ಧ್ವಮಾನಮಿದಂ ಪ್ರೋಕ್ತಂ ಪೃಥುತ್ವಂ ಚ ನಿಬೋಧತ ।
ಸರ್ವಾವಯವಮಾನೇಷು ವಿಸ್ತಾರಂ ಶೃಣುತ ದ್ವಿಜಾಃ ॥೩೦॥

ಚತುರಂಗುಲಂ ಲಲಾಟಂ ಸ್ಯಾದೂರ್ಧ್ವಂ ನಾಸಾ ತಥೈವ ಚ ।
ದ್ವ್ಯಂಗುಲಸ್ತು ಹನುರ್ಜ್ಞೇಯ ಓಷ್ಠೌ ದ್ವ್ಯಂಗುಲಸಂಮಿತೌ ॥೩೧॥

ಅಷ್ಟಾಂಗುಲಂ ಲಲಾಟಂ ಚ ತಾವನ್ಮಾತ್ರೇ ಭ್ರುವೌ ಮತೇ ।
ಅರ್ಧಾಂಗುಲಾ ಭ್ರುವೋರ್ಲೇಖಾ ಮಧ್ಯೇ ಧನುರಿವಾನತಾ ॥೩೨॥

ಉನ್ನತಾಗ್ರಾ ಭವೇತ್ಪಾರ್ಶ್ವೇ ಶ್ಲಕ್ಷ್ಣಾ ತೀಕ್ಷ್ಣಾ ಪ್ರಶಸ್ಯತೇ ।
ಅಕ್ಷಿಣೀ ದ್ವ್ಯಂಗುಲಾಯಾಮೇ ತದರ್ಧಂ ಚೈವ ವಿಸ್ತರೇ ॥೩೩॥

ಉನ್ನತೋದರಮಧ್ಯೇ ತು ರಕ್ತಾಂತೇ ಶುಭಲಕ್ಷಣೇ ।
ತಾರಕಾರ್ಧವಿಭಾಗೇನ ದೃಷ್ಟಿಃ ಸ್ಯಾತ್ಪಂಚಭಾಗಿಕಾ ॥೩೪॥

---

೩೦ ಎತ್ತರದ ಅಳತೆಯನ್ನು ಹೇಳಿಯಾಯಿತು ಇನ್ನು ಸುತ್ತಳತೆಯನ್ನು ತಿಳಿಯಿರಿ ಎಲೈ ಬ್ರಾಹ್ಮಣೋತ್ತಮರೇ, ಎಲ್ಲ ಅವಯವಗಳ ವಿಸ್ತಾರವನ್ನೂ ಹೇಳುವೆನು ಕೇಳಿ

೩೧ ಹಣೆಯ ಎತ್ತರ ನಾಲ್ಕಂಗುಲ , ಮೂಗಿನ ಉದ್ದವೂ ಅಷ್ಟೇ ಕೆನ್ನೆ, ತುಟಿ ಇವೆರಡೂ ಎರಡಂಗುಲ ಅಗಲವಾಗಿರಬೇಕು

೩೨ ಹಣೆಯು ಎಂಟು ಅಂಗುಲ ಅಗಲವಿರುವುದು ಹುಬ್ಬುಗಳ ಅಳತೆಯೂ ಅಷ್ಟೇ ಇರಬೇಕು ಹುಬ್ಬುಗಳ ಸಾಲು ಅರ್ಧಂಗುಲ ಅಗಲವಾಗಿ ನಡುವೆ ಬಿಲ್ಲಿನಂತೆ ಬಗ್ಗಿರಬೇಕು

೩೩-೩೪ ಹುಬ್ಬುಗಳ ತುದಿ ಎತ್ತರವಾಗಿಯೂ ನುಣುಪಾಗಿಯೂ ಇರಬೇಕು ಕಣ್ಣುಗಳು ಎರಡಂಗುಲ ಉದ್ದವಾಗಿಯೂ ಒಂದಂಗುಲ ಅಗಲವಾಗಿಯೂ ಇರುವುವು ಮಧ್ಯದಲ್ಲಿ ಉಬ್ಬಾಗಿ ತುದಿಯಲ್ಲಿ ಕೆಂಪಗಿದ್ದರೆ ಅದು ಒಳ್ಳೆಯ ಲಕ್ಷಣವೆನಿಸುವುದು ಕಣ್ಣುಗುಡ್ಡೆಯ ಅರ್ಧಭಾಗವು ಒಟ್ಟು ಕಣ್ಣಿನ ವಿಸ್ತಾರದಲ್ಲಿ ಐದನೆಯ ಒಂದು ಪಾಲಿನಷ್ಟಿರಬೇಕು

ದ್ವ್ಯಂಗುಲಂ ತು ಭ್ರುವೋರ್ಮಧ್ಯೇ ನಾಸಾಮೂಲಮಥಾಂಗುಲಂ ।
ನಾಸಾಗ್ರವಿಸ್ತರಂ ತದ್ವತ್ಪುಟದ್ವಯಮಥಾನತಂ ॥೩೫॥

ನಾಸಾಪುಟಬಿಲಂ ತದ್ವದರ್ಧಾಂಗುಲಮುದಾಹೃತಂ ।
ಕಪೋಲೇ ದ್ವ್ಯಂಗುಲೇ ತದ್ವತ್ಕರ್ಣಮೂಲಾದ್ವಿನಿರ್ಗತೇ ॥೩೬॥

ಹನ್ವಗ್ರಮಂಗುಲಂ ತದ್ವದ್ವಿಸ್ತಾರೋ ದ್ವ್ಯಂಗುಲೋ ಭವೇತ್ ।
ಅರ್ಧಾಂಗುಲಾ ಭ್ರುವೋರಾಜೀ ಪ್ರಣಾಳಸದೃಶೀ ಸಮಾ ॥೩೭॥

ಅರ್ಧಾಂಗುಲಸಮಸ್ತದ್ವದುತ್ತರೋಷ್ಠಸ್ತು ವಿಸ್ತರೇ ।
ನಿಷ್ಪಾವಸದೃಶಂ ತದ್ವನ್ನಾಸಾಪುಟದಲಂ ಭವೇತ್ ॥೩೮॥

ಸೃಕ್ವಿಣೀ ಜ್ಯೋತಿಸ್ತುಲ್ಯೇ ತು ಕರ್ಣಮೂಲಾತ್ಷಡಂಗುಲೇ ।
ಕರ್ಣೌ ತು ಭ್ರೂಸಮೌ ಜ್ಞೇಯಾವೂರ್ಧ್ವಂ ತು ಚತುರಂಗುಲೌ ॥೩೯॥

---

೩೫ ಹುಬ್ಬುಗಳ ಮಧ್ಯದೇಶವು ಎರಡಂಗುಲವೂ, ಮೂಗಿನ ಬುಡವು ಒಂದಂಗುಲವೂ ಇರಬೇಕು ಮೂಗಿನ ತುದಿಯು ವಿಶಾಲವಾಗಿ ಸಮಪ್ರಮಾಣದಲ್ಲಿ ಎರಡು ಕಡೆಗೂ ಬಾಗಿರಬೇಕು

೩೬ ಮೂಗಿನ ಹೊಳ್ಳೆಗಳ ಪ್ರಮಾಣವು ಅರ್ಧಂಗುಲ ಇರಬೇಕು ಕೆನ್ನೆಗಳು ಕಿವಿಯ ಬುಡದಿಂದ ಪ್ರಾರಂಭಿಸಿ ಎರಡಂಗುಲ ಪ್ರಮಾಣವಿರಬೇಕು

೩೭ ಕೆನ್ನೆಯ ಮೇಲ್ಭಾಗವು ಒಂದಂಗುಲ ಅಗಲವೂ ಎರಡಂಗುಲ ಉದ್ದವೂ ಇರುವುದು ಹುಬ್ಬಿನ ಸಾಲು ಅರ್ಧಂಗುಲ ಅಗಲವಾಗಿ ಕಾಲುವೆಯಂತೆ ಒಂದೇ ಸಮನಾಗಿರುವುದು

೩೮ ಮೇಲ್ತುಟಿಯು ಅರ್ಧಂಗುಲ ಅಗಲವಾಗಿರುವುದು ಮೂಗಿನ ಹೊಳ್ಳೆಗಳ ಮೇಲು ಹೊದಿಕೆ ಅವರೆಯ ಕಾಳನ್ನು ಹೋಲುತ್ತಿರುವುದು

೩೯ ಕಟವಾಯಿಗಳು ನಕ್ಷತ್ರಗಳಂತೆ ಬೆಳಗುತ್ತ ಕಿವಿಯ ಬುಡದಿಂದ ಆರಂಗುಲದಷ್ಟು ದೂರದಲ್ಲಿರುವುವು ಕಿವಿಗಳು ಹುಬ್ಬಿನ ಮಟ್ಟಕ್ಕೆ ಇರುವುವು ಮೇಲ್ಮುಖವಾಗಿ ಅವುಗಳ ಅಳತೆ ನಾಲ್ಕು ಅಂಗುಲ

ದ್ವ್ಯಂಗುಳೌ ಕರ್ಣಪಾರ್ಶ್ವೌ ತು ಮಾತ್ರಾಮೇಕಾಂ ತು ವಿಸ್ತರೌ ।
ಕರ್ಣಯೋರುಪರಿಷ್ಟಾಚ್ಚ ಮಸ್ತಕಂ ದ್ವಾದಶಾಂಗುಳಂ ॥೪೦॥

ಲಲಾಟಂ ಪೃಷ್ಠತೋಽರ್ಧೇನ ಪ್ರೋಕ್ತಮಷ್ಟಾದಶಾಂಗುಲಂ ।
ಷಟ್ತ್ರಿಂಶದಂಗುಲಶ್ಚಾಸ್ಯ ಪರಿಣಾಹಃ ಶಿರೋಗತಃ ॥೪೧॥

ಸಕೇಶನಿಚಯೋ ಯಸ್ಯ ದ್ವಿಚತ್ವಾರಿಂಶದಂಗುಲಃ ।
ಕೇಶಾಂತಾದ್ಧನುಕಾ ತದ್ವದಂಗುಲಾನಿ ತು ಷೋಡಶ ॥೪೨॥

ಗ್ರೀವಾಮಧ್ಯಪರೀಣಾಹಶ್ಚತುರ್ವಿಂಶತಿಕಾಂಗುಲಃ ।
ಅಷ್ಟಾಂಗುಲಾ ಭವೇದ್ಗ್ರೀವಾ ಪೃಥುತ್ವೇನ ಪ್ರಶಸ್ಯತೇ ॥೪೩॥

ಸ್ತನಗ್ರೀವಾಂತರಂ ಪ್ರೋಕ್ತಮೇಕತಾಲಂ ಸ್ವಯಂಭುವಾ ।
ಸ್ತನಯೋರಂತರಂ ತದ್ವದ್ದ್ವಾದಶಾಂಗುಲಮಿಷ್ಯತೇ ॥೪೪॥

---

೪೦ ಕಿವಿಗಳ ಪಾರ್ಶ್ವಗಳು ಎರಡು ಅಂಗುಲ ಅಗಲವಾಗಿ ಒಂದು ಮಾತ್ರಾ ಪ್ರಮಾಣದಲ್ಲಿ ವಿಸ್ತರಿಸಿರುವುವು ಅವುಗಳ ಮೇಲ್ಗಡೆ ತಲೆ ಹನ್ನೆರಡು ಅಂಗುಲಗಳ ಪ್ರಮಾಣವಿರುವುದು

೪೧ ಹಿಂದಲೆಯ ಅರ್ಧಭಾಗದಿಂದ ಹಣೆಯ ಅರ್ಧಭಾಗದ ವರೆಗೆ ಅಳತೆ ಮಾಡಿದರೆ ಹದಿನೆಂಟು ಅಂಗುಲಗಳಾಗುವುವು ಎಂದರೆ ಒಟ್ಟು ತಲೆಯ ಸುತ್ತಳತೆ ಮೂವತ್ತಾರು ಅಂಗುಲವೆಂದಾಯಿತು

೪೨ ಕೂದಲುಗಳನ್ನೂ ಸೇರಿಸಿಕೊಂಡರೆ ತಲೆಯ ಸುತ್ತಳತೆ ನಲವತ್ತೆರಡು ಅಂಗುಲವಾಗುತ್ತದೆ ತುದಿಗೂದಲಿನಿಂದ ಮೇಲ್ಗೆನ್ನೆಯುವರೆಗೆ ಹದಿನಾರು ಅಂಗುಲ ದೂರವಿರುವುದು

೪೩ ಕತ್ತಿನ ಮಧ್ಯಭಾಗದ ಸುತ್ತಳತೆ ಇಪ್ಪತ್ತುನಾಲ್ಕಂಗುಲವೂ ವ್ಯಾಸವು ಎಂಟಂಗುಲವೂ ಇರುವುವು

೪೪ ಸ್ತನದಿಂದ ಕತ್ತಿನವರೆಗಿನ ದೂರವು ಒಂದು ಚೋಟಿನಷ್ಟಿರಬೇಕೆಂದೂ, ಎರಡು ಸ್ತನಗಳ ಅಂತರವು ಒಂದು ಗೇಣಿನಷ್ಟಿರಬೇಕೆಂದೂ ಬ್ರಹ್ಮನು ಹೇಳಿರುವನು

ಸ್ತನಯೋರ್ಮಂಡಲಂ ತದ್ವದ್ವ್ಯಂಗುಲಂ ಪರಿಕೀರ್ತಿತಂ ।
ಚೂಚುಕೌ ಮಂಡಲಸ್ಯಾಂತರ್ಯವಮಾತ್ರಾವುಭೌ ಸ್ಮೃತೌ ॥೪೫॥

ದ್ವಿತಾಲಂ ಚಾಪಿ ವಿಸ್ತಾರಾದ್ವಕ್ಷಃಸ್ಥಲಮುದಾಹೃತಂ ।
ಕಕ್ಷೇ ಷಡಂಗುಲೇ ಪ್ರೋಕ್ತೇ ಬಾಹುಮೂಲಸ್ತನಾಂತರೇ ॥೪೬॥

ಚತುರ್ದಶಾಂಗುಲೌ ಪಾದಾವಂಗುಷ್ಠೌ ತ್ರ್ಯಂಗುಳೌ ಸ್ಮೃತೌ ।
ಪಂಚಾಂಗುಲಪರೀಣಾಹಮಂಗುಷ್ಠಾಗ್ರಂ ತಥೋನ್ನತಂ ॥೪೭॥

ಅಂಗುಷ್ಠಕಸಮಾ ತದ್ವದಾಯಾಮಾ ಸ್ಯಾತ್ಪ್ರದೇಶಿನೀ ।
ತಸ್ಯಾಃ ಷೋಡಶಭಾಗೇನ ಹೀಯತೇ ಮಧ್ಯಮಾಂಗುಲೀ ॥೪೮॥

ಅನಾಮಿಕಾಷ್ಟಭಾಗೇನ ಕನಿಷ್ಠಾ ಚಾಪಿ ಹೀಯತೇ ।
ಪರ್ವತ್ರಯೇಣ ಚಾಂಗುಲ್ಯೋ ಗುಲ್ಫೌ ದ್ವ್ಯಂಗುಲಕೌ ಮತೌ ॥೪೯॥

---

೪೫ ಸ್ತನಗಳ ಮಂಡಲವು ಎರಡಂಗುಲವಿರಬೇಕೆಂದೂ, ಅವುಗಳ ತುದಿಯು ಮಂಡಲದ ನಡುವೆ ಒಂದು ಯವಪ್ರಮಾಣವಿರಬೇಕೆಂದೂ ಹೇಳಿದ

೪೬ ಎದೆಯ ವಿಸ್ತಾರವು ಎರಡು ಚೋಟೆರಬೇಕು ತೋಳಿನ ಬುಡದಿಂದ ಸ್ತನದವರೆಗೆ ಕಂಕುಳಿನ ಅಳತೆ ಆರಂಗುಲವಿರುವುದು

೪೭ ಪಾದಗಳು ಹದಿನಾಲ್ಕಂಗಲವೂ, ಹೆಬ್ಬೆರಳುಗಳು ಮೂರಂಗುಲವೂ, ಇರಬೇಕು ಪಾದಗಳ ಅಗಲ ಐದು ಅಂಗುಲ ಹೆಬ್ಬೆರಳಿನ ತುದಿ ಉನ್ನತವಾಗಿರಬೇಕು

೪೮ ತೋರಬೆರಳು ಹೆಬ್ಬೆರಳಿನಷ್ಟೇ ಇರುವುದು ನಡುಬೆರಳು ಇದಕ್ಕಿಂತ ಹದಿನಾರನೆಯ ಒಂದು ಪಾಲಿನಷ್ಟು ಕಿರಿದಾಗಿರುವುದು

೪೯ ಕಿರಿಬೆರಳು ಅದರ ಹತ್ತಿರದ ಬೆರಳಿಗಿಂತ ಎಂಟರಲ್ಲೊಂದು ಪಾಲು ಚಿಕ್ಕದು ಬೆರಳುಗಳಿಗೆ (ಹೆಬ್ಬೆರಳನ್ನು ಬಿಟ್ಟು) ಮೂರು ಗಿಣ್ಣಿರುವುವು ಹಿಮ್ಮಡಿಯ ಗಂಟಿನ ಅಳತೆ ಎರಡಂಗುಲವಿರಬೇಕು

ಪಾರ್ಷ್ಣಿರ್ದ್ವ್ಯಂಗುಲಮಾತ್ರಸ್ತು ಕಲಯೋಚ್ಛ್ರಿತಃ ಪ್ರಕೀರ್ತಿತಃ ।
ದ್ವಿಪರ್ವಾಂಗುಷ್ಠಕಃ ಪ್ರೋಕ್ತಃ ಪರಿಣಾಹಶ್ಚ ದ್ವ್ಯಂಗುಲಃ ॥೫೦॥

ಪ್ರದೇಶಿನೀಪರಿಣಾಹಸ್ತ್ರ್ಯಂಗುಲಃ ಸಮುದಾಹೃತಃ ।
ಕನಿಷ್ಠಿಕಾಷ್ಟಭಾಗೇನ ಹೀಯತೇ ಕ್ರಮಶೋ ದ್ವಿಜಾಃ ॥೫೧॥

ಅಂಗುಲೇನೋಚ್ಛ್ರಯಃ ಕಾರ್ಯೋ ಹ್ಯಂಗುಷ್ಠಸ್ಯ ವಿಶೇಷತಃ ।
ತದರ್ಧೇನ ತು ಶೇಷಾಣಾಮಂಗುಲೀನಾಂ ತಥೋಚ್ಛ್ರಯಃ ॥೫೨॥

ಜಂಘಾಗ್ರೇ ಪರಿಣಾಹಸ್ತು ಅಂಗುಲಾನಿ ಚತುರ್ದಶ ।
ಜಂಘಾಮಧ್ಯೇ ಪರಿಣಾಹಸ್ತಥೈವಾಷ್ಟಾದಶಾಂಗುಲಃ ॥೫೩॥

ಜಾನುಮಧ್ಯೇ ಪರೀಣಾಹ ಏಕವಿಂಶತಿರಂಗುಲಃ ।
ಜಾನೂಚ್ಛ್ರಯೋಽಂಗುಲಃ ಪ್ರೋಕ್ತೋ ಮಂಡಲಂ ತು ತ್ರಿರಂಗುಲಂ ॥

---

೫೦ ಹಿಂಗಾಲಿನ ಅಡಿಯ ಆಕೃತಿ ಎರಡಂಗುಲ ಅದು ಒಂದು ಕಲೆಯಷ್ಟು ಎತ್ತರವಾಗಿರುವುದು ಹೆಬ್ಬೆರಳಿಗೆ ಎರಡು ಗಿಣ್ಣುಗಳಿವೆ ಅದರ ಸುತ್ತಳತೆ ಎರಡಂಗುಲ

೫೧ ತೋರಬೆರಳಿನ ಸುತ್ತಳತೆ ಮೂರಂಗುಲವೆಂದು ಹೇಳಿದೆ ಓ ಬ್ರಾಹ್ಮಣೋತ್ತಮರೇ, ಕಿರಿಬೆರಳು ಸುತ್ತಳತೆಯಲ್ಲಿ ಅದರ ನೆರೆಬೆರಳಿನ ಎಂಟರಲ್ಲೊಂದು ಪಾಲಿನಷ್ಟು ಕಡಿಮೆಯಾಗುವುದು

೫೨ ಹೆಬ್ಬೆರಳನ್ನು ಒಂದಂಗುಲ ಎತ್ತರವಾಗಿಡಬೇಕು ಉಳಿದವುಗಳು ಅದರಲ್ಲಿ ಅರ್ಧದಷ್ಟು ಎತ್ತರವಾಗಿರುವುವು

೫೩ ಮೊಣಕಾಲಿನ ಸುತ್ತಳತೆಯು ತುದಿಯಲ್ಲಿ ಹದಿನಾಲ್ಕು ಅಂಗುಲವೂ, ಮಧ್ಯದಲ್ಲಿ ಹದಿನೆಂಟು ಅಂಗುಲವೂ ಇರುವುದು

೫೪ ಮಂಡಿಯ ನಡುವಣ ಸುತ್ತಳತೆ ಇಪ್ಪತ್ತೊಂದಂಗುಲ ಅದರ ಔನ್ನತ್ಯ ಒಂದು ಅಂಗಲ ಮಂಡಿಯ ಚಿಪ್ಪಿನ ಸುತ್ತಳತೆ ಮೂರಂಗುಲ

ಊರುಮಧ್ಯೇ ಪರೀಣಾಹೋ ಹ್ಯಷ್ಟಾವಿಂಶತಿಕಾಂಗುಲಃ ।
ಏಕತ್ರಿಂಶೋಽಪರಿಷ್ಟಾಚ್ಚ ವೃಷಣೌ ತು ತ್ರಿರಂಗುಲೌ ॥೫೫॥

ದ್ವ್ಯಂಗುಲಂ ಚ ತಥಾ ಮೇಢ್ರಂ ಪರೀಣಾಹೇ ಷಡಂಗುಲಂ ।
ಮಣಿಬಂಧಾದಧೋ ವಿದ್ಯಾತ್ಕೇಶರೇಖಾಸ್ತಥೈವ ಚ ॥೫೬॥

ಮಣಿಬಂಧಪರೀಣಾಹಶ್ಚತುರಂಗುಲ ಇಷ್ಯತೇ ।
ವಿಸ್ತರೇಣ ಭವೇತ್ತದ್ವತ್ಕಟಿರಷ್ಟಾದಶಾಂಗುಲಾ ॥೫೭॥

ದ್ವಾವಿಂಶಕಸ್ತಥಾ ಸ್ತ್ರೀಣಾಂ ಸ್ತನೌ ಚ ದ್ವಾದಶಾಂಗುಲೌ ।
ನಾಭಿಮಧ್ಯಪರೀಣಾಹೋ ದ್ವಿಚತ್ವಾರಿಂಶದಂಗುಲಃ ॥೫೮॥

ಪುರುಷೇ ಪಂಚಪಂಚಾಶತ್ಕಟ್ಯಾಂ ಚೈವ ತು ವೇಷ್ಟನಂ ।
ಕಕ್ಷಯೋರುಪರಿಷ್ಟಾತ್ತು ಸ್ಕಂಧೌ ಪ್ರೋಕ್ತೌ ಷಡಂಗುಲೌ ॥೫೯॥

---

೫೫ ತೊಡೆಯ ಸುತ್ತಳತೆ ಮಧ್ಯದಲ್ಲಿ ಇಪ್ಪತ್ತೆಂಟು ಅಂಗಲವೂ ಮೇಲ್ಗಡೆಯಲ್ಲಿ ಮೂವತ್ತೊಂದು ಅಂಗುಲವೂ ಇರುವುದು ವೃಷಣಗಳ ಪ್ರಮಾಣ ಮೂರಂಗುಲ

೫೬ ಮೇಢ್ರದ ಉದ್ದ ಎರಡಂಗುಲವೂ ಸುತ್ತಳತೆ ಆರಂಗುಲವೂ ಇರುವುವು ಮಣಿಕಟ್ಟಿನ ಕೆಳಗೆ ಕೇಶರೇಖೆಗಳನ್ನು ವಿನ್ಯಾಸಮಾಡಬೇಕು

೫೭ ಮಣಿಕಟ್ಟಿನ ಸುತ್ತಳತೆ ನಾಲ್ಕು ಅಂಗುಲವೂ ಸೊಂಟದ ಅಳತೆ ಹದಿನೆಂಟಂಗುಲವೂ ಇರುವುವು

೫೮ ಸ್ತ್ರೀ ಪ್ರತಿಮೆಗಳ ನಡು ಇಪ್ಪತ್ತೆರಡಂಗುಲವೂ, ಸ್ತನಗಳು ಹನ್ನೆರಡಂಗುಲವೂ, ಹೊಕ್ಕುಳಿನ ಒಳಿಯಲ್ಲಿ ಸುತ್ತಳತೆ ನಲವತ್ತೆರಡಂಗುಲವೂ ಇರುವುವು

೫೯ ಪುರುಷ ವಿಗ್ರಹಗಳ ಸೊಂಟದ ಸುತ್ತಳತೆ ಐವತ್ತೈದಂಗುಲವಿರುವುದು ಕಂಕುಳ ಮೇಲ್ಗಡೆ ಹೆಗಲುಗಳು ಆರಂಗುಲ ಪ್ರಮಾಣವಿರುವುವು

**ಅಷ್ಟಾಂಗುಲಾಂ ತು ವಿಸ್ತಾರೇ ಗ್ರೀವಾಂ ಚೈವ ವಿನಿರ್ದಿಶೇತ್ ।**
**ಪರಿಣಾಹೇ ತಥಾ ಗ್ರೀವಾಂ ಕಲಾ ದ್ವಾದಶ ನಿರ್ದಿಶೇತ್ ॥೬೦॥**

**ಆಯಾಮೋ ಭುಜಯೋಸ್ತದ್ವದ್ದ್ವಿಚತ್ವಾರಿಂಶದಂಗುಲಃ**
**ಕಾರ್ಯಂ ತು ಬಾಹುಶಿಖರಂ ಪ್ರಮಾಣೇ ಷೋಡಶಾಂಗುಲಂ ॥೬೧॥**

**ಊರ್ಧ್ವಂ ಯದ್ಬಾಹುಪರ್ಯಂತಂ ವಿದ್ಯಾದಷ್ಟಾದಶಾಂಗುಲಂ**
**ತಥೈಕಾಂಗುಲಹೀನಂ ತು ದ್ವಿತೀಯಂ ಪರ್ವ ಉಚ್ಯತೇ ॥೬೨॥**

**ಬಾಹುಮಧ್ಯೇ ಪರೀಣಾಹೋ ಭವೇದಷ್ಟಾದಶಾಂಗುಲಃ ।**
**ಷೋಡಶೋಕ್ತಃ ಪ್ರಬಾಹುಸ್ತು ಷಟ್ಕಲೋಽಗ್ರಕರೋ ಮತಃ ॥೬೩॥**

**ಸಪ್ತಾಂಗುಲಂ ಕರತಲಂ ಪಂಚ ಮಧ್ಯಾಂಗುಲೀ ಮತಾ ।**
**ಅನಾಮಿಕಾ ಮಧ್ಯಮಾಯಾಃ ಸಪ್ತಭಾಗೇನ ಹೀಯತೇ ॥೬೪॥**

---

೬೦ ಕುತ್ತಿಗೆಯ ವಿಸ್ತಾರವು ಎಂಟಂಗುಲವೂ ಸುತ್ತಳತೆ ಹನ್ನೆರಡು ಕಲೆಗಳೂ ಇರುವುವು

೬೧ ತೋಳುಗಳ ಉದ್ದ ನಲವತ್ತೆರಡಂಗುಲವೂ, ಹೆಗಲಿನ ಅಳತೆ ಹದಿನಾರಂಗುಲವೂ ಇರಬೇಕು

೬೨ ಬಾಹುಪರ್ಯಂತವಾದ ಮೇಲಿನ ಉದ್ದ ಹದಿನೆಂಟು ಅಂಗುಲವೆಂದೂ, ಎರಡನೆಯ ಸಂಧಿ ದೇಶದ ಅಳತೆ ಹದಿನೇಳು ಅಂಗುಲವೆಂದೂ ತಿಳಿಯಬೇಕು

೬೩ ತೋಳುಗಳ ಮಧ್ಯದ ಸುತ್ತಳತೆ ಹದಿನೆಂಟಂಗುಲವೂ ಮೊಳಕೈಯಲ್ಲಿ ಹದಿನಾರಂಗುಲವೂ, ಮುಂಗೈ ಹತ್ತಿರ ಆರುಕಲೆಗಳೂ ಇರುವುವು

೬೪ ಅಂಗೈಯಳತೆ ಏಳಂಗುಲವೆಂದೂ ಉದ್ದದಲ್ಲಿ ನಡುಬೆರಳಿನ ಉದ್ದ ಐದಂಗುಲವೆಂದೂ ತಿಳಿಯಬೇಕು ಉಂಗುರದ ಬೆರಳು ನಡುಬೆರಳಿಗಿಂತ ಏಳನೆಯ ಒಂದು ಪಾಲಿನಷ್ಟು ಕಡಿಮೆಯಾಗಿರುವುದು

ತಸ್ಯಾಸ್ತು ಪಂಚಭಾಗೇನ ಕನಿಷ್ಠಾ ಪರಿಹೀಯತೇ ।
ಮಧ್ಯಮಾಯಾಸ್ತು ಹೀನಾ ವೈ ಪಂಚಭಾಗೇನ ತರ್ಜನೀ ॥೬೫॥

ಅಂಗುಷ್ಠಸ್ತರ್ಜನೀಮೂಲಾದಧಃ ಪ್ರೋಕ್ತಸ್ತು ತತ್ಸಮಃ ।
ಅಂಗುಷ್ಠಪರಿಣಾಹಸ್ತು ವಿಜ್ಞೇಯಶ್ಚತುರಂಗುಲಃ ॥೬೬॥

ಶೇಷಾಣಾಮಂಗುಲೀನಾಂ ತು ಭಾಗೋ ಭಾಗೇನ ಹೀಯತೇ ।
ಮಧ್ಯಮಾಪರ್ವಮಾನಂ ತು ಅಂಗುಲದ್ವಯಮಾಯತಂ ॥೬೭॥

ಯವೋ ಯವೇನ ಸರ್ವಾಸಾಂ ತಸ್ಯಾಸ್ತಸ್ಯಾಃ ಪ್ರಹೀಯತೇ ।
ಅಂಗುಷ್ಠಪರ್ವಮಧ್ಯಂ ತು ತರ್ಜನ್ಯಾ ಸದೃಶಂ ಭವೇತ್ ॥೬೮॥

ಯವದ್ವಯಾಧಿಕಂ ತದ್ವದಗ್ರಪರ್ವ ಉದಾಹೃತಂ ।
ಪೂರ್ವಾರ್ಧೇ ತು ನಖಾ ವಿದ್ಯಾದಂಗುಲೀಷು ಸಮಂತತಃ । ॥೬೯॥

---

೬೫ ಉದ್ದದಲ್ಲಿ ಕಿರಿಬೆರಳು ಅನಾಮಿಕಯ ಐದನೇ ಒಂದು ಪಾಲಿನಷ್ಟು, ತೋರಬೆರಳು ನಡುಬೆರಳಿನ ಐದನೇ ಒಂದು ಪಾಲಿನಷ್ಟು ಕಡಿಮೆಯಾಗಿರುವುವು

೬೬ ಹೆಬ್ಬೆರಳು ತೋರಬೆರಳಿನ ಬುಡಕ್ಕಿಂತ ಕೆಳಮಟ್ಟದಲ್ಲಿ ಅದಕ್ಕೆ ಸಮನಾಗಿರುವುದು ಅದರ ಸುತ್ತಳತೆ ನಾಲ್ಕಂಗುಲವೆಂದು ತಿಳಿಯಬೇಕು

೬೭ ಉಳಿದ ಬೆರಳುಗಳ ಗಿಣ್ಣು ಒಂದಕ್ಕಿಂತ ಮತ್ತೊಂದು ಅಳತೆಯಲ್ಲಿ ಕಿರಿದಾಗುವುದು ನಡುಬೆರಳಿನ ಗಿಣ್ಣಿನ ಉದ್ದ ಎರಡಂಗುಲ

೬೮ ಎಲ್ಲ ಬೆರಳುಗಳ ಗಿಣ್ಣಿನ ಅಳತೆಯೂ ಅದರದರ ಮಗ್ಗುಲಬೆರಳಿಗಿಂತ ಯವಪ್ರಮಾಣದಷ್ಟು ಕಡಿಮೆಯಾಗುತ್ತದೆ ಹೆಬ್ಬೆರಳಿನ ಗಿಣ್ಣಿನ ಮಧ್ಯಭಾಗವು ತೋರಬೆರಳಿನ ಬುಡದ ಸಮಕ್ಕೆ ಬರುತ್ತದೆ

೬೯ ಬುಡದ ಗಿಣ್ಣು ಮಾತ್ರ ಕಿರಿಬೆರಳಿನಿಂದ ಪ್ರಾರಂಭಿಸಿ ಒಂದಕ್ಕಿಂತ ಮತ್ತೊಂದು ಎರಡು ಯವಪ್ರಮಾಣದಷ್ಟು ಹೆಚ್ಚುವುದು ಬೆರಳುಗಳ ತುದಿಗಿಣ್ಣಿನ ಮುಂದಿನ ಅರ್ಧಭಾಗದಲ್ಲಿ ಉಗುರುಗಳಿರುವುವು

ಸ್ನಿಗ್ಧಂ ಶ್ಲಕ್ಷ್ಣಂ ಪ್ರಕುರ್ವೀತ ಈಷದ್ರಕ್ತಂ ತಥಾಗ್ರತಃ ।
ನಿಮ್ನಪೃಷ್ಠಂ ಭವೇನ್ಮಧ್ಯೇ ಪಾರ್ಶ್ವತಃ ಕಲಯೋಚ್ಛ್ರಿತಂ ॥೭೦॥

ತಥೈವ ಕೇಶವಲ್ಲೀಯುಂ ಸ್ಕಂಧೋಪರಿ ದಶಾಂಗುಲಾ ।
ಸ್ತ್ರಿಯಃ ಕಾರ್ಯಾಸ್ತು ತನ್ವಂಗ್ಯಃ ಸ್ತನೋರುಜಘನಾಧಿಕಾಃ ॥೭೧॥

ಚತುರ್ದಶಾಂಗುಲಾಯಾಮಮುದರಂ ತಾಸು ನಿರ್ದಿಶೇತ್ ।
ನಾನಾಭರಣಸಂಪನ್ನಾಃ ಕಿಂಚಿಚ್ಛ್ಲಕ್ಷ್ಣಭುಜಾಸ್ತತಃ ॥೭೨॥

ಕಿಂಚಿದ್ದೀರ್ಘಂ ಭವೇದ್ವಕ್ತ್ರಮಲಕಾವಲಿರುತ್ತಮಾ ।
ನಾಸಾ ಗ್ರೀವಾ ಲಲಾಟಂ ಚ ಸಾರ್ಧಮಾತ್ರಂ ತ್ರಿರಂಗುಲಂ ॥೭೩॥

ಅಧ್ಯರ್ಧಾಂಗುಲವಿಸ್ತಾರಃ ಶಸ್ಯತೇಽಧರಪಲ್ಲವಃ ।
ಅಧಿಕಂ ನೇತ್ರಯುಗ್ಮಂ ತು ಚತುರ್ಭಾಗೇನ ನಿರ್ದಿಶೇತ್ ॥
ಗ್ರೀವಾವಳಿಶ್ಚ ಕರ್ತವ್ಯಾ ಕಿಂಚಿದರ್ಧಾಂಗುಲೋಚ್ಛ್ರಯಾ ॥೭೪॥

---

೭೦ ಉಗುರನ್ನು ನುಣುಪಾಗಿಯೂ ಹೊಳಪಾಗಿಯೂ ರಚಿಸಬೇಕು ತುದಿಯಲ್ಲಿ ಸ್ವಲ್ಪ ಕೆಂಪಗಿರಬೇಕು ಮೇಲ್ಭಾಗ ತಗ್ಗಾಗಿರುವುದು ಎರಡು ಪಕ್ಕಗಳಿಗಿಂತ ಮಧ್ಯಭಾಗವು ಕಲೆಯಷ್ಟು ಉಬ್ಬಿರುವುದು

೭೧ ಕೇಶಪಾಶವು ಹೆಗಲಿನ ಮೇಲೆ ಹತ್ತು ಅಂಗುಲದವರೆಗೆ ಪ್ರಸರಿಸಿರಬೇಕು ಸ್ತ್ರೀವಿಗ್ರಹಗಳ ಅಂಗಗಳು ತೆಳ್ಳಗಿರಬೇಕು, ಆದರೆ ಸ್ತನಗಳೂ, ತೊಡೆಗಳೂ, ನಿತಂಬಗಳೂ ಪುಷ್ಟವಾಗಿರಬೇಕು

೭೨ ಅವುಗಳ ಉದರದೇಶವು ಹದಿನಾಲ್ಕಂಗುಲ ವಿಸ್ತಾರವಾಗಿ ಇರಬೇಕು ಬಗೆಬಗೆಯ ಒಡವೆಗಳಿಂದ ಅಲಂಕರಿಸಿ ತೋಳುಗಳನ್ನು ಪುರುಷ ವಿಗ್ರಹಗಳ ತೋಳುಗಳಿಗಿಂತ ಸ್ವಲ್ಪ ನಯವಾಗಿ ಮಾಡಬೇಕು

೭೩ ಮುಖವು ಸ್ವಲ್ಪ ನೀಳವಾಗಿಯೂ, ಮುಂಗುರುಳು ಮನೋಹರವಾಗಿಯೂ ಇರಬೇಕು ಮೂಗು, ಕೊರಳು, ಹಣೆ ಇವುಗಳು ಮೂರುವರೆ ಅಂಗುಲ ಉದ್ದವಾಗಿರುವುವು

೭೪ ಚಿಗುರಿನಂತಿರುವ ತುಟಿ ಅರ್ಧಂಗುಲಕಿಂತ ಸ್ವಲ್ಪ ಹೆಚ್ಚು ಅಗಲವಾಗಿರುವುದು ಕಣ್ಣುಗಳು ಇವರ ನಾಲ್ಕು ಪಾಲಿಗಿಂತ ಸ್ವಲ್ಪ ಅಧಿಕವಾಗಿಯೇ ವಿಶಾಲವಾಗಿರಬೇಕು ಕುತ್ತಿಗೆಯ ವಳಗಳನ್ನು ಹೆಚ್ಚುಕಡಿಮೆ ಅರೆಯಂಗುಲ ಉಬ್ಬಾಗಿರುವಂತೆ ನಿರ್ಮಿಸಬೇಕು

**ಏವಂ ನಾರೀಷು ಸರ್ವಾಸು ದೇವಾನಾಂ ಪ್ರತಿಮಾಸು ಚ ।**
**ನವತಾಲಮಿದಂ ಪ್ರೋಕ್ತಂ ಲಕ್ಷಣಂ ಪಾಪನಾಶನಂ ॥೭೫॥**

**ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ದೇವಾರ್ಚಾನುಕೀರ್ತನೇ ಪ್ರಮಾಣಾನು ಕೀರ್ತನಂ ನಾಮಾಷ್ಟಪಂಚಾಶದಧಿಕದ್ವಿಶತತಮೋಽಧ್ಯಾಯಃ**

---

೭೫ ಹೀಗೆ ದೇವತೆಗಳ ಮತ್ತು ದೇವತಾಸ್ತ್ರೀಯರ ಪ್ರತಿಮೆಗಳ ಲಕ್ಷಣ ವನ್ನು ಹೇಳಿದೆ ಇದು ಪಾಪ ಪರಿಹಾರಕವಾದುದು ಒಂಬತ್ತು ಚೋಟಳತೆಯ ವಿಗ್ರಹಗಳಿಗೆ ಹಿಂದೆ ಹೇಳಿದ ಪ್ರಮಾಣಗಳು ಅನ್ವಯಿಸುವುವು

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ದೇವತಾ ವಿಗ್ರಹಗಳ ಪ್ರಮಾಣವನ್ನು ಹೇಳಿದೆ

ಜ್ಞಾನಯೋಗಕ್ಕಿಂತ ಕರ್ಮಯೋಗವು ಸಾವಿರಪಾಲು ಮೇಲಾದುದು ದೇವತಾವಿಗ್ರಹಗಳ ಸ್ವರೂಪವನ್ನೂ ಪ್ರಮಾಣವನ್ನೂ ತಿಳಿದು, ಅವುಗಳನ್ನು ಪ್ರತಿಷ್ಠೆಮಾಡಿ, ಅವುಗಳಿಗೆ ಉತ್ಸವಗಳನ್ನು ನಡೆಸಿ ಸಂಸಾರದ ಬಂಧನದಿಂದ ಮನುಷ್ಯನು ಪಾರಾಗಬೇಕು ವಿಗ್ರಹಗಳನ್ನು ಲೋಹದಿಂದಲೂ ಮರದಿಂದಲೂ ಶಿಲೆಯಿಂದಲೂ ನಿರ್ಮಿಸಬಹುದು ವಿಷ್ಣುಪ್ರತಿಮೆಗೆ ಎರಡು, ನಾಲ್ಕು ಅಥವಾ ಎಂಟು ಕೈಗಳಿರಬಹುದು ಅವತಾರಗಳ ಪ್ರಭೇದವನ್ನು ಅನುಸರಿಸಿ ರೂಪವು ವ್ಯತ್ಯಾಸವಾಗುವುದು ದೇವತಾವಿಗ್ರಹಗಳನ್ನು ಒಂಬತ್ತು ಚೋಟುದ್ದವಾಗಿ ನಿರ್ಮಿಸಬೇಕು ಈ ಎತ್ತರಕ್ಕೆ ತಕ್ಕಂತೆ ಪ್ರತಿಯೊಂದು ಅವಯವದ ಪ್ರಮಾಣ ವನ್ನೂ ಈ ಅಧ್ಯಾಯದಲ್ಲಿ ಹೇಳಿದೆ ಪುರುಷವಿಗ್ರಹಗಳಿಗೂ ಸ್ತ್ರೀವಿಗ್ರಹಗಳಿಗೂ ಆಕೃತಿಯಲ್ಲಿಯೂ ಅವಯವಪ್ರಮಾಣದಲ್ಲೂ ವ್ಯತ್ಯಾಸಗಳಿರುವುವು

ಶ್ರೀಮತ್ಸ್ಯಮಹಾಪುರಾಣದಲ್ಲಿ ದೇವತಾರ್ಚಾನುಕೀರ್ತನದಲ್ಲಿ ಪ್ರಮಾಣಾನು ಕೀರ್ತನವೆಂಬ ಇನ್ನೂರೈವತ್ತೆಂಟನೆಯ ಅಧ್ಯಾಯವು ಮುಗಿದುದು

## ಅಥ ನವಪಂಚಾಶದಧಿಕದ್ವಿಶತತಮೋಽಧ್ಯಾಯಃ

|| ಸೂತ ಉವಾಚ ||

ಅತಃ ಪರಂ ಪ್ರವಕ್ಷ್ಯಾಮಿ ದೇವಾಕಾರಾನ್ವಿಶೇಷತಃ ।
ದಶತಾಲಃ ಸ್ಮೃತೋ ರಾಮೋ ಬಲಿರ್ವೈರೋಚನಿಸ್ತಥಾ || ೧ ||

ವಾರಾಹೋ ನಾರಸಿಂಹಶ್ಚ ಸಪ್ತತಾಲಸ್ತು ವಾಮನಃ ।
ಮತ್ಸ್ಯಕೂರ್ಮೌ ಚ ನಿರ್ದಿಷ್ಟೌ ಯಥಾಶೋಭಂ ಸ್ವಯಂಭುವಾ || ೨ ||

ಅತಃ ಪರಂ ಪ್ರವಕ್ಷ್ಯಾಮಿ ರುದ್ರಾದ್ಯಾಕಾರಮುತ್ತಮಂ ।
ಸ ಪೀನೋರುಭುಜಸ್ಕಂಧಸ್ತಪ್ತಕಾಂಚನಸಪ್ರಭಃ || ೩ ||

ಶುಕ್ಲೋಽರ್ಕರಶ್ಮಿಸಂಘಾತಶ್ಚಂದ್ರಾಂಕಿತಜಟೋ ವಿಭುಃ ।
ಜಟಾಮುಕುಟಧಾರೀ ಚ ಹ್ಯಷ್ಟವರ್ಷಾಕೃತಿಶ್ಚ ಸಃ || ೪ ||

---

೧ ಸೂತಪೌರಾಣಿಕನು ಹೇಳಿದನು —ಇನ್ನು ಮುಂದೆ ದೇವತಾ ವಿಗ್ರಹಗಳ ಆಕಾರವನ್ನು ವಿಶೇಷರೂಪದಿಂದ ಹೇಳುವೆನು ರಾಮನೂ, ವಿರೋಚನನ ಪುತ್ರನಾದ ಬಲಿಯೂ ಹತ್ತು ಚೋಟು ಎತ್ತರವಾಗಿರುವರು

೨ ವರಾಹ ವತ್ತು ನರಸಿಂಹ ಇವರ ಔನ್ನತ್ಯವೂ ಸಹ ಹತ್ತುಚೋಟುಗಳೇ, ವಾಮನನಾದರೋ ಏಳು ಚೋಟುಗಳ ಉದ್ದವಿರುವನು ಮತ್ಸ್ಯಮೂರ್ತಿಯನ್ನೂ, ಕೂರ್ಮಮೂರ್ತಿಯನ್ನೂ ಅಂದವಾಗಿರುವಂತೆ ಬೇಕಾದಷ್ಟು ಎತ್ತರವಾಗಿ ನಿರ್ಮಿಸಬಹುದೆಂದು ಬ್ರಹ್ಮನು ಹೇಳಿರುವನು

೩ ಇನ್ನುಮುಂದೆ ಶಂಕರ, ಉಮಾಮಹೇಶ್ವರ ಮುಂತಾದ ದೇವತಾಮೂರ್ತಿಗಳ ಆಕಾರವನ್ನು ಹೇಳುವೆನು ಪರಮೇಶ್ವರನ ತೋಳುಗಳೂ ಹೆಗಲುಗಳೂ ಪುಷ್ಟವಾಗಿ ದೊಡ್ಡವಾಗಿರುವುವು ದೇಹದ ಕಾಂತಿಯು ಪುಟವಿಟ್ಟ ಚಿನ್ನದ ಕಾಂತಿಯನ್ನು ಹೋಲುತ್ತದೆ

೪ ಆ ಭಗವಂತನು ಬೆಳ್ಳಗೆ ಸೂರ್ಯಕಿರಣಗಳ ರಾಶಿಯಂತೆ ಇರುವನು ಜಡೆಯಲ್ಲಿ ಚಂದ್ರನನ್ನು ಧರಿಸಿರುವನು ಜಡೆಯನ್ನು ಹೊತ್ತು ಕಿರೀಟವನ್ನು ಹಾಕಿಕೊಂಡಿರುವನು ಎಂಟುವರ್ಷದ ಬಾಲಕನ ಆಕಾರದಿಂದಿರುವನು

ಬಾಹೂ ವಾರಣಹಸ್ತಾಭೌ ವೃತ್ತಜಂಘೋರುಮಂಡಲಃ ।
ಊರ್ಧ್ವಕೇಶಶ್ಚ ಕರ್ತವ್ಯೋ ದೀರ್ಘಾಯತವಿಲೋಚನಃ ॥ ೫ ॥

ವ್ಯಾಘ್ರಚರ್ಮಪರೀಧಾನಃ ಕಟಿಸೂತ್ರತ್ರಯಾನ್ವಿತಃ ।
ಹಾರಕೇಯೂರಸಂಪನ್ನೋ ಭುಜಂಗಾಭರಣಸ್ತಥಾ ॥ ೬ ॥

ಬಾಹವಶ್ಚಾಪಿ ಕರ್ತವ್ಯಾ ನಾನಾಭರಣಭೂಷಿತಾಃ ।
ಪೀನೋರುಗಂಡಫಲಕಃ ಕುಂಡಲಾಭ್ಯಾಮಲಂಕೃತಃ ॥ ೭ ॥

ಆಜಾನುಲಂಬಬಾಹುಶ್ಚ ಸೌಮ್ಯಮೂರ್ತಿಃ ಸುಶೋಭನಃ ।
ಖೇಟಕಂ ವಾಮಹಸ್ತೇ ತು ಖಡ್ಗಂ ಚೈವ ತು ದಕ್ಷಿಣೇ ॥ ೮ ॥

ಶಕ್ತಿಂ ದಂಡಂ ತ್ರಿಶೂಲಂ ಚ ದಕ್ಷಿಣೇಷು ನಿವೇಶಯೇತ್ ।
ಕಪಾಲಂ ವಾಮಪಾರ್ಶ್ವೇ ತು ನಾಗಂ ಖಟ್ವಾಂಗಮೇವ ಚ ॥ ೯ ॥

---

೫ ಆತನ ತೋಳುಗಳು ಆನೆಯ ಸೊಂಡಲಿನಂತಿವೆ ಮೊಣಕಾಲೂ ತೊಡೆಗಳೂ ಗುಂಡಗೆ ಅಂದವಾಗಿವೆ ತಲೆಗೂದಲು ಮೇಲ್ಗಡೆಗೆ ಕೆದರಿಕೊಂಡಿದೆ ಕಣ್ಣುಗಳು ದೀರ್ಘವಾಗಿಯೂ ಅಗಲವಾಗಿಯೂ ಇವೆ ಈ ರೀತಿಯಾಗಿ ರುದ್ರನ ಮೂರ್ತಿಯನ್ನು ಕಲ್ಪಿಸಬೇಕು

೬ ಆ ಮಹಾದೇವನು ಹುಲಿಯ ಚರ್ಮವನ್ನು ಉಟ್ಟಿದ್ದಾನೆ ಮೂರೆಳೆಯ ಉಡಿದಾರವನ್ನು ಕಟ್ಟಿದ್ದಾನೆ ಹಾರವನ್ನೂ ತೋಳ್ಬಳೆಗಳನ್ನೂ ಧರಿಸಿದ್ದಾನೆ ಹಾವಿನ ಒಡವೆಗಳನ್ನು ತೊಟ್ಟಿದ್ದಾನೆ

೭ ಬಾಹುಗಳು ಬಗೆಬಗೆಯ ತೊಡಿಗೆಗಳಿಂದ ಅಲಂಕೃತವಾದಂತೆಯೂ, ಕಪೋಲಗಳು ಪುಷ್ಟವಾಗಿ ವಿಸ್ತಾರವಾಗಿರುವಂತೆಯೂ, ಕಿವಿಗಳು ಕುಂಡಲಗಳಿಂದ ಭೂಷಿತವಾಗಿರುವಂತೆಯೂ ಪರಮೇಶ್ವರನ ವಿಗ್ರಹವನ್ನು ರಚಿಸಬೇಕು

೮-೯ ತೋಳುಗಳು ಉದ್ದವಾಗಿ ಮೊಣಕಾಲುಗಳನ್ನು ಮುಟ್ಟುತ್ತವೆ ಆಕಾರವು ಸೌಮ್ಯವಾಗಿ ಮಂಗಳಮಯವಾಗಿದೆ ಎಡಗೈಯಲ್ಲಿ ಗುರಾಣಿಯೂ ಬಲಗೈಯಲ್ಲಿ ಕತ್ತಿಯೂ ಮೆರೆಯುತ್ತಿವೆ ಇವುಗಳಲ್ಲದೆ ಬಲಗಡೆ ಉಳಿದ ಕೈಗಳಲ್ಲಿ ಶಕ್ತಿ, ದಂಡ, ತ್ರಿಶೂಲಗಳನ್ನೂ ಎಡಗಡೆಯವುಗಳಲ್ಲಿ ಕಪಾಲ, ಸರ್ಪ, ಖಟ್ವಾಂಗ ವೆಂಬ ಆಯುಧ ಇವುಗಳನ್ನೂ ಧರಿಸಿದ್ದಾನೆ ಇದು ಶಂಕರವಿಗ್ರಹದ ಆಕೃತಿ

ಏಕಶ್ಚ ವರದೋ ಹಸ್ತಸ್ತಥಾಕ್ಷವಲಯೋಽಪರಃ ।
ವೈಶಾಖಂ ಸ್ಥಾನಕಂ ಕೃತ್ವಾ ನೃತ್ಯಾಭಿನಯಸಂಸ್ಥಿತಃ ॥೧೦॥

ನೃತ್ಯೇ ದಶಭುಜಃ ಕಾರ್ಯೋ ಗಜಚರ್ಮಧರಸ್ತಥಾ ।
ತಥಾ ತ್ರಿಪುರದಾಹೇ ಚ ಬಾಹವಃ ಷೋಡಶೈವ ತು ॥೧೧॥

ಶಂಖಂ ಚಕ್ರಂ ಗದಾ ಶಾರ್ಙ್ಗಂ ಘಂಟಾ ತತ್ರಾಧಿಕಾ ಭವೇತ್ ।
ತಥಾ ಧನುಃ ಪಿನಾಕಂ ಚ ಶರೋ ವಿಷ್ಣುಮಯಸ್ತಥಾ ॥೧೨॥

ಚತುರ್ಭುಜೋಽಷ್ಟಬಾಹುರ್ವಾ ಜ್ಞಾನಯೋಗೇಶ್ವರೋ ಮತಃ ।
ತೀಕ್ಷ್ಣನಾಸಾಗ್ರದಶನಃ ಕರಾಲವದನೋ ಮಹಾನ್ ॥೧೩॥

ಭೈರವಃ ಶಸ್ಯತೇ ಲೋಕೇ ಪ್ರತ್ಯಾಯತನಸಂಸ್ಥಿತಃ ।
ನ ಮೂಲಾಯತನೇ ಕಾರ್ಯೋ ಭೈರವಸ್ತು ಭಯಂಕರಃ ॥೧೪॥

---

೧೦ ತಾಂಡವೇಶ್ವರಮೂರ್ತಿಯ ಲಕ್ಷಣವು ಇಂತಿರುವುದು —ಆ ದೇವನು ಒಂದು ಕೈಯಲ್ಲಿ ವರವನ್ನು ನೀಡುತ್ತಿರುವನು, ಮತ್ತೊಂದರಲ್ಲಿ ಜಪಸರವನ್ನು ಹಿಡಿದಿರುವನು ವೈಶಾಖವೆಂಬ ನಿಲವಿನಲ್ಲಿ ನಿಂತು ನರ್ತನವನ್ನು ಅಭಿನಯಿಸುತ್ತಿರುವನು ಹೀಗೆ ಹತ್ತುತೋಳುಗಳಿಂದ ಕೂಡಿ, ಗಜಚರ್ಮವನ್ನು ಹೊದೆದು ನರ್ತನಮಾಡುತ್ತಿರುವಂತೆ ನಟರಾಜನ ಮೂರ್ತಿಯನ್ನು ನಿರ್ಮಿಸಬೇಕು

೧೧-೧೨ ತ್ರಿಪುರದಾಹಮೂರ್ತಿಗೆ ಹದಿನಾರು ತೋಳುಗಳು ಶಂಖ, ಚಕ್ರ, ಗದೆ, ಶಾರ್ಙ್ಗ, ಘಂಟೆ, ಪಿನಾಕವೆಂಬ ಬಿಲ್ಲು, ವಿಷ್ಣುಮಯವಾದ ಬಾಣ ಇವಿಷ್ಟನ್ನೂ ಅಲ್ಲಿಗೆ ಹೆಚ್ಚಾಗಿ ಸೇರಿಸಬೇಕು

೧೩-೧೪ ನಾಲ್ಕು ಅಥವಾ ಎಂಟು ತೋಳುಗಳಿಂದ ಕೂಡಿದ ಈಶ್ವರ ವಿಗ್ರಹವನ್ನು ಜ್ಞಾನಯೋಗೇಶ್ವರಮೂರ್ತಿಯೆನ್ನುವರು ಮೂಗೂ ಹಲ್ಲಿನ ತುದಿಗಳೂ ಮೊನಚಾಗಿದ್ದು, ಮುಖವು ಬಹು ಭಯಂಕರವಾಗಿರುವ ಪರಮೇಶ್ವರನ ರೂಪವುಭೈರವ ರೂಪವೆಂದು ಲೋಕದಲ್ಲಿ ಪ್ರಸಿದ್ಧವಾಗಿರುವುದು ಭಯಂಕರವಾದ ಈ ವಿಗ್ರಹವನ್ನು ಪ್ರತ್ಯೇಕವಾದ ದೇವಾಲಯಗಳಲ್ಲಿ ಹೊರತು ಬೇರೆ ಪ್ರಧಾನ ವಿಗ್ರಹವು ಇರತಕ್ಕ ಆಲಯಗಳಲ್ಲಿ ಸ್ಥಾಪಿಸಬಾರದು

**ನಾರಸಿಂಹೋ ವರಾಹೋ ವಾ ತಥಾನ್ಯೇಽಪಿ ಭಯಂಕರಾಃ ।**
**ನಾಧಿಕಾಂಗಾ ನ ಹೀನಾಂಗಾಃ ಕರ್ತವ್ಯಾ ದೇವತಾಃ ಕ್ವಚಿತ್ ॥೧೫॥**

**ಸ್ವಾಮಿನಂ ಘಾತಯೇನ್ನ್ಯೂನಾ ಕರಾಲವದನಾ ತಥಾ ।**
**ಅಧಿಕಾ ಶಿಲ್ಪಿನಂ ಹನ್ಯಾತ್ಕೃಶಾ ಚೈವಾರ್ಥನಾಶಿನೀ ॥೧೬॥**

**ಕೃಶೋದರೀ ತು ದುರ್ಭಿಕ್ಷಂ ನಿರ್ಮಾಂಸಾ ಧನನಾಶಿನೀ**
**ವಕ್ರನಾಸಾ ತು ದುಃಖಾಯ ಸಂಕ್ಷಿಪ್ತಾಂಗೀ ಭಯಂಕರೀ ॥೧೭॥**

**ಚಿಪಿಟಾ ದುಃಖಶೋಕಾಯ ಅನೇತ್ರಾ ನೇತ್ರನಾಶಿನೀ ।**
**ದುಃಖದಾ ಹೀನವಕ್ತ್ರಾ ತು ಪಾಣಿಪಾದಕೃಶಾ ತಥಾ ॥೧೮॥**

---

೧೫ ನರಸಿಂಹ, ವರಾಹ, ಮೊದಲಾದ ಉಗ್ರಾಕಾರದ ಮೂರ್ತಿಗಳನ್ನು ನಿರ್ಮಿಸುವಾಗ ಅವುಗಳ ಅವಯವಗಳಲ್ಲಿ ಎಂದಿಗೂ ಹೆಚ್ಚು ಕಡಿಮೆ ಮಾಡಬಾರದು

೧೬ ಉಗ್ರಮುಖವುಳ್ಳ ಈ ವಿಗ್ರಹವು, ಅಂಗವು ನ್ಯೂನವಾದರೆ ಯಜಮಾನನನ್ನೂ ಅಧಿಕವಾದರೆ ಶಿಲ್ಪಿಯನ್ನೂ ನಾಶಮಾಡುವುದು ಕೃಶವಾದರೆ ದ್ರವ್ಯ ನಷ್ಟವನ್ನು ಉಂಟುಮಾಡುವುದು

೧೭ ಉದರವು ಕೃಶವಾದರೆ ಕ್ಷಾಮವನ್ನು ತರುವುದು ಮಾಂಸರಹಿತವಾಗಿದ್ದರೆ ಐಶ್ವರ್ಯವನ್ನು ತೊಲಗಿಸುವುದು ಮೂಗು ಡೊಂಕಾದರೆ ದುಃಖವನ್ನೂ, ಅಂಗವು ಕುಗ್ಗಿದ್ದರೆ ಭಯವನ್ನೂ ತರುವುದು

೧೮ ಮೂಗು ಚಪ್ಪಟೆಯಾಗಿದ್ದರೆ ದುಃಖವನ್ನೂ ಶೋಕವನ್ನೂ ಕೊಡುವುದು ಕಣ್ಣು ಸರಿಯಾಗಿ ಇಲ್ಲದಿದ್ದರೆ ಯಜಮಾನ, ಶಿಲ್ಪಿ ಮುಂತಾದವರ ಕಣ್ಣನ್ನು ಹಾಳುಮಾಡುವುದು ಮುಖವು ಅಂದಗೆಟ್ಟರೆ ದುಃಖವನ್ನು ಕೊಡುವುದು ಕೈಕಾಲುಗಳು ಕೃಶವಾಗಿರಲಿ, ಅಂಗಗಳೂ ಮೊಣಕಾಲೂ ಹೀನವಾಗಿರಲಿ ಜನರಿಗೆ ಭ್ರಮವನ್ನೂ ಉನ್ಮಾದವನ್ನೂ ಉಂಟುಮಾಡುವುದು

ಹೀನಾಂಗಾ ಹೀನಜಂಘಾ ಚ ಭ್ರಮೋನ್ಮಾದಕರೀ ನೃಣಾಂ |
ಶುಷ್ಕವಕ್ತ್ರಾ ತು ರಾಜಾನಂ ಕಟಿಹೀನಾ ಚ ಯಾ ಭವೇತ್ ||೧೯||

ಪಾಣಿಪಾದವಿಹೀನಾ ಯಾ ಜಾಯತೇ ಮಾರಕೋ ಮಹಾನ್ |
ಜಂಘಾಜಾನುವಿಹೀನಾ ಚ ಶತ್ರುಕಲ್ಯಾಣಕಾರಿಣೀ ||೨೦||

ಪುತ್ರಮಿತ್ರವಿನಾಶಾಯ ಹೀನವಕ್ಷಃಸ್ಥಲಾ ತು ಯಾ |
ಸಂಪೂರ್ಣಾವಯವಾ ಯಾ ತು ಆಯುರ್ಲಕ್ಷ್ಮೀಪ್ರದಾ ಸದಾ ||೨೧||

ಏವಂ ಲಕ್ಷಣಮಾಸಾದ್ಯ ಕರ್ತವ್ಯಃ ಪರಮೇಶ್ವರಃ |
ಸ್ತೂಯಮಾನಃ ಸುರೈಃ ಸರ್ವೈಃ ಸಮಂತಾದ್ದರ್ಶಯೇದ್ಧ್ರುವಂ ||೨೨||

ಶಕ್ರೇಣ ನಂದಿನಾ ಚೈವ ಮಹಾಕಾಲೇನ ಶಂಕರಂ |
ಪ್ರಣತಾ ಲೋಕಪಾಲಾಸ್ತು ಪಾರ್ಶ್ವೇ ತು ಗಣನಾಯಕಾಃ ||೨೩||

---

೧೯-೨೦ ಮುಖವು ಬತ್ತಿಹೋಗಿದ್ದರೆ ಆ ವಿಗ್ರಹವು ರಾಜನನ್ನು ಹಿಂಸಿಸುವುದು ಸೊಂಟ, ಕೈ ಅಥವಾ ಕಾಲುಗಳು ಲಕ್ಷಣವಾಗಿಲ್ಲದಿದ್ದರೆ ದೊಡ್ಡ ಅಪಾಯವನ್ನು ತರುವುದು ಮಂಡಿಯೂ ಮೊಣಕಾಲೂ ಸರಿಯಾಗಿ ಇಲ್ಲದಿದ್ದರೆ ಶತ್ರುಗಳಿಗೆ ಕ್ಷೇಮವನ್ನು ಕೊಡುವುದು

೨೧ ವಕ್ಷಃಸ್ಥಲವು ಅನುರೂಪವಾಗಿಲ್ಲದಿದ್ದರೆ ಯಜಮಾನ ಮುಂತಾದವರ ಪುತ್ರಮಿತ್ರರಿಗೆ ಕೇಡಾಗುವುದು ಎಲ್ಲ ಅವಯವಗಳೂ ಪೂರ್ಣವಾಗಿದ್ದರೆ ಅಂತಹ ವಿಗ್ರಹವು ಯಾವಾಗಲೂ ಆಯುಸ್ಸನ್ನೂ ಸಂಪತ್ತನ್ನೂ ಕೊಡುವುದು

೨೨-೨೩ ಮೇಲೆ ಹೇಳಿದ ಲಕ್ಷಣಗಳಿಂದ ಕೂಡಿರುವಂತೆ ಪರಮೇಶ್ವರನ ವಿಗ್ರಹವನ್ನು ನಿರ್ಮಿಸಬೇಕು ಸುತ್ತಲೂ ದೇವತೆಗಳು ಅವನನ್ನು ಸ್ತುತಿಸುತ್ತಿರಬೇಕು ಇಂದ್ರ, ನಂದೀಶ್ವರ, ಮಹಾಕಾಲ ಮುಂತಾದವರು ಸೇವೆಯನ್ನು ಮಾಡುತ್ತಿರುವಂತೆಯೂ ಪಕ್ಕದಲ್ಲಿ ಲೋಕಪಾಲಕರೂ ಗಣಾಧಿಪತಿಗಳೂ ನಮಸ್ಕರಿಸುತ್ತಿರುವಂತೆಯೂ ಕಲ್ಪಿಸಬೇಕು

ನೃತ್ಯದ್ಭೃಂಗಿರಿಟಿಶ್ಚೈವ ಭೂತವೇತಾಲಸಂವೃತಃ ।
ಸರ್ವೇ ಹೃಷ್ಟಾಸ್ತು ಕರ್ತವ್ಯಾಃ ಸ್ತುವಂತಃ ಪರಮೇಶ್ವರಂ ॥೨೪॥

ಗಂಧರ್ವವಿದ್ಯಾಧರಕಿನ್ನರಾಣಾ
ಮಥಾಪ್ಸರೋಗುಹ್ಯಕನಾಯಕಾನಾಂ ।
ಗಣೈರನೇಕೈಃ ಶತಶೋ ಮಹೇಂದ್ರೈ
ರ್ಮುನಿಪ್ರವೀರೈರಪಿ ನಮ್ಯಮಾನಂ ॥೨೫॥

ಧೃತಾಕ್ಷಸೂತ್ರೈಃ ಶತಶಃ ಪ್ರವಾಲ
ಪುಷ್ಪೋಪಹಾರಪ್ರಚಯಂ ದದದ್ಭಿಃ ।
ಸಂಸ್ತೂಯಮಾನಂ ಭಗವಂತಮೀಡ್ಯಂ
ನೇತ್ರತ್ರಯೇಣಾಮರಮರ್ತ್ಯಪೂಜ್ಯಂ ॥೨೬॥

ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ಪ್ರತಿಮಾಲಕ್ಷಣ
ಏಕೋನಷಷ್ಟ್ಯಧಿಕದ್ವಿಶತತಮೋಽಧ್ಯಾಯಃ

---

೨೪ ಭೃಂಗಿಯು ಭೂತಬೇತಾಳಗಳೊಡನೆ ಕೂಡಿ ನರ್ತಿಸುತ್ತಿರುವನು ಎಲ್ಲರೂ ಹರ್ಷಚಿತ್ತರಾಗಿ ಪರಮೇಶ್ವರನನ್ನು ಸ್ತುತಿಸುತ್ತಿರುವರು ಈ ರೀತಿಯಾಗಿ ಮೂರ್ತಿಕಲ್ಪನೆಯನ್ನು ಮಾಡಬೇಕು

೨೫ ಗಂಧರ್ವರು, ವಿದ್ಯಾಧರರು, ಕಿನ್ನರರು, ಅಪ್ಸರಸ್ತ್ರೀಯರು, ಗುಹ್ಯಕ ಪ್ರಮುಖರು, ಲೆಕ್ಕವಿಲ್ಲದಷ್ಟು ಮಂದಿ ಗಣಾಧಿಪತಿಗಳು, ನೂರಾರು ಜನ ಮಹೇಂದ್ರರು, ಮಹರ್ಷಿಗಳು ಇವರೆಲ್ಲರೂ ಮಹೇಶ್ವರನನ್ನು ನಮಸ್ಕರಿಸುತ್ತಿರುವರು

೨೬ ನೂರಾರು ಜನ ಭಕ್ತರು ಜಪಮಾಲೆಗಳನ್ನು ಧರಿಸಿ ಚಿಗರು, ಹೂ, ಮುಂತಾದ ಉಪಹಾರಗಳನ್ನು ಒಪ್ಪಿಸುತ್ತ, ದೇವಮನುಷ್ಯಾದಿ ಸಕಲ ಜೀವರಾಶಿಗಳಿಂದಲೂ ಸ್ತುತಿಯನ್ನು ಕೈಗೊಳ್ಳುವ ಭಗವಂತನಾದ ತ್ರಿಲೋಚನನನ್ನು ನಮಸ್ಕರಿಸುತ್ತಿರುವರು

## ಅಧ್ಯಾಯದ ಸಾರಾಂಶ

**ಈ ಅಧ್ಯಾಯದಲ್ಲಿ ಈಶ್ವರಪ್ರತಿಮೆಯ ಲಕ್ಷಣವನ್ನು ವಿವರಿಸಿದೆ**

ಪರಮೇಶ್ವರನ ವಿಧವಿಧವಾದ ಲೀಲೆಗಳಿಗೆ ತಕ್ಕಂತೆ ತಾಂಡವೇಶ್ವರಮೂರ್ತಿ, ತ್ರಿಪುರದಾಹಮೂರ್ತಿ, ಭೈರವೇಶ್ವರಮೂರ್ತಿ ಮುಂತಾದ ನಾನಾವಿಧವಾದ ವಿಗ್ರಹಗಳನ್ನು ಕಲ್ಪಿಸಬಹುದು ಒಂದೊಂದರಲ್ಲೂ ವಿಶೇಷವಾದ ಲಕ್ಷಣಗಳಿವೆ ವರಾಹ, ನರಸಿಂಹ, ಭೈರವ ಮುಂತಾದ ಉಗ್ರರೂಪದ ದೇವತಾಮೂರ್ತಿಗಳನ್ನು ಬಹಳ ಜಾಗರೂಕತೆಯಿಂದ ನಿರ್ಮಿಸಬೇಕು ನ್ಯೂನಾತಿರೇಕಗಳಿದ್ದರೆ ಅನಿಷ್ಟವೊದಗುವುದು ಯಜಮಾನ, ಶಿಲ್ಪಿ, ರಾಜ, ದೇಶ ಇವೆಲ್ಲ ಕಷ್ಟಕ್ಕೆ ಗುರಿಯಾಗುವುವು

ಶ್ರೀಮತ್ಸ್ಯಮಹಾಪುರಾಣದಲ್ಲಿ ಪ್ರತಿಮಾಲಕ್ಷಣದಲ್ಲಿ
ಇನ್ನೂರೈವತ್ತೊಂಬತ್ತನೆಯ ಅಧ್ಯಾಯವು ಮುಗಿದುದು

## ಅಥ ಷಷ್ಟ್ಯಧಿಕದ್ವಿಶತತಮೋಽಧ್ಯಾಯಃ

|| ಸೂತ ಉವಾಚ ||

ಅಧುನಾ ಸಂಪ್ರವಕ್ಷ್ಯಾಮಿ ಅರ್ಧನಾರೀಶ್ವರಂ ಪರಂ ।
ಅರ್ಧೇನ ದೇವದೇವಸ್ಯ ನಾರೀರೂಪಂ ಸುಶೋಭನಂ || ೧ ||

ಈಶಾರ್ಧೇ ತು ಜಟಾಭಾಗೋ ಬಾಲೇಂದುಕುಲಯಾ ಯುತಃ ।
ಉಮಾರ್ಧೇ ಚಾಪಿ ದಾತವ್ಯೌ ಸೀಮಂತತಿಲಕಾವುಭೌ || ೨ ||

ವಾಸುಕಿಂ ದಕ್ಷಿಣೇ ಕರ್ಣೇ ವಾಮೇ ಕುಂಡಲಮಾದಿಶೇತ್ ।
ಬಾಲಿಕಾ ಚೋಪರಿಷ್ಟಾತ್ತು ಕಪಾಲಂ ದಕ್ಷಿಣೇ ಕರೇ ।
ತ್ರಿಶೂಲಂ ಚಾಪಿ ಕರ್ತವ್ಯಂ ದೇವದೇವಸ್ಯ ಶೂಲಿನಃ || ೩ ||

ವಾಮತೋ ದರ್ಪಣಂ ದದ್ಯಾದುತ್ಪಲಂ ಚ ವಿಶೇಷತಃ ।
ವಾಮಬಾಹುಶ್ಚ ಕರ್ತವ್ಯಃ ಕೇಯೂರವಲಯಾನ್ವಿತಃ || ೪ ||

ಉಪವೀತಂ ಚ ಕರ್ತವ್ಯಂ ಮಣಿಮುಕ್ತಾಮಯಂ ತಥಾ || ೫ ||

---

೧ ಸೂತಪೌರಾಣಿಕನು ಹೇಳಿದನು --ಈಗ ಅತಿಶ್ರೇಷ್ಠವೆನಿಸಿದ ಅರ್ಧನಾರೀಶ್ವರ ಪ್ರತಿಮೆಯ ಲಕ್ಷಣವನ್ನು ಹೇಳುವೆನು ಮಹಾದೇವನ ಅರ್ಧದೇಹದಲ್ಲಿ ಅತಿಮನೋಹರವಾದ ಸ್ತ್ರೀರೂಪವು ಕಂಗೊಳಿಸುತ್ತಿರುವುದು

೨ ಈಶ್ವರನ ಕಡೆಯಲ್ಲಿ ಬಾಲಚಂದ್ರನೊಡಗೂಡಿದ ಜಟೆಯನ್ನು ನಿರ್ಮಿಸಬೇಕು ಪಾರ್ವತಿಯ ಅರ್ಧದೇಹದಲ್ಲಾದರೋ ಬೈತಲೆಯನ್ನು ತೆಗೆದು ತಿಲಕವನ್ನು ಹಚ್ಚಬೇಕು

೩ ಬಲಗಿವಿಯಲ್ಲಿ ಸರ್ಪರಾಜನಾದ ವಾಸುಕಿಯನ್ನೂ, ಎಡಗಿವಿಯಲ್ಲಿ ಓಲೆಯನ್ನೂ ಅದರ ಮೇಲ್ಗಡೆ ಬಾವಲಿಯನ್ನೂ ಧರಿಸಬೇಕು ದೇವದೇವನ ಬಲಗೈಯಲ್ಲಿ ಕಪಾಲವನ್ನೂ ತ್ರಿಶೂಲವನ್ನೂ ಕೊಡಬೇಕು

೪-೫ ಎಡಗೈಯಲ್ಲಿ ಕನ್ನಡಿಯನ್ನೂ ನೈದಿಲೆ ಹೂವನ್ನೂ ಇಡಬೇಕು, ಮತ್ತು ಎಡದೋಳುಗಳಿಗೆ ತೋಳುಬಳೆಗಳನ್ನೂ ತೊಡಿಸಬೇಕು ಪರಮೇಶ್ವರನಿಗೆ ಮುತ್ತುರತ್ನಗಳಿಂದ ಅಲಂಕೃತವಾದ ಯಜ್ಞೋಪವೀತವನ್ನು ಧರಿಸಬೇಕು

**ಸ್ತನಭಾರಂ ತಥಾರ್ಧೇ ತು ವಾಮೇ ಪೀನಂ ಪ್ರಕಲ್ಪಯೇತ್ ।**
**ಹಾರಾರ್ಧಮುಜ್ಜ್ವಲಂ ಕುರ್ಯಾಚ್ಛ್ರೋಣ್ಯರ್ಧಂ ತು ತಥೈವ ಚ ॥ ೬ ॥**

**ಲಿಂಗಾರ್ಧಮೂರ್ಧ್ವಗಂ ಕುರ್ಯಾದ್ವ್ಯಾಘ್ರಾಜಿನಕೃತಾಂಬರಂ ।**
**ವಾಮೇ ಲಂಬಪರೀಧಾನಂ ಕಟಿಸೂತ್ರತ್ರಯಾನ್ವಿತಂ ॥ ೭ ॥**

**ನಾನಾರತ್ನಸಮೋಪೇತಂ ದಕ್ಷಿಣಂ ಭುಜಗಾನ್ವಿತಂ ।**
**ದೇವಸ್ಯ ದಕ್ಷಿಣಂ ಪಾದಂ ಪದ್ಮೋಪರಿ ಸುಸಂಸ್ಥಿತಂ ॥ ೮ ॥**

**ಕಿಂಚಿದೂರ್ಧ್ವಗಂ ತಥಾ ವಾಮಂ ಭೂಷಿತಂ ನೂಪುರೇಣ ತು ।**
**ರತ್ನೈರ್ವಿಭೂಷಿತಾನ್ ಕುರ್ಯಾದಂಗುಲೀಷ್ವಂಗುಲೀಯಕಾನ್ ॥ ೯ ॥**

**ಸಾಲಕ್ತಕಂ ತಥಾ ಪಾದಂ ಪಾರ್ವತ್ಯಾ ದರ್ಶಯೇತ್ಸದಾ ।**
**ಅರ್ಧನಾರೀಶ್ವರಸ್ಯೇದಂ ರೂಪಮಸ್ಮಿನ್ನುದಾಹೃತಂ ॥೧೦॥**

---

೬ ಎಡಗಡೆಯ ಅರ್ಧದಲ್ಲಿ ಪರಿಪುಷ್ಟವಾದ ಸ್ತನವನ್ನೂ, ಹೊಳೆಹೊಳೆವ ಅರ್ಧಹಾರವನ್ನೂ ಅರ್ಧನಿತಂಬವನ್ನೂ ರಚಿಸಬೇಕು

೭ ಬಲಗಡೆ ಅರ್ಧಲಿಂಗವನ್ನು ನಿರ್ಮಿಸಿ ಹುಲಿಯ ಚರ್ಮವನ್ನು ಉಡಿಸಬೇಕು ಎಡಗಡೆ ಸೀರೆಯ ಸೆರಗು ಜೋಲಾಡುತ್ತಿರುವಂತೆಯೂ ಬಲಗಡೆ ಸರ್ಪಸಹಿತವಾದ ನಾನಾರತ್ನಗಳಿಂದ ಅಲಂಕೃತವಾದ ಮೂರೆಳೆಯ ಉಡಿದಾರವು ಶೋಭಿಸುತ್ತಿರುವಂತೆಯೂ ರಚಿಸಬೇಕು

೮-೯ ಮಹಾದೇವನು ಬಲಗಾಲನ್ನು ತಾವರೆಯ ಮೇಲೆ ಇಟ್ಟುಕೊಂಡಿರುವನು ದೇವಿಯು ಎಡಗಾಲನ್ನು ಸ್ವಲ್ಪ ಮೇಲಕ್ಕೆ ಎತ್ತಿಕೊಂಡಿರುವಳು ಕಾಲಂದಿಗೆಯನ್ನು ಧರಿಸಿರುವಳು ಬೆರಳುಗಳಲ್ಲಿ ರತ್ನಖಚಿತವಾದ ಉಂಗುರಗಳನ್ನು ಹಾಕಿಕೊಂಡಿರುವಳು

೧೦ ಪಾರ್ವತಿಯ ಪಾದವು ಅರಗಿನ ರಸದಿಂದ ಕೆಂಪಾಗಿ ಕಂಗೊಳಿಸುತ್ತಿರಬೇಕು ಅರ್ಧನಾರೀಶ್ವರನ ಆಕೃತಿಯನ್ನು ಈ ರೀತಿಯಲ್ಲಿ ಹೇಳಿದುದಾಯಿತು

**ಉಮಾಮಹೇಶ್ವರಸ್ಯಾಪಿ ಲಕ್ಷಣಂ ಶೃಣುತ ದ್ವಿಜಾಃ ।**
**ಸಂಸ್ಥಾನಕಂ ತಯೋರ್ವಕ್ಷ್ಯೇ ಲೀಲಾಲಲಿತವಿಭ್ರಮಂ** ||೧೧||

**ಚತುರ್ಭುಜಂ ದ್ವಿಬಾಹುಂ ವಾ ಜಟಾಭಾರೇಂದುಭೂಷಿತಂ ।**
**ಲೋಚನತ್ರಯಸಂಯುಕ್ತಮುಮೈಕಸ್ಕಂಧಪಾಣಿನಂ** ||೧೨||

**ದಕ್ಷಿಣೇನೋತ್ಪಲಂ ಶೂಲಂ ವಾಮೇ ಕುಚಭರೇ ಕರಂ ।**
**ದ್ವೀಪಿಚರ್ಮಪರೀಧಾನಂ ನಾನಾರತ್ನೋಪಶೋಭಿತಂ** ||೧೩||

**ಸುಪ್ರತಿಷ್ಠಂ ಸುವೇಷಂ ಚ ತಥಾರ್ಧೇಂದುಕೃತಾನನಂ ।**
**ವಾಮೇ ತು ಸಂಸ್ಥಿತಾ ದೇವೀ ತಸ್ಯೋರೌ ಬಾಹುಗೂಹಿತಾ** ||೧೪||

---

೧೧ ಓ ಬ್ರಾಹ್ಮಣರೇ, ಉಮಾಮಹೇಶ್ವರ ಪ್ರತಿಮೆಯ ಲಕ್ಷಣವನ್ನು ಇನ್ನು ಕೇಳಿರಿ, ಪಾರ್ವತೀಪರಮೇಶ್ವರರಿಬ್ಬರ ಆಕಾರವನ್ನೂ, ವಿಲಾಸವನ್ನೂ, ಬೆಡಗನ್ನೂ ಹೇಳುವೆನು

೧೨ ಮಹೇಶ್ವರನಿಗೆ ಎರಡು ಅಥವಾ ನಾಲ್ಕು ತೋಳುಗಳು ಇರಬಹುದು ತಲೆಯಲ್ಲಿ ಜಟಾಪಾಶವೂ ಚಂದ್ರಕಲೆಯೂ ಕಂಗೊಳಿಸುತ್ತಿರುವುವು ಅವನು ಮೂರು ಕಣ್ಣುಗಳಿಂದ ಪ್ರಕಾಶಿಸುತ್ತ ಪಾರ್ವತಿಯ ಹೆಗಲ ಮೇಲೆ ಒಂದು ಕೈಯನ್ನು ಹಾಕಿರುವನು

೧೩ ಬಲಗೈಯಲ್ಲಿ ನೈದಿಲೆಯನ್ನೂ ಶೂಲವನ್ನು ಹಿಡಿದಿರುವನು ಎಡಗೈ ಪಾರ್ವತಿಯ ಸ್ತನವನ್ನು ಸ್ಪರ್ಶಿಸುತ್ತಿರುವುದು ಅವನು ವ್ಯಾಘ್ರಾಜಿನವನ್ನು ಉಟ್ಟು ಬಗೆಬಗೆಯ ರತ್ನಾಭರಣಗಳಿಂದ ಮೆರೆಯುತ್ತಿರುವನು

೧೪ ಮಹಾದೇವನು ಮನೋಹರವಾದ ರೂಪದಿಂದ ಗಂಭೀರವಾಗಿ ಕುಳಿತಿರುವನು ಮುಖದಲ್ಲಿ ಅರ್ಧಚಂದ್ರಾಕಾರವಾದ ತಿಲಕವನ್ನು ಧರಿಸಿರುವನು ಎಡಗಡೆ ತೊಡೆಯ ಮೇಲೆ ಪಾರ್ವತಿಯು ಕುಳಿತಿರುವಳು ಪರಮೇಶ್ವರನು ತನ್ನ ತೋಳನ್ನು ಅವಳ ಮೇಲೆ ಹಾಕಿರುವನು

ಶಿರೋಭೂಷಣಸಂಯುಕ್ತೈರಲಕೈರ್ಲಲಿತಾನನಾ ।
ಸಬಾಲಿಕಾ ಕರ್ಣವತೀ ಲಲಾಟತಿಲಕೋಜ್ವಲಾ ॥೧೫॥

ಮಣಿಕುಂಡಲಸಂಯುಕ್ತಾ ಕರ್ಣಿಕಾಭರಣಾ ಕ್ವಚಿತ್ ।
ಹಾರಕೇಯೂರಬಹುಲಾ ಹರವಕ್ತ್ರಾವಲೋಕಿನೀ ॥೧೬॥

ವಾಮಾಂಸಂ ದೇವದೇವಸ್ಯ ಸ್ಪೃಶಂತೀ ಲೀಲಯಾ ತತಃ ।
ದಕ್ಷಿಣಂ ತು ಬಹಿಃ ಕೃತ್ವಾ ಬಾಹುಂ ದಕ್ಷಿಣತಸ್ತಥಾ ॥೧೭॥

ಸ್ಕಂಧೇ ವಾ ದಕ್ಷಿಣೇ ಕುಕ್ಷೌ ಸ್ಪೃಶಂತ್ಯಂಗುಲಿಭಿಃ ಕ್ವಚಿತ್ ।
ವಾಮೇ ತು ದರ್ಪಣಂ ದದ್ಯಾದುತ್ಪಲಂ ವಾ ಸುಶೋಭನಂ ॥೧೮॥

ಕಟಿಸೂತ್ರತ್ರಯಂ ಚೈವ ನಿತಂಬೇ ಸ್ಯಾತ್ಪ್ರಲಂಬಕಂ ।
ಜಯಾ ಚ ವಿಜಯಾ ಚೈವ ಕಾರ್ತಿಕೇಯವಿನಾಯಕೌ ॥೧೯॥

---

೧೫ ಅವಳ ಮುಖವು ಭೂಷಣಾಲಂಕೃತವಾದ ಮುಂಗುರುಳುಗಳಿಂದ ಶೋಭಿಸುತ್ತಿರುವುದು ಕಿವಿಯಲ್ಲಿ ಬಾವಲಿಗಳೂ ಹಣೆಯಲ್ಲಿ ತಿಲಕವೂ ಕಂಗೊಳಿಸುತ್ತಿರುವುವು

೧೬ ದೇವಿಯ ಕಿವಿಗಳಲ್ಲಿ ರತ್ನಕುಂಡಲಗಳು ಹೊಳೆಯುತ್ತಿವೆ ಜಿಮುಕಿಗಳು ಕೂಡ ಇರುವುದುಂಟು ಅನೇಕ ಹಾರಗಳನ್ನೂ ತೋಳುಬಳೆಗಳನ್ನೂ ಧರಿಸಿ ಆಕೆಯು ಪರಮೇಶ್ವರನ ಮುಖವನ್ನು ನೋಡುತ್ತಿರುವಳು

೧೭ ಮಹಾದೇವನ ಎಡಹೆಗಲಿನ ಮೇಲೆ ಅವಳು ಲೀಲೆಯಿಂದ ಕೈಯಿಟ್ಟು ಕೊಂಡಿರುವಳು ಇಲ್ಲವೇ ಬಲಗೈಯನ್ನು ಹೊರಗಡೆಯಿಂದ ನೀಡಿ ಅವನ ಭುಜವನ್ನೋ ಉದರವನ್ನೋ ಬೆರಳುಗಳಿಂದ ಸ್ಪರ್ಶಿಸುತ್ತಿರುವಳು

೧೮ ಎಡಗೈಯಲ್ಲಿ ಕನ್ನಡಿಯನ್ನಾಗಲಿ ನೈದಿಲೆ ಹೂವನ್ನಾಗಲಿ ಕೊಡಬೇಕು ನಿತಂಬದಲ್ಲಿ ಮೂರೆಳೆಯ ಕಟಿಸೂತ್ರವು ಇಳಿಯಬಿದ್ದಿರುವ ಹಾಗೆ ರಚಿಸಬೇಕು

೧೯-೨೦ ಒಂದು ಪಕ್ಕದಲ್ಲಿ ಸಖಿಯರಾದ ಜಯೆ ಮತ್ತು ವಿಜಯೆಯರನ್ನೂ ಇನ್ನೊಂದರಲ್ಲಿ ಷಣ್ಮುಖ ಮತ್ತು ಗಣಪತಿಗಳನ್ನೂ ನಿರ್ಮಿಸಬೇಕು ತೋರಣದಲ್ಲಿ

ಪಾರ್ಶ್ವಯೋರ್ದರ್ಶಯೇತ್ತತ್ರ ತೋರಣೇ ಗಣಗುಹ್ಯಕಾ |
ಮಾಲಾ ವಿದ್ಯಾಧರಾಂಸ್ತದ್ವದ್ವೀಣಾವಾನಪ್ಸರೋಗಣಃ ||೨೦||

ಏತದ್ರೂಪಮುಮೇಶಸ್ಯ ಕರ್ತವ್ಯಂ ಭೂತಿಮಿಚ್ಛತಾ |
ಶಿವನಾರಾಯಣಂ ವಕ್ಷ್ಯೇ ಸರ್ವಪಾಪಪ್ರಣಾಶನಂ ||೨೧||

ವಾಮಾರ್ಧೇ ಮಾಧವಂ ವಿದ್ಯಾದ್ದಕ್ಷಿಣೇ ಶೂಲಪಾಣಿನಂ |
ಬಾಹುದ್ವಯಂ ಚ ಕೃಷ್ಣಸ್ಯ ಮಣಿಕೇಯೂರಭೂಷಿತಂ ||೨೨||

ಶಂಖಚಕ್ರಧರಂ ಶಾಂತಮಾರಕ್ತಾಂಗುಲಿವಿಭ್ರಮಂ |
ಚಕ್ರಸ್ಥಾನೇ ಗದಾಂ ವಾಪಿ ಪಾಣೌ ದದ್ಯಾದಧಃಸ್ಥಲೇ ||೨೩||

ಶಂಖಂ ಚೈವೋತ್ತರೇ ದದ್ಯಾತ್ಕಟ್ಯರ್ಧಂ ಭೂಷಣೋಜ್ವಲಂ |
ಪೀತವಸ್ತ್ರಪರೀಧಾನಂ ಚರಣಂ ಮಣಿಭೂಷಣಂ ||೨೪||

---

ಗಣಾಧೀಶ್ವರರು, ಗುಹ್ಯಕರು, ಸಾಲುಸಾಲಾಗಿ ನಿಂತಿರುವ ವಿದ್ಯಾಧರರು, ವೀಣಾಧಾರಿಗಳಾದ ಅಪ್ಸರಸ್ತ್ರೀಯರು ಇವರೆಲ್ಲರನ್ನೂ ರಚಿಸಬೇಕು ಶ್ರೇಯಸ್ಕಾಮನಾದವನು ಈ ರೀತಿಯಾಗಿ ಉಮಾಮಹೇಶ್ವರ ಪ್ರತಿಮೆಯನ್ನು ಕಲ್ಪಿಸಬೇಕು

೨೧-೨೨ ಸಕಲ ಪಾಪಗಳನ್ನೂ ಪರಿಹರಿಸುವ ಶಿವನಾರಾಯಣ ವಿಗ್ರಹದ ಲಕ್ಷಣವನ್ನು ಹೇಳುವೆನು ಇದರಲ್ಲಿ ಎಡಗಡೆ ವಿಷ್ಣುವೂ ಬಲಗಡೆ ಶಂಕರನೂ ಇರುವರು ವಿಷ್ಣುವಿನ ಎರಡು ಬಾಹುಗಳೂ ರತ್ನಖಚಿತವಾದ ತೋಳುಬಳೆಗಳಿಂದ ಅಲಂಕೃತವಾಗಿರುವುವು

೨೩ ನಾರಾಯಣನು ಶಂಖ ಚಕ್ರಗಳನ್ನು ಹಿಡಿದು ಶಾಂತಮುದ್ರೆಯಿಂದಿರುವನು ಅವನ ಬೆರಳುಗಳು ನಸುಗೆಂಪಾಗಿ ಕಂಗೊಳಿಸುವುವು ಕೆಳಗೈಯಲ್ಲಿ ಚಕ್ರಕ್ಕೆ ಪ್ರತಿಯಾಗಿ ಗದೆಯನ್ನಾದರೂ ಕೊಡಬಹುದು

೨೪ ಮೇಲ್ಗೈಯಲ್ಲಿ ಶಂಖವನ್ನು ಧರಿಸಬೇಕು ನಡುವಿನಲ್ಲಿ ಅರ್ಧಭಾಗಕ್ಕೆ ಪೀತಾಂಬರವನ್ನು ಉಡಿಸಿ ಭೂಷಣಗಳಿಂದ ಅಲಂಕರಿಸಬೇಕು ಪಾದಕ್ಕೆ ರತ್ನಾಭರಣವನ್ನು ತೊಡಿಸಬೇಕು

**ದಕ್ಷಿಣಾರ್ಧಂ ಜಟಾಭಾರಮರ್ಧೇಂದುಕೃತಭೂಷಣಂ ।**
**ಭುಜಂಗಹಾರವಲಯಂ ವರದಂ ದಕ್ಷಿಣಂ ಕರಂ ॥೨೫॥**

**ದ್ವಿತೀಯಂ ಚಾಪಿ ಕುರ್ವೀತ ತ್ರಿಶೂಲವರಧಾರಿಣಂ ।**
**ವ್ಯಾಲೋಪವೀತಸಂಯುಕ್ತಂ ಕಟ್ಯರ್ಧಂ ಕೃತ್ತಿವಾಸಸಂ ॥೨೬॥**

**ಮಣಿರತ್ನೈಶ್ಚ ಸಂಯುಕ್ತಂ ಪಾದಂ ನಾಗವಿಭೂಷಿತಂ ।**
**ಶಿವನಾರಾಯಣಸ್ಯೈವಂ ಕಲ್ಪಯೇದ್ರೂಪಮುತ್ತಮಂ ॥೨೭॥**

**ಮಹಾವರಾಹಂ ವಕ್ಷ್ಯಾಮಿ ಪದ್ಮಹಸ್ತಂ ಗದಾಧರಂ ।**
**ತೀಕ್ಷ್ಣದಂಷ್ಟ್ರಾಗ್ರಘೋಣಾಸ್ಯಂ ಮೇದಿನೀವಾಮಕೂರ್ಪರಂ ॥೨೮॥**

**ದಂಷ್ಟ್ರಾಗ್ರೇಣೋದ್ಧೃತಾಂ ದಾಂತಾಂ ಧರಣೀಮುತ್ಪಲಾನ್ವಿತಾಂ ।**
**ವಿಸ್ಮಯೋತ್ಫುಲ್ಲವದನಾಮುಪರಿಷ್ಟಾತ್ಪ್ರಕಲ್ಪಯೇತ್ ॥೨೯॥**

---

೨೫ ಬಲಗಡೆಯ ಅರ್ಧಭಾಗದಲ್ಲಿ ಜಟಾಭಾರವೂ ಅರ್ಧ ಚಂದ್ರಾಲಂಕಾರವೂ ಶೋಭಿಸುತ್ತಿವೆ ಸರ್ಪದ ಹಾರವೂ ಕೈಬಳೆಯೂ ಪ್ರಕಾಶಿಸುತ್ತಿರಲು, ಬಲಗೈ ಭಕ್ತರಿಗೆ ವರವನ್ನು ನೀಡುತ್ತಿರುವುದು

೨೬-೨೭ ಮತ್ತೊಂದು ಕೈಯಲ್ಲಿ ದಿವ್ಯವಾದ ತ್ರಿಶೂಲಾಯುಧವನ್ನು ಧರಿಸಿರುವಂತೆ ಕಲ್ಪಿಸಬೇಕು ಸರ್ಪದ ಯಜ್ಞೋಪವೀತವು ಪ್ರಕಾಶಿಸುತ್ತಿರಲು, ನಡುವಿನ ಇನ್ನರ್ಧಭಾಗಕ್ಕೆ ಗಜಚರ್ಮವನ್ನು ಉಡಿಸಬೇಕು ಪಾದವು ರತ್ನಭೂಷಣಗಳಿಂದಲೂ ನಾಗಾಭರಣದಿಂದಲೂ ಅಲಂಕೃತವಾಗಿರಬೇಕು ಹೀಗೆ ಉತ್ತಮವಾದ ರೂಪದಿಂದ ಮೆರೆಯುವಂತೆ ಶಿವನಾರಾಯಣಪ್ರತಿಮೆಯನ್ನು ನಿರ್ಮಿಸಬೇಕು

೨೮ ಇನ್ನು ಮುಂದೆ ಮಹಾವರಾಹಮೂರ್ತಿಯ ಲಕ್ಷಣವನ್ನು ಹೇಳುವೆನು ಆ ಮೂರ್ತಿಗೆ ಪದ್ಮವೂ ಗದೆಯೂ ಕೈಗಳಲ್ಲಿ ಶೋಭಿಸುತ್ತಿರಬೇಕು ಕೋರೆಹಲ್ಲುಗಳ ತುದಿಯೂ, ಮೂಗೂ, ಮುಖವೂ ಮೊನಚಾಗಿರಬೇಕು ಎಡಗಡೆಯ ಮೊಳಕೈ ಭೂದೇವಿಯನ್ನು ಸ್ಪರ್ಶಿಸುತ್ತಿರಬೇಕು

೨೯ ಆಶ್ಚರ್ಯದಿಂದ ಮುಖವು ಅರಳಿರಲು, ಜಿತೇಂದ್ರಿಯಳಾಗಿ ಕೈಯಲ್ಲಿ ನೈದಿಲೆಹೂವನ್ನು ಹಿಡಿದುಕೊಂಡಿರುವ ಭೂವೇವಿಯನ್ನು ಕೋರೆದಾಡೆಯ ತುದಿಯಲ್ಲಿ ಎತ್ತಿಕೊಂಡಿರುವಂತೆ ರಚಿಸಬೇಕು

ದಕ್ಷಿಣಂ ಕಟಿಸಂಸ್ಥಂ ತು ಕರಂ ತಸ್ಯ ಪ್ರಕಲ್ಪಯೇತ್ ।
ಕೂರ್ಮೋಪರಿ ತಥಾ ಪಾದಮೇಕಂ ನಾಗೇಂದ್ರಮೂರ್ಧನಿ ॥೩೦॥

ಸಂಸ್ತೂಯಮಾನಂ ಲೋಕೇಶೈಃ ಸಮಂತಾತ್ಪರಿಕಲ್ಪಯೇತ್ ।
ನಾರಸಿಂಹಂ ಪ್ರಕರ್ತವ್ಯಂ ಭುಜಾಷ್ಟಕಸಮನ್ವಿತಂ ॥೩೧॥

ರೌದ್ರಂ ಸಿಂಹಾನನಂ ತದ್ವದ್ವಿದಾರಿತಮುಖೇಕ್ಷಣಂ ।
ಸ್ತಬ್ಧಪೀನಸಟಾಕರ್ಣಂ ದಾರಯಂತಂ ದಿತೇಃ ಸುತಂ ॥೩೨॥

ವಿನಿರ್ಗತಾಂತ್ರಜಾಲಂ ಚ ದಾನವಂ ಪರಿಕಲ್ಪಯೇತ್ ।
ವಮಂತಂ ರುಧಿರಂ ಘೋರಂ ಭ್ರುಕುಟೀವದನೇಕ್ಷಣಂ ॥೩೩॥

ಯುಧ್ಯಮಾನಸ್ತು ಕರ್ತವ್ಯಃ ಕ್ವಚಿತ್ಕರಣಬಂಧನೈಃ ।
ಪರಿಶ್ರಾಂತೇನ ದೈತ್ಯೇನ ತರ್ಜ್ಯಮಾನೋ ಮುಹುರ್ಮುಹುಃ ॥೩೪॥

---

೩೦ ವರಾಹಮೂರ್ತಿಯು ಬಲಗೈಯನ್ನು ಸೊಂಟದ ಮೇಲೂ, ಕಾಲುಗಳಲ್ಲಿ ಒಂದನ್ನು ಆದಿಕೂರ್ಮನ ಮೇಲೂ, ಮತ್ತೊಂದನ್ನು ಆದಿಶೇಷನ ತಲೆಯ ಮೇಲೂ ಇಟ್ಟುಕೊಂಡಿರಬೇಕು ಲೋಕಪಾಲಕರು ಸುತ್ತಲೂ ನಿಂತು ಸ್ತುತಿಸುತ್ತಿರಬೇಕು

೩೧-೩೨ ಎಂಟು ತೋಳುಗಳಿಂದ ಕೂಡಿ, ಭಯಂಕರವಾದ ಸಿಂಹದ ಮುಖವೂ ತೆರೆದ ಕಣ್ಣೂ ಬಾಯೂ ಆಗಿ, ದಟ್ಟವಾದ ಕೆಸರಗಳ ನಡುವೆ ಕಿವಿಗಳು ಅಲುಗಾಡದೆ ಎದ್ದು ನಿಂತಿರಲು, ಹಿರಣ್ಯಕಶಿಪುವನ್ನು ಸೀಳಿಹಾಕುತ್ತಿರುವಂತೆ ನಾರಸಿಂಹ ವಿಗ್ರಹವನ್ನು ವಿರಚಿಸಬೇಕು

೩೩ ಕರುಳು ಹೊರಕ್ಕೆ ಹೊರಟುಕೊಂಡಿರುವಂತೆಯೂ, ಗಂಟಿಕ್ಕಿದ ಹುಬ್ಬೂ, ಉಗ್ರವಾದ ಮುಖವೂ, ಕಣ್ಣೂ ಆಗಿರುವಂತೆಯೂ ದೈತ್ಯರಾಜನಾದ ಹಿರಣ್ಯಕಶಿಪುವನ್ನು ಕಲ್ಪಿಸಬೇಕು

೩೪-೩೫ ಅಂಗಬಂಧಗಳನ್ನು ಬಿಗಿದು ಯುದ್ಧಮಾಡುತ್ತಿರುವಂತೆ ಬೇಕಾದರೂ ಹಿರಣ್ಯಕಶಿಪುವನ್ನು ನಿರ್ಮಿಸಬಹುದು ಅವನು ಒಹುವಾಗಿ ಬಳಲಿ ಅಡಿಗಡಿಗೆ

ದೈತ್ಯಂ ಪ್ರದರ್ಶಯೇತ್ತತ್ರ ಖಡ್ಗಖೇಟಕಧಾರಿಣಂ ।
ಸ್ತೂಯಮಾನಂ ತಥಾ ವಿಷ್ಣುಂ ದರ್ಶಯೇದಮರಾಧಿಪೈಃ ॥೩೫॥

ತಥಾ ತ್ರಿವಿಕ್ರಮಂ ವಕ್ಷ್ಯೇ ಬ್ರಹ್ಮಾಂಡಕ್ರಮಣೋಲ್ಬಣಂ ।
ಪಾದಪಾರ್ಶ್ವೇ ತಥಾ ಬಾಹುಮುಪರಿಷ್ಟಾತ್ಪ್ರದರ್ಶಯೇತ್ ॥೩೬॥

ಅಧಸ್ತಾದ್ವಾಮನಂ ತತ್ರ ಕಲ್ಪಯೇತ್ಸಕಮಂಡಲುಂ ।
ದಕ್ಷಿಣೇ ಛತ್ರಿಕಾಂ ದದ್ಯಾನ್ಮುಖಂ ದೀನಂ ಪ್ರದರ್ಶಯೇತ್ ॥೩೭॥

ಭೃಂಗಾರಧಾರಿಣಂ ತದ್ವದ್ಬಲಿಂ ತಸ್ಯ ಚ ಪಾರ್ಶ್ವತಃ ।
ಬಂಧನಂ ಚಾಪಿ ಕುರ್ವಂತಂ ಗರುಡಂ ಚಾಸ್ಯ ದರ್ಶಯೇತ್ ॥೩೮॥

ಮತ್ಸ್ಯರೂಪಂ ತಥಾ ಮತ್ಸ್ಯಂ ಕೂರ್ಮಂ ಕೂರ್ಮಾಕೃತಿಂ ನ್ಯಸೇತ್ ।
ಏವಂರೂಪಸ್ತು ಭಗವಾನ್ ಕಾರ್ಯೋ ನಾರಾಯಣೋ ಹರಿಃ ॥೩೯॥

---

ವಿಷ್ಣುವನ್ನು ಹೆದರಿಸುತ್ತಿರುವನು ಕತ್ತಿಗುರಾಣಿಗಳನ್ನು ಹಿಡಿದಿರುವನು ನರಸಿಂಹ ರೂಪಿಯಾದ ಮಹಾವಿಷ್ಣು ದೇವತೆಗಳಿಂದ ಸ್ತುತಿಯನ್ನು ಕೈಗೊಳ್ಳುತ್ತಿರುವನು

೩೬ ಬ್ರಹ್ಮಾಂಡವೆಲ್ಲವನ್ನೂ ಆಕ್ರಮಿಸುವುದಕ್ಕಾಗಿ ಅದ್ಭುತರೂಪವನ್ನು ತಾಳಿದ ತ್ರಿವಿಕ್ರಮಮೂರ್ತಿಯ ಲಕ್ಷಣವನ್ನು ಇನ್ನು ಹೇಳುತ್ತೇನೆ ಅವನು ಪಾದವನ್ನು ಮೇಲಕ್ಕೆ ಎತ್ತಿ ಅದನ್ನು ಕೈಯಲ್ಲಿ ಹಿಡಿದುಕೊಂಡಿರುವಂತೆ ಪ್ರದರ್ಶಿಸಬೇಕು

೩೭ ಕೆಳಗಡೆ ವಾಮನನು ಕಮಂಡಲುವನ್ನು ಓಡಿದು ನಿಂತಿರುವಂತೆ ರಚಿಸಿ, ಬಲಗೈಯಲ್ಲಿ ಕೊಡೆಯನ್ನು ಕೊಡಬೇಕು ಅವನ ಮುಖದಲ್ಲಿ ದೈನ್ಯವು ತೋರುತ್ತಿರಬೇಕು

೩೮ ಅವನ ಪಕ್ಕದಲ್ಲಿ ಗಿಂಡಿಯನ್ನು ಹಿಡಿದುಕೊಂಡು ಬಲಿಚಕ್ರವರ್ತಿ ನಿಂತಿರುವಂತೆಯೂ ಗರುಡನು ಅವನನ್ನು ಬಂಧಿಸುತ್ತಿರುವಂತೆಯೂ ನಿರ್ಮಿಸಬೇಕು

೩೯ ಮತ್ಸ್ಯಮೂರ್ತಿಯನ್ನು ಮತ್ಸ್ಯಾಕಾರವಾಗಿಯೂ ಕೂರ್ಮಮೂರ್ತಿಯನ್ನು ಕೂರ್ಮರೂಪವಾಗಿಯೂ ರಚಿಸಬೇಕು ಷಡ್ಗುಣಪರಿಪೂರ್ಣನಾದ ನಾರಾಯಣನ ವಿವಿಧರೂಪದ ವಿಗ್ರಹಗಳನ್ನು ಈ ರೀತಿಯಾಗಿ ರಚಿಸಬೇಕು

ಬ್ರಹ್ಮಾ ಕಮಂಡಲುಧರಃ ಕರ್ತವ್ಯಃ ಸಚತುರ್ಮುಖಃ ।
ಹಂಸಾರೂಢಃ ಕ್ವಚಿತ್ಕಾರ್ಯಃ ಕಚಿಚ್ಚ ಕಮಲಾಸನಃ ॥೪೦॥

ವರ್ಣತಃ ಪದ್ಮಗರ್ಭಾಭಶ್ಚತುರ್ಬಾಹುಃ ಶುಭೇಕ್ಷಣಃ ।
ಕಮಂಡಲುಂ ವಾಮಕರೇ ಸ್ರುವಂ ಹಸ್ತೇ ತು ದಕ್ಷಿಣೇ ॥೪೧॥

ವಾಮೇ ದಂಡಧರಂ ತದ್ವತ್ಸ್ರುವಂ ಚಾಪಿ ಪ್ರದರ್ಶಯೇತ್ ।
ಮುನಿಭಿರ್ದೇವಗಂಧರ್ವೈಃ ಸ್ತೂಯಮಾನಂ ಸಮಂತತಃ ॥೪೨॥

ಕುರ್ವಾಣಮಿವ ಲೋಕಾಂಸ್ತ್ರೀಞ್ಛುಕ್ಲಾಂಬರಧರಂ ವಿಭುಂ ।
ಮೃಗಚರ್ಮಧರಂ ವಾಪಿ ದಿವ್ಯಯಜ್ಞೋಪವೀತಿನಂ ॥೪೩॥

---

೪೦ ಕಮಂಡಲುವನ್ನು ಕೈಯಲ್ಲಿ ಹಿಡಿದುಕೊಂಡು ನಾಲ್ಕು ಮುಖಗಳಿಂದ ಕೂಡಿರುವಂತೆ ಬ್ರಹ್ಮದೇವನ ಪ್ರತಿಮೆಯನ್ನು ನಿರ್ಮಿಸಬೇಕು ಹಂಸವನ್ನು ಏರಿರುವಂತೆ ಕೆಲವು ಸಂದರ್ಭಗಳಲ್ಲಿಯೂ, ಕಮಲದ ಮೇಲೆ ಕುಳಿತಿರುವಂತೆ ಕೆಲವು ಸಂದರ್ಭಗಳಲ್ಲಿಯೂ ರಚಿಸಬಹುದು

೪೧ ಅವನ ಮೈಬಣ್ಣವು ತಾವರೆಯ ಒಳಭಾಗದ ಬಣ್ಣವನ್ನು ಹೋಲುವುದು ಅವನು ನಾಲ್ಕು ತೋಳುಗಳಿಂದಲೂ ಶುಭಕರವಾದ ಕಣ್ಣುಗಳಿಂದಲೂ ಕಂಗೊಳಿಸುವನು ಎಡಗೈಯಲ್ಲಿ ಕಮಂಡಲವನ್ನೂ ಬಲಗೈಯಲ್ಲಿ ಸ್ರುವವೆಂಬ ಹೋಮಸಾಧನವನ್ನೂ ಹಿಡಿದುಕೊಂಡಿರುವನು

೪೨ ಎಡಗೈಯಲ್ಲಿ ದಂಡವನ್ನೂ ಸ್ರುವವನ್ನೂ ಧರಿಸಿರುವಂತೆ ತೋರಿಸಬೇಕು ಮುನಿಗಳೂ, ದೇವತೆಗಳೂ, ಗಂಧರ್ವರೂ ಸುತ್ತಲೂ ನಿಂತು ಸ್ತೋತ್ರ ಮಾಡುತ್ತಿರಬೇಕು

೪೩ ಬಿಳಿಯ ವಸ್ತ್ರವನ್ನೋ, ಕೃಷ್ಣಾಜಿನವನ್ನೋ ಧರಿಸಿ ಆ ದೇವನು ಮೂರು ಲೋಕಗಳ ನಿರ್ಮಾಣಕಾರ್ಯದಲ್ಲಿ ತೊಡಗಿರುವಂತೆ ಕಾಣುವನು ಶ್ರೇಷ್ಠವಾದ ಯಜ್ಞೋಪವೀತದಿಂದ ಆತನು ವಿರಾಜಿಸುತ್ತಿರುವನು

ಆಜ್ಯಸ್ಥಾಲೀಂ ನ್ಯಸೇತ್ಪಾರ್ಶ್ವೇ ವೇದಾಂಶ್ಚ ಚತುರಃ ಪುನಃ ।
ವಾಮಪಾರ್ಶ್ವೇಽಸ್ಯ ಸಾವಿತ್ರೀಂ ದಕ್ಷಿಣೇ ಚ ಸರಸ್ವತೀಂ ॥೪೪॥

ಅಗ್ರೇ ಚ ಋಷಯಸ್ತದ್ವತ್ಕಾರ್ಯಾಃ ಪೈತಾಮಹೇ ಪದೇ ।
ಕಾರ್ತಿಕೇಯಂ ಪ್ರವಕ್ಷ್ಯಾಮಿ ತರುಣಾದಿತ್ಯಸನ್ನಿಭಂ ॥೪೫॥

ಕಮಲೋದರವರ್ಣಾಭಂ ಕುಮಾರಂ ಸುಕುಮಾರಕಂ ।
ದಂಡಕೇಯೂರಕೈರ್ಯುಕ್ತಂ ಮಯೂರವರವಾಹನಂ ॥೪೬॥

ಸ್ಥಾಪಯೇತ್ಸ್ವೇಷ್ಟನಗರೇ ಭುಜಾನ್ ದ್ವಾದಶ ಕಲ್ಪಯೇತ್ ।
ಚತುರ್ಭುಜಃ ಖರ್ವಟೇ ಸ್ಯಾದ್ವನೇ ಗ್ರಾಮೇ ದ್ವಿಬಾಹುಕಃ ॥೪೭॥

ಶಕ್ತಿಃ ಪಾಶಸ್ತಥಾ ಖಡ್ಗಃ ಶರಃ ಶೂಲಂ ತಥೈವ ಚ ।
ವರದಶ್ಚೈಕಹಸ್ತಃ ಸ್ಯಾದಥ ಚಾಭಯದೋ ಭವೇತ್ ॥೪೮॥

---

೪೪ ಪಕ್ಕದಲ್ಲಿ ತುಪ್ಪದ ಪಾತ್ರೆಯನ್ನೂ ನಾಲ್ಕು ವೇದಗಳನ್ನೂ ವಿನ್ಯಾಸ ಮಾಡಬೇಕು ಎಡಗಡೆ ಸಾವಿತ್ರಿಯೂ ಬಲಗಡೆ ಸರಸ್ವತಿಯೂ ಕಂಗೊಳಿಸಿರುವಂತೆಯೂ, ಬ್ರಹ್ಮನ ಮುಂದೆ ಪಾದತಲದಲ್ಲಿ ಋಷಿಗಳು ನಿಂತಿರುವಂತೆಯೂ ರಚಿಸಬೇಕು

೪೫-೪೬ ಬಾಲಸೂರ್ಯನಂತೆ ತೇಜಸ್ವಿಯಾದ ಷಣ್ಮುಖನ ಪ್ರತಿಮೆಯ ಲಕ್ಷಣವನ್ನು ಹೇಳುವೆನು ಅವನ ಬಣ್ಣವು ತಾವರೆಯ ಒಳಭಾಗದ ಬಣ್ಣವನ್ನು ಹೋಲುವುದು ಅವನು ಬಾಲಕ ಕೋಮಲಕಾಯ ದಂಡವನ್ನೂ ತೋಳುಬಳೆಗಳನ್ನೂ ಧರಿಸಿ ಸೊಗಸಾದ ನವಿಲನ್ನೇರಿ ಕುಳಿತಿರುವನು

೪೭ ತನಗೆ ಇಷ್ಟವಾದ ಕಡೆಯಲ್ಲಿ ಷಣ್ಮುಖನನ್ನು ಸ್ಥಾಪಿಸಬಹುದು ನಗರದಲ್ಲಾದರೆ ಹನ್ನೆರಡು ಬಾಹುಗಳೂ, ಊರಿನಲ್ಲಾದರೆ ನಾಲ್ಕು ತೋಳುಗಳೂ, ವನದಲ್ಲಿ ಅಥವಾ ಗ್ರಾಮದಲ್ಲಾದರೆ ಎರಡು ಭುಜಗಳೂ ಇರಬೇಕು

೪೮ ಶಕ್ತಿ, ಪಾಶ, ಖಡ್ಗ, ಶರ ಮತ್ತು ಶೂಲಗಳೆಂಬ ಐದು ಆಯುಧಗಳು ಐದು ಕೈಗಳಲ್ಲಿ ಶೋಭಿಸುವುವು ಇನ್ನೊಂದು ಕೈ ಭಕ್ತರಿಗೆ ಅಭಯವನ್ನೋ ವರವನ್ನೋ ಕರುಣಿಸುತ್ತಿರುವುದು ಇವೆಲ್ಲವೂ ಬಲಗಡೆಯ ಕೈಗಳು ತೋಳುಬಳೆಗಳಿಂದಲೂ ಬಳೆಗಳಿಂದಲೂ ಅಲಂಕೃತವಾದುವು

ಏತೇ ದಕ್ಷಿಣತೋ ಜ್ಞೇಯಾಃ ಕೇಯೂರಕಟಕೋಜ್ವಲಾಃ ।
ಧನುಃ ಪತಾಕಾಮುಷ್ಟಿಶ್ಚ ತರ್ಜನೀ ತು ಪ್ರಸಾರಿತಾ ||೪೯||

ಖೇಟಕಂ ತಾಮ್ರಚೂಡಂ ಚ ವಾಮಹಸ್ತೇ ತು ಶಸ್ಯತೇ ।
ದ್ವಿಭುಜಸ್ಯ ಕರೇ ಶಕ್ತಿರ್ವಾಮೇ ಸ್ಯಾತ್ಕುಕ್ಕುಟೋಪರಿ ||೫೦||

ಚತುರ್ಭುಜೇ ಶಕ್ತಿಪಾಶೌ ವಾಮತೋ ದಕ್ಷಿಣೇ ತ್ವಸಿಃ ।
ವರದೋಽಭಯದೋ ವಾಪಿ ದಕ್ಷಿಣಃ ಸ್ಯಾತ್ತುರೀಯಕಃ ||೫೧||

ವಿನಾಯಕಂ ಪ್ರವಕ್ಷ್ಯಾಮಿ ಗಜವಕ್ತ್ರಂ ತ್ರಿಲೋಚನಂ ।
ಲಂಬೋದರಂ ಚತುರ್ಬಾಹುಂ ವ್ಯಾಳಯಜ್ಞೋಪವೀತಿನಂ ||೫೨||

ಶೂರ್ಪಕರ್ಣಂ ಬೃಹತ್ತುಂಡಮೇಕದಂಷ್ಟ್ರಂ ಪೃಥೂದರಂ ।
ಸ್ವದಂತಂ ದಕ್ಷಿಣಕರ ಉತ್ಪಲಂ ಚಾಪರೇ ತಥಾ ||೫೩||

---

೪೯ ಎಡಗಡೆಯ ಆರು ಕೈಗಳು ಬಿಲ್ಲು, ಬಾವುಟ, ಮುಷ್ಟಿ, ನೀಡಿದ ತೋರಬೆರಳು, ಗುರಾಣಿ ಮತ್ತು ಕೋಳಿ ಇವುಗಳಿಂದ ಕೂಡಿರುವುವು

೫೦-೫೧ ಎರಡು ಕೈಗಳಿದ್ದರೆ ಬಲಗೈಯಲ್ಲಿ ಶಕ್ತಿಯನ್ನೂ ಎಡಗೈಯಲ್ಲಿ ಕುಕ್ಕುಟವನ್ನೂ ನಿರ್ಮಿಸಬೇಕು ನಾಲ್ಕು ತೋಳುಗಳಿರುವುದಾದರೆ ಎಡಗಡೆ ಶಕ್ತಿ ಮತ್ತು ಪಾಶಗಳೂ, ಬಲಗಡೆ ಕತ್ತಿಯೂ ಅಭಯ ಅಥವಾ ವರದಹಸ್ತವೂ ಕಂಗೊಳಿಸುವುವು

೫೨ ಇನ್ನು ವಿನಾಯಕನ ಲಕ್ಷಣವನ್ನು ಹೇಳುವೆನು ಆನೆಯ ಮುಖ, ಮೂರು ಕಣ್ಣುಗಳು, ಜಗ್ಗುವ ಹೊಟ್ಟೆ, ನಾಲ್ಕು ತೋಳುಗಳು, ಸರ್ಪದ ಯಜ್ಞೋಪವೀತ ಇವುಗಳಿಂದ ಆತನು ಪ್ರಕಾಶಿಸುವನು

೫೩ ಅವನ ಕಿವಿಗಳು ಮೊರದಂತಿವೆ ಮುಖವು ದೊಡ್ಡದಾಗಿದೆ ಕೋರದಾಡೆ ಒಂದೇ ಒಂದಿದೆ ಹೊಟ್ಟೆ ದಪ್ಪನಾಗಿದೆ ಆವನು ಬಲಗೈಯೊಂದರಲ್ಲಿ ತನ್ನ ದಂತವನ್ನೂ ಮತ್ತೊಂದರಲ್ಲಿ ನೈದಿಲೆಯನ್ನೂ ಹಿಡಿದುಕೊಂಡಿರುವನು

ಮೋದಕಂ ಪರಶುಂ ಚೈವ ವಾಮತಃ ಪರಿಕಲ್ಪಯೇತ್ ।
ಬೃಹತ್ತ್ವಾತ್ಕ್ಲಿಷ್ಟವದನಂ ಪೀನಸ್ಕಂಧಾಂಘ್ರಿಪಾಣಿಕಂ ॥೩೪॥

ಯುಕ್ತಂ ತು ಋದ್ಧಿಬುದ್ಧಿಭ್ಯಾಮಧಸ್ತಾನ್ಮೂಷಕಾನ್ವಿತಂ ।
ಕಾತ್ಯಾಯನ್ಯಾಃ ಪ್ರವಕ್ಷ್ಯಾಮಿ ರೂಪಂ ದಶಭುಜಂ ತಥಾ ॥೩೫॥

ತ್ರಯಾಣಾಮಪಿ ದೇವಾನಾಮನುಕಾರಾನುಕಾರಿಣೀಂ ।
ಜಟಾಜೂಟಸಮಾಯುಕ್ತಾಮರ್ಧೇಂದುಕೃತಲಕ್ಷಣಾಂ ॥೩೬॥

ಲೋಚನತ್ರಯಸಂಯುಕ್ತಾಂ ಪೂರ್ಣೇಂದುಸದೃಶಾನನಾಂ ।
ಅತಸೀಪುಷ್ಪವರ್ಣಾಭಾಂ ಸುಪ್ರತಿಷ್ಠಾಂ ಸುಲೋಚನಾಂ ॥೩೭॥

ನವಯೌವನಸಂಪನ್ನಾಂ ಸರ್ವಾಭರಣಭೂಷಿತಾಂ ।
ಸುಚಾರುದಶನಾಂ ತದ್ವತ್ಪೀನೋನ್ನತಪಯೋಧರಾಂ ॥೩೮॥

---

೩೪ ಎಡಗೈಗಳಲ್ಲಿ ಕಡಬನ್ನೂ ಕೊಡಲಿಯನ್ನೂ ಹಿಡಿದಿರುವನು ಆಕಾರವು ದೊಡ್ಡದಾಗಿರುವುದರಿಂದ ಮುಖವು ಗುಜ್ಜಾಗಿದ ಕೈಕಾಲುಗಳೂ ಹೆಗಲುಗಳೂ ಪುಷ್ಟವಾಗಿವೆ ಸಂಪತ್ತಿನಿಂದಲೂ ಬುದ್ಧಿಯಿಂದಲೂ ಅವನು ಕೂಡಿರುವನು ಈ ರೀತಿಯಲ್ಲಿ ವಿನಾಯಕನ ಮೂರ್ತಿಯನ್ನು ನಿರ್ಮಿಸಿ ಕೆಳಗಡೆ ಇಲಿಯನ್ನು ವಿರಚಿಸಬೇಕು

೩೫-೩೬ ಕಾತ್ಯಾಯನೀ ಪ್ರತಿಮೆಯ ಲಕ್ಷಣವನ್ನು ಹೇಳುವೆನು ಅವಳಿಗೆ ಹತ್ತು ಭುಜಗಳು ಆಕೆ ತ್ರಿಮೂರ್ತಿಗಳ ಆಕಾರವನ್ನೂ ಅನುಸರಿಸುತ್ತಿರುವಳು ಜಟಾಭಾರವನ್ನು ಹೊತ್ತು ಅರ್ಧಚಂದ್ರನನ್ನು ಮುಡಿದಿರುವಳು

೩೭ ಅವಳಿಗೆ ಕಣ್ಣುಗಳು ಮೂರು ಮುಖವು ಪೂರ್ಣಚಂದ್ರನಂತಿರುವುದು ಮೈ ಬಣ್ಣದಲ್ಲಿ ಅಗಸೆಯ ಹೂವನ್ನು ಹೋಲುವುದು ಗಂಭೀರವಾದ ನಿಲವಿನಿಂದಲೂ ಕಾಂತಿಯುಕ್ತವಾದ ಕಣ್ಣುಗಳಿಂದಲೂ ಅವಳು ಪ್ರಕಾಶಿಸುತ್ತಿರುವಳು

೩೮ ದೇವಿಯು ಹೊಸ ಯೌವನದಿಂದ ತುಂಬಿರುವಳು ಎಲ್ಲ ಒಡವೆಗಳಿಂದಲೂ ಅಲಂಕೃತಳಾಗಿರುವಳು ಅವಳ ಹಲ್ಲುಗಳು ಸುಂದರವಾಗಿಯೂ, ಸ್ತನಗಳು ಪರಿಪುಷ್ಟವಾಗಿ ಉನ್ನತವಾಗಿಯೂ ಇರುವುವು

**ತ್ರಿಭಂಗಸ್ಥಾನಸಂಸ್ಥಾನಾಂ ಮಹಿಷಾಸುರಮರ್ದಿನೀಂ ।**
**ತ್ರಿಶೂಲಂ ದಕ್ಷಿಣೇ ದದ್ಯಾತ್ಖಡ್ಗಂ ಚಕ್ರಂ ಕ್ರಮಾದಧಃ ॥೫೯॥**

**ತೀಕ್ಷ್ಣಬಾಣಂ ತಥಾ ಶಕ್ತಿಂ ವಾಮತೋಽಪಿ ನಿಬೋಧತ ।**
**ಖೇಟಕಂ ಪೂರ್ಣಚಾಪಂ ಚ ಪಾಶಮಂಕುಶಮೇವ ಚ ॥೬೦॥**

**ಘಂಟಾಂ ವಾ ಪರಶುಂ ವಾಪಿ ವಾಮತಃ ಸಂನಿವೇಶಯೇತ್ ।**
**ಅಧಸ್ತಾನ್ಮಹಿಷಂ ತದ್ವದ್ದ್ವಿಶಿರಸ್ಕಂ ಪ್ರದರ್ಶಯೇತ್ ॥೬೧॥**

**ಶಿರಶ್ಛೇದೋದ್ಭವಂ ತದ್ವದ್ದಾನವಂ ಖಡ್ಗಪಾಣಿನಂ ।**
**ಹೃದಿ ಶೂಲೇನ ನಿರ್ಭಿನ್ನಂ ನಿರ್ಯದಂತ್ರವಿಭೂಷಿತಂ ॥೬೨॥**

**ರಕ್ತರಕ್ತೀಕೃತಾಂಗಂ ಚ ರಕ್ತವಿಸ್ಫಾರಿತೇಕ್ಷಣಂ ।**
**ವೇಷ್ಟಿತಂ ನಾಗಪಾಶೇನ ಭ್ರುಕುಟೀಭೀಷಣಾನನಂ ॥೬೩॥**

---

೫೯ ನಿತಂಬಗಳ, ಸ್ತನಗಳ ಮತ್ತು ಕೇಶಪಾಶಗಳ ಭಾರದಿಂದ ಅವಳ ಶರೀರವು ಮೂರು ಕಡೆಗಳಲ್ಲಿ ಬಾಗಿರುವುದು ಅವಳು ಮಹಿಷಾಸುರನನ್ನು ಸಂಹರಿಸಿ ಲೋಕವನ್ನು ರಕ್ಷಿಸಿದವಳು ಅವಳ ಬಲಗೈಗಳಲ್ಲಿ ತ್ರಿಶೂಲ, ಖಡ್ಗ, ಚಕ್ರ, ತೀಕ್ಷ್ಣವಾದ ಬಾಣ ಮತ್ತು ಶಕ್ತಿಗಳೆಂಬ ಆಯುಧಗಳನ್ನು ಕ್ರಮವಾಗಿ ಒಂದರ ಕೆಳಗೆ ಮತ್ತೊಂದನ್ನು ಕೊಡಬೇಕು ಇನ್ನು ಎಡಗೈಗಳಲ್ಲಿ ಇರುವ ಆಯುಧಗಳನ್ನು ಹೇಳುವೆನು ಕೇಳಿರಿ

೬೦ ಎಡಗಡೆ ಗುರಾಣಿ, ಹೆದೆಯೇರಿಸಿದ ಬಿಲ್ಲು, ಪಾಶಾಯುಧ, ಅಂಕುಶ, ಘಂಟೆ ಅಥವಾ ಕೊಡಲಿ ಇವುಗಳನ್ನು ಒಂದೊಂದು ಕೈಯಲ್ಲಿ ಕೊಡಬೇಕು

೬೧-೬೩ ಕೆಳಗಡೆ ಎರಡು ತಲೆಗಳುಳ್ಳ ಮಹಿಷವನ್ನು ರಚಿಸಬೇಕು ಅದರ ತಲೆ ಕತ್ತರಿಸಿ ಹೋಗಲು ಮಹಿಷಾಸುರನು ಕೈಯಲ್ಲಿ ಕತ್ತಿಯನ್ನು ಹಿಡಿದು ಅಲ್ಲಿ ಉದ್ಭವಿಸುವನು ಅವನ ಎದೆ ಶೂಲದಿಂದ ಸೀಳಿಹೋಗಿದೆ ಕರುಳು ಹೊರಕ್ಕೆ ಹೊರಟಿದೆ, ಮೈಯೆಲ್ಲ ರಕ್ತದಿಂದ ಕೆಂಪಾಗಿದೆ, ಕಣ್ಣುಗಳು ರಕ್ತದಂತೆ ಕೆಂಪಾಗಿ ವಿಶಾಲವಾಗಿ ಅರಳಿವೆ ನಾಗಪಾಶಗಳು ಅವನನ್ನು ಬಿಗಿದುಕೊಂಡಿವೆ ಹುಬ್ಬುಗಂಟಿನಿಂದ ಅವನ ಮುಖವು ಭಯಂಕರವಾಗಿವೆ ಪಾಶಾಯುಧ ಸಹಿತವಾದ ಎಡಗೈಯಿಂದ ದುರ್ಗಾದೇವಿ ಅವನ ಜುಟ್ಟನ್ನು ಹಿಡಿದಿರುವಳು

**ಸಪಾಶವಾಮಹಸ್ತೇನ ಧೃತಕೇಶಂ ಚ ದುರ್ಗಯಾ ।**
**ವಮದ್ರುಧಿರವಕ್ತ್ರಂ ಚ ದೇವ್ಯಾಃ ಸಿಂಹಂ ಪ್ರದರ್ಶಯೇತ್ ||೬೪||**

**ದೇವ್ಯಾಸ್ತು ದಕ್ಷಿಣಂ ಪಾದಂ ಸಮಂ ಸಿಂಹೋಪರಿ ಸ್ಥಿತಂ ।**
**ಕಿಂಚಿದೂರ್ಧ್ವಂ ತಥಾ ವಾಮಮಂಗುಷ್ಠಂ ಮಹಿಷೋಪರಿ ||೬೫||**

**ಸ್ತೂಯಮಾನಂ ಚ ತದ್ರೂಪಮಮರೈಃ ಸಂನಿವೇಶಯೇತ್ ।**
**ಇದಾನೀಂ ಸುರರಾಜಸ್ಯ ರೂಪಂ ವಕ್ಷ್ಯೇ ವಿಶೇಷತಃ ||೬೬||**

**ಸಹಸ್ರನಯನಂ ದೇವಂ ಮತ್ತವಾರಣಸಂಸ್ಥಿತಂ ।**
**ಪೃಥೂರುವಕ್ಷೋವದನಂ ಸಿಂಹಸ್ಕಂಧಂ ಮಹಾಭುಜಂ ||೬೭||**

**ಕಿರೀಟಕುಂಡಲಧರಂ ಪೀವರೋರುಭುಜೇಕ್ಷಣಂ ।**
**ವಜ್ರೋತ್ಪಲಧರಂ ತದ್ವನ್ನಾನಾಭರಣಭೂಷಿತಂ ||೬೮||**

---

೬೪-೬೫ ಮುಖದಿಂದ ರಕ್ತವನ್ನು ಕಾರುತ್ತಿರುವಂತೆ ದೇವಿಯ ವಾಹನವಾದ ಸಿಂಹವನ್ನು ಪ್ರದರ್ಶಿಸಬೇಕು ಅವಳು ಬಲಗಾಲನ್ನು ಆ ಸಿಂಹದ ಮೇಲೆ ಮಟ್ಟವಾಗಿ ಇಟ್ಟುಕೊಂಡಿರುವಳು ದೇವತೆಗಳು ಅವಳ ಅದ್ಭುತರೂಪವನ್ನು ಸ್ತುತಿಸುತ್ತಿರುವರು

೬೬-೬೭ ಈಗ ದೇವೇಂದ್ರ ವಿಗ್ರಹದ ಲಕ್ಷಣವನ್ನು ವಿವರಿಸಿ ಹೇಳುವೆನು ಸುರರಾಜನಿಗೆ ಸಾವಿರ ಕಣ್ಣುಗಳು ಅವನು ಮದಹತ್ತಿರುವ ಐರಾವತವೆಂಬ ಆನೆಯ ಮೇಲೆ ಕುಳಿತಿರುವನು ಅವನ ತೊಡೆಗಳು ದಪ್ಪವಾಗಿವೆ ಎದೆಯೂ ಮುಖವೂ ವಿಶಾಲವಾಗಿವೆ ಹೆಗಲು ಸಿಂಹದ ಹೆಗಲಿನಂತೆ ಅತ್ಯಂತ ಬಲವಾಗಿದೆ ತೋಳುಗಳು ದೀರ್ಘವಾಗಿವೆ

೬೮ ಆ ದೇವರಾಜನು ಕಿರೀಟವನ್ನೂ ಕುಂಡಲಗಳನ್ನೂ ಧರಿಸಿರುವನು ಆತನ ತೊಡೆಗಳೂ ತೋಳುಗಳೂ ಪರಿಪುಷ್ಟವಾಗಿವೆ ಕಣ್ಣುಗಳು ವಿಶಾಲವಾಗಿವೆ ವಜ್ರಾಯುಧವನ್ನೂ ನೈದಿಲೆಯನ್ನೂ ಕೈಗಳಲ್ಲಿ ಹಿಡಿದಿರುವನು ಬಗೆಬಗೆಯ ಒಡವೆಗಳನ್ನು ತೊಟ್ಟಿರುವನು ದೇವತೆಗಳೂ ಗಂಧರ್ವರೂ ಅವನನ್ನು ಪೂಜಿಸುತ್ತಿರುವರು ಅಪ್ಸರಸ್ತ್ರೀಯರು ಓಲೈಸುತ್ತಿರುವರು

**ಪೂಜಿತಂ ದೇವಗಂಧರ್ವೈರಪ್ಸರೋಗಣಸೇವಿತಂ ।**
**ಛತ್ರಚಾಮರಧಾರಿಣ್ಯಃ ಸ್ತ್ರಿಯಃ ಪಾರ್ಶ್ವೇ ಪ್ರದರ್ಶಯೇತ್ ||೧೯||**
**ಸಿಂಹಾಸನಗತಂ ಚಾಪಿ ಗಂಧರ್ವಗಣಸಂಯುತಂ ।**
**ಇಂದ್ರಾಣೀಂ ವಾಮತಶ್ಚಾಸ್ಯ ಕುರ್ಯಾದುತ್ಪಲಧಾರಿಣೀಂ ||೨೦||**

**ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ಪ್ರತಿಮಾಲಕ್ಷಣೇ**
**ಷಷ್ಟ್ಯಧಿಕದ್ವಿಶತತಮೋಽಧ್ಯಾಯಃ**

---

೧೯-೨೦ ಛತ್ರವನ್ನೂ ಚಾಮರಗಳನ್ನೂ ಹಿಡಿದು ಸೇವೆಸಲ್ಲಿಸುತ್ತಿರುವ ದೇವತಾಸ್ತ್ರೀಯರನ್ನು ಪಕ್ಕದಲ್ಲಿ ನಿರ್ಮಿಸಬೇಕು ಗಂಧರ್ವಗಣಪರಿವೃತನಾದ ದೇವೇಂದ್ರನು ಸಿಂಹಾಸನದಲ್ಲಿ ಮಂಡಿಸಿರುವನು ಅವನ ಎಡಗಡೆ ನೈದಿಲೆ ಹೂವನ್ನು ಕೈಯಲ್ಲಿ ಹಿಡಿದುಕೊಂಡು ಅವನ ಪತ್ನಿಯಾದ ಇಂದ್ರಾಣಿ ಕುಳಿತಿರುವಳು

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಅರ್ಧನಾರೀಶ್ವರ, ಉಮಾಮಹೇಶ್ವರ, ಶಿವನಾರಾಯಣ, ಮಹಾವರಾಹ, ನಾರಸಿಂಹ, ತ್ರಿವಿಕ್ರಮ, ಬ್ರಹ್ಮ, ಷಣ್ಮುಖ, ವಿನಾಯಕ, ಕಾತ್ಯಾಯನಿ, ದೇವೇಂದ್ರ ಇವರ ಪ್ರತಿಮೆಗಳ ಲಕ್ಷಣವನ್ನು ಹೇಳಿದೆ ಪ್ರಮಾಣವನ್ನು ಅನುಸರಿಸಿ ವಿಗ್ರಹಗಳನ್ನು ನಿರ್ಮಿಸಿದರೆ ಎಲ್ಲ ವಿಧವಾದ ಶ್ರೇಯಸ್ಸೂ ಉಂಟಾಗುವುದು

ಶ್ರೀಮತ್ಸ್ಯಮಹಾಪುರಾಣದಲ್ಲಿ ಪ್ರತಿಮಾಲಕ್ಷಣದಲ್ಲಿ
ಇನ್ನೂರ ಅರವತ್ತನೆಯ ಅಧ್ಯಾಯವು ಮುಗಿದುದು

## ಅಥೈಕಷಷ್ಟ್ಯಧಿಕದ್ವಿಶತತಮೋಽಧ್ಯಾಯಃ

॥ ಸೂತ ಉವಾಚ ॥

ಪ್ರಭಾಕರಸ್ಯ ಪ್ರತಿಮಾಮಿದಾನೀಂ ಶೃಣುತ ದ್ವಿಜಾಃ ।
ರಥಸ್ಥಂ ಕಾರಯೇದ್ದೇವಂ ಪದ್ಮಹಸ್ತಂ ಸುಲೋಚನಂ ॥ ೧ ॥

ಸಪ್ತಾಶ್ವಂ ಚೈಕಚಕ್ರಂ ಚ ರಥಂ ತಸ್ಯ ಪ್ರಕಲ್ಪಯೇತ್ ।
ಮುಕುಟೇನ ವಿಚಿತ್ರೇಣ ಪದ್ಮಗರ್ಭಸಮಪ್ರಭಂ ॥ ೨ ॥

ನಾನಾಭರಣಭೂಷಾಭ್ಯಾಂ ಭುಜಾಭ್ಯಾಂ ಧೃತಪುಷ್ಕರಂ ।
ಸ್ಕಂಧಸ್ಥೇ ಪುಷ್ಕರೇ ತೇ ತು ಲೀಲಯೈವ ಧೃತೇ ಸದಾ ॥ ೩ ॥

ಚೋಲಕಚ್ಛನ್ನವಪುಷಂ ಕ್ವಚಿಚ್ಚಿತ್ರೇಷು ದರ್ಶಯೇತ್ ।
ವಸ್ತ್ರಯುಗ್ಮಸಮೋಪೇತಂ ಚರಣೌ ತೇಜಸಾ ವೃತೌ ॥ ೪ ॥

---

೧ ಸೂತಪೌರಾಣಿಕನು ಹೇಳಿದನು —ಓ ಬ್ರಾಹ್ಮಣರೇ, ಸೂರ್ಯ ಪ್ರತಿಮೆಯ ಲಕ್ಷಣವನ್ನು ಈಗ ಹೇಳುವೆನು ಕೇಳಿರಿ ಸೂರ್ಯದೇವನು ತೇರಿನಲ್ಲಿ ಕುಳಿತಿರುವಂತೆ ಕಲ್ಪಿಸಬೇಕು ಅವನ ಕೈಯಲ್ಲಿ ತಾವರೆ ಬೆಳಗುತ್ತಿರುವುದು ಕಣ್ಣುಗಳು ಸುಂದರವಾಗಿರುವುವು

೨-೩ ಏಳು ಕುದುರೆಗಳೂ ಒಂದೇ ಗಾಲಿಯೂ ಇರುವಂತೆ ಅವನ ತೇರನ್ನು ರಚಿಸಬೇಕು ಅವನು ವಿಚಿತ್ರವಾದ ಕಿರೀಟವನ್ನು ಧರಿಸಿರುವನು ತಾವರೆಯ ಒಳಭಾಗದ ಬಣ್ಣದಿಂದ ಶೋಭಿಸುವನು ಅವನ ತೋಳುಗಳು ನಾನಾ ವಿಧವಾದ ಭೂಷಣಗಳಿಂದ ಅಲಂಕೃತವಾಗಿರುವುವು ತಾವರೆ ಹೂಗಳನ್ನು ಕೈಗಳಲ್ಲಿ ಹಿಡಿದು ಯಾವಾಗಲೂ ಅವುಗಳನ್ನು ಲೀಲೆಯಿಂದ ಹೆಗಲ ಮೇಲೆ ಇಟ್ಟು ಕೊಂಡಿರುವನು

೪ ಒಂದು ಜೊತೆ ವಸ್ತ್ರವನ್ನು ಧರಿಸಿ ಮೈಗೆ ಕವಚವನ್ನು ತೊಟ್ಟಿರುವಂತೆ ಕೆಲವು ವೇಳೆ ಚಿತ್ರಿಸಬಹುದು ಪಾದಗಳು ತೇಜಸ್ಸಿನಿಂದ ತುಂಬಿರುವುವು

ಪ್ರತೀಹಾರೌ ಚ ಕರ್ತವ್ಯೌ ಪಾರ್ಶ್ವಯೋರ್ದಂಡಪಿಂಗಲೌ ।
ಕರ್ತವ್ಯೌ ಖಡ್ಗಹಸ್ತೌ ತೌ ಪಾರ್ಶ್ವಯೋಃ ಪುರುಷಾವುಭೌ ॥ ೫ ॥

ಲೇಖನೀಕೃತಹಸ್ತಂ ಚ ಪಾರ್ಶ್ವೇ ಧಾತಾರಮವ್ಯಯಂ ।
ನಾನಾದೇವಗಣೈರ್ಯುಕ್ತಮೇವಂ ಕುರ್ಯಾದ್ದಿವಾಕರಂ ॥ ೬ ॥

ಅರುಣಃ ಸಾರಥಿಶ್ಚೈವ ಪದ್ಮಿನೀಪತ್ರಸನ್ನಿಭಃ ।
ಅಶ್ವಾಶ್ಚ ವಲಿತಗ್ರೀವಾಃ ಪ್ರಸ್ಥಿತಾಸ್ತಸ್ಯ ಪಾರ್ಶ್ವಯೋಃ ॥ ೭ ॥

ಭುಜಂಗರಜ್ಜುಭಿರ್ಬದ್ಧಾಃ ಸಪ್ತಾಶ್ವಾ ರಶ್ಮಿಸಂಯುತಾಃ ।
ಪದ್ಮಸ್ಥಂ ವಾಹನಸ್ಥಂ ವಾ ಪದ್ಮಹಸ್ತಂ ಪ್ರಕಲ್ಪಯೇತ್ ॥ ೮ ॥

ವಹ್ನೇಸ್ತು ಲಕ್ಷಣಂ ವಕ್ಷ್ಯೇ ಸರ್ವಕಾಮಫಲಪ್ರದಂ ।
ದೀಪ್ತಂ ಸುವರ್ಣವಪುಷಮರ್ಧಚಂದ್ರಾಸನೇ ಸ್ಥಿತಂ ॥ ೯ ॥

---

೫ ದಂಡನೆಂದೂ ಪಿಂಗಲನೆಂದೂ ಪ್ರಸಿದ್ಧರಾದ ದ್ವಾರಪಾಲಕರಿಬ್ಬರನ್ನು ಎರಡು ಪಕ್ಕಗಳಲ್ಲಿ ರಚಿಸಬೇಕು ಅವರಿಬ್ಬರೂ ಪುರುಷರೂಪದಿಂದ ಖಡ್ಗಹಸ್ತರಾಗಿ ನಿಂತಿರುವರು

೬ ಪಕ್ಕದಲ್ಲಿ ನಿರ್ವಿಕಾರ ರೂಪನಾದ ಧಾತೃವು ಕೈಯಲ್ಲಿ ಲೇಖನಿಯನ್ನು ಹಿಡಿದು ನಿಂತಿರುವನು ಹೀಗೆ ಬಗೆಬಗೆಯ ದೇವಗಣಗಳೊಡನೆ ಕೂಡಿರುವಂತೆ ಸೂರ್ಯನಾರಾಯಣನ ಪ್ರತಿಮೆಯನ್ನು ರಚಿಸಬೇಕು

೭ ತಾವರೆಯೆಲೆಯಂತೆ ಮೈಬಣ್ಣವುಳ್ಳ ಅರುಣನನ್ನು ಸಾರಥಿಯಾಗಿ ನಿರ್ಮಿಸಬೇಕು ಅವನ ಎರಡು ಪಕ್ಕಗಳಲ್ಲಿಯೂ ಕುದುರೆಗಳು ಕತ್ತನ್ನು ಎತ್ತಿ ಬಗ್ಗಿಸಿಕೊಂಡು ಪ್ರಯಾಣಕ್ಕೆ ಸಿದ್ಧವಾಗಿರುವುವು

೮ ಏಳು ಕುದುರೆಗಳನ್ನೂ ಹಾವಿನ ಹಗ್ಗದಿಂದ ಬಿಗಿದಿದೆ ಅವುಗಳಿಗೆ ಕಡಿವಾಣಗಳನ್ನು ಹಾಕಿ ಕಟ್ಟಿದೆ ಸೂರ್ಯನು ತಾವರೆಯಲ್ಲಿಯೋ ವಾಹನದಲ್ಲಿಯೋ, ಕುಳಿತು ಕೈಯಲ್ಲಿ ಕಮಲವನ್ನು ಹಿಡಿದುಕೊಂಡಿರುವಂತ ರಚಿಸಬೇಕು

೯ ಸಕಲ ಮನೋರಥಗಳನ್ನೂ ಈಡೇರಿಸುವ ಅಗ್ನಿವಿಗ್ರಹದ ಲಕ್ಷಣವನ್ನು ಹೇಳುವೆನು ಅಗ್ನಿದೇವನು ಸುವರ್ಣಶರೀರಕನಾಗಿ ಅರ್ಧಚಂದ್ರಾಕಾರವಾದ ಆಸನದಲ್ಲಿ ಕುಳಿತಿರುವನು

**ಬಾಲಾರ್ಕಸದೃಶಂ ತಸ್ಯ ವದನಂ ಚಾಪಿ ದರ್ಶಯೇತ್ ।**
**ಯಜ್ಞೋಪವೀತಿನಂ ದೇವಂ ಲಂಬಕೂರ್ಚಧರಂ ತಥಾ ॥೧೦॥**

**ಕಮಂಡಲುಂ ವಾಮಕರೇ ದಕ್ಷಿಣೇ ತ್ವಕ್ಷಸೂತ್ರಕಂ ।**
**ಜ್ವಾಲಾವಿತಾನಸಂಯುಕ್ತಮಜವಾಹನಮುಜ್ಜ್ವಲಂ ॥೧೧॥**

**ಕುಂಡಸ್ಥಂ ವಾಪಿ ಕುರ್ವೀತ ಮೂರ್ಧ್ನಿ ಸಪ್ತಶಿಖಾನ್ವಿತಂ ।**
**ತಥಾ ಯಮಂ ಪ್ರವಕ್ಷ್ಯಾಮಿ ದಂಡಪಾಶಧರಂ ವಿಭುಂ ॥೧೨॥**

**ಮಹಾಮಹಿಷಮಾರೂಢಂ ಕೃಷ್ಣಾಂಜನಚಯೋಪಮಂ ।**
**ಸಿಂಹಾಸನಗತಂ ಚಾಪಿ ದೀಪ್ತಾಗ್ನಿಸಮಲೋಚನಂ ॥೧೩॥**

**ಮಹಿಷಂ ಚಿತ್ರಗುಪ್ತಂ ಚ ಕರಾಳಾನ್ ಕಿಂಕರಾಂಸ್ತಥಾ ।**
**ಸಮಂತಾದ್ದರ್ಶಯೇತ್ತಸ್ಯ ಸೌಮ್ಯಾಸೌಮ್ಯಾನ್ ಸುರಾಸುರಾನ್ । ॥೧೪॥**

---

೧೦ ಅವನ ಮುಖವು ಬಾಲಸೂರ್ಯನಂತೆ ತೇಜೋಭರಿತವಾಗಿರುವ ಹಾಗ ಪ್ರದರ್ಶಿಸಬೇಕು ಅವನು ಯಜ್ಞೋಪವೀತವನ್ನು ಧರಿಸಿಕೊಂಡಿರುವನು ಗಡ್ಡ ಮೀಸೆಗಳು ಬೆಳೆದು ಜೋಲಾಡುತ್ತಿರುವುವು

೧೧ ಎಡಗೈಯಲ್ಲಿ ಕಮಂಡಲುವನ್ನೂ ಬಲಗೈಯಲ್ಲಿ ಜಪಸೂತ್ರವನ್ನೂ ಧರಿಸಿರುವನು ಜ್ವಾಲಾಸಮೂಹದಿಂದ ಕೂಡಿ ವಾಹನವಾದ ಆಡಿನ ಮೇಲೆ ಕುಳಿತು ಬೆಳಬೆಳಗುತ್ತಿರುವನು ತಲೆಯ ಮೇಲ್ಗಡೆ ಸಪ್ತಜ್ವಾಲೆಗಳು ತೊಳಗುತ್ತಿರಲು ಕುಂಡದಲ್ಲಿ ನಿಂತಿರುವಂತೆ ಬೇಕಾದರೂ ನಿರ್ಮಿಸಬಹುದು

೧೨ ಯಮರಾಜನ ಪ್ರತಿಮೆಯ ಲಕ್ಷಣವನ್ನು ಹೇಳುವೆನು ಆ ದೇವನು ದಂಡವನ್ನೂ ಪಾಶವನ್ನೂ ಧರಿಸಿರುವನು ಅತ್ಯುನ್ನತವಾದ ಮಹಿಷದ ಮೇಲೆ ಕುಳಿತಿರುವನು ಕರಿಯಕಾಡಿಗೆಯನ್ನು ಬಣ್ಣದಲ್ಲಿ ಹೋಲುವನು

೧೩-೧೪ ಹೀಗಿಲ್ಲದಿದ್ದರೆ ಯಮನನ್ನು ಸಿಂಹಾಸನದಲ್ಲಿ ಕುಳಿತಿರುವಂತೆ ಬೇಕಾದರೂ ಚಿತ್ರಿಸಬಹುದು ಆತನ ಕಣ್ಣುಗಳು ಉರಿಯುತ್ತಿರುವ ಬೆಂಕಿಯಂತಿರುವುವು ವಾಹನವಾದ ಮಹಿಷವು ಸಮೀಪದಲ್ಲಿ ನಿಂತಿರುವುದು ಚಿತ್ರಗುಪ್ತನು ಪಕ್ಕದಲ್ಲಿಯೇ ಇರುವನು ಸೌಮ್ಯರೂಪರಾದ ದೇವತೆಗಳೂ, ಉಗ್ರರೂಪರಾದ ಅಸುರರೂ, ಭಯಂಕರಾಕಾರರಾದ ಯಮಕಿಂಕರರೂ ಸುತ್ತಲೂ ಇರುವಂತೆ ತೋರಿಸಬೇಕು

ರಾಕ್ಷಸೇಂದ್ರಂ ತಥಾ ವಕ್ಷ್ಯೇ ಲೋಕಪಾಲಂ ಚ ನೈರ್ಋತಂ ।
ನರಾರೂಢಂ ಮಹಾಕಾಯಂ ರಕ್ಷೋಭಿರ್ಬಹುಭಿರ್ವೃತಂ ॥೧೫॥

ಖಡ್ಗಹಸ್ತಂ ಮಹಾನೀಲಂ ಕಜ್ಜಲಾಚಲಸಂನಿಭಂ ।
ನರಯುಕ್ತವಿಮಾನಸ್ಥಂ ಪೀತಾಭರಣಭೂಷಿತಂ ॥೧೬॥

ವರುಣಂ ಚ ಪ್ರವಕ್ಷ್ಯಾಮಿ ಪಾಶಹಸ್ತಂ ಮಹಾಬಲಂ ।
ಶಂಖಸ್ಫಟಿಕವರ್ಣಾಭಂ ಸಿತಹಾರಾಂಬರಾವೃತಂ ॥೧೭॥

ಝಷಾಸನಗತಂ ಶಾಂತಂ ಕಿರೀಟಾಂಗದಧಾರಿಣಂ ।
ವಾಯುರೂಪಂ ಪ್ರವಕ್ಷ್ಯಾಮಿ ಧೂಮ್ರಂ ತು ಮೃಗವಾಹನಂ ॥೧೮॥

ಚಿತ್ರಾಂಬರಧರಂ ಶಾಂತಂ ಯುವಾನಂ ಕುಂಚಿತಭ್ರುವಂ ।
ಮೃಗಾಧಿರೂಢಂ ವರದಂ ಪತಾಕಾಧ್ವಜಸಂಯುತಂ ॥೧೯॥

---

೧೫ ರಾಕ್ಷಸೇಂದ್ರನೂ ಲೋಕಪಾಲಕನೂ ಆದ ನಿರಋತಿಯ ಪ್ರತಿಮೆಯ ಲಕ್ಷಣವನ್ನು ಹೇಳುವೆನು ಕೇಳು ಅವನು ಬಹ ಜನ ರಾಕ್ಷಸರಿಂದ ಪರಿವೃತನಾಗಿ, ಮನುಷ್ಯವಾಹನನಾಗಿ ಕಂಗೊಳಿಸುವನು

೧೬ ಕೈಯಲ್ಲಿ ಕತ್ತಿಯನ್ನು ಹಿಡಿದು ಕಾಡಿಗೆಯ ಬೆಟ್ಟದಂತೆ ಅಚ್ಚಗಪ್ಪಾಗಿರುವನು ಮನುಷ್ಯರನ್ನು ಹೂಡಿದ ವಿಮಾನದಲ್ಲಿ ಕುಳಿತು ಸುವರ್ಣಾಭರಣಗಳನ್ನು ತೊಟ್ಟಿರುವನು

೧೭ ಇನ್ನು ವರುಣವಿಗ್ರಹದ ಲಕ್ಷಣವನ್ನು ಹೇಳುವೆನು ಅವನು ಪಾಶವನ್ನು ಕೈಯಲ್ಲಿ ಹಿಡಿದಿರುವನು ಬಹು ಬಲಶಾಲಿ ಬಣ್ಣದಲ್ಲಿ ಶಂಖವನ್ನೂ ಸ್ಫಟಿಕವನ್ನೂ ಹೋಲುವನು ಶುಭ್ರವಾದ ಹಾರವನ್ನೂ ವಸ್ತ್ರವನ್ನೂ ಧರಿಸಿರುವನು ತನ್ನ ವಾಹನವಾದ ಮಕರದ ಮೇಲೆ ಕುಳಿತಿರುವನು ಶಾಂತರೂಪನಾಗಿ ಕಿರೀಟವನ್ನೂ ತೋಳುಬಳೆಯನ್ನೂ ಹಾಕಿಕೊಂಡಿರುವನು

೧೮-೧೯ ವಾಯುಪ್ರತಿಮೆಯ ರೂಪವನ್ನು ಹೇಳುವೆನು ಅವನು ಧೂಮ್ರವರ್ಣದವನು ಜಿಂಕೆಯೇ ಅವನ ವಾಹನ ಚಿತ್ರವರ್ಣದ ವಸ್ತ್ರವನ್ನುಟ್ಟು, ಶಾಂತಮೂರ್ತಿಯಾಗಿರುವನು ಅವನ ಹುಬ್ಬುಗಳು ಬಿಲ್ಲಿನಂತೆ ಬಗ್ಗಿಕೊಂಡಿರುವವು ಯೌವನದಿಂದ ಕಂಗೊಳಿಸುತ್ತ, ಜಿಂಕೆಯನ್ನೇರಿ ಭಕ್ತರಿಗೆ ವರವನ್ನು ಕರುಣಿಸುತ್ತಿರುವನು ಬಾವುಟಗಳೂ ಧ್ವಜಗಳೂ ಸುತ್ತಲೂ ಹಾರಾಡುತ್ತಿರುವುವು

**ಕುಬೇರಂ ಚ ಪ್ರವಕ್ಷ್ಯಾಮಿ ಕುಂಡಲಾಭ್ಯಾಮಲಂಕೃತಂ।**
**ಮಹೋದರಂ ಮಹಾಕಾಯಂ ನಿಧ್ಯಷ್ಟಕಸಮನ್ವಿತಂ ॥೨೦॥**

**ಗುಹ್ಯಕೈರ್ಬಹುಭಿರ್ಯುಕ್ತಂ ಧನವ್ಯಗ್ರಕರೈಸ್ತಥಾ।**
**ಹಾರಕೇಯೂರರಚಿತಂ ಸಿತಾಂಬರಧರಂ ಸದಾ ॥೨೧॥**

**ಗದಾಧರಂ ಚ ಕರ್ತವ್ಯಂ ವರದಂ ಮುಕುಟಾನ್ವಿತಂ।**
**ನರಯುಕ್ತವಿಮಾನಸ್ಥಮೇವಂ ರೀತ್ಯಾ ಚ ಕಾರಯೇತ್ ॥೨೨॥**

**ತಥೈವೇಶಂ ಪ್ರವಕ್ಷ್ಯಾಮಿ ಧವಲಂ ಧವಲೇಕ್ಷಣಂ।**
**ತ್ರಿಶೂಲಪಾಣಿನಂ ದೇವಂ ತ್ರ್ಯಕ್ಷಂ ವೃಷಗತಂ ಪ್ರಭುಂ ॥೨೩॥**

---

೨೦ ಕುಬೇರ ವಿಗ್ರಹದ ಲಕ್ಷಣವನ್ನು ಹೇಳುವೆನು ಅವನು ಎರಡು ಕಿವಿಗಳಿಗೂ ಕುಂಡಲಗಳನ್ನು ಹಾಕಿಕೊಂಡಿರುವನು ಅವನ ಉದರವೂ ದೇಹವೂ ಬಹು ದೊಡ್ಡವು ಪದ್ಮ, ಮಹಾಪದ್ಮ ಮೊದಲಾದ ಎಂಟುಜನ ನಿಧಿದೇವತೆಗಳು ಅವನನ್ನು ಸೇವಿಸುತ್ತಿರುವರು

೨೧ ಧನರಾಶಿಯನ್ನು ಎಚ್ಚರಿಕೆಯಿಂದ ಕಾಯುತ್ತಿರುವ ಹಲವರು ಗುಹ್ಯಕರು ಅವನನ್ನು ಓಲೈಸುತ್ತಿರುವರು ಆತನು ಹಾರವನ್ನೂ ತೋಳುಬಳೆಗಳನ್ನೂ ಧರಿಸಿ ಪೀತಾಂಬರವನ್ನು ಉಟ್ಟಿರುವನು

೨೨ ಮನುಷ್ಯಯುಕ್ತವಾದ ವಿಮಾನದಲ್ಲಿ ಕುಳಿತು, ಗದೆಯನ್ನು ಕೈಯಲ್ಲಿ ಹಿಡಿದು, ಕಿರೀಟವನ್ನು ಧರಿಸಿ ವರವನ್ನು ಕರುಣಿಸುತ್ತಿರುವಂತೆ ಕುಬೇರನ ಮೂರ್ತಿಯನ್ನು ನಿರ್ಮಿಸಬೇಕು

೨೩ ಇನ್ನು ಈಶಾನ ಪ್ರತಿಮೆಯ ಲಕ್ಷಣವನ್ನು ಹೇಳುವೆನು ಜಗತ್ಪ್ರಭುವಾದ ಆ ದೇವನು ಬೆಳ್ಳಗಿದ್ದಾನೆ ಅವನ ಕಣ್ಣುಗಳೂ ಸಹ ಬೆಳ್ಳಗಿವೆ ಅವನು ತ್ರಿಶೂಲವನ್ನು ಕೈಯಲ್ಲಿ ಹಿಡಿದು, ವೃಷಭವನ್ನೇರಿ ಕುಳಿತು ಮೂರು ಕಣ್ಣುಗಳಿಂದ ವಿರಾಜಿಸುತ್ತಿರುವನು

ಮಾತೃಣಾಂ ಲಕ್ಷಣಂ ವಕ್ಷ್ಯೇ ಯಥಾವದನುಪೂರ್ವಶಃ ।
ಬ್ರಹ್ಮಾಣೀ ಬ್ರಹ್ಮಸದೃಶೀ ಚತುರ್ವಕ್ತ್ರಾ ಚತುರ್ಭುಜಾ ॥೨೪॥
ಹಂಸಾಧಿರೂಢಾ ಕರ್ತವ್ಯಾ ಸಾಕ್ಷಸೂತ್ರಕಮಂಡಲುಃ ।
ಮಹೇಶ್ವರಸ್ಯ ರೂಪೇಣ ತಥಾ ಮಾಹೇಶ್ವರೀ ಮತಾ ॥೨೫॥
ಜಟಾಮುಕುಟಸಂಯುಕ್ತಾ ವೃಷಸ್ಥಾ ಚಂದ್ರಶೇಖರಾ ।
ಕಪಾಲಶೂಲಖಟ್ವಾಂಗವರದಾಢ್ಯಚತುರ್ಭುಜಾ ॥೨೬॥
ಕುಮಾರರೂಪಾ ಕೌಮಾರೀ ಮಯೂರವರವಾಹನಾ ।
ರಕ್ತವಸ್ತ್ರಧರಾ ತದ್ವಚ್ಛೂಲಶಕ್ತಿಧರಾ ಮತಾ ॥೨೭॥
ಹಾರಕೇಯೂರಸಂಪನ್ನಾ ಕೃಕವಾಕುಧರಾ ತಥಾ ।
ವೈಷ್ಣವೀ ವಿಷ್ಣುಸದೃಶೀ ಗರುಡೇ ಸಮುಪಸ್ಥಿತಾ ॥೨೮॥

---

೨೪ ಇನ್ನುಮುಂದೆ ಸಪ್ತಮಾತೃಗಳ ಲಕ್ಷಣವನ್ನು ಹೇಳುವೆನು ಬ್ರಹ್ಮಾಣಿಗೆ ಬ್ರಹ್ಮನಂತೆಯೇ ನಾಲ್ಕು ಮುಖಗಳೂ ನಾಲ್ಕು ತೋಳುಗಳೂ ಇವೆ ಜಪಸರವನ್ನೂ ಕಮಂಡಲುವನ್ನೂ ಹಿಡಿದು ಆಕೆಯು ಹಂಸದ ಹೇಲೆ ಕುಳಿತಿರುವಳು ಅವಳ ಪ್ರತಿಮೆ ಈ ಲಕ್ಷಣವುಳ್ಳದಾಗಿರಬೇಕು

೨೫-೨೬ ಮಾಹೇಶ್ವರಿಯು ರೂಪವು ಮಹೇಶ್ವರನ ರೂಪದಂತೆಯೇ ಇದೆ ಜಟೆಯನ್ನೂ ಕಿರೀಟವನ್ನೂ ಧರಿಸಿ, ಅರ್ಧಚಂದ್ರನನ್ನು ಮುಡಿದು, ಅವಳು ವೃಷಭದ ಮೇಲೆ ಕುಳಿತಿರುವಳು ಕಪಾಲ, ಶೂಲ, ಯೋಗದಂಡ ಇವುಗಳನ್ನು ಮೂರು ಕೈಗಳಲ್ಲಿ ಹಿಡಿದು ನಾಲ್ಕನೆಯದರಲ್ಲಿ ಭಕ್ತರಿಗೆ ವರವನ್ನು ನೀಡುತ್ತಿರುವಳು

೨೭ ಕೌಮಾರಿಯು ಷಣ್ಮುಖನ ರೂಪದಿಂದಲೇ ಇರುವಳು ನವಿಲನ್ನು ಏರಿರುವಳು ಕೆಂಪು ಸೀರೆಯನ್ನು ಉಟ್ಟುಕೊಂಡಿರುವಳು ಹಾರವನ್ನೂ ತೋಳುಬಳೆಗಳನ್ನೂ ಹಾಕಿಕೊಂಡು ಕುಮಾರಸ್ವಾಮಿಯಂತೆಯೇ ಶೂಲವನ್ನೂ ಶಕ್ತಿಯನ್ನೂ ಧರಿಸಿ ಕೈಯಲ್ಲಿ ಕುಕ್ಕುಟವನ್ನು ಹಿಡಿದಿರುವಳು

೨೮-೨೯ ವೈಷ್ಣವಿಯು ವಿಷ್ಣುವಿನ ಹಾಗೆಯೇ ಗರುಡವಾಹನಳಾಗಿ ನಾಲ್ಕು ತೋಳುಗಳಿಂದ ವಿರಾಜಿಸುತ್ತಿರುವಳು ಮೂರು ಕೈಗಳಲ್ಲಿ ಶಂಖ, ಚಕ್ರ

**ಚತುರ್ಬಾಹುಶ್ಚ ವರದಾ ಶಂಖಚಕ್ರಗದಾಧರಾ ।**
**ಸಿಂಹಾಸನಗತಾ ವಾಪಿ ಬಾಲಕೇನ ಸಮನ್ವಿತಾ ॥೨೯॥**

**ವಾರಾಹೀಂ ಚ ಪ್ರವಕ್ಷ್ಯಾಮಿ ಮಹಿಷೋಪರಿ ಸಂಸ್ಥಿತಾಂ ।**
**ವರಾಹಸದೃಶೀ ದೇವೀ ಘಂಟಾಚಾಮರಧಾರಿಣೀ ॥೩೦॥**

**ಗದಾಚಕ್ರಧರಾ ತದ್ವದ್ದಾನವೇಂದ್ರವಿನಾಶಿನೀ ।**
**ಇಂದ್ರಾಣೀಮಿಂದ್ರಸದೃಶೀಂ ವಜ್ರಶೂಲಗದಾಧರಾಂ ॥೩೧॥**

**ಗಜಾಸನಗತಾಂ ದೇವೀಂ ಲೋಚನೈರ್ಬಹುಭಿರ್ವೃತಾಂ ।**
**ತಪ್ತಕಾಂಚನವರ್ಣಾಭಾಂ ದಿವ್ಯಾಭರಣಭೂಷಿತಾಂ ॥೩೨॥**

**ತೀಕ್ಷ್ಣಖಡ್ಗಧರಾಂ ತದ್ವದ್ದಾನವೇಂದ್ರವಿನಾಶಿನೀಂ ।**
**ಚಾಮುಂಡಾಂ ಚ ಪ್ರವಕ್ಷ್ಯಾಮಿ ಯಥಾರೂಪಾಂ ಯಥಾಯುಧಾಂ ।**
**ದೀರ್ಘಜಿಹ್ವಾಮೂರ್ಧ್ವಕೇಶೀಮಸ್ಥಿಖಂಡೈಶ್ಚ ಮಂಡಿತಾಂ ॥೩೩॥**

---

ಮತ್ತು ಗದೆಗಳನ್ನು ಧರಿಸಿ ಮತ್ತೊಂದರಿಂದ ವರವನ್ನು ನೀಡುತ್ತಿರುವಳು ಬಾಲಕ ಸಹಿತಳಾಗಿ ಸಿಂಹಾಸನದಲ್ಲಿ ಕುಳಿತಿರುವಂತೆ ಬೇಕಾದರೂ ಅವಳನ್ನು ಚಿತ್ರಿಸಬಹುದು

೩೦ ಮಹಿಷವಾಹನೆಯಾದ ವಾರಾಹಿಯ ಲಕ್ಷಣವನ್ನು ಹೇಳುವೆನು ಆ ದೇವಿಯು ವರಾಹಮೂರ್ತಿಯಂತೆಯೇ ಇರುವಳು ಘಂಟೆ, ಚಾಮರ, ಗದೆ ಮತ್ತು ಚಕ್ರಗಳನ್ನು ಧರಿಸಿ ದೈತ್ಯನಾಶಿನಿಯೆಂದು ಪ್ರಖ್ಯಾತಳಾಗಿರುವಳು

೩೧-೩೨ ಇಂದ್ರಾಣಿಯು ಇಂದ್ರನನ್ನು ಹೋಲುವಳು ವಜ್ರ, ಶೂಲ ಮತ್ತು ಗದೆಗಳನ್ನು ಧರಿಸಿರುವಳು ಗಜವಾಹನೆಯಾಗಿ ಅನೇಕ ನೇತ್ರಗಳಿಂದ ಶೋಭಿಸುವಳು ಪುಟವಿಟ್ಟ ಚಿನ್ನವನ್ನು ಬಣ್ಣದಲ್ಲಿ ಹೋಲುವಳು ತೀಕ್ಷ್ಣವಾದ ಖಡ್ಗವನ್ನು ಧರಿಸಿ ದೈತ್ಯವೀರರನ್ನು ಸಂಹರಿಸುತ್ತಿರುವಳು

೩೩ ಚಾಮುಂಡಿಯ ರೂಪವನ್ನೂ ಆಯುಧಗಳನ್ನೂ ಕ್ರಮವಾಗಿ ಹೇಳುವನು ಹೊರಕ್ಕೆ ನೀಡಿದ ನಾಲಗೆಯಿಂದಲೂ ಮೇಲಕ್ಕೆದ್ದು ನಿಂತಿರುವ ಕೂದಲಿನಿಂದಲೂ ಕೂಡಿ ಆಕೆಯು ತುಂಡುಮೂಳೆಗಳ ಹಾರವನ್ನು ಹಾಕಿಕೊಂಡಿರುವಳು

ದಂಷ್ಟ್ರಾಕರಾಲವದನಾಂ ಕುರ್ಯಾಚ್ಚೈವ ಕೃಶೋದರೀಂ ।
ಕಪಾಲಮಾಲಿನೀಂ ದೇವೀಂ ಮುಂಡಮಾಲಾವಿಭೂಷಿತಾಂ ॥೩೪॥

ಕಪಾಲಂ ವಾಮಹಸ್ತೇ ತು ಮಾಂಸಶೋಣಿತಪೂರಿತಂ ।
ಮಸ್ತಿಷ್ಕಾಕ್ತಂ ಚ ಬಿಭ್ರಾಣಾಂ ಶಕ್ತಿಕಾಂ ದಕ್ಷಿಣೇ ಕರೇ ॥೩೫॥

ಗೃಧ್ರಸ್ಥಾ ವಾಯಸಸ್ಥಾ ವಾ ನಿರ್ಮಾಂಸಾ ವಿನತೋದರೀ ।
ಕರಾಲವದನಾ ತದ್ವತ್ಕರ್ತವ್ಯಾ ಸಾ ತ್ರಿಲೋಚನಾ ॥೩೬॥

ಚಾಮುಂಡಾ ಬದ್ಧಘಂಟಾ ವಾ ದ್ವೀಪಿಚರ್ಮಧರಾ ಶುಭಾ ।
ದಿಗ್ವಾಸಾಃ ಕಾಲಿಕಾ ತದ್ವದ್ರಾಸಭಸ್ಥಾ ಕಪಾಲಿನೀ ॥೩೭॥

ಸುರಕ್ತಪುಷ್ಪಾಭರಣಾ ವರ್ಧನೀಧ್ವಜಸಂಯುತಾ ।
ವಿನಾಯಕಂ ಚ ಕುರ್ವೀತ ಮಾತೃಣಾಮಂತಿಕೇ ಸದಾ ॥೩೮॥

---

೩೪ ಕೋರೆಹಲ್ಲುಗಳಿಂದ ಮುಖವು ಭಯಂಕರವಾಗಿರುವಂತೆಯೂ, ಉದರವು ಕೃಶವಾಗಿರುವಂತೆಯೂ ದೇವಿಯ ಪ್ರತಿಮೆಯನ್ನು ನಿರ್ಮಿಸಿ, ಕಪಾಲಗಳ ಮಾಲೆಯನ್ನೂ ರುಂಡಗಳ ಮಾಲೆಯನ್ನೂ ಧರಿಸಬೇಕು

೩೫ ಆಕೆಯು ಎಡಗೈಯಲ್ಲಿ ರಕ್ತಮಾಂಸಗಳಿಂದ ತುಂಬಿ ಮೆದಳು ಅಂಟಿಕೊಂಡಿರುವ ಕಪಾಲವನ್ನೂ ಬಲಗೈಯಲ್ಲಿ ಶಕ್ತ್ಯಾಯುಧವನ್ನೂ ಹಿಡಿದಿರುವಳು

೩೬ ಶರೀರವು ತೆಳ್ಳಗಿರಲು, ಉದರವು ಕೃಶವಾಗಿರಲು ಅವಳು ಹದ್ದಿನ ಮೇಲೆಯೋ, ಕಾಗೆಯ ಮೇಲೆಯೋ ಕುಳಿತಿರುವಳು ಮೂರು ಕಣ್ಣುಗಳಿಂದ ಆಕೆಯ ಮುಖವು ಭಯಂಕರವಾಗಿ ಕಾಣುವುದು

೩೭ ಚಾಮುಂಡಿಯ ಪ್ರತಿಮೆಯನ್ನು ಮುಂದೆ ಹೇಳುವ ರೀತಿಯಲ್ಲಾದರೂ ನಿರ್ಮಿಸಬಹುದು ಅವಳು ಘಂಟೆಗಳನ್ನು ಕಟ್ಟಿಕೊಂಡಿರುವಳು ಗಜ ಚರ್ಮವನ್ನು ಉಟ್ಟಿರುವಳು ದಿಗಂಬರೆಯಾಗಿ ಕಾಳಿಯೆನಿಸಿ ಕತ್ತೆಯ ಮೇಲೆ ಕುಳಿತಿರುವಳು ಕಪಾಲವನ್ನು ಹಿಡಿದಿರುವಳು ಅಚ್ಚಗೆಂಪಾದ ಹೂಗಳನ್ನು ಮುಡಿದಿರುವಳು ಆಕೆಯ ಧ್ವಜವು ಜಲಪಾತ್ರವಿಶೇಷದ ಆಕಾರವಾಗಿರುವುದು

೩೮-೩೯ ಸಪ್ತಮಾತೃಕೆಯರ ಬಳಿಯಲ್ಲಿ ಯಾವಾಗಲೂ ವಿನಾಯಕನ ಮೂರ್ತಿಯನ್ನು ನಿರ್ಮಿಸಬೇಕು ಜಟಾಧರನೂ, ವೀಣಾಹಸ್ತನೂ, ತ್ರಿಶೂಲ

ವಿರೇಶ್ವರಶ್ಚ ಭಗವಾನ್ ವೃಷಾರೂಢೋ ಜಟಾಧರಃ ।
ವೀಣಾಹಸ್ತಸ್ತ್ರಿಶೂಲೀ ಚ ಮಾತೃಣಾಮಗ್ರತೋ ಭವೇತ್ ॥೩೯॥

ಶ್ರಿಯಂ ದೇವೀಂ ಪ್ರವಕ್ಷ್ಯಾಮಿ ನವೇ ವಯಸಿ ಸಂಸ್ಥಿತಾಂ ।
ಸುಯೌವನಾಂ ಪೀನಗಂಡಾಂ ರಕ್ತೋಷ್ಠೀಂ ಕುಂಚಿತಭ್ರುವಂ ॥೪೦॥

ಪೀನೋನ್ನತಸ್ತನದ್ವಂದ್ವಮಣಿಕುಂಡಲಮಂಡಿತಾಂ ।
ಸುಮಂಡಲಂ ಮುಖಂ ತಸ್ಯಾಃ ಶಿರಃ ಸೀಮಂತಭೂಷಿತಂ ॥೪೧॥

ಪದ್ಮಸ್ವಸ್ತಿಕಶಂಖೈರ್ವಾ ಭೂಷಿತಾಂ ಕುಂಡಲಾಲಕೈಃ ।
ಕಂಚುಕಾಬದ್ಧಗಾತ್ರೀ ಚ ಹಾರಭೂಷೌ ಪಯೋಧರೌ ॥೪೨॥

ನಾಗಹಸ್ತೋಪಮೌ ಬಾಹೂ ಕೇಯೂರಕಟಕೋಜ್ಜ್ವಲೌ ।
ಪದ್ಮಂ ಹಸ್ತೇ ಪ್ರದಾತವ್ಯಂ ಶ್ರೀಫಲಂ ದಕ್ಷಿಣೇ ಕರೇ ॥೪೩॥

---

ಧಾರಿಯೂ, ಗಣಾಧಿಪತಿಯೂ ಆದ ಭಗವಾನ್ ವೀರೇಶ್ವರನು ವೃಷಭಾರೂಢನಾಗಿ ಇವರ ಮುಂದೆ ನಿಂತಿರುವನು

೪೦ ಇನ್ನು ಲಕ್ಷ್ಮೀದೇವಿಯ ಲಕ್ಷಣವನ್ನು ಹೇಳುವೆನು ಕೇಳು ಆಕೆಯು ಪೂರ್ವವಯಸ್ಸಿನವಳು ನವಯೌವನದಿಂದ ಕಂಗೊಳಿಸುವಳು ಅವಳ ಕೆನ್ನೆಗಳು ತುಂಬಿಕೊಂಡಿವೆ ತುಟಿಗಳು ಕೆಂಪಾಗಿವೆ ಹುಬ್ಬುಗಳು ಬಿಲ್ಲಿನಂತೆ ಬಗ್ಗಿವೆ

೪೧ ಆಕೆಯ ಸ್ತನಗಳೆರಡೂ ಪರಿಪುಷ್ಟವಾಗಿಯೂ ಉನ್ನತವಾಗಿಯೂ ಇವೆ ಅವಳು ರತ್ನದ ಓಲೆಗಳಿಂದ ಅಲಂಕೃತಳಾಗಿದ್ದಾಳೆ ಸುಂದರವಾದ ಮುಖ ಮಂಡಲದಿಂದ ವಿರಾಜಿಸುತ್ತಿದ್ದಾಳೆ ನೆತ್ತಿಯಲ್ಲಿ ಬೈತಲೆಯನ್ನು ತೆಗೆದಿದ್ದಾಳೆ

೪೨ ಪದ್ಮ, ಸ್ವಸ್ತಿಕ, ಶಂಖ ಮುಂತಾದ ದಿವ್ಯ ಲಾಂಛನಗಳಿಂದ ಶೋಭಿಸುತ್ತಿರುವಳು ಕುಪ್ಪಸವನ್ನು ತೊಟ್ಟು ಸ್ತನಗಳಿಗೆ ಅಲಂಕಾರವಾಗಿ ಹಾರವನ್ನು ಧರಿಸಿದ್ದಾಳೆ ಅವಳ ಮುಂಗುರುಳು ಸುರುಳಿಸುರುಳಿಯಾಗಿವೆ

೪೩ ತೋಳುಗಳು ಆನೆಯ ಸೊಂಡಲಿನಂತಿವೆ ಅವು ಬಳೆಗಳಿಂದಲೂ ತೋಳುಬಳೆಗಳಿಂದಲೂ ಶೋಭಿಸುತ್ತಿವೆ ದೇವಿಯು ಎಡಗೈಯಲ್ಲಿ ತಾವರೆಯನ್ನೂ ಬಲಗೈಯಲ್ಲಿ ಬಿಲ್ವಫಲವನ್ನೂ ಹಿಡಿದಿರುವಳು

ಮೇಖಲಾಭರಣಾಂ ತದ್ವತ್ತಪ್ತಕಾಂಚನಸಪ್ರಭಾಂ ।
ನಾನಾಭರಣಸಂಪನ್ನಾಂ ಶೋಭನಾಂಬರಧಾರಿಣೀಂ ॥೪೪॥

ಪಾರ್ಶ್ವೇ ತಸ್ಯಾಃ ಸ್ತ್ರಿಯಃ ಕಾರ್ಯಾಶ್ಚಾಮರವ್ಯಗ್ರಪಾಣಯಃ ।
ಪದ್ಮಾಸನೋಪವಿಷ್ಟಾ ತು ಪದ್ಮಸಿಂಹಾಸನಸ್ಥಿತಾ ॥೪೫॥

ಕರಿಭ್ಯಾಂ ಸ್ನಾಪ್ಯಮಾನಾಸೌ ಭೃಂಗಾರಾಭ್ಯಾಮನೇಕಶಃ ।
ಪ್ರತಿಪಾಲಯುತೌ ಕಾರ್ಯೌ ಭೃಂಗಾರಾಭ್ಯಾಂ ತಥಾಪರೌ ॥೪೬॥

ಸ್ತೂಯಮಾನಾ ಚ ಲೋಕೇಶೈಸ್ತಥಾ ಗಂಧರ್ವಗುಹ್ಯಕೈಃ ।
ತಥೈವ ಯಕ್ಷಿಣೀ ಕಾರ್ಯಾ ಸಿದ್ಧಾಸುರನಿಷೇವಿತಾ ॥೪೭॥

ಪಾರ್ಶ್ವಯೋಃ ಕಲಶೌ ತಸ್ಯಾಸ್ತೋರಣೇ ದೇವದಾನವಾಃ ।
ನಾಗಾಶ್ಚೈವ ತು ಕರ್ತವ್ಯಾಃ ಖಡ್ಗಖೇಟಕಧಾರಿಣಃ ॥೪೮॥

---

೪೪ ಮಹಾಲಕ್ಷ್ಮಿಯು ಅಂದವಾದ ಪೀತಾಂಬರವನ್ನುಟ್ಟು, ಡಾಬನ್ನು ಹಾಕಿಕೊಂಡು, ಬಗೆಬಗೆಯ ಒಡವೆಗಳನ್ನು ತೊಟ್ಟಿರುವಳು ಅವಳ ದೇಹದ ಕಾಂತಿಯು ಪುಟಕ್ಕೆ ಹಾಕಿದ ಚಿನ್ನದ ಬಣ್ಣವನ್ನು ಹೋಲುವುದು

೪೫ ಸುಂದರಿಯರಾದ ದೇವತಾಸ್ತ್ರೀಯರು ಚಾಮರಗಳನ್ನು ಬೀಸುತ್ತಾ ಆಕೆಯ ಪಕ್ಕದಲ್ಲಿ ನಿಂತಿರುವರು ಲಕ್ಷ್ಮಿಯು ಪದ್ಮಸಿಂಹಾಸನದ ಮೇಲೆ ಪದ್ಮಾಸನದಲ್ಲಿ ಕುಳಿತಿರುವಳು

೪೬ ಎರಡು ಆನೆಗಳು ಎಡಬಲಗಳಲ್ಲಿ ನಿಂತು ಸುವರ್ಣಕಲಶಗಳಿಂದ ಆಕೆಗೆ ಹಲವುಸಾರಿ ಅಭಿಷೇಕಮಾಡುತ್ತಿರುವುವು ಇನ್ನೆರಡು ಆನೆಗಳು ಸುವರ್ಣ ಕುಂಭಗಳನ್ನು ಸಿದ್ಧವಾಗಿ ಇಟ್ಟುಕೊಂಡು ಕಾಯುತ್ತಿರುವುವು ಲೋಕಪಾಲಕರೂ, ಗಂಧರ್ವರೂ, ಗುಹ್ಯಕರೂ ಆಕಯನ್ನು ಸ್ತೋತ್ರಮಾಡುತ್ತಿರುವರು

೪೭-೪೮ ಸಿದ್ಧರಿಂದಲೂ ಅಸುರರಿಂದಲೂ ಸೇವೆಯನ್ನು ಕೈಗೊಳ್ಳುವಂತೆ ಯಕ್ಷಿಣಿಯರ ಪ್ರತಿಮೆಯನ್ನು ನಿರ್ಮಿಸಬೇಕು ಎರಡು ಪಕ್ಕಗಳಲ್ಲಿಯೂ ಕಲಶಗಳನ್ನು ಇಡಬೇಕು ತೋರಣದಲ್ಲಿ ದೇವತೆಗಳು, ದಾನವರು, ಕತ್ತಿಗುರಾಣಿಗಳನ್ನು ಹಿಡಿದಿರುವ ನಾಗರು ಇವರನ್ನು ವಿರಚಿಸಬೇಕು

ಅಧಸ್ತಾತ್ಪ್ರಕೃತಿಸ್ತೇಷಾಂ ನಾಭೇರೂರ್ಧ್ವಂ ತು ಪೌರುಷೀ।
ಫಣಾಶ್ಚ ಮೂರ್ಧ್ನಿ ಕರ್ತವ್ಯಾ ದ್ವಿಜಿಹ್ವಾ ಬಹವಃ ಸಮಾಃ ॥೪೯॥

ಪಿಶಾಚಾ ರಾಕ್ಷಸಾಶ್ಚೈವ ಭೂತವೇತಾಲಜಾತಯಃ।
ನಿರ್ಮಾಂಸಾಶ್ಚೈವ ತೇ ಸರ್ವೇ ರೌದ್ರಾ ವಿಕೃತರೂಪಿಣಃ ॥೫೦॥

ಕ್ಷೇತ್ರಪಾಲಶ್ಚ ಕರ್ತವ್ಯೋ ಜಟಿಲೋ ವಿಕೃತಾನನಃ।
ದಿಗ್ವಾಸಾ ಜಟಿಲಸ್ತದ್ವಚ್ಛ್ವಗೋಮಾಯುನಿಷೇವಿತಃ ॥೫೧॥

ಕಪಾಲಂ ವಾಮಹಸ್ತೇ ತು ಶಿರಃ ಕೇಶಸಮಾವೃತಂ।
ದಕ್ಷಿಣೇ ಶಕ್ತಿಕಾಂ ದದ್ಯಾದಸುರಕ್ಷಯಕಾರಿಣೀಂ ॥೫೨॥

ಅಥಾತಃ ಸಂಪ್ರವಕ್ಷ್ಯಾಮಿ ದ್ವಿಭುಜಂ ಕುಸುಮಾಯುಧಂ।
ಪಾರ್ಶ್ವೇ ಚಾಶ್ವಮುಖಂ ತಸ್ಯ ಮಕರಧ್ವಜಸಂಯುತಂ ॥೫೩॥

---

೪೯ ನಾಗರಿಗೆ ಹೊಕ್ಕಳಿಂದ ಕೆಳಕ್ಕೆ ಅವರ ಸಹಜವಾದ ಆಕಾರವೂ ಮೇಲಕ್ಕೆ ಪುರುಷಾಕಾರವೂ ಇರುವುವು ತಲೆಯಲ್ಲಿ ಹೆಡೆಗಳನ್ನೂ ಅವುಗಳಲ್ಲೊಂದೊಂದಕ್ಕೂ ಸಮನಾದ ಎರಡೆರಡು ನಾಲಗೆಗಳನ್ನೂ ನಿರ್ಮಿಸಬೇಕು

೫೦ ಪಿಶಾಚರು, ರಾಕ್ಷಸರು, ಭೂತಗಳು, ಬೇತಾಳಗಳು ಇವರೆಲ್ಲರೂ ಮಾಂಸರಹಿತರು, ವಿಕಾರವಾದ ರೂಪದಿಂದ ಕೂಡಿ ಭಯಂಕರವಾಗಿ ಕಾಣುವರು

೫೧ ಜಟೆಯನ್ನು ಬೆಳಸಿ, ವಿಕಾರವಾದ ಮುಖದಿಂದ ಕೂಡಿರುವ ಹಾಗೆ ಕ್ಷೇತ್ರಪಾಲನ ಪ್ರತಿಮೆಯನ್ನು ನಿರ್ಮಿಸಬೇಕು ಅವನು ದಿಗಂಬರ, ಜಟಾಧರ ನಾಯಿನರಿಗಳೇ ಅವನ ಪರಿಚಾರಕರು

೫೨ ಅವನ ಎಡಗೈಯಲ್ಲಿ ಕಪಾಲವನ್ನೂ, ಕೂದಲಿರುವ ತಲೆಯನ್ನೂ ಕೊಡಬೇಕು ಬಲಗೈಯಲ್ಲಿ ಅಸುರನಾಶಿನಿಯಾದ ಶಕ್ತ್ಯಾಯುಧವನ್ನು ಕಲ್ಪಿಸಬೇಕು

೫೩ ಇನ್ನುಮುಂದೆ ಮನ್ಮಥನ ಪ್ರತಿಮೆಯ ಲಕ್ಷಣವನ್ನು ಹೇಳುವೆನು ಅವನಿಗೆ ಎರಡು ತೋಳುಗಳು ಹೂವೇ ಅವನ ಆಯುಧ, ಅವನ ಪಕ್ಕದಲ್ಲಿ ಮಕರಧ್ವಜವನ್ನು ಹಿಡಿದಿರುವ ಕಿನ್ನರನು ನಿಂತಿರುವನು

ದಕ್ಷಿಣೇ ಪುಷ್ಪಬಾಣಂ ಚ ವಾಮೇ ಪುಷ್ಪಮಯಂ ಧನುಃ ।
ಪ್ರೀತಿಃ ಸ್ಯಾದ್ದಕ್ಷಿಣೇ ತಸ್ಯ ಭೋಜನೋಪಸ್ಕರಾನ್ವಿತಾ ॥೫೪॥

ರತಿಶ್ಚ ವಾಮಪಾರ್ಶ್ವೇ ತು ಶಯನೋಪಸ್ಕರಾನ್ವಿತಾ ।
ಪಟಶ್ಚ ಪಟಹಶ್ಚೈವ ಖರಃ ಕಾಮಾತುರಸ್ತಥಾ ॥೫೫॥

ಪಾರ್ಶ್ವತೋ ಜಲವಾಪೀ ಚ ವನಂ ನಂದನಮೇವ ಚ ।
ಸುಶೋಭನಶ್ಚ ಕರ್ತವ್ಯೋ ಭಗವಾನ್ ಕುಸುಮಾಯುಧಃ ॥೫೬॥

ಸಂಸ್ಥಾನಮೀಷದ್ವಕ್ರಂ ಸ್ಯಾದ್ವಿಸ್ಮಯಸ್ಮಿತ ವಕ್ತ್ರಕಂ ।
ಏತದುದ್ದೇಶತಃ ಪ್ರೋಕ್ತಂ ಪ್ರತಿಮಾಲಕ್ಷಣಂ ಮಯಾ ।
ವಿಸ್ತರೇಣ ನ ಶಕ್ನೋತಿ ಬೃಹಸ್ಪತಿರಪಿ ದ್ವಿಜಾಃ ॥೫೭॥

ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ದೇವಾರ್ಚಾನುಕೀರ್ತನೇ
ಪ್ರತಿಮಾಲಕ್ಷಣಂ ನಾಮೈಕಷಷ್ಟ್ಯಧಿಕದ್ವಿಶತತಮೋಽಧ್ಯಾಯಃ

---

೫೪ ಬಲಗೈಯಲ್ಲಿ ಪುಷ್ಪಬಾಣವೂ ಎಡಗೈಯಲ್ಲಿ ಪುಷ್ಪಧನುಸ್ಸೂ ಇರುವುವು ಅವನ ಬಲಗಡೆ ಭೋಜನಸಾಮಗ್ರಿಗಳನ್ನು ಹಿಡಿದುಕೊಂಡು ಪ್ರೀತಿ ನಿಂತಿರುವಳು

೫೫ ಶಯನ ಸಾಮಗ್ರಿಗಳಸಹಿತವಾಗಿ ರತಿದೇವಿಯೂ ಪರಿವಾರವರ್ಗಕ್ಕೆ ಸೇರಿದ ಪಟ, ಪಟಹ, ಕಾಮಪೀಡಿತನಾದ ಖರ ಇವರೂ ಎಡಗಡೆಯಲ್ಲಿರುವರು

೫೬ ಪಕ್ಕಗಳಲ್ಲಿ ನೀರುತುಂಬಿದ್ದ ಬಾವಿ, ಸೊಗಸಾದ ಉದ್ಯಾನ ಇವುಗಳನ್ನೂ ಕಲ್ಪಿಸಬೇಕು ಪೂಜ್ಯನಾದ ಮನ್ಮಥನು ಬಹು ಸುಂದರನಾಗಿರಬೇಕು ಅವನ ಆಕೃತಿ ಪಕ್ಕಕ್ಕೆ ಸ್ವಲ್ಪ ಬಗ್ಗಿರುವುದು ಮುಖದಲ್ಲಿ ಆಶ್ಚರ್ಯವೂ ಮಂದ ಹಾಸವೂ ತೋರುತ್ತಿರುವುವು

೫೭ ಪ್ರತಿಮೆಗಳ ಲಕ್ಷಣವನ್ನು ನಾನು ಸಂಗ್ರಹವಾಗಿ ಹೀಗೆ ಹೇಳಿರುವೆನು ಎಲೈ ಬ್ರಾಹ್ಮಣರೇ, ಇದನ್ನು ವಿಸ್ತಾರವಾಗಿ ವರ್ಣಿಸಲು ಬೃಹಸ್ಪತಿಗೂ ಸಾಧ್ಯವಿಲ್ಲ

## ಶ್ರೀಮತ್ಸ್ಯಮಹಾಪುರಾಣಂ

### ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಸೂರ್ಯ, ಅಗ್ನಿ, ಯಮ, ನಿರೃತಿ, ವರುಣ, ವಾಯು, ಕುಬೇರ, ಈಶಾನ, ಸಪ್ತಮಾತೃಗಳು, ಲಕ್ಷ್ಮಿ, ಯಕ್ಷಿಣಿ ಮತ್ತು ಮನ್ಮಥ ಇವರ ಪ್ರತಿಮೆಗಳ ಲಕ್ಷಣವನ್ನು ತಿಳಿಸಿದೆ

ಶ್ರೀಮತ್ಸ್ಯಮಹಾಪುರಾಣದಲ್ಲಿ ದೇವಾರ್ಚಾನುಕೀರ್ತನದಲ್ಲಿ ಪ್ರತಿಮಾಲಕ್ಷಣವೆಂಬ ಇನ್ನೂರ ಅರವತ್ತೊಂದನೆಯ ಅಧ್ಯಾಯವು ಮುಗಿದುದು

## ಅಥ ದ್ವಿಷಷ್ಟ್ಯಧಿಕದ್ವಿಶತತಮೋಽಧ್ಯಾಯಃ

|| ಸೂತ ಉವಾಚ ||

ಪೀಠಿಕಾಲಕ್ಷಣಂ ವಕ್ಷ್ಯೇ ಯಥಾವದನುಪೂರ್ವಶಃ ।
ಪೀಠೋಚ್ಛ್ರಾಯಂ ಯಥಾವಚ್ಚ ಭಾಗಾನ್ ಷೋಡಶ ಕಾರಯೇತ್ ||

ಭೂಮಾವೇಕಃ ಪ್ರವಿಷ್ಟಃ ಸ್ಯಾಚ್ಚತುರ್ಭಿರ್ಜಗತೀ ಮತಾ ।
ವೃತ್ತೋ ಭಾಗಸ್ತಥೈವ ಸ್ಯಾದ್ವೃತ್ತಪಟ್ಟಸ್ತು ಭಾಗತಃ || ೨ ||

ಭಾಗೈಸ್ತ್ರಿಭಿಸ್ತಥಾ ಕಂಠಃ ಕಂಠಪಟ್ಟಸ್ತು ಭಾಗತಃ ।
ಭಾಗಾಭ್ಯಾಮೂರ್ಧ್ವಪಟ್ಟಸ್ತು ಶೇಷಭಾಗೇನ ಪಟ್ಟಿಕಾ || ೩ ||

ಪ್ರವಿಷ್ಟಂ ಭಾಗಮೇಕೈಕಂ ಜಗತೀಂ ಯಾವದೇವ ತು ।
ನಿರ್ಗಮಸ್ತು ಪುನಸ್ತಸ್ಯ ಯಾವದ್ವೈ ಶೇಷಪಟ್ಟಿಕಾ || ೪ ||

---

೧ ಸೂತಪೌರಾಣಿಕನು ಹೇಳಿದನು —ಪೀಠದ ಲಕ್ಷಣವನ್ನೂ ಅದರ ಎತ್ತರವನ್ನೂ ಕ್ರಮವಾಗಿ ಹೇಳುವೆನು ಒಟ್ಟು ಪೀಠದ ಎತ್ತರವನ್ನು ಹದಿನಾರು ಭಾಗಗಳಾಗಿ ವಿಂಗಡಿಸಬೇಕು

೨ ಒಂದು ಭಾಗವು ನೆಲದೊಳಕ್ಕೆ ಪ್ರವೇಶಿಸಿರುವುದು ಜಗತಿಯು ನಾಲ್ಕು ಭಾಗಗಳನ್ನೊಳಗೊಳ್ಳುವುದು ಒಂದರಿಂದ ವೃತ್ತವೂ ಮತ್ತೊಂದರಿಂದ ವೃತ್ತಪಟ್ಟವೂ ನಿರ್ಮಿತವಾಗಿರುವುವು

೩ ಕಂಠವು ಮೂರು ಭಾಗಗಳಿಂದಲೂ, ಕಂಠಪಟ್ಟವು ಒಂದು ಭಾಗದಿಂದಲೂ, ಊರ್ಧ್ವಪಟ್ಟವು ಎರಡು ಭಾಗಗಳಿಂದಲೂ, ಪಟ್ಟಿಕೆಯು ಮಿಕ್ಕ ಮೂರು ಭಾಗಗಳಿಂದಲೂ ಆಗಿರುವುವು

೪ ಪ್ರತಿಪೀಠದಲ್ಲಿಯೂ ಜಗತಿಯವರೆಗಿನ ಒಂದೊಂದು ಭಾಗವೂ ನೆಲದೊಳಗೆ ಅಡಗಿರುವುದು ಶೇಷಪಟ್ಟಿಕೆಯವರೆಗೆ ಉಳಿದ ಭಾಗವು ಹೊರಗಡೆಯಿರುವುದು

ವಾರಿನಿರ್ಗಮನಾರ್ಥಂ ತು ತತ್ರ ಕಾರ್ಯಃ ಪ್ರಣಾಲಕಃ ।
ಪೀಠಿಕಾನಾಂ ತು ಸರ್ವಾಸಾಮೇತತ್ಸಾಮಾನ್ಯಲಕ್ಷಣಂ ॥ ೫ ॥

ವಿಶೇಷಾ ದೇವತಾಭೇದಾಚ್ಛೃಣುಧ್ವಂ ದ್ವಿಜಸತ್ತಮಾಃ ।
ಸ್ಥಂಡಿಲಾ ವಾಥ ವಾಪೀ ವಾ ಯಕ್ಷೀ ವೇದೀ ಚ ಮಂಡಲಾ ॥ ೬ ॥

ಪೂರ್ಣಚಂದ್ರಾ ಚ ವಜ್ರಾ ಚ ಪದ್ಮಾ ವಾರ್ಧಶಶೀ ತಥಾ ।
ತ್ರಿಕೋಣಾ ದಶಮೀ ತಾಸಾಂ ಸಂಸ್ಥಾನಂ ವಾ ನಿಬೋಧತ ॥ ೭ ॥

ಸ್ಥಂಡಿಲಾ ಚತುರಸ್ರಾ ತು ವರ್ಜಿತಾ ಮೇಖಲಾದಿಭಿಃ ।
ವಾಪೀ ದ್ವಿಮೇಖಲಾ ಜ್ಞೇಯಾ ಯಕ್ಷೀ ಚೈವ ತ್ರಿಮೇಖಲಾ ॥ ೮ ॥

ಚತುರಸ್ರಾಯತಾ ವೇದೀ ನ ತಾಂ ಲಿಂಗೇಷು ಯೋಜಯೇತ್ ।
ಮಂಡಲಾ ವರ್ತುಲಾ ಯಾ ತು ಮೇಖಲಾಭಿರ್ಗಣಪ್ರಿಯಾ ॥ ೯ ॥

---

೫ ನೀರು ಹೊರಕ್ಕೆ ಹೋಗುವುದಕ್ಕಾಗಿ ಅದರಲ್ಲಿ ಕಾಲುವೆಯನ್ನು ಮಾಡಬೇಕು ಇದು ಎಲ್ಲ ಪೀಠಗಳಿಗೂ ಸಾಮಾನ್ಯವಾದ ಲಕ್ಷಣ

೬-೭ ಎಲೈ ಬ್ರಾಹ್ಮಣೋತ್ತಮರೇ, ದೇವತಾಭೇದದಿಂದ ಪೀಠದಲ್ಲಿ ಭೇದವಾಗುವುದು ಅದರ ವಿವರನ್ನು ಹೇಳುವೆನು ಕೇಳಿ ಸ್ಥಂಡಿಲಾ, ವಾಪೀ, ಯಕ್ಷೀ, ವೇದೀ, ಮಂಡಲಾ, ಪೂರ್ಣಚಂದ್ರಾ, ವಜ್ರಾ, ಪದ್ಮಾ, ಅರ್ಧಶಶೀ, ತ್ರಿಕೋಣಾ ಎಂಬ ಹತ್ತು ವಿಧವಾದ ಪೀಠಗಳಿವೆ ಇವುಗಳ ಆಕಾರವನ್ನು ಕೇಳಿ

೮ ಸ್ಥಂಡಿಲಾ ಎಂಬ ಪೀಠವು ಚೌಕನಾಗಿರುವುದು ಅದಕ್ಕೆ ಮೇಖಲೆ ಮುಂತಾದುವುಗಳಿಲ್ಲ ಮೇಖಲೆಗಳು ಎರಡಿದ್ದರೆ ವಾಪಿಯೆಂದೂ, ಮೂರಿದ್ದರೆ ಯಕ್ಷಿಯೆಂದೂ ತಿಳಿಯಬೇಕು (ಮೇಖಲೆಯೆಂದರೆ ಸುತ್ತುಗಟ್ಟು )

೯ ನಾಲ್ಕು ಮುಖವುಳ್ಳದಾಗಿ ಅಗಲಕ್ಕಿಂತ ಉದ್ದವು ಹೆಚ್ಚಾಗಿರುವ ಪೀಠವು ವೇದಿಯೆನಿಸುವುದು ಅದರಲ್ಲಿ ಲಿಂಗವನ್ನು ಪ್ರತಿಷ್ಠೆಮಾಡಬಾರದು ಗುಂಡಾಗಿ ಮೇಲ್ಗಡೆ ಮೇಖಲೆಗಳಿದ್ದರೆ ಮಂಡಲವೆಂದು ಹೇಳುತ್ತಾರೆ ಅದು ಪ್ರಮಥಗಣಗಳಿಗೆ ಪ್ರಿಯವಾದುದು

ರಕ್ತಾ ದ್ವಿಮೇಖಲಾ ಮಧ್ಯೇ ಪೂರ್ಣಚಂದ್ರಾ ತು ಸಾ ಭವೇತ್ ।
ಮೇಖಲಾತ್ರಯಸಂಯುಕ್ತಾ ಷಡಸ್ರಾ ವಜ್ರಿಕಾ ಭವೇತ್ ॥೧೦॥

ಷೋಡಶಾಸ್ರಾ ಭವೇತ್ಪದ್ಮಾ ಕಿಂಚಿದ್ಧ್ರಸ್ವಾ ತು ಮೂಲತಃ ।
ತಥೈವ ಧನುಷಾಕಾರಾ ಸಾರ್ಧಚಂದ್ರಾ ಪ್ರಶಸ್ಯತೇ ॥೧೧॥

ತ್ರಿಶೂಲಸದೃಶೀ ತದ್ವತ್ತ್ರಿಕೋಣಾ ಹ್ಯೂರ್ಧ್ವತೋ ಮತಾ ।
ಪ್ರಾಗುದಕ್ಪ್ರವಣಾ ತದ್ವತ್ಪ್ರಶಸ್ತಾ ಲಕ್ಷಣಾನ್ವಿತಾ ॥೧೨॥

ಪರಿವೇಷಂ ತ್ರಿಭಾಗೇನ ನಿರ್ಗಮಂ ತತ್ರ ಕಾರಯೇತ್ ।
ವಿಸ್ತಾರಂ ತತ್ಪ್ರಮಾಣಂ ಚ ಮೂಲೇ ಚಾಗ್ರೇ ತಥೋರ್ಧ್ವತಃ ॥೧೩॥

---

೧೦ ಎರಡು ಮೇಖಲೆಗಳಿಂದ ಕೂಡಿ ನಡುವೆ ಕೆಂಪಗಿದ್ದರೆ ಪೂರ್ಣಚಂದ್ರವೆನಿಸಿಕೊಳ್ಳುವುದು ಮೂರು ಮೇಖಲೆಗಳೂ ಆರು ಮುಖಗಳೂ ಇದ್ದರೆ ವಜ್ರಿಕೆಯೆನ್ನುವರು

೧೧ ಹದಿನಾರು ಮುಖಗಳುಳ್ಳ ಪೀಠಕ್ಕೆ ಪದ್ಮವೆಂದು ಹೆಸರು ಅದು ಬುಡದಲ್ಲಿ ಸ್ವಲ್ಪ ಹ್ರಸ್ವವಾಗಿರುವುದು ಬಿಲ್ಲಿನ ಆಕಾರವಾಗಿದ್ದರ ಅರ್ಧಚಂದ್ರವೆನಿಸಿಕೊಳ್ಳುವುದು

೧೨ ಮೇಲ್ಗಡೆ ತ್ರಿಶೂಲಾಕಾರವಾದ ಪೀಠವನ್ನು ತ್ರಿಕೋಣವೆನ್ನುವರು ಸ್ವಲ್ಪ ಮಟ್ಟಿಗೆ ಈಶಾನ್ಯಾಭಿಮುಖವಾಗಿರುವ ಪೀಠವು ಪ್ರಶಸ್ತವಾದುದು ಮತ್ತು ಲಕ್ಷಣಸಹಿತವಾದುದು

೧೩ ಮೂರುಭಾಗದಷ್ಟು ಅಳತೆಯಿಂದ ಪರಿವೇಷವನ್ನು ರಚಿಸಬೇಕು ಅದರಲ್ಲಿ ನಿರ್ಗಮವನ್ನು (ನೀರು ಹೋಗುವುದಕ್ಕೆ ಬಚ್ಚಲು) ಕಲ್ಪಿಸಬೇಕು ಬುಡದಲ್ಲಿಯೂ, ಮೇಲ್ಗಡೆಯಲ್ಲಿಯೂ, ಮಧ್ಯದಲ್ಲಿಯೂ ಅದರ ವಿಸ್ತಾರವೂ ಪ್ರಮಾಣವೂ ಪರಿವೇಷಕ್ಕೆ ಅನುಗುಣವಾಗಿರಬೇಕು ಜಲಮಾರ್ಗದ ಅಳತೆ ಮೂರುಭಾಗದಷ್ಟಿರಬೇಕು ಅದನ್ನು ಅಂದವಾಗಿ ವಿರಚಿಸಬೇಕು

ಜಲಮಾರ್ಗಶ್ಚ ಕರ್ತವ್ಯಸ್ತ್ರಿಭಾಗೇನ ಸುಶೋಭನಃ ।
ಲಿಂಗಸ್ಯಾರ್ಧವಿಭಾಗೇನ ಸ್ಥೌಲ್ಯೇನ ಸಮಧಿಷ್ಠಿತಾ ॥೧೪॥

ಮೇಖಲಾ ತತ್ತ್ರಿಭಾಗೇನ ಖಾತಂ ಚೈವ ಪ್ರಮಾಣತಃ ।
ಅಥವಾ ಪಾದಹೀನಂ ತು ಶೋಭನಂ ಕಾರಯೇತ್ಸದಾ ॥೧೫॥

ಉತ್ತರಸ್ಥಂ ಪ್ರಣಾಲಂ ಚ ಪ್ರಮಾಣಾದಧಿಕಂ ಭವೇತ್ ।
ಸ್ಥಂಡಿಲಾಯಾಮಥಾರೋಗ್ಯಂ ಧನಂ ಧಾನ್ಯಂ ಚ ಪುಷ್ಕಲಂ ॥೧೬॥

ಗೋಪ್ರದಾ ಚ ಭವೇದ್ಯಕ್ಷೀ ವೇದೀ ಸಂಪತ್ಪ್ರದಾ ಭವೇತ್ ।
ಮಂಡಲಾಯಾಂ ಭವೇತ್ಕೀರ್ತಿರ್ವರದಾ ಪೂರ್ಣಚಂದ್ರಿಕಾ ॥೧೭॥

ಆಯುಷ್ಪ್ರದಾ ಭವೇದ್ವಜ್ರಾ ಪದ್ಮಾ ಸೌಭಾಗ್ಯದಾ ಭವೇತ್ ।
ಪುತ್ರಪ್ರದಾಽರ್ಧಚಂದ್ರಾ ಸ್ಯಾತ್ತ್ರಿಕೋಣಾ ಶತ್ರುನಾಶನೀ ॥೧೮॥

---

೧೪-೧೫ ಮೇಖಲೆಯು ಲಿಂಗದ ಅರ್ಧ ಪಾಲಿನಷ್ಟು ಸ್ಥೂಲವಾಗಿರುವುದು ಖಾತದ (ತಗ್ಗಿನ) ಪ್ರಮಾಣವು ಅದರ ಮೂರರಲ್ಲೊಂದು ಭಾಗ, ಅಥವಾ ನಾಲ್ಕರಲ್ಲೊಂದು ಪಾಲಿದ್ದರೂ ಇರಬಹುದು ಅಂತೂ ಅದು ನೋಡುವುದಕ್ಕೆ ಅಂದವಾಗಿರಬೇಕು ಉತ್ತರದಿಕ್ಕಿನಲ್ಲಿರುವ ಪ್ರಣಾಲಿಕೆ (ನೀರು ಹರಿದು ಬರುವುದಕ್ಕಾಗಿ ಮಾಡಿರುವ ಕಾಲುವೆ) ಇದಕ್ಕಿಂತ ಸ್ವಲ್ಪ ಹೆಚ್ಚಿನ ಅಳತೆಯುಳ್ಳದಾಗಿರುವುದು

೧೬-೧೮ ಸ್ಥಂಡಿಲಾ ಎಂಬ ಪೀಠವು ಆರೋಗ್ಯ, ಧನ ಮತ್ತು ಧಾನ್ಯಗಳನ್ನು ಯಥೇಷ್ಟವಾಗಿ ಕೊಡುವುದು ಯಕ್ಷಿಯು ಹಸುಗಳನ್ನೂ, ವೇದಿಯು ಸಂಪತ್ತನ್ನೂ ನೀಡುವುವು ಮಂಡಲೆಯು ಕೀರ್ತಿಯನ್ನು ತರುವುದು ಪೂರ್ಣಚಂದ್ರಿಕೆಯಿಂದ ವರಪ್ರಾಪ್ತಿಯಾಗುವುದು ವಜ್ರಾಪೀಠವು ಆಯುಸ್ಸನ್ನು ಹೆಚ್ಚಿಸುವುದು ಪದ್ಮೆಯು ಸೌಭಾಗ್ಯವನ್ನು ದೊರಕಿಸುವುದು ಅರ್ಧಚಂದ್ರೆಯಿಂದ ಸಂತಾನಲಾಭವಾಗುವುದು ತ್ರಿಕೋಣೆಯು ಶತ್ರುಗಳನ್ನು ನಾಶಮಾಡುವುದು

ದೇವಸ್ಯ ಯಜನಾರ್ಥಂ ತು ಪೀಠಿಕಾ ದಶ ಕೀರ್ತಿತಾಃ ।
ಶೈಲೇ ಶೈಲಮಯೀಂ ದದ್ಯಾತ್ಪಾರ್ಥಿವೇ ಪಾರ್ಥಿವೀಂ ತಥಾ ॥೧೯॥

ದಾರುಜೇ ದಾರುಜಾಂ ಕುರ್ಯಾನ್ಮಿಶ್ರೇ ಮಿಶ್ರಾಂ ತಥೈವ ಚ ।
ನಾನ್ಯಯೋನಿಸ್ತು ಕರ್ತವ್ಯಾ ಸದಾ ಶುಭಫಲೇಪ್ಸುಭಿಃ ॥೨೦॥

ಅರ್ಚಾಯಾಮಸಮಂ ದೈರ್ಘ್ಯಂ ಲಿಂಗಾಯಾಮಸಮಂ ತಥಾ ।
ಯಸ್ಯ ದೇವಸ್ಯ ಯಾ ಪತ್ನೀ ತಾಂ ಪೀಠೇ ಪರಿಕಲ್ಪಯೇತ್ ।
ಏತತ್ಸರ್ವಂ ಸಮಾಖ್ಯಾತಂ ಸಮಾಸಾತ್ಪೀಠಲಕ್ಷಣಂ ॥೨೧॥

ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ದೇವತಾರ್ಚಾನುಕೀರ್ತನೇ
ಪೀಠಿಕಾನುಕೀರ್ತನಂ ನಾಮ ದ್ವಿಷಷ್ಟ್ಯಧಿಕದ್ವಿಶತತಮೋಽಧ್ಯಾಯಃ

---

೧೯ ದೇವರನ್ನು ಪ್ರತಿಷ್ಠೆಮಾಡಿ ಪೂಜಿಸುವುದಕ್ಕೋಸ್ಕರವಾಗಿ ಹತ್ತು ಬಗೆಯ ಪೀಠಗಳನ್ನು ಹೇಳಿರುವರು ವಿಗ್ರಹವು ಶಿಲಾಮಯವಾಗಿದ್ದರೆ ಪೀಠಿಕೆಯೂ ಶಿಲೆಯಿಂದಾಗಿರಬೇಕು ಮಣ್ಣಿನಿಂದಾಗಿದ್ದರೆ ಮಣ್ಣಿನದಾಗಬೇಕು

೨೦ ಪ್ರತಿಮೆ ಮರದಿಂದಾಗಿದ್ದರೆ ಪೀಠವನ್ನೂ ಮರದಿಂದಲೇ ಮಾಡಬೇಕು ಮಿಶ್ರಲೋಹದಿಂದಾಗಿದ್ದರೆ ಇದೂ ಹಾಗೆಯೇ ಇರಬೇಕು ಶುಭಫಲವನ್ನು ಅಪೇಕ್ಷಿಸುವವರು ಪೀಠವನ್ನೂ ವಿಗ್ರಹವನ್ನೂ ಬೇರೆ ಬೇರೆ ವಸ್ತುಗಳಿಂದ ಎಂದಿಗೂ ಮಾಡಬಾರದು

೨೧ ಅರ್ಚಾವಿಗ್ರಹದ ಅಥವಾ ಲಿಂಗದ ವಿಸ್ತಾರವೆಷ್ಟಿರುವುದೋ ಪೀಠದ ಉದ್ದವೂ ಅಷ್ಟೇ ಇರುವುದು ಆಯಾ ದೇವರ ಪತ್ನಿಯ ಪ್ರತಿಮೆಯನ್ನು ಪೀಠದಲ್ಲಿ ವಿರಚಿಸಬೇಕು ಈ ರೀತಿಯಾಗಿ ಪೀಠದ ಲಕ್ಷಣವೆಲ್ಲವನ್ನೂ ಸಂಗ್ರಹವಾಗಿ ಹೇಳಿದುದಾಯಿತು

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಪೀಠದ ಲಕ್ಷಣವನ್ನು ಹೇಳಿದೆ

ಪೀಠಗಳಲ್ಲಿ ಹತ್ತು ಬಗೆಗಳುಂಟು ಅರ್ಚಾವಿಗ್ರಹಗಳ ಪ್ರಭೇದಗಳಿಗನು ಸಾರವಾಗಿ ಪೀಠಗಳೂ ವ್ಯತ್ಯಾಸವಾಗುವುವು ಒಂದೊಂದು ಪೀಠವೂ ಬೇರೆ ಬೇರೆ ಫಲವನ್ನು ಕೊಡುವುದು ವಿಗ್ರಹಕ್ಕೂ ಪೀಠಕ್ಕೂ ಪ್ರಮಾಣದಲ್ಲಿ ಆನುರೂಪ್ಯ ವಿರಬೇಕು ಮತ್ತು ಎರಡನ್ನೂ ಒಂದೇ ದ್ರವ್ಯದಿಂದ ಮಾಡಿರಬೇಕು

ಶ್ರೀಮತ್ಸ್ಯಮಹಾಪುರಾಣದಲ್ಲಿ ದೇವತಾರ್ಚಾನುಕೀರ್ತನದಲ್ಲಿ ಪೀಠಿಕಾನು ಕೀರ್ತನವೆಂಬ ಇನ್ನೂರ ಅರವರತ್ತೆರಡನೆಯ ಅಧ್ಯಾಯವು ಮುಗಿದುದು

## ಅಥ ತ್ರಿಷಷ್ಟ್ಯಧಿಕದ್ವಿಶತತಮೋಽಧ್ಯಾಯಃ

॥ ಸೂತ ಉವಾಚ ॥

ಅಥಾತಃ ಸಂಪ್ರವಕ್ಷ್ಯಾಮಿ ಲಿಂಗಲಕ್ಷಣಮುತ್ತಮಂ ।
ಸುಸ್ನಿಗ್ಧಂ ಚ ಸುವರ್ಣಂ ಚ ಲಿಂಗಂ ಕುರ್ಯಾದ್ವಿಚಕ್ಷಣಃ ॥ ೧ ॥

ಪ್ರಾಸಾದಸ್ಯ ಪ್ರಮಾಣೇನ ಲಿಂಗಮಾನಂ ವಿಧೀಯತೇ ।
ಲಿಂಗಮಾನೇನ ವಾ ವಿದ್ಯಾತ್ಪ್ರಾಸಾದಂ ಶುಭಲಕ್ಷಣಂ ॥ ೨ ॥

ಚತುರಸ್ರೇ ಸಮೇ ಗರ್ತೇ ಬ್ರಹ್ಮಸೂತ್ರಂ ನಿಪಾತಯೇತ್ ।
ವಾಮೇನ ಬ್ರಹ್ಮಸೂತ್ರಸ್ಯ ಅರ್ಚಾ ವಾ ಲಿಂಗಮೇವ ಚ ॥ ೩ ॥

---

೧ ಸೂತಪೌರಾಣಿಕನು ಹೇಳಿದನು —ಇನ್ನುಮೇಲೆ ಲಿಂಗದ ಲಕ್ಷಣವನ್ನು ಹೇಳುವೆನು ಇದು ಅತ್ಯಂತ ಪವಿತ್ರವಾದುದು ಶಾಸ್ತ್ರಜ್ಞನು ಲಿಂಗವನ್ನು ನುಣುಪಾಗಿ ಒಳ್ಳೆಯ ಬಣ್ಣದಿಂದ ಕೂಡಿರುವಂತೆ ರಚಿಸಬೇಕು

೨ ಲಿಂಗದ ಪ್ರಮಾಣವು ದೇವಾಲಯದ ಪ್ರಮಾಣಕ್ಕೆ ಅನುಗುಣವಾಗಿರಬೇಕು ಅಥವಾ ಲಿಂಗದ ಅಳತೆಯನ್ನು ಗಮನಿಸಿ ಅದಕ್ಕೆ ತಕ್ಕಂತೆ ದೇವಾಲಯದ ಅಳತೆಯನ್ನಾದರೂ ತಿಳಿಯಬಹುದು

೩ ಮುಂದೆ ಹೇಳುವಂತೆ ಗರ್ಭಗುಡಿಯೊಳಗ ಚಚ್ಚೌಕವಾಗಿಯೂ ಮಟ್ಟವಾಗಿಯೂ ಇರುವ ಹಳ್ಳದಲ್ಲಿ ಬ್ರಹ್ಮಸೂತ್ರವನ್ನು ಎಂದರ ವಿಗ್ರಹವನ್ನು ಪ್ರತಿಷ್ಠೆ ಮಾಡತಕ್ಕ ಸ್ಥಳವನ್ನು ಗೊತ್ತುಮಾಡುವುದಕ್ಕಾಗಿ ಅಳತೆಯ ದಾರವನ್ನು ಕಟ್ಟಬೇಕು ಸೂತ್ರದ ಎಡಗಡೆಯಲ್ಲಿ ವಿಗ್ರಹವನ್ನೋ ಲಿಂಗವನ್ನೋ ಸ್ಥಾಪಿಸಬೇಕು

ಪ್ರಾಗುತ್ತರೇಣ ಲೀನಂ ತು ದಕ್ಷಿಣಾಪರಮಾಶ್ರಿತಂ ।
ಪುರಸ್ಯಾಪರದಿಗ್ಭಾಗೇ ಪೂರ್ವದ್ವಾರಂ ಪ್ರಕಲ್ಪಯೇತ್ ॥ ೪ ॥
ಪೂರ್ವೇಣ ಚಾಪರಂ ದ್ವಾರಂ ಮಾಹೇಂದ್ರಂ ದಕ್ಷಿಣೋತ್ತರಂ ।
ದ್ವಾರಂ ವಿಭಜ್ಯ ಪೂರ್ವಂ ತು ಏಕವಿಂಶತಿಭಾಗಿಕಂ ॥ ೫ ॥
ತತೋ ಮಧ್ಯಗತಂ ಜ್ಞಾತ್ವಾ ಬ್ರಹ್ಮಸೂತ್ರಂ ಪ್ರಕಲ್ಪಯೇತ್ ।
ತಸ್ಯಾರ್ಧಂ ತು ತ್ರಿಧಾ ಕೃತ್ವಾ ಭಾಗಂ ಚೋತ್ತರತಸ್ತ್ಯಜೇತ್ ॥ ೬ ॥
ಏವಂ ದಕ್ಷಿಣತಸ್ತ್ಯಕ್ತ್ವಾ ಬ್ರಹ್ಮಸ್ಥಾನಂ ಪ್ರಕಲ್ಪಯೇತ್ ।
ಭಾಗಾರ್ಧೇನ ತು ಯಲ್ಲಿಂಗಂ ಕಾರ್ಯಂ ತದಿಹ ಶಸ್ಯತೇ ॥ ೭ ॥
ಪಂಚಭಾಗವಿಭಕ್ತೇಷು ತ್ರಿಭಾಗೋ ಜ್ಯೇಷ್ಠ ಉಚ್ಯತೇ ।
ಭಾಜಿತೇ ನವಧಾ ಗರ್ಭೇ ಮಧ್ಯಮಂ ಪಾಂಚಭಾಗಿಕಂ ॥ ೮ ॥

---

೪ ಊರಿಗೆ ಪಶ್ಚಿಮದಲ್ಲಿ ಸ್ವಲ್ಪ ದಕ್ಷಿಣಕ್ಕೆ ದೇವಾಲಯವನ್ನು ಕಟ್ಟಬೇಕು ಅದರ ಬಾಗಿಲು ಪೂರ್ವಮುಖವಾಗಿರಬೇಕು ಅದು ಈಶಾನ್ಯದಿಕ್ಕಿಗೆ ಸ್ವಲ್ಪ ತಿರುಗಿರುವಂತೆ ಕಾಣಬೇಕು ಇದಲ್ಲದೆ ಮತ್ತೊಂದು ಬಾಗಿಲನ್ನು ಇದರ ಆಚೆ ಪೂರ್ವಾಭಿಮುಖವಾಗಿ ಇಡಬೇಕು ಇದೇ ಹೊರಬಾಗಿಲು ಇದಕ್ಕೆ ಮಾಹೇಂದ್ರ ವೆಂದು ಹೆಸರು

೫-೭ ಮೊದಲು ಹೇಳಿದ ಗರ್ಭಗುಡಿಯ ಬಾಗಿಲನ್ನು ದಕ್ಷಿಣೋತ್ತರವಾಗಿ ಇಪ್ಪತ್ತೊಂದು ಭಾಗಮಾಡಿ, ಮಧ್ಯಭಾಗವನ್ನು ಕಂಡುಹಿಡಿದು ಅಲ್ಲಿಂದ ಬ್ರಹ್ಮ ಸೂತ್ರವನ್ನು ಹಾಕಬೇಕು ಆ ಅಳತೆಯ ಅರ್ಧವನ್ನು ಮೂರುಭಾಗಮಾಡಿ ಉತ್ತರದಕಡೆಯ ಒಂದು ಭಾಗವನ್ನೂ, ದಕ್ಷಿಣದಕಡೆಯ ಮತ್ತೊಂದು ಭಾಗವನ್ನೂ ಬಿಟ್ಟರ ನಡುವಣ ಭಾಗವೇ ಬ್ರಹ್ಮಸ್ಥಾನವೆನಿಸುವುದು ಇದರ ಮಧ್ಯಭಾಗದಲ್ಲಿ ಲಿಂಗವನ್ನು ಸ್ಥಾಪಿಸಬೇಕು ಈ ಅಳತೆಯಲ್ಲಿ ಕಂಡುಹಿಡಿದ ಬ್ರಹ್ಮಸ್ಥಾನವು ಕನಿಷ್ಠವೆನಿಸುವುದು

೮ ಮೇಲೆ ಹೇಳಿದ ರೀತಿಯುಲ್ಲಲ್ಲದೆ ಬ್ರಹ್ಮಸೂತ್ರದ ಅರ್ಧದ ಅಳತೆಯನ್ನು ಐದು ಭಾಗಮಾಡಿ, ದಕ್ಷಿಣೋತ್ತರಗಳಲ್ಲಿ ಒಂದೊಂದು ಭಾಗವನ್ನು ಬಿಟ್ಟು ಮಧ್ಯದಲ್ಲಿನ ಐದು ಭಾಗಗಳನ್ನೂ ಬ್ರಹ್ಮಸ್ಥಾನವೆಂದು ಪರಿಗಣಿಸಬಹುದು ಇದು ಜ್ಯೇಷ್ಠವನಿಸಿಕೊಳ್ಳುವುದು ಅಥವಾ ಒಂಬತ್ತು ಪಾಲುಗಳಾಗಿ ವಿಂಗಡಿಸಿ, ಅತ್ತಿತ್ತ ಎರಡೆರಡು ಪಾಲುಗಳನ್ನು ಬಿಟ್ಟು ನಡುವಣ ಐದು ಪಾಲುಗಳನ್ನು ಬೇಕಾದರೂ ಬ್ರಹ್ಮಸ್ಥಾನವೆಂದು ಕರೆಯಬಹುದು ಇದನ್ನು ಮಧ್ಯಮವೆನ್ನುವರು

ಏಕಸ್ಮಿನ್ನೇವ ನವಧಾ ಗರ್ಭೇ ಲಿಂಗಾನಿ ಕಾರಯೇತ್ ।
ಸಮಸೂತ್ರಂ ವಿಭಜ್ಯಾಥ ನವಧಾ ಗರ್ಭಭಾಜಿತಂ ॥ ೯ ॥

ಜ್ಯೇಷ್ಠಮರ್ಧಂ ಕನೀಯೋಽರ್ಧಂ ತಥಾ ಮಧ್ಯಮಮಧ್ಯಮಂ ।
ಏವಂ ಗರ್ಭಂ ಸಮಾಖ್ಯಾತಸ್ತ್ರಿಭಿರ್ಭಾಗೈರ್ವಿಭಾಜಯೇತ್ ॥೧೦॥

ಜ್ಯೇಷ್ಠಂ ತು ತ್ರಿವಿಧಂ ಜ್ಞೇಯಂ ಮಧ್ಯಮಂ ತ್ರಿವಿಧಂ ತಥಾ ।
ಕನೀಯಸ್ತ್ರಿವಿಧಂ ತದ್ವಲ್ಲಿಂಗಭೇದಾ ನವೈವ ತು ॥೧೧॥

ನಾಭ್ಯರ್ಧಮಷ್ಟಭಾಗೇನ ವಿಭಜ್ಯಾಥ ಸಮಂ ಬುಧೈಃ ।
ಭಾಗತ್ರಯಂ ಪರಿತ್ಯಜ್ಯ ವಿಷ್ಕಂಭಂ ಚತುರಸ್ರಕಂ ॥೧೨॥

ಅಷ್ಟಾಸ್ರಂ ಮಧ್ಯಮಂ ಜ್ಞೇಯಂ ಭಾಗಂ ಲಿಂಗಸ್ಯ ಧ್ರುವಂ ।
ವಿಕೀರ್ಣೇ ಚೇತ್ತತೋ ಗೃಹ್ಯ ಕೋಣಾಭ್ಯಾಂ ಲಾಂಛಯೇದ್ಬುಧಃ ॥೧೩॥

---

೯ ಒಂದೇ ಗರ್ಭಗೃಹದಲ್ಲಿ ಅದರ ಅಳತೆಯನ್ನು ಒಂಬತ್ತು ವಿಧವಾಗಿ ವಿಭಾಗಿಸಿ ಮುಂದೆ ಹೇಳುವ ರೀತಿಯಲ್ಲಿ ಒಂಬತ್ತು ವಿಧವಾಗಿ ಲಿಂಗಗಳನ್ನು ನಿರ್ಮಿಸಬಹುದು

೧೦ ಹಿಂದೆ ವಿವರಿಸಿದಂತೆ ಜ್ಯೇಷ್ಠಪ್ರಮಾಣದ ಅರ್ಧ, ಮಧ್ಯಮ ಪ್ರಮಾಣದ ಅರ್ಧ, ಕನಿಷ್ಠಪ್ರಮಾಣದ ಅರ್ಧಭಾಗಗಳನ್ನು ಅನುಸರಿಸಿ ಗರ್ಭ ಸ್ಥಾನವು (ಬ್ರಹ್ಮಸ್ಥಾನವೆನ್ನುವುದೂ ಇದೇ) ಮೂರುವಿಧವಾಗಿರುವುದು

೧೧ ಜ್ಯೇಷ್ಠ, ಮಧ್ಯ ಮತ್ತು ಕನಿಷ್ಠಗಳೊಂದೊಂದೂ ಮೂರುವಿಧವಾಗಿವೆ ಅವುಗಳಿಗೆ ತಕ್ಕಂತೆ ಲಿಂಗಳಲ್ಲಿ ಕೂಡ ಒಂಬತ್ತು ಪ್ರಭೇದಗಳಿವೆ

೧೨-೧೩ ನಾಭಿಪರ್ಯಂತವಾದ ಲಿಂಗದ ಅರ್ಧ ಭಾಗವನ್ನು ಸಮವಾಗಿ ಎಂಟು ಪಾಲುಮಾಡಿ, ಅವುಗಳಲ್ಲಿ ಮೂರು ಪಾಲುಗಳನ್ನು ಬಿಟ್ಟು, ಉಳಿದ ಐದು ಭಾಗವನ್ನು ಚೌಕನಾಗಿ ಮಾಡಬೇಕು ಮಿಕ್ಕಭಾಗವನ್ನು ಎಂಟು ಪಟ್ಟಿಗಳಿರುವಂತೆ

ಅಷ್ಟಾಸ್ರಂ ಕಾರಯೇತ್ತದ್ವದೂರ್ಧ್ವಮಪ್ಯೇವಮೇವ ತು ।
ಷೋಡಶಾಸ್ರೀಕೃತಂ ಪಶ್ಚಾದ್ವರ್ತುಲಂ ಕಾರಯೇತ್ತತಃ ॥೧೪॥

ಆಯಾಮಂ ತಸ್ಯ ದೇವಸ್ಯ ನಾಭ್ಯಾಂ ವೈ ಕುಂಡಲೀಕೃತಂ ।
ಮಾಹೇಶ್ವರಂ ತ್ರಿಭಾಗಂ ತು ಊರ್ಧ್ವವೃತ್ತಂ ವ್ಯವಸ್ಥಿತಂ ॥೧೫॥

ಅಧಸ್ತಾದ್ಬ್ರಹ್ಮಭಾಗಸ್ತು ಚತುರಸ್ರೋ ವಿಧೀಯತೇ ।
ಅಷ್ಟಾಸ್ರೋ ವೈಷ್ಣವೋ ಭಾಗೋ ಮಧ್ಯಸ್ತಸ್ಯ ಉದಾಹೃತಃ ॥೧೬॥

ಏವಂ ಪ್ರಮಾಣಸಂಯುಕ್ತಂ ಲಿಂಗಂ ವೃದ್ಧಿಪ್ರದಂ ಭವೇತ್ ।
ತಥಾನ್ಯದಪಿ ವಕ್ಷ್ಯಾಮಿ ಗರ್ಭಮಾನಪ್ರಮಾಣತಃ ॥೧೭॥

ಗರ್ಭಮಾನಪ್ರಮಾಣೇನ ಯಲ್ಲಿಂಗಮುಚಿತಂ ಭವೇತ್ ।
ಚತುರ್ಧಾ ತದ್ವಿಭಜ್ಯಾಥ ವಿಷ್ಕಂಭಂ ತು ಪ್ರಕಲ್ಪಯೇತ್ ॥೧೮॥

---

ರಚಿಸಬೇಕು ಇದೇ ಲಿಂಗದ ಮಧ್ಯಭಾಗ ಮೇಲ್ಗಡೆಯಲ್ಲಿಯೂ ಹೀಗೆಯೇ ಮೊದಲು ಎಂಟು ಪಟ್ಟಿಗಳನ್ನೂ ಬಳಿಕ ಹದಿನಾರು ಪಟ್ಟಿಗಳನ್ನೂ ತೆಗೆಯಬೇಕು ಕೊನೆಗೆ ವರ್ತುಲಾಕಾರವಾಗಿ ಮಾಡಬೇಕು

೧೫-೧೬ ನಾಭಿಸ್ಥಲವು ಸುತ್ತಲೂ ವೃತ್ತಾಕಾರವಾಗಿರುವುದು ಈಶ್ವರ ಲಿಂಗದಲ್ಲಿ ಮೂರುಭಾಗಗಳು ಇವೆ ಮೇಲೆ ಗುಂಡಗಿರುವ ಭಾಗವು ಮಹೇಶ್ವರನ ಅಂಶವುಳ್ಳದು ಕೆಳಗಡೆ ನಾಲ್ಕು ಮೂಲೆಗಳಿರುವ ಭಾಗವು ಬ್ರಹ್ಮನ ಅಂಶದಿಂದ ಕೂಡಿದೆ ಎಂಟು ಪಟ್ಟಿಗಳುಳ್ಳ ಮಧ್ಯಭಾಗವು ವಿಷ್ಣುವಿಗೆ ಸಂಬಂಧಪಟ್ಟುದು

೧೭ ಈ ರೀತಿಯ ಪ್ರಮಾಣದಿಂದ ಕೂಡಿದ ಲಿಂಗವು ಶ್ರೇಯಸ್ಕರ ವಾದುದು ಗರ್ಭಪ್ರಮಾಣವನ್ನು ಮತ್ತೊಂದು ವಿಧದಿಂದ ಹೇಳುವೆನು ಕೇಳು

೧೮ ಲಿಂಗದ ಪ್ರಮಾಣವು ಗರ್ಭಗೃಹದ ಪ್ರಮಾಣಕ್ಕೆ ಅನುಸಾರವಾಗಿರ ಬೇಕು ಗರ್ಭಗೃಹದ ಅಳತೆಯನ್ನು ನಾಲ್ಕು ಅಥವಾ ಮೂರು ಭಾಗಮಾಡಿದರೆ ಬರುವ ಲಬ್ಧವೇ ಗರ್ಭಸ್ಥಾನದ ಅಷ್ಟಗಲವೆಂದು ತಿಳಿಯಬೇಕು

ದೇವತಾಯತನಂ ಸೂತ್ರಂ ಭಾಗತ್ರಯವಿಕಲ್ಪಿತಂ ।
ಅಧಸ್ತಾಚ್ಚತುರಸ್ರಂ ತು ಅಷ್ಟಾಸ್ರಂ ಮಧ್ಯಭಾಗತಃ ॥೧೯॥
ಪೂಜ್ಯಭಾಗಸ್ತತೋಽರ್ಧಂ ತು ನಾಭಿಭಾಗಸ್ತಥೋಚ್ಯತೇ ।
ಆಯಾಮೋ ಯದ್ಭವೇತ್ಸೂತ್ರಂ ನಾಹಸ್ಯ ಚತುರಸ್ರಕೇ ॥೨೦॥
ಚತುರಸ್ರಂ ಪರಿತ್ಯಜ್ಯ ಅಷ್ಟಾಸ್ರಸ್ಯ ತು ಯದ್ಭವೇತ್ ।
ತಸ್ಯಾಪ್ಯರ್ಧಂ ಪರಿತ್ಯಜ್ಯ ತತೋ ವೃತ್ತಂ ತು ಕಾರಯೇತ್ ॥೨೧॥
ಶಿರಃ ಪ್ರದಕ್ಷಿಣಂ ತಸ್ಯ ಸಂಕ್ಷಿಪ್ತಂ ಮೂಲತೋ ನ್ಯಸೇತ್ ।
ಭ್ರಷ್ಟಪೂಜಂ ಭವೇಲ್ಲಿಂಗಮಧಸ್ತಾದ್ವಿಪುಲಂ ಚ ಯತ್ ॥೨೨॥
ಶಿರಸಾ ಚ ಸದಾ ನಿಮ್ನಂ ಮನೋಜ್ಞಂ ಲಕ್ಷಣಾನ್ವಿತಂ ।
ಸೌಮ್ಯಂ ತು ದೃಶ್ಯತೇ ಯತ್ತು ಲಿಂಗಂ ತದ್ವೃದ್ಧಿದಂ ಭವೇತ್ ॥೨೩॥
ಅಥ ಮೂಲೇ ಚ ಮಧ್ಯೇ ತು ಪ್ರಮಾಣಂ ಸರ್ವತಃ ಸಮಂ
ಏವಂವಿಧಂ ತು ಯಲ್ಲಿಂಗಂ ಭವೇತ್ತತ್ಸಾರ್ವಕಾಮಿಕಂ ॥೨೪॥

---

೧೯-೨೧ ಲಿಂಗದ ಕೆಳಭಾಗವು ನಾಲ್ಕು ಮೂಲೆಗಳಿಂದಲೂ, ಮಧ್ಯಭಾಗವು ಎಂಟು ಮೂಲೆಗಳಿಂದಲೂ ಕೂಡಿರುವುದು ಅಲ್ಲಿಂದ ಮೇಲಿನ ಅರ್ಧಭಾಗವನ್ನು ಪೂಜ್ಯಭಾಗವೆಂದೂ ನಾಭಿಭಾಗವೆಂದೂ ಹೇಳುತ್ತಾರೆ ಬ್ರಹ್ಮನ ಅಂಶದಿಂದ ಕೂಡಿದ ನಾಲ್ಕು ಮೂಲೆಗಳ ಭಾಗವನ್ನು ಬಿಟ್ಟು, ಉಳಿದ ಅರ್ಧದಲ್ಲಿಯೂ ಅರ್ಧಪಾಲನ್ನು ಉಳಿದು, ಮಿಕ್ಕ ಭಾಗವನ್ನು ಗುಂಡಾಗಿ ಮಾಡಬೇಕು

೨೨ ಶಿವಲಿಂಗದ ಶಿರೋಭಾಗವು ಗುಂಡಾಗಿಯೂ ಮೂಲಭಾಗಕ್ಕಿಂತ ಕಿರಿದಾಗಿಯೂ ಇರಬೇಕು ಆದರೆ ಕೆಳಗಡೆ ಮಿತಿಮೀರಿ ದೊಡ್ಡದಾಗಿದ್ದರೆ ಆ ಲಿಂಗಕ್ಕೆ ಸರಿಯಾಗಿ ಪೂಜೆಯೇ ನಡೆಯುವುದಿಲ್ಲ

೨೩ ನೆತ್ತಿಯ ಮೇಲೆ ತಗ್ಗಾಗಿ ಮನೋಹರವಾಗಿಯೂ, ಸಲಕ್ಷಣವಾಗಿಯೂ, ಗಂಭೀರವಾಗಿಯೂ ಕಾಣುವ ಲಿಂಗವು ಏಳಿಗೆಯನ್ನು ಉಂಟುಮಾಡುತ್ತದೆ

೨೪ ಮೂಲದಲ್ಲಿಯೂ ಮಧ್ಯದಲ್ಲಿಯೂ, ಅಂತದಲ್ಲಿಯೂ ಸಮಪ್ರಮಾಣದಿಂದ ಇರುವ ಲಿಂಗವು ಎಲ್ಲಬಗೆಯ ಇಷ್ಟಾರ್ಥಗಳನ್ನೂ ನೀಡುತ್ತದೆ

**ಅನ್ಯಥಾ ಯದ್ಭವೇಲ್ಲಿಂಗಂ ತದಸತ್ಸಂಪ್ರಚಕ್ಷತೇ ।**
**ಏವಂ ರತ್ನಮಯಂ ಕುರ್ಯಾತ್ಸ್ಫಾಟಿಕಂ ಪಾರ್ಥಿವಂ ತಥಾ ।**
**ಶುಭಂ ದಾರುಮಯಂ ಚಾಪಿ ಯದ್ವಾ ಮನಸಿ ರೋಚತೇ ॥೨೫॥**

**ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ದೇವತಾರ್ಚಾನುಕೀರ್ತನಂ**
**ನಾಮ ತ್ರಿಷಷ್ಟ್ಯಧಿಕದ್ವಿಶತತಮೋಽಧ್ಯಾಯಃ**

---

೨೫ ಮೇಲೆ ಹೇಳಿದ ಲಕ್ಷಣಕ್ಕೆ ವಿರುದ್ಧವಾದ ಲಿಂಗವು ಅಶುಭವೆನಿಸುವುದು ಆದುದರಿಂದ ರತ್ನ, ಸ್ಫಟಿಕ, ಮಣ್ಣು, ಮರ, ಅಥವಾ ತನ್ನ ಮನಸ್ಸಿಗೆ ಇಷ್ಟವಾಗಿ ತೋರುವ ಮತ್ತಾವುದಾದರೂ ದ್ರವ್ಯ ಇವುಗಳಿಂದ ಶುಭಲಕ್ಷಣಯುಕ್ತವಾದ ಲಿಂಗವನ್ನು ನಿರ್ಮಿಸಬೇಕು

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಲಿಂಗದ ಲಕ್ಷಣವನ್ನು ಹೇಳಿದೆ

ದೇವಸ್ಥಾನಕ್ಕೂ ವಿಗ್ರಹಕ್ಕೂ ಪ್ರಮಾಣದಲ್ಲಿ ಆನುಗುಣ್ಯವಿರಬೇಕು ದೇವಾಲಯದ ಪ್ರಮಾಣಕ್ಕೆ ತಕ್ಕಂತೆ ಲಿಂಗವನ್ನು ನಿರ್ಮಿಸಬಹುದು ಅಥವಾ ಲಿಂಗಕ್ಕೆ ಅನುರೂಪವಾಗಿ ದೇವಸ್ಥಾನವನ್ನು ಕಟ್ಟಬಹುದು

ಗರ್ಭಪ್ರಮಾಣವನ್ನು ಅನುಸರಿಸಿ ಲಿಂಗದಲ್ಲಿ ಒಂಬತ್ತು ಭೇದಗಳು ಕಲ್ಪಿತವಾಗಿವೆ ಶಾಸ್ತ್ರೋಕ್ತವಾದ ಲಕ್ಷಣಗಳಿಂದ ಕೂಡಿದ್ದರೆ ಲಿಂಗವು ಶುಭವನ್ನು ಕೊಡುತ್ತದೆ, ವಿರುದ್ಧವಾಗಿದ್ದರೆ ಹಾನಿಯನ್ನು ತರುತ್ತದೆ ಆದುದರಿಂದ ರತ್ನ, ಸ್ಫಟಿಕ, ಶಿಲೆ ಮುಂತಾದ ತನಗೆ ಇಷ್ಟಬಂದ ದ್ರವ್ಯದಿಂದ ಸಲಕ್ಷಣವಾದ ಲಿಂಗವನ್ನು ನಿರ್ಮಿಸಬೇಕು

ಶ್ರೀಮತ್ಸ್ಯಮಹಾಪುರಾಣದಲ್ಲಿ ದೇವತಾರ್ಚಾನುಕೀರ್ತನವೆಂಬ
ಇನ್ನೂರ ಅರವತ್ತಮೂರನೆಯ ಅಧ್ಯಾಯವು ಮುಗಿದುದು

## ಅಥ ಚತುಃಷಷ್ಟ್ಯಧಿಕದ್ವಿಶತತಮೋಽಧ್ಯಾಯಃ

|| ಋಷಯ ಊಚುಃ ||

ದೇವತಾನಾಮಥೈತಾಸಾಂ ಪ್ರತಿಷ್ಠಾವಿಧಿಮುತ್ತಮಂ ।
ವದ ಸೂತ ಯಥಾನ್ಯಾಯಂ ಸರ್ವೇಷಾಮಪ್ಯಶೇಷತಃ || ೧ ||

|| ಸೂತ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಪ್ರತಿಷ್ಠಾವಿಧಿಮುತ್ತಮಂ ।
ಕುಂಡಮಂಡಪವೇದೀನಾಂ ಪ್ರಮಾಣಂ ಚ ಯಥಾಕ್ರಮಂ || ೨ ||

ಚೈತ್ರೇ ವಾ ಫಾಲ್ಗುನೇ ವಾಪಿ ಜ್ಯೇಷ್ಠೇ ವಾ ಮಾಧವೇ ತಥಾ ।
ಮಾಘೇ ವಾ ಸರ್ವದೇವಾನಾಂ ಪ್ರತಿಷ್ಠಾ ಶುಭದಾ ಭವೇತ್ || ೩ ||

ಪ್ರಾಪ್ಯ ಪಕ್ಷಂ ಶುಭಂ ಶುಕ್ಲಮತೀತೇ ದಕ್ಷಿಣಾಯನೇ ।
ಪಂಚಮೀ ಚ ದ್ವಿತೀಯಾ ಚ ತೃತೀಯಾ ಸಪ್ತಮೀ ತಥಾ || ೪ ||

---

೧ ಋಷಿಗಳು ಹೇಳಿದರು —ಓ ಸೂತಮಹರ್ಷೀ, ಹಿಂದೆ ಹೇಳಿದ ದೇವತೆಗಳ ಪ್ರತಿಷ್ಠಾಕ್ರಮವನ್ನೂ ಕುಂಡ, ಮಂಡಪ ವೇದಿಕೆ ಮುಂತಾದುವುಗಳ ಲಕ್ಷಣ ಪ್ರಮಾಣಾದಿಗಳನ್ನೂ ನಮಗೆ ಕ್ರಮವರಿತು ಹೇಳು

೨ ಸೂತಪೌರಾಣಿಕನು ಹೇಳಿದನು —ಶುಭಪ್ರದವಾದ ಅರ್ಚಾವಿಗ್ರಹಗಳ ಪ್ರತಿಷ್ಠಾಕ್ರಮವನ್ನೂ ಕುಂಡ, ಮಂಡಪ, ವೇದಿಕೆ ಇವುಗಳ ಪ್ರಮಾಣವನ್ನೂ ಶಾಸ್ತ್ರೋಕ್ತವಾದ ವಿಧಾನದಲ್ಲಿ ಹೇಳುವೆನು

೩ ಚೈತ್ರ, ಫಾಲ್ಗುನ, ಜ್ಯೇಷ್ಠ, ವೈಶಾಖ, ಮಾಘ ಈ ಮಾಸಗಳು ಎಲ್ಲ ದೇವತೆಗಳ ಪ್ರತಿಷ್ಠೆಗೂ ಪ್ರಶಸ್ತವಾದುವು

೪-೫ ದಕ್ಷಿಣಾಯನವು ಕಳೆದ ಮೇಲೆ ಶುಭಕರವಾದ ಶುಕ್ಲಪಕ್ಷದಲ್ಲಿ ಪಂಚಮಿ, ದ್ವಿತೀಯೆ, ಸಪ್ತಮಿ, ದಶಮಿ, ಹುಣ್ಣಿಮೆ, ತ್ರಯೋದಶಿ ಈ ತಿಥಿಗಳಲ್ಲಿ

ದಶಮೀ ಪೌರ್ಣಮಾಸೀ ಚ ತಥಾ ಶ್ರೇಷ್ಠಾ ತ್ರಯೋದಶೀ ।
ಆಸು ಪ್ರತಿಷ್ಠಾ ವಿಧಿವತ್ಕೃತಾ ಬಹುಫಲಾ ಭವೇತ್ ॥ ೫ ॥

ಆಷಾಢೇ ದ್ವೇ ತಥಾ ಮೂಲಮುತ್ತರಾದ್ವಯಮೇವ ಚ ।
ಜ್ಯೇಷ್ಠಾ ಶ್ರವಣರೋಹಿಣ್ಯಃ ಪೂರ್ವಾಭಾದ್ರಪದಾ ತಥಾ ॥ ೬ ॥

ಹಸ್ತಾಶ್ವಿನೀ ರೇವತೀ ಚ ಪುಷ್ಯೋ ಮೃಗಶಿರಸ್ತಥಾ ।
ಅನೂರಾಧಾ ತಥಾ ಸ್ವಾತೀ ಪ್ರತಿಷ್ಠಾದಿಷು ಶಸ್ಯತೇ ॥ ೭ ॥

ಬುಧೋ ಬೃಹಸ್ಪತಿಃ ಶುಕ್ರಸ್ತ್ರಯೋಽಪ್ಯೇತೇ ಶುಭಗ್ರಹಾಃ ।
ಏಭಿರ್ನಿರೀಕ್ಷಿತಂ ಲಗ್ನಂ ನಕ್ಷತ್ರಂ ಚ ಪ್ರಶಸ್ಯತೇ ॥ ೮ ॥

ಗ್ರಹತಾರಾಬಲಂ ಲಬ್ಧ್ವಾ ಗ್ರಹಪೂಜಾಂ ವಿಧಾಯ ಚ ।
ನಿಮಿತ್ತಶಕುನಂ ಲಬ್ಧ್ವಾ ವರ್ಜಯಿತ್ವಾದ್ಭುತಾದಿಕಂ ॥ ೯ ॥

ಶುಭಯೋಗೇ ಶುಭಸ್ಥಾನೇ ಕ್ರೂರಗ್ರಹವಿವರ್ಜಿತೇ ।
ಲಗ್ನಋಕ್ಷೇ ಪ್ರಕುರ್ವೀತ ಪ್ರತಿಷ್ಠಾದಿಕಮುತ್ತಮಂ ॥೧೦॥

---

ಶಾಸ್ತ್ರೋಕ್ತವಾಗಿ ಪ್ರತಿಷ್ಠೆಯನ್ನು ನಡೆಸಿದರೆ ವಿಶೇಷವಾದ ಫಲವು ಪ್ರಾಪ್ತವಾಗುವುದು

೬-೭ ಪೂರ್ವಾಷಾಢ, ಉತ್ತರಾಷಾಡ, ಮೂಲ, ಉತ್ತರಫಲ್ಗುನಿ, ಉತ್ತರಾಭಾದ್ರೆ, ಜೇಷ್ಠೆ, ಶ್ರವಣ, ರೋಹಿಣಿ, ಪೂರ್ವಾಭಾದ್ರೆ, ಹಸ್ತ, ಅಶ್ವಿನಿ, ರೇವತಿ, ಪುಷ್ಯ, ಮೃಗಶಿರೆ, ಅನೂರಾಧೆ ಮತ್ತು ಸ್ವಾತೀ ನಕ್ಷತ್ರಗಳು ಪ್ರತಿಷ್ಠಾದಿ ಕಾರ್ಯಗಳಿಗೆ ಶ್ರೇಷ್ಠವಾದುವು

೮ ಬುಧ, ಬೃಹಸ್ಪತಿ, ಶುಕ್ರ ಈ ಮೂವರು ಶುಭಗ್ರಹಗಳು ಇವರ ವೀಕ್ಷಣವಿರುವ ಲಗ್ನವೂ ನಕ್ಷತ್ರವೂ ಪ್ರಶಸ್ತವಾದುವು

೯-೧೦ ಗ್ರಹಬಲವೂ ತಾರಾಬಲವೂ ಇರುವಾಗ ಗ್ರಹಗಳನ್ನೂ ಪೂಜಿಸಿ, ಒಳ್ಳೆಯ ಶಕುನವನ್ನು ನೋಡಿ, ಉತ್ಪಾತಾದಿಗಳಿರುವ ಸಮಯುವನ್ನು ಬಿಟ್ಟು ಶುಭಯೋಗದಲ್ಲಿ, ಶುಭಸ್ಥಾನದಲ್ಲಿ, ಕ್ರೂರಗ್ರಹಸಂಬಂಧವಿಲ್ಲದ ಶುಭನಕ್ಷತ್ರದಲ್ಲಿ ಮತ್ತು ಶುಭಲಗ್ನದಲ್ಲಿ ಪ್ರತಿಷ್ಠಾವಿಧಿಯನ್ನು ನೆರವೇರಿಸಬೇಕು

**ಅಯನೇ ವಿಷುವೇ ತದ್ವತ್ಷಡಶೋತಿಮುಖೇ ತಥಾ ।**
**ಏತೇಷು ಸ್ಥಾಪನಂ ಕಾರ್ಯಂ ವಿಧಿದೃಷ್ಟೇನ ಕರ್ಮಣಾ ॥೧೧॥**

**ಪ್ರಾಜಾಪತ್ಯೇ ತು ಶಯನಂ ಶ್ವೇತೇ ತೂತ್ಥಾಪನಂ ತಥಾ ।**
**ಮುಹೂರ್ತೇ ಸ್ಥಾಪನಂ ಕುರ್ಯಾತ್ಪುನರ್ಬ್ರಾಹ್ಮೇ ವಿಚಕ್ಷಣಃ ॥೧೨॥**

**ಪ್ರಾಸಾದಸ್ಯೋತ್ತರೇ ವಾಪಿ ಪೂರ್ವೇ ವಾ ಮಂಡಪೋ ಭವೇತ್ ।**
**ಹಸ್ತಾನ್ ಷೋಡಶ ಕುರ್ವೀತ ದಶ ದ್ವಾದಶ ವಾ ಪುನಃ ॥೧೩॥**

**ಮಧ್ಯೇ ವೇದಿಕಯಾ ಯುಕ್ತಃ ಪರಿಕ್ಷಿಪ್ತಃ ಸಮಂತತಃ ।**
**ಪಂಚ ಸಪ್ತಾಪಿ ಚತುರಃ ಕರಾನ್ ಕುರ್ವೀತ ವೇದಿಕಾಂ ॥೧೪॥**

**ಚತುರ್ಭಿಸ್ತೋರಣೈರ್ಯುಕ್ತೋ ಮಂಡಪಃ ಸ್ಯಾಚ್ಚತುರ್ಮುಖಃ ।**
**ಪ್ಲಕ್ಷದ್ವಾರಂ ಭವೇತ್ಪೂರ್ವಂ ಯಾಮ್ಯೇ ಚೌದುಂಬರಂ ಭವೇತ್ ॥೧೫॥**

---

೧೧ ಉತ್ತರಾಯಣ, ದಕ್ಷಿಣಾಯನ, ಚಿತ್ರವಿಷು, ತುಲಾವಿಷು, ಷಡಶೀತಿ ಸಂಕ್ರಮಣ ಮುಂತಾದ ಪುಣ್ಯಕಾಲಗಳಲ್ಲಿ ಶಾಸ್ತ್ರವಿಧಿಯನ್ನನುಸರಿಸಿ ದೇವತಾ ಪ್ರತಿಷ್ಠೆಯನ್ನು ಮಾಡಬೇಕು

೧೨ ಆಗ ಮಹಾಶಾಸ್ತ್ರನಿಪುಣನಾದವನು ವಿಗ್ರಹವನ್ನು ಪ್ರಾಜಾಪತ್ಯ ಮುಹೂರ್ತದಲ್ಲಿ ಶಯನ ಮಾಡಿಸಬೇಕು ಶ್ವೇತಮುಹೂರ್ತದಲ್ಲಿ ಎಬ್ಬಿಸಬೇಕು ಬ್ರಾಹ್ಮಮುಹೂರ್ತದಲ್ಲಿ ಅದನ್ನು ಪ್ರತಿಷ್ಠಿಸಬೇಕು

೧೩ ದೇವಾಲಯದ ಉತ್ತರದಲ್ಲೋ ಪೂರ್ವದಲ್ಲೋ ಮಂಟಪವನ್ನು ನಿರ್ಮಿಸಬೇಕು ಅದು ಹತ್ತು, ಹನ್ನೆರಡು ಅಥವಾ ಹದಿನಾರು ಮೊಳಗಳ ಪ್ರಮಾಣ ವುಳ್ಳುದಾಗಿರಬೇಕು

೧೪ ಮಂಟಪದ ಮಧ್ಯದಲ್ಲಿ ವೇದಿಕೆಯು ಸುತ್ತಲೂ ಆವರಣವೂ ಇರಬೇಕು ವೇದಿಕೆಯನ್ನು ನಾಲ್ಕು, ಐದು ಅಥವಾ ಏಳು ಮೊಳವಿರುವಂತೆ ಕಲ್ಪಿಸಬಹುದು

೧೫ ಮಂಟಪದ ನಾಲ್ಕು ಪಕ್ಕಗಳಲ್ಲಿಯೂ ನಾಲ್ಕು ಬಾಗಿಲುಗಳಿರುವುವು ಪೂರ್ವದಿಕ್ಕಿನ ಬಾಗಿಲು ಬಸರಿಯ ಮರದಿಂದಾದುದು ದಕ್ಷಿಣದಿಕ್ಕಿನದು ಅತ್ತಿಯ ಮರದಿಂದ ನಿರ್ಮಿತವಾದುದು

ಪಶ್ಚಾದಶ್ವತ್ಥಘಟಿತಂ ನ್ಯಗ್ರೋಧಂ ತಥೋತ್ತರೇ ।
ಭೂಮೌ ಹಸ್ತಪ್ರವಿಷ್ಟಾನಿ ಚತುರ್ಹಸ್ತಾನಿ ಚೋಚ್ಛ್ರಯೇ ॥೧೬॥

ಸೂಪಲಿಪ್ತಂ ತಥಾ ಶ್ಲಕ್ಷ್ಣಂ ಭೂತಲಂ ಸ್ಯಾತ್ಸುಶೋಭನಂ ।
ವಸ್ತ್ರೈರ್ನಾನಾ ವಿಧೈಸ್ತದ್ವತ್ಪುಷ್ಪಪಲ್ಲವಶೋಭಿತಂ ॥೧೭॥

ಕೃತ್ವೈವಂ ಮಂಡಪಂ ಪೂರ್ವಂ ಚತುರ್ದ್ವಾರೇಷು ವಿನ್ಯಸೇತ್ ।
ಅವ್ರಣಾನ್ ಕಲಶಾನಷ್ಟೌ ಜ್ವಲತ್ಕಾಂಚನಗರ್ಭಿತಾನ್ ॥೧೮॥

ಚೂತಪಲ್ಲವಸಂಛನ್ನಾನ್ ಸಿತವಸ್ತ್ರಯುಗಾನ್ವಿತಾನ್ ।
ಸರ್ವೌಷಧಿಫಲೋಪೇತಾಂಶ್ಚಂದನೋದಕಪೂರಿತಾನ್ ॥೧೯॥

ಏವಂ ನಿವೇಶ್ಯ ತದ್ಗರ್ಭೇ ಗಂಧಧೂಪಾರ್ಚನಾದಿಭಿಃ ।
ಧ್ವಜಾಧಿರೋಹಣಂ ಕಾರ್ಯಂ ಮಂಡಪಸ್ಯ ಸಮಂತತಃ ॥೨೦॥

---

೧೬ ಪಶ್ಚಿಮದಲ್ಲಿ ಅರಳೀಮರದ ಬಾಗಿಲನ್ನೂ, ಉತ್ತರದಲ್ಲಿ ಆಲದಮರದ ಬಾಗಿಲನ್ನೂ ಇರಿಸಬೇಕು ಬಾಗಿಲುವಾಡಗಳನ್ನು ನೆಲದಲ್ಲಿ ಒಂದು ಮೊಳದೂರ ಹೂಳಬೇಕು ನೆಲದಿಂದ ಮೇಲೆ ಅವು ನಾಲ್ಕುಮೊಳ ಎತ್ತರವಾಗಿರುವುವು

೧೭ ನೆಲವನ್ನು ಚೆನ್ನಾಗಿ ಸಾರಿಸಿ ಮಟ್ಟವಾಗಿಯೂ ಅಂದವಾಗಿಯೂ ಮಾಡಬೇಕು ಮಂಟಪವನ್ನು ಬಗೆಬಗೆಯ ವಸ್ತ್ರಗಳಿಂದಲೂ, ಹೂಗಳಿಂದಲೂ, ಚಿಗುರುಗಳಿಂದಲೂ ಅಲಂಕರಿಸಬೇಕು

೧೮-೧೯ ಮೊದಲು ಹೀಗೆ ಮಂಟಪವನ್ನು ರಚಿಸಿ, ಬಳಿಕ ಅದರ ನಾಲ್ಕು ಬಾಗಿಲುಗಳ ಬಳಿಯಲ್ಲಿಯೂ ಒಡಕುಬಿರುಕುಗಳಿಲ್ಲದ ಎಂಟು ಕಲಶಗಳನ್ನು ಸ್ಥಾಪಿಸಬೇಕು ಅವುಗಳಲ್ಲಿ ತೇಜೋಭರಿತವಾದ ಸುವರ್ಣ ಶಕಲಗಳನ್ನು ಹಾಕಿ, ಚಂದನೋದಕದಿಂದ ತುಂಬಬೇಕು ಎಲ್ಲ ಬಗೆಯ ಮೂಲಿಕೆಗಳನ್ನೂ ಹಣ್ಣುಗಳನ್ನೂ ಅವುಗಳ ಬಳಿಯಿರಿಸಬೇಕು ಬಿಳಿಯ ವಸ್ತ್ರಗಳೆರಡನ್ನೂ ಧರಿಸಿ ಮಾವಿನ ಚಿಗುರಿನಿಂದ ಮುಚ್ಚಬೇಕು

೨೦ ಕಲಶಗಳನ್ನು ಹೀಗೆ ಒಳಗಡೆ ಸ್ಥಾಪಿಸಿ ಗಂಧಪುಷ್ಪಾದಿಗಳಿಂದ ಅರ್ಚಿಸಿ, ಮಂಟಪದ ನಾಲ್ಕು ಕಡೆಗಳಲ್ಲೂ ಬಾವುಟಗಳನ್ನು ಏರಿಸಬೇಕು

ಧ್ವಜಾಂಶ್ಚ ಲೋಕಪಾಲಾನಾಂ ಸರ್ವದಿಕ್ಷು ನಿವೇಶಯೇತ್ ।
ಪತಾಕಾ ಜಲದಾಕಾರಾ ಮಧ್ಯೇ ಸ್ಯಾನ್ಮಂಡಪಸ್ಯ ತು ॥೨೧॥

ಗಂಧಪುಷ್ಪಾದಿಕಂ ಕುರ್ಯಾತ್ಸ್ವೈಃ ಸ್ವೈರ್ಮಂತ್ರೈರನುಕ್ರಮಾತ್ ।
ಬಲಿಂ ಚ ಲೋಕಪಾಲೇಭ್ಯಃ ಸ್ವಮಂತ್ರೇಣ ನಿವೇದಯೇತ್ ॥೨೨॥

ಊರ್ಧ್ವಂ ತು ಬ್ರಹ್ಮಣೇ ದೇಯಂ ತ್ವಧಸ್ತಾಚ್ಛೇಷವಾಸುಕೇಃ ।
ಸಂಹಿತಾಯಾಂ ತು ಯೇ ಮಂತ್ರಾಸ್ತದ್ದೈವತ್ಯಾಃ ಶುಭಾಃ ಸ್ಮೃತಾಃ ॥೨೩॥

ತೈಃ ಪೂಜಾ ಲೋಕಪಾಲಾನಾಂ ಕರ್ತವ್ಯಾ ಚ ಸಮಂತತಃ ।
ತ್ರಿರಾತ್ರಮೇಕರಾತ್ರಂ ವಾ ಪಂಚರಾತ್ರಮಥಾಪಿ ವಾ ॥೨೪॥

ಅಥವಾ ಸಪ್ತರಾತ್ರಂ ತು ಕಾರ್ಯಂ ಸ್ಯಾದಧಿವಾಸನಂ ।
ಏವಂ ಸತೋರಣಂ ಕೃತ್ವಾ ಅಧಿವಾಸನಮುತ್ತಮಂ ॥೨೫॥

---

೨೧ ಎಲ್ಲ ದಿಕ್ಕುಗಳಲ್ಲಿಯೂ ಲೋಕಪಾಲಕರ ಧ್ವಜಗಳನ್ನು ನೆಡಬೇಕು ಮಂಟಪದ ನಡುವೆ ಮೋಡದ ಆಕಾರದ ಪತಾಕೆಯನ್ನು ಸ್ಥಾಪಿಸಬೇಕು

೨೨ ಗಂಧಪುಷ್ಪಾದಿಗಳನ್ನು ಆಯಾಯಾ ಮಂತ್ರಗಳಿಂದ ಕ್ರಮವಾಗಿ ಸಮರ್ಪಿಸಬೇಕು ಲೋಕಪಾಲಕರಿಗೆ ಅವರವರ ಮಂತ್ರಗಳಿಂದ ಬಲಿಯನ್ನು ಒಪ್ಪಿಸಬೇಕು

೨೩ ಬ್ರಹ್ಮನಿಗಾಗಿ ಮೇಲ್ಗಡೆಗೂ, ಆದಿಶೇಷ ಮತ್ತು ವಾಸುಕಿಗಳಿಗೋಸ್ಕರ ಕೆಳಗಡೆಗೂ ಪುಷ್ಪಾದಿಗಳನ್ನು ಸಮರ್ಪಿಸಬೇಕು ಸಂಹಿತೆಯಲ್ಲಿ ಉಕ್ತವಾಗಿರುವ ಆಯಾ ದೇವತೆಗಳ ಮಂತ್ರಗಳೇ ಪೂಜಾಕಾಲದಲ್ಲಿ ಹೇಳಲು ಪ್ರಶಸ್ತವಾದುವು

೨೪ ಲೋಕಪಾಲಕರಿಗೆ ಆ ಮಂತ್ರಗಳಿಂದ ಸಾಂಗವಾಗಿ ಪೂಜೆಯನ್ನು ಮಾಡಬೇಕು ಒಂದು, ಮೂರು, ಐದು ಅಥವಾ ಏಳು ರಾತ್ರಿಗಳವರೆಗೆ ಧಾನ್ಯಾಧಿವಾಸ, ಜಲಾಧಿವಾಸ ಮುಂತಾದುವು ನಡೆಯಬೇಕು

೨೫–೨೬ ಹೀಗೆ ಶಾಸ್ತ್ರೋಕ್ತವಾದ ರೀತಿಯಲ್ಲಿ ತೋರಣಸಹಿತವಾಗಿ ಅಧಿವಾಸನ ಶಾಲೆಯನ್ನು ಮಾಡಿಸಿದ ಬಳಿಕ ಅದರ ಉತ್ತರದಲ್ಲಿ ಸ್ನಾನಮಂಟಪ

**ತಸ್ಯಾಪ್ಯುತ್ತರತಃ ಕುರ್ಯಾತ್ಸ್ನಾನಮಂಡಪಮುತ್ತಮಂ ।**
**ತದರ್ಧೇನ ತ್ರಿಭಾಗೇನ ಚತುರ್ಭಾಗೇನ ವಾ ಪುನಃ ॥೨೬॥**

**ಆನೀಯ ಲಿಂಗಮರ್ಚಾಂ ವಾ ಶಿಲ್ಪಿನಃ ಪೂಜಯೇದ್ಬುಧಃ ।**
**ವಸ್ತ್ರಾಭರಣರತ್ನೈಶ್ಚ ಯೇಽಪಿ ತತ್ಪರಿಚಾರಕಾಃ ॥೨೭॥**

**ಕ್ಷಮಧ್ವಮಿತಿ ತಾನ್ ಬ್ರೂಯಾದ್ಯಜಮಾನೋಽಪ್ಯತಃ ಪರಂ ।**
**ದೇವಂ ಪ್ರಸ್ತರಣೇ ಕೃತ್ವಾ ನೇತ್ರಜ್ಯೋತಿಃ ಪ್ರಕಲ್ಪಯೇತ್ ॥೨೮॥**

**ಅಕ್ಷ್ಣೋರುದ್ಧರಣಂ ವಕ್ಷ್ಯೇ ಲಿಂಗಸ್ಯಾಪಿ ಸಮಾಸತಃ ।**
**ಸರ್ವತಸ್ತು ಬಲಿಂ ದದ್ಯಾತ್ಸಿದ್ಧಾರ್ಥಘೃತಪಾಯಸೈಃ ॥೨೯॥**

**ಶುಕ್ಲಪುಷ್ಪೈರಲಂಕೃತ್ಯ ಘೃತಗುಗ್ಗುಲಧೂಪಕೈಃ ।**
**ವಿಪ್ರಾಣಾಂ ಚಾರ್ಚನಂ ಕುರ್ಯಾದ್ದದ್ಯಾಚ್ಛಕ್ತ್ಯಾ ಚ ದಕ್ಷಿಣಾಂ ॥೩೦॥**

---

ವನ್ನು ರಚಿಸಬೇಕು ಅದು ಅಳತೆಯಲ್ಲಿ ಮಂಟಪದ ಅರ್ಧವೋ ಮೂರರಲ್ಲೊಂದು ಪಾಲೋ ಅಥವಾ ನಾಲ್ಕರಲ್ಲೊಂದು ಪಾಲೋ ಇರಬಹುದು

೨೭ ವಿಗ್ರಹವನ್ನು ತಂದ ಬಳಿಕ ಶಾಸ್ತ್ರಜ್ಞನಾದ ಯಜಮಾನನು ಶಿಲ್ಪಿಯನ್ನೂ ಅವರ ಪರಿಚಾರಕರನ್ನೂ ವಸ್ತ್ರಗಳಿಂದಲೂ, ರತ್ನಗಳಿಂದಲೂ ಆಭರಣಗಳಿಂದಲೂ ಸತ್ಕರಿಸಬೇಕು

೨೮ ಅನಂತರ ಯಜಮಾನನು ತಾನು ಕೊಟ್ಟ ತೊಂದರೆಗಾಗಿ ತನ್ನನ್ನು ಕ್ಷಮಿಸಬೇಕೆಂದು ಶಿಲ್ಪಿಗಳನ್ನು ಪ್ರಾರ್ಥಿಸಬೇಕು ಭಗವನ್ಮೂರ್ತಿಯನ್ನು ದರ್ಭೆ ಮುಂತಾದ ಆಸನದ ಮೇಲೆ ಇರಿಸಿ ನೇತ್ರೋನ್ಮೀಲನವನ್ನು ಮಾಡಬೇಕು

೨೯ ವಿಗ್ರಹದ ಮತ್ತು ಲಿಂಗದ ನೇತ್ರೋನ್ಮೀಲನ ವಿಧಿಯನ್ನು ಸಂಗ್ರಹವಾಗಿ ಹೇಳುವೆನು ಬಿಳಿಯಸಾಸುವೆ, ತುಪ್ಪ, ಪಾಯಸ ಇವುಗಳೊಡಗೂಡಿದ ಬಲಿಯನ್ನು ಎಲ್ಲ ದಿಕ್ಕುಗಳಲ್ಲೂ ಹಾಕಬೇಕು

೩೦ ಬ್ರಾಹ್ಮಣರನ್ನು ಬಿಳಿಯ ಪುಷ್ಪಗಳಿಂದ ಅಲಂಕರಿಸಿ ಧೂಪದೀಪಾದಿಗಳಿಂದ ಪೂಜಿಸಬೇಕು ತನ್ನ ಶಕ್ತ್ಯನುಸಾರವಾಗಿ ಅವರಿಗೆ ದಕ್ಷಿಣೆಯನ್ನು ಕೊಡಬೇಕು

ಗಾಂ ಮಹೀಂ ಕನಕಂ ಚೈವ ಸ್ಥಾಪಕಾಯ ನಿವೇದಯೇತ್ ।
ಲಕ್ಷಣಂ ಕಾರಯೇದ್ಭಕ್ತ್ಯಾ ಮಂತ್ರೇಣಾನೇನ ವೈ ದ್ವಿಜಃ ॥೩೧॥

ಓಂ ನಮೋ ಭಗವತೇ ತುಭ್ಯಂ ಶಿವಾಯ ಪರಮಾತ್ಮನೇ ।
ಹಿರಣ್ಯರೇತಸೇ ವಿಷ್ಣೋ ವಿಶ್ವರೂಪಾಯ ತೇ ನಮಃ ॥೩೨॥

ಮಂತ್ರೋಽಯಂ ಸರ್ವದೇವಾನಾಂ ನೇತ್ರಜ್ಯೋತಿಷ್ಷಪಿ ಸ್ಮೃತಃ ।
ಏವಮಾಮಂತ್ರ್ಯ ದೇವೇಶಂ ಕಾಂಚನೇನ ವಿಲೇಖಯೇತ್ ॥೩೩॥

ಮಂಗಲ್ಯಾನಿ ಚ ವಾದ್ಯಾನಿ ಬ್ರಹ್ಮಘೋಷಂ ಸಗೀತಕಂ ।
ವೃದ್ಧ್ಯರ್ಥಂ ಕಾರಯೇದ್ವಿದ್ವಾನಮಂಗಲ್ಯವಿನಾಶನಂ ॥೩೪॥

ಲಕ್ಷಣೋದ್ಧರಣಂ ಕುರ್ಯಾಲ್ಲಿಂಗಸ್ಯ ಸುಸಮಾಹಿತಃ ।
ತ್ರಿಧಾ ವಿಭಜ್ಯ ಪೂಜ್ಯಾಯಾಂ ಲಕ್ಷಣಂ ಸ್ಯಾದ್ವಿಭಾಜಕಂ ॥೩೫॥

---

೩೧ ಯಜಮಾನನಾದ ದ್ವಿಜನು ವಿಗ್ರಹವನ್ನು ಪ್ರತಿಷ್ಠೆಮಾಡುವ ಆಗಮಿಕನಿಗೆ ಗೋದಾನ, ಭೂದಾನ, ಸುವರ್ಣದಾನಗಳನ್ನು ಮಾಡಬೇಕು ಮುಂದೆ ಹೇಳುವ ಮಂತ್ರದಿಂದ ನೇತ್ರೋನ್ಮೀಲನವನ್ನು ಭಕ್ತಿಯಿಂದ ಮಾಡಿಸಬೇಕು

೩೨ ಓಂ! ಪರಮೇಶ್ವರಾ, ಸಕಲಲೋಕಪೂಜ್ಯನೂ ಪರಮಾತ್ಮನೂ ಆದ ನಿನಗೆ ನಮಸ್ಕಾರ ವಿಷ್ಣೋ, ಸುವರ್ಣವೀರ್ಯನೂ ಸರ್ವಶರೀರಿಯೂ ಆದ ನಿನಗೆ ನಮಸ್ಕಾರ

೩೩ ಸಕಲ ದೇವತಾ ವಿಗ್ರಹಗಳ ನೇತ್ರೋನ್ಮೀಲನಕ್ಕೂ ಇದೇ ಮಂತ್ರವನ್ನು ಹೇಳಬೇಕು ದೇವಾಧಿದೇವನನ್ನು ಹೀಗೆ ಆಹ್ವಾನಮಾಡಿ, ಚಿನ್ನದ ಸಲಾಕೆಯಿಂದ ಗುರುತಿಸಬೇಕು

೩೪ ಶಾಸ್ತ್ರಜ್ಞನಾದ ಯಜಮಾನನು ಈ ಸಮಯದಲ್ಲಿ ಮಂಗಲವಾದ್ಯಗಳನ್ನೂ, ವೇದಘೋಷವನ್ನೂ, ಮಧುರಗಾನವನ್ನೂ ಮಾಡಿಸಬೇಕು ಇದರಿಂದ ಶ್ರೇಯಸ್ಸುಂಟಾಗುವುದು ಅಮಂಗಲವು ತೊಲಗುವುದು

೩೫ ಶಾಸ್ತ್ರಜ್ಞನಾದವನು ಲಿಂಗಕ್ಕೆ ಲಕ್ಷಣಚಿಹ್ನಗಳನ್ನು ಮಾಡಬೇಕು ಮುಂದೆ ಹೇಳುವ ರೀತಿಯಲ್ಲಿ ಲಕ್ಷಣರೇಖೆಗಳು ಮೂರುವಿಧವಾಗಿ ಎಳೆಯಲ್ಪಡುವುವು

ಲೇಖಾತ್ರಯಂ ತು ಕರ್ತವ್ಯಂ ಯವಾಷ್ಟಾಂತರಸಂಯುತಂ ।
ನ ಸ್ಥೂಲಂ ನ ಕೃಶಂ ತದ್ವನ್ನ ವಕ್ರಂ ಭೇದವರ್ಜಿತಂ ॥೩೬॥

ನಿಮ್ನಂ ಯವಪ್ರಮಾಣೇನ ಜ್ಯೇಷ್ಠಲಿಂಗಸ್ಯ ಕಾರಯೇತ್ ।
ಸೂಕ್ಷ್ಮಾಸ್ತತಸ್ತು ಕರ್ತವ್ಯಾ ಯಥಾಮಧ್ಯಮಕೇ ನ್ಯಸೇತ್ ॥೩೭॥

ಅಷ್ಟಭಕ್ತಂ ತತಃ ಕೃತ್ವಾ ತ್ಯಕ್ತ್ವಾ ಭಾಗತ್ರಯಂ ಬುಧಃ ।
ಲಂಬಯೇತ್ಸಪ್ತ ರೇಖಾಸ್ತು ಪಾರ್ಶ್ವಯೋರುಭಯೋಃ ಸಮಾಃ ॥೩೮॥

ತಾವತ್ಪ್ರಲಂಬಯೇದ್ವಿದ್ವಾನ್ಯಾವದ್ಭಾಗಚತುಷ್ಟಯಂ ।
ಭ್ರಾಮ್ಯತೇ ಪಂಚಭಾಗೋರ್ಧ್ವಂ ಕಾರಯೇತ್ಸಂಗಮಂ ತತಃ ॥೩೯॥

ರೇಖಯೋಃ ಸಂಗಮೇ ತದ್ವತ್ಪೃಷ್ಠೇ ಭಾಗದ್ವಯಂ ಭವೇತ್ ।
ಏವಮೇತತ್ಸಮಾಖ್ಯಾತಂ ಸಮಾಸಾಲ್ಲಕ್ಷಣಂ ಮಯಾ ॥೪೦॥

ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ಪ್ರತಿಷ್ಠಾನುಕೀರ್ತನಂ
ನಾಮ ಚತುಃಷಷ್ಟ್ಯಧಿಕದ್ವಿಶತತಮೋಽಧ್ಯಾಯಃ

---

೩೬ ಒಂದಕ್ಕೊಂದಕ್ಕೆ ಎಂಟು ಯವಪ್ರಮಾಣ ದೂರವಿರುವಂತೆ ಮೂರು ಗೆರೆಗಳನ್ನು ಎಳೆಯಬೇಕು ಅವು ಬಹಳ ಸ್ಥೂಲವಾಗಿಯಾಗಲಿ, ಸೂಕ್ಷ್ಮವಾಗಿಯಾಗಲಿ ಇರಬಾರದು

೩೭ ಜ್ಯೇಷ್ಠಲಿಂಗವಾದರೆ ಒಂದು ಯವಪ್ರಮಾಣ ತಗ್ಗುಮಾಡಬೇಕು ಮಧ್ಯಮ ಮತ್ತು ಕನಿಷ್ಠಲಿಂಗಗಳಲ್ಲಿ ಆಳವನ್ನು ಪ್ರಮಾಣಾನುಸಾರವಾಗಿ ಅದಕ್ಕಿಂತ ಕಡಿಮೆ ಮಾಡಬಹುದು

೩೮ ಬಳಿಕ ಅರ್ಚಾಮೂರ್ತಿಯ ಔನ್ನತ್ಯವನ್ನು ಎಂಟು ಭಾಗಮಾಡಿ, ಮೂರು ಭಾಗಗಳನ್ನು ಬಿಟ್ಟು, ನಾಲ್ಕನೆಯ ಭಾಗದಿಂದ ಎರಡು ಪಾರ್ಶ್ವಗಳಲ್ಲಿ ಕ್ರಮವಾಗಿ ಏಳು ರೇಖೆಗಳನ್ನು ಊರ್ಧ್ವಮುಖವಾಗಿ ಎಳೆಯಬೇಕು

೩೯ ನಾಲ್ಕನೆಯ ಭಾಗದಿಂದ ಮೇಲಕ್ಕೆ ಎಳೆದ ರೇಖೆಯು ಐದನೆಯ ಭಾಗದ ಮೇಲ್ಗಡೆ ಬಗ್ಗಿ ಆ ರೇಖೆಯನ್ನು ಮುಟ್ಟುವಂತಿರಬೇಕು

೪೦ ಹೀಗೆ ರೇಖೆಗಳ ಸಂಧಿಸ್ಥಳದಲ್ಲಿಯೂ ಅದರ ಹಿಂಭಾಗದಲ್ಲಿಯೂ ಎರಡು ಭಾಗಗಳು ಏರ್ಪಡುವುವು ಈ ರೀತಿಯಾಗಿ ನಾನು ಸಂಗ್ರಹವಾಗಿ ಲಕ್ಷಣವನ್ನು ನಿಮಗೆ ತಿಳಿಸಿರುವೆನು

## ಅಧ್ಯಾಯ ೨೬೪

### ಅಧ್ಯಾಯದ ಸಾರಾಂಶ

ದೇವತಾಪ್ರತಿಷ್ಠೆಯ ವಿಧಿಯನ್ನು ಈ ಅಧ್ಯಾಯದಲ್ಲಿ ಹೇಳಿದೆ

ಮಾಘ ಮೊದಲಾದ ಐದು ತಿಂಗಳಲ್ಲಿ ಶುಕ್ಲಪಕ್ಷದ ತೃತೀಯೆ, ಪಂಚಮಿ ಮೊದಲಾದ ಶುಭತಿಥಿಗಳೊಡಗೂಡಿದ ಶುಭನಕ್ಷತ್ರ ಶುಭವಾರಗಳಲ್ಲಿ ದೇವತಾಪ್ರತಿಷ್ಠೆಯನ್ನು ನೆರವೇರಿಸಬೇಕು ಶಾಸ್ತ್ರದಲ್ಲಿ ಹೇಳಿರುವ ಅಳತೆಗೆ ತಕ್ಕಂತೆ ದೇವಾಲಯದ ಉತ್ತರದ ದಿಕ್ಕಿನಲ್ಲಿ ಮಂಟಪವನ್ನು ಕಟ್ಟಬೇಕು ಕಲಶಗಳನ್ನು ಸ್ಥಾಪಿಸಿ ಧ್ವಜಗಳನ್ನು ಏರಿಸಬೇಕು ಈ ಮಂಟಪದ ಉತ್ತರಕ್ಕೆ ಸ್ನಾನಮಂಟಪವನ್ನು ಕಟ್ಟಿ, ಅಲ್ಲಿಗೆ ವಿಗ್ರಹವನ್ನೊಯ್ದು ಶಿಲ್ಪಿಯನ್ನು ವಸ್ತ್ರಾಭರಣ ರತ್ನಗಳಿಂದ ಗೌರವಿಸಬೇಕು ತರುವಾಯ ಆಗಮೋಕ್ತವಾದ ವಿಧಾನದಿಂದ ನೇತ್ರೋನ್ಮೀಲನವನ್ನು ಮಾಡಬೇಕು

ಶ್ರೀಮತ್ಸ್ಯಮಹಾಪುರಾಣದಲ್ಲಿ ಪ್ರತಿಷ್ಠಾನುಕೀರ್ತನವೆಂಬ
ಇನ್ನೂರ ಅರವತ್ತನಾಲ್ಕನೆಯ ಅಧ್ಯಾಯವು ಮುಗಿದುದು

## ಅಥ ಪಂಚಷಷ್ಟ್ಯಧಿಕದ್ವಿಶತತಮೋಽಧ್ಯಾಯಃ

|| ಸೂತ ಉವಾಚ ||

ಅತಃ ಪರಂ ಪ್ರವಕ್ಷ್ಯಾಮಿ ಮೂರ್ತಿಪಾನಾಂ ತು ಲಕ್ಷಣಂ ।
ಸ್ಥಾಪಕಸ್ಯ ಸಮಾಸೇನ ಲಕ್ಷಣಂ ಶೃಣುತ ದ್ವಿಜಾಃ || ೧ ||

ಸರ್ವಾವಯವಸಂಪೂರ್ಣೋ ವೇದಮಂತ್ರವಿಶಾರದಃ ।
ಪುರಾಣವೇತ್ತಾ ತತ್ವಜ್ಞೋ ದಂಭಲೋಭವಿವರ್ಜಿತಃ || ೨ ||

ಕೃಷ್ಣಸಾರಮಯೇ ದೇಶೇ ಯ ಉತ್ಪನ್ನಃ ಶುಭಾಕೃತಿಃ ।
ಶೌಚಾಚಾರಪರೋ ನಿತ್ಯಂ ಪಾಷಂಡಕುಲನಿಸ್ಪೃಹಃ || ೩ ||

ಸಮಃ ಶತ್ರೌ ಚ ಮಿತ್ರೇ ಚ ಬ್ರಹ್ಮೋಪೇಂದ್ರಹರಪ್ರಿಯಃ ।
ಊಹಾಪೋಹಾರ್ಥತತ್ವಜ್ಞೋ ವಾಸ್ತುಶಾಸ್ತ್ರಸ್ಯ ಪಾರಗಃ || ೪ ||

---

೧ ಸೂತಪೌರಾಣಿಕನು ಹೇಳಿದನು —ಎಲೈ ದ್ವಿಜರೇ, ಇನ್ನು ಮುಂದ ಪ್ರತಿಷ್ಠಾಕಾರ್ಯದಲ್ಲಿ ನಿಯುಕ್ತರಾದ ಋತ್ವಿಕ್ಕುಗಳ ಲಕ್ಷಣವನ್ನೂ ಆಚಾರ್ಯನ ಲಕ್ಷಣವನ್ನೂ ಸಂಗ್ರಹವಾಗಿ ಹೇಳುವೆನು ಕೇಳಿ

೨-೪ ಆಚಾರ್ಯನು ಸಕಲಾವಯವ ಸಂಪೂರ್ಣನಾಗಿರಬೇಕು ವೇದಗಳನ್ನೂ ಮಂತ್ರಶಾಸ್ತ್ರಗಳನ್ನೂ ಪೂರ್ಣವಾಗಿ ಅರಿತು ಪುರಾಣಗಳ ರಹಸ್ಯವನ್ನು ಬಲ್ಲವನಾಗಿರಬೇಕು ತತ್ವಜ್ಞನಾಗಿ ಡಂಭಲೋಭಗಳಿಲ್ಲದಿರಬೇಕು ಜಿಂಕೆಗಳು ವಿಶೇಷವಾಗಿರುವ ದೇಶದಲ್ಲಿ ಹುಟ್ಟಿದವನಾಗಿ ಶುಭಾಕಾರನೂ ಶೌಚಾಚಾರಪರನೂ ಆಗಿರಬೇಕು ಧರ್ಮದೂಷಕರೊಡನೆ ಸ್ನೇಹವನ್ನು ಬೆಳೆಸಬಾರದು ಶತ್ರುಮಿತ್ರರಲ್ಲಿ ಸಮಾನಭಾವನೆಯುಳ್ಳವನಾಗಿ ತ್ರಿಮೂರ್ತಿಗಳಲ್ಲಿ ಭಕ್ತಿಯನ್ನಿಟ್ಟಿರಬೇಕು ಊಹಾಪೋಹಗಳನ್ನು ಬಲ್ಲವನಾಗಿ, ಅರ್ಥಶಾಸ್ತ್ರವನ್ನರಿತು ವಾಸ್ತುಶಾಸ್ತ್ರದಲ್ಲಿ ಪಾಂಡಿತ್ಯವನ್ನು ಪಡೆದಿರಬೇಕು ಯಾವ ಬಗೆಯ ದೋಷವೂ ಇರಬಾರದು ಇಂತಹವನು ಆಚಾರ್ಯನಾಗಲು ತಕ್ಕವನು

ಆಚಾರ್ಯಸ್ತು ಭವೇನ್ನಿತ್ಯಂ ಸರ್ವದೋಷವಿವರ್ಜಿತಃ ।
ಮೂರ್ತಿಪಾಸ್ತು ದ್ವಿಜಾಶ್ಚೈವ ಕುಲೀನಾ ಋಜವಸ್ತಥಾ ॥ ೫ ॥

ದ್ವಾತ್ರಿಂಶತ್ಷೋಡಶಾಥಾಪಿ ಅಷ್ಟೌ ವಾ ಶ್ರುತಿಪಾರಗಾಃ ।
ಜ್ಯೇಷ್ಠಮಧ್ಯಕನಿಷ್ಠೇಷು ಮೂರ್ತಿಪಾಶ್ಚ ಪ್ರಕೀರ್ತಿತಾಃ ॥ ೬ ॥

ತತೋ ಲಿಂಗಮಥಾರ್ಚಾಂ ವಾ ನೀತ್ವಾ ಸ್ನಪನಮಂಡಪಂ ।
ಗೀತಮಂಗಲಶಬ್ದೇನ ಸ್ನಪನಂ ತತ್ರ ಕಾರಯೇತ್ ॥ ೭ ॥

ಪಂಚಗವ್ಯಕಷಾಯೇಣ ಮೃದ್ಭಿರ್ಭಸ್ಮೋದಕೇನ ಚ ।
ಶೌಚಂ ತತ್ರ ಪ್ರಕುರ್ವೀತ ವೇದಮಂತ್ರ ಚತುಷ್ಟಯಾತ್ ॥ ೮ ॥

ಸಮುದ್ರಜ್ಯೇಷ್ಠಮಂತ್ರೇಣ ಆಪೋ ದಿವ್ಯೇತಿ ಚಾಪರಃ ।
ಯಾಸಾಂ ರಾಜೇತಿ ಮಂತ್ರಸ್ತು ಆಪೋಹಿಷ್ಠೇತಿ ಚಾಪರಃ ॥ ೯ ॥

---

೫-೬ ಪ್ರತಿಷ್ಠಾಕಾರ್ಯದಲ್ಲಿ ನಿಯುಕ್ತರಾದ ಬ್ರಾಹ್ಮಣರಿಗೆ ಮೂರ್ತಿಪರೆಂದು ಹೆಸರು. ಅವರು ಸದ್ವಂಶದಲ್ಲಿ ಹುಟ್ಟಿದವರೂ ಸರಳಸ್ವಭಾವದವರೂ ವೇದಪಾರಂಗತರೂ ಆಗಿರಬೇಕು. ಜ್ಯೇಷ್ಠ, ಮತ್ತು ಕನಿಷ್ಠಗಳೆಂಬ ವಿಗ್ರಹಗಳ ಪ್ರಭೇದಕ್ಕೆ ತಕ್ಕಂತೆ ಅವರ ಸಂಖ್ಯೆ ಮೂವತ್ತೆರಡು, ಹದಿನಾರು ಅಥವಾ ಎಂಟು ಇರಬಹುದು.

೭ ಅನಂತರ ಲಿಂಗವನ್ನೋ ವಿಗ್ರಹವನ್ನೋ ಸ್ನಾನಮಂಟಪಕ್ಕೆ ತೆಗೆದುಕೊಂಡು ಹೋಗಿ, ಮಂಗಲಗೀತಗಳ ಧ್ವನಿಯಾಗುತ್ತಿರಲು ಅಭಿಷೇಕಮಾಡಬೇಕು.

೮ ಪಂಚಗವ್ಯೋದಕದಿಂದಲೂ, ಮಣ್ಣಿನಿಂದಲೂ, ಹೋಮಭಸ್ಮದ ನೀರಿನಿಂದಲೂ ವಿಗ್ರಹವನ್ನು ಶುದ್ಧಿಮಾಡಬೇಕು. ಮುಂದಿನ ನಾಲ್ಕು ವೇದಮಂತ್ರಗಳನ್ನು ಜಪಿಸುತ್ತಿರಬೇಕು.

೯ ಸಮುದ್ರಜ್ಯೇಷ್ಠ, ಆಪೋದಿವಾ, ಯಾಸಾಂರಾಜಾ, ಆಪೋಹಿಷ್ಠಾ ಎಂಬುವೇ ಆ ನಾಲ್ಕು ಮಂತ್ರಗಳು.

ಏವಂ ಸ್ನಾಪ್ಯ ತತೋ ದೇವಂ ಪೂಜ್ಯ ಗಂಧಾನುಲೇಪನೈಃ ।
ಪ್ರಚ್ಛಾದ್ಯ ವಸ್ತ್ರಯುಗ್ಮೇನ ಅಭಿವಸ್ತ್ರೇತ್ಯುದಾಹೃತಂ ॥೧೦॥

ಉತ್ಥಾಪಯೇತ್ತತೋ ದೇವಮುತ್ತಿಷ್ಠ ಬ್ರಹ್ಮಣಸ್ಪತೇ ।
ಆವಮೂರಜೇತಿ ಚ ತಥಾ ರಥೇ ತಿಷ್ಠೇತಿ ಚಾಪರಂ ॥೧೧॥

ರಥೇ ಬ್ರಹ್ಮರಥೇ ವಾಪಿ ಧೃತಾಂ ಶಿಲ್ಪಿಗಣೇನ ತು ।
ಆರೋಪ್ಯ ಚಾನಯೇದ್ವಿದ್ವಾನಾಕೃಷ್ಟೇನ ಪ್ರವೇಶಯೇತ್ ॥೧೨॥

ತತಃ ಪ್ರಾಸ್ತೀರ್ಯ ಶಯ್ಯಾಯಾಂ ಸ್ಥಾಪಯೇಚ್ಛನಕೈರ್ಬುಧಃ ।
ಕುಶಾನಾಸ್ತೀರ್ಯ ಪುಷ್ಪಾಣಿ ಸ್ಥಾಪಯೇತ್ಪ್ರಾಙ್ಮುಖಂ ತತಃ ॥೧೩॥

ತತಸ್ತು ನಿದ್ರಾಕಲಶಂ ವಸ್ತ್ರಕಾಂಚನಸಂಯುತಂ ।
ಶಿರೋಭಾಗೇ ತು ದೇವಸ್ಯ ಜಪನ್ನೇವಂ ನಿಧಾಪಯೇತ್ ॥೧೪॥

---

೧೦ ಹೀಗೆ ಅಭಿಷೇಕಮಾಡಿದ ತರುವಾಯ ಭಗವದ್ವಿಗ್ರಹವನ್ನು ಗಂಧಾದಿಗಳಿಂದ ಪೂಜಿಸಿ, ಒಂದು ಜೊತೆ ಪಂಚೆಯನ್ನೂ ಹೊದಿಸಿ, "ಅಭಿವಸ್ತ್ರ" ವೆಂಬ ಮಂತ್ರವನ್ನು ಹೇಳಬೇಕು

೧೧ "ಉತ್ತಿಷ್ಠ ಬಹ್ಮಣಸ್ಪತೇ" "ಆಮೂರಜಾ" "ರಥೇತಿಷ್ಠ" ಎಂಬ ಮಂತ್ರಗಳನ್ನು ಹೇಳಿ ದೇವತಾಮೂರ್ತಿಯನ್ನು ಮೇಲಕ್ಕೆ ಎತ್ತಬೇಕು

೧೨ ಸಾಮಾನ್ಯವಾದ ರಥದಲ್ಲಿಯೋ, ಬ್ರಹ್ಮರಥದಲ್ಲಿಯೋ ವಿಗ್ರಹವನ್ನು ಕೂರಿಸಿ ಶಿಲ್ಪಿಗಳ ಸಹಾಯದಿಂದ ಎಳೆದುತಂದು ಭಗವತ್ಪ್ರತಿಮೆಯನ್ನು ಪ್ರತಿಷ್ಠಾ ಮಂಟಪಕ್ಕೆ ಪ್ರವೇಶಮಾಡಿಸಬೇಕು

೧೩ ಶಾಸ್ತ್ರಜ್ಞನಾದ ಆಚಾರ್ಯನು ಬಳಿಕ ಹಾಸಿಗೆಯನ್ನು ಹಾಸಿ ಅದರ ಮೇಲೆ ಮೆಲ್ಲಗೆ ವಿಗ್ರಹವನ್ನು ಇರಿಸಬೇಕು ಹಾಸಿಗೆಯ ಮೇಲೆ ದರ್ಭೆಗಳನ್ನೂ ಪುಷ್ಪಗಳನ್ನೂ ಹರಡಿ ಪೂರ್ವಾಭಿಮುಖವಾಗಿ ಮಲಗಿಸಬೇಕು

೧೪ ಬಳಿಕ "ಆಪೋದೇವೀ" "ಆಪೋಸ್ಮಾನ್ಮಾತರಃ" ಎಂಬ ಮಂತ್ರಗಳನ್ನು ಜಪಿಸುತ್ತ, ವಸ್ತ್ರದಿಂದಲೂ ಸುವರ್ಣದಿಂದಲೂ ಸಹಿತವಾದ ನಿದ್ರಾಕಲಶವನ್ನು ಭಗವಂತನ ತಲೆಯ ಪಕ್ಕದಲ್ಲಿ ಇರಿಸಬೇಕು

ಆಪೋ ದೇವೀತಿ ಮಂತ್ರೇಣ ಆಪೋಽಸ್ಮಾನ್ಮಾತರೋಽಪಿ ಚ ।
ತತೋ ದುಕೂಲಪಟ್ಟೈಶ್ಚ ಚ್ಛಾದ್ಯ ನೇತ್ರೋಪಧಾನಕಂ ॥೧೫॥

ದದ್ಯಾಚ್ಛಿರಸಿ ದೇವಸ್ಯ ಕೌಶೇಯಂ ವಾ ವಿಚಕ್ಷಣಃ ।
ಮಧುನಾ ಸರ್ಪಿಷಾಽಭ್ಯಜ್ಯ ಪೂಜ್ಯ ಸಿದ್ಧಾರ್ಥಕೈಸ್ತತಃ ॥೧೬॥

ಆಪ್ಯಾಯಸ್ವೇತಿ ಮಂತ್ರೇಣ ಯಾ ತೇ ರುದ್ರ ಶಿವೇತಿ ಚ ।
ಉಪವಿಶ್ಯಾರ್ಚಯೇದ್ದೇವಂ ಗಂಧಪುಷ್ಪೈಃ ಸಮಂತತಃ ॥೧೭॥

ಸಿತಂ ಪ್ರತಿಸರಂ ದದ್ಯಾದ್ಬಾರ್ಹಸ್ಪತ್ಯೇತಿ ಮಂತ್ರತಃ ।
ದುಕೂಲಪಟ್ಟೈಃ ಕಾರ್ಪಾಸೈರ್ನಾನಾಚಿತ್ರೈರಥಾಪಿ ವಾ ॥೧೮॥

ಆಚ್ಛಾದ್ಯ ದೇವಂ ಸರ್ವತ್ರ ಛತ್ರಚಾಮರದರ್ಪಣಂ ।
ಪಾರ್ಶ್ವತಃ ಸ್ಥಾಪಯೇತ್ತತ್ರ ವಿತಾನಂ ಪುಷ್ಪಸಂಯುತಂ ॥೧೯॥

ರತ್ನಾನ್ಯೋಷಧಯಸ್ತತ್ರ ಗೃಹೋಪಕರಣಾನಿ ಚ ।
ಭಾಜನಾನಿ ವಿಚಿತ್ರಾಣಿ ಶಯನಾನ್ಯಾಸನಾನಿ ಚ ॥೨೦॥

---

೧೫ ಶಾಸ್ತ್ರಜ್ಞನಾದ ಆಚಾರ್ಯನು ಅನಂತರ ಪೀತಾಂಬರವನ್ನು ಹೊದಿಸಿ, ಭಗವಂತನ ತಲೆಗೆ ನವಿರು ಬಟ್ಟೆಯ ಹೊದಿಕೆಯುಳ್ಳ ತಲೆದಿಂಬನ್ನೋ, ರೇಷ್ಮೆಯ ವಸ್ತ್ರವನ್ನೋ ಇಡಬೇಕು

೧೬-೧೭ ಜೇನುತುಪ್ಪದಿಂದಲೂ ತುಪ್ಪದಿಂದಲೂ ಅಭ್ಯಂಜನ ಮಾಡಿಸಿ, ಬಿಳಿಯ ಸಾಸುವೆಯಿಂದ ಅರ್ಚನೆಮಾಡಿ, "ಆಪ್ಯಾಯಸ್ವ" "ಯಾತೇರುದ್ರ ಶಿವಾ" ಎಂಬ ಮಂತ್ರದಿಂವ ಭಗವಂತನನ್ನು ಕುಳ್ಳಿರಿಸಿ ಗಂಧಪುಷ್ಪಾದಿಗಳಿಂದ ಪೂಜಿಸಬೇಕು

೧೮-೧೯ "ಬಾರ್ಹಸ್ಪತ್ಯ" ವೆಂಬ ಮಂತ್ರದಿಂದ ಶುಭ್ರವಾದ ಕಂಕಣ ವನ್ನು ಭಗವತ್ಪ್ರತಿಮೆಗೆ ಧಾರಣಮಾಡಿ ಉತ್ತಮವಾದ ರೇಷ್ಮೆಯ ಮತ್ತು ಹತ್ತಿಯ ಬಟ್ಟೆಗಳನ್ನೂ, ಚಿತ್ರ ವಿಚಿತ್ರವಾದ ಪೀತಾಂಬರಗಳನ್ನೂ ಹೊದೆಸಿ ಛತ್ರ, ಚಾಮರ ಮತ್ತು ಕನ್ನಡಿಗಳನ್ನು ಪಕ್ಕದಲ್ಲಿರಿಸಬೇಕು ಪುಷ್ಪಾಲಂಕೃತವಾದ ಮೇಲ್ಗಟ್ಟನ್ನು ಕಟ್ಟಬೇಕು

೨೦ ತನ್ನ ವಿಭವಕ್ಕೆ ತಕ್ಕಂತೆ ರತ್ನಗಳು, ಓಷಧಿಗಳು, ಗೃಹೋಪಕರಣ ಗಳು, ಚಿತ್ರವಿಚಿತ್ರವಾದ ಪಾತ್ರೆಗಳು, ಶಯನಗಳು, ಹಾಸಿಗೆಗಳು ಮುಂತಾದು ವನ್ನು "ಅಭಿತ್ವಾಶೂರ" ವೆಂಬ ಮಂತ್ರಪೂರ್ವಕವಾಗಿ ಇರಿಸಬೇಕು

ಅಭಿತ್ವಾಶೂರ ಮಂತ್ರೇಣ ಯಥಾವಿಭವತೋ ನ್ಯಸೇತ್ ।
ಕ್ಷೀರಂ ಕ್ಷೌದ್ರಂ ಘೃತಂ ತದ್ವದ್ಭಕ್ಷ್ಯಭೋಜ್ಯಾನ್ನಪಾಯಸೈಃ ॥೨೧॥

ಷಡ್ವಿಧೈಶ್ಚ ರಸೈಸ್ತದ್ವತ್ಸಮಂತಾತ್ಪರಿಪೂಜಯೇತ್ ।
ಬಲಿಂ ದದ್ಯಾತ್ಪ್ರಯತ್ನೇನ ಮಂತ್ರೇಣಾನೇನ ಭೂರಿಶಃ ॥೨೨॥

ತ್ರ್ಯಂಬಕಂ ಯಜಾಮಹ ಇತಿ ಸರ್ವತಃ ಶನಕೈರ್ಭುವಿ ।
ಮೂರ್ತಿಪಾನ್ ಸ್ಥಾಪಯೇತ್ಪಶ್ಚಾತ್ಸರ್ವದಿಕ್ಷು ವಿಚಕ್ಷಣಃ ॥೨೩॥

ಚತುರೋ ದ್ವಾರಪಾಲಾಂಶ್ಚ ದ್ವಾರೇಷು ವಿನಿವೇಶಯೇತ್ ।
ಶ್ರೀಸೂಕ್ತಂ ಪಾವಮಾನಂ ಚ ಸೋಮಸೂಕ್ತಂ ಸುಮಂಗಲಂ ॥೨೪॥

ತಥಾ ಚ ಶಾಂತಿಕಾಧ್ಯಾಯಮಿಂದ್ರಸೂಕ್ತಂ ತಥೈವ ಚ ।
ರಕ್ಷೋಘ್ನಂ ಚ ತಥಾ ಸೂಕ್ತಂ ಪೂರ್ವತೋ ಬಹ್ವೃಚೋ ಜಪೇತ್ ॥೨೫॥

ರೌದ್ರಂ ಪುರುಷಸೂಕ್ತಂ ಚ ಶ್ಲೋಕಾಧ್ಯಾಯಂ ಸಶುಕ್ರಿಯಂ ।
ತಥೈವ ಮಂಡಲಾಧ್ಯಾಯಮಧ್ವರ್ಯುರ್ದಕ್ಷಿಣೇ ಜಪೇತ್ ॥೨೬॥

---

೨೧ ಹಾಲು, ಜೇನು, ತುಪ್ಪ, ಭಕ್ಷ್ಯಭೋಜ್ಯಗಳು, ಅನ್ನ, ಪಾಯಸ, ಮತ್ತು ಷಡ್ರಸೋಪೇತವಾದ ವ್ಯಂಜನಾದಿಗಳನ್ನು ನಿವೇದನಮಾಡಿ ವಿಶೇಷವಾಗಿ ಪೂಜಿಸಬೇಕು

೨೨ ತ್ರ್ಯಂಬಕಂ ಯಜಾಮಹೇ" ಎಂಬ ಮಂತ್ರದಿಂದ ಎಲ್ಲ ದಿಕ್ಕುಗಳಲ್ಲಿ ನೆಲದ ಮೇಲೆ ಎಚ್ಚರಿಕೆಯಿಂದ ಅತಿಶಯವಾಗಿ ಬಲಿಯನ್ನು ಹಾಕಬೇಕು

೨೩ ಆಚಾರ್ಯನು ತರುವಾಯ ಎಲ್ಲ ದಿಕ್ಕುಗಳಲ್ಲೂ ಋತ್ವಿಕ್ಕುಗಳನ್ನು ವರಿಸಬೇಕು ನಾಲ್ಕು ಬಾಗಿಲುಗಳಲ್ಲೂ ನಾಲ್ವರು ದ್ವಾರಪಾಲಕರನ್ನು ನಿಯಮಿಸಬೇಕು

೨೪-೨೫ ಪೂರ್ವದಿಕ್ಕಿನಲ್ಲಿ ಕುಳಿತಿರುವ ಋಗ್ವೇದಿಯು ಶ್ರೀಸೂಕ್ತ, ಪವಮಾನಸೂಕ್ತ, ಸೋಮಸೂಕ್ತ, ಸುಮಂಗಲಸೂಕ್ತ, ಶಾಂತಿಕಾಧ್ಯಾಯ, ಇಂದ್ರಸೂಕ್ತ, ರಕ್ಷೋಘ್ನಸೂಕ್ತ ಇವುಗಳನ್ನು ಜಪಿಸಬೇಕು

೨೬ ದಕ್ಷಿಣದಲ್ಲಿರುವ ಯಜುರ್ವೇದಿಯು ರುದ್ರಸೂಕ್ತ, ಪುರುಷಸೂಕ್ತ, ಶ್ಲೋಕಾಧ್ಯಾಯ, ಶುಕ್ರಿಯ, ಮಂಡಲಾಧ್ಯಾಯ ಇವುಗಳನ್ನು ಜಪಿಸಬೇಕು

ವಾಮದೇವಂ ಬೃಹತ್ಸಾಮ ಜ್ಯೇಷ್ಠ ಸಾಮ ರಥಂತರಂ ।
ತಥಾ ಪುರುಷಸೂಕ್ತಂ ಚ ರುದ್ರಸೂಕ್ತಂ ಸಶಾಂತಿಕಂ ॥೨೭॥

ಭಾರಂಡಾನಿ ಚ ಸಾಮಾನಿ ಛಂದೋಗಃ ಪಶ್ಚಿಮೇ ಜಪೇತ್ ।
ಅಥರ್ವಾಂಗಿರಸಂ ತದ್ವನ್ನೀಲಂ ರೌದ್ರಂ ತಥೈವ ಚ ॥೨೮॥

ತಥಾಽಪರಾಜಿತಾ ದೇವೀಸಪ್ತಸೂಕ್ತಂ ಸರೌದ್ರಕಂ ।
ತಥೈವ ಶಾಂತಿಕಾಧ್ಯಾಯಮಥರ್ವಾ ಚೋತ್ತರೇ ಜಪೇತ್ ॥೨೯॥

ಶಿರಃಸ್ಥಾನೇ ತು ದೇವಸ್ಯ ಸ್ಥಾಪಕೋ ಹೋಮಮಾಚರೇತ್ ।
ಶಾಂತಿಕೈಃ ಪೌಷ್ಟಿಕೈಸ್ತದ್ವನ್ಮಂತ್ರೈರ್ವ್ಯಾಹೃತಿಪೂರ್ವಕೈಃ ॥೩೦॥

ಪಾಲಾಶೋದುಂಬರಾಶ್ವತ್ಥಾ ಅಪಾಮಾರ್ಗಃ ಶಮೀ ತಥಾ ।
ಹುತ್ವಾ ಸಹಸ್ರಮೇಕೈಕಂ ದೇವಂ ಪಾದೇ ತು ಸಂಸ್ಪೃಶೇತ್ ॥೩೧॥

ತತೋ ಹೋಮಸಹಸ್ರೇಣ ಹುತ್ವಾ ಹುತ್ವಾ ತತಸ್ತತಃ ।
ನಾಭಿಮಧ್ಯಂ ತಥಾ ವಕ್ಷಃ ಶಿರಶ್ಚಾಪ್ಯಾಲಭೇತ್ಪುನಃ ॥೩೨॥

---

೨೭ ಪಶ್ಚಿಮದಲ್ಲಿ ಕುಳಿತಿರುವ ಸಾಮವೇದಿಯು ವಾಮದೇವಸಾಮ, ಬೃಹತ್ಸಾಮ, ಜ್ಯೇಷ್ಠಸಾಮ, ರಥಂತರಸಾಮ, ಪುರುಷಸೂಕ್ತ, ರುದ್ರಸೂಕ್ತ, ಶಾಂತಿಕಾಧ್ಯಾಯ ಮತ್ತು ಭಾರಂಡಸಾಮಗಳನ್ನು ಪಾರಾಯಣ ಮಾಡಬೇಕು

೨೮-೨೯ ಉತ್ತರದಲ್ಲಿರುವ ಅಥರ್ವವೇದಿಯು ಅಥರ್ವಾಂಗಿರಸ, ನೀಲ, ರೌದ್ರ, ಅಪರಾಜಿತಾ, ದೇವೀಸಪ್ತಸೂಕ್ತ, ರುದ್ರಸೂಕ್ತ, ಶಾಂತಿಕಾಧ್ಯಾಯ ಇವುಗಳನ್ನು ಪಠಿಸಬೇಕು

೩೦ ಆಚಾರ್ಯನು ದೇವತಾವಿಗ್ರಹದ ಶಿರಸ್ಥಾನದಲ್ಲಿ ವ್ಯಾಹೃತಿ ಸಹಿತವಾಗಿ ಶಾಂತಿಮಂತ್ರಗಳಿಂದಲೂ ಪೌಷ್ಟಿಕಮಂತ್ರಗಳಿಂದಲೂ ಹೋಮಮಾಡಬೇಕು

೩೧ ಮುತ್ತುಗ, ಅತ್ತಿ, ಅರಳಿ, ಉತ್ತರಣೆ, ಬನ್ನಿ ಈ ಐದು ಜಾತಿಯ ಸಮಿತ್ತುಗಳಲ್ಲಿ ಒಂದೊಂದರಿಂದಲೂ ಸಾವಿರ ಹೋಮಗಳನ್ನು ಮಾಡಿ ಭಗವಂತನ ಪಾದವನ್ನು ಸ್ಪರ್ಶಿಸಬೇಕು

೩೨ ಮತ್ತೆ ಸಾವಿರ ಹೋಮವನ್ನು ಮಾಡಿ ಭಗವಂತನ ನಾಭಿಮಧ್ಯವನ್ನೂ, ವಕ್ಷಃಸ್ಥಲವನ್ನೂ, ಶಿರಸ್ಸನ್ನೂ ಸ್ಪರ್ಶಿಸಬೇಕು

ಹಸ್ತಮಾತ್ರೇಷು ಕುಂಡೇಷು ಮೂರ್ತಿಪಾಃ ಸರ್ವತೋದಿಶಂ ।
ಸಮೇಖಲೇಷು ತೇ ಕುರ್ಯುರ್ಯೋನಿವಕ್ತ್ರೇಷು ಚಾದರಾತ್ ||೩೩||

ವಿತಸ್ತಿಮಾತ್ರಾ ಯೋನಿಃ ಸ್ಯಾದ್ಗಜೋಷ್ಠಸದೃಶೀ ತಥಾ ।
ಆಯತಾ ಛಿದ್ರಸಂಯುಕ್ತಾ ಪಾರ್ಶ್ವತಃ ಕಲಯೋಚ್ಛ್ರಿತಾ ||೩೪||

ಕುಂಡಾತ್ಕರಾನುಸಾರೇಣ ಸರ್ವತಶ್ಚತುರಂಗುಲಾ ।
ವಿಸ್ತಾರೇಣೋಚ್ಛ್ರಯಾ ತದ್ವಚ್ಚತುರಸ್ರಾ ಸಮಾ ಭವೇತ್ ||೩೫||

ವೇದಿಭಿತ್ತಿಂ ಪರಿತ್ಯಜ್ಯ ತ್ರಯೋದಶಭಿರಂಗುಲೈಃ ।
ಏವಂ ನವಸು ಕುಂಡೇಷು ಲಕ್ಷಣಂ ಚೈವ ದೃಶ್ಯತೇ ||೩೬||

ಆಗ್ನೇಯಶಾಕ್ರಯಾಮ್ಯೇಷು ಹೋತವ್ಯಮುದಗಾನನೈಃ ।
ಶಾಂತಯೇ ಲೋಕಪಾಲೇಭ್ಯೋ ಮೂರ್ತಿಭ್ಯಃ ಕ್ರಮಶಸ್ತಥಾ ||೩೭||

---

೩೩ ಮೇಖಲೆಗಳೊಡಗೂಡಿ ಒಂದು ಮೊಳ ಆಳತೆಯಿರುವ ಅಗ್ನಿಕುಂಡಗಳ ಯೋನಿಮುಖಗಳಲ್ಲಿ ಋತ್ವಿಕ್ಕುಗಳು ಎಲ್ಲ ದಿಕ್ಕುಗಳಲ್ಲಿಯೂ ಶ್ರದ್ಧೆಯಿಂದ ಹೋಮಮಾಡಬೇಕು

೩೪ ಕುಂಡದ ಯೋನಿಯು ಆನೆಯ ತುಟಿಯ ಆಕಾರವಾಗಿ ಹನ್ನೆರಡಂಗುಲ ಆಳತೆಯಿಂದಿದ್ದು, ಅಗಲವಾಗಿಯೂ ಛಿದ್ರಸಹಿತವಾಗಿಯೂ ಇರುವುದು, ಪಕ್ಕಗಳು ಒಂದು ಕಲಾಪ್ರಮಾಣದಷ್ಟು ಉನ್ನತವಾಗಿರುವುವು

೩೫. ಮೇಖಲೆಯು (ಸುತ್ತುಗಟ್ಟು) ಅಗ್ನಿಕುಂಡದ ಅಳತೆಯ ಮೊಳಗಳಿಗೆ ತಕ್ಕಂತೆ ಎಲ್ಲಕಡೆಗಳಲ್ಲಿಯೂ ನಾಲ್ಕಂಗುಲ ಅಗಲವಾಗಿಯೂ ನಾಲ್ಕಂಗುಲ ಎತ್ತರವಾಗಿಯೂ ಇರುವುದು ಅದು ಚಚ್ಚೌಕವಾಗಿ ಕಾಣುವುದು

೩೬ ಕುಂಡವು ವೇದಿಕೆಯ ಗೋಡೆಯನ್ನು ಬಿಟ್ಟು ಹದಿಮೂರು ಅಂಗುಲಗಳ ದೂರದಲ್ಲಿ ಇರಬೇಕು ಹೀಗೆ ಒಂಬತ್ತು ಕುಂಡಗಳೂ ಲಕ್ಷಣವನ್ನು ಅನುಸರಿಸಿ ನಿರ್ಮಿತವಾಗಬೇಕು

೩೭ ಋತ್ವಿಕ್ಕುಗಳು ಉತ್ತರಾಭಿಮುಖರಾಗಿ ಕುಳಿತು, ಲೋಕಪಾಲಕರನ್ನೂ ಆಯಾ ದೇವತಾಮೂರ್ತಿಗಳನ್ನೂ ಕ್ರಮವಾಗಿ ಉದ್ದೇಶಿಸಿ ಹೋಮಮಾಡಬೇಕು

ತಥಾ ಮೂರ್ತ್ಯಧಿದೇವಾನಾಂ ಹೋಮಂ ಕುರ್ಯಾತ್ಸಮಾಹಿತಃ ।
ವಸುಧಾ ವಸುರೇತಾಶ್ಚ ಯಜಮಾನೋ ದಿವಾಕರಃ ||೩೮||

ಜಲಂ ವಾಯುಸ್ತಥಾ ಸೋಮ ಆಕಾಶಶ್ಚಾಷ್ಟಮಃ ಸ್ಮೃತಃ ।
ದೇವಸ್ಯ ಮೂರ್ತಯಸ್ತ್ವಷ್ಟಾವೇತಾಃ ಕುಂಡೇಷು ಸಂಸ್ಮರೇತ್ ||೩೯||

ಏತಾಸಾಮಾಧಿಪಾನಕ್ಷ್ಯೇ ಪವಿತ್ರಾ ಮೂರ್ತಿನಾಮತಃ ।
ಪೃಥ್ವೀಂ ಪಾತಿ ಚ ಶರ್ವಶ್ಚ ಪಶುಪಶ್ಚಾಗ್ನಿಮೇವ ಚ ||೪೦||

ಯಜಮಾನಂ ತಥೈವೋಗ್ರೋ ರುದ್ರಶ್ಚಾದಿತ್ಯಮೇವ ಚ ।
ಭವೋ ಜಲಂ ಸದಾ ಪಾತಿ ವಾಯುಮೀಶಾನ ಏವ ಚ ||೪೧||

ಮಹಾದೇವಸ್ತಥಾ ಚಂದ್ರಂ ಭೀಮಶ್ಚಾಕಾಶಮೇವ ಚ ।
ಸರ್ವದೇವಪ್ರತಿಷ್ಠಾಸು ಮೂರ್ತಿಪಾ ಹ್ಯೇತ ಏವ ಚ ||೪೨||

ಏತೇಭ್ಯೋ ವೈದಿಕೈರ್ಮಂತ್ರೈರ್ಯಥಾಸ್ವಂ ಹೋಮಮಾಚರೇತ್ ।
ತಥಾ ಶಾಂತಿಘಟಂ ಕುರ್ಯಾತ್ಪ್ರತಿಕುಂಡೇಷು ಸರ್ವತಃ ||೪೩||

---

೩೮-೩೯ ಹಾಗೆಯೇ ಮೂರ್ತಿಯ ಅಧಿದೇವತೆಗಳಿಗೂ ಶ್ರದ್ಧೆಯಿಂದ ಹೋಮಮಾಡಬೇಕು ಭೂಮಿ, ಅಗ್ನಿ, ಯಜಮಾನ, ಸೂರ್ಯ, ಜಲ, ವಾಯು, ಚಂದ್ರ, ಆಕಾಶ ಇವೆಂಟೂ ಮಹಾದೇವನ ಶರೀರಗಳು ಇವುಗಳನ್ನು ಕುಂಡಗಳಲ್ಲಿ ಆವಾಹನಮಾಡಬೇಕು

೪೦ ಇವುಗಳ ಅಧಿಪತಿಗಳಾದ ದೇವತಾಮೂರ್ತಿಗಳನ್ನು ಹೇಳುವೆನು. ಶರ್ವನು ಭೂಮಿಯನ್ನೂ, ಪಶುಪತಿಯು ಅಗ್ನಿಯನ್ನೂ ರಕ್ಷಿಸುತ್ತಾರೆ

೪೧ ಉಗ್ರನು ಯಜಮಾನನಿಗೂ, ರುದ್ರನು ಆದಿತ್ಯನಿಗೂ ಅಧಿಪತಿಗಳು ಭವನು ಜಲವನ್ನೂ, ಈಶಾನನು ವಾಯುವನ್ನೂ ಯಾವಾಗಲೂ ಪಾಲಿಸುತ್ತಾರೆ

೪೨ ಮಹಾದೇವನು ಚಂದ್ರನನ್ನೂ, ಭೀಮನು ಆಕಾಶವನ್ನೂ ಸಲಹುತ್ತಾರೆ ಎಲ್ಲ ದೇವತೆಗಳ ಪ್ರತಿಷ್ಠೆಯಲ್ಲೂ ಇವರೇ ಮೂರ್ತ್ಯಧಿಪತಿಗಳೆನಿಸಿಕೊಳ್ಳುವರು

೪೩ ವೇದಗಳಲ್ಲಿ ಹೇಳಿರುವ ಆಯಾ ಮಂತ್ರಗಳಿಂದ ಇವರಿಗೆ ಹೋಮವನ್ನು ಮಾಡಬೇಕು ಎಲ್ಲ ಕಡೆಯ ಕುಂಡಗಳಲ್ಲಿಯೂ ಶಾಂತಿಕುಂಭಗಳನ್ನು ಸ್ಥಾಪಿಸಬೇಕು.

**ಶತಾಂತೇ ವಾ ಸಹಸ್ರಾಂತೇ ಸಂಪೂರ್ಣಾಹುತಿರಿಷ್ಯತೇ ।**
**ಸಮುಪಾದಃ ಪೃಥಿವ್ಯಾಂ ತು ಪ್ರಶಾಂತಾತ್ಮಾ ವಿನಿಕ್ಷಿಪೇತ್ ॥೪೪॥**

**ಆಹುತೀನಾಂ ತು ಸಂಪಾತಂ ಪೂರ್ಣಕುಂಭೇಷು ವೈ ನ್ಯಸೇತ್ ।**
**ಮೂಲಮಧ್ಯೋತ್ತಮಾಂಗೇಷು ದೇವಂ ತೇನಾವಸೇಚಯೇತ್ ॥೪೫॥**

**ಸ್ಥಿತಂ ಚ ಸ್ನಾಪಯೇತ್ತೇನ ಸಂಪಾತಾಹುತಿವಾರಿಣಾ ।**
**ಪ್ರತಿಯಾಮೇಷು ಧೂಪಂ ತು ನೈವೇದ್ಯಂ ಚಂದನಾದಿಕಂ ॥೪೬॥**

**ಪುನಃ ಪುನಃ ಪ್ರಕುರ್ವೀತ ಹೋಮಃ ಕಾರ್ಯಃ ಪುನಃ ಪುನಃ ।**
**ಪುನಃ ಪುನಶ್ಚ ದಾತವ್ಯಾ ಯಜಮಾನೇನ ದಕ್ಷಿಣಾ ॥೪೭॥**

**ಸಿತವಸ್ತ್ರೈಶ್ಚ ತೇ ಸರ್ವೇ ಪೂಜನೀಯಾಃ ಸಮಂತತಃ ।**
**ವಿಚಿತ್ರೈರ್ಹೇಮಕಟಕೈರ್ಹೇಮಸೂತ್ರಾಂಗುಲೀಯಕೈಃ ॥೪೮॥**

---

೪೪ ನೂರು ಅಥವಾ ಸಾವಿರ ಹೋಮಗಳು ಮುಗಿದ ಮೇಲೆ ಪೂರ್ಣಾಹುತಿಯನ್ನು ಕೊಡಬೇಕು ಆಚಾರ್ಯನು ಶಾಂತಚಿತ್ತನಾಗಿ ನೆಲದ ಮೇಲೆ ಹೆಜ್ಜೆಯನ್ನು ಮಟ್ಟವಾಗಿ ಊರಬೇಕು

೪೫ ಪ್ರತಿಯೊಂದು ಸಾರಿ ಹೋಮಮಾಡಿದಾಗಲೂ ದರ್ವಿಯಲ್ಲಿ ಉಳಿಯುವ ಆಹುತಿಶೇಷವನ್ನು ಪೂರ್ಣಕುಂಭಗಳಲ್ಲಿ ಹಾಕಬೇಕು ಅದನ್ನು ಭಗವಂತನ ಪಾದ, ಮಧ್ಯ ಮತ್ತು ಶಿರಸ್ಸುಗಳಿಗೆ ಪ್ರೋಕ್ಷಿಸಬೇಕು

೪೬-೪೭ ಭಗವನ್ಮೂರ್ತಿಯನ್ನು ನಿಲ್ಲಿಸಿ ಆಹುತಿಶೇಷವನ್ನು ಹಾಕಿದ ಕುಂಭೋದಕದಿಂದ ಅಭಿಷೇಕ ಮಾಡಬೇಕು ಪ್ರತಿಯೊಂದು ಜಾವದಲ್ಲೂ ಭಗವಂತನಿಗೆ ಗಂಧ ಪುಷ್ಪ ಧೂಪ ದೀಪ ನೈವೇದ್ಯಗಳನ್ನು ಸಮರ್ಪಿಸಬೇಕು ಮತ್ತೆ ಮತ್ತೆ ಹೋಮಗಳನ್ನು ಮಾಡಬೇಕು ಯಜಮಾನನು ಪುನಃ ಪುನಃ ದಕ್ಷಿಣೆಯನ್ನು ಕೊಡಬೇಕು

೪೮-೪೯ ಶುಭವಸ್ತ್ರಗಳು, ಅಂದವಾದ ಚಿನ್ನದ ಬಳೆಗಳು, ಚಿನ್ನದ ಉಡಿದಾರಗಳು, ಉಂಗುರಗಳ , ಬಟ್ಟೆಗಳು, ಹಾಸಿಗೆಗಳು ಇವನ್ನು ತನ್ನ ಶಕ್ತಿಗೆ

ವಾಸೋಭಿಃ ಶಯನೀಯೈಶ್ಚ ಪ್ರತಿಯಾಮೇ ಚ ಶಕ್ತಿತಃ ।
ಭೋಜನಂ ಚಾಪಿ ದಾತವ್ಯಂ ಯಾವತ್ಸ್ಯಾದಧಿವಾಸನಂ ||೪೯||

ಬಲಿಸ್ತ್ರಿಸಂಧ್ಯಂ ದಾತವ್ಯೋ ಭೂತೇಭ್ಯಃ ಸರ್ವತೋದಿಶಂ ।
ಬ್ರಾಹ್ಮಣಾ ಭೋಜಯೇತ್ಪೂರ್ವಂ ಶೇಷಾನ್ವರ್ಣಾಂಸ್ತು ಕಾಮತಃ ||೫೦||

ರಾತ್ರೌ ಮಹೋತ್ಸವಃ ಕಾರ್ಯೋ ನೃತ್ಯಗೀತಕಮಂಗಲೈಃ ।
ಸದಾ ಪೂಜ್ಯಾಃ ಪ್ರಯತ್ನೇನ ಚತುರ್ಥೀಕರ್ಮ ಯಾವತಾ ||೫೧||

ತ್ರಿರಾತ್ರಮೇಕರಾತ್ರಂ ವಾ ಪಂಚರಾತ್ರಮಥಾ ಪಿ ವಾ ।
ಸಪ್ತರಾತ್ರಮಥೋ ಕುರ್ಯಾತ್ಕ್ವಚಿತ್ಸದ್ಯೋಧಿವಾಸನಂ ।
ಸರ್ವಯಜ್ಞಫಲೋ ಯಸ್ಮಾದಧಿವಾಸೋತ್ಸವಃ ಸದಾ ||೫೨||

ಇತಿ ಶ್ರೀಮತ್ಸ್ಯೇ ಮಹಾಪುರಾಣೇಽಧಿವಾಸನವಿಧಿರ್ನಾಮ
ಪಂಚಷಷ್ಟ್ಯಧಿಕದ್ವಿಶತತಮೋಽಧ್ಯಾಯಃ

---

ತಕ್ಕಂತೆ ಪ್ರತಿಯೊಂದು ಜಾವದಲ್ಲೂ ಋತ್ವಿಕ್ಕುಗಳಿಗೆಲ್ಲ ದಾನಮಾಡಬೇಕು ಅನ್ನವನ್ನೂ ಧಾರಾಳವಾಗಿ ಹಾಕಬೇಕು ಅಧಿವಾಸನ ಮುಗಿಯುವವರೆಗೂ ಹೀಗೆಯೇ ನಡೆಸಬೇಕು

೫೦ ಮೂರು ಸಂಧ್ಯಾಕಾಲಗಳಲ್ಲೂ ಭೂತಬಲಿಯನ್ನು ಎಲ್ಲ ದಿಕ್ಕುಗಳಲ್ಲಿಯೂ ಹಾಕಬೇಕು ಮೊದಲು ಬ್ರಾಹ್ಮಣರನ್ನೂ, ತರುವಾಯ ಸಕಲ ವರ್ಣದವರನ್ನೂ ಭೋಜನದಿಂದ ತೃಪ್ತಿಗೊಳಿಸಬೇಕು

೫೧ ರಾತ್ರಿಯಲ್ಲಿ ನರ್ತನಗಳಿಂದಲೂ ಗೀತಗಳಿಂದಲೂ ಮಹೋತ್ಸವವನ್ನು ನಡೆಸಬೇಕು ನಾಲ್ಕನೆಯ ರಾತ್ರಿಯಲ್ಲಿ ವಿಹಿತವಾದ ಕರ್ಮವು ನಡೆಯುವವರೆಗೂ ಹೀಗೆ ಪ್ರತಿಜಾವದಲ್ಲೂ ಪ್ರಯತ್ನದಿಂದ ಎಲ್ಲರನ್ನೂ ಪೂಜಿಸುತ್ತಿರಬೇಕು.

೫೨ ಮೂರು, ಒಂದು, ಐದು ಅಥವಾ ಏಳು ರಾತ್ರಿಗಳಕಾಲ ವಿಗ್ರಹಗಳಿಗೆ ಅಧಿವಾಸವನ್ನು ನಡೆಸಬೇಕು ಕೆಲವು ವೇಳೆ ತತ್ಕಾಲದಲ್ಲಿಯೇ ಇದನ್ನು ಮುಗಿಸಿಬಿಡಬಹುದು ಅಧಿವಾಸೋತ್ಸವವು ಸಕಲ ಯಜ್ಞಗಳ ಫಲವನ್ನು ಕೊಡುವುದು

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಅಧಿವಾಸನವಿಧಿಯನ್ನು ಹೇಳಿದೆ

ನೇತ್ರೋನ್ಮೀಲನವಾದ ಅನಂತರ ಪ್ರತಿಮೆಯನ್ನು ಸ್ನಪನಮಂಟಪಕ್ಕೊಯ್ದು ವೇದೋಕ್ತಮಂತ್ರಗಳಿಂದ ಅಭಿಷೇಕಮಾಡಬೇಕು ಬಳಿಕ ಪ್ರತಿಷ್ಠಾಮಂಟಪಕ್ಕೆ ಬಿಜಯಮಾಡಿಸಿ ದಿವ್ಯವಾದ ಶಯನದ ಮೇಲೆ ದರ್ಭೆಗಳನ್ನೂ ಪುಷ್ಪಗಳನ್ನೂ ಹರಡಿ, ಅದರ ಮೇಲೆ ಪೂರ್ವಾಭಿಮುಖವಾಗಿ ಮಲಗಿಸಬೇಕು ಪೀತಾಂಬರವನ್ನು ಹೊದಿಸಿ ಛತ್ರಚಾಮರಾದಿ ಸಕಲೋಪಚಾರಗಳನ್ನೂ ಸಮರ್ಪಿಸಬೇಕು ಚತುರ್ವೇದಪಾರಂಗತರಾದ ಋತ್ವಿಕ್ಕುಗಳು ಎಲ್ಲದಿಕ್ಕುಗಳಲ್ಲಿಯೂ ಕ್ರಮವಾಗಿ ಕುಳಿತು ಮಂತ್ರಗಳನ್ನು ಜಪಿಸುವರು ಆಚಾರ್ಯನು ಪ್ರತಿಮೆಯ ಶಿರೋಭಾಗದಲ್ಲಿ ಹೋಮವನ್ನು ನಡೆಸುವನು ಪ್ರತಿಯೊಂದು ಜಾವದಲ್ಲೂ ದೇವರನ್ನು ಗಂಧಪುಷ್ಪಾದಿಗಳಿಂದ ಪೂಜಿಸುವುದಲ್ಲದೆ ಋತ್ವಿಕ್ಕುಗಳಿಗೆ ವಿಶೇಷವಾದ ದಾನದಕ್ಷಿಣೆಗಳನ್ನು ಕೊಡಬೇಕು ಇದೇ ಅಧಿವಾಸನ ವಿಧಿ ಇದನ್ನು ಒಂದು, ಮೂರು, ಐದು, ಅಥವಾ ಏಳು ರಾತ್ರಿಗಳ ವರೆಗೂ ನಡೆಸಬಹುದು ಕೆಲವು ವೇಳೆ ತತ್ಕಾಲದಲ್ಲಿಯೇ ಮುಗಿಸುವುದೂ ಉಂಟು ಈ ಅಧಿವಾಸಮಹೋತ್ಸವವು ಸಕಲಯಜ್ಞಗಳ ಫಲವನ್ನೂ ಕೊಡುತ್ತದೆ

ಶ್ರೀಮತ್ಸ್ಯಮಹಾಪುರಾಣದಲ್ಲಿ ಅಧಿವಾಸನವಿಧಿಯೆಂಬ
ಇನ್ನೂರ ಅರವತ್ತೈದನೆಯ ಅಧ್ಯಾಯವು ಮುಗಿದುದು

## ಅಥ ಷಟ್ಷಷ್ಟ್ಯಧಿಕದ್ವಿಶತತಮೋಽಧ್ಯಾಯಃ

|| ಸೂತ ಉವಾಚ ||

ಕೃತ್ವಾಧಿವಾಸಂ ದೇವಾನಾಂ ಶುಭಂ ಕುರ್ಯಾತ್ಸಮಾಹಿತಃ ।
ಪ್ರಾಸಾದಸ್ಯಾನುರೂಪೇಣ ಮಾನಂ ಲಿಂಗಸ್ಯ ವಾ ಪುನಃ || ೧ ||

ಪುಷ್ಪೋದಕೇನ ಪ್ರಾಸಾದಂ ಪ್ರೋಕ್ಷ್ಯ ಮಂತ್ರಯುತೇನ ತು ।
ಪಾತಯೇತ್ಪೃಕ್ಷಸೂತ್ರಂ ತು ದ್ವಾರಸೂತ್ರಂ ತಥೈವ ಚ || ೨ ||

ಆಶ್ರಯೇತ್ಕಿಂಚಿದೀಶಾನೀಂ ಮಧ್ಯಂ ಜ್ಞಾತ್ವಾ ದಿಶಂ ಬುಧಃ ।
ಈಶಾನಮಾಶ್ರಿತಂ ದೇವಂ ಪೂಜಯಂತಿ ದಿವೌಕಸಃ || ೩ ||

ಆಯುರಾರೋಗ್ಯಫಲದಮುಥೋತ್ತರಸಮಾಶ್ರಿತಂ ।
ಶುಭಂ ಸ್ಯಾದಶುಭಂ ಪ್ರೋಕ್ತಮನ್ಯಥಾ ಸ್ಥಾಪನಂ ಬುಧೈಃ || ೪ ||

---

೧ ಸೂತಪೌರಾಣಿಕನು ಹೇಳಿದನು —ದೇವತಾ ವಿಗ್ರಹಗಳಿಗೆ ಅಧಿವಾಸನವನ್ನು ನಡೆಸಿದ ತರುವಾಯ ಜಾಗರೂಕನಾಗಿ ಮುಂದಿನ ಶುಭಕಾರ್ಯಕ್ಕೆ ಯತ್ನಿಸಬೇಕು ಹಿಂದೆ ಹೇಳಿದಂತೆ ದೇವಾಲಯಕ್ಕೂ ಲಿಂಗಕ್ಕೂ ಪ್ರಮಾಣದಲ್ಲಿ ಅನುರೂಪ್ಯವಿರಬೇಕು

೨ ಮಂತ್ರಪೂರ್ವಕವಾಗಿ ಪುಷ್ಪೋದಕದಿಂದ ದೇವಾಲಯವನ್ನು ಪ್ರೋಕ್ಷಿಸಬೇಕು ಬಾಗಿಲಿನ ಮಧ್ಯದಿಂದಲೂ ಗರ್ಭಗುಡಿಯ ಒಳಗಡೆಯ ಎರಡು ಪಕ್ಕಗಳಿಂದಲೂ ದಾರವನ್ನು ಅಳತೆಗಾಗಿ ಕಟ್ಟಿ ನೋಡಬೇಕು

೩ ಮಧ್ಯಭಾಗವನ್ನು ಕಂಡುಹಿಡಿದ ಬಳಿಕ ಶಾಸ್ತ್ರಜ್ಞನಾದ ಆಚಾರ್ಯನು ಸ್ವಲ್ಪಮಟ್ಟಿಗೆ ಅದರ ಈಶಾನ್ಯದ ಕಡೆಗೇ ಪ್ರತಿಷ್ಠಾಸ್ಥಲವನ್ನು ಆರಿಸಬೇಕು ಏಕೆಂದರೆ ಈಶಾನ್ಯದಲ್ಲಿ ಪ್ರತಿಷ್ಠಿತವಾದ ಭಗವತ್ಪ್ರತಿಮೆಗೆ ದೇವತೆಗಳೂ ಕೂಡ ಪೂಜೆಯನ್ನು ಸಲ್ಲಿಸುವರು

೪ ಈಶಾನ್ಯಗತವಾದ ವಿಗ್ರಹವು ಆಯುರಾರೋಗ್ಯಾದಿ ಫಲವನ್ನು ಕರುಣಿಸುವುದು ಶುಭವನ್ನುಂಟುಮಾಡುವುದು ಹಾಗಲ್ಲದೆ ಬೇರೆ ರೀತಿಯಲ್ಲಿ ಸ್ಥಾಪಿಸಿದರೆ ಅಶುಭವೆಂದು ಪ್ರಾಜ್ಞರು ಹೇಳುತ್ತಾರೆ

ಅಧಃ ಕೂರ್ಮಶಿಲಾ ಪ್ರೋಕ್ತಾ ಸದಾ ಬ್ರಹ್ಮಶಿಲಾಧಿಕಾ ।
ಉಪರ್ಯವಸ್ಥಿತಾ ತಸ್ಯಾ ಬ್ರಹ್ಮಭಾಗಾಧಿಕಾ ಶಿಲಾ ॥ ೫ ॥
ತತಸ್ತು ಪಿಂಡಿಕಾ ಕಾರ್ಯಾ ಪೂರ್ವೋಕ್ತೈರ್ಮಾನಲಕ್ಷಣೈಃ ।
ತತಃ ಪ್ರಕ್ಷಾಲಿತಾಂ ಕೃತ್ವಾ ಪಂಚಗವ್ಯೇನ ಪಿಂಡಿಕಾಂ ॥ ೬ ॥
ಕಷಾಯತೋಯೇನ ಪುನರ್ಮಂತ್ರಯುಕ್ತೇನ ಸರ್ವತಃ ।
ದೇವತಾರ್ಚಾಶ್ರಯಂ ಮಂತ್ರಂ ಪಿಂಡಿಕಾಸು ನಿಯೋಜಯೇತ್ ॥ ೭ ॥
ತತ ಉತ್ಥಾಪ್ಯ ದೇವೇಶಮುತ್ತಿಷ್ಠ ಬ್ರಹ್ಮಣೇತಿ ಚ ।
ಆನೀಯ ಗರ್ಭಭವನಂ ಪೀಠಾಂತೇ ಸ್ಥಾಪಯೇದ್ಬುಧಃ ॥ ೮ ॥
ಅರ್ಘ್ಯಪಾದ್ಯಾದಿಕಂ ತತ್ರ ಮಧುಪರ್ಕಂ ಪ್ರಯೋಜಯೇತ್ ।
ತತೋ ಮುಹೂರ್ತಂ ವಿಶ್ರಮ್ಯ ರತ್ನನ್ಯಾಸಂ ಸಮಾಚರೇತ್ ॥ ೯ ॥

---

೫ ಶಿಲೆಗಳಲ್ಲಿ ಬ್ರಹ್ಮಶಿಲೆ, ಕ್ಷತ್ರಶಿಲೆ ಮುಂತಾಗಿ ನಾಲ್ಕು ಭೇದಗಳನ್ನು ಕಲ್ಪಿಸಿದಾರೆ ಎಲ್ಲಕ್ಕಿಂತ ಅಡಿಯಲ್ಲಿ ಹಾಸುವ ತಳಗಲ್ಲು (ಇದಕ್ಕೆ ಕೂರ್ಮಶಿಲೆ ಯೆಂದು ಹೆಸರು) ಬ್ರಹ್ಮಭಾಗದಿಂದ ವಿಶೇಷವಾಗಿ ಕೂಡಿರಬೇಕು ಅದರ ಮೇಲೆ ಮತ್ತೊಂದು ಕಲ್ಲನ್ನು ಇಡಬೇಕು ಇದರಲ್ಲಿಯೂ ಬ್ರಹ್ಮಾಂಶವೇ ಅಧಿಕವಾಗಿರಬೇಕು

೬-೭ ಹಿಂದೆ ಹೇಳಿದ ಪ್ರಮಾಣಕ್ಕೂ ಲಕ್ಷಣಕ್ಕೂ ತಕ್ಕಂತೆ ನಿರ್ಮಿಸಿದ ಪೀಠವನ್ನು ಅದರ ಮೇಲಿಡಬೇಕು ಪಂಚಗವ್ಯದಿಂದಲೂ ಓಷಧರಸ ಮಿಶ್ರವಾದ ಜಲದಿಂದಲೂ ಮಂತ್ರೋಕ್ತವಾಗಿ ಎಲ್ಲ ಕಡೆಯೂ ಅದನ್ನು ತೊಳೆಯಬೇಕು ದೇವತಾಮೂರ್ತಿಯ ಮಂತ್ರವನ್ನೇ ಪೀಠಸ್ಥಾಪನೆಯಲ್ಲಿಯೂ ಹೇಳಬೇಕು

೮ ತರುವಾಯ ಆಚಾರ್ಯನು "ಉತ್ತಿಷ್ಠ ಬ್ರಹ್ಮಣಾ" ಎಂಬ ಮಂತ್ರದಿಂದ ದೇವತಾವಿಗ್ರಹವನ್ನೆತ್ತಿಕೊಂಡು ಗರ್ಭಗುಡಿಗೆ ತಂದು ಪೀಠದ ಅಂಚಿನಲ್ಲಿ ನಿಲ್ಲಿಸಬೇಕು

೯ ಅಲ್ಲಿ ಭಗವಂತನಿಗೆ ಅರ್ಘ್ಯವನ್ನೂ ಪಾದ್ಯವನ್ನೂ ಒಪ್ಪಿಸಿ ಮಧುಪರ್ಕವನ್ನು ಕೊಡಬೇಕು ಒಂದು ಮುಹೂರ್ತಕಾಲದ ವಿಶ್ರಾಂತಿಯ ತರುವಾಯ ರತ್ನ, ಬೀಜ ಮುಂತಾದ ಶ್ರೇಷ್ಠವಸ್ತುಗಳನ್ನು ಪೀಠದಲ್ಲಿ ಮಾಡಿರುವ ಹಳ್ಳದಲ್ಲಿ ಇಡಬೇಕು

ವಜ್ರಮೌಕ್ತಿಕವೈದೂರ್ಯಶಂಖಸ್ಫಟಿಕಮೇವ ಚ ।
ಪುಷ್ಯರಾಗೇಂದ್ರನೀಲಂ ಚ ನೀಲಂ ಪೂರ್ವಾದಿದಿಕ್ಕ್ರಮಾತ್ ॥೧೦॥

ತಾಲಕಂ ಚ ಶಿಲಾವಜ್ರಮಂಜನಂ ಶ್ಯಾಮಮೇವ ಚ ।
ಕಾಕ್ಷೀ ಕಾಶೀ ಸಮಾಕ್ಷೀಕಂ ಗೈರಿಕಂ ಚಾದಿತಃ ಕ್ರಮಾತ್ ॥೧೧॥

ಗೋಧೂಮಂ ಚ ಯವಂ ತದ್ವತ್ತಿಲಮುದ್ಗಂ ತಥೈವ ಚ ।
ನೀವಾರಮಥ ಶ್ಯಾಮಾಕಂ ಸರ್ಷಪಂ ವ್ರೀಹಿಮೇವ ಚ ॥೧೨॥

ನ್ಯಸ್ಯ ಕ್ರಮೇಣ ಪೂರ್ವಾದಿ ಚಂದನಂ ರಕ್ತಚಂದನಂ ।
ಅಗರುಂ ಚಾಂಜನಂ ಚಾಪಿ ಉಶೀರಂ ಚ ತತಃ ಪರಂ ॥೧೩॥

ವೈಷ್ಣವೀಂ ಸಹದೇವೀಂ ಚ ಲಕ್ಷ್ಮಣಾಂ ಚ ತತಃ ಪರಂ ।
ಸ್ವಲೋಕಪಾಲನಾಮ್ನಾ ತು ನ್ಯಸೇದೋಂಕಾರಪೂರ್ವಕಂ ॥೧೪॥

ಸರ್ವಬೀಜಾನಿ ಧಾತೂಂಶ್ಚ ರತ್ನಾನ್ಯೋಷಧಯಸ್ತಥಾ ।
ಕಾಂಚನಂ ಪದ್ಮರಾಗಂ ತು ಪಾರದಂ ಪದ್ಮಮೇವ ಚ ॥೧೫॥

---

೧೦ ವಜ್ರ, ಮುತ್ತು, ವೈಡೂರ್ಯ, ಶಂಖ, ಸ್ಫಟಿಕ, ಪುಷ್ಯರಾಗ, ಇಂದ್ರನೀಲ, ನೀಲ ಎಂಬ ರತ್ನಗಳನ್ನು ಕ್ರಮವಾಗಿ ಪೂರ್ವಾದಿಯಾಗಿ ಎಂಟು ದಿಕ್ಕುಗಳಲ್ಲೂ ಇರಿಸಬೇಕು

೧೧ ಇವುಗಳ ಜೊತೆಗೆ ತಾಲಕ, ಶಿಲಾವಜ್ರ, ಅಂಜನ, ಶ್ಯಾಮ, ಕಾಕ್ಷಿ, ಕಾಶಿ, ಮಾಕ್ಷಿಕ, ಗೈರಿಕ ಎಂಬ ಪದಾರ್ಥಗಳನ್ನೂ ಕ್ರಮವಾಗಿ ಒಂದೊಂದು ದಿಕ್ಕಿನಲ್ಲಿ ಒಂದೊಂದರಂತೆ ಇಡಬೇಕು

೧೨-೧೪ ಗೋಧಿ, ಯವೆ, ಎಳ್ಳು, ಹೆಸರು, ನೀವಾರ, ಶಾಮೆ, ಸಾಸುವೆ ಬತ್ತ ಎಂಬ ಎಂಟುಬಗೆಯ ಧಾನ್ಯಗಳನ್ನೂ ಶ್ರೀಗಂಧ, ಕೆಂಪುಗಂಧ, ಅಗಿಲು, ಅಂಜನ, ಲಾಮಂಚ ವೈಷ್ಣವಿ, ಸಹದೇವಿ, ಲಕ್ಷ್ಮಣಾ ಎಂಬ ಎಂಟು ವಿಧವಾದ ಓಷಧಿಗಳನ್ನೂ ಪೂರ್ವದಿಂದ ಪ್ರಾರಂಭಿಸಿ ಕ್ರಮವಾಗಿ ಎಂಟು ದಿಕ್ಕುಗಳಲ್ಲಿ ಇಂದ್ರಾದಿ ದಿಕ್ಪಾಲಕರ ಹೆಸರನ್ನೂ ಪ್ರಣವವನ್ನೂ ಉಚ್ಚರಿಸಿ ಇಡಬೇಕು

೧೫ ಎಲ್ಲಬಗೆಯ ಬೀಜಗಳನ್ನೂ ಖನಿಜಗಳನ್ನೂ, ರತ್ನಗಳನ್ನೂ, ಓಷಧಿಗಳನ್ನೂ, ಚಿನ್ನವನ್ನೂ, ಪದ್ಮರಾಗವನ್ನೂ, ಪಾದರಸವನ್ನೂ, ಪದ್ಮವನ್ನೂ ಇರಿಸಬೇಕು

ಕೂರ್ಮಂ ಧರಾಂ ವೃಷಂ ತತ್ರ ನ್ಯಸೇತ್ಪೂರ್ವಾದಿತಃ ಕ್ರಮಾತ್ ।
ಬ್ರಹ್ಮಸ್ಥಾನೇ ತು ದಾತವ್ಯಾಃ ಸಂಹತಾಃ ಸ್ಯುಃ ಪರಸ್ಪರಂ ॥೧೬॥
ಕನಕಂ ವಿದ್ರುಮಂ ತಾಮ್ರಂ ಕಾಂಸ್ಯಂ ಚೈವಾರಕೂಟಕಂ ।
ರಜತಂ ವಿಮಲಂ ಪುಷ್ಪಂ ಲೋಹಂ ಚೈವ ಕ್ರಮೇಣ ತು ॥೧೭॥
ಕಾಂಚನಂ ಹರಿತಾಲಂ ಚ ಸರ್ವಾಭಾವೇಪಿ ನಿಕ್ಷಿಪೇತ್ ।
ದದ್ಯಾದ್ಬೀಜೌಷಧಿಸ್ಥಾನೇ ಸಹದೇವೀಂ ಯವಾನಪಿ ॥೧೮॥
ನ್ಯಾಸಮಂತ್ರಾನತೋ ವಕ್ಷ್ಯೇ ಲೋಕಪಾಲಾತ್ಮಕಾನಿಹ ।
ಇಂದ್ರಸ್ತು ಮಹಸಾ ದೀಪ್ತಃ ಸರ್ವದೇವಾಧಿಪೋ ಮಹಾ ॥೧೯॥
ವಜ್ರಹಸ್ತೋ ಮಹಾಸತ್ವಸ್ತಸ್ಮೈ ನಿತ್ಯಂ ನಮೋ ನಮಃ ।
ಅಗ್ನೇಯಃ ಪುರುಷೋ ರಕ್ತಃ ಸರ್ವದೇವಮಯಃ ಶಿಖೀ ॥೨೦॥

---

೧೬ ಆಮೆ, ಭೂಮಿ, ವೃಷಭ ಇವುಗಳ ಪ್ರತಿಮೆಯನ್ನೂ ಪೂರ್ವಾದಿಯಾಗಿ ಕ್ರಮವಾಗಿ ಇಡಬೇಕು ನಟ್ಟನಡುವೆ ಬ್ರಹ್ಮಸ್ಥಾನದಲ್ಲಾದರೋ ಇವೆಲ್ಲವನ್ನೂ ಬೆರಸಿ ಹಾಕಬೇಕು

೧೭-೧೮ ಚಿನ್ನ, ಹವಳ, ತಾಮ್ರ, ಕಂಚು, ಹಿತ್ತಾಳೆ, ಬೆಳ್ಳಿ, ಶುಭ್ರವಾದ ಹೂ, ಕಬ್ಬಿಣ ಇವುಗಳನ್ನು ಎಂಟು ದಿಕ್ಕುಗಳಲ್ಲಿಯೂ ಕ್ರಮವಾಗಿ ಇರಿಸಬೇಕು ಎಲ್ಲವಸ್ತುಗಳು ಸಿಕ್ಕದಿದ್ದರೂ ಚಿನ್ನ, ಮತ್ತು ಹರಿತಾಲವನ್ನಾದರೂ ತಪ್ಪದೆ ಹಾಕಬೇಕು ಬೀಜಗಳಿಗೂ ಓಷಧಿಗಳಿಗೂ ಬದಲಾಗಿ ಸಹದೇವಿಯನ್ನೂ ಯವ ಧಾನ್ಯವನ್ನೂ ಉಪಯೋಗಿಸಬಹುದು

೧೯ ಲೋಕಪಾಲಕರ ಸ್ವರೂಪವನ್ನು ತಿಳಿಸುವ ನ್ಯಾಸಮಂತ್ರಗಳನ್ನು ಇನ್ನುಮುಂದೆ ಹೇಳುವೆನು ಇಂದ್ರನು ತೇಜಸ್ಸಿನಿಂದ ಬೆಳಗುತ್ತಿರುವನು ಸಕಲ ದೇವತೆಗಳಿಗೂ ಅಧಿಪತಿಯಾಗಿರುವನು ಕೈಯಲ್ಲಿ ವಜ್ರಾಯುಧವನ್ನು ಹಿಡಿದಿರುವನು ಮಹಾಗಂಭೀರನಾಗಿರುವನು ಅವನಿಗೆ ನಿತ್ಯವೂ ನಮಸ್ಕಾರ ನಮಸ್ಕಾರ

೨೦ ಸಕಲದೇವತಾಮಯನಾದ ಅಗ್ನಿಪುರುಷನು ರಕ್ತವರ್ಣದವನು ಧೂಮವೇ ಅವನ ಧ್ವಜ ಅವನನ್ನಿದಿರಿಸುವುದು ಅಸಾಧ್ಯ ಅವನಿಗೆ ನಿತ್ಯವೂ ನಮಸ್ಕಾರ ನಮಸ್ಕಾರ

ಧೂಮಕೇತುರನಾಧೃಷ್ಯಸ್ತಸ್ಮೈ ನಿತ್ಯಂ ನಮೋ ನಮಃ ।
ಯಮಶ್ಚೋತ್ಪಲವರ್ಣಾಭಃ ಕಿರೀಟೀ ದಂಡಧೃಕ್ಸದಾ ॥೨೧॥

ಧರ್ಮಸಾಕ್ಷೀ ವಿಶುದ್ಧಾತ್ಮಾ ತಸ್ಮೈ ನಿತ್ಯಂ ನಮೋ ನಮಃ ।
ನಿರ್ಋತಿಸ್ತು ಪುಮಾನ್ ಕೃಷ್ಣಃ ಸರ್ವರಕ್ಷೋಧಿಪೋ ಮಹಾನ್ ॥೨೨॥

ಖಡ್ಗಹಸ್ತೋ ಮಹಾಸತ್ವಸ್ತಸ್ಮೈ ನಿತ್ಯಂ ನಮೋ ನಮಃ ।
ವರುಣೋ ಧವಲೋ ವಿಷ್ಣುಃ ಪುರುಷೋ ನಿಮ್ನಗಾಧಿಪಃ ॥೨೩॥

ಪಾಶಹಸ್ತೋ ಮಹಾಬಾಹುಸ್ತಸ್ಮೈ ನಿತ್ಯಂ ನಮೋ ನಮಃ ।
ವಾಯುಶ್ಚ ಸರ್ವವರ್ಣೋ ವೈ ಸರ್ವಗಂಧವಹಃ ಶುಭಃ ॥೨೪॥

ಪುರುಷೋ ಧ್ವಜಹಸ್ತಶ್ಚ ತಸ್ಮೈ ನಿತ್ಯಂ ನಮೋ ನಮಃ ।
ಗೌರೋ ಯಶ್ಚ ಪುಮಾನ್ ಸೌಮ್ಯಃ ಸರ್ವೌಷಧಿಸಮನ್ವಿತಃ ॥೨೫॥

---

೨೧ ನೈದಿಲೆಯ ಬಣ್ಣದವನೂ, ಕಿರೀಟಧಾರಿಯೂ, ದಂಡಧರನೂ, ಧರ್ಮವನ್ನು ಕಣ್ಣಾರ ಕಾಣುವವನೂ, ಪರಿಶುದ್ಧಾತ್ಮನೂ ಆದ ಯಮನಿಗೆ ನಿತ್ಯವೂ ನಮಸ್ಕಾರ ನಮಸ್ಕಾರ

೨೨ ಪುರುಷರೂಪನೂ, ಕೃಷ್ಣವರ್ಣನೂ, ಸಕಲ ರಾಕ್ಷಸರ ಅಧಿಪತಿಯೂ, ಖಡ್ಗಹಸ್ತನೂ, ಮಹಾಬಲಶಾಲಿಯೂ ಆದ ಶ್ರೇಷ್ಠನಾದ ನಿರ್ಋತಿಗೆ ನಿತ್ಯವೂ ನಮಸ್ಕಾರ ನಮಸ್ಕಾರ

೨೩ ಬಿಳಿಯ ಬಣ್ಣದವನೂ, ವಿಷ್ಣುಸ್ವರೂಪನೂ, ಪುರುಷಾಕಾರನೂ, ನದಿಗಳ ಅಧಿಪತಿಯೂ, ಪಾಶಾಯುಧಧಾರಿಯೂ, ಮಹಾಬಾಹುವೂ ಆದ ವರುಣನಿಗೆ ದಿನದಿನವೂ ನಮಸ್ಕಾರ ನಮಸ್ಕಾರ

೨೪ ಸಕಲ ವರ್ಣಯುಕ್ತನಾಗಿ, ಎಲ್ಲ ಬಗಯ ವಾಸನೆಯನ್ನೂ ಹೊತ್ತು ತರುತ್ತ, ಧ್ವಜವನ್ನು ಕೈಯಲ್ಲಿ ಹಿಡಿದು ಪುರುಷರೂಪದಿಂದ ವಿರಾಜಿಸುವ ವಾಯುದೇವನಿಗೆ ನಿತ್ಯವೂ ನಮಸ್ಕಾರ ನಮಸ್ಕಾರ

೨೫ ಶುಭ್ರವರ್ಣನೂ, ಸೌಮ್ಯಾಕಾರನೂ, ಸಕಲೌಷಧಿಸಹಿತನೂ, ನಕ್ಷತ್ರಗಳ ಅಧಿಪತಿಯೂ ಆದ ಚಂದ್ರನಿಗೆ ಸದಾ ನಮಸ್ಕಾರ ನಮಸ್ಕಾರ,

ನಕ್ಷತ್ರಾಧಿಪತಿಃ ಸೋಮಸ್ತಸ್ಮೈ ನಿತ್ಯಂ ನಮೋ ನಮಃ ।
ಈಶಾನಪುರುಷಶ್ಶುಕ್ಲಃ ಸರ್ವವಿದ್ಯಾಧಿಪೋ ಮಹಾನ್ ॥೨೬॥

ಶೂಲಹಸ್ತೋ ವಿರೂಪಾಕ್ಷಸ್ತಸ್ಮೈ ನಿತ್ಯಂ ನಮೋ ನಮಃ ।
ಪದ್ಮಯೋನಿಶ್ಚತುರ್ಮೂರ್ತಿರ್ವೇದಾವಾಸಃ ಪಿತಾಮಹಃ ॥೨೭॥

ಯಜ್ಞಾಧ್ಯಕ್ಷಶ್ಚತುರ್ವಕ್ತ್ರಸ್ತಸ್ಮೈ ನಿತ್ಯಂ ನಮೋ ನಮಃ ।
ಯೋಽಸಾವನಂತರೂಪೇಣ ಬ್ರಹ್ಮಾಂಡಂ ಸಚರಾಚರಂ ॥೨೮॥

ಪುಷ್ಪವದ್ಧಾರಯೇನ್ಮೂರ್ಧ್ನಿ ತಸ್ಮೈ ನಿತ್ಯಂ ನಮೋ ನಮಃ ।
ಓಂಕಾರಪೂರ್ವಕಾ ಹ್ಯೇತೇ ನ್ಯಾಸೇ ಬಲಿನಿವೇದನೇ ॥೨೯॥

ಮಂತ್ರಾಃ ಸ್ಯುಃ ಸರ್ವಕಾರ್ಯಾಣಾಂ ವೃದ್ಧಿಪುತ್ರಫಲಪ್ರದಾಃ ।
ನ್ಯಾಸಂ ಕೃತ್ವಾ ತು ರತ್ನಾನಾಂ ಪಾಯಸೇನಾನುಲೇಪನಂ ॥೩೦॥

---

೨೬ ಬಿಳಿಯ ಬಣ್ಣದವನೂ, ಸರ್ವ ವಿದ್ಯಾಧಿಪತಿಯೂ, ಮಹಾ ಪುರುಷನೂ, ಶೂಲಧರನೂ, ತ್ರಿನೇತ್ರನೂ ಆದ ಆ ಈಶ್ವರನಿಗೆ ನಿತ್ಯವೂ ನಮಸ್ಕಾರ ನಮಸ್ಕಾರ

೨೭ ಪದ್ಮದಲ್ಲಿ ಸಂಭವಿಸಿ, ನಾಲ್ಕುಬಗಯ ಸ್ವರೂಪವನ್ನು ತಾಳಿ, ವೇದ ಗಳ ನೆಲೆಯಾಗಿ, ಯಜ್ಞಗಳ ಅಧ್ಯಕ್ಷನೆನಿಸಿ, ನಾಲ್ಕು ಮುಖಗಳಿಂದ ವಿರಾಜಿಸು ತ್ತಿರುವ ಆ ಬ್ರಹ್ಮದೇವನಿಗೆ ಅನವರತವೂ ನಮಸ್ಕಾರ ನಮಸ್ಕಾರ

೨೮ ಅನಂತನೆಂಬ ರೂಪವನ್ನು ಧರಿಸಿ ಸ್ಥಾವರಜಂಗಮಗಳಿಂದ ತುಂಬಿದ ಈ ಬ್ರಹ್ಮಾಂಡವನ್ನು ತಲೆಯ ಮೇಲೆ ಹೂವಿನಂತೆ ಲೀಲೆಯಿಂದ ಧರಿಸಿರುವ ಆ ಆದಿಶೇಷನಿಗೆ ಸಂತತವೂ ನಮಸ್ಕಾರ ನಮಸ್ಕಾರ

೨೯ ರತ್ನ ಮೊದಲಾದ ವಸ್ತುಗಳನ್ನು ಇರಿಸುವಾಗಲೂ, ಬಲಿಯನ್ನು ನಿವೇದನ ಮಾಡುವಾಗಲೂ, ಇನ್ನೂ ಉಳಿದ ಎಲ್ಲ ಕಾರ್ಯಗಳನ್ನು ಮಾಡು ವಾಗಲೂ ಈ ಮಂತ್ರಗಳನ್ನು ಓಂಕಾರ ಪೂರ್ವಕವಾಗಿ ಹೇಳಬೇಕು ಇವರಿಂದ ಶ್ರೇಯಸ್ಸೂ ಸಂತಾನಲಾಭವೂ ಆಗುವುವು

೩೦ ರತ್ನಗಳನ್ನು ಇಟ್ಟ ತರುವಾಯ ಅವುಗಳ ಮೇಲೆ ಪಾಯಸವನ್ನು ಸ್ವಲ್ಪ ಎರೆದು, ಹಳ್ಳದ ಮೇಲೆ ಬಿಳಿಯ ಬಟ್ಟೆಯನ್ನು ಮುಚ್ಚಬೇಕು

ಪಟೇನಾಚ್ಛಾದಯೇಚ್ಛುಭ್ರಂ ಶುಕ್ಲೇನೋಪರಿ ಯತ್ನತಃ ।
ತತ ಉತ್ಥಾಪ್ಯ ದೇವೇಶಮಿಷ್ಟದೇಶೇ ತು ಶೋಭನೇ ॥೩೧॥

ಧ್ರುವಾ ದ್ಯೌರಿತಿ ಮಂತ್ರೇಣ ಶ್ವಭ್ರೋಪರಿ ನಿವೇಶಯೇತ್ ।
ತತಃ ಸ್ಥಿರೀಕೃತಸ್ಯಾಸ್ಯ ಹಸ್ತಂ ದತ್ವಾ ತು ಮಸ್ತಕೇ ॥೩೨॥

ಧ್ಯಾತ್ವಾ ಪರಮಸದ್ಭಾವಾದ್ದೇವದೇವಂ ಚ ನಿಷ್ಕಲಂ ।
ದೇವವ್ರತಂ ತಥಾ ಸಾಮ ರುದ್ರಸೂಕ್ತಂ ತಥೈವ ಚ ॥೩೩॥

ಆತ್ಮಾನಮೀಶ್ವರಂ ಕೃತ್ವಾ ನಾನಾಭರಣಭೂಷಿತಂ ।
ಯಸ್ಯ ದೇವಸ್ಯ ಯದ್ರೂಪಂ ತದ್ಧ್ಯಾನೇ ಸಂಸ್ಮರೇತ್ತಥಾ ॥೩೪॥

ಅತಸೀಪುಷ್ಪಸಂಕಾಶಂ ಶಂಖಚಕ್ರಗದಾಧರಂ ।
ಸಂಸ್ಥಾಪಯಾಮಿ ದೇವೇಶಂ ದೇವೋ ಭೂತ್ವಾ ಜನಾರ್ದನಂ ॥೩೫॥

---

೩೧ ಬಳಿಕ ಭಗವನ್ಮೂರ್ತಿಯನ್ನು ಎತ್ತಿ, ತನಗೆ ಇಷ್ಟವಾದ ಪವಿತ್ರಕ್ಷೇತ್ರದಿಂದ ಬಂದಂತೆ ಭಾವಿಸಿ, "ಧ್ರುವಾ ದ್ಯೌಃ" ಎಂಬ ಮಂತ್ರದಿಂದ ಪೀಠದ ಮೇಲೆ ಇರಿಸಬೇಕು

೩೨-೩೩ ತರುವಾಯ ಬಂಧನ ಸಾಮಗ್ರಿಯಿಂದ ವಿಗ್ರಹವನ್ನು ಸ್ಥಿರಗೊಳಿಸಿ, ತಲೆಯಮೇಲೆ ಕೈಯಿಟ್ಟು, ಶುದ್ಧಭಾವದಿಂದ ಅಖಂಡಸ್ವರೂಪನಾದ ದೇವದೇವನನ್ನು ಧ್ಯಾನಿಸಬೇಕು ದೇವವ್ರತ ಸಾಮವನ್ನೂ ರುದ್ರಸೂಕ್ತವನ್ನೂ ಜಪಿಸಬೇಕು

೩೪ ಸರ್ವಾಭರಣಭೂಷಿತನಾಗಿರುವ ಸರ್ವೇಶ್ವರನು ತನ್ನಲ್ಲಿ ಅಂತರ್ಯಾಮಿಯಾಗಿ ತನ್ನ ರೂಪದಿಂದ ಇರುವನೆಂದು ಅನುಸಂಧಾನಮಾಡಬೇಕು ಆಯಾ ದೇವತೆಗಳಿಗೆ ಉಕ್ತವಾಗಿರುವ ಅಸಾಧಾರಣವಾದ ದಿವ್ಯರೂಪವನ್ನು ಧ್ಯಾನದಲ್ಲಿ ಸ್ಮರಿಸಬೇಕು

೩೫ ಅಗಸೆಯ ಹೂವಿನ ಮೈಬಣ್ಣದವನಾದ, ಶಂಖಚಕ್ರಗದಾಧಾರಿಯಾದ, ದೇವಾಧಿದೇವನಾದ ಜನಾರ್ದನನನ್ನು ಅವನ ಪೂಜೆಗೆ ತಕ್ಕ ದೇವರೂಪವನ್ನು ತಾಳಿ ಪ್ರತಿಷ್ಠೆಮಾಡುವೆನು

**ಅಕ್ಷರಂ ದಶಬಾಹುಂ ಚ ಚಂದ್ರಾರ್ಧಕೃತಶೇಖರಂ ।**
**ಗಣೇಶಂ ವೃಷಸಂಸ್ಥಂ ಚ ಸ್ಥಾಪಯಾಮಿ ತ್ರಿಲೋಚನಂ ॥೩೬॥**

**ಋಷಿಭಿಃ ಸಂಸ್ತುತಂ ದೇವಂ ಚತುರ್ವಕ್ತ್ರಂ ಜಟಾಧರಂ ।**
**ಪಿತಾಮಹಂ ಮಹಾಬಾಹುಂ ಸ್ಥಾಪಯಾಮ್ಯಂಬುಜೋದ್ಭವಂ ॥೩೭॥**

**ಸಹಸ್ರಕಿರಣಂ ಶಾಂತಮಪ್ಸರೋಗಣಸಂಯುತಂ ।**
**ಪದ್ಮಹಸ್ತಂ ಮಹಾಬಾಹುಂ ಸ್ಥಾಪಯಾಮಿ ದಿವಾಕರಂ ॥೩೮॥**

**ದೇವಮಂತ್ರಾಂಸ್ತಥಾ ರೌದ್ರಾನ್ರುದ್ರಸ್ಯ ಸ್ಥಾಪನೇ ಜಪೇತ್ ।**
**ವಿಷ್ಣೋಸ್ತು ವೈಷ್ಣವಾಂಸ್ತದ್ವದ್ಬ್ರಾಹ್ಮಾನ್ಬ್ರಹ್ಮಣೋ ಬುಧಃ ॥೩೯॥**

**ಸೌರಾಃ ಸೂರ್ಯಸ್ಯ ಜಪ್ತವ್ಯಾಸ್ತಥಾನ್ಯೇಷು ತದಾಶ್ರಯಾಃ ।**
**ವೇದಮಂತ್ರಪ್ರತಿಷ್ಠಾ ತು ಯಸ್ಮಾದಾನಂದದಾಯಿನೀ ॥೪೦॥**

---

೩೬ ನಿರ್ವಿಕಾರನಾಗಿ, ಹತ್ತು ಭುಜಗಳನ್ನು ಧರಿಸಿ, ಅರ್ಧಚಂದ್ರನನ್ನು ಶಿರಸ್ಸಿನಲ್ಲಿ ಮುಡಿದು, ಪ್ರಮಥಗಣಗಳ ಅಧಿಪತಿಯಾಗಿ, ವೃಷಭವನ್ನೇರಿ ಮೂರು ಕಣ್ಣುಗಳಿಂದ ವಿರಾಜಿಸುತ್ತಿರುವ ಮಹಾದೇವನನ್ನು ಸ್ಥಾಪನೆಮಾಡುವೆನು

೩೭ ಋಷಿಗಳಿಂದ ಸ್ತುತಿಸಲ್ಪಟ್ಟು, ನಾಲ್ಕುಮುಖಗಳಿಂದ ಕೂಡಿ, ಜಟಾಧರನಾಗಿ ಲೋಕಗಳ ಪಿತಾಮಹನೆನಿಸಿ, ಮಹಾಬಾಹುವೂ, ಕಮಲ ಸಂಭವನೂ ಆದ ಬ್ರಹ್ಮದೇವನನ್ನು ಪ್ರತಿಷ್ಠೆಮಾಡುವೆನು

೩೮ ಸಹಸ್ರಕಿರಣನೂ, ಶಾಂತಮೂರ್ತಿಯೂ, ಅಪ್ಸರಸ್ತ್ರೀಪರಿವೃತನೂ ಪದ್ಮಹಸ್ತನೂ, ಮಹಾಬಾಹುವೂ ಆದ ಸೂರ್ಯನನ್ನು ಸ್ಥಾಪಿಸುತ್ತೇನೆ

೩೯ ರುದ್ರನನ್ನು ಸ್ಥಾಪಿಸುವಾಗ ಆಚಾರ್ಯನು ದೇವಮಂತ್ರಗಳನ್ನೂ ರುದ್ರಮಂತ್ರಗಳನ್ನೂ ಜಪಿಸಬೇಕು ವಿಷ್ಣುವನ್ನೂ ಬ್ರಹ್ಮನನ್ನೂ ಪ್ರತಿಷ್ಠೆಮಾಡು ವಾಗ ಕ್ರಮವಾಗಿ ವೈಷ್ಣವ ಮಂತ್ರಗಳನ್ನೂ ಬ್ರಾಹ್ಮಮಂತ್ರಗಳನ್ನೂ ಹೇಳಬೇಕು

೪೦ ಸೂರ್ಯನನ್ನು ಪ್ರತಿಷ್ಠೆಮಾಡುವಾಗ ಸೌರಮಂತ್ರಗಳನ್ನು ಜಪಿಸಬೇಕು ಹೀಗೆಯೇ ಬೇರೆ ಬೇರೆ ದೇವತೆಗಳ ಪ್ರತಿಷ್ಠಾಕಾಲದಲ್ಲಿ ಅವರವರ ಮಂತ್ರಗಳನ್ನು ಹೇಳಬೇಕು ವೇದಮಂತ್ರಗಳನ್ನು ಜಪಿಸಿ ಭಗವದ್ವಿಗ್ರಹಗಳನ್ನು ಪ್ರತಿಷ್ಠೆಮಾಡಿದರೆ ಅದರಿಂದ ಶ್ರೇಯಸ್ಸು ಉಂಟಾಗುವುದು

ಸ್ಥಾಪಯೇದ್ಯಂ ತು ದೇವೇಶಂ ತಂ ಪ್ರಧಾನಂ ಪ್ರಕಲ್ಪಯೇತ್ ।
ತಸ್ಯ ಪಾರ್ಶ್ವಸ್ಥಿತಾನನ್ಯಾನ್ ಸಂಸ್ಮರೇತ್ಪರಿವಾರಿತಃ ॥೪೧॥

ಗಣಂ ನಂದಿಂ ಮಹಾಕಾಲಂ ವೃಷಂ ಭೃಂಗಿಂ ರಿಟಿಂ ಗುಹಂ ।
ದೇವೀಂ ವಿನಾಯಕಂ ಚೈವ ವಿಷ್ಣುಂ ಬ್ರಹ್ಮಾಣಮೇವ ಚ ॥೪೨॥

ರುದ್ರಂ ಶಕ್ರಂ ಜಯಂತಂ ಚ ಲೋಕಪಾಲಾನ್ ಸಮಂತತಃ ।
ತಥೈವಾಪ್ಸರಸಃ ಸರ್ವಾನ್ ಗಂಧರ್ವಗಣಗುಹ್ಯಕಾನ್ ॥೪೩॥

ಯೋ ತತ್ರ ಸ್ಥಾಪ್ಯತೇ ದೇವಸ್ತಸ್ಯ ತಾನ್ ಪರಿತಃ ಸ್ಮರೇತ್ ।
ಆವಾಹಯೇತ್ತಥಾ ರುದ್ರಂ ಮಂತ್ರೇಣಾನೇನ ಯತ್ನತಃ ॥೪೪॥

ಯಸ್ಯ ಸಿಂಹಾ ರಥೇ ಯುಕ್ತಾ ವ್ಯಾಘ್ರಭೂತಾಸ್ತಥೋರಗಾಃ ।
ಋಷಯೋ ಲೋಕಪಾಲಾಶ್ಚ ದೇವಃ ಸ್ಕಂದಸ್ತಥಾ ವೃಷಃ ॥೪೫॥

---

೪೧ ಯಾವ ದೇವತಾಮೂರ್ತಿಯನ್ನು ಸ್ಥಾಪಿಸಬೇಕೋ ಅದನ್ನು ಪ್ರಧಾನವಾಗಿ ಎಣಿಸಿ, ಉಳಿದುವನ್ನು ಪರಿವಾರವರ್ಗಕ್ಕೆ ಸೇರಿಸಿ ಪಾರ್ಶ್ವಗಳಲ್ಲಿ ಇರುವಂತೆ ಸ್ಮರಿಸಬೇಕು

೪೨-೪೩ ಸ್ಥಾಪಿಸುವ ಶಂಕರನ ವಿಗ್ರಹದ ಸುತ್ತಲೂ ಪ್ರಮಥಗಣಗಳು, ನಂದಿ, ಮಹಾಕಾಲ, ವೃಷಭ, ಭೃಂಗಿ, ರಿಟಿ, ಷಣ್ಮುಖ, ಪಾರ್ವತಿ, ವಿನಾಯಕ, ವಿಷ್ಣು, ಬ್ರಹ್ಮ, ರುದ್ರ, ಇಂದ್ರ, ಜಯಂತ, ಲೋಕಪಾಲಕರು, ಅಪ್ಸರಸ್ತ್ರೀಯರು, ಗಂಧರ್ವರು ಮತ್ತು ಗುಹ್ಯಕರು ಇರುವಂತೆ ಸ್ಮರಿಸಿಕೊಳ್ಳಬೇಕು

೪೪-೪೭ ಈ ಮುಂದಿನ ಮಂತ್ರದಿಂದ ಈಶ್ವರನನ್ನು ಆವಾಹನೆ ಮಾಡಬೇಕು ಸಿಂಹಗಳನ್ನೂ, ವ್ಯಾಘ್ರಗಳನ್ನೂ, ಭೂತಗಳನ್ನೂ, ಸರ್ಪಗಳನ್ನೂ ಹೂಡಿದ ರಥದಲ್ಲಿ ಕುಳಿತು, ಋಷಿಗಳು, ಲೋಕಪಾಲಕರು, ಕುಮಾರಸ್ವಾಮಿ, ನಂದೀಶ್ವರ, ಗಣಪತಿ, ಸಪ್ತಮಾತೃಗಳು, ಚಂದ್ರ, ವಿಷ್ಣು, ಬ್ರಹ್ಮ, ನಾಗರು, ಯಕ್ಷರು,

**ಪ್ರಿಯೋ ಗಣೋ ಮಾತರಶ್ಚ ಸೋಮೋ ವಿಷ್ಣುಃ ಪಿತಾಮಹಃ ।**
**ನಾಗಾ ಯಕ್ಷಾಃ ಸಗಂಧರ್ವಾ ಯೇ ಚ ದಿವ್ಯಾ ನಭಶ್ಚರಾಃ ॥೪೬॥**

**ತಮಹಂ ತ್ರ್ಯಕ್ಷಮೀಶಾನಂ ಶಿವಂ ರುದ್ರಮುಮಾಪತಿಂ ।**
**ಆವಾಹಯಾಮಿ ಸಗಣಂ ಸಪತ್ನೀಕಂ ವೃಷಧ್ವಜಂ ॥೪೭॥**

**ಆಗಚ್ಛ ಭಗವನ್ ರುದ್ರಾನುಗ್ರಹಾಯ ಶಿವೋ ಭವ ।**
**ಶಾಶ್ವತೋ ಭವ ಪೂಜಾಂ ಮೇ ಗೃಹಾಣ ತ್ವಂ ನಮೋ ನಮಃ ॥೪೮॥**

**ಓಂ ನಮಃ ಸ್ವಾಗತಂ ಭಗವತೇ ನಮಃ ಓಂ ನಮಃ ಸೋಮಾಯ**
**ಸಗಣಾಯ ಸಪರಿವಾರಾಯ ಪ್ರತಿಗೃಹ್ಣಾತು ಭಗವನ್ ಮಂತ್ರಪೂತಮಿದಂ**
**ಸರ್ವಮರ್ಘ್ಯಪಾದ್ಯಮಾಚಮನೀಯಮಾಸನಂ ಬ್ರಹ್ಮಣಾಭಿಹಿತಂ**
**ನಮೋ ನಮಃ ಸ್ವಾಹಾಃ ॥೪೯॥**

---

ಗಂಧರ್ವರು ಇನ್ನೂ ಉಳಿದ ವಿದ್ಯಾಧರರು ಇವರೊಡಗೂಡಿ ಈಶಾನ ಶಿವ, ರುದ್ರ ಉಮಾಪತಿ ಎಂಬ ಹೆಸರುಗಳನ್ನು ತಳೆದು, ಪತ್ನಿಯೊಡನೆಯೂ ಪ್ರಮಥಗಣಗಳೊಡನೆಯೂ ವಿರಾಜಿಸುವ ವೃಷಭವಾಹನನಾದ ಪರಮೇಶ್ವರನನ್ನು ಆವಾಹನ ಮಾಡುತ್ತೇನೆ

೪೮ ಪೂಜ್ಯನಾದ ಎಲೈ ರುದ್ರನೇ, ನಮ್ಮನ್ನು ಅನುಗ್ರಹಿಸುವುದಕ್ಕಾಗಿ ಬಾ ಮಂಗಳಕರನಾಗು ಇಲ್ಲಿ ಶಾಶ್ವತವಾಗಿ ನೆಲಸು ನನ್ನ ಪೂಜೆಯನ್ನು ಸ್ವೀಕರಿಸು ನಿನಗೆ ನಮಸ್ಕಾರ ನಮಸ್ಕಾರ

೪೯ ಓಂ ನಮಃ ಭಗವಂತನಿಗೆ ಸುಸ್ವಾಗಮನ, ನಮಸ್ಕಾರ ಓಂ ಪಾರ್ವತಿಯೊಡನೆಯೂ, ಪ್ರಮಥಗಣಗಳೊಡನಯೂ, ಪರಿವಾರದೊಡನೆಯೂ ಕೂಡಿದ ಪರಮೇಶ್ವರನಿಗೆ ನಮಸ್ಕಾರ ದೇವಾ, ಮಂತ್ರದಿಂದ ಪರಿಶುದ್ಧವಾದ ಈ ಅರ್ಘ್ಯ, ಪಾದ್ಯ, ಆಚಮನೀಯ, ಆಸನ ಇವೆಲ್ಲವನ್ನೂ ವೇದಮಂತ್ರಗಳನ್ನು ಜಪಿಸಿ ಸಮರ್ಪಿಸುವೆನು ಸ್ವೀಕರಿಸು, ನಮೋ ನಮಃ ಸ್ವಾಹಾ

ತತಃ ಪುಣ್ಯಾಹಘೋಷೇಣ ಬ್ರಹ್ಮಘೋಷೈಶ್ಚ ಪುಷ್ಕಲೈಃ ।
ಸ್ನಾಪಯೇತ್ತು ತತೋ ದೇವಂ ದಧಿಕ್ಷೀರಘೃತೇನ ಚ ॥೫೦॥
ಮಧುಶರ್ಕರಯಾ ತದ್ವತ್ಪುಷ್ಪಗಂಧೋದಕೇನ ಚ ।
ಶಿವಧ್ಯಾನೈಕಚಿತ್ತಸ್ತು ಮಂತ್ರಾನೇತಾನುದೀರಯೇತ್ ॥೫೧॥
ಯಜ್ಞಾಗ್ರತೋ ದೂರಮುದೇತಿ ತತೋವಿರಾಡಜಾಯತ ಇತಿ ಚ
ಸಹಸ್ರಶೀರ್ಷಾಪುರುಷ ಇತಿ ಚ ಅಭಿ ತ್ವಾ ಶೂರ ನೋನುಮ ಇತಿ ಚ
ಪುರುಷ ಏವೇದಂ ಸರ್ವಮಿತಿ ತ್ರಿಪಾದೂರ್ಧ್ವಮಿತಿ ಯೇನೇದಂ ಭೂತ
ಮಿತಿ ನ ತ್ವಾ ವಾಂ ಅನ್ಯ ಇತಿ ॥೫೨॥
ಸರ್ವಾಂಶ್ಚೈತಾನ್ ಪ್ರತಿಷ್ಠಾಸು ಮಂತ್ರಾಞ್ಜಪ್ತ್ವಾ ಪುನಃ ಪುನಃ ।
ಚತುಷ್ಕೃತ್ವಃ ಸ್ಪೃಶೇದದ್ಭಿರ್ಮೂಲೇ ಮಧ್ಯೇ ಶಿರಸ್ಯಪಿ ॥೫೩॥
ಸ್ಥಾಪಿತೇ ತು ತತೋ ದೇವೇ ಯಜಮಾನೋಥ ಮೂರ್ತಿಪಂ ।
ಆಚಾರ್ಯಂ ಪೂಜಯೇದ್ಭಕ್ತ್ಯಾ ವಸ್ತ್ರಾಲಂಕಾರಭೂಷಣೈಃ ॥೫೪॥

---

೫೦-೫೧ ಅನಂತರ ಪುಣ್ಯಾಹಘೋಷವೂ ವಿಶೇಷವಾದ ವೇದಘೋಷವೂ ಆಗುತ್ತಿರಲು ಮೊಸರು, ಹಾಲು, ತುಪ್ಪ, ಜೇನು, ಶರ್ಕರೋದಕ, ಪುಷ್ಪೋದಕ ಮತ್ತು ಗಂಧೋದಕಗಳಿಂದ ಮಹಾದೇವನಿಗೆ ಅಭಿಷೇಕ ಮಾಡಬೇಕು ಶಿವಧ್ಯಾನ ಪರಾಯಣನಾಗಿ ಈ ಮಂತ್ರಗಳನ್ನು ಉಚ್ಚರಿಸಬೇಕು

೫೨ ಯಜ್ಞಾಗ್ರತೋ ದೂರಮುದೇಶಿ, ತತೋವಿರಾಡಜಾಯುತ, ಸಹಸ್ರ ಶೀರ್ಷಾಪುರುಷಃ, ಅಭಿತ್ವಾಶೂರ ನೋನುಮಃ, ಪುರುಷಏವೇದಂ ಸರ್ವಂ, ತ್ರಿಪಾ ದೂರ್ಧ್ವಂ, ಯೇನೇದಂ ಭೂತಂ, ನತ್ವಾವಾಂ ಅನ್ಯಃ ಎಂಬ ಮಂತ್ರಗಳನ್ನೂ ಜಪಿಸಬೇಕು

೫೩ ವಿಗ್ರಹಗಳನ್ನು ಪ್ರತಿಷ್ಠೆಮಾಡಿದಾಗ ಈ ಮಂತ್ರಗಳೆಲ್ಲವನ್ನೂ ಪುನಃ ಪುನಃ ಜಪಿಸಿ, ಭಗವಂತನ ಪಾದದಲ್ಲೂ, ಮಧ್ಯದಲ್ಲೂ, ಶಿರಸ್ಸಿನಲ್ಲೂ ನಾಲ್ಕುಸಾರಿ ಜಲವನ್ನು ಪ್ರೋಕ್ಷಿಸಬೇಕು

೫೪ ದೇವರ ಪ್ರತಿಷ್ಠೆಯಾದ ಬಳಿಕ ಯಜಮಾನನು ಋತ್ವಿಕ್ಕುಗಳನ್ನೂ, ಆಚಾರ್ಯನನ್ನೂ ಭಕ್ತಿಯೊಡನೆ ವಸ್ತ್ರಾಲಂಕಾರ ಭೂಷಣಗಳಿಸ್ನಿತ್ತು ಪೂಜಿಸಬೇಕು ಬಡವರು, ಕುರುಡರು, ಅನಾಥರು ಮುಂತಾದವರೆಲ್ಲರನ್ನೂ ಅನ್ನವಸ್ತ್ರಾದಿಗಳಿಂದ ತೃಪ್ತಿಪಡಿಸಬೇಕು

ದೀನಾಂಧಕೃಪಣಾಂಸ್ತದ್ವದ್ಯೇ ಚಾನ್ಯೇ ಸಮುಪಸ್ಥಿತಾಃ ।
ತತಸ್ತು ಮಧುನಾ ದೇವಂ ಪ್ರಥಮೇಽಹನಿ ಲೇಪಯೇತ್ ॥೫೫॥

ಹರಿದ್ರಯಾಥಸಿದ್ಧಾರ್ಥೈರ್ದ್ವಿತೀಯೇಽಹನಿ ತತ್ವತಃ ।
ಚಂದನೇನ ಯವೈಸ್ತದ್ವತ್ತೃತೀಯೇಽಹನಿ ಲೇಪಯೇತ್ ॥೫೬॥

ಮನಃಶಿಲಾಪ್ರಿಯಂಗುಭ್ಯಾಂ ಚತುರ್ಥೇಽಹನಿ ಲೇಪಯೇತ್ ।
ಸೌಭಾಗ್ಯಶುಭದಂ ಯಸ್ಮಾಲ್ಲೇಪನಂ ವ್ಯಾಧಿನಾಶನಂ ॥೫೭॥

ಪರಂ ಪ್ರೀತಿಕರಂ ನೃಣಾಮೇತದ್ವೇದವಿದೋ ವಿದುಃ ।
ಕೃಷ್ಣಾಂಜನಂ ತಿಲಂ ತದ್ವತ್ಪಂಚಮೇಽಪಿ ನಿವೇದಯೇತ್ ॥೫೮॥

ಷಷ್ಠೇ ತು ಸಘೃತಂ ದದ್ಯಾಚ್ಚಂದನಂ ಪದ್ಮಕೇಸರಂ ।
ರೋಚನಾಗರುಪುಷ್ಪಂ ತು ಸಪ್ತಮೇಽಹನಿ ದಾಪಯೇತ್ ॥೫೯॥

ಯತ್ರ ಸದ್ಯೋಽಧಿವಾಸಃ ಸ್ಯಾತ್ತತ್ರ ಸರ್ವಂ ನಿವೇದಯೇತ್ ।
ಸ್ಥಿತಂ ನ ಚಾಲಯೇದ್ದೇವಮನ್ಯಥಾ ದೋಷಭಾಗ್ಭವೇತ್ ॥೬೦॥

---

೫೫-೫೬ ಬಳಿಕ ದೇವತಾವಿಗ್ರಹಕ್ಕೆ ಮೊದಲನೆಯ ದಿನ ಜೇನುತುಪ್ಪವನ್ನು ಲೇಪಿಸಬೇಕು ಎರಡನೆಯದಿನ ಅರಸಿನ ಮತ್ತು ಬಿಳಿಯ ಸಾಸುವೆಯನ್ನೂ, ಮೂರನೆಯ ದಿವಸ ಶ್ರೀಗಂಧ ಮತ್ತು ಯವಧಾನ್ಯಗಳನ್ನೂ ಹಚ್ಚಬೇಕು

೫೭ ನಾಲ್ಕನೆಯ ದಿವಸ ಮಣಸಿಲೆಯನ್ನೂ ನವಣೆಯನ್ನೂ ಲೇಪಿಸಬೇಕು ಏಕೆಂದರೆ ಲೇಪನವು ಸೌಭಾಗ್ಯವನ್ನೂ ಶುಭವನ್ನೂ ಕೊಡುವುದು, ವ್ಯಾಧಿಯನ್ನು ಪರಿಹರಿಸುವುದು, ಮತ್ತು ಮನುಷ್ಯರಿಗೆ ಬಹಳ ಪ್ರೀತಿಯನ್ನುಂಟು ಮಾಡುವುದೆಂದು ವೇದಜ್ಞರು ಭಾವಿಸುವರು

೫೮-೫೯ ಐದನೆಯ ದಿನ ಕರಿಯಕಾಡಿಗೆ ಮತ್ತು ಎಳ್ಳನ್ನೂ, ಆರನೆಯ ದಿನ ತುಪ್ಪದೊಡನೆ ಬೆರಸಿದ ಶ್ರೀಗಂಧ ಮತ್ತು ಪದ್ಮಕೇಸರವನ್ನೂ, ಏಳನೆಯದಿನ ಗೋರೋಚನ ಮತ್ತು ಅಗಿಲು ಹೂವನ್ನೂ ಲೇಪನಮಾಡಬೇಕು

೬೦ ಪ್ರತಿಷ್ಠಾದಿವಸದಲ್ಲೇ ಅಧಿವಾಸವನ್ನು ನಡೆಸಿ ಮುಗಿಸಿದ್ದರೆ ಇದೆಲ್ಲವನ್ನೂ ಮಾಡಲೇಬೇಕು ನಿಂತಿರುವ ದೇವತಾವಿಗ್ರಹವನ್ನು ಅಲ್ಲಾಡಿಸಬಾರದು ಅದರಿಂದ ಬಹು ದೋಷವುಂಟು

ಪೂರಯೇತ್ಸಿಕತಾಭಿಸ್ತು ನಿಶ್ಛಿದ್ರಂ ಸರ್ವತೋ ಭವೇತ್ ।
ಲೋಕಪಾಲಸ್ಯ ದಿಗ್ಭಾಗೇ ಯಸ್ಯ ಸಂಚಲತೇ ವಿಭುಃ ॥೬೧॥

ತಸ್ಯ ಲೋಕಪತೇಃ ಶಾಂತಿರ್ದೇಯಾಶ್ಚೈವಾಶ್ಚ ಧಕ್ಷಿಣಾಃ ।
ಇಂದ್ರಾಯ ವಾರಣಂ ದದ್ಯಾತ್ಕಾಂಚನಂ ಚಾಲ್ಪವಿತ್ತವಾನ್ ॥೬೨॥

ಅಗ್ನೇಃ ಸುವರ್ಣಮೇವ ಸ್ಯಾದ್ಯಮಸ್ಯ ಮಹಿಷಂ ತಥಾ ।
ಅಜಂ ಚ ಕಾಂಚನಂ ದದ್ಯಾನ್ನೈಋತಂ ರಾಕ್ಷಸಂ ಪ್ರತಿ ॥೬೩॥

ವರುಣಂ ಪ್ರತಿ ಮುಕ್ತಾನಿ ಸಶುಕ್ತೀನಿ ಪ್ರದಾಪಯೇತ್ ।
ರೀತಿಕಂ ವಾಯವೇ ದದ್ಯಾದ್ವಸ್ತ್ರಯುಗ್ಮೇನ ಸಂಯುತಂ ॥೬೪॥

ಸೋಮಾಯ ಧೇನುರ್ದಾತವ್ಯಾ ರಾಜತಂ ವೃಷಭಂ ಶಿವೇ ।
ಯಸ್ಯಾಂ ಯಸ್ಯಾಂ ಸಂಚಲನಂ ಶಾಂತಿಃ ಸ್ಯಾತ್ತತ್ರ ತತ್ರ ತು ॥೬೫॥

---

೬೧ ಬಿರುಕುಗಳಿದ್ದರೆ ಮರಳನ್ನು ತುಂಬಿ ಎಲ್ಲಿಯೂ ಸಂದಿಲ್ಲದಂತೆ ಮಾಡಬೇಕು ಯಾವ ದಿಕ್ಕಿನಲ್ಲಿ ವಿಗ್ರಹವು ಅಲ್ಲಾಡುವುದೋ ಆ ದಿಕ್ಪಾಲಕನನ್ನು ಉದ್ದೇಶಿಸಿ ಶಾಂತಿಯನ್ನು ಮಾಡಬೇಕು ಮತ್ತು ಮುಂದೆ ಹೇಳುವಂತೆ ದಕ್ಷಿಣೆ ಕೊಡಬೇಕು

೬೨-೬೩ ಶಾಂತಿಯು ಇಂದ್ರನಿಗೋಸ್ಕರವಾದರೆ ಆನೆಯನ್ನು ದಾನ ಮಾಡಬೇಕು ದ್ರವ್ಯಾನುಕೂಲತೆಯಿಲ್ಲದವನು ಬಂಗಾರವನ್ನು ಕೊಡಬಹುದು ಅಗ್ನಿಗೆ ಸುವರ್ಣವನ್ನೂ, ಯಮನಿಗೆ ಮಹಿಷವನ್ನೂ, ನೈಋತಿಗೆ ಚಿನ್ನದ ಆಡನ್ನೂ ದಾನವಾಗಿ ಕೊಡಬೇಕು

೬೪ ವರುಣನ ಶಾಂತಿಯಲ್ಲಿ ಚಿಪ್ಪುಗಳೊಡಗೂಡಿದ ಮುತ್ತುಗಳನ್ನೂ, ವಾಯುವಿನ ಶಾಂತಿಯಲ್ಲಿ ಒಂದು ಜೊತೆ ಪಂಚೆಯೊಡನೆ ಹಿತ್ತಾಳೆಯನ್ನೂ ಕೊಡಬೇಕು

೬೫ ಶಾಂತಿಯು ಚಂದ್ರನಸಲುವಾಗಿ ಆದರೆ ಹಸುವನ್ನೂ, ಶಿವನಿಗೋಸ್ಕರವಾದರೆ ಬೆಳ್ಳಿಯ ಎತ್ತನ್ನೂ ದಾನಮಾಡಬೇಕು ಯಾವದಿಕ್ಕಿನಲ್ಲಿ ವಿಗ್ರಹವು ಅಲುಗುವುದೋ ಆ ದಿಕ್ಕಿನ ಅಧಿಪತಿಯನ್ನು ಕುರಿತು ಶಾಂತಿಯನ್ನು ನಡೆಸಬೇಕು

## ಅಥ ಸಪ್ತಷಷ್ಟ್ಯಧಿಕದ್ವಿಶತತಮೋಽಧ್ಯಾಯಃ

|| ಸೂತ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ದೇವಸ್ನಪನಮುತ್ತಮಂ ।
ಅರ್ಘ್ಯಸ್ಯಾಪಿ ಸಮಾಸೇನ ಶೃಣುಧ್ವಂ ವಿಧಿಮುತ್ತಮಂ || ೧ ||

ದಧ್ಯಕ್ಷತಕುಶಾಗ್ರಾಣಿ ಕ್ಷೀರಂ ದೂರ್ವಾಸ್ತಥಾ ಮಧು ।
ಯವಾಃ ಸಿದ್ಧಾರ್ಥಕಾಸ್ತದ್ವದಷ್ಟಾಂಗೋಽರ್ಘಃ ಫಲೈಃ ಸಹ || ೨ ||

ಗಜಾಶ್ವರಥ್ಯಾವಲ್ಮೀಕವರಾಹೋತ್ಖಾತಮಂಡಲಾತ್ ।
ಅಗ್ನ್ಯಗಾರಾತ್ತಥಾ ತೀರ್ಥಾದ್ವ್ರಜಾದ್ಗೋಮಂಡಲಾದಪಿ || ೩ ||

ಕುಂಭೇ ತು ಮೃತ್ತಿಕಾಂ ದದ್ಯಾದುದ್ಧೃತಾಸೀತಿ ಮಂತ್ರತಃ ।
ಶಂನೋ ದೇವೀತ್ಯಪಾಂ ಮಂತ್ರಮಾಪೋಹಿಷ್ಠೇತಿ ವೈ ತಥಾ || ೪ ||

---

೧ ಸೂತಪೌರಾಣಿಕನು ಹೇಳಿದನು —ಇನ್ನುಮುಂದೆ ಸತ್ಫಲದಾಯಕವಾದ ಭಗವದಭಿಷೇಕದ ವಿಧಾನವನ್ನು ಹೇಳುವೆನು ಅತಿಶ್ರೇಷ್ಠವಾದ ಅರ್ಘ್ಯವಿಧಿಯನ್ನೂ ಸಹ ಸಂಗ್ರಹವಾಗಿ ತಿಳಿಸುತ್ತೇನೆ ಕೇಳಿರಿ

೨ ಮೊಸರು, ಅಕ್ಷತೆ, ದರ್ಭಾಗ್ರ ಹಾಲು, ಗರಿಕೆ, ಜೇನು, ಯವಧಾನ್ಯ, ಬಿಳಿಯಸಾಸುವೆ, ಎಂಬವು ಪೂಜೋಪಹಾರದ ಸಾಮಗ್ರಿಗಳು ಇವುಗಳ ಜೊತೆಗೆ ಫಲಗಳೂ ಸೇರುವುವು

೩ ಆನೆಕುದುರೆಗಳು ತಿರುಗುವ ಬೀದಿ, ಹುತ್ತ, ಹಂದಿಯು ಮಣ್ಣು ತೋಡಿದ ಹಳ್ಳ, ಧಾರ್ಯಾಗ್ನಿಯನ್ನಿಟ್ಟಿರುವ ಮನೆ, ಪುಣ್ಯತೀರ್ಥ, ದನದ ಕೊಟ್ಟಿಗೆ, ದನಗಳ ಗುಂಪು ನಿಲ್ಲುವ ಸ್ಥಳ ಇಂತಹ ಕಡೆಗಳಲ್ಲಿ " ಉದ್ಧೃತಾಸಿ ವರಾಹೇಣ " ಎಂಬ ಮಂತ್ರದಿಂದ ಮಣ್ಣನ್ನು ಸಂಗ್ರಹಿಸಿ ಕುಂಭದಲ್ಲಿ ಇರಿಸಬೇಕು

೪-೬ " ಶಂನೋ ದೇವೀರಭಿಷ್ಟಯೇ" " ಆಪೋಹಿಷ್ಠಾಮಯೋಭುವಃ " ಎಂಬ ಮಂತ್ರಗಳಿಂದ ಜಲವನ್ನೂ, ಗಾಯತ್ರಿಯಿಂದ ಗೋಮೂತ್ರವನ್ನೂ, " ಗಂಧ

ಸಾವಿತ್ರ್ಯಾದಾಯ ಗೋಮೂತ್ರಂ ಗಂಧದ್ವಾರೇತಿ ಗೋಮಯಂ ।
ಆಪ್ಯಾಯಸ್ವೇತಿ ಚ ಕ್ಷೀರಂ ದಧಿಕ್ರಾವ್ಣೇತಿ ವೈ ದಧಿ ॥ ೫ ॥

ತೇಜೋಸೀತಿ ಘೃತಂ ತದ್ವದ್ದೇವಸ್ಯ ತ್ವೇತಿ ಚೋದಕಂ ।
ಕುಶಮಿಶ್ರಂ ಕ್ಷಿಪೇದ್ವಿದ್ವಾನ್ ಪಂಚಗವ್ಯಂ ಭವೇತ್ತತಃ ॥ ೬ ॥

ಸ್ನಾಪ್ಯಾಥ ಪಂಚಗವ್ಯೇನ ದಧ್ನಾ ಶುದ್ಧೇನ ವೈ ತತಃ ।
ದಧಿಕ್ರಾವ್ಣೇತಿ ಮಂತ್ರೇಣ ಕರ್ತವ್ಯಮಭಿಮಂತ್ರಣಂ ॥ ೭ ॥

ಆಪ್ಯಾಯಸ್ವೇತಿ ಪಯಸಾ ತೇಜೋಽಸೀತಿ ಘೃತೇನ ಚ ।
ಮಧುವಾತೇತಿ ಮಧುನಾ ತತಃ ಪುಷ್ಪೋದಕೇನ ಚ ॥ ೮ ॥

ಸರಸ್ವತ್ಯೈ ಭೇಷಜ್ಯೇನ ಕಾರ್ಯಂ ತಸ್ಯಾಭಿಮಂತ್ರಣಂ ।
ಹಿರಣ್ಯಾಕ್ಷೇತಿ ಮಂತ್ರೇಣ ಸ್ನಾಪಯೇದ್ರತ್ನವಾರಿಣಾ ॥ ೯ ॥

---

ದ್ವಾರಾಂ ದುರಾಧರ್ಷಾಂ" ಎಂಬ ಮಂತ್ರದಿಂದ ಗೋಮಯವನ್ನೂ, "ಆಪ್ಯಾಯಸ್ವ ಸಮೇತು ತೇ'' ಎಂಬ ಮಂತ್ರದಿಂದ ಹಾಲನ್ನೂ, "ದಧಿಕ್ರಾವಣ್ಣೋಽಕಾರ್ಷಂ'' ಎಂಬ ಮಂತ್ರದಿಂದ ಮೊಸರನ್ನೂ, "ತೇಜೋಸಿ'' ಎಂಬ ಮಂತ್ರದಿಂದ ತುಪ್ಪವನ್ನೂ, "ದೇವಸ್ಯತ್ವಾ ಸವಿತುಃ" ಎಂಬ ಮಂತ್ರದಿಂದ ದರ್ಭೋದಕವನ್ನೂ ತೆಗೆದುಕೊಂಡು ಮಿಶ್ರಮಾಡಿದರೆ ಪಂಚಗವ್ಯವಾಗುವುದು

೭ ದೇವರಿಗೆ ಪಂಚಗವ್ಯದಿಂದ ಮೊದಲು ಅಭಿಷೇಕಮಾಡಿ, ಬಳಿಕ ''ದಧಿಕ್ರಾವ್ಣೋಽಕಾರ್ಷಂ" ಎಂಬ ಮಂತ್ರವನ್ನು ಅಭಿಮಂತ್ರಿಸಿ ಶುದ್ಧವಾದ ಮೊಸರಿಂದ ಮಜ್ಜನ ಮಾಡಿಸಬೇಕು

೮-೯ "ಆಪ್ಯಾಯಸ್ವ ಸಮೇತು ತೇ" ಎಂದು ಹಾಲಿನಿಂದಲೂ, "ತೇಜೋಸಿ'' ಎಂದು ತುಪ್ಪದಿಂದಲೂ ''ಮಧುವಾತಾ ಋತಾಯತೇ" ಎಂದು ಜೇನುತುಪ್ಪದಿಂದಲೂ, ''ಸರಸ್ವತ್ಯೈ ಭೇಷಜ್ಯೇನ'' ಎಂದು ಅಭಿಮಂತ್ರಿಸಿ ಪುಷ್ಪೋದಕದಿಂದಲೂ, "ಹಿರಣ್ಯಾಕ್ಷ" ಎಂದು ರತ್ನೋದಕದಿಂದಲೂ ಅಭಿಷೇಕ ಮಾಡಬೇಕು

**ಕುಶಾಂಭಸಾ ತತಃ ಸ್ನಾನಂ ದೇವಸ್ಯ ತ್ವೇತಿ ಕಾರಯೇತ್ ।**
**ಫಲೋದಕೇನ ಚ ಸ್ನಾನಮಗ್ನ ಆಯಾಹಿ ಕಾರಯೇತ್ ॥೧೦॥**

**ತತಸ್ತು ಗಂಧತೋಯೇನ ಸಾವಿತ್ರ್ಯಾ ಚಾಭಿಮಂತ್ರಯೇತ್ ।**
**ತತೋ ಘಟಸಹಸ್ರೇಣ ಸಹಸ್ರಾರ್ಧೇನ ವಾ ಪುನಃ ॥೧೧॥**

**ತಸ್ಯಾಪ್ಯರ್ಧೇನ ವಾ ಕುರ್ಯಾತ್ಸಪಾದೇನ ಶತೇನ ವಾ ।**
**ಚತುಷ್ಷಷ್ಟ್ಯಾ ತತೋಽರ್ಧೇನ ತದರ್ಧಾರ್ಧೇನ ವಾ ಪುನಃ ॥೧೨॥**

**ಚತುರ್ಭಿರಥ ವಾ ಕುರ್ಯಾದ್ಘಟಾನಾಮಲ್ಪವಿತ್ತವಾನ್ ।**
**ಸೌವರ್ಣೈ ರಾಜತೈರ್ವಾಪಿ ತಾಮ್ರೈರ್ವಾ ರೀತಿಕೋದ್ಭವೈಃ ॥೧೩॥**

**ಕಾಂಸ್ಯೈರ್ವಾ ಪಾರ್ಥಿವೈರ್ವಾಪಿ ಸ್ನಪನಂ ಶಕ್ತಿತೋ ಭವೇತ್ ।**
**ಸಹದೇವೀ ವಚಾ ವ್ಯಾಘ್ರೀ ಬಲಾಚಾತಿಬಲಾ ತಥಾ ॥೧೪॥**

**ಶಂಖಪುಷ್ಪೀ ತಥಾ ಸಿಂಹೀ ಹ್ಯಷ್ಟಮೀ ಚ ಸುವರ್ಚಲಾ ।**
**ಮಹೌಷಧ್ಯಷ್ಟಕಂ ಹ್ಯೇತನ್ಮಹಾಸ್ನಾನೇಷು ಯೋಜಯೇತ್ ॥೧೫॥**

---

೧೦ ಆ ಮೇಲೆ "ದೇವಸ್ಯತ್ವಾಸವಿತುಃ" ಎಂಬ ಮಂತ್ರವನ್ನುಚ್ಚರಿಸಿ ದರ್ಭೋದಕದಿಂದಲೂ, "ಅಗ್ನ ಆಯಾಹಿಭೀತಯೇ" ಎಂದು ಜಪಿಸಿ ಫಲೋದಕ ದಿಂದಲೂ ಭಗವಂತನಿಗೆ ಸ್ನಾನ ಮಾಡಿಸಬೇಕು

೧೧-೧೩ ಗಾಯತ್ರಿಯನ್ನಭಿಮಂತ್ರಿಸಿ ಗಂಧೋದಕದಿಂದ ಅಭಿಷೇಕ ಮಾಡಬೇಕು ತರುವಾಯ ಸಾವಿರ, ಐನೂರು, ಇನ್ನೂರೈವತ್ತು, ನೂರಿಪ್ಪತ್ತೈದು, ಅರವತ್ತೈದು, ಅರವತ್ತನಾಲ್ಕು, ಮೂವತ್ತೆರಡು, ಎಂಟು, ದ್ರವ್ಯಾನುಕೂಲತಯಿಲ್ಲ ದಿದ್ದರೆ ಕೊನೆಗೆ ನಾಲ್ಕು ಕುಂಭಗಳನ್ನು ಸ್ಥಾಪಿಸಿ ಅವುಗಳಿಂದ ಮಜ್ಜನ ಮಾಡಿಸಬೇಕು ಕಲಶಗಳು ಚಿನ್ನ, ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಅಥವಾ ಮಣ್ಣಿನಿಂದ ಆಗಿರಬೇಕು

೧೪-೧೫ ಸಹದೇವಿ, ಬಜೆ, ವ್ಯಾಘ್ರಿ, ಬಲೆ, ಅತಿಬಲೆ, ಶಂಖಪುಷ್ಪಿ, ಸಿಂಹಿ, ಸುವರ್ಚಲೆ ಎಂಬ ಎಂಟು ಮಹೌಷಧಿಗಳನ್ನು ದೇವರ ಅಭಿಷೇಕತೀರ್ಥಕ್ಕೆ ಸೇರಿಸಬೇಕು

ಯವಗೋಧೂಮನೀವಾರತಿಲಶ್ಯಾಮಾಕಶಾಲಯಃ ।
ಪ್ರಿಯಂಗವೋ ವ್ರೀಹಯಶ್ಚ ಸ್ಥಾನೇಷು ಪರಿಕಲ್ಪಿತಾಃ ॥೧೬॥

ಸ್ವಸ್ತಿಕಂ ಪದ್ಮಕಂ ಶಂಖಮುತ್ಪಲಂ ಕಮಲಂ ತಥಾ ।
ಶ್ರೀವತ್ಸಂ ದರ್ಪಣಂ ತದ್ವನ್ನಂದ್ಯಾವರ್ತಮಥಾಷ್ಟಕಂ ॥೧೭॥

ಏತಾನಿ ಗೋಮಯೈಃ ಕುರ್ಯಾನ್ಮೃದಾ ಚ ಶುಭಯಾ ತತಃ ।
ಪಂಚವರ್ಣಾದಿಕಂ ತದ್ವತ್ಪಂಚವರ್ಣಂ ರಜಸ್ತಥಾ ॥೧೮॥

ದೂರ್ವಾಃ ಕೃಷ್ಣತಿಲಾ ದದ್ಯಾನ್ನೀರಾಜನವಿಧಿರ್ಮತಃ ।
ಏವಂ ನೀರಾಜನಂ ಕೃತ್ವಾ ದದ್ಯಾದಾಚಮನಂ ಬುಧಃ ॥೧೯॥

ಮಂದಾಕಿನ್ಯಾಸ್ತು ಯದ್ವಾರಿ ಸರ್ವಪಾಪಾಪಹಂ ಶುಭಂ ।
ತತೋ ವಸ್ತ್ರಯುಗಂ ದದ್ಯಾನ್ಮಂತ್ರೇಣಾನೇನ ಯತ್ನತಃ ॥೨೦॥

ವೇದಸೂತ್ರಸಮಾಯುಕ್ತೇ ಯಜ್ಞದಾನಸಮನ್ವಿತೇ ।
ಸರ್ವವರ್ಣೇ ಶುಭೇ ದೇವ ವಾಸಸೀ ತೇ ವಿನಿರ್ಮಿತೇ ॥೨೧॥

---

೧೬ ಯವ, ಗೋಧಿ, ಕಾಡುಬತ್ತ ಎಳ್ಳು, ಶಾಮೆ, ಕೆಂಪುಬತ್ತ, ನವಣೆ, ಮತ್ತು ಉಳಿದ ಜಾತಿಯಬತ್ತ ಈ ಧಾನ್ಯಗಳು ಅಭಿಷೇಕಕ್ಕೆ ಯೋಗ್ಯವಾದುವು

೧೭ ಸ್ವಸ್ತಿಕ, ಪದ್ಮಕ, ಶಂಖ, ಉತ್ಪಲ, ಕಮಲ, ಶ್ರೀವತ್ಸ, ದರ್ಪಣ, ಮತ್ತು ನಂದ್ಯಾವರ್ತಗಳೆಂಬ ಎಂಟು ವಸ್ತುಗಳನ್ನೂ ಗೋಮಯದಿಂದಲಾಗಲಿ ಒಳ್ಳೆಯ ಮಣ್ಣಿನಿಂದಾಗಲಿ ಶುದ್ಧಿಮಾಡಬೇಕು

೧೮-೨೧ ಸರ್ವಪಾಪಹರವೂ ಶುಭಕರವೂ ಆದ ಗಂಗಾಜಲವು ಅಭಿಷೇಕಾದಿ ಕಾರ್ಯಗಳಿಗೆ ಬಹುಶ್ರೇಷ್ಠವಾದುದು ಅನಂತರ ಈ ಮುಂದಿನ ಮಂತ್ರವನ್ನು ಹೇಳಿ ವಸ್ತ್ರಯುಗ್ಮವನ್ನು ಸ್ವಾಮಿಗೆ ಧರಿಸಬೇಕು "ದೇವಾ, ಇಗೋ ! ನಿನಗಾಗಿ ಈ ಎರಡು ವಸ್ತ್ರಗಳೂ ನಿರ್ಮಿತವಾಗಿವೆ ಇವು ವೇದಗಳೆಂಬ ದಾರದಿಂದ ಕೂಡಿವೆ ಯಜ್ಞದಾನಸಹಿತವಾಗಿವೆ ನಾಲ್ಕು ವರ್ಣಗಳೆಂಬ ಬಣ್ಣದಿಂದ ಕೂಡಿ ಶುಭವೆನಿಸಿವೆ"

ತತಸ್ತು ಚಂದನಂ ದದ್ಯಾತ್ಸಮಂ ಕರ್ಪೂರಕುಂಕುಮೈಃ ।
ಇಮಮುಚ್ಚಾರಯೇನ್ಮಂತ್ರಂ ದರ್ಭಪಾಣಿಃ ಪ್ರಯತ್ನತಃ ॥೨೨॥

ಶರೀರಂ ತೇ ನ ಜಾನಾಮಿ ಚೇಷ್ಟಾಂ ನೈವ ಚ ನೈವ ಚ ।
ಮಯಾ ನಿವೇದಿತಾನ್ ಗಂಧಾನ್ ಪ್ರತಿಗೃಹ್ಯ ವಿಲಿಪ್ಯತಾಂ ॥೨೩॥

ಚತ್ವಾರಿಂಶತ್ತತೋ ದೀಪಾನ್ ದದ್ಯಾಚ್ಚೈವ ಪ್ರದಕ್ಷಿಣಾನ್ ।
ತ್ವಂ ಸೂರ್ಯಚಂದ್ರಜ್ಯೋತೀಂಷಿ ವಿದ್ಯುದಗ್ನಿಸ್ತಥೈವ ಚ ॥೨೪॥

ತ್ವಮೇವ ಸರ್ವಜ್ಯೋತೀಂಷಿ ದೀಪೋಽಯಂ ಪ್ರತಿಗೃಹ್ಯತಾಂ ।
ತತಸ್ತ್ವನೇನ ಮಂತ್ರೇಣ ಧೂಪಂ ದದ್ಯಾದ್ವಿಚಕ್ಷಣಃ ॥೨೫॥

ವನಸ್ಪತಿರಸೋ ದಿವ್ಯೋ ಗಂಧಾಢ್ಯೋ ಗಂಧ ಉತ್ತಮಃ ।
ಮಯಾ ನಿವೇದಿತೋ ಭಕ್ತ್ಯಾ ಧೂಪೋಽಯಂ ಪ್ರತಿಗೃಹ್ಯತಾಂ ॥೨೬॥

---

೨೨-೨೩ ಬಳಿಕ ಪಚ್ಚಕರ್ಪೂರವನ್ನೂ ಕೇಸರಿಯನ್ನೂ ಸೇರಿಸಿ ಅರೆದ ಗಂಧವನ್ನು ಧರಿಸಬೇಕು ದರ್ಭಹಸ್ತನಾಗಿ ಶ್ರದ್ಧೆಯಿಂದ ಈ ಮಂತ್ರವನ್ನು ಜಪಿಸಬೇಕು "ಸ್ವಾಮೀ, ನಿನ್ನ ಶರೀರವಾವುದೋ ನನಗೆ ತಿಳಿಯದು ನಿನ್ನ ವ್ಯಾಪಾರವಂತೂ ಗೊತ್ತೇ ಇಲ್ಲ ನಾನು ಸಮರ್ಪಿಸುವ ಗಂದವನ್ನು ಸ್ವೀಕರಿಸಿ ಲೇಪನಮಾಡಿಕೋ"

೨೪ ಬಳಿಕ ಪ್ರದಕ್ಷಿಣವಾಗಿ ನಲವತ್ತು ದೀಪಗಳನ್ನು ಹಚ್ಚಿಡಬೇಕು "ದೇವಾ, ಸೂರ್ಯ, ಚಂದ್ರ, ನಕ್ಷತ್ರಗಳು, ಮಿಂಚು ಅಗ್ನಿ ಎಲ್ಲವೂ ನೀನೇ ಸಕಲ ಜ್ಯೋತಿಸ್ವರೂಪ ನೀನು ನಾನು ಸಮರ್ಪಿಸಿದ ಈ ದೀಪವನ್ನು ಸ್ವೀಕರಿಸು"

೨೫-೨೬ ತರುವಾಯ ಅರ್ಚಕನು ಈ ಮುಂದಿನ ಮಂತ್ರದಿಂದ ಧೂಪವನ್ನು ಒಪ್ಪಿಸಬೇಕು ಒಳ್ಳೆಯ ಪರಿಮಳದಿಂದ ತುಂಬಿ, ವನಸ್ಪತಿಯ ರಸದಿಂದ ಉತ್ಪನ್ನವಾದ ಉತ್ತಮ ಗಂಧವಸ್ತುವನ್ನು ಭಕ್ತಿಯಿಂದ ನಿನಗೆ ಒಪ್ಪಿಸುತ್ತೇನೆ ದೇವಾ, ಈ ಧೂಪವನ್ನು ಸ್ವೀಕರಿಸು

ತತಸ್ತ್ವಾಭರಣಂ ದದ್ಯಾನ್ಮಹಾಭೂಷಾಯ ತೇ ನಮಃ ।
ಅನೇನ ವಿಧಿನಾ ಕೃತ್ವಾ ಸಪ್ತರಾತ್ರಂ ಮಹೋತ್ಸವಂ ॥೨೭॥

ದೇವಕುಂಭೈಸ್ತತಃ ಕುರ್ಯಾದ್ಯಜಮಾನೋಽಭಿಷೇಚನಂ ।
ಚತುರ್ಭಿರಷ್ಟಭಿರ್ವಾಪಿ ದ್ವಾಭ್ಯಾಮೇಕೇನ ವಾ ಪುನಃ ॥೨೮॥

ಸಪಂಚರತ್ನಕಲಶೈಃ ಸಿತವಸ್ತ್ರಾಭಿವೇಷ್ಟಿತೈಃ ।
ದೇವಸ್ಯ ತ್ವೇತಿ ಮಂತ್ರೇಣ ಸಾಮ್ನಾ ಚಾಥರ್ವಣೇನ ಚ ॥೨೯॥

ಅಭಿಷೇಕೇ ಚ ಯೇ ಮಂತ್ರಾ ನವಗ್ರಹಮುಖೇ ಸ್ಮೃತಾಃ ।
ಸಿತಾಂಬರಧರಃ ಸ್ನಾತ್ವಾ ದೇವಾನ್ ಸಂಪೂಜಯೇತ್ತತಃ ॥೩೦॥

ಸ್ಥಾಪಕಂ ಪೂಜಯೇದ್ಭಕ್ತ್ಯಾ ವಸ್ತ್ರಾಲಂಕಾರಭೂಷಣೈಃ ।
ಯಜ್ಞಭಾಂಡಾನಿ ಸರ್ವಾಣಿ ಮಂಡಪೋಪಸ್ಕರಾದಿಕಂ ॥೩೧॥

ಯಚ್ಚಾನ್ಯದಪಿ ತದ್ಗೇಹೇ ತದಾಚಾರ್ಯಾಯ ದಾಪಯೇತ್ ।
ಸುಪ್ರಸನ್ನೇ ಗುರೌ ಯಸ್ಮಾತ್ತೃಪ್ಯಂತೇ ಸರ್ವದೇವತಾಃ ॥೩೨॥

---

೨೭ ಆಮೇಲೆ "ಭೂಷಣಗಳಲ್ಲಿ ಶ್ರೇಷ್ಠನೆನಿಸಿದ ನಿನಗೆ ನಮಸ್ಕಾರ" ಎಂದು ಹೇಳಿ ಆಭರಣಗಳನ್ನು ಧರಿಸಬೇಕು ಈ ರೀತಿಯಾಗಿ ಏಳುದಿನ ಮಹೋತ್ಸವವನ್ನು ನಡೆಸಿ ಬಳಿಕ ಯಜಮಾನನು ದೇವಕಲಶಗಳಿಂದ ಅಭಿಷೇಕ ವನ್ನು ಮಾಡಬೇಕು

೨೮-೨೯ ಐದುಬಗೆಯ ರತ್ನಗಳನ್ನು ಹಾಕಿ ಬಿಳಿಯ ಬಟ್ಟೆಯನ್ನು ಸುತ್ತಿದ ನಾಲ್ಕು, ಎಂಟು, ಎರಡು ಅಥವಾ ಒಂದು ಕಲಶದಿಂದ ಮಜ್ಜನಮಾಡಿಸಬೇಕು "ದೇವಸ್ಯತ್ವಾ" ಎಂಬ ಮಂತ್ರವನ್ನೂ, ಸಾಮವೇದದ ಮತ್ತು ಅಥರ್ವಣವೇದದ ಮಂತ್ರಗಳನ್ನೂ ಜಪಿಸಬೇಕು

೩೦ ಸ್ನಾನದಿಂದ ಪರಿಶುದ್ಧನಾಗಿ, ಶುಭ್ರವಸ್ತ್ರವನ್ನು ಧರಿಸಿ, ನವಗ್ರಹಯಜ್ಞ ದಲ್ಲಿ ಹೇಳಿದ ಅಭಿಷೇಕಮಂತ್ರಗಳಿಂದ ಇಂದ್ರಾದಿದೇವತೆಗಳನ್ನು ಪೂಜಿಸಬೇಕು

೩೧-೩೨ ವಸ್ತ್ರಾಲಂಕಾರಭೂಷಣಗಳನ್ನಿತ್ತು ಆಚಾರ್ಯನನ್ನು ಭಕ್ತಿಯಿಂದ ಪೂಜಿಸಬೇಕು ಯಜ್ಞದಲ್ಲಿ ಉಪಯೋಗಿಸಿದ ಎಲ್ಲ ಪಾತ್ರೆಗಳು, ಮಂಟಪದ ಸಾಮಗ್ರಿಗಳು, ಇನ್ನೂ ಆ ಮನೆಯುಲ್ಲಿರುವ ಉಳಿದ ವಸ್ತುಗಳು ಇವನ್ನೆಲ್ಲ ಅವನಿಗೆ ಒಪ್ಪಿಸಬೇಕು ಏಕೆಂದರೆ ಆಚಾರ್ಯನು ಸಂತುಷ್ಟನಾದರೆ ಸಕಲ ದೇವತೆಗಳೂ ತೃಪ್ತರಾಗುವರು

ನೈತದ್ವಿಶೀಲೇನ ಚ ದಾಂಭಿಕೇನ
ನ ಲಿಂಗಿನಾ ಸ್ಥಾಪನಮತ್ರ ಕಾರ್ಯಂ ।
ವಿಪ್ರೇಣ ಕಾರ್ಯಂ ಶ್ರುತಿಪಾರಗೇಣ
ಗೃಹಸ್ಥಧರ್ಮಾಭಿರತೇನ ನಿತ್ಯಂ ॥೩೩॥
ಪಾಷಂಡಿನಂ ಯಸ್ತು ಕರೋತಿ ಭಕ್ತ್ಯಾ
ವಿಹಾಯ ವಿಪ್ರಾಞ್ಶ್ರುತಿಧರ್ಮಯುಕ್ತಾನ್ ।
ಗುರುಂ ಪ್ರತಿಷ್ಠಾದಿಷು ತತ್ರ ನೂನಂ
ಕುಲಕ್ಷಯಃ ಸ್ಯಾದಚಿರಾದಪೂಜ್ಯಃ ॥೩೪॥
ಸ್ಥಾನಂ ಪಿಶಾಚೈಃ ಪರಿಗೃಹ್ಯತೇ ವಾ
ಅಪೂಜ್ಯತಾಂ ಯಾತ್ಯಚಿರೇಣ ಲೋಕೇ ।
ವಿಪ್ರೈಃ ಕೃತಂ ಯಚ್ಛುಭದಂ ಕುಲೇ ಸ್ಯಾತ್
ಪ್ರಪೂಜ್ಯತಾಂ ಯಾತಿ ಚಿರಂ ಚ ಕಾಲಂ ॥೩೫॥

ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ದೇವತಾಸ್ನಾನಂ ನಾಮ
ಸಪ್ತಷಷ್ಟ್ಯಧಿಕದ್ವಿಶತತಮೋಽಧ್ಯಾಯಃ

---

೩೩. ನಡತೆಗೆಟ್ಟವನೂ, ದಾಂಭಿಕನೂ, ವೇಷಧಾರಿಯೂ ಆದವನು ಈ ಪ್ರತಿಷ್ಠಾಕಾರ್ಯವನ್ನು ಮಾಡಬಾರದು ವೇದಪಾರಂಗತನೂ ಗೃಹಸ್ಥಧರ್ಮದಲ್ಲಿ ಆಸಕ್ತಿಯುಳ್ಳವನೂ ಆದ ಬ್ರಾಹ್ಮಣೋತ್ತಮನು ನಡೆಸಬೇಕಾದ ಕೆಲಸವಿದು

೩೪ ವೇದಧರ್ಮನಿರತರಾದ ಬ್ರಾಹ್ಮಣರನ್ನು ಬಿಟ್ಟು ಅಪಶಾಸ್ತ್ರನಿಷ್ಠನಾದವನನ್ನು ಭಕ್ತಿಯಿಂದ ಪ್ರತಿಷ್ಠಾದಿಕರ್ಮಗಳಲ್ಲಿ ಆಚಾರ್ಯನನ್ನಾಗಿ ಯಾವನು ಮಾಡುವನೋ ಅವನ ವಂಶವು ನಾಶವಾಗುವುದು, ಮತ್ತು ಅವನು ಬೇಗನೆ ಮನ್ನಣೆಯನ್ನು ಕಳೆದುಕೊಳ್ಳುವನು

೩೫ ಅಷ್ಟೇ ಅಲ್ಲ, ಆ ದೇವಾಲಯವನ್ನು ಪಿಶಾಚಗಳು ಆಕ್ರಮಿಸುವುವು ಅದು ಬೇಗನೆ ಲೋಕದಲ್ಲಿ ಅಪೂಜ್ಯವೆನಿಸುವುದು ವೇದನಿಷ್ಠರಾದ ಬ್ರಾಹ್ಮಣರಿಂದ ಪ್ರತಿಷ್ಠಿತವಾದರೆ ಯಜಮಾನನ ವಂಶಕ್ಕೆ ಮೇಲನ್ನು ಉಂಟುಮಾಡುವುದು, ಮತ್ತು ಚಿರಕಾಲ ಪ್ರಖ್ಯಾತಿಯನ್ನು ಪಡೆಯುವುದು

## ಅಧ್ಯಾಯ ೨೬೭

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ದೇವರ ಅಭಿಷೇಕದ ವಿಧಾನವನ್ನು ವಿವರಿಸಿದೆ

ಮೊದಲು ಪಂಚಗವ್ಯದಿಂದಲೂ, ಬಳಿಕ ಮೊಸರು, ಹಾಲು, ಜೇನುತುಪ್ಪ, ಪುಷ್ಪೋದಕ, ಫಲೋದಕ, ಗಂಧೋದಕ ಮುಂತಾದವುಗಳಿಂದಲೂ ಅಭಿಷೇಕ ಮಾಡಬೇಕು ಯೋಗ್ಯತಾನುಸಾರವಾಗಿ ಚಿನ್ನದ, ಬೆಳ್ಳಿಯ, ತಾಮ್ರದ ಅಥವಾ ಮಣ್ಣಿನ ಕಲಶಗಳಿಂದ ಜಲಾಭಿಷೇಕವನ್ನು ಮಾಡಿ ಗಂಧ ಪುಷ್ಪ ಧೂಪದೀಪಾದ್ಯುಪಚಾರಗಳನ್ನು ಸಮರ್ಪಿಸಬೇಕು ಆಚಾರ್ಯನನ್ನು ವಸ್ತ್ರಾಲಂಕಾರಭೂಷಣಗಳಿಂದ ತೃಪ್ತಿಪಡಿಸಬೇಕು ಪ್ರತಿಷ್ಠಾದಿಕಾರ್ಯಗಳಿಗೆ ವೇದಪಾರಂಗತನೂ ಧರ್ಮನಿರತನೂ ಆದ ಬ್ರಾಹ್ಮಣೋತ್ತಮನನ್ನಲ್ಲದೆ ಕಪಟಿಯೂ ಕುಶಾಸ್ತ್ರಪ್ರವರ್ತಕನೂ ಆದವನನ್ನು ಆಚಾರ್ಯನನ್ನಾಗಿ ವರಿಸಬಾರದು

ಶ್ರೀಮತ್ಸ್ಯಮಹಾಪುರಾಣದಲ್ಲಿ ದೇವತಾಸ್ನಪನವೆಂಬ
ಇನ್ನೂರ ಅರವತ್ತೇಳನೆಯ ಅಧ್ಯಾಯವು ಮುಗಿದುದು

## ಅಥಾಷ್ಟಷಷ್ಟ್ಯಧಿಕದ್ವಿಶತತಮೋಽಧ್ಯಾಯಃ

|| ಋಷಯ ಊಚುಃ ||

ಪ್ರಾಸಾದಾಃ ಕೀದೃಶಾಃ ಸೂತ ಕರ್ತವ್ಯಾ ಭೂತಿಮಿಚ್ಛತಾ ।
ಪ್ರಮಾಣಂ ಲಕ್ಷಣಂ ತದ್ವದ್ವದ ವಿಸ್ತರತೋಽಧುನಾ || ೧ ||

|| ಸೂತ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಪ್ರಾಸಾದವಿಧಿನಿರ್ಣಯಂ ।
ವಾಸ್ತೌ ಪರೀಕ್ಷಿತೇ ಸಮ್ಯಗ್ವಾಸ್ತುದೇಹವಿಚಕ್ಷಣಃ || ೨ ||

ವಾಸ್ತೂಪಶಮನಂ ಕುರ್ಯಾತ್ಸಮಿದ್ಭಿರ್ಬಲಿಕರ್ಮಣಾ ।
ಜೀರ್ಣೋದ್ಧಾರೇ ತಥೋದ್ಯಾನೇ ತಥಾ ಗೃಹನಿವೇಶನೇ || ೩ ||

ನವಪ್ರಾಸಾದಭವನೇ ಪ್ರಾಸಾದಪರಿವರ್ತನೇ ।
ದ್ವಾರಾಭಿವರ್ತನೇ ತದ್ವತ್ಪ್ರಾಸಾದೋಪವನೇಷು ಚ || ೪ ||

---

೧ ಋಷಿಗಳು ಹೇಳಿದರು —ಓ ಸೂತಾ, ಶ್ರೇಯಸ್ಕಾಮನಾದವನು ಕಟ್ಟಿಸಬೇಕಾದ ದೇವಾಲಯಗಳು ಎಂತಹವು ? ಅವುಗಳ ಪ್ರಮಾಣವನ್ನೂ ಲಕ್ಷಣವನ್ನೂ ವಿಸ್ತಾರವಾಗಿ ಹೇಳು

೨ ಸೂತಪೌರಾಣಿಕನು ಹೇಳಿದನು --ಇನ್ನು ಮುಂದೆ ಆಲಯ ನಿರ್ಮಾಣದ ವಿಧಾನವನ್ನು ಹೇಳುವೆನು ವಾಸ್ತುಪುರುಷನ ಶರೀರರಚನೆಯನ್ನರಿತ ಯಜಮಾನನು ಮೊದಲು ನಿವೇಶನವನ್ನು ಚೆನ್ನಾಗಿ ಪರೀಕ್ಷಿಸಿ, ಸಮಿತ್ತುಗಳಿಂದಲೂ, ಬಲಿಕರ್ಮದಿಂದಲೂ ವಾಸ್ತುಶಾಂತಿಯನ್ನು ನಡೆಸಬೇಕು

೩-೪ ಕಟ್ಟಡಗಳನ್ನು ಜೀರ್ಣೋದ್ಧಾರ ಮಾಡುವಾಗ, ಉದ್ಯಾನಗಳನ್ನು ನಿರ್ಮಿಸುವಾಗ, ಮನೆಯನ್ನು ಕಟ್ಟುವಾಗ, ದೇವಾಲಯವನ್ನು ಹೊಸದಾಗಿ ನಿರ್ಮಿಸುವಾಗ ಅಥವಾ ಬೇರೆ ರೀತಿಯಲ್ಲಿ ವ್ಯತ್ಯಾಸಪಡಿಸುವಾಗ, ಬಾಗಿಲುಗಳನ್ನಿಡುವಾಗ, ಅರಮನೆಯನ್ನು ಕಟ್ಟುವಾಗ, ಉಪವನವನ್ನು ಏರ್ಪಡಿಸುವಾಗ ವಿವೇಕಶಾಲಿಯು ಮೊತ್ತಮೊದಲು ವಾಸ್ತುಶಾಂತಿಯನ್ನು ಮಾಡಬೇಕು

ವಾಸ್ತೂಪಶಮನಂ ಕುರ್ಯಾತ್ಪೂರ್ವಮೇವ ವಿಚಕ್ಷಣಃ ।
ಏಕಾಶೀತಿಪದಂ ಲಿಖ್ಯ ವಾಸ್ತುಮಧ್ಯೇ ತು ಪಿಷ್ಟಕೈಃ || ೫ ||

ಹೋಮಸ್ತ್ರಿಮೇಖಲೇ ಕಾರ್ಯಃ ಕುಂಡೇ ಹಸ್ತಪ್ರಮಾಣಕೇ ।
ಯವೈಃ ಕೃಷ್ಣತಿಲೈಸ್ತದ್ವತ್ಸಮಿದ್ಭಿಃ ಕ್ಷೀರವೃಕ್ಷಜೈಃ || ೬ ||

ಪಾಲಾಶೈಃ ಖಾದಿರೈಶ್ಚಾಪಿ ಮಧುಸರ್ಪಿಸ್ಸಮನ್ವಿತೈಃ ।
ಕುಶದೂರ್ವಾಮಯೈರ್ವಾಪಿ ಮಧುಸರ್ಪಿಸ್ಸಮನ್ವಿತೈಃ || ೭ ||

ಕಾರ್ಯಸ್ತು ಪಂಚಭಿರ್ಬಿಲ್ವೈರ್ಬಿಲ್ವಬೀಜೈಸ್ತಥಾಪಿ ಚ ।
ಹೋಮಾಂತೇ ಭಕ್ಷ್ಯಭೋಜ್ಯೈಸ್ತು ವಾಸ್ತುದೇಶೇ ಬಲಿಂ ಹರೇತ್ || ೮ ||

ತದ್ವದ್ವಿಶೇಷನೈವೇದ್ಯಮೇವಂ ದದ್ಯಾತ್ಕ್ರಮೇಣ ತು ।
ಈಶಕೋಣೇ ಘೃತಾಕ್ತಂ ತು ಶಿಖಿನೇ ವಿನಿವೇದಯೇತ್ || ೯ ||

---

೫-೭ ನಿವೇಶನದ ನಡುವೆ ಹಿಟ್ಟಿನಿಂದ ಪೂರ್ವಪಶ್ಚಿಮವಾಗಿ ಒಂಬತ್ತು ಮನೆಗಳೂ ದಕ್ಷಿಣೋತ್ತರವಾಗಿ ಒಂಬತ್ತು ಮನೆಗಳೂ ಎಂದರೆ ಒಟ್ಟು ಎಂಬತ್ತೊಂದು ಮನೆಗಳಿರುವಂತೆ ಚೌಕವನ್ನು ಬರೆಯಬೇಕು ಮೂರು ಸುತ್ತುಗಟ್ಟುಗಳಿಂದ ಕೂಡಿ ಒಂದು ಮೊಳ ಅಳತೆಯುಳ್ಳದಾಗಿರುವ ಕುಂಡದಲ್ಲಿ ಯವಧಾನ್ಯ ಮತ್ತು ಕರಿಯೆಳ್ಳಿನಿಂದಲೂ, ಅತ್ತಿ, ಅರಳಿ ಮುಂತಾದ ಹಾಲು ಮರಗಳ ಸಮಿತ್ತಿನಿಂದಲೂ, ಮುತ್ತುಗ ಮತ್ತು ಕಗ್ಗಲಿಯ ಸಮಿತ್ತುಗಳಿಂದಲೂ, ಅಥವಾ ದರ್ಭೆ ಮತ್ತು ಗರಿಕೆಗಳಿಂದಲೂ ಹೋಮಮಾಡಬೇಕು ಸಮಿತ್ತುಗಳನ್ನು ಜೇನುತುಪ್ಪದಲ್ಲೂ ತುಪ್ಪದಲ್ಲೂ ಅದ್ದಬೇಕು

೮ ಐದು ಬಿಲ್ವಫಲಗಳಿಂದಲೂ ಬಿಲ್ವಬೀಜಗಳಿಂದಲೂ ಹೋಮಮಾಡಬೇಕು ಹೋಮಾಂತದಲ್ಲಿ ಭಕ್ಷ್ಯಭೋಜ್ಯಗಳಿಂದ ಆಲಯದ ನಿವೇಶನದಲ್ಲಿ ಬಲಿಯನ್ನು ಹಾಕಬೇಕು

೯ ಅಲ್ಲದೆ ಮುಂದೆಹೇಳುವಂತೆ ವಿಶೇಷರೀತಿಯ ನೈವೇದ್ಯವನ್ನೂ ಸಮರ್ಪಿಸಬೇಕು ಈಶಾನ್ಯದಿಕ್ಕಿನಲ್ಲಿ ತುಪ್ಪಬೆರೆತ ಅನ್ನವನ್ನು ಅಗ್ನಿಗೆ ಒಪ್ಪಿಸಬೇಕು

ಓದನಂ ಸಫಲಂ ದದ್ಯಾತ್ಪರ್ಜನ್ಯಾಯ ಘೃತಾನ್ವಿತಂ ।
ಜಯಂತಾಯ ಧ್ವಜಾ ಪೀತಾ ಪೈಷ್ಟಂ ಕೂರ್ಮಂ ಚ ಸಂನ್ಯಸೇತ್ ॥೧೦॥

ಇಂದ್ರಾಯ ಪಂಚ ರತ್ನಾನಿ ಪೈಷ್ಟಂ ಚ ಕುಲಿಶಂ ತಥಾ ।
ವಿತಾನಕಂ ಚ ಸೂರ್ಯಾಯ ಧೂಮ್ರಂ ಸಕ್ತುಂ ತಥೈವ ಚ ॥೧೧॥

ಸತ್ಯಾಯ ಘೃತಗೋಧೂಮಂ ಮತ್ಸ್ಯಂ ದದ್ಯಾದ್ಭೃಶಾಯ ಚ ।
ಶಷ್ಕುಲೀಶ್ಚಾಂತರಿಕ್ಷಾಯ ದದ್ಯಾತ್ಸಕ್ತೂಂಶ್ಚ ವಾಯವೇ ॥೧೨॥

ಲಾಜಾಃ ಪೂಷ್ಣೇ ತು ದಾತವ್ಯಾ ವಿತಥೇ ಚಣಕಾದನಂ ।
ಗೃಹಕ್ಷತಾಯ ಮಧ್ವನ್ನಂ ಯಮಾಯ ಪಿಶಿತೌದನಂ ॥೧೩॥

ಗಂಧೌದನಂ ಚ ಗಂಧರ್ವೇ ಭೃಂಗರಾಜಸ್ಯ ಭೃಂಗಿಕಾಂ ।
ಮೃಗಾಯ ಯಾವಕಂ ದದ್ಯಾತ್ಪಿತೃಭ್ಯಃ ಕೃಸರಾ ಮತಾ ॥೧೪॥

---

೧೦ ಪರ್ಜನ್ಯನಿಗೆ ಹಣ್ಣನ್ನೂ ತುಪ್ಪದಲ್ಲಿ ಕಲಸಿದ ಅನ್ನವನ್ನೂ ಕೊಡಬೇಕು ಜಯಂತನಿಗೆ ಹೊಂಬಣ್ಣದ ಧ್ವಜಗಳನ್ನೂ ಹಿಟ್ಟಿನಿಂದ ಮಾಡಿದ ಆಮೆಯನ್ನೂ ನಿವೇದಿಸಬೇಕು

೧೧ ಇಂದ್ರನಿಗೆ ಐದು ವಿಧದ ರತ್ನ ಮತ್ತು ಹಿಟ್ಟಿನ ವಜ್ರಾಯುಧವನ್ನೂ, ಸೂರ್ಯನಿಗೆ ಮೇಲ್ಗಟ್ಟು ಮತ್ತು ಧೂಮ್ರವರ್ಣದ ಹುರಿಯಿಟ್ಟನ್ನೂ ಕೊಡಬೇಕು

೧೨ ಸೂರ್ಯನಿಗೆ ತುಪ್ಪದೊಡಗೂಡಿದ ಗೋಧವೆಯನ್ನೂ, ಭೃಶನಿಗೆ ಮತ್ಸ್ಯವನ್ನೂ, ಅಂತರಿಕ್ಷನಿಗೆ ಚಕ್ಕುಲಿಯನ್ನೂ, ವಾಯುವಿಗೆ ಹುರಿಯಿಟ್ಟನ್ನೂ ಒಪ್ಪಿಸಬೇಕು

೧೩ ಪೂಷ್ಣನಿಗೆ ಅರಳನ್ನೂ, ವಿತಥನಿಗೆ ಕಡಲೆಯ ಅನ್ನವನ್ನೂ, ಗೃಹಕ್ಷತನಿಗೆ ಜೇನುತುಪ್ಪಬೆರತ ಅನ್ನವನ್ನೂ, ಯಮನಿಗೆ ಮಾಂಸಮಿಶ್ರವಾದ ಅನ್ನವನ್ನೂ ಉಪಹಾರವಾಗಿ ಕೊಡಬೇಕು

೧೪ ಗಂಧರ್ವನಿಗೆ ಗಂಧದ ಅನ್ನವನ್ನೂ, ಭೃಂಗರಾಜನಿಗೆ ಭೃಂಗಿಕೆಯೆಂಬ ಭಕ್ಷ್ಯವಿಶೇಷವನ್ನೂ, ಮೃಗನಿಗೆ ಗೋಧಿಯ ರೊಟ್ಟಿಯನ್ನೂ, ಪಿತೃಗಳಿಗೆ ಕೃಸರವನ್ನೂ (ಕಿಚ್ಚಡಿ) ಅರ್ಪಿಸಬೇಕು

ದೌವಾರಿಕೇ ದಂತಕಾಷ್ಠಂ ಪೈಷ್ಟಂ ಕೃಷ್ಣಬಲಿಂ ತಥಾ ।
ಸುಗ್ರೀವೇಽಪೂಪಕಂ ದದ್ಯಾತ್ಪುಷ್ಪದಂತಾಯ ಪಾಯಸಂ ॥೧೫॥

ಕುಶಸ್ತಂಬೇನ ಸಂಯುಕ್ತಂ ತಥಾ ಪದ್ಮಂ ಚ ವಾರುಣೇ ।
ಪಿಷ್ಟಂ ಹಿರಣ್ಮಯಂ ದದ್ಯಾದಸುರಾಯ ಸುರಾ ಮತಾ ॥೧೬॥

ಘೃತೌದನಂ ಚ ಶೇಷಾಯ ಯವಾನ್ನಂ ಪಾಪಯಕ್ಷ್ಮಣೇ ।
ಘೃತಲಡ್ಡುಕಾಂಸ್ತು ರೋಗಾಯ ನಾಗೇ ಪುಷ್ಪಫಲಾನಿ ಚ ॥೧೭॥

ಸರ್ಪಿರ್ಮುಖ್ಯಾಯ ದಾತವ್ಯಂ ಮುದ್ಗೌದನಮತಃ ಪರಂ ।
ಭಲ್ಲಾಟಸ್ಥಾನಕೇ ದದ್ಯಾತ್ಸೋಮಾಯ ಘೃತಪಾಯಸಂ ॥೧೮॥

ಭಗಾಯ ಶಾಲಿಕಂ ಪಿಷ್ಟಂದಿತ್ಯೈ ಪೋಲಿಕಾಸ್ತಥಾ ।
ದಿತ್ಯೈ ತು ಪೂರಿಕಾ ದದ್ಯಾದಿತ್ಯೇವಂ ಬಾಹ್ಯತೋ ಬಲಿಃ ॥೧೯॥

---

೧೫ ದೌವಾರಿಕನಿಗೆ ಹಲ್ಲುಜ್ಜುವ ಕಡ್ಡಿಯನ್ನೂ, ಹಿಟ್ಟಿನಿಂದಾದ ಕೃಷ್ಣ ವರ್ಣದ ಬಲಿಯನ್ನೂ ಕೊಡಬೇಕು ಸುಗ್ರೀವನಿಗೆ ರೊಟ್ಟಿಯನ್ನೂ ಪುಷ್ಪದಂತನಿಗೆ ಪಾಯಸವನ್ನೂ ನಿವೇದನಮಾಡಬೇಕು

೧೬ ವರುಣನಿಗೆ ದರ್ಭಕಾಂಡವನ್ನೂ ಸುವರ್ಣಪದ್ಮವನ್ನೂ ಸಮರ್ಪಿಸಬೇಕು ಅಸುರನಿಗೆ ಮಧ್ಯವನ್ನು ಕೊಡಬೇಕು

೧೭ ಶೇಷನಿಗೆ ತುಪ್ಪದ ಅನ್ನ, ಪಾಪಯಕ್ಷ್ಮನಿಗೆ ಯವಧಾನ್ಯದ ಅನ್ನ, ರೋಗನಿಗೆ ತುಪ್ಪದ ಲಾಡು, ನಾಗನಿಗೆ ಹೂ ಹಣ್ಣುಗಳು ಇವನ್ನು ಬಲಿರೂಪವಾಗಿ ಒಪ್ಪಿಸಬೇಕು

೧೮ ಮುಖ್ಯನಿಗೆ ತುಪ್ಪವನ್ನೂ, ಭಲ್ಲಾಟನಿಗೆ ಹುಗ್ಗಿಯನ್ನವನ್ನೂ, ಸೋಮನಿಗೆ ತುಪ್ಪ ಮತ್ತು ಪಾಯಸವನ್ನೂ ಕೊಡಬೇಕು

೧೯ ಭಗನಿಗೆ ಅಕ್ಕಿಯ ಹಿಟ್ಟನ್ನೂ, ಅದಿತಿಗೆ ಹೋಳಿಗೆಯನ್ನೂ, ದಿತಿಗೆ ಪೂರಿಯನ್ನೂ ನೀವೇದನ ಮಾಡಬೇಕು ಇದೇ ಚೌಕದ ಹೊರಸುತ್ತಿನ ದೇವತೆಗಳಿಗೆ ಹಾಕಬೇಕಾದ ಬಲಿಯ ವಿಧಾನ

ಕ್ಷೀರಂ ಯಮಾಯ ದಾತವ್ಯಮಾಪವತ್ಸಾಯ ವೈ ದಧಿ ।
ಸಾವಿತ್ರೇ ಲಡ್ಡುಕಾನ್ ದದ್ಯಾತ್ಸಮರೀಚಂ ಕುಶೌದನಂ ॥೨೦॥
ಸವಿತುರ್ಗುಡಪೂಪಾಂಶ್ಚ ಜಯಾಯ ಘೃತಚಂದನಂ ।
ವಿವಸ್ವತೇ ಪುನರ್ದದ್ಯಾದ್ರಕ್ತಚಂದನಪಾಯಸಂ ॥೨೧॥
ಹರಿತಾಲೌದನಂ ದದ್ಯಾದಿಂದ್ರಾಯ ಘೃತಸಂಯುತಂ ।
ಘೃತೌದನಂ ಚ ಮಿತ್ರಾಯ ರುದ್ರಾಯ ಘೃತಪಾಯಸಂ ॥೨೨॥
ಆಮಂ ಪಕ್ವಂ ತಥಾ ಮಾಂಸಂ ದೇಯಂ ಸ್ಯಾದ್ರಾಜಯಕ್ಷ್ಮಣೇ ।
ಪೃಥ್ವೀಧರಾಯ ಮಾಂಸಾನಿ ಕೂಷ್ಮಾಂಡಾನಿ ಚ ದಾಪಯೇತ್ ॥೨೩॥
ಶರ್ಕರಾಪಾಯಸಂ ದದ್ಯಾದರ್ಯಮ್ಣೇ ಪುನರೇವ ಹಿ ।
ಪಂಚಗವ್ಯಂ ಯವಾಂಶ್ಚೈವ ತಿಲಾಕ್ಷತಮಯಂ ಚರುಂ ॥೨೪॥

---

೨೦ ಯಮನಿಗೆ ಹಾಲನ್ನೂ, ಆಪವತ್ಸನಿಗೆ ಮೊಸರನ್ನೂ ಕೊಡಬೇಕು ಸವಿತೃವಿಗೆ ಲಡ್ಡುಗಳನ್ನೂ ಮೆಣಸು ಮತ್ತು ದರ್ಭಾಗ್ರಗಳು ಮಿಶ್ರವಾದ ಅನ್ನವನ್ನೂ ಅರ್ಪಿಸಬೇಕು

೨೧ ಸವಿತೃವಿಗೆ ಸಿಹಿರೊಟ್ಟಿಯನ್ನೂ, ಜಯನಿಗೆ ತುಪ್ಪ ಮತ್ತು ಚಂದನವನ್ನೂ ನೈವೇದ್ಯ ಮಾಡಬೇಕು ವಿವಸ್ವಂತನಿಗಾದರೋ ಕೆಂಪು ಗಂಧವನ್ನೂ ಪಾಯಸವನ್ನೂ ಕೊಡಬೇಕು

೨೨ ಇಂದ್ರನಿಗೆ ತುಪ್ಪಬೆರಸಿದ ಹರಿದಳದ ಅನ್ನವನ್ನೂ, ಮಿತ್ರನಿಗೆ ತುಪ್ಪದ ಅನ್ನವನ್ನೂ, ರುದ್ರನಿಗೆ ಘೃತಮಿಶ್ರವಾದ ಪಾಯಸವನ್ನೂ ನಿವೇದನ ಮಾಡಬೇಕು

೨೩ ರಾಜಯಕ್ಷ್ಮನಿಗೆ ಹಸಿಯಮಾಂಸವನ್ನೂ, ಬೇಯಿಸಿದ ಮಾಂಸವನ್ನೂ ಬಲಿಯಾಗಿ ಹಾಕಬೇಕು ಪೃಥ್ವೀಧರನಿಗೆ ವಿಧವಿಧವಾದ ಮಾಂಸಗಳನ್ನೂ ಕುಂಬಳ ಕಾಯಿಗಳನ್ನೂ ಕೊಡಬೇಕು ಅರ್ಯಮನಿಗಾದರೋ ಸಕ್ಕರೆಯ ಪಾಯಸವನ್ನು ನೀಡಬೇಕು

೨೪-೨೫ ಪಂಚಗವ್ಯ, ಯವಧಾನ್ಯ, ಎಳ್ಳು ಮತ್ತು ಅಕ್ಷತೆಗಳು ಸೇರಿದ ಅನ್ನ, ಬಗೆಬಗೆಯ ಭಕ್ಷ್ಯಭೋಜ್ಯಗಳು ಇವನ್ನು ಬ್ರಹ್ಮನಿಗೆ ನಿವೇದಿಸಬೇಕು

ಭಕ್ಷ್ಯಂ ಭೋಜ್ಯಂ ಚ ವಿವಿಧಂ ಬ್ರಹ್ಮಣೇ ವಿನಿವೇದಯೇತ್ ।
ಏವಂ ಸಂಪೂಜಿತಾ ದೇವಾಃ ಶಾಂತಿಂ ಕುರ್ವಂತಿ ತೇ ಸದಾ ||೨೫||

ಸರ್ವೇಭ್ಯಃ ಕಾಂಚನಂ ದದ್ಯಾದ್ಬ್ರಾಹ್ಮಣೇ ಗಾಂ ಪಯಸ್ವಿನೀಂ ।
ರಾಕ್ಷಸೀನಾಂ ಬಲಿರ್ದೇಯಃ ಅಪಿ ಯಾದೃಗ್ಯಥಾ ಶೃಣು ||೨೬||

ಮಾಂಸೌದನಂ ಘೃತಂ ಪದ್ಮಕೇಸರಂ ರುಧಿರಾನ್ವಿತಂ ।
ಈಶಾನಭಾಗಮಾಶ್ರಿತ್ಯ ಚರಕ್ಯೈ ವಿನಿವೇದಯೇತ್ ||೨೭||

ಮಾಂಸೌದನಂ ಚ ರುಧಿರಂ ಹರಿದ್ರೌದನಮೇವ ಚ ।
ಆಗ್ನೇಯೀಂ ದಿಶಮಾಶ್ರಿತ್ಯ ವಿದಾರ್ಯೈ ವಿನಿವೇದಯೇತ್ ||೨೮||

ದಧ್ಯೋದನಂ ಸರುಧಿರಮಸ್ಥಿಖಂಡೈಶ್ಚ ಸಂಯುತಂ ।
ಪೀತರಕ್ತಂ ಬಲಿಂ ದದ್ಯಾತ್ಪೂತನಾಯೈ ಸರಕ್ಷಸೇ ||೨೯||

---

ದೇವತೆಗಳನ್ನು ಹೀಗೆ ಪೂಜಿಸಿ ತೃಪ್ತಿಪಡಿಸಿದರೆ ಅವರು ಯಾವಾಗಲೂ ಶಾಂತಿಯನ್ನು ನೀಡುವರು

೨೬ ಎಲ್ಲರಿಗೂ ಸುವರ್ಣದ ದಕ್ಷಿಣೆಯನ್ನು ಕೊಡಬೇಕು ಶಾಂತಿಕರ್ಮವನ್ನು ನಡೆಸಿದ ಬ್ರಾಹ್ಮಣನಿಗೆ ಕರೆಯುವ ಹಸುವನ್ನು ದಾನಮಾಡಬೇಕು ರಾಕ್ಷಸಿಯರಿಗೂ ಕೂಡ ಬಲಿಯನ್ನು ಹಾಕಬೇಕು ಅದೆಂತಹುದು? ಅದನ್ನು ಹಾಕುವ ವಿಧಾನವೇನು ಎಂಬುದನ್ನು ಕೇಳು

೨೭ ಮಾಂಸದ ಅನ್ನ, ತುಪ್ಪ, ರಕ್ತಮಿಶ್ರವಾದ ಪದ್ಮಕೇಸರ ಇವನ್ನು ಈಶಾನ್ಯ ಭಾಗದಲ್ಲಿರುವ ಚರಕಿಗೆ ಒಪ್ಪಿಸಬೇಕು

೨೮ ಮಾಂಸದ ಅನ್ನ, ರಕ್ತ, ಅರಸಿನದ ಅನ್ನ ಇವುಗಳನ್ನು ಆಗ್ನೇಯದಲ್ಲಿರುವ ವಿದಾರಿಯೆಂಬ ರಾಕ್ಷಸಿಗೆ ಕೊಡಬೇಕು

೨೯ ರಕ್ತವೂ ಮೂಳೆಯ ತುಂಡುಗಳೂ ಬೆರೆತ ಮೊಸರನ್ನವನ್ನೂ, ಹಳದಿಯ ಮತ್ತು ಕೆಂಪುಬಣ್ಣದ ಅನ್ನವನ್ನೂ ನೈಋತ್ಯ ದಿಕ್ಕಿನ ಪೂತನೆಗೆ ಹಾಕಬೇಕು

ವಾಯವ್ಯಾಂ ಪಾಪರಾಕ್ಷಸ್ಯೈ ಮತ್ಸ್ಯಮಾಂಸಂ ಸುರಾಸವಂ ।
ಪಾಯಸಂ ಚಾಪಿ ದಾತವ್ಯಂ ಸ್ವನಾವಮ್ನಾ ಸರ್ವತಃ ಕ್ರಮಾತ್ ॥೩೦॥

ನಮಸ್ಕಾರಾಂತಯುಕ್ತೇನ ಪ್ರಣವಾದ್ಯೇನ ಸಂಯುತಃ ।
ತತಃ ಸರ್ವೌಷಧೀಸ್ನಾನಂ ಯಜಮಾನಸ್ಯ ಕಾರಯೇತ್ ॥೩೧॥

ದ್ವಿಜಾ೯ ಸುಪೂಜಯೇದ್ಭಕ್ತ್ಯಾ ಯೇ ಚಾನ್ಯೇ ಗೃಹಮಾಗತಾಃ ।
ಏತದ್ವಾಸ್ತೂಪಶಮನಂ ಕೃತ್ವಾ ಕರ್ಮ ಸಮಾರಭೇತ್ ॥೩೨॥

ಪ್ರಾಸಾದಭವನೋದ್ಯಾನಪ್ರಾರಂಭೇ ವಿನಿವರ್ತನೇ ।
ಪುರವೇಶ್ಮಪ್ರವೇಶೇಷು ಸರ್ವದೋಷಾಪನುತ್ತಯೇ ॥೩೩॥

ರಕ್ಷೋಘ್ನಪಾವಮಾನೇನ ಸೂಕ್ತೇನ ಭವನಾದಿಕಂ ।
ನೃತ್ಯಮಂಗಲವಾದ್ಯೇನ ಕುರ್ಯಾದ್ಬ್ರಾಹ್ಮಣವಾಚನಂ ॥೩೪॥

---

೩೦ ವಾಯುವ್ಯದಲ್ಲಿರುವ ಪಾಪರಾಕ್ಷಸಿಗೆ ಮೀನಿನ ಮಾಂಸವನ್ನೂ, ಮದ್ಯವನ್ನೂ ಪಾಯಸವನ್ನೂ ಕೊಡಬೇಕು ಎಲ್ಲೆಡೆಗಳಲ್ಲಿಯೂ ಅವರವರ ಹೆಸರನ್ನು ನಿರ್ದೇಶಿಸಿ ಬಲಿಯನ್ನು ಹಾಕಬೇಕು

೩೧ ಪ್ರಣವಪೂರ್ವಕವಾಗಿ ಮಂತ್ರವನ್ನು ಜಪಿಸುತ್ತ ಪೂಜಿಸಿದ ದೇವತೆಗಳಿಗೆಲ್ಲ ನಮಸ್ಕಾರ ಮಾಡಬೇಕು ಬಳಿಕ ಯಜಮಾನನಿಗೆ ಎಲ್ಲ ವಿಧವಾದ ಮೂಲಿಕೆಗಳ ರಸದಿಂದ ಸ್ನಾನಮಾಡಿಸಬೇಕು

೩೨ ಬ್ರಾಹ್ಮಣರನ್ನೂ ಮನೆಗೆ ಬಂದಿರುವ ಉಳಿದವರನ್ನೂ ಭಕ್ತಿಯಿಂದ ಸತ್ಕರಿಸಬೇಕು ಈ ವಾಸ್ತುಶಾಂತಿಯನ್ನು ಮಾಡಿದ ಬಳಿಕ ಮನೆಯ ಕೆಲಸಕ್ಕೆ ಪ್ರಾರಂಭಮಾಡಬೇಕು

೩೩-೩೪ ಆಲಯದ, ಮನೆಯ ಮತ್ತು ಉದ್ಯಾನಗಳ ನಿರ್ಮಾಣವನ್ನು ಪ್ರಾರಂಭಿಸಿದಾಗಲೂ, ಮುಗಿಸಿದಾಗಲೂ, ಹೊಸದಾಗಿ ಕಟ್ಟಿದ ಊರುಗಳನ್ನೂ ಮನೆಗಳನ್ನೂ ಪ್ರವೇಶಿಸುವಾಗಲೂ ಸಕಲ ದೋಷಪರಿಹಾರಕ್ಕಾಗಿ ವಾಸ್ತುಶಾಂತಿಯನ್ನು ಮಾಡಬೇಕು ರಕ್ಷೋಘ್ನಸೂಕ್ತವನ್ನೂ ಪಾವಮಾನಸೂಕ್ತವನ್ನೂ ಪಾರಾಯಣ ಮಾಡಬೇಕು ನೃತ್ಯವೂ ಮಂಗಲವಾದ್ಯವೂ ನಡೆಯುತ್ತಿರಲು ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಹೇಳಿಸಬೇಕು

ಅನೇನ ವಿಧಿನಾ ಯಸ್ತು ಪ್ರತಿಸಂವತ್ಸರಂ ಬುಧಃ ।
ಗೃಹೇ ವಾಽಽಯತನೇ ಕುರ್ಯಾನ್ನ ಸ ದುಃಖಮವಾಪ್ನುಯಾತ್ ॥೩೫॥
ನ ಚ ವ್ಯಾಧಿಭಯಂ ತಸ್ಯ ನ ಚ ಬಂಧುಧನಕ್ಷಯಃ ।
ಜೀವೇದ್ವರ್ಷಶತಂ ಸ್ವರ್ಗೇ ಕಲ್ಪಮೇಕಂ ಚ ತಿಷ್ಠತಿ ॥೩೬॥

ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ವಾಸ್ತುದೋಷೋಪಶಮನಂ
ನಾಮಾಷ್ಟಷಷ್ಟ್ಯಧಿಕದ್ವಿಶತತಮೋಽಧ್ಯಾಯಃ

---

೩೫ ಈ ರೀತಿಯಾಗಿ ಪ್ರತಿವರ್ಷದಲ್ಲೂ ಮನೆಯಲ್ಲಾಗಲಿ ದೇವಸ್ಥಾನದಲ್ಲಾಗಲಿ ವಾಸ್ತುಶಾಂತಿಯನ್ನು ನಡೆಸಬೇಕು ಅಂತಹ ಮನುಷ್ಯನು ದುಃಖಕ್ಕೆ ಗುರಿಯಾಗುವುದಿಲ್ಲ

೩೬ ಅವನಿಗೆ ರೋಗಭಯವುಂಟಾಗದು ಬಂಧುಜನರ ವಿಯೋಗವೊದಗದು ಅವನು ನೂರು ವರ್ಷಗಳ ಕಾಲ ಭೂಮಿಯಲ್ಲಿ ಸುಖವಾಗಿ ಬಾಳಿ, ಬಳಿಕ ಸ್ವರ್ಗದಲ್ಲಿ ಒಂದು ಕಲ್ಪಕಾಲ ಆನಂದದಿಂದಿರುವನು

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ವಾಸ್ತುಶಾಂತಿ ವಿಧಾನವನ್ನು ವಿವರಿಸಿದೆ

ನಿವೇಶನದ ನಡುವೆ ಹಿಂದೆಯೇ ಹೇಳಿರುವಂತೆ ಪೂರ್ವಪಶ್ಚಿಮವಾಗಿ ಒಂಬತ್ತು, ದಕ್ಷಿಣೋತ್ತರವಾಗಿ ಒಂಬತ್ತು ಎಂದರೆ ಒಟ್ಟು ಎಂಬತ್ತೊಂದು ಮನೆಗಳಿರುವ ಚೌಕವನ್ನು ಹಿಟ್ಟಿನಿಂದ ಬರೆಯಬೇಕು ಆಯಾ ಸ್ಥಾನಗಳಲ್ಲಿ ದೇವತೆಗಳನ್ನು ಆವಾಹನಮಾಡಬೇಕು ಶಾಸ್ತ್ರೋಕ್ತವಾಗಿ ಹೋಮವನ್ನು ಮಾಡಿದ ಬಳಿಕ ಆ ದೇವತೆಗಳಿಗೆ ಇಷ್ಟವಾದ ವಸ್ತುಗಳ ಬಲಿಯನ್ನು ಸಮರ್ಪಿಸಬೇಕು ಬ್ರಾಹ್ಮಣರನ್ನೂ ಮನೆಗೆ ಬಂದಿರುವ ಇತರರನ್ನೂ ಸತ್ಕರಿಸಿ ಯಜಮಾನನು ಬಗೆಬಗೆಯ ಮೂಲಿಕೆಗಳ ರಸದಿಂದ ಸ್ನಾನಮಾಡಬೇಕು ಈ ವಾಸ್ತುಶಾಂತಿಯನ್ನು ಮಾಡುವ ಮನುಷ್ಯನಿಗೆ ಇಹಪರಗಳಲ್ಲಿ ಅತಿಶಯವಾದ ಸುಖವು ಲಭಿಸುತ್ತದೆ

ಶ್ರೀಮತ್ಸ್ಯಮಹಾಪುರಾಣದಲ್ಲಿ ವಾಸ್ತುದೋಷೋಪಶಮನವೆಂಬ
ಇನ್ನೂರ ಅರವತ್ತೆಂಟನೆಯ ಅಧ್ಯಾಯವು ಮುಗಿದುದು

## ಅಥೈಕೋನಸಪ್ತತ್ಯಧಿಕದ್ವಿಶತತಮೋಽಧ್ಯಾಯಃ

|| ಸೂತ ಉವಾಚ ||

ಏವಂ ವಾಸ್ತುಬಲಿಂ ಕೃತ್ವಾ ಭಜೇತ್ಷೋಡಶಭಾಗಿಕಂ ।
ತಸ್ಯ ಮಧ್ಯೇ ಚತುರ್ಭಿಸ್ತು ಭಾಗೈರ್ಗರ್ಭಂ ತು ಕಾರಯೇತ್ || ೧ ||

ಭಾಗದ್ವಾದಶಕಂ ಸಾರ್ಧಂ ತತಸ್ತು ಪರಿಕಲ್ಪಯೇತ್ ।
ಚತುರ್ದಿಕ್ಷು ತಥಾ ಜ್ಞೇಯಂ ನಿರ್ಗಮಂ ತು ತತೋ ಬುಧೈಃ || ೨ ||

ಚತುರ್ಭಾಗೇನ ಭಿತ್ತೀನಾಮುಚ್ಛ್ರಾಯಃ ಸ್ಯಾತ್ಪ್ರಮಾಣತಃ ।
ದ್ವಿಗುಣಃ ಶಿಖರೋಚ್ಛ್ರಾಯೋ ಭಿತ್ತ್ಯುಚ್ಛ್ರಾಯಪ್ರಮಾಣತಃ || ೩ ||

ಶಿಖರಾರ್ಧಸ್ಯ ಚಾರ್ಧೇನ ವಿಧೇಯಾ ತು ಪ್ರದಕ್ಷಿಣಾ ।
ಗರ್ಭಸೂತ್ರದ್ವಯಂ ಚಾಗ್ರೇ ವಿಸ್ತಾರೋ ಮಂಡಪಸ್ಯ ತು || ೪ ||

---

೧ ಸೂತಪೌರಾಣಿಕನು ಹೇಳಿದನು — ಹಿಂದೆ ಹೇಳಿದಂತೆ ವಾಸ್ತುಶಾಂತಿಯನ್ನು ಮಾಡಿದ ತರುವಾಯ ನಿವೇಶನದ ಆಳತೆಯನ್ನು ಹದಿನಾರು ಪಾಲುಮಾಡಿ ನಾಲ್ಕು ಭಾಗಗಳಿಂದ ಗರ್ಭಗೃಹವನ್ನು ರಚಿಸಬೇಕು

೨ ಹನ್ನೆರಡೂವರೆ ಭಾಗದಷ್ಟು ಪ್ರದೇಶವನ್ನು ಒಳಗಡೆಗೆ ಬಿಟ್ಟು, ಮಿಕ್ಕ ಭಾಗದಲ್ಲಿ ಪ್ರದಕ್ಷಿಣಾದಿ ಕಾರ್ಯಗಳಿಗೆ ಅನುಕೂಲಿಸುವಂತೆ ನಾಲ್ಕು ದಿಕ್ಕುಗಳಲ್ಲಿಯೂ ದಾರಿಯನ್ನು ಮಾಡಬೇಕು

೩ ಗೋಡೆಗಳು ನಾಲ್ಕರಲ್ಲೊಂದು ಭಾಗದಷ್ಟು ಎತ್ತರವಾಗಿರುವುವು ವಿಮಾನವು ಗೋಡೆಗಳಿಗಿಂತ ಎರಡರಷ್ಟು ಉನ್ನತವಾಗಿರುವುದು

೪ ಪ್ರಾಕಾರವು ಗೋಪುರದ ಎತ್ತರದಲ್ಲಿ ಕಾಲುಪಾಲಿನಷ್ಟು ಇರುವುದು ಮುಂಭಾಗದ ಮಂಟಪವು ಗರ್ಭಗೃಹದ ಎರಡರಷ್ಟು ಅಗಲವಾಗಿಯೂ, ಮೂರರಷ್ಟು ಉದ್ದವಾಗಿಯೂ ಇರಬೇಕು ಅದು ಭದ್ರಮಂಟಪಸಹಿತವಾಗಿಯೂ ಅಂದವಾಗಿಯೂ ಇರಬೇಕು

ಆಯುತಃ ಸ್ಯಾತ್ರಿಭಿರ್ಭಾಗೈರ್ಭದ್ರ್ಯಯುಕ್ತಃ ಸುಶೋಭನಃ ।
ಪಂಚಭಾಗೇನ ಸಂಭಜ್ಯ ಗರ್ಭಮಾನಂ ವಿಚಕ್ಷಣಃ ॥ ೫ ॥

ಭಾಗಮೇಕಂ ಗೃಹೀತ್ವಾ ತು ಪ್ರಾಗ್ಗ್ರೀವಂ ಕಲ್ಪಯೇದ್ಬುಧಃ ।
ಗರ್ಭಸೂತ್ರಸಮಾದ್ಭಾಗಾದಗ್ರತೋ ಮುಖಮಂಟಪಃ ॥ ೬ ॥

ಏತತ್ಸಾಮಾನ್ಯಮುದ್ದಿಷ್ಟಂ ಪ್ರಾಸಾದಸ್ಯೇಹ ಲಕ್ಷಣಂ ।
ತಥಾನ್ಯಂ ತು ಪ್ರವಕ್ಷ್ಯಾಮಿ ಪ್ರಾಸಾದಂ ಲಿಂಗಮಾನತಃ ॥ ೭ ॥

ಲಿಂಗಪೂಜಾಪ್ರಮಾಣೇನ ಕರ್ತವ್ಯಾ ಪೀಠಿಕಾ ಬುಧೈಃ ।
ಪೀಠಿಕಾರ್ಧೇನ ಭಾಗಃ ಸ್ಯಾತ್ತನ್ಮಾನೇನ ತು ಭಿತ್ತಯಃ ॥ ೮ ॥

ಬಾಹ್ಯಭಿತ್ತಿಪ್ರಮಾಣೇನ ಉತ್ಸೇಧಸ್ತು ಭವೇತ್ಪುನಃ ।
ಭಿತ್ತ್ಯುಚ್ಛ್ರಾಯಾತ್ತು ದ್ವಿಗುಣಃ ಶಿಖರಸ್ಯ ಸಮುಚ್ಛ್ರಯಃ ॥ ೯ ॥

---

೫-೬ ವಾಸ್ತುಶಾಸ್ತ್ರಜ್ಞನು ಗರ್ಭಗೃಹದ ಪ್ರಮಾಣವನ್ನು ಐದುಪಾಲು ಮಾಡಿ ಒಂದರಿಂದ ಪ್ರಾಗ್ಗ್ರೀವವನ್ನು* ರಚಿಸಬೇಕು ಗರ್ಭಗೃಹದ ಮುಂಗಡೆಯ ಮುಖಮಂಟಪವು ಅಳತೆಯಲ್ಲಿ ಗರ್ಭಗೃಹದಷ್ಟೇ ಇರುವುವು

೭ ಇದು ದೇವಾಲಯದ ಸಾಮಾನ್ಯಲಕ್ಷಣ ಲಿಂಗದ ಪ್ರಮಾಣಕ್ಕೆ ತಕ್ಕಂತೆ ಕಟ್ಟಬಹುದಾದ ಮತ್ತೊಂದು ಬಗೆಯ ಆಲಯವನ್ನು ಹೇಳುವೆನು

೮ ಲಿಂಗದಲ್ಲಿ ನಾಭಿಭಾಗ ಅಥವಾ ಪೂಜ್ಯಭಾಗವೆಂಬ ಒಂದು ಭಾಗ ವುಂಟೆಂದು ಹಿಂದೆ ಹೇಳಿದೆಯಷ್ಟೆ ! ಆ ಪೂಜ್ಯಭಾಗವು ಎಷ್ಟು ಅಳತೆಯಿರುವುದೋ ಪೀಠವೂ ಅಷ್ಟೇ ಅಳತೆಯಿರುವುದು ಪೀಠದಲ್ಲಿ ಅರ್ಧಭಾಗದ ಅಳತೆಯನ್ನು ಕನಿಷ್ಠಮಾನವೆಂದು ಪರಿಗಣಿಸಿ ಅದಕ್ಕೆ ತಕ್ಕಂತೆ ಗೋಡೆಗಳನ್ನು ಕಟ್ಟಬೇಕು

೯ ಆಲಯದ ಎತ್ತರವು ಹೊರಗೋಡೆಯ ಎತ್ತರದಷ್ಟೇ ಇರುವುದು ವಿಮಾನವು ಗೋಡೆಯ ಎರಡರಷ್ಟು ಉನ್ನತವಾಗಿರುವುದು

---

* ಪ್ರಾಗ್ಗ್ರೀವ, ಶುಕನಾಸ ಮುಂತಾದುವು ದೇವಸ್ಥಾನದ ಬೇರೆ ಬೇರೆ ಭಾಗಗಳು.

ಶಿಖರಸ್ಯ ಚತುರ್ಭಾಗಾತ್ಕರ್ತವ್ಯಾ ಚ ಪ್ರದಕ್ಷಿಣಾ ।
ಪ್ರದಕ್ಷಿಣಾಯಾಸ್ತು ಸಮಸ್ತ್ವಗ್ರತೋ ಮಂಡಪೋ ಭವೇತ್ ॥೧೦॥

ತಸ್ಯ ಚಾರ್ಧೇನ ಕರ್ತವ್ಯಸ್ತ್ವಗ್ರತೋ ಮುಖಮಂಟಪಃ ।
ಪ್ರಾಸಾದಾನ್ನಿರ್ಗತೌ ಕಾರ್ಯೌ ಕಪೋಲೌ ಗರ್ಭಮಾನತಃ ॥೧೧॥

ಊರ್ಧ್ವಂ ಭಿತ್ತ್ಯುಚ್ಛ್ರಯಾತ್ತಸ್ಯ ಮಂಜರೀಂ ತು ಪ್ರಕಲ್ಪಯೇತ್ ।
ಮಂಜರ್ಯಾಶ್ಚಾರ್ಧಭಾಗೇನ ಶುಕನಾಸಾಂ ಪ್ರಕಲ್ಪಯೇತ್ ॥೧೨॥

ಊರ್ಧ್ವಂ ತಥಾರ್ಧಭಾಗೇನ ವೇದೀಬಂಧೋ ಭವೇದಿಹ ।
ವೇದ್ಯಾಶ್ಚೋಪರಿ ಯಚ್ಛೇಷಂ ಕಂಠಶ್ಚಾಮಲಸಾರಕಃ ॥೧೩॥

ಏವಂ ವಿಭಜ್ಯ ಪ್ರಾಸಾದಂ ಶೋಭನಂ ಕಾರಯೇದ್ಬುಧಃ ।
ಅಥಾನ್ಯಚ್ಚ ಪ್ರವಕ್ಷ್ಯಾಮಿ ಪ್ರಾಸಾದಸ್ಯೇಹ ಲಕ್ಷಣಂ ॥೧೪॥

---

೧೦ ಪ್ರಾಕಾರವು ಗೋಪುರದ ಕಾಲುಪಾಲಿನಷ್ಟು ಎತ್ತರವಾಗಿರುವುದು ಆಲಯದ ಮುಂಭಾಗದ ಮಂಟಪವು ಪ್ರಾಕಾರದಷ್ಟೇ ಇರುವುದು ಗರ್ಭಗೃಹದ ಮುಂದಣಮಂಟಪವು ಇದರಲ್ಲಿ ಅರ್ಧದಷ್ಟಿರುವುದು

೧೧-೧೨ ದೇವಾಲಯದ ಎರಡು ಕಡೆಗಳಲ್ಲಿಯೂ ಕಪೋಲಗಳು ಹೊರಕ್ಕೆ ಸೀಡಿರುವಂತೆ ರಚಿಸಬೇಕು ಇವುಗಳ ಅಳತೆ ಗರ್ಭಗೃಹದ ಅಳತೆಯಷ್ಟೇ ಇರುವುದು ಅವರ ಮೇಲ್ಗಡೆ ಮಂಜರಿಯನ್ನು ನಿರ್ಮಿಸಬೇಕು ಅದು ಗೋಡೆ ಯಷ್ಟೇ ಎತ್ತರವಾಗಿರುವುದು ಶುಕನಾಸವು ಮಂಜರಿಯಲ್ಲಿ ಅರೆಪಾಲಿ ನಷ್ಟಿರಬೇಕು

೧೩ ಮೇಲೆ ಅರ್ಧಭಾಗದ ಅಳತೆಯಿಂದ ಜಗತೀಕಟ್ಟೆಯನ್ನು ರಚಿಸ ಬೇಕು ಜಗತಿಯ ಮೇಲ್ಗಡೆ ಉಳಿದಿರುವ ಭಾಗವು ಕಂಠವೆನಿಸುವುದು ಅದಕ್ಕೆ ಅಮಲಸಾರಕವೆಂದೂ ಹೆಸರು

೧೪ ವಾಸ್ತುಶಾಸ್ತ್ರಜ್ಞನಾದ ಯಜಮಾನನು ಈ ರೀತಿಯಲ್ಲಿ ಬೇರೆ ಬೇರೆ ಭಾಗಗಳು ಪ್ರಮಾಣಾನುರೂಪವಾಗಿ ಇರುವಂತೆ ದೇವಾಲಯವನ್ನು ಕಟ್ಟಿಸಬೇಕು ಆಲಯದ ಲಕ್ಷಣವು ಇನ್ನೂ ಒಂದು ವಿಧವಾಗಿರುವುದುಂಟು ಅದನ್ನು ಹೇಳು ವೆನು ಕೇಳಿ

ಗರ್ಭಮಾನಪ್ರಮಾಣೇನ ಪ್ರಾಸಾದಂ ಶೃಣುತ ದ್ವಿಜಾಃ ।
ವಿಭಜ್ಯ ನವಧಾ ಗರ್ಭಂ ಮಧ್ಯೇ ಸ್ಯಾಲ್ಲಿಂಗಪೀಠಿಕಾ ॥೧೫॥

ಪಾದಾಷ್ಟಕಂ ತು ರುಚಿರಂ ಪಾರ್ಶ್ವತಃ ಪರಿಕಲ್ಪಯೇತ್ ।
ಮಾನೇನ ತೇನ ವಿಸ್ತಾರೋ ಭಿತ್ತೀನಾಂ ತು ವಿಧೀಯತೇ ॥೧೬॥

ಪಾದಂ ಪಂಚಗುಣಂ ಕೃತ್ವಾ ಭಿತ್ತೀನಾಮುಚ್ಛ್ರಯೋ ಭವೇತ್ ।
ಸ ಏವ ಶಿಖರಸ್ಯಾಪಿ ದ್ವಿಗುಣಃ ಸ್ಯಾತ್ಸಮುಚ್ಛ್ರಯಃ ॥೧೭॥

ಚತುರ್ಧಾ ಶಿಖರಂ ಭಜ್ಯ ಅರ್ಧಭಾಗದ್ವಯಸ್ಯ ತು
ಶುಕನಾಸಂ ಪ್ರಕುರ್ವೀತ ತೃತೀಯೇ ವೇದಿಕಾ ಮತಾ ॥೧೮॥

ಕಂಠಮಾಮಲಸಾರಂ ತು ಚತುರ್ಥೇ ಪರಿಕಲ್ಪಯೇತ್ ।
ಕಪೋಲಯೋಸ್ತು ಸಂಹಾರೋ ದ್ವಿಗುಣೋಽತ್ರ ವಿಧೀಯತೇ ॥೧೯॥

---

೧೫ ಎಲೈ ದ್ವಿಜರೇ, ಗರ್ಭಗುಡಿಯ ಪ್ರಮಾಣವನ್ನು ಅನುಸರಿಸಿ ನಿರ್ಮಿಸ ಬಹುದಾದ ದೇವಸ್ಥಾನದ ಲಕ್ಷಣವನ್ನು ಕೇಳಿರಿ ಗರ್ಭಾಂಗಣವನ್ನು ಒಂಬತ್ತು ಭಾಗಗಳಾಗಿ ವಿಂಗಡಿಸಿ ಮಧ್ಯದಲ್ಲಿ ಲಿಂಗಪೀಠವನ್ನು ಸ್ಥಾಪಿಸಬೇಕು

೧೬ ಗರ್ಭಗೃಹದ ಒಂಬತ್ತನಯ ಎಂಟು ಪಾಲು ಅಳತೆಯಿರುವಂತೆ ಅದರ ಪಕ್ಕದಲ್ಲಿ ಮನೋಹರವಾದ ಮುಖಮಂಟಪವನ್ನು ರಚಿಸಬೇಕು ಗೋಡೆಗಳ ಅಗಲವೂ ಅದೇ ಅಳತೆಯಿಂದಿರುವುದು

೧೭ ಗೋಡೆಗಳು ಗರ್ಭಗೃಹದ ವಿಸ್ತಾರದ ಒಂಬತ್ತನೆಯ ಐದು ಪಾಲಿನಷ್ಟು ಎತ್ತರವಾಗಿರುವುವು ವಿಮಾನದ ಎತ್ತರವು ಗೋಡೆಯ ಎತ್ತರದ ಎರಡರಷ್ಟಿರುವುದು

೧೮-೧೯ ಗೋಪುರದ ಅಳತೆಯಷ್ಟು ಪ್ರದೇಶವನ್ನು ಗರ್ಭಗೃಹದಿಂದ ಮುಂದಕ್ಕೆ ತೆಗೆದುಕೊಂಡು, ಅದನ್ನು ನಾಲ್ಕುಪಾಲು ಮಾಡಿ, ಎರಡು ಭಾಗಗಳಲ್ಲಿ ಶುಕನಾಸವನ್ನೂ, ಮೂರನೆಯದರಲ್ಲಿ ವೇದಿಕೆಯನ್ನೂ, ನಾಲ್ಕನೆಯದರಲ್ಲಿ ಆಮಲ

**ಶೋಭನೈಃ ಪತ್ರವಲ್ಲೀಭಿರಂಡಕೈಶ್ಚ ವಿಭೂಷಿತಃ ।**
**ಪ್ರಾಸಾದೋಽಯಂ ತೃತೀಯಸ್ತು ಮಯಾ ತುಭ್ಯಂ ನಿವೇದಿತಃ ॥೨೦॥**

**ಸಾಮಾನ್ಯಮಪರಂ ತದ್ವತ್ಪ್ರಾಸಾದಂ ಶೃಣುತ ದ್ವಿಜಾಃ ।**
**ತ್ರಿಭೇದಂ ಕಾರಯೇತ್ಕ್ಷೇತ್ರಂ ಯತ್ರ ತಿಷ್ಠಂತಿ ದೇವತಾಃ ॥೨೧॥**

**ರಥಾಂಕಿತೇನ ಮಾನೇನ ಬಾಹ್ಯಭಾಗವಿನಿರ್ಗತಂ ।**
**ನೇಮೀಪಾದೇನ ವಿಸ್ತೀರ್ಣಾ ಪ್ರಾಸಾದಸ್ಯ ಸಮಂತತಃ ॥೨೨॥**

**ಗರ್ಭಂ ತು ದ್ವಿಗುಣಂ ಕುರ್ಯಾತ್ತಸ್ಯ ಮಾನಂ ಭವೇದಿಹ ।**
**ಸಏವ ಭಿತ್ತೇರುತ್ಸೇಧೋ ದ್ವಿಗುಣಂ ಶಿಖರೋ ಮತಃ ॥೨೩॥**

**ಪ್ರಾಗ್ಗ್ರೀವಃ ಪಂಚಭಾಗೇನ ನಿಷ್ಕ್ರಾಸಸ್ತಸ್ಯ ಚೋಚ್ಯತೇ ।**
**ಕಾರಯೇತ್ಸುಷಿರಂ ತದ್ವತ್ಪ್ರಾಕಾರಸ್ಯ ತ್ರಿಭಾಗತಃ ॥೨೪॥**

---

ಸಾರವೆಂಬ ಕಂಠವನ್ನೂ ರಚಿಸಬೇಕು ಈ ಕಂಠದೇಶದಲ್ಲೇ ಇಕ್ಕಡೆಗಳಲ್ಲಿ ಕಪೋಲಗಳು ಹೊರಕ್ಕೆ ನೀಡಿಕೊಂಡಿರುವುವು

೨೦ ಈಗ ವಿವರಿಸಿದುದು ಮೂರನೆಯ ಬಗೆಯ ದೇವಾಲಯದ ಲಕ್ಷಣ ಈ ಪ್ರಾಸಾದವು ಮಂಗಳಕರವಾದ ಎಲೆಬಳ್ಳಿಗಳ ಚಿತ್ರಗಳಿಂದಲೂ, ವಿಧವಿಧವಾದ ಅಂಡಾಕಾರದ ಆಕೃತಿಗಳಿಂದಲೂ ಅಲಂಕೃತವಾಗಿರುವುದು

೨೧-೨೪ ಓ ಬ್ರಾಹ್ಮಣರೇ, ಸಾಧಾರಣವಾದ ಮತ್ತೊಂದು ಬಗೆಯ ದೇವಾಲಯದ ಲಕ್ಷಣವನ್ನು ಹೇಳುವೆನು ಕೇಳಿ ವಾಸ್ತುಶಾಂತಿಯನ್ನು ನಡೆಸಿ ದೇವತೆಗಳನ್ನು ಆವಾಹನಮಾಡಿದ ಬಳಿಕ, ನಿವೇಶನವನ್ನು ಚಕ್ರದ ಆಕಾರದಲ್ಲಿ ಅದರ ಪ್ರಮಾಣಕ್ಕೆ ಅನುಗುಣವಾಗಿ ಮೂರು ಭಾಗವಾಗಿ ವಿಂಗಡಿಸಬೇಕು ಕಪೋಲವು ಹೊರಕ್ಕೆ ಚಾಚಿಕೊಂಡೇ ಇರುವುದು ಆಲಯದ ಸುತ್ತಣ ಹೊರ ಭಾಗವು ಚಕ್ರದ ಪುಟ್ಟೀಮರದ ಆಕಾರವಾಗಿ ಅದೇ ಪ್ರಮಾಣವನ್ನು ಅನುಸರಿಸಿ ಇರುವುದು ಗರ್ಭಗೃಹಪ್ರಮಾಣವು ಇದರ ಎರಡರಷ್ಟಿರುವುದು ಗೋಡೆಗಳ ಎತ್ತರವು ಗರ್ಭಗೃಹದ ಅಗಲದಷ್ಟೇ ಇರುವುದು ವಿಮಾನವು ಇದರ ಎರಡರಷ್ಟು ಎತ್ತರವಾಗಿರುವುದು ಗರ್ಭಗೃಹದ ಐದನೆಯ ಒಂದು ಭಾಗದ ಪ್ರಮಾಣದಿಂದ

ಪ್ರಾಗ್ಗ್ರೀವಂ ಪಂಚಭಾಗೇನ ನಿಷ್ಕಾಸೇನ ವಿಶೇಷತಃ ।
ಕುರ್ಯಾದ್ವಾ ಪಂಚಭಾಗೇನ ಪ್ರಾಗ್ಗ್ರೀವಂ ಕರ್ಣಮೂಲತಃ ॥೨೫॥

ಸ್ಥಾಪಯೇತ್ಕನಕಂ ತತ್ರ ಗರ್ಭಾಂತೇ ದ್ವಾರಮೂಲತಃ ।
ಏವಂ ತು ತ್ರಿವಿಧಂ ಕುರ್ಯಾಜ್ಜ್ಯೇಷ್ಠಮಧ್ಯಕನೀಯಸಂ ॥೨೬॥

ಲಿಂಗಮಾನಾನುಭೇದೇನ ರೂಪಭೇದೇನ ವಾ ಪುನಃ ।
ಏತೇ ಸಮಾಸತಃ ಪ್ರೋಕ್ತಾ ನಾಮತಃ ಶೃಣುತಾಧುನಾ ॥೨೭॥

ಮೇರುಮಂದರಕೈಲಾಸಕುಂಭಸಿಂಹಮೃಗಾಸ್ತಥಾ ।
ವಿಮಾನಚ್ಛಂದಕಸ್ತದ್ವಚ್ಚತುರಸ್ರಸ್ತಥೈವ ಚ ॥೨೮॥

ಅಷ್ಟಾಸ್ರಃ ಷೋಡಶಾಸ್ರಶ್ಚ ವರ್ತುಲಃ ಸರ್ವಭದ್ರಕಃ ।
ಸಿಂಹಾಸ್ಯೋ ನಂದನಶ್ಚೈವ ನಂದಿವರ್ಧನಕಸ್ತಥಾ ॥೨೯॥

ಹಂಸೋ ವೃಷಃ ಸುಪರ್ಣಶ್ಚ ಪದ್ಮಕೋಽಥ ಸಮುದ್ಗಕಃ ।
ಪ್ರಾಸಾದಾಃ ನಾಮತಃ ಪ್ರೋಕ್ತಾ ವಿಭಾಗಂ ಶೃಣುತ ದ್ವಿಜಾಃ ॥೩೦॥

---

ಪ್ರಾಗ್ಗ್ರೀವವನ್ನು ನಿಷ್ಕಾನಸಹಿತವಾಗಿ ನಿರ್ಮಿಸಬೇಕು ಸುಷಿರದ ಪರಿಮಾಣವು ಪ್ರಾಕಾರದ ಮೂರನೆಯ ಒಂದುಪಾಲಿನಷ್ಟು ಇರುವುದು ಮೇಲೆ ಹೇಳಿದಷ್ಟೇ ಅಳತೆಯಿಂದ ಪ್ರಾಗ್ಗ್ರೀವವನ್ನು ಕರ್ಣಮೂಲದಿಂದಾದರೂ ಕಟ್ಟಬಹುದು ಗರ್ಭ ಗೃಹದ ಅಂಚಿನಲ್ಲಿ ಬಾಗಿಲಿನ ಕೆಳಗಡೆ ನೆಲದೊಳಗೆ ಬಂಗಾರವನ್ನು ಹೂಳಬೇಕು

೨೬-೨೭ ಲಿಂಗದ ಪ್ರಮಾಣಕ್ಕೆ ಅನುಗುಣವಾಗಿಯಾಗಲಿ ರೂಪಭೇದ ದಿಂದಾಗಲಿ ದೇವಾಲಯಗಳನ್ನು ಜ್ಯೇಷ್ಠ, ಮಧ್ಯ ಮತ್ತು ಕನಿಷ್ಠಗಳೆಂದು ಮೂರು ವಿಧವಾಗಿ ನಿರ್ಮಿಸಬಹುದು ಇದುವರೆಗೆ ದೇವಾಲಯಗಳ ಲಕ್ಷಣವನ್ನು ಸಂಗ್ರಹ ವಾಗಿ ಹೇಳಿದುದಾಯಿತು ಇನ್ನು ಅವುಗಳ ಹೆಸರನ್ನು ಹೇಳುವೆನು ಕೇಳಿ

೨೮-೩೦ ಮೇರು, ಮಂದರ, ಕೈಲಾಸ, ಕುಂಭ, ಸಿಂಹ, ಮೃಗ, ವಿಮಾನ ಛಂದಕ, ಚತುರಸ್ರ, ಅಷ್ಟಾಸ್ರ, ಷೋಡಶಾಸ್ರ, ವರ್ತಲ, ಸರ್ವಭದ್ರ, ಸಿಂಹಾಸ್ಯ, ನಂದನ, ನಂದಿವರ್ಧನಕ, ಹಂಸ, ವೃಷ, ಸುಪರ್ಣ, ಪದ್ಮಕ, ಸಮುದ್ಗಕ ಇವೆಲ್ಲವೂ ಬಗೆಬಗೆಯ ದೇವಾಲಯಗಳು ಇವುಗಳ ಲಕ್ಷಣವನ್ನು ಹೇಳುವೆನು

ಶತಶೃಂಗಶ್ಚತುರ್ದ್ವಾರೋ ಭೂಮಿಕಾಷೋಡಶೋಚ್ಛ್ರಿತಃ ।
ನಾನಾವಿಚಿತ್ರಶಿಖರೋ ಮೇರುಃ ಪ್ರಾಸಾದ ಉಚ್ಯತೇ ॥೩೧॥

ಮಂದರೋ ದ್ವಾದಶ ಪ್ರೋಕ್ತಃ ಕೈಲಾಸೋ ನವಭೂಮಿಕಃ ।
ವಿಮಾನಚ್ಛಂದಕಸ್ತದ್ವದನೇಕಶಿಖರಾನನಃ ॥೩೨॥

ಸ ಚಾಷ್ಟಭೂಮಿಕಸ್ತದ್ವತ್ಸಪ್ತಭಿರ್ನಂದಿವರ್ಧನಃ ।
ವಿಷಾಣಕಸಮಾಯುಕ್ತೋ ನಂದನಃ ಸ ಉದಾಹೃತಃ ॥೩೩॥

ಷೋಡಶಾಸ್ರಸಮಾಯುಕ್ತೋ ನಾನಾರೂಪಸಮನ್ವಿತಃ ।
ಅನೇಕಶಿಖರಸ್ತದ್ವತ್ಸರ್ವತೋಭದ್ರ ಉಚ್ಯತೇ ॥೩೪॥

ಚಿತ್ರಶಾಲಾಸಮೋಪೇತೋ ವಿಜ್ಞೇಯಃ ಪಂಚಭೂಮಿಕಃ ।
ವಲಭೀಚ್ಛಂದಕಸ್ತದ್ವದನೇಕಶಿಖರಾನನಃ ॥೩೫॥

---

೩೧ ಚಿತ್ರವಿಚಿತ್ರವಾದ ನೂರಾರು ಶಿಖರಗಳು, ನಾಲ್ಕು ಬಾಗಿಲುಗಳು, ಹದಿನಾರು ಮಹಡಿಗಳು ಇವುಗಳಿಂದ ಕೂಡಿ ಕಂಗೊಳಿಸುವ ಪ್ರಾಸಾದವನ್ನು ಮೇರುವೆನ್ನುತ್ತಾರೆ

೩೨-೩೩ ಮೇಲಿನ ಲಕ್ಷಣಗಳಿಂದ ಕೂಡಿ ಹನ್ನೆರಡು ಉಪ್ಪರಿಗೆಗಳಿದ್ದರೆ ಮಂದರವೆಂದೂ, ಒಂಬತ್ತು ಇದ್ದರೆ ಕೈಲಾಸವೆಂದೂ ಕರೆಯಲ್ಪಡುವುದು ಹಲವು ಶಿಖರಗಳೂ ಬಾಗಿಲುಗಳೂ ಇದ್ದು, ಉಪ್ಪರಿಗೆಗಳು ಮಾತ್ರ ಎಂಟಿದ್ದರೆ ವಿಮಾನ ಚ್ಛಂದಕವೆನ್ನುವರು ಏಳು ಮಹಡಿಗಳುಳ್ಳ ಆಲಯವು ನಂದಿವರ್ಧನವೆನಿಸಿ ಕೊಳ್ಳುವುದು ಶೃಂಗಸಹಿತವಾದ ದೇವಾಲಯವನ್ನು ನಂದನವೆನ್ನುವರು

೩೪ ಹದಿನಾರು ಮೂಲೆಗಳೂ, ನಾನಾರೂಪಗಳೂ, ಅನೇಕ ಶಿಖರಗಳೂ ಉಳ್ಳ ಪ್ರಾಸಾದವು ಸರ್ವತೋಭದ್ರವೆನಿಸುವುದು

೩೫ ಚಿತ್ರಶಾಲೆಯಿಂದ ಕೂಡಿ ಐದು ಮಹಡಿಗಳೂ ಅನೇಕ ಶಿಖರಗಳೂ ಕಂಗೊಳಿಸುವ ದೇವಾಲಯವನ್ನು ವಲಭೀಚ್ಛಂದಕವೆಂದು ವಾಸ್ತುಶಾಸ್ತ್ರಜ್ಞರು ಕರೆಯುತ್ತಾರೆ

ವೃಷಸ್ಯೋಚ್ಛ್ರಾಯತಸ್ತುಲ್ಯೋ ಮಂಡಲಶ್ಚಾಸ್ರವರ್ಜಿತಃ ।
ಸಿಂಹಃ ಸಿಂಹಾಕೃತಿರ್ಜ್ಞೇಯೋ ಗಜೋ ಗಜಸಮಸ್ತಥಾ ॥೩೬॥

ಕುಂಭಃ ಕುಂಭಾಕೃತಿಸ್ತದ್ವದ್ಭೂಮಿಕಾನವಕೋಚ್ಛ್ರಯಃ ।
ಅಂಗುಲೀಯಕಸಂಸ್ಥಾನಃ ಪಂಚಾಂಡಕವಿಭೂಷಿತಃ ॥೩೭॥

ಷೋಡಶಾಸ್ರಃ ಸಮಂತಾಚ್ಚ ವಿಜ್ಞೇಯಃ ಸ ಸಮುದ್ಗಕಃ ।
ಪಾರ್ಶ್ವಯೋಶ್ಚಂದ್ರಶಾಲೇಽಸ್ಯ ಉಚ್ಛ್ರಾಯೋ ಭೂಮಿಕಾದ್ವಯಂ ॥೩೮॥

ತಥೈವ ಪದ್ಮಕಃ ಪ್ರೋಕ್ತ ಉಚ್ಛ್ರಾಯೋ ಭೂಮಿಕಾತ್ರಯಂ ।
ಷೋಡಶಾಸ್ರಃ ಸ ವಿಜ್ಞೇಯೋ ವಿಚಿತ್ರಶಿಖರಃ ಶುಭಃ ॥೩೯॥

ಮೃಗರಾಜಸ್ತು ವಿಖ್ಯಾತಶ್ಚಂದ್ರಶಾಲಾವಿಭೂಷಿತಃ ।
ಪ್ರಾಗ್ಗ್ರೀವೇಣ ವಿಶಾಲೇನ ಭೂಮಿಕಾಸು ಷಡುನ್ನತಃ ॥೪೦॥

---

೩೬ ದೇವಾಲಯವು ಎತ್ತಿನಂತೆ ಎತ್ತರವಾಗಿದ್ದರೆ ವೃಷವೆಂದೂ, ಸಿಂಹದ ಆಕಾರದಿಂದಿದ್ದರೆ ಸಿಂಹವೆಂದೂ, ಗಜಕ್ಕೆ ಸದೃಶವಾಗಿದ್ದರೆ ಗಜವೆಂದೂ ಬೇರೆಬೇರೆ ಮೂಲೆಗಳಿಲ್ಲದೆ ವರ್ತುಲಾಕಾರವಾಗಿದ್ದರೆ ಮಂಡಲವೆಂದೂ ಹೇಳುತ್ತಾರೆ

೩೭-೩೮ ಕುಂಭಾಕಾರವಾಗಿ, ಒಂಬತ್ತು ಮಹಡಿಗಳಿಂದ ಕೂಡಿ, ಉಂಗುರದ ರೂಪದಿಂದಲೂ ಅಂಡಾಕಾರದ ಐದು ಕಟ್ಟಡಗಳಿಂದಲೂ ಶೋಭಿಸುವ ಪ್ರಾಸಾದಕ್ಕೆ ಕುಂಭವೆಂದು ಹೆಸರು ಹದಿನಾರು ಮುಖಗಳುಳ್ಳ ಆಲಯವು ಸಮುದ್ಗಕವೆನಿಸಿಕೊಳ್ಳುವುದು ಇದರ ಎರಡು ಕಡೆಗಳಲ್ಲಿಯೂ ಚಂದ್ರಶಾಲೆಗಳಿರುವುವು ಇದು ಎರಡು ಉಪ್ಪರಿಗೆಗಳ ಎತ್ತರದಿಂದಿರುವುದು

೩೯ ಮೂರು ಉಪ್ಪರಿಗೆಗಳ ಎತ್ತರವಾಗಿ, ಹದಿನಾರು ಮುಖಗಳಿಂದ ಕೂಡಿ, ನಾನಾವಿಧವಾದ ಶಿಖರಗಳಿಂದ ಕಂಗೊಳಿಸುವ ಮಂಗಳಮಯವಾದ ದೇವಾಲಯವನ್ನು ಪದ್ಮಕವೆಂದು ಕರೆಯುತ್ತಾರೆ

೪೦ ಚಂದ್ರಶಾಲೆಯಿಂದ ಅಲಂಕೃತವಾಗಿ ವಿಶಾಲವಾದ ಪ್ರಾಗ್ಗ್ರೀವದಿಂದಲೂ ಆರು ಉಪ್ಪರಿಗೆಗಳಿಂದಲೂ ಪ್ರಕಾಶಿಸುವ ಪ್ರಾಸಾದವು ಮೃಗರಾಜವೆಂದು ಕರೆಯಲ್ಪಡುವುದು

**ಅನೇಕಚಂದ್ರಶಾಲಸ್ತು ಗಜಃ ಪ್ರಾಸಾದ ಇಷ್ಯತೇ ।**
**ಪರ್ಯಸ್ತಗೃಹರಾಜೋ ವೈ ಗರುಡೋ ನಾಮ ನಾಮತಃ ॥೪೧॥**

**ಸಪ್ತಭೂಮ್ಯುಚ್ಛ್ರಯಸ್ತದ್ವಚ್ಚಂದ್ರಶಾಲಾತ್ರಯಾನ್ವಿತಃ ।**
**ಭೂಮಿಕಾಷಡಶೀತಿಸ್ತು ಬಾಹ್ಯತಃ ಸರ್ವತೋ ಭವೇತ್ ॥೪೨॥**

**ತಥಾನ್ಯೋ ಗರುಡಸ್ತದ್ವದುಚ್ಛ್ರಾಯಾದ್ದಶಭೂಮಿಕಃ ।**
**ಪದ್ಮಕಃ ಷೋಡಶಾಸ್ರಸ್ತು ಭೂಮಿದ್ವಯಮಥಾಧಿಕಃ ॥೪೩॥**

**ಪದ್ಮತುಲ್ಯಪ್ರಮಾಣೇನ ಶ್ರೀವೃಕ್ಷಕ ಇತಿ ಸ್ಮೃತಃ ।**
**ಪಂಚಾಂಡಕೋ ದ್ವಿಭೂಮಿಶ್ಚ ಗರ್ಭೇ ಹಸ್ತಚತುಷ್ಟಯಂ ॥೪೪॥**

**ವೃಷೋ ಭವತಿ ನಾಮ್ನಾಽಯಂ ಪ್ರಾಸಾದಃ ಸಾರ್ವಕಾಮಿಕಃ ।**
**ಸಪ್ತಕಾಃ ಪಂಚಕಾಶ್ಚೈವ ಪ್ರಾಸಾದಾ ವೈ ಮಯೋದಿತಾಃ ॥೪೫॥**

---

೪೧-೪೨ ಅನೇಕ ಚಂದ್ರಶಾಲೆಗಳುಳ್ಳ ದೇವಾಲಯವು ಗಜವೆನಿಸಿಕೊಳ್ಳುವುದು ಗೃಹರಾಜವೆಂಬ ಪ್ರಾಸಾದವೇ ರೂಪದಲ್ಲಿ ಸ್ವಲ್ಪ ವ್ಯತ್ಯಾಸ ಹೊಂದಿದರೆ ಗರುಡವೆಂದು ವ್ಯವಹರಿಸಲ್ಪಡುತ್ತದೆ ಅದು ಏಳು ಉಪ್ಪರಿಗೆಗಳ ಎತ್ತರವಾಗಿ ಮೂರು ಚಂದ್ರಶಾಲೆಗಳಿಂದ ಕಂಗೊಳಿಸುವುದು ಅದರ ಹೊರಗಡೆ ಎಲ್ಲ ದಿಕ್ಕುಗಳಲ್ಲಿಯೂ ಒಟ್ಟು ಎಂಬತ್ತಾರು ಮಹಡಿಯ ಮಂಟಪಗಳು ಇರುವುವು

೪೩ ಹತ್ತು ಉಪ್ಪರಿಗೆಗಳ ಎತ್ತರವಿರುವ ಮತ್ತೊಂದು ಬಗೆಯ ಪ್ರಾಸಾದವು ಸಹ ಗರುಡಜಾತಿಗೆ ಸೇರಿದುದು ಹದಿನಾರು ಮುಖಗಳುಳ್ಳದಾಗಿ ಹಿಂದಿನ ಕಟ್ಟಡಕ್ಕಿಂತ ಎರಡು ಮಹಡಿಗಳು ಹೆಚ್ಚಾಗಿದ್ದರೆ ಆ ದೇವಾಲಯವನ್ನು ಪದ್ಮಕವೆಂದು ಕರೆಯುತ್ತಾರೆ

೪೪-೪೫ ಪದ್ಮಕದಷ್ಟೇ ಅಳತೆಯುಳ್ಳ ಪ್ರಾಸಾದವನ್ನು ಶ್ರೀವೃಕ್ಷವೆನ್ನುವರು ವರ್ತುಲಾಕಾರದ ಐದು ಭಾಗಗಳೂ, (ಅಂಡಗಳೂ) ಉಪ್ಪರಿಗೆಗಳು ಎರಡೂ, ಗರ್ಭಾಂಗಣದ ಪ್ರಮಾಣವು ನಾಲ್ಕುಮೊಳಗಳೂ ಇರುವ ದೇವಾಲಯವನ್ನು ವೃಷವೆಂದು ಕರೆಯುತ್ತಾರೆ ಇದು ಎಲ್ಲಬಗೆಯ ಇಷ್ಟಾರ್ಥಗಳನ್ನೂ ಕೊಡುತ್ತದೆ ಈಗ ಹಿಂದೆ ಹೇಳಿದ ಪ್ರಾಸಾದಗಳ ಗರ್ಭಪ್ರಮಾಣವು ಕೆಲವುಗಳಲ್ಲಿ ಏಳುಮೊಳ, ಉಳಿದವುಗಳಲ್ಲಿ ಐದು ಮೊಳ ಇರುವುದೆಂದು ತಿಳಿಯಬೇಕು.

ಸಿಂಹಾಸ್ಯೇನ ಸಮಾ ಜ್ಞೇಯಾ ಯೇ ಚಾನ್ಯೇ ತತ್ಪ್ರಮಾಣಕಾಃ ।
ಚಂದ್ರಶಾಲೈಃ ಸಮೋಪೇತಾಃ ಸರ್ವೇ ಪ್ರಾಗ್ಗ್ರೀವಸಂಯುತಾಃ ।
ಐಷ್ಟಕಾ ದಾರವಾಶ್ಚೈವ ಶೈಲಾ ವಾ ಸ್ಯುಃ ಸತೋರಣಾಃ ॥೪೬॥

ಮೇರುಃ ಪಂಚಾಶದ್ಧಸ್ತಃ ಸ್ಯಾನ್ಮಂದರಃ ಪಂಚಹೀನಕಃ ।
ಚತ್ವಾರಿಂಶತ್ತು ಕೈಲಾಸಶ್ಚತುಸ್ತ್ರಿಂಶದ್ವಿಮಾನಕಃ ॥೪೭॥

ನಂದಿವರ್ಧನಕಸ್ತಸ್ಮಾದ್ದ್ವಾತ್ರಿಂಶತ್ಸಮುದಾಹೃತಃ ।
ತ್ರಿಂಶತಾ ನಂದನಃ ಪ್ರೋಕ್ತಃ ಸರ್ವತೋಭದ್ರಕಸ್ತಥಾ ॥೪೮॥

ವರ್ತುಲಃ ಪದ್ಮಕಶ್ಚೈವ ವಿಂಶದ್ಧಸ್ತ ಉದಾಹೃತಃ ।
ಗಜಃ ಸಿಂಹಶ್ಚ ಕುಂಭಶ್ಚ ವಲಭೀಚ್ಛಂದಕಸ್ತಥಾ ॥೪೯॥

---

೪೬ ಇನ್ನು ಉಳಿದ ಪ್ರಾಸಾದಗಳೆಲ್ಲ ಅಳತೆಯಲ್ಲಿ ಸಿಂಹಾಸ್ಯವನ್ನು ಹೋಲುವುವು ಚಂದ್ರಶಾಲೆಗಳಿಂದ ಕೂಡಿರುವುವು ಪ್ರಾಗ್ಗ್ರೀವಸಹಿತವಾಗಿರುವುವು ದೇವಾಲಯುಗಳನ್ನು ಇಟ್ಟಿಗೆಯಿಂದ, ಮರದಿಂದ ಅಥವಾ ಕಲ್ಲಿನಿಂದ ಕಟ್ಟಬಹುದು ಅವುಗಳಲ್ಲಿ ತೋರಣವನ್ನು ನಿರ್ಮಿಸಬಹುದು

೪೭ ಮೇರುವೆಂಬ ದೇವಾಲಯುವು ಐವತ್ತು ಮೊಳ ಉದ್ದವಿರುವುದು ಮಂದರವು ಇದಕ್ಕಿಂತ ಐದುಮೊಳ ಕಿರಿದು ಕೈಲಾಸವು ನಾಲ್ವತ್ತುಮೊಳವೂ ವಿಮಾನವು ಮೂವತ್ತನಾಲ್ಕು ಮೊಳವೂ ಉದ್ದವಾಗಿರುವುವು

೪೮ ನಂದಿವರ್ಧನದ ಅಳತೆ ಮೂವತ್ತೆರಡು ಮೊಳ ನಂದನವೂ ಸರ್ವತೋಭದ್ರವೂ ಮೂವತ್ತು ಮೊಳ ಉದ್ದವಾಗಿರುವುವು

೪೯ ವರ್ತುಲವೂ ಪದ್ಮಕವೂ ಇಪ್ಪತ್ತುಮೊಳ ಉದ್ದವಾಗಿರುವುವು ಗಜ, ಸಿಂಹ, ಕುಂಭ, ವಲಭೀಚ್ಛಂದಕ ಈ ನಾಲ್ಕರ ಪ್ರಮಾಣವೂ ಹದಿನಾರು ಮೊಳವೆಂದು ತಿಳಿಯಬೇಕು ಇವು ದೇವತೆಗಳಿಗೆ ಬಹು ಪ್ರಿಯವಾದುವು

**ಏತೇ ಷೋಡಶಹಸ್ತಾಃ ಸ್ಯುಶ್ಚತ್ವಾರೋ ದೇವವಲ್ಲಭಾಃ ।**
**ಕೈಲಾಸೋ ಮೃಗರಾಜಶ್ಚ ವಿಮಾನಚ್ಛಂದಕೋ ಮತಃ ॥೫೦॥**

**ಏತೇ ದ್ವಾದಶಹಸ್ತಾಃ ಸ್ಯುರೇತೇಷಾಮಿಹ ಮನ್ಮತಂ ।**
**ಗರುಡೋಽಷ್ಟಕರೋ ಜ್ಞೇಯೋ ಹಂಸೋ ದಶ ಉದಾಹೃತಃ ॥೫೧॥**

**ಏವಮೇತೇ ಪ್ರಮಾಣೇನ ಕರ್ತವ್ಯಾಃ ಶುಭಲಕ್ಷಣಾಃ ।**
**ಯಕ್ಷರಾಕ್ಷಸನಾಗಾನಾಂ ಮಾತೃಹಸ್ತಾತ್ಪ್ರಶಸ್ಯತೇ ॥೫೨॥**

**ತಥಾ ಮೇರ್ವಾದಯಃ ಸಪ್ತ ಜ್ಯೇಷ್ಠಲಿಂಗೇ ಶುಭಾವಹಾಃ ।**
**ಶ್ರೀವೃಕ್ಷಕಾದಯಶ್ಚಾಷ್ಟೌ ಮಧ್ಯಮಸ್ಯ ಪ್ರಕೀರ್ತಿತಾಃ ॥೫೩॥**

**ತಥಾ ಹಂಸಾದಯಃ ಪಂಚ ಕನಿಷ್ಠೇ ಶುಭದಾ ಮತಾಃ ।**
**ವಲಭೀಚ್ಛಂದಕೇ ಗೌರೀ ಜಟಾಮುಕುಟಧಾರಿಣೀ ॥೫೪॥**

---

೫೦-೫೧ ಕೈಲಾಸ ಮೃಗರಾಜ, ವಿಮಾನಚ್ಛಂದಕ ಇವು ಹನ್ನೆರಡು ಮೊಳವಿರಬೇಕೆಂಬುದು ನನ್ನ ಅಭಿಪ್ರಾಯ ಗರುಡ ಮತ್ತು ಹಂಸಗಳೆಂಬ ಪ್ರಾಸಾದಗಳು ಕ್ರಮವಾಗಿ ಎಂಟು, ಹತ್ತು ಮೊಳವಿರುವುವು

೫೨ ಈ ರೀತಿಯಾದ ಪ್ರಮಾಣವನ್ನು ಅನುಸರಿಸಿ ಪ್ರಾಸಾದಗಳನ್ನು ಲಕ್ಷಣವಾಗಿ ಕಟ್ಟಬೇಕು ಯಕ್ಷರು, ರಾಕ್ಷಸರು ನಾಗರು ಇವರ ಆಲಯಗಳ ಅಳತೆಯನ್ನು ಶಿಲ್ಪಿಯ ಮೊಳದಿಂದ ಇಡಬೇಕು (ಉಳಿದ ಆಲಯಗಳ ಅಳತೆಯು ಯಜಮಾನನ ಕೈ ಮೊಳದಲ್ಲಿ ಇರಬೇಕೆಂದು ಅಭಿಪ್ರಾಯ )

೫೩ ಮೇರು ಮೊದಲಾದ ಏಳು ಪ್ರಾಸಾದಗಳಲ್ಲಿ ಜ್ಯೇಷ್ಠಲಿಂಗವನ್ನೂ, ಶ್ರೀವೃಕ್ಷ ಮುಂತಾದ ಎಂಟರಲ್ಲಿ ಮಧ್ಯಲಿಂಗವನ್ನೂ, ಹಂಸಾದಿಯಾದ ಐದು ಆಲಯಗಳಲ್ಲಿ ಕನಿಷ್ಠಲಿಂಗವನ್ನೂ ಸ್ಥಾಪಿಸುವುದು ಶುಭಕರವಾದುದು

೫೪-೫೫ ವಲಭೀಚ್ಛಂದಕವೆಂಬ ದೇವಾಲಯದಲ್ಲಿ ಗೌರಿಯನ್ನು ಸ್ಥಾಪಿಸಬೇಕು ಆಕೆ ಜಟೆಯನ್ನೂ ಕಿರೀಟವನ್ನೂ ಧರಿಸಿ ವರವನ್ನೂ ಅಭಯವನ್ನೂ ಕರುಣಿಸುತ್ತಿರುವಳು ಇನ್ನೆರಡು ಕೈಗಳಲ್ಲಿ ಜಪಸರವನ್ನೂ ಕಮಂಡಲುವನ್ನೂ ಹಿಡಿದಿರುವಳು ಮನೆಯಲ್ಲಾದರೋ ಉತ್ಪಲವನ್ನೂ ಅಂಕುಶವನ್ನೂ ಧರಿಸಿ,

ವರದಾಽಭಯದಾ ತದ್ವತ್ಸಾಕ್ಷಸೂತ್ರಕಮಂಡಲುಃ ।
ಗೃಹೇ ತು ರಕ್ತಮುಕುಟಾ ಉತ್ಪಲಾಂಕುಶಧಾರಿಣೀ ।
ವರದಾಽಭಯದಾ ಚಾಪಿ ಪೂಜನೀಯಾ ಸಭರ್ತೃಕಾ ॥೫೫॥

ತಪೋವನಸ್ಥಾ ಮಿತರಾಂ ತಾಂ ತು ಸಂಪೂಜಯೇದ್ಬುಧಃ ।
ದೇವ್ಯಾ ವಿನಾಯಕಸ್ತದ್ವದ್ವಲಭೀಚ್ಛಂದಕೇ ಶುಭಃ ॥೫೬॥

ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ಪ್ರಾಸಾದಾನುಕೀರ್ತನಂ
ನಾಮೈಕೋನಸಪ್ತತ್ಯಧಿಕದ್ವಿಶತತಮೋಽಧ್ಯಾಯಃ

---

ವರದ ಹಸ್ತದಿಂದಲೂ ಅಭಯ ಹಸ್ತದಿಂದಲೂ ವಿರಾಜಿಸುತ್ತ, ಕೆಂಪುರತ್ನದ ಕಿರೀಟದಿಂದ ಶೋಭಿಸುತ್ತಿರುವ ಪಾರ್ವತಿಯನ್ನೂ ಪರಮೇಶ್ವರನ ಸಹಿತವಾಗಿ ಪ್ರತಿಷ್ಠೆಮಾಡಿ ಪೂಜಿಸಬೇಕು

೫೬ ತಪೋವನದಲ್ಲಿ ತಪಸ್ಸುಮಾಡುತ್ತಿರುವಂತೆಯೋ ಇನ್ನೂ ಇತರ ವಿಧವಾಗಿಯೋ ಇರುವ ಗೌರೀಪ್ರತಿಮೆಯನ್ನು ಬೇಕಾದರೂ ಪೂಜಿಸಬಹುದು ವಲಭೀಚ್ಛಂದಕದಲ್ಲಿ ದೇವಿಯ ಸಂಗಡ ವಿನಾಯಕನನ್ನೂ ಸ್ಥಾಪಿಸುವುದು ಒಳ್ಳೆಯದು

## ಅಧ್ಯಾಯದ ಸಾರಾಂಶ

ದೇವಾಲಯಗಳ ಪ್ರಭೇದವನ್ನು ಈ ಅಧ್ಯಾಯದಲ್ಲಿ ಹೇಳಿದೆ

ಆಕಾರವನ್ನೂ ಅಳತೆಯನ್ನೂ ಅನುಸರಿಸಿ ದೇವಸ್ಥಾನಗಳನ್ನು ಹಲವು ವಿಧವಾಗಿ ವಿಂಗಡಿಸಿರುವರು ಅವುಗಳಿಗೆ ಮೇರು, ಮಂದರ, ಕೈಲಾಸ, ಸಿಂಹ, ಮೃಗ ಮುಂತಾದ ಬೇರೆ ಬೇರೆ ಹೆಸರುಗಳನ್ನು ಕೊಟ್ಟಿರುವರು

ಮೇರು ಮೊದಲಾದ ಏಳು ಮಂದಿರಗಳಲ್ಲಿ ಜ್ಯೇಷ್ಠಲಿಂಗವನ್ನೂ, ಶ್ರೀವೃಕ್ಷ ಮುಂತಾದ ಎಂಟರಲ್ಲಿ ಮಧ್ಯಲಿಂಗವನ್ನೂ, ಹಂಸಾದಿಯಾದ ಐದು ಆಲಯಗಳಲ್ಲಿ ಕನಿಷ್ಠಲಿಂಗವನ್ನೂ ಸ್ಥಾಪಿಸಬೇಕು ವಲಭೀಚ್ಛಂದಕದಲ್ಲಿ ಪಾರ್ವತೀಪರಮೇಶ್ವರರನ್ನೂ ವಿನಾಯಕನನ್ನೂ ಪ್ರತಿಷ್ಠಿಸಬೇಕು

ಶ್ರೀಮತ್ಸ್ಯಮಹಾಪುರಾಣದಲ್ಲಿ ಪ್ರಾಸಾದಾನುಕೀರ್ತನವೆಂಬ ಇನ್ನೂರ
ಅರವತ್ತೊಂಬತ್ತನೆಯ ಅಧ್ಯಾಯವು ಮುಗಿದುದು

## ಅಥ ಸಪ್ತತ್ಯಧಿಕದ್ವಿಶತತಮೋಽಧ್ಯಾಯಃ

|| ಸೂತ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಮಂಡಪಾನಾಂ ತು ಲಕ್ಷಣಂ ।
ಮಂಡಪಪ್ರವರಾನ್ ವಕ್ಷ್ಯೇ ಪ್ರಾಸಾದಸ್ಯಾನುರೂಪತಃ || ೧ ||

ವಿವಿಧಾ ಮಂಟಪಾಃ ಕಾರ್ಯಾ ಜ್ಯೇಷ್ಠಮಧ್ಯಕನೀಯಸಃ ।
ನಾಮತಸ್ತಾನ್ ಪ್ರವಕ್ಷ್ಯಾಮಿ ಶೃಣುಧ್ವಮೃಷಿಸತ್ತಮಾಃ || ೨ ||

ಪುಷ್ಪಕಃ ಪುಷ್ಪಭದ್ರಶ್ಚ ಸುವ್ರತೋಽಮೃತನಂದನಃ ।
ಕೌಶಲ್ಯೋ ಬುದ್ಧಿಸಂಕೀರ್ಣೋ ಗಜಭದ್ರೋ ಜಯಾವಹಃ || ೩ ||

ಶ್ರೀವತ್ಸೋ ವಿಜಯಶ್ಚೈವ ವಾಸ್ತುಕೀರ್ತಿಃ ಶ್ರುತಿಂಜಯಃ ।
ಯಜ್ಞಭದ್ರೋ ವಿಶಾಲಶ್ಚ ಸುಶ್ಲಿಷ್ಟಃ ಶತ್ರುಮರ್ದನಃ || ೪ ||

ಭಾಗಪಂಚೋ ನಂದನಶ್ಚ ಮಾನವೋ ಮಾನಭದ್ರಕಃ ।
ಸುಗ್ರಿವೋ ಹರಿತಶ್ಚೈವ ಕರ್ಣಿಕಾರಃ ಶತರ್ದಿಕಃ || ೫ ||

---

೧, ಸೂತಪೌರಾಣಿಕನು ಹೇಳಿದನು —ಇನ್ನುಮುಂದೆ ಮಂಟಪಗಳ ಲಕ್ಷಣವನ್ನು ಹೇಳುವೆನು ದೇವಾಲಯಗಳಿಗೆ ಅನುರೂಪವಾಗಿ ಪ್ರಶಸ್ತವಾದ ಮಂಟಪಗಳು ಯಾವುವು ಎಂಬುದನ್ನು ತಿಳಿಸುವೆನು

೨ ಓ ಋಷಿವರ್ಯರೇ, ಮಂಟಪಗಳನ್ನು ನಾನಾತೆರನಾಗಿ ಕಟ್ಟಬಹುದು ಅವುಗಳಲ್ಲಿ ಜ್ಯೇಷ್ಠ, ಮಧ್ಯ ಮತ್ತು ಕನಿಷ್ಠಗಳೆಂಬ ಮೂರು ವಿಧಗಳಿವೆ ಅವುಗಳ ಹೆಸರನ್ನು ಹೇಳುವೆನು ಕೇಳಿರಿ

೩-೬ ಪುಷ್ಪಕ, ಪುಷ್ಪಭದ್ರ, ಸುವ್ರತ, ಅಮೃತನಂದನ, ಕೌಶಲ್ಯ, ಬುದ್ಧಿಸಂಕೀರ್ಣ, ಗಜಭದ್ರ, ಜಯಾವಹ, ಶ್ರೀವತ್ಸ, ವಿಜಯ, ವಾಸ್ತುಕೀರ್ತಿ, ಶ್ರುತಿಂಜಯ, ಯಜ್ಞಭದ್ರ, ವಿಶಾಲ, ಸುಶ್ಲಿಷ್ಟ ಶತ್ರುಮರ್ದನ, ಭಾಗಪಂಚ,

ಸಿಂಹಶ್ಚ ಶ್ಯಾಮಭದ್ರಶ್ಚ ಸುಭದ್ರಶ್ಚ ತಥೈವ ಚ ।
ಸಪ್ತವಿಂಶತಿರಾಖ್ಯಾತಾ ಲಕ್ಷಣಂ ಶೃಣುತ ದ್ವಿಜಾಃ ॥ ೬ ॥

ಸ್ತಂಭಾ ಯತ್ರ ಚತುಃಷಷ್ಟಿಃ ಪುಷ್ಪಕಃ ಸಮುದಾಹೃತಃ ।
ದ್ವಿಷಷ್ಟಿಃ ಪುಷ್ಪಭದ್ರಸ್ತು ಷಷ್ಟಿಃ ಸುವ್ರತ ಉಚ್ಯತೇ ॥ ೭ ॥

ಅಷ್ಟಪಂಚಾಶಕಸ್ತಂಭಃ ಕಥ್ಯತೇಽಮೃತನಂದನಃ ।
ಕೌಶಲ್ಯಃ ಷಟ್ಕ ಪಂಚಾಶಚ್ಚತುಷ್ಪಂಚಾಶತಾ ಪುನಃ ॥ ೮ ॥

ನಾಮ್ನಾ ತು ಬುದ್ಧಿಸಂಕೀರ್ಣೋ ದ್ವಿಹೀನೋ ಗಜಭದ್ರಕಃ ।
ಜಯಾವಹಸ್ತು ಪಂಚಾಶಚ್ಛ್ರೀವತ್ಸಸ್ತದ್ವಿಹೀನಕಃ ॥ ೯ ॥

ವಿಜಯಸ್ತದ್ವಿಹೀನಃ ಸ್ಯಾದ್ವಾಸ್ತುಕೀರ್ತಿಸ್ತಥೈವ ಚ ।
ದ್ವಾಭ್ಯಾಮೇವ ಪ್ರಹೀಯೇತ ತತಃ ಶ್ರುತಿಂಜಯೋಽಪರಃ ॥೧೦॥

---

ನಂದನ, ಮಾನವ, ಮಾನಭದ್ರ, ಸುಗ್ರೀವ, ಹರಿತ, ಕರ್ಣಿಕಾರ, ಶತರ್ದಿಕ, ಸಿಂಹ, ಶ್ಯಾಮಭದ್ರ, ಸುಭದ್ರ ಎಂದು ಇಪ್ಪತ್ತೇಳು ವಿಧವಾದ ಮಂಟಪಗಳಿವೆ ಎಲೈ ಬ್ರಾಹ್ಮಣರೇ, ಅವುಗಳ ಲಕ್ಷಣವನ್ನು ಹೇಳುವೆನು ಕೇಳಿರಿ

೭ ಮಂಟಪಕ್ಕೆ ಕಂಬಗಳು ಅರವತ್ತನಾಲ್ಕಿದ್ದರೆ ಪುಷ್ಪಕವೆಂದೂ, ಅರವತ್ತೆರಡಿದ್ದರೆ ಪುಷ್ಪಭದ್ರವೆಂದೂ, ಅರವತ್ತಿದ್ದರೆ ಸುವ್ರತವೆಂದೂ ಹೆಸರು

೮-೯ ಐವತ್ತೆಂಟು ಕಂಬಗಳಿದ್ದರೆ ಅಮೃತನಂದನವೆನಿಸಿಕೊಳ್ಳುವುದು ಹೀಗೆಯೇ ಐವತ್ತಾರಿದ್ದರೆ ಕೌಶಲ್ಯವೆಂದೂ, ಐವತ್ತನಾಲ್ಕಿದ್ದರೆ ಬುದ್ಧಿಸಂಕೀರ್ಣವೆಂದೂ, ಐವತ್ತೆರಡಿದ್ದರೆ ಗಜಭದ್ರಕವೆಂದೂ, ಐವತ್ತಿದ್ದರೆ ಜಯಾವಹವೆಂದೂ, ನಲವತ್ತೆಂಟಿದ್ದರೆ ಶ್ರೀವತ್ಸವೆಂದೂ ಹೇಳುತ್ತಾರೆ

೧೦ ವಿಜಯ, ವಾಸ್ತುಕೀರ್ತಿ, ಶ್ರುತಿಂಜಯಗಳೆಂಬ ಮಂಟಪಗಳಲ್ಲಿ ಕಂಬಗಳ ಸಂಖ್ಯೆ ಬರಬರುತ್ತ ಎರಡೆರಡು ಕಡಿಮೆಯಾಗುವುದು ಎಂದರೆ ಇವುಗಳಲ್ಲಿ ಕ್ರಮವಾಗಿ ನಲವತ್ತಾರು, ನಲವತ್ತನಾಲ್ಕು ಮತ್ತು ನಲವತ್ತೆರಡು ಕಂಬಗಳಿರುವುವು

ಚತ್ವಾರಿಂಶದ್ಯಜ್ಞಭದ್ರಸ್ತ್ರಿಹೀನೋ ವಿಶಾಲಕಃ ।
ಷಟ್ತ್ರಿಂಶಚ್ಚೈವ ಸುಶ್ಲಿಷ್ಟೋ ದ್ವಿಹೀನಃ ಶತ್ರುಮರ್ದನಃ ॥೧೧॥

ದ್ವಾತ್ರಿಂಶದ್ಭಾಗಪಂಚಸ್ತು ತ್ರಿಂಶದ್ಭಿರ್ನಂದನಃ ಸ್ಮೃತಃ ।
ಅಷ್ಟಾವಿಂಶನ್ಮಾನವಸ್ತು ಮಾನಭದ್ರೋ ದ್ವಿಹೀನಕಃ ॥೧೨॥

ಚತುರ್ವಿಂಶಸ್ತು ಸುಗ್ರೀವೋ ದ್ವಾವಿಂಶೋ ಹರಿತೋ ಮತಃ ।
ವಿಂಶತಿಃ ಕರ್ಣಿಕಾರಃ ಸ್ಯಾದಷ್ಟಾದಶ ಶತರ್ಧಿಕಃ ॥೧೩॥

ಸಿಂಹೋ ಭವೇದ್ದ್ವಿಹೀನಶ್ಚ ಶ್ಯಾಮಭದ್ರೋ ದ್ವಿಹೀನಕಃ ।
ಸುಭದ್ರಸ್ತು ತಥಾ ಪ್ರೋಕ್ತೋ ದ್ವಾದಶಸ್ತಂಭಸಂಯುತಃ ॥೧೪॥

ಮಂಡಪಾಃ ಕಥಿತಾಸ್ತುಭ್ಯಂ ಯಥಾವಲ್ಲಕ್ಷಣಾನ್ವಿತಾಃ ।
ತ್ರಿಕೋಣಂ ವೃತ್ತಮರ್ಧೇಂದುಮಷ್ಟಕೋಣಂ ದ್ವಿರಷ್ಟಕಂ ॥೧೫॥

---

೧೧ ಯಜ್ಞಭದ್ರದಲ್ಲಿ ನಾಲ್ವತ್ತೂ, ವಿಶಾಲಕದಲ್ಲಿ ಮೂವತ್ತೆಂಟೂ, ಸುಶ್ಲಿಷ್ಟದಲ್ಲಿ ಮೂವತ್ತಾರೂ, ಶತ್ರುಮರ್ದನದಲ್ಲಿ ನಾಲ್ಕೂ ಕಂಬಗಳಿರುವುವು

೧೨ ಭಾಗಪಂಚದಲ್ಲಿ ಮೂವತ್ತೆರಡೂ, ನಂದನದಲ್ಲಿ ಮೂವತ್ತೂ ಕಂಬಗಳಿವೆ ಇಪ್ಪತ್ತೆಂಟು ಕಂಬಗಳಿದ್ದರೆ ಮಾನಸವೆಂದೂ, ಇಪ್ಪತ್ತಾರಿದ್ದರೆ ಮಾನಭದ್ರವೆಂದೂ ಹೆಸರು

೧೩ ಸುಗ್ರೀವಮಂಟಪವು ಇಪ್ಪತ್ತನಾಲ್ಕು ಕಂಬಗಳಿಂದಲೂ ಹರಿತವು ಇಪ್ಪತ್ತೆರಡು ಕಂಬಗಳಿಂದಲೂ ಕೂಡಿರುವುವು ಕರ್ಣಿಕಾರ ಮತ್ತು ಶತರ್ಧಿಕಗಳಲ್ಲಿ ಕ್ರಮವಾಗಿ ಇಪ್ಪತ್ತು ಮತ್ತು ಹದಿನೆಂಟು ಕಂಬಗಳಿರುವುವು

೧೪ ಹದಿನಾರು ಕಂಬಗಳಿದ್ದರೆ ಸಿಂಹವೂ, ಹದಿನಾಲ್ಕಿದ್ದರೆ ಶ್ಯಾಮಭದ್ರವೂ ಆಗುವುವು ಹೀಗೆಯೇ ಸುಭದ್ರಮಂಟಪವು ಹನ್ನೆರಡು ಕಂಬಗಳಿಂದ ಕೂಡಿರುವುದು

೧೫ ಶಾಸ್ತ್ರೋಕ್ತವಾದ ಲಕ್ಷಣಗಳುಳ್ಳ ಮಂಟಪಗಳನ್ನು ಇದುವರೆಗೆ ಹೇಳಿಯಾಯಿತು ಮೂರು, ನಾಲ್ಕು, ಎಂಟು, ಮತ್ತು ಹದಿನಾರು ಮೂಲೆಗಳು ಬರುನಂತೆ ಇವುಗಳನ್ನು ರಚಿಸಬೇಕು ಅಥವಾ ವೃತ್ತಾಕಾರವಾಗಿಯಾಗಲಿ ಅರ್ಧಚಂದ್ರಾಕಾರವಾಗಿಯಾಗಲಿ ನಿರ್ಮಿಸಬಹುದು ಇದೇ ಮಂಟಪದ ಆಕೃತಿ

ಚತುಷ್ಕೋಣಂ ತು ಕರ್ತವ್ಯಂ ಸಂಸ್ಥಾನಂ ಮಂಡಪಸ್ಯ ತು ।
ರಾಜ್ಯಂ ಚ ವಿಜಯಶ್ಚೈವ ಆಯುರ್ವರ್ಧನಮೇವ ಚ ||೧೬||

ಪುತ್ರಲಾಭಃ ಶ್ರಿಯಃ ಪುಷ್ಟಿಸ್ತ್ರಿಕೋಣಾದಿಕ್ರಮಾದ್ಭವೇತ್ ।
ಏವಂ ತು ಶುಭದಾಃ ಪ್ರೋಕ್ತಾಶ್ಚಾನ್ಯಥಾ ತ್ವಶುಭಾವಹಾಃ ||೧೭||

ಚತುಃಷಷ್ಟಿಪದಂ ಕೃತ್ವಾ ಮಧ್ಯೇ ದ್ವಾರಂ ಪ್ರಕಲ್ಪಯೇತ್ ।
ವಿಸ್ತಾರಾದ್ದ್ವಿಗುಣೋಚ್ಛ್ರಾಯಂ ತತ್ತ್ರಿಭಾಗಃ ಕಟಿರ್ಭವೇತ್ ||೧೮||

ವಿಸ್ತಾರಾರ್ಧೋ ಭವೇದ್ಗರ್ಭೋ ಭಿತ್ತಯೋಽನ್ಯಾಃ ಸಮಂತತಃ ।
ಗರ್ಭಪಾದೇನ ವಿಸ್ತೀರ್ಣಂ ದ್ವಾರಂ ತ್ರಿಗುಣಮಾಯತಂ ||೧೯||

---

೧೬-೧೭ ತ್ರಿಕೋಣವೇ ಮೊದಲಾದ ಆರುಬಗೆಯ ಆಕಾರದಿಂದ ಮಂಟಪಗಳನ್ನು ನಿರ್ಮಿಸಿದರೆ ಕ್ರಮವಾಗಿ ರಾಜ್ಯ, ವಿಜಯ, ಆಯುಸ್ಸು, ಸಂತಾನ, ಸಂಪತ್ತು ಮತ್ತು ಅಭಿವೃದ್ಧಿಗಳು ಕ್ರಮವಾಗಿ ಪ್ರಾಪ್ತವಾಗುವುವು ಇಂತಹ ಮಂಟಪಗಳೇ ಶುಭಕರವಾದುವು, ಬೇರೆ ವಿಧವಾದರೆ ಅಶುಭವೆನಿಸುವುವು

೧೮ ಮಂಟಪವನ್ನು ಕಟ್ಟಬೇಕಾದ ನಿವೇಶನವನ್ನು ದಕ್ಷಿಣೋತ್ತರವಾಗಿ ಎಂಟು, ಪೂರ್ವಪಶ್ಚಿಮವಾಗಿ ಎಂಟು ಎಂದರೆ ಒಟ್ಟು ಅರವತ್ತನಾಲ್ಕು ಮನೆಗಳಾಗುವಂತೆ ಗುರ್ತಿಸಿ ಅದರ ಮಧ್ಯದಲ್ಲಿ ಬಾಗಿಲನ್ನು ಇಡಬೇಕು ಅದರ ಎತ್ತರವು ಅಗಲಕ್ಕಿಂತ ಇಮ್ಮಡಿಯಾಗಿರಬೇಕು ಕಟಿಭಾಗವು ಅದರ ಮೂರನೆಯ ಒಂದು ಪಾಲಿನಷ್ಟು ಇರುವುದು

೧೯ ಗರ್ಭಗೃಹ ಪ್ರಮಾಣವು ವಿಸ್ತಾರದಲ್ಲಿ ಅರ್ಧವಿರುವುದು ಸುತ್ತಲಿನ ಗೋಡೆಗಳ ಅಳತೆಯೂ ಅಷ್ಟೇ ಇರುವುದು ಬಾಗಿಲು ಗರ್ಭಗೃಹದ ನಾಲ್ಕರಲ್ಲೊಂದು ಪಾಲಿನಷ್ಟು ಅಗಲವಾಗಿಯೂ, ಅಗಲದ ಮೂರರಷ್ಟು ಎತ್ತರವಾಗಿಯೂ ಇರುವುದು

**ತಥಾ ದ್ವಿಗುಣವಿಸ್ತೀರ್ಣಮುಖಸ್ತದ್ವದುದುಂಬರಃ ।**
**ವಿಸ್ತಾರಪಾದಪ್ರತಿಮಂ ಬಾಹುಲ್ಯಂ ಶಾಖಯೋಃ ಸ್ಮೃತಂ ॥೨೦॥**

**ತ್ರಿಪಂಚಸಪ್ತನವಭಿಃ ಶಾಖಾಭಿರ್ದ್ವಾರಮಿಷ್ಯತೇ ।**
**ಕನಿಷ್ಠಮಧ್ಯಮಂ ಜ್ಯೇಷ್ಠಂ ಯಥಾಯೋಗಂ ಪ್ರಕಲ್ಪಯೇತ್ ॥೨೧॥**

**ಅಂಗುಲಾನಾಂ ಶತಂ ಸಾರ್ಧಂ ಚತ್ವಾರಿಂಶತ್ತಥೋನ್ನತಂ ।**
**ತ್ರಿಂಶದ್ದ್ವಿಂಶೋತ್ತರಂ ಚಾನ್ಯದ್ಧನ್ಯಮುತ್ತಮಮೇವ ಚ ॥೨೨॥**

**ಶತಂ ಚಾಶೀತಿಸಹಿತಂ ವಾ ತನ್ನಿರ್ಗಮನೇ ಭವೇತ್ ।**
**ಅಧಿಕಂ ದಶಭಿಸ್ತದ್ವತ್ತಥಾ ಷೋಡಶಭಿಃ ಶತಂ ॥೨೩॥**

**ಶತಮಾನಂ ತೃತೀಯಂ ಚ ನವತ್ಯಾಶೀತಿಭಿಸ್ತಥಾ ।**
**ದಶ ದ್ವಾರಾಣಿ ಚೈತಾನಿ ಕ್ರಮೇಣೋಕ್ತಾನಿ ಸರ್ವದಾ ॥೨೪॥**

---

೨೦ ಬಾಗಿಲಿನ ಅಗಲ ಮತ್ತೊಂದು ವಿಧವಾಗಿ ಎಂದರೆ ಹಿಂದೆ ಹೇಳಿದುದರ ಎರಡರಷ್ಟು ಬೇಕಾದರೂ ಇರಬಹುದು ಕದಗಳು ಅತ್ತಿಯ ಮರದಿಂದ ಆಗಿರಬೇಕು ಎರಡು ಕದಗಳಲ್ಲಿ ಒಂದೊಂದರ ಮಂದವೂ ಆದರ ಅಗಲದಲ್ಲಿ ಕಾಲುಪಾಲಿನಷ್ಟು ಇರಬೇಕು

೨೧ ಮೂರು, ಐದು, ಏಳು ಅಥವಾ ಒಂಬತ್ತು ಹಲಗೆಗಳಿಂದ ಕದವನ್ನು ಮಾಡಬಹುದು ದೇವಾಲಯದ ಪ್ರಮಾಣಕ್ಕೆ ತಕ್ಕಂತೆ ಬಾಗಿಲನ್ನು ಕೂಡ ಜ್ಯೇಷ್ಠ, ಮಧ್ಯ ಮತ್ತು ಕನಿಷ್ಠಗಳೆಂಬ ಮೂರು ವಿಧವಾಗಿ ಇಡಬಹುದು

೨೨-೨೪ ನೂರನಲವತ್ತು, ನೂರಮೂವತ್ತು ಅಥವಾ ನೂರಿಪ್ಪತ್ತು ಅಂಗುಲಗಳ ಎತ್ತರವಿರುವ ಮೂರು ಬಗೆಯ ದ್ವಾರಗಳು ಉತ್ತಮಪಕ್ಷಕ್ಕೆ ಸೇರಿದುವು ಇವನ್ನು ಧನ್ಯವೆನ್ನುತ್ತಾರೆ ನೂರಎಂಬತ್ತು, ನೂರಹತ್ತು ಅಥವಾ ನೂರಹದಿನಾರು ಅಂಗುಲಗಳ ಎತ್ತರದ ಮೂರು ಬಗೆಯ ಬಾಗಿಲುಗಳು ಎರಡನೆಯ ಗುಂಪಿಗೆ ಸೇರಿದಂತಹುವು ನೂರು, ತೊಂಬತ್ತು ಅಥವಾ ಎಂಬತ್ತು ಅಂಗುಲ ಎತ್ತರದ ಮೂರುಬಗೆಯ ಬಾಗಿಲುಗಳು ಮೂರನೆಯ ವರ್ಗಕ್ಕೆ ಸೇರಿದುವು ಈ ರೀತಿಯಲ್ಲಿ ಹಿಂದೆ ಹೇಳಿದುದೂ ಸೇರಿ ಹತ್ತು ವಿಧದ ಬಾಗಿಲುಗಳನ್ನು ಕ್ರಮವಾಗಿ ಹೇಳಿದೆನು

**ಅನ್ಯಾನಿ ವರ್ಜನೀಯಾನಿ ಮಾನಸೋದ್ವೇಗದಾನಿ ತು ।**
**ದ್ವಾರವೇಧಂ ಪ್ರಯತ್ನೇನ ಸರ್ವವಾಸ್ತುಷು ವರ್ಜಯೇತ್ ॥೨೫॥**

**ವೃಕ್ಷಕೋಣಭ್ರಮಿದ್ವಾರಸ್ತಂಭಕೂಪಧ್ವಜಾದಿಭಿಃ ।**
**ಕುಡ್ಯಶ್ವಭ್ರೇಣ ವಾ ವಿದ್ಧಂ ದ್ವಾರಂ ನ ಶುಭದಂ ಭವೇತ್ ॥೨೬॥**

**ಕ್ಷಯಶ್ಚ ದುರ್ಗತಿಶ್ಚೈವ ಪ್ರವಾಸಃ ಕ್ಷುದ್ಭಯಂ ತಥಾ ।**
**ದೌರ್ಭಾಗ್ಯಂ ಬಂಧನಂ ರೋಗೋ ದಾರಿದ್ರ್ಯಂ ಕಲಹಂ ತಥಾ ॥೨೭॥**

**ವಿರೋಧಶ್ಚಾರ್ಥನಾಶಶ್ಚ ಸರ್ವಂ ವೇಧಾದ್ಭವೇತ್ಕ್ರಮಾತ್ ।**
**ಪೂರ್ವೇಣ ಫಲಿನೋ ವೃಕ್ಷಾಃ ಕ್ಷೀರವೃಕ್ಷಾಸ್ತು ದಕ್ಷಿಣೇ ॥೨೮॥**

**ಪಶ್ಚಿಮೇನ ಜಲಂ ಶ್ರೇಷ್ಠಂ ಪದ್ಮೋತ್ಪಲವಿಭೂಷಿತಂ ।**
**ಉತ್ತರೇ ಸರಲೈಸ್ತಾಲೈಃ ಶುಭಾ ಸ್ಯಾತ್ಪುಷ್ಪವಾಟಿಕಾ ॥೨೯॥**

---

೨೫ ಇವಲ್ಲದೆ ಬೇರೆ ವಿಧವಾದ ಬಾಗಿಲುಗಳನ್ನು ಇಡಬಾರದು ಅವುಗಳಿಂದ ಮನಸ್ಸಿಗೆ ನೆಮ್ಮದಿಯುಂಟಾಗದು, ಎಲ್ಲ ಬಗೆಯ ಕಟ್ಟಡಗಳಲ್ಲಿಯೂ ಬಾಗಿಲುಗಳಿಗೆ ನೇರವಾಗಿ ಯಾವ ವಿಧವಾದ ಅಡ್ಡಿಯೂ ಇಲ್ಲದಂತೆ ನೋಡಿಕೊಳ್ಳಬೇಕು

೨೬ ಮರ, ಮೂಲೆ, ಭ್ರಮಿ, ಬಾಗಿಲು, ಕಂಬ, ಬಾವಿ, ಧ್ವಜ, ಗೋಡೆ, ಹಳ್ಳ ಇವು ಬಾಗಿಲಿಗೆ ನೇರವಾಗಿರಬಾರದು ಇದ್ದರೆ ಅಶುಭ

೨೭ ಮೇಲೆ ಹೇಳಿದಂತೆ ಬಾಗಿಲಿಗೆ ನೇರವಾಗಿ ಮರ ಮುಂತಾದುವುಗಳು ಅಡ್ಡಿಯಾಗಿದ್ದರೆ ನಾಶ, ದುರ್ಗತಿ, ಪ್ರವಾಸ, ಹಸಿವಿನ ಭೀತಿ, ದೌರ್ಭಾಗ್ಯ, ಬಂಧನ, ರೋಗ, ದಾರಿದ್ರ್ಯ, ಕಲಹ, ವಿರೋಧ, ಅರ್ಥನಾಶ ಮುಂತಾದ ಅನರ್ಥಗಳು ಕ್ರಮವಾಗಿ ಒದಗುವುವು

೨೮ ೩೦ ಪೂರ್ವದಿಕ್ಕಿನಲ್ಲಿ ಹಣ್ಣಿನ ಮರಗಳೂ, ದಕ್ಷಿಣದಲ್ಲಿ ಅರಳಿ, ಅತ್ತಿ ಮುಂತಾದ ಹಾಲುಮರಗಳೂ ಇರಬೇಕು ಪಶ್ಚಿಮದಲ್ಲಿ ತಾವರೆಗಳಿಂದಲೂ ನೈದಿಲೆಗಳಿಂದಲೂ ತುಂಬಿದ ಜಲಾಶಯವಿದ್ದರೆ ಒಳ್ಳೆಯದು ಕಟ್ಟೆ, ಕೊಳ

ಸರ್ವತಸ್ತು ಜಲಂ ಶ್ರೇಷ್ಠಂ ಸ್ಥಿರಮಸ್ಥಿರಮೇವ ಚ ।
ಪಾರ್ಶ್ವತಶ್ಚಾಪಿ ಕರ್ತವ್ಯಂ ಪರಿವಾರಾದಿಕಾಲಯಂ ॥೩೦॥

ಯಾಮ್ಯೇ ತಪೋವನಸ್ಥಾನಮುತ್ತರೇ ಮಾತೃಕಾಗೃಹಂ ।
ಮಹಾನಸಂ ತಥಾಽಽಗ್ನೇಯೇ ನೈರ್ಋತ್ಯೇಽಥ ವಿನಾಯಕಂ ॥೩೧॥

ವಾರುಣೇ ಶ್ರೀನಿವಾಸಸ್ತು ವಾಯವ್ಯೇ ಗೃಹಮಾಲಿಕಾ ।
ಉತ್ತರೇ ಯಜ್ಞಶಾಲಾ ತು ನಿರ್ಮಾಲ್ಯಸ್ಥಾನಮುತ್ತರೇ ॥೩೨॥

ವಾರುಣೇ ಸೋಮದೈವತ್ಯೇ ಬಲಿನಿರ್ವಪಣಂ ಸ್ಮೃತಂ ।
ಪುರತೋ ವೃಷಭಸ್ಥಾನಂ ಶೇಷೇ ಸ್ಯಾತ್ಕುಸುಮಾಯುಧಃ ॥೩೩॥

---

ಮುಂತಾದುವು ಯಾವ ಕಡೆಯಿದ್ದರೂ ಶ್ರೇಷ್ಠವೇ ಅವುಗಳಲ್ಲಿ ನೀರು ಸ್ಥಿರವಾಗಿ ಇರಬಹುದು ಅಥವಾ ಇಲ್ಲದಿರಬಹುದು ಮಂಟಪದ ಪಕ್ಕಗಳಲ್ಲಿ ಪರಿವಾರವರ್ಗ ಗಳಿಗಾಗಿ ವಸತಿಗಳನ್ನು ನಿರ್ಮಿಸಬೇಕು

೩೧ ದಕ್ಷಿಣದಲ್ಲಿ ತಪೋವನವನ್ನೂ, ಉತ್ತರದಲ್ಲಿ ಸಪ್ತಮಾತೃಕೆಯರ ಗೃಹವನ್ನೂ, ಆಗ್ನೇಯದಲ್ಲಿ ಅಡಿಗೆಮನೆಯನ್ನೂ ನಿರ್ಮಿಸಬೇಕು ನೈರ್ಋತ್ಯ ದಲ್ಲಿ ವಿನಾಯಕನನ್ನು ಪ್ರತಿಷ್ಠಿಸಬೇಕು

೩೨ ಪಶ್ಚಿಮದಲ್ಲಿ ಶ್ರೀನಿವಾಸನನ್ನು ಸ್ಥಾಪಿಸಬೇಕು ವಾಯವ್ಯದಲ್ಲಿ ಮನೆಗಳು ಸಾಲಾಗಿರುವುವು ಉತ್ತರದಲ್ಲಿ ಯಜ್ಞಶಾಲೆಯನ್ನೂ, ದೇವರಿಗೆ ಧರಿಸಿದ ಪತ್ರಪುಷ್ಪಾದಿಗಳನ್ನು ಹಾಕಲು ಸ್ಥಳವನ್ನೂ ಏರ್ಪಡಿಸಬೇಕು

೩೩ ಸೋಮದೇವತಾಕವಾದ ಪಶ್ಚಿಮದಿಕ್ಕಿನಲ್ಲಿ ಬಲಿಸ್ಥಾನವನ್ನೂ ಮುಂಭಾಗ ದಲ್ಲಿ ವೃಷಭಸ್ಥಾನವನ್ನೂ ಕಟ್ಟಿಸಬೇಕು ಈಶಾನ್ಯದಿಕ್ಕಿನಲ್ಲಿ ಮನ್ಮಥನ ಪ್ರತಿಮೆ ಯನ್ನು ಸ್ಥಾಪಿಸಬೇಕು

ಜಲವಾಪೀ ತಥೇಶಾನೇ ವಿಷ್ಣುಸ್ತು ಜಲಶಾಯ್ಯಪಿ ।
ಏವಮಾಯತನಂ ಕುರ್ಯಾತ್ಕುಂಡಮಂಡಪಸಂಯುತಂ ॥೩೪॥

ಘಂಟಾವಿತಾನಕಸತೋರಣಚಿತ್ರಯುಕ್ತಂ
ನಿತ್ಯೋತ್ಸವಪ್ರಮುದಿತೇನ ಜನೇನ ಸಾರ್ಧಂ ।
ಯಃ ಕಾರಯೇತ್ಸುರಗೃಹಂ ವಿವಿಧಧ್ವಜಾಂಕಂ
ಶ್ರೀಸ್ತಂ ನ ಮುಂಚತಿ ಸದಾ ದಿವಿ ಪೂಜ್ಯತೇ ಚ ॥೩೫॥

ಏವಂ ಗೃಹಾರ್ಚನವಿಧಾವಪಿ ಶಕ್ತಿತಃ ಸ್ಯಾತ್
ಸಂಸ್ಥಾಪನಂ ಸಕಲಮಂತ್ರವಿಧಾನಯುಕ್ತಂ ।
ಗೋವಸ್ತ್ರಕಾಂಚನಹಿರಣ್ಯಧರಾಪ್ರದಾನಂ
ದೇಯಂ ಗುರುದ್ವಿಜವರೇಷು ತಥಾನ್ನದಾನಂ ॥೩೬॥

ಇತಿ ಶ್ರೀಮತ್ಸ್ಯೇ ಮಹಾಪುರಾಣೇ ಪ್ರಾಸಾದಾನುಕೀರ್ತನಂ ನಾಮ ಸಪ್ತತ್ಯಧಿಕದ್ವಿಶತತಮೋಽಧ್ಯಾಯಃ

---

೩೪ ಈಶಾನ್ಯದಲ್ಲಿ ಕೊಳವನ್ನೂ ಬಾವಿಯನ್ನೂ ತೋಡಬೇಕು ಕ್ಷೀರ ಸಮುದ್ರಶಾಯಿಯಾದ ವಿಷ್ಣುವನ್ನೂ ಅಲ್ಲೇ ಪ್ರತಿಷ್ಠೆಮಾಡಬೇಕು ಹೀಗೆ ಯಜ್ಞಕುಂಡಗಳಿಂದಲೂ ಮಂಟಪಗಳಿಂದಲೂ ಕೂಡಿರುವಂತೆ ದೇವಾಲಯವನ್ನು ಕಟ್ಟಬೇಕು

೩೫ ಘಂಟೆಗಳು, ಮೇಲ್ಗಟ್ಟುಗಳು, ತೋರಣಗಳು ಮತ್ತು ಚಿತ್ರಗಳು ಶೋಭಿಸುತ್ತಿರಲು, ವಿಧವಿಧವಾದ ಧ್ವಜಗಳು ಹಾರಾಡುತ್ತಿರಲು, ನಿತ್ಯೋತ್ಸವ ಗಳಿಂದ ಸಂತೋಷಭರಿತರಾದ ಜನರಿಂದ ತುಂಬಿದ ದೇವಸ್ಥಾನವನ್ನು ಯಾವ ಮಹಾನುಭಾವನು ಕಟ್ಟಿಸುತ್ತಾನೋ ಅವನನ್ನು ಲಕ್ಷ್ಮಿಯು ಎಂದಿಗೂ ಕೈಬಿಡಳು ಸ್ವರ್ಗದಲ್ಲಿಯೂ ಆತನಿಗೆ ವಿಶೇಷವಾದ ಮನ್ನಣೆಯುಂಟು

೩೬ ಹೀಗೆ ಮನೆಯಲ್ಲಿ ಕೂಡ ಸಕಲಮಂತ್ರ ವಿಧಿಪೂರ್ವಕವಾಗಿ ಪ್ರತಿಷ್ಠಿತವಾದ ದೇವತಾವಿಗ್ರಹಗಳನ್ನು ಪೂಜಿಸಬೇಕು ಗುರುಗಳಿಗೂ ಬ್ರಾಹ್ಮಣೋತ್ತಮರಿಗೂ ಗೋದಾನ, ವಸ್ತ್ರದಾನ, ಸುವರ್ಣದಾನ, ಭೂದಾನಗಳನ್ನು ಕೊಡಬೇಕು ಎಲ್ಲರನ್ನೂ ಭೋಜನದಿಂದ ತೃಪ್ತಿಪಡಿಸಬೇಕು

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಮಂಟಪಗಳ ಲಕ್ಷಣವನ್ನು ಹೇಳಿದೆ.

ಪುಷ್ಪಕ, ಪುಷ್ಪಭದ್ರ, ಸುವ್ರತ, ಅಮೃತನಂದನ ಮುಂತಾದ ಇಪ್ಪತ್ತೇಳು ಬಗೆಯ ಮಂಟಪಗಳಿವೆ ಒಂದೊಂದರ ಲಕ್ಷಣವೂ ಬೇರೆಬೇರೆಯಾಗಿದೆ

ಜ್ಯೇಷ್ಠ, ಮಧ್ಯ, ಕನಿಷ್ಠಗಳೆಂಬ ಭೇದಗಳಿಂದ ಬಾಗಿಲುಗಳನ್ನು ಮೂರು ಗುಂಪಾಗಿ ವಿಂಗಡಿಸಬಹುದು ಮಂಟಪಗಳ ಸುತ್ತಲೂ ಇರುವ ಪ್ರದೇಶವನ್ನು ಪಾಕಶಾಲೆ, ಯಾಗಶಾಲೆ ಮುಂತಾದ ಬೇರೆ ಬೇರೆ ಉದ್ದೇಶಗಳಿಗೆ ಉಪಯೋಗಿಸ ಬೇಕು ಹೀಗೆ ಸಕಲಲಕ್ಷಣಯುಕ್ತವಾದ ದೇವಾಲಯವನ್ನು ಕಟ್ಟಿಸುವ ಪುಣ್ಯಾ ಶಾಲಿಗೆ ಸಕಲ ಶ್ರೇಯಸ್ಸುಗಳೂ ಉಂಟಾಗುವುವು

ಶ್ರೀಮತ್ಸ್ಯಮಹಾಪುರಾಣದಲ್ಲಿ ಪ್ರಾಸಾದಾನುಕೀರ್ತನವೆಂಬ
ಇನ್ನೂರೆಪ್ಪತ್ತನೆಯ ಅಧ್ಯಾಯವು ಮುಗಿದುದು

## ಅಥೈಕಸಪ್ತತ್ಯಧಿಕದ್ವಿಶತತಮೋಽಧ್ಯಾಯಃ

॥ ಋಷಯ ಊಚುಃ ॥

ಪೂರೋರ್ವಂಶಸ್ತ್ವಯಾ ಸೂತ ಸಭವಿಷ್ಯೋ ನಿವೇದಿತಃ ।
ಸೂರ್ಯವಂಶೇ ನೃಪಾ ಯೇ ತು ಭವಿಷ್ಯಂತಿ ಹಿ ತಾ ವದ ॥ ೧ ॥

ತಥೈವ ಯಾದವೇ ವಂಶೇ ರಾಜಾನಃ ಕೀರ್ತಿವರ್ಧನಾಃ ।
ಕಲೌ ಯುಗೇ ಭವಿಷ್ಯಂತಿ ತಾನಪೀಹ ವದಸ್ವ ನಃ ॥ ೨ ॥

ವಂಶಾಂತೇ ಜ್ಞಾತಯೋ ಯಾಶ್ಚ ರಾಜ್ಯಂ ಪ್ರಾಪ್ಸ್ಯಂತಿ ಸುವ್ರತಾಃ ।
ಬ್ರೂಹಿ ಸಂಕ್ಷೇಪತಸ್ತಾಸಾಂ ಯಥಾಭಾವ್ಯಮನುಕ್ರಮಾತ್ ॥ ೩ ॥

॥ ಸೂತ ಉವಾಚ ॥

ಬೃಹದ್ಬಲಸ್ಯ ದಾಯಾದೋ ವೀರೋ ರಾಜಾ ಹ್ಯುರುಕ್ಷಯಃ ।
ಉರುಕ್ಷಯಸುತಶ್ಚಾಪಿ ವತ್ಸದ್ರೋಹೋ ಮಹಾಯಶಾಃ ॥ ೪ ॥

---

೧ ಋಷಿಗಳು ಹೇಳಿದರು —ಓ ಸೂತಮಹರ್ಷೀ, ಪೂರುವಿನ ವಂಶದಲ್ಲಿ ಹಿಂದೆ ಜನಿಸಿದ ಮತ್ತು ಮುಂದ ಜನಿಸಲಿರುವ ರಾಜರೆಲ್ಲರನ್ನೂ ಹೇಳಿದೆ ಸೂರ್ಯ ವಂಶದಲ್ಲಿ ಇನ್ನು ಮುಂದೆ ಯಾವ ಯಾವ ರಾಜರು ಆಳುವರೆಂಬುದನ್ನು ತಿಳಿಸು

೨ ಕೀರ್ತಿಶಾಲಿಗಳಾದ ಯದುವಂಶರಾಜರಲ್ಲಿ ಯಾರುಯಾರು ಕಲಿಯುಗದಲ್ಲಿ ರಾಜ್ಯಭಾರಮಾಡುವರೋ ಅವರ ಹೆಸರನ್ನೂ ಕೂಡ ನಮಗೆ ತಿಳಿಯಹೇಳು

೩ ಈ ವಂಶದ ಕೊನೆಯಲ್ಲಿ ಇನ್ನು ಯಾವಯಾವ ಮನೆತನದವರು ಅರಸುತನಮಾಡುವರೋ ಅವರ ವೃತ್ತಾಂತವನ್ನು ಕೂಡ ಅನುಕ್ರಮವಾಗಿ ಸಂಕ್ಷೇಪದಿಂದ ತಿಳಿಸು

೪ ಸೂತಮುನಿ ಹೇಳಿದನು —ವೀರನಾದ ಉರುಕ್ಷಯನೆಂಬ ರಾಜನು ಬೃಹದ್ಬಲನ ಮಗ ಮಹಾಯಶಸ್ವಿಯಾದ ವತ್ಸದ್ರೋಹನೆಂಬವನು ಇವನ ಪುತ್ರ

ವತ್ಸದ್ರೋಹಾತ್ಪ್ರತಿವ್ಯೋಮಸ್ತಸ್ಯ ಪುತ್ರೋ ದಿವಾಕರಃ ।
ತಸ್ಯೈವ ಮಧ್ಯದೇಶೇ ತು ಅಯೋಧ್ಯಾನಗರೀ ಶುಭಾ ॥ ೫ ॥

ದಿವಾಕರಸ್ಯ ಭವಿತಾ ಸಹದೇವೋ ಮಹಾಯಶಾಃ ।
ಸಹದೇವಸ್ಯ ಭವಿತಾ ಧ್ರುವಾಶ್ವೋ ವೈ ಮಹಾಮನಾಃ ॥ ೬ ॥

ತಸ್ಯ ಭಾವ್ಯೋ ಮಹಾಭಾಗಃ ಪ್ರತೀಪಾಶ್ವಶ್ಚ ತತ್ಸುತಃ ।
ಪ್ರತೀಪಾಶ್ವಸುತಶ್ಚಾಪಿ ಸುಪ್ರತೀಪೋ ಭವಿಷ್ಯತಿ ॥ ೭ ॥

ಮರುದೇವಃ ಸುತಸ್ತಸ್ಯ ಸುನಕ್ಷತ್ರಸ್ತತೋ ಭವೇತ್ ।
ಕಿಂನರಾಶ್ವಃ ಸುನಕ್ಷತ್ರಾದ್ಭವಿಷ್ಯತಿ ಪರಂತಪಃ ॥ ೮ ॥

ಕಿಂನರಾಶ್ವಾದಂತರಿಕ್ಷೋ ಭವಿಷ್ಯತಿ ಮಹಾಮನಾಃ ।
ಸುಷೇಣಶ್ಚಾಂತರಿಕ್ಷಾಚ್ಚ ಸುಮಿತ್ರಶ್ಚಾಪ್ಯಮಿತ್ರಜಿತ್ ॥ ೯ ॥

---

೫ ವತ್ಸದ್ರೋಹನಿಗೆ ಪ್ರತಿವ್ಯೋಮನೂ, ಅವನಿಗೆ ದಿವಾಕರನೂ ಮಕ್ಕಳಾಗಿರುವರು ದಿವಾಕರನಿಗೆ ಮಧ್ಯದೇಶದಲ್ಲಿರುವ ಅಯೋಧ್ಯಾ ನಗರವು ರಾಜಧಾನಿಯಾಗುವುದು

೬ ದಿವಾಕರನಿಗೆ ಅಪರಿಮಿತ ಕೀರ್ತಿವಂತನಾದ ಸಹದೇವನೆಂಬ ಮಗನು ಹುಟ್ಟುವನು ಇವನಿಗೆ ಮಹಾತ್ಮನಾದ ಧ್ರುವಾಶ್ವನೆಂಬ ರಾಜನು ಮಗನಾಗುವನು

೭ ವಿಶೇಷಮಹಿಮಾಶಾಲಿಯಾದ ಪ್ರತೀಪಾಶ್ವನು ಧ್ರುವಾಶ್ವನಿಗೂ, ಸುಪ್ರತೀಪನು ಪ್ರತಿಪಾಶ್ವನಿಗೂ ಸುತರಾಗಿ ಜನಿಸುವರು

೮ ಅವನಿಗೆ ಮರುದೇವನೂ, ಮರುದೇವನಿಗೆ ಸುನಕ್ಷತ್ರನೂ ಪುತ್ರರಾಗುವರು ಶತ್ರುಗಳನ್ನು ತಲ್ಲಣಗೊಳಿಸುವ ಕಿನ್ನರಾಶ್ವನು ಸುನಕ್ಷತ್ರನಿಗೆ ಮಗನಾಗುವನು

೯ ಕಿನ್ನರಾಶ್ವನಿಂದ ಮಹಾಮಹಿಮನಾದ ಅಂತರಿಕ್ಷನು ಹುಟ್ಟುವನು ಅಂತರಿಕ್ಷನಿಗೆ ಸುಷೇಣನೂ, ಶತ್ರುಗಳನ್ನು ಜಯಿಸುವ ಸುಮಿತ್ರನೂ ಪುತ್ರರಾಗಿ ಜನಿಸುವರು

ಸುಮಿತ್ರಜೋ ಬೃಹದ್ರಾಜೋ ಬೃಹದ್ರಾಜಸ್ಯ ವೀರ್ಯವಾನ್ ।
ಪುತ್ರಃ ಕೃತಂಜಯೋ ನಾಮ ಧಾರ್ಮಿಕಶ್ಚ ಭವಿಷ್ಯತಿ ॥೧೦॥

ಕೃತಂಜಯಸುತೋ ವಿದ್ವಾನ್ ಭವಿಷ್ಯತಿ ರಣೇಜಯಃ ।
ಭವಿತಾ ಸಂಜಯಶ್ಚಾಪಿ ವೀರೋ ರಾಜಾ ರಣೇಜಯಾತ್ ॥೧೧॥

ಸಂಜಯಸ್ಯ ಸುತಃ ಶಾಕ್ಯಃ ಶಾಕ್ಯಾಚ್ಛುದ್ಧೋದನೋ ನೃಪಃ ।
ಶುದ್ಧೋದನಸ್ಯ ಭವಿತಾ ಸಿದ್ಧಾರ್ಥಃ ಪುಷ್ಕಲಃ ಸುತಃ ॥೧೨॥

ಪ್ರಸೇನಜಿತ್ತತೋ ಭಾವ್ಯಃ ಕ್ಷುದ್ರಕೋ ಭವಿತಾ ತತಃ ।
ಕ್ಷುದ್ರಕಾತ್ಕುಲಕೋ ಭಾವ್ಯಃ ಕುಲಕಾತ್ಸುರಥಃ ಸ್ಮೃತಃ ॥೧೩॥

ಸುಮಿತ್ರಃ ಸುರಥಾಜ್ಜಾತೋ ಹ್ಯಂತ್ಯಸ್ತು ಭವಿತಾ ನೃಪಃ ।
ಏತೇ ಚೈಕ್ಷ್ವಾಕವಃ ಪ್ರೋಕ್ತಾ ಭವಿಷ್ಯಾ ಯೇ ಕಲೌ ಯುಗೇ ॥೧೪॥

---

೧೦ ಸುಮಿತ್ರನ ಮಗ ಬೃಹದ್ರಾಜ, ಬೃಹದ್ರಾಜನಿಗೆ ವೀರ್ಯವಂತನೂ ಧರ್ಮನಿರತನಾದ ಕೃತಂಜಯನೂ ಮಕ್ಕಳಾಗುವರು

೧೧ ವಿದ್ಯಾವಂತನಾದ ರಣೇಜಯನು ಕೃತಂಜಯನಿಗೂ, ವೀರನಾದ ಸಂಜಯರಾಜನು ರಣೇಜಯನಿಗೂ ಸುತರಾಗುವರು

೧೨ ಶಾಕ್ಯನು ಸಂಜಯನ ಮಗ ಅವನ ಮಗ ಶುದ್ಧೋದನರಾಜ ಅವನಿಗೆ ಸಿದ್ಧಾರ್ಥನು ಪುತ್ರನಾಗಿ ಜನಿಸುವನು ಸಿದ್ಧಾರ್ಥನ ಮಗನಿಗೆ ಪುಷ್ಕಲನೆಂದು ಹೆಸರು

೧೩ ಅವನಿಂದ ಪ್ರಸೇನಜಿತನೂ, ಪ್ರಸೇನಜಿತನಿಂದ ಕ್ಷುದ್ರಕನೂ, ಆತನಿಂದ ಕುಲಕನೂ, ಕುಲಕನಿಂದ ಸುರಥನೂ ಜನ್ಮತಾಳುವರು

೧೪ ಸುರಥನಿಗೆ ಸುಮಿತ್ರನೆಂಬ ಪುತ್ರನು ಉದಿಸುವನು ಇವನೇ ಕೊನೆಯ ರಾಜ ಕಲಿಯುಗದಲ್ಲಿ ಮುಂದ ಹುಟ್ಟಲಿರುವ ಇಕ್ಷ್ವಾಕುವಂಶದ ರಾಜರೆಲ್ಲರನ್ನೂ ಹೇಳಿದಂತಾಯಿತು

**ಬೃಹದ್ಬಲಾನ್ವವಾಯೇ ತು ಭವಿಷ್ಯಾಃ ಕುಲವರ್ಧನಾಃ ।**
**ಅತ್ರಾನುವಂಶಶ್ಲೋಕೋಽಯಂ ವಿಪ್ರೈರ್ಗೀತಃ ಪುರಾತನೈಃ ॥೧೫॥**

**ಇಕ್ಷ್ವಾಕೂಣಾಮಯಂ ವಂಶಃ ಸುಮಿತ್ರಾಂತೋ ಭವಿಷ್ಯತಿ ।**
**ಸುಮಿತ್ರಂ ಪ್ರಾಪ್ಯ ರಾಜಾನಂ ಸಂಸ್ಥಾಂ ಪ್ರಾಪ್ಸ್ಯತಿ ವೈ ಕಲೌ ॥೧೬॥**

**ಇತ್ಯೇವಂ ಮಾನವೋ ವಂಶಃ ಪ್ರಾಗೇವ ಸಮುದಾಹೃತಃ ।**
**ಅತ ಊರ್ಧ್ವಂ ಪ್ರವಕ್ಷ್ಯಾಮಿ ಮಾಗಧಾ ಯೇ ಬೃಹದ್ರಥಾಃ ॥೧೭॥**

**ಪೂರ್ವೇಣ ಯೇ ಜರಾಸಂಧಾತ್ಸಹದೇವಾನ್ವಯೇ ನೃಪಾಃ ।**
**ಅತೀತಾ ವರ್ತಮಾನಾಶ್ಚ ಭವಿಷ್ಯಾಂಶ್ಚ ನಿಬೋಧತ ॥೧೮॥**

**ಸಂಗ್ರಾಮೇ ಭಾರತೇ ವೃತ್ತೇ ಸಹದೇವೇ ನಿಪಾತಿತೇ ।**
**ಸೋಮಾಧಿಸ್ತಸ್ಯ ದಾಯಾದೋ ರಾಜಾಭೂತ್ಸ ಗಿರಿವ್ರಜೇ ॥೧೯॥**

---

೧೫ ಬೃಹದ್ಬಲನ ಕುಲದಲ್ಲಿ ಹುಟ್ಟಿ ವಂಶಕ್ಕೆ ಕೀರ್ತಿಯನ್ನು ತರುವ ರಾಜರು ಹಲವರಿರುವರು ಅವರ ವಿಷಯವಾಗಿ ಪ್ರಾಚೀನರಾದ ಬ್ರಾಹ್ಮಣರು ಈ ಮುಂದಿನ ಶ್ಲೋಕವನ್ನು ಹೇಳಿದ್ದಾರೆ

೧೬ ಈ ಇಕ್ಷ್ವಾಕು ವಂಶವು ಸುಮಿತ್ರನೊಡನೆ ಕೊನೆಗಾಣುವುದು ಆತನು ಕಲಿಯುಗದಲ್ಲಿ ಅರಸಾಗುವನು ಅಲ್ಲಿಗೆ ಈ ವಂಶವೂ ತುದಿಯನ್ನು ಮುಟ್ಟುವುದು

೧೭ ಮನುಚಕ್ರವರ್ತಿಯ ವಂಶವು ಈ ತೆರನಾಗಿರುವುದು ಇದರ ವಿಷಯವನ್ನು ಹಿಂದೆಯೇ ಹೇಳಿದ್ದೇನೆ ಇನ್ನುಮುಂದೆ ಮಗಧ ದೇಶಾಧಿಪತಿಗಳಾದ ಬೃಹದ್ರಥರ ವೃತ್ತಾಂತವನ್ನು ಹೇಳುವೆನು

೧೮ ಜರಾಸಂಧನಿಗಿಂತಲೂ, ಪೂರ್ವದಲ್ಲಿ ಸಹದೇವನ ವಂಶದಲ್ಲಿ ಅವರು ಹುಟ್ಟಿದರು ಅವರಲ್ಲಿ ಹಿಂದೆ ಇದ್ದವರು, ಈಗ ಇರುವವರು ಮತ್ತು ಮುಂದೆ ಹುಟ್ಟುವವರು ಇವರೆಲ್ಲರನ್ನೂ ಹೇಳುವೆನು ಕೇಳಿ

೧೯ ಭಾರತಯುದ್ಧವು ನಡೆಯಿತು , ಸಹದೇವನು ಮಡಿದನು ಅವನ ಮಗನಾದ ಸೋಮಾಧಿಯು ಗಿರಿವ್ರಜನಗರದಲ್ಲಿ ರಾಜನಾಗಿ ಐವತ್ತೆಂಟು ವರ್ಷಗಳ ಕಾಲ ರಾಜ್ಯಭಾರಮಾಡಿದನು

ಪಂಚಾಶತಂ ತಥಾಷ್ಟೌ ಚ ಸಮಾ ರಾಜ್ಯಮಕಾರಯತ್ ।
ಶ್ರುತಶ್ರವಾಶ್ಚತುಃಷಷ್ಟಿಂ ಸಮಾಸ್ತಸ್ಯಾನ್ವಯೇಽಭವತ್ ॥೨೦॥

ಅಪ್ರತೀಪೀ ಚ ಷಟ್ತ್ರಿಂಶತ್ಸಮಾ ರಾಜ್ಯಮಕಾರಯತ್ ।
ಚತ್ವಾರಿಂಶತ್ಸಮಾಸ್ತಸ್ಯ ನಿರಮಿತ್ರೋ ದಿವಂ ಗತಃ ॥೨೧॥

ಪಂಚಾಶತಂ ಸಮಾಃ ಷಟ್ಚ ಸುರಕ್ಷಃ ಪ್ರಾಪ್ತವಾನ್ಮಹೀಂ ।
ಬೃಹತ್ಕರ್ಮಾ ತ್ರಯೋವಿಂಶದಬ್ದಂ ರಾಜ್ಯಮಕಾರಯತ್ ॥೨೨॥

ಸೇನಜಿತ್ಸಂಪ್ರಯಾತಶ್ಚ ಭುಕ್ತ್ವಾ ಪಂಚಾಶತಂ ಮಹೀಂ ।
ಶ್ರುತಂಜಯಸ್ತು ವರ್ಷಾಣಿ ಚತ್ವಾರಿಂಶದ್ಭವಿಷ್ಯತಿ ॥೨೩॥

ಅಷ್ಟಾವಿಂಶತಿವರ್ಷಾಣಿ ಮಹೀಂ ಪ್ರಾಪ್ಸ್ಯತಿ ವೈ ವಿಭುಃ ।
ಅಷ್ಟಪಂಚಾಶತಂ ಷಟ್ಚ ರಾಜ್ಯೇ ಸ್ಥಾಸ್ಯತಿ ವೈ ಶುಚಿಃ ॥೨೪॥

ಅಷ್ಟಾವಿಂಶತ್ಸಮಾ ರಾಜಾ ಕ್ಷೇಮೋ ಭೋಕ್ಷ್ಯತಿ ವೈ ಮಹೀಂ ।
ಅನುವ್ರತಶ್ಚತುಃಷಷ್ಟಿಂ ರಾಜ್ಯಂ ಪ್ರಾಪ್ಸ್ಯತಿ ವೀರ್ಯವಾನ್ ॥೨೫॥

---

೨೦-೨೧ ಅವನ ವಂಶದಲ್ಲಿ ಜನಿಸಿದ ಶ್ರುತಶ್ರವನು ಅರವತ್ತನಾಲ್ಕು ವರ್ಷಗಳ ಕಾಲ ದೊರೆಯಾಗಿದ್ದನು ಅಪ್ರತೀಪಿಯು ಮೂವತ್ತಾರು ವರ್ಷ ರಾಜ್ಯಭಾರ ಮಾಡಿದನು ನಿರಮಿತ್ರನು ನಾಲ್ವತ್ತು ವರ್ಷಗಳ ಕಾಲ ಆಳಿ ಸ್ವರ್ಗವನ್ನೇರಿದನು

೨೨ ಸುರಕ್ಷನು ಐವತ್ತಾರು ವರ್ಷವೂ, ಬೃಹತ್ಕರ್ಮನು ಇಪ್ಪತ್ತಮೂರು ವರ್ಷವೂ ನೆಲವನ್ನಾಳಿದರು

೨೩ ಸೇನಜಿತುವು ಐವತ್ತು ವರ್ಷಗಳಕಾಲ ಭೂಪರಿಪಾಲನ ಮಾಡಿ ಕಾಲವಾದನು ಬಳಿಕ ರಾಜ್ಯಕ್ಕೆ ಬಂದ ಸಂಜಯನು ನಾಲ್ವತ್ತುವರ್ಷ ಪೃಥ್ವೀಪತಿಯಾಗಿರುವನು

೨೪ ವಿಭುವು ಇಪ್ಪತ್ತೆಂಟು ವರ್ಷವೂ, ಶುಚಿಯು ಐವತ್ತೆಂಟು ವರ್ಷವೂ ರಾಜ್ಯವನ್ನಾಳುವರು

೨೫ ಕ್ಷೇಮರಾಜನು ಇಪ್ಪತ್ತೆಂಟು ವರ್ಷ ಭೂಮಿಯನ್ನು ಪಾಲಿಸುವನು ಪ್ರತಾಪಶಾಲಿಯಾದ ಅನುವ್ರತನು ಅರವತ್ತನಾಲ್ಕುವರ್ಷ ದೊರೆತನವನ್ನು ನಡೆಸುವನು

ಪಂಚವಿಂಶತಿವರ್ಷಾಣಿ ಸುನೇತ್ರೋ ಭೋಕ್ಷ್ಯತೇ ಮಹೀಂ ।
ಭೋಕ್ಷ್ಯತೇ ನಿರ್ವೃತಿಶ್ಚೇಮಾಮಷ್ಟಪಂಚಾಶತಂ ಸಮಾಃ ॥೨೬॥

ಅಷ್ಟಾವಿಂಶತ್ಸಮಾ ರಾಜ್ಯಂ ತ್ರಿನೇತ್ರೋ ಭೋಕ್ಷ್ಯತೇ ತತಃ ।
ಚತ್ವಾರಿಂಶತ್ತಥಾಷ್ಟೌ ಚ ದ್ಯುಮತ್ಸೇನೋ ಭವಿಷ್ಯತಿ ॥೨೭॥

ತ್ರಯಸ್ತ್ರಿಂಶತ್ತು ವರ್ಷಾಣಿ ಮಹೀನೇತ್ರಃ ಪ್ರಕಾಶ್ಯತೇ ।
ದ್ವಾತ್ರಿಂಶತ್ತು ಸಮಾ ರಾಜಾ ಹ್ಯಚಲಸ್ತು ಭವಿಷ್ಯತಿ ॥೨೮॥

ರಿಪುಂಜಯಸ್ತು ವರ್ಷಾಣಿ ಪಂಚಾಶತ್ಪ್ರಾಪ್ಸ್ಯತೇ ಮಹೀಂ ।
ದ್ವಾತ್ರಿಂಶತ್ತು ನೃಪಾ ಹ್ಯೇತೇ ಭವಿತಾರೋ ಬೃಹದ್ರಥಾಃ ॥೨೯॥

ಪೂರ್ಣಂ ವರ್ಷಸಹಸ್ರಂ ತು ತೇಷಾಂ ರಾಜ್ಯಂ ಭವಿಷ್ಯತಿ ।
ಜಯತಾಂ ಕ್ಷತ್ರಿಯಾಣಾಂ ಚ ಬಾಲಕಃ ಪುಲಕೋ ಭವೇತ್ ॥೩೦॥

ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ರಾಜವಂಶಾನುಕೀರ್ತನ
ಏಕಸಪ್ತತ್ಯಧಿಕದ್ವಿಶತತಮೋಽಧ್ಯಾಯಃ

---

೨೬ ಸುನೇತ್ರನು ಇಪ್ಪತ್ತೈದುವರ್ಷ ಪೊಡವಿಯನ್ನು ಆಳುವನು ನಿರ್ವೃತಿ ಐವತ್ತೆಂಟು ವರ್ಷ ಈ ಭೂಮಂಡಲವನ್ನು ಪಾಲಿಸುವನು

೨೭ ಅವನ ತರುವಾಯ ತ್ರಿನೇತ್ರನು ಇಪ್ಪತ್ತೆಂಟು ವರ್ಷಗಳಕಾಲ ದೊರೆಯಾಗಿರುವನು ದ್ಯುಮತ್ಸೇನನು ಮುಂದೆ ನಲವತ್ತೆಂಟು ವರ್ಷ ರಾಜ್ಯಭಾರ ಮಾಡುವನು

೨೮ ಮಹೀನೇತ್ರನು ಮೂವತ್ತುಮೂರುವರ್ಷ ಸಿಂಹಾಸನದ ಮೇಲೆ ವಿರಾಜಿಸುವನು ಅಚಲನು ಆ ಬಳಿಕ ಮೂವತ್ತೆರಡು ವರ್ಷ ಪಟ್ಟದಲ್ಲಿರುವನು

೨೯ ರಿಪುಂಜಯನು ಐವತ್ತು ವರ್ಷ ರಾಜ್ಯವನ್ನನುಭವಿಸುವನು ಈ ಮೂವತ್ತೆರಡು ಜನ ಅರಸರೂ ಬೃಹದ್ರಥನ ವಂಶಜರು, ಮುಂದೆ ಬರತಕ್ಕವರು

೩೦ ಇವರ ರಾಜ್ಯಭಾರ ಒಟ್ಟು ಒಂದು ಸಾವಿರ ವರ್ಷ ನಡೆಯುವುದು ಪುಲಕನೆಂಬ ಕ್ಷತ್ರಿಯವೀರಬಾಲಕನು ಮುಂದಿನ ರಾಜರನ್ನು ಗೆದ್ದು ಅರಸಾಗುವನು

## ಅಧ್ಯಾಯ ೨೭೧

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಮುಂದೆ ಹುಟ್ಟುವ ಕಲಿಯುಗದ ರಾಜರ ಹೆಸರುಗಳನ್ನು ಹೇಳಿದೆ

ಸೂರ್ಯವಂಶದವನಾದ ಬೃಹದ್ಬಲನ ಕುಲದಲ್ಲಿ ನೂರಾರು ಜನ ರಾಜರು ಹುಟ್ಟಿ ರಾಜ್ಯಭಾರಮಾಡುವರು ಇವರಲ್ಲಿ ಕೊನೆಯವನು ಸುಮಿತ್ರನೆಂಬುವನು ಇಕ್ಷ್ವಾಕುವಂಶವು ಇವನೊಡನೆ ಕೊನೆಗಾಣುವುದು ಬಳಿಕ ಬೃಹದ್ರಥನ ವಂಶಜರಾದ ಮೂವತ್ತೆರಡು ಜನ ಅರಸರು ಒಟ್ಟು ಒಂದು ಸಾವಿರ ವರ್ಷಗಳ ಕಾಲ ರಾಜ್ಯಭಾರಮಾಡುವರು ಇವರಲ್ಲಿ ರಿಪುಂಜಯನು ಕೊನೆಯವನು ಬಳಿಕ ಪುಲಕನೆಂಬ ಕ್ಷತ್ರಿಯ ವೀರಬಾಲಕನು ಎಲ್ಲರನ್ನೂ ಗೆದ್ದು ರಾಜನಾಗುವನು

ಶ್ರೀಮತ್ಸ್ಯಮಹಾಪುರಾಣದಲ್ಲಿ ರಾಜವಂಶಾನುಕೀರ್ತನದಲ್ಲಿ
ಇನ್ನೂರ ಎಪ್ಪತ್ತೊಂದನೆಯ ಅಧ್ಯಾಯವು ಮುಗಿದುದು

## ಅಥ ದ್ವಿಸಪ್ತತ್ಯಧಿಕದ್ವಿಶತತಮೋಽಧ್ಯಾಯಃ

॥ ಸೂತ ಉವಾಚ ॥

ಬೃಹದ್ರಥೇಷ್ವತೀತೇಷು ವೀತಿಹೋತ್ರೇಷ್ವವಂತಿಷು ।
ಪುಲಕಃ ಸ್ವಾಮಿನಂ ಹತ್ವಾ ಸ್ವಪುತ್ರಮಭಿಷೇಕ್ಷ್ಯತಿ ॥ ೧ ॥

ಮಿಷತಾಂ ಕ್ಷತ್ರಿಯಾಣಾಂ ಚ ಬಾಲಕಃ ಪುಲಕೋದ್ಭವಃ ।
ಸ ವೈ ಪ್ರಣತಸಾಮಂತೋ ಭವಿಷ್ಯೋ ನ ಚ ಧರ್ಮತಃ ॥ ೨ ॥

ತ್ರಯೋವಿಂಶತ್ಸಮಾ ರಾಜಾ ಭವಿತಾ ಸ ನರೋತ್ತಮಃ ।
ಅಷ್ಟಾವಿಂಶತಿವರ್ಷಾಣಿ ಪಾಲಕೋ ಭವಿತಾ ನೃಪಃ ॥ ೩ ॥

ವಿಶಾಖಯೂಪೋ ಭವಿತಾ ತ್ರಿಪಂಚಾಶತ್ತಥಾ ಸಮಾಃ ।
ಏಕವಿಂಶತ್ಸಮಾ ರಾಜಾ ಸೂರ್ಯಕಸ್ತು ಭವಿಷ್ಯತಿ ॥ ೪ ॥

---

೧ ಸೂತಪೌರಾಣಿಕನು ಹೇಳಿದನು --ಬೃಹದ್ರಥರ, ವೀತಿಹೋತ್ರರ ಮತ್ತು ಅವಂತೀ ಅರಸರ ಸಂತತಿ ಮುಗಿದ ಮೇಲೆ ಪುಲಕನೆಂಬುವನು ತನ್ನ ಒಡೆಯನನ್ನು ಕೊಂದು ತನ್ನ ಮಗನನ್ನು ಪಟ್ಟದಲ್ಲಿ ಕುಳ್ಳಿರಿಸುವನು

೨ ಕ್ಷತ್ರಿಯರೊಬ್ಬರನ್ನೂ ಲೆಕ್ಕಿಸದೆ, ಪುಲಕನ ಮಗನಾದ ಆ ಬಾಲಕನು ಸಾಮಂತರಾಜರೆಲ್ಲರನ್ನೂ ಅಧೀನದಲ್ಲಿರಿಸಿಕೊಂಡು ಅರಸಾಗುವನು ಅವನು ರಾಜನಾಗುವುದು ಧರ್ಮಬಲದಿಂದಲ್ಲ

೩ ಆ ವೀರನು ಇಪ್ಪತ್ತುಮೂರುವರ್ಷ ದೊರೆತನವನ್ನು ಮಾಡುವನು ಬಳಿಕ ಪಾಲಕನೆಂಬುವನು ಇಪ್ಪತ್ತೆಂಟು ವರ್ಷಗಳಕಾಲ ರಾಜ್ಯಭಾರ ಮಾಡುವನು

೪ ವಿಶಾಖಯೂಪನೆಂಬುವನು ಐವತ್ತುಮೂರುವರ್ಷಗಳೂ, ಸೂರ್ಯಕನೆಂಬಾತನು ಇಪ್ಪತ್ತೊಂದು ವರ್ಷಗಳೂ ಭೂಪಾಲಕರಾಗಿರುವರು

ಭವಿಷ್ಯತಿ ನೃಪಸ್ತ್ರಿಂಶತ್ತತ್ಸುತೋ ನಂದಿವರ್ಧನಃ ।
ದ್ವಿಪಂಚಾಶತ್ತತೋ ಭುಕ್ತ್ವಾ ಪ್ರನಷ್ಟಾಃ ಪಂಚ ತೇ ನೃಪಾಃ ॥ ೫ ॥
ಹತ್ವಾ ತೇಷಾಂ ಯಶಃ ಕೃತ್ಸ್ನಂ ಶಿಶುನಾಕೋ ಭವಿಷ್ಯತಿ ।
ವಾರಾಣಸ್ಯಾಂ ಸುತಂ ಸ್ಥಾಪ್ಯ ಶ್ರಯಿಷ್ಯತಿ ಗಿರಿವ್ರಜಂ ।
ಶಿಶುನಾಕಸ್ತು ವರ್ಷಾಣಿ ಚತ್ವಾರಿಂಶದ್ಭವಿಷ್ಯತಿ ॥ ೬ ॥
ಕಾಕವರ್ಣಃ ಸುತಸ್ತಸ್ಯ ಷಡ್ವಿಂಶತ್ಪ್ರಾಪ್ಸ್ಯತೇ ಮಹೀಂ ।
ಷಟ್ತ್ರಿಂಶಚ್ಚೈವ ವರ್ಷಾಣಿ ಕ್ಷೇಮಧರ್ಮಾ ಭವಿಷ್ಯತಿ ॥ ೭ ॥
ಚತುರ್ವಿಂಶತ್ಸಮಾಃ ಸೋಽಪಿ ಕ್ಷೇಮಜಿತ್ಪ್ರಾಪ್ಸ್ಯತೇ ಮಹೀಂ ।
ಅಷ್ಟಾವಿಂಶತಿವರ್ಷಾಣಿ ವಿಂಧ್ಯಸೇನೋ ಭವಿಷ್ಯತಿ ॥ ೮ ॥
ಭವಿಷ್ಯತಿ ಸಮಾ ರಾಜಾ ನವ ಕಾಣ್ವಾಯನೋ ನೃಪಃ ।
ಭೂಮಿಮಿತ್ರಃ ಸುತಸ್ತಸ್ಯ ಚತುರ್ದಶ ಭವಿಷ್ಯತಿ ॥ ೯ ॥

---

೫ ಸೂರ್ಯಕನ ಪುತ್ರನಾದ ನಂದಿವರ್ಧನನು ಮೂವತ್ತುವರ್ಷ ಅರಸನಾಗಿರುವನು ಆ ಬಳಿಕ ಐವರು ರಾಜರು ಒಟ್ಟು ಐವತ್ತೆರಡು ವರ್ಷಕಾಲ ರಾಜ್ಯಭಾರಮಾಡಿ ಸ್ವರ್ಗಸ್ಥರಾಗುವರು

೬ ಶಿಶುನಾಕನು ರಾಜನಾಗಿ ಅವರೆಲ್ಲರ ಕೀರ್ತಿಯನ್ನೂ ಮೀರಿಸುವನು ಅವನು ಕಾಶಿಯಲ್ಲಿ ತನ್ನ ಮಗನನ್ನಿರಿಸಿ ಗಿರಿವ್ರಜದಲ್ಲಿ ತಾನು ರಾಜ್ಯಭಾರ ಮಾಡುವನು ಆತನು ನಲವತ್ತು ವರ್ಷಗಳಕಾಲ ಪ್ರಭುತ್ವವನ್ನು ನಡೆಸುವನು

೭ ಅವನ ಮಗನಾದ ಕಾಕವರ್ಣನು ಇಪ್ಪತ್ತಾರುವರ್ಷ ಭೂಮಿಯನ್ನು ಆಳುವನು ಅವನ ಮಗನಾದ ಕ್ಷೇಮಧರ್ಮನು ಮೂವತ್ತಾರುವರ್ಷ ರಾಜ್ಯಭಾರ ಮಾಡುವನು

೮ ಆ ಕ್ಷೇಮಜಿತ್ತು ಇಪ್ಪತ್ತನಾಲ್ಕುವರ್ಷ ರಾಜ್ಯವಾಳುವನು ವಿಂಧ್ಯಸೇನನು ಇಪ್ಪತ್ತೆಂಟುವರ್ಷ ಭೂಪಾಲಕನಾಗಿರುವನು

೯ ಕಾಣ್ವಾಯನನು ಒಂಬತ್ತುವರ್ಷ ರಾಜನಾಗಿರುವನು ಅವನ ಪುತ್ರನಾದ ಭೂಮಿಮಿತ್ರನು ಹದಿನಾಲ್ಕು ವರ್ಷಗಳ ಕಾಲ ರಾಜ್ಯವನ್ನು ಆಳುವನು

ಅಜಾತಶತ್ರುರ್ಭವಿತಾ ಸಪ್ತವಿಂಶತ್ಸಮಾ ನೃಪಃ ।
ಚತುರ್ವಿಂಶತ್ಸಮಾ ರಾಜಾ ವಂಶಕಸ್ತು ಭವಿಷ್ಯತಿ ॥೧೦॥

ಉದಾಸೀ ಭವಿತಾ ತಸ್ಮಾತ್ತ್ರಯಸ್ತ್ರಿಂಶತ್ಸಮಾ ನೃಪಃ ।
ಚತ್ವಾರಿಂಶತ್ಸಮಾ ಭಾವ್ಯೋ ರಾಜಾ ವೈ ನಂದಿವರ್ಧನಃ ॥೧೧॥

ಚತ್ವಾರಿಂಶತ್ತ್ರಯಶ್ಚೈವ ಮಹಾನಂದೀ ಭವಿಷ್ಯತಿ ।
ಇತ್ಯೇತೇ ಭವಿತಾರೋಽತ್ರ ವಂಶೇ ವೈ ಶಿಶುನಾಕತಃ ॥೧೨॥

ಶತಾನಿ ತ್ರೀಣಿ ಪೂರ್ಣಾನಿ ಷಷ್ಟಿವರ್ಷಾಧಿಕಾನಿ ತು ।
ಶಿಶುನಾಕಾ ಭವಿಷ್ಯಂತಿ ರಾಜಾನಃ ಕ್ಷತ್ರಬಂಧವಃ ॥೧೩॥

ಏತೈಃ ಸಾರ್ಧಂ ಭವಿಷ್ಯಂತಿ ಯಾವತ್ಕಲಿ ನೃಪಾಃ ಪರೇ ।
ತುಲ್ಯಕಾಲಂ ಭವಿಷ್ಯಂತಿ ಸರ್ವೇ ಹ್ಯೇತೇ ಮಹೀಕ್ಷಿತಃ ॥೧೪॥

ಚತುರ್ವಿಂಶತ್ತಥೈಕ್ಷ್ವಾಕಾಃ ಪಾಂಚಾಲಾಃ ಸಪ್ತವಿಂಶತಿಃ ।
ಕಾಶೇಯಾಸ್ತು ಚತುರ್ವಿಂಶದಷ್ಟಾವಿಂಶತಿರ್ಹೈಹಯಾಃ ॥೧೫॥

---

೧೦ ಅಜಾತಶತ್ರುವು ಇಪ್ಪತ್ತೇಳು ವರ್ಷವೂ, ವಂಶಕನು ಇಪ್ಪತ್ತನಾಲ್ಕು ವರ್ಷವೂ ರಾಜ್ಯಭಾರ ಮಾಡುವರು

೧೧ ಉದಾಸಿಯು ಮೂವತ್ತುಮೂರು ವರ್ಷ ದೊರೆಯಾಗಿರುವನು ಅನಂತರ ನಂದಿವರ್ಧನನು ನಲವತ್ತುವರ್ಷಗಳ ಕಾಲ ರಾಜ್ಯಭಾರ ನಡೆಸುವನು

೧೨ ಮಹಾನಂದಿಯು ನಲವತ್ತು ಮೂರುವರ್ಷ ಮಗಧರಾಜ್ಯದ ಅಧಿಪತಿಯಾಗಿರುವನು ಇವರೆಲ್ಲರೂ ಮುಂದೆ ಬರಲಿರುವ ಶಿಶುನಾಕವಂಶದವರು

೧೩ ಶಿಶುನಾಕವಂಶದ ರಾಜರು ಒಟ್ಟು ಮುನ್ನೂರುವರ್ಷಗಳ ಕಾಲ ರಾಜ್ಯಭಾರ ಮಾಡುವರು ಇವರು ಹೆಸರಿಗೆಮಾತ್ರ ಕ್ಷತ್ರಿಯರು ಅಷ್ಟೆ!

೧೪ ಕಲಿಯುಗ ಬರುವವರೆಗೆ ಇವರೊಡನೆ ಇನ್ನೂ ಬೇರೆ ಬೇರೆ ಸಂತತಿಯ ರಾಜರೂ ಕೂಡ ಇರುವರು ಇವರೆಲ್ಲರೂ ಸಮಾನಕಾಲಿಕರಾಗಿ ರಾಜ್ಯವಾಳುವರು

೧೫-೧೭ ಐಕ್ಷ್ವಾಕರು ಎಂದರೆ ಇಕ್ಷ್ವಾಕುವಂಶದರು ಇಪ್ಪತ್ತನಾಲ್ಕು ಮಂದಿ ಪಾಂಚಾಲರು ಇಪ್ಪತ್ತೇಳು ಮಂದಿ, ಕಾಶೇಯರು ಇಪ್ಪತ್ತನಾಲ್ಕು ಮಂದಿ,

ಕಲಿಂಗಾಶ್ಚೈವ ದ್ವಾತ್ರಿಂಶದಶ್ಮಕಾಃ ಪಂಚವಿಂಶತಿಃ ।
ಕುರವಶ್ಚಾಪಿ ಷಟ್ತ್ರಿಂಶದಷ್ಟಾವಿಂಶಾಸ್ತು ಮೈಥಿಲಾಃ ॥೧೬॥

ಶೂರಸೇನಾಸ್ತ್ರಯೋವಿಂಶದ್ವೀತಿಹೋತ್ರಾಶ್ಚ ವಿಂಶತಿಃ ।
ಏತೇ ಸರ್ವೇ ಭವಿಷ್ಯಂತಿ ಏಕಕಾಲಂ ಮಹೀಕ್ಷಿತಃ ॥೧೭॥

ಮಹಾನಂದಿಸುತಶ್ಚಾಪಿ ಶೂದ್ರಾಯಾಂ ಕಲಿಕಾಂಶಜಃ ।
ಉತ್ಪತ್ಸ್ಯತೇ ಮಹಾಪದ್ಮಃ ಸರ್ವಕ್ಷತ್ರಾಂತಕೋ ನೃಪಃ ॥೧೮॥

ತತಃ ಪ್ರಭೃತಿ ರಾಜಾನೋ ಭವಿಷ್ಯಾಃ ಶೂದ್ರಯೋನಯಃ ।
ಏಕರಾಟ್ ಸ ಮಹಾಪದ್ಮ ಏಕಚ್ಛತ್ರೋ ಭವಿಷ್ಯತಿ ॥೧೯॥

ಅಷ್ಟಾಶೀತಿಸ್ತು ವರ್ಷಾಣಿ ಪೃಥಿವ್ಯಾಂ ಚ ಭವಿಷ್ಯತಿ ।
ಸರ್ವಕ್ಷತ್ರಮಥೋತ್ಸಾದ್ಯ ಭಾವಿನಾರ್ಥೇನ ಚೋದಿತಃ ॥೨೦॥

---

ಹೈಹಯರು ಇಪ್ಪತ್ತೆಂಟು ಮಂದಿ, ಕಲಿಂಗರು ಮೂವತ್ತೆರಡು ಮಂದಿ, ಅಶ್ಮಕರು ಇಪ್ಪತ್ತೈದು ಮಂದಿ, ಕೌರವರು ಇಪ್ಪತ್ತಾರು ಮಂದಿ, ಮೈಥಿಲರು ಇಪ್ಪತ್ತೆಂಟು ಮಂದಿ, ಶೂರಸೇನರು ಇಪ್ಪತ್ತಮೂರು ಮಂದಿ, ವೀತಿಹೋತ್ರರು ಇಪ್ಪತ್ತು ಮಂದಿ ಹೀಗೆ ಬೇರೆ ಬೇರ ವಂಶದ ರಾಜರು ಏಕಕಾಲದಲ್ಲಿ ರಾಜ್ಯಭಾರ ಮಾಡುತ್ತಿರುವರು

೧೮ ಮಹಾನಂದಿಗೆ ಶೂದ್ರಸ್ತ್ರೀಯೊಬ್ಬಳ ಹೊಟ್ಟೆಯಲ್ಲಿ ಕಲಿಯ ಅಂಶದಿಂದ ಮಹಾಪದ್ಮನೆಂಬ ಮಗನು ಹುಟ್ಟುವನು ಅವನು ಅರಸನಾಗಿ ಕ್ಷತ್ರಿಯರೆಲ್ಲರ ವಿನಾಶಕ್ಕೂ ಕಾರಣವಾಗುವನು

೧೯ ಅಲ್ಲಿಂದ ಮುಂದೆ ಶೂದ್ರವರ್ಣದವರು ರಾಜರಾಗುವರು ಆ ಮಹಾಪದ್ಮನು ಚಕ್ರವರ್ತಿಯಾಗಿ ಏಕಚ್ಛತ್ರಾಧಿಪತಿಯೆನಿಸುವನು

೨೦ ಅವನು ಎಂಬತ್ತೆಂಟುವರ್ಷಗಳಕಾಲ ಭೂಪತಿಯಾಗಿರುವನು ಕ್ಷತ್ರಿಯ ಕುಲವೆಲ್ಲವನ್ನೂ ಅವನು ನಿರ್ಮೂಲಗೊಳಿಸುವನು ಮುಂದೆ ಹಾಗಾಗ ಬೇಕೆಂಬ ದೈವಸಂಕಲ್ಪವಿರುವುದರಿಂದಲೇ ಅವನಿಗೆ ಹಾಗೆ ಬುದ್ಧಿ ಹುಟ್ಟುವುದು

ಸುಕಲ್ಪಾದಿಸುತಾ ಹ್ಯಷ್ಟೌ ಸಮಾ ದ್ವಾದಶ ತೇ ನೃಪಾಃ ।
ಮಹಾಪದ್ಮಸ್ಯ ಪರ್ಯಾಯೇ ಭವಿಷ್ಯಂತಿ ನೃಪಾಃ ಕ್ರಮಾತ್ ॥೨೧॥

ಉದ್ಧರಿಷ್ಯತಿ ಕೌಟಿಲ್ಯಃ ಸಮೈರ್ದ್ವಾದಶಭಿಃ ಸುತಾನ್ ।
ಕೌಟಿಲ್ಯಶ್ಚಂದ್ರಗುಪ್ತಂ ತು ತತೋ ರಾಷ್ಟ್ರೇಽಭಿಷೇಕ್ಷ್ಯತಿ ॥೨೨॥

ಭುಕ್ತ್ವಾ ಮಹೀಂ ವರ್ಷಶತಂ ತತೋ ಮೌರ್ಯಾನ್ ಗಮಿಷ್ಯತಿ ।
ಭವಿತಾ ಶತಧನ್ವಾ ಚ ತಸ್ಯ ಪುತ್ರಸ್ತು ಷಟ್ಸಮಾಃ ।
ಬೃಹದ್ರಥಸ್ತು ವರ್ಷಾಣಿ ತಸ್ಯ ಪುತ್ರಶ್ಚ ಸಪ್ತತಿಃ ॥೨೩॥

ಷಟ್ತ್ರಿಂಶತ್ತು ಸಮಾ ರಾಜಾ ಭವಿತಾ ಶಕ ಏವ ಚ ।
ಸಪ್ತಾನಾಂ ದಶ ವರ್ಷಾಣಿ ತಸ್ಯ ನಪ್ತಾ ಭವಿಷ್ಯತಿ ॥೨೪॥

ರಾಜಾ ದಶರಥೋಽಷ್ಟೌ ತು ತಸ್ಯ ಪುತ್ರೋ ಭವಿಷ್ಯತಿ ।
ಭವಿತಾ ನವ ವರ್ಷಾಣಿ ತಸ್ಯ ಪುತ್ರಶ್ಚ ಸಪ್ತತಿಃ ॥೨೫॥

---

೨೧ ಸುಕಲ್ಪ ಮುಂತಾದ ಎಂಟು ಜನರು ಮಹಾಪದ್ಮನ ಮಕ್ಕಳು ಅವನ ತರುವಾಯ ಅವರು ಹನ್ನೆರಡು ವರ್ಷಗಳ ಕಾಲ ಅರಸರಾಗುವರು

೨೨ ಹನ್ನೆರಡು ವರ್ಷಗಳ ಬಳಿಕ ಚಾಣಕ್ಯನು ಮಹಾಪದ್ಮನ ಮಕ್ಕಳನ್ನು ನಿರ್ಮೂಲಗೊಳಿಸಿ ಚಂದ್ರಗುಪ್ತನಿಗೆ ರಾಜ್ಯದಲ್ಲಿ ಅಭಿಷೇಕ ಮಾಡುವನು ಚಂದ್ರಗುಪ್ತನು ನೂರುವರ್ಷ ಆಳಿದ ಬಳಿಕ ರಾಜ್ಯವು ಮೌರ್ಯ ವಂಶದ ಮುಂದಿನ ಅರಸರನ್ನು ಸೇರುವುದು

೨೩ ಚಂದ್ರಗುಪ್ತನ ಮಗನಾದ ಶತಧನ್ವನು ಆರುವರ್ಷವೂ, ಅವನ ಪುತ್ರನಾದ ಬೃಹದ್ರಥನು ಎಪ್ಪತ್ತುವರ್ಷವೂ ರಾಜ್ಯವಾಳುವರು

೨೪ ಶಕರಾಜನು ಮೂವತ್ತಾರುವರ್ಷ ಅರಸನಾಗಿರುವನು ಅವನ ಮೊಮ್ಮಗನ ಮಗನು ಎಪ್ಪತ್ತುವರ್ಷ ಭೂಮಿಯನ್ನು ಪಾಲಿಸುವನು

೨೫. ದಶರಥನೆಂಬ ರಾಜನು ಎಂಟುವರ್ಷವೂ, ಅವನ ಮಗನು ಒಂಬತ್ತುವರ್ಷವೂ, ಅವನ ಪುತ್ರನು ಎಪ್ಪತ್ತುವರ್ಷವೂ ರಾಜ್ಯವನ್ನು ಆಳುವರು

ಇತ್ಯೇತೇ ದಶ ಮೌರ್ಯಾಸ್ತು ಯೇ ಭೋಕ್ಷ್ಯಂತಿ ವಸುಂಧರಾಂ ।
ಸಪ್ತತ್ರಿಂಶಚ್ಛತಂ ಪೂರ್ಣಂ ತೇಭ್ಯಃ ಶುಂಗಾನ್ ಗಮಿಷ್ಯತಿ ॥೨೬॥

ಪುಷ್ಯಮಿತ್ರಸ್ತು ಸೇನಾನೀರುದ್ಧೃತ್ಯ ಸ ಬೃಹದ್ರಥಾನ್ ।
ಕಾರಯಿಷ್ಯತಿ ವೈ ರಾಜ್ಯಂ ಷಟ್ತ್ರಿಂಶತ್ತು ಸಮಾ ನೃಪಃ ॥೨೭॥

ಭವಿತಾಪಿ ವಸುಜ್ಯೇಷ್ಠಃ ಸಪ್ತವರ್ಷಾಣಿ ವೈ ನೃಪಃ ।
ವಸುಮಿತ್ರಸ್ತಥಾ ಭಾವ್ಯೋ ದಶ ವರ್ಷಾಣಿ ವೈ ತತಃ ॥೨೮॥

ತತೋಽಂತಕಃ ಸಮೇ ದ್ವೇ ತು ತಸ್ಯ ಪುತ್ರೋ ಭವಿಷ್ಯತಿ ।
ಭವಿಷ್ಯತಿ ಸಮಾಸ್ತಸ್ಮಾತ್ತ್ರೀಣ್ಯೇವಂ ಸಪುಳಿಂದಕಃ ॥೨೯॥

ಭವಿತಾ ವಜ್ರಮಿತ್ರಸ್ತು ಸಮಾ ರಾಜಾ ಪುನರ್ಭವಃ ।
ದ್ವಾತ್ರಿಂಶತ್ತು ಸಮಾಭಾಗಃ ಸಮಾಭಾಗಾತ್ತತೋ ನೃಪಃ ॥೩೦॥

---

೨೬ ಈ ರೀತಿಯಾಗಿ ಮೌರ್ಯವಂಶದ ಹತ್ತು ಜನ ರಾಜರು ಭೂಮಿಯನ್ನಾಳುವರು ಬಳಿಕ ರಾಜ್ಯವು ಅವರ ಕೈಯನ್ನು ಬಿಟ್ಟು ನೂರುಮೂವತ್ತು ವರ್ಷಗಳ ಕಾಲ ಶುಂಗವಂಶದ ಅರಸರ ಕೈಯಲ್ಲಿರುವುದು

೨೭ ಸೇನಾಪತಿಯಾದ ಪುಷ್ಯಮಿತ್ರನು ಬೃಹದ್ರಥರನ್ನು ಮೂಲೆಗೆ ಕೂರಿಸಿ, ತಾನೇ, ಅರಸನಾಗಿ ಮೂವತ್ತಾರು ವರ್ಷ ರಾಜ್ಯಭಾರಮಾಡುವನು

೨೮ ಬಳಿಕ ವಸುಜ್ಯೇಷ್ಠನು ಏಳುವರ್ಷ ರಾಜನಾಗಿರುವನು ಅವನಾದ ಮೇಲೆ ಸುಮಿತ್ರನು ಹತ್ತುವರ್ಷಗಳ ಕಾಲ ರಾಜ್ಯವನ್ನು ಪರಿಪಾಲಿಸುವನು

೨೯ ಅನಂತರ ಅವನ ಮಗನಾದ ಅಂತಕನು ಎರಡು ವರ್ಷವೂ ಅಲ್ಲಿಂದ ಮುಂದೆ ಅವನ ಪುತ್ರನಾದ ಪುಳಿಂದಕನು ಮೂರುವರ್ಷವೂ ಸಿಂಹಾಸನದಲ್ಲಿರುವರು

೩೦-೩೧ ವಜ್ರಮಿತ್ರನು ಒಂದುವರ್ಷ ರಾಜ್ಯವಾಳುವನು ಆ ಮೇಲೆ ಪುನರ್ಭವನು ಅರಸಾಗುವನು ಸಮಾಭಾಗನು ಮೂವತ್ತೆರಡುವರ್ಷ ದೊರೆತನ

**ಭವಿಷ್ಯತಿ ಸುತಸ್ತಸ್ಯ ದೇವಭೂಮಿಃ ಸಮಾ ದಶ ।**
**ದಶೈತೇ ಕ್ಷುದ್ರರಾಜಾನೋ ಭೋಕ್ಷ್ಯಂತೀಮಾಂ ವಸುಂಧರಾಂ ॥೩೧॥**

**ಶತಂ ಪೂರ್ಣಂ ಶತೇ ದ್ವೇ ಚ ತತಃ ಶುಂಗಾನ್ ಗಮಿಷ್ಯತಿ ।**
**ಅಮಾತ್ಯೋ ವಸುದೇವಸ್ತು ಪ್ರಸಹ್ಯ ಹ್ಯವನೀಂ ನೃಪಃ ॥೩೨॥**

**ದೇವಭೂಮಿಮಥೋತ್ಸಾದ್ಯ ಶೌಂಗಸ್ತು ಭವಿತಾ ನೃಪಃ ।**
**ಭವಿಷ್ಯತಿ ಸಮಾ ರಾಜಾ ನವ ಕಾಣ್ವಾಯನೋ ದ್ವಿಜಃ ॥೩೩॥**

**ಭೂಮಿಮಿತ್ರಃ ಸುತಸ್ತಸ್ಯ ಚತುರ್ದಶ ಭವಿಷ್ಯತಿ ।**
**ನಾರಾಯಣಃ ಸುತಸ್ತಸ್ಯ ಭವಿತಾ ದ್ವಾದಶೈವ ತು ॥೩೪॥**

**ಸುಶರ್ಮಾ ತತ್ಸುತಶ್ಚಾಪಿ ಭವಿಷ್ಯತಿ ದಶೈವ ತು ।**
**ಇತ್ಯೇತೇ ಶುಂಗಭೃತ್ಯಾಸ್ತು ಸ್ಮೃತಾಃ ಕಾಣ್ವಾಯನಾ ನೃಪಾಃ ॥೩೫॥**

---

ಮಾಡುವನು ಅವನ ಬಳಿಕ ಅವನ ಮಗನಾದ ದೇವಭೂಮಿ ರಾಜನಾಗಿ ಹತ್ತು ವರ್ಷಗಳ ಕಾಲ ಪ್ರಜೆಗಳನ್ನು ಪಾಲಿಸುವನು ಹೀಗೆ ಹತ್ತು ಜನ ಕ್ಷುದ್ರರಾಜರು ಪೊಡವಿಯನ್ನು ಆಳುವರು

೩೨-೩೩ ಬಳಿಕ ಮುನ್ನೂರು ವರ್ಷಗಳ ಕಾಲ ರಾಜ್ಯದ ಒಡೆತನವು ಶುಂಗರ ಸಂತತಿಗೆ ಸೇರುವುದು ವಸುದೇವನೆಂಬ ಅಮಾತ್ಯನು ರಾಜನಾದ ದೇವಭೂಮಿಯನ್ನು ಸಂಹರಿಸಿ ರಾಜ್ಯವನ್ನು ಕಿತ್ತುಕೊಂಡು ಅರಸಾಗುವನು ಕಣ್ವಗೋತ್ರದವನಾದ ಆತನು ಒಂಬತ್ತುವರ್ಷಗಳ ಕಾಲ ಆಧಿಪತ್ಯ ನಡೆಸುವನು

೩೪-೩೫ ಅವನ ಮಗನಾದ ಭೂಮಿಮಿತ್ರನು ಹದಿನಾಲ್ಕುವರ್ಷ ರಾಜನಾಗಿರುವನು ಬಳಿಕ ಅವನ ಪುತ್ರನಾದ ನಾರಾಯಣನು ಹನ್ನೆರಡು ವರ್ಷವೂ, ತತ್ಪುತ್ರನಾದ ಸುಶರ್ಮನು ಹತ್ತು ವರ್ಷವೂ ರಾಜ್ಯವನ್ನು ಪರಿಪಾಲಿಸುವರು ಇವರೆಲ್ಲರೂ ಶುಂಗರಾಜರ ಕೈಕೆಳಗಿನ ಅಧಿಕಾರಿಯಾದ ವಸುದೇವನ ವಂಶದವರು ಕಣ್ವಗೋತ್ರದವರು ಇವರಿಗೆ ಕಾಣ್ವಾಯನರೆಂದು ಹೆಸರು

ಚತ್ವಾರಿಂಶದ್ದ್ವಿಜಾ ಹ್ಯೇತೇ ಕಣ್ವಾ ಭೋಕ್ಷ್ಯಂತಿ ವೈ ಮಹೀಂ ।
ಚತ್ವಾರಿಂಶತ್ಪಂಚ ಚೈವ ಭೋಕ್ಷ್ಯಂತೀಮಾಂ ವಸುಂಧರಾಂ ॥೩೬॥

ಏತೇ ಪ್ರಣತಸಾಮಂತಾ ಭವಿಷ್ಯಾ ಧಾರ್ಮಿಕಾಶ್ಚ ಯೇ ।
ಯೇಷಾಂ ಪರ್ಯಾಯಕಾಲೇ ತು ಭೂಮಿರಾಂಧ್ರಾನ್ ಗಮಿಷ್ಯತಿ ॥೩೭॥

ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ರಾಜವಂಶಾನುಕೀರ್ತನೇ
ದ್ವಿಸಪ್ತತ್ಯಧಿಕದ್ವಿಶತತಮೋಽಧ್ಯಾಯಃ

---

೩೬ ಕಣ್ವಗೋತ್ರದವರಾದ ಈ ನಲವತ್ತು ಜನ ಬ್ರಾಹ್ಮಣರಾಜರೂ ತಮ್ಮ ರಾಜ್ಯವನ್ನಾಳುವರು ಇವರ ಸಮಕಾಲಿಕರಾಗಿ ಇನ್ನೂ ನಲವತ್ತೈದು ಜನ ಭೂಪಾಲಕರು ಈ ಭೂಮಿಯ ಬೇರೆಬೇರೆ ಕಡೆಗಳಲ್ಲಿ ರಾಜ್ಯಭಾರವನ್ನು ನಡೆಸುವರು

೩೭ ಮುಂದೆ ಕಲಿಯುಗದಲ್ಲಿ ಆಳುವ ಈ ರಾಜರು ಸಾಮಂತರಿಂದ ಮನ್ನಣೆಯನ್ನು ಪಡೆದು ಧರ್ಮನಿರತರಾಗಿರುವರು ಇವರ ಆಳ್ವಿಕೆ ಮುಗಿದ ಮೇಲೆ ಭೂಮಿಯು ಆಂಧ್ರರಾಜರ ವಶವಾಗುವುದು

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿಯೂ ಸಹ ಕಲಿಯುಗದಲ್ಲಿ ಮುಂದೆ ರಾಜ್ಯಭಾರಮಾಡುವ ರಾಜರ ವಿಷಯವನ್ನು ತಿಳಿಸಿದೆ

ಬೃಹದ್ರಥರನ್ನು ಮೂಲೆಗೊತ್ತರಿಸಿ ಪುಲಕನು ಅರಸಾಗುವನು ಇವನ ಸಂತತಿಯವರು ಕೆಲಕಾಲ ರಾಜ್ಯವಾಳಿದ ಮೇಲೆ ಶಿಶುನಾಕನು ಇವರನ್ನೋಡಿಸಿ ಸಿಂಹಾಸನವನ್ನು ಹತ್ತುವನು ಮುನ್ನೂರರವತ್ತು ವರ್ಷಗಳ ಕಾಲ ರಾಜ್ಯವು ಇವನ ವಂಶದವರ ಕೈಯಲ್ಲಿರುವುದು ಅಟ್ಟಹಾಸದಿಂದ ಮೆರೆಯುವ ನಂದರಾಜರನ್ನು ನಿರ್ಮೂಲಮಾಡಿ ಚಾಣಕ್ಯನು ಚಂದ್ರಗುಪ್ತನಿಗೆ ಪಟ್ಟವನ್ನು ಕಟ್ಟುವನು ಇವನ

ಸಂತತಿಯವರೇ ಮೌರ್ಯರು. ಪುಷ್ಯಮಿತ್ರನೆಂಬ ಸೇನಾಪತಿಯು ಈ ವಂಶದ ಕೊನೆಯ ರಾಜನಿಂದ ಸಿಂಹಾಸನವನ್ನು ಕಿತ್ತುಕೊಂಡು ಶುಂಗಸಂತತಿಯನ್ನು ಸ್ಥಾಪಿಸುವನು ಅಮಾತ್ಯನಾದ ವಸುದೇವನು ಮುಂದೆ ಈ ವಂಶದವರನ್ನೋಡಿಸಿ ತಾನು ಪಟ್ಟಕ್ಕೆ ಬರುವನು ಇವನ ವಂಶದವರಿಗೆ ಕಾಣ್ವಾಯನರೆಂದು ಹೆಸರು ಕೊನೆಗೆ ಆಂಧ್ರರು ಇವರನ್ನು ಗೆದ್ದು ರಾಜ್ಯವನ್ನಾಕ್ರಮಿಸುವರು

ಶ್ರೀಮತ್ಸ್ಯಮಹಾಪುರಾಣದಲ್ಲಿ ರಾಜವಂಶಾನುಕೀರ್ತನದಲ್ಲಿ
ಇನ್ನೂರೆಪ್ಪತ್ತೆರಡನೆಯ ಅಧ್ಯಾಯವು ಮುಗಿದುದು

## ಅಥ ತ್ರಿಸಪ್ತತ್ಯಧಿಕದ್ವಿಶತತಮೋಽಧ್ಯಾಯಃ

|| ಸೂತ ಉವಾಚ ||

ಕಾಣ್ವಾಯನಾಸ್ತತೋ ಭೂಪಾಃ ಸುಶರ್ಮಾಣಂ ಪ್ರಗೃಹ್ಯ ತಂ ।
ಶುಂಗಾನಾಂ ಚೈವ ಯಚ್ಛೇಷಂ ಕ್ಷಪಯಿತ್ವಾ ಬಲೀಯಸಃ ॥ ೧ ॥

ಶಿಶುಕೋಽಂಧ್ರಸಜಾತೀಯಃ ಪ್ರಾಪ್ಸ್ಯತೀಮಾಂ ವಸುಂಧರಾಂ ।
ತ್ರಯೋವಿಂಶತ್ಸಮಾ ರಾಜಾ ಶಿಶುಕಸ್ತು ಭವಿಷ್ಯತಿ ॥ ೨ ॥

ಕೃಷ್ಣಭ್ರಾತಾ ಯವೀಯಾಂಸ್ತು ಅಷ್ಟಾದಶ ಭವಿಷ್ಯತಿ ।
ಶ್ರೀಮಲ್ಲಕರ್ಣಿರ್ಭವಿತಾ ತಸ್ಯ ಪುತ್ರಸ್ತು ವೈ ದಶ ॥ ೩ ॥

ಪೂರ್ಣೋತ್ಸಂಗಸ್ತತೋ ರಾಜಾ ವರ್ಷಾಣ್ಯಷ್ಟಾದಶೈವ ತು ।
ಪಂಚಾಶಚ್ಚ ಸಮಾಃ ಷಟ್ಚ ಶಾಂತಕರ್ಣಿರ್ಭವಿಷ್ಯತಿ ।
ದಶ ಚಾಷ್ಟೌ ಚ ವರ್ಷಾಣಿ ತಸ್ಯ ಲಂಬೋದರಃ ಸುತಃ ॥ ೪ ॥

---

೧-೨ ಸೂತಪೌರಾಣಿಕನು ಹೇಳಿದನು —ಕಣ್ವಗೋತ್ರದ ಬ್ರಾಹ್ಮಣ ರಾಜರು ನಾಡನ್ನು ಆಳುವರು ಬಳಿಕ ಆಂಧ್ರದೇಶದವನಾದ ಶಿಶುಕನೆಂಬುವನು ಆ ರಾಜನನ್ನು ಸೆರೆಹಿಡಿದು, ಶುಂಗವಂಶದವರಲ್ಲಿ ಅಳಿದುಳಿದವರನ್ನು ಅಡಗಿಸಿ, ಇನ್ನೂ ಪ್ರಬಲರಾದ ಇತರರನ್ನು ನಿರ್ಮೂಲಮಾಡಿ ಇಪ್ಪತ್ತುಮೂರು ವರ್ಷಕಾಲ ಈ ದೇಶವನ್ನೆಲ್ಲ ಆಳುವನು

೩ ಅವನ ತಮ್ಮನಾದ ಕೃಷ್ಣಭ್ರಾತೃವೆಂಬುವನು ಹದಿನೆಂಟುವರ್ಷ ರಾಜ್ಯಭಾರಮಾಡುವನು ಅವನ ಮಗನಾದ ಮಲ್ಲಕರ್ಣಿಯು ಹತ್ತುವರ್ಷ ರಾಜನಾಗಿರುವನು

೪-೫ ಬಳಿಕ ಪೂರ್ಣೋತ್ಸಂಗನು ಹದಿನೆಂಟು ವರ್ಷ ರಾಜ್ಯಭಾರ ಮಾಡುವನು ಶಾಂತಕರ್ಣಿ ಐವತ್ತಾರುವರ್ಷಗಳ ಕಾಲವೂ, ಅವನ ಮಗನಾದ

**ಅಪೀತಕೋ ದಶ ದ್ವೇ ಚ ತಸ್ಯ ಪುತ್ರೋ ಭವಿಷ್ಯತಿ ।**
**ದಶ ಚಾಷ್ಟೌ ಚ ವರ್ಷಾಣಿ ಮೇಘಸ್ವಾತಿರ್ಭವಿಷ್ಯತಿ ॥ ೫ ॥**

**ಸ್ವಾತಿಶ್ಚ ಭವಿತಾ ರಾಜಾ ಸಮಾಸ್ತ್ವಷ್ಟಾದಶೈವ ತು ।**
**ಸ್ಕಂಧಸ್ವಾತಿಸ್ತಥಾ ರಾಜಾ ಸಮಾಸ್ತ್ವಷ್ಟಾದಶೈವ ತು ॥ ೬ ॥**

**ಮೃಗೇಂದ್ರಸ್ವಾತಿಕರ್ಣಸ್ತು ಭವಿಷ್ಯತಿ ಸಮಾಸ್ತ್ರಯಃ ।**
**ಕುಂತಲಸ್ವಾತಿಕರ್ಣಸ್ತು ಭವಿತಾಷ್ಟೌ ಸಮಾ ನೃಪಃ ॥ ೭ ॥**

**ಏಕಸಂವತ್ಸರಂ ರಾಜಾ ಸ್ವಾತಿವರ್ಣೋ ಭವಿಷ್ಯತಿ ॥ ೮ ॥**

**ಭವಿತಾ ರಿಕ್ತವರ್ಣಸ್ತು ವರ್ಷಾಣಿ ಪಂಚವಿಂಶತಿಃ ।**
**ತತಃ ಸಂವತ್ಸರಾನ್ ಪಂಚ ಹಾಲೋ ರಾಜಾ ಭವಿಷ್ಯತಿ ॥ ೯ ॥**

**ಪಂಚ ಮಂದುಲಕೋ ರಾಜಾ ಭವಿಷ್ಯತಿ ಸಮಾ ನೃಪಃ ।**
**ಪುರೀಂದ್ರಸೇನೋ ಭವಿತಾ ತಸ್ಮಾತ್ಸೌಮ್ಯೋ ಭವಿಷ್ಯತಿ ॥೧೦॥**

---

ಲಂಬೋದರನು ಹದಿನೆಂಟುವರ್ಷಕಾಲವೂ ಅವನ ಪುತ್ರನಾದ ಆಪೀತನು ಇಪ್ಪತ್ತುವರ್ಷಗಳ ಕಾಲವೂ ಭೂಪಾಲಕರಾಗಿರುವರು ಮೇಘಸ್ವಾತಿಯು ಹದಿನೆಂಟುವರ್ಷ ರಾಜ್ಯವನ್ನು ಆಳುವನು

೬ ಸ್ವಾತಿಯು ಹದಿನೆಂಟುವರ್ಷ ರಾಜ್ಯಭಾರ ಮಾಡುವನು ಸ್ಕಂದಸ್ವಾತಿಯ ಆಳ್ವಿಕೆಯು ಐದುವರ್ಷ ಮಾತ್ರವೇ ನಡೆಯುವುದು

೭-೮ ಮೃಗೇಂದ್ರಸ್ವಾತಿಕರ್ಣನು ಮೂರುವರ್ಷವೂ, ಕುಂತಲಸ್ವಾತಿಕರ್ಣನು ಎಂಟುವರ್ಷವೂ ದೊರೆತನವನ್ನು ನಡೆಸುವರು ಸ್ವಾತಿವರ್ಣನೆಂಬವನಾದರೋ ಒಂದೇವರ್ಷ ರಾಜನಾಗಿರುವನು

೯ ರಿಕ್ತವರ್ಣನು ಇಪ್ಪತ್ತೈದುವರ್ಷ ಅರಸನಾಗಿರುವನು ಬಳಿಕ ಹಾಲನೆಂಬಾತನು ರಾಜನಾಗಿ ಐದುವರ್ಷ ರಾಜ್ಯವಾಳುವನು

೧೦ ಮಂದುಲಕನು ಐದುವರ್ಷ ಭೂಪಾಲಕನಾಗಿರುವನು ಅವನ ಬಳಿಕ ಪುರೀಂದ್ರಸೇನನೂ ತರುವಾಯ ಸೌಮ್ಯನೂ ರಾಜ್ಯಭಾರ ಮಾಡುವರು

ಸುಂದರಃ ಶಾಂತಿಕರ್ಣಸ್ತು ಅಬ್ದಮೇಕಂ ಭವಿಷ್ಯತಿ ।
ಚಕೋರಃ ಸ್ವಾತಿಕರ್ಣಸ್ತು ಷಣ್ಮಾಸಾನ್ವೈ ಭವಿಷ್ಯತಿ ॥೧೧॥

ಅಷ್ಟಾವಿಂಶತಿವರ್ಷಾಣಿ ಶಿವಸ್ವಾತಿರ್ಭವಿಷ್ಯತಿ ।
ರಾಜಾ ಚ ಗೌತಮೀಪುತ್ರೋ ಹ್ಯೇಕವಿಂಶತ್ಯತೋ ನೃಪಃ ॥೧೨॥

ಅಷ್ಟಾವಿಂಶಃ ಸುತಸ್ತಸ್ಯ ಪುಲೋಮಾ ವೈ ಭವಿಷ್ಯತಿ ।
ಶಿವಶ್ರೀರ್ವೈ ಪುಲೋಮಾ ತು ಸಪ್ತೈವ ಭವಿತಾ ನೃಪಃ ॥೧೩॥

ಶಿವಸ್ಕಂದಃ ಶಾಂತಿಕರ್ಣಾದ್ಭವಿತಾ ಹ್ಯಾತ್ಮಜಃ ಸಮಾಃ ।
ನವವಿಂಶತಿವರ್ಷಾಣಿ ಯಜ್ಞಶ್ರೀಃ ಶಾಂತಿಕರ್ಣಿಕಃ ॥೧೪॥

ಷಡೇವ ಭವಿತಾ ತಸ್ಮಾದ್ವಿಜಯಸ್ತು ಸಮಾಸ್ತತಃ ।
ಚಂಡಶ್ರೀಃ ಶಾಂತಿಕರ್ಣಸ್ತು ತಸ್ಯ ಪುತ್ರಃ ಸಮಾ ದಶ ॥೧೫॥

---

೧೧ ಸುಂದರ ಶಾಂತಿಕರ್ಣನು ಒಂದುವರ್ಷವೂ, ಚಕೋರಸ್ವಾತಿಕರ್ಣನು ಆರುತಿಂಗಳೂ ರಾಜರಾಗಿರುವರು

೧೨ ಶಿವಸ್ವಾತಿಯು ಇಪ್ಪತ್ತೆಂಟುವರ್ಷ ಪಟ್ಟದಲ್ಲಿರುವನು ಗೌತಮೀ ಪುತ್ರನೆಂಬ ಅರಸು ಇಪ್ಪತ್ತೊಂದು ವರ್ಷ ರಾಜ್ಯವಾಳುವನು

೧೩ ಅವನ ಮಗನಾದ ಪುಲೋಮನು ಇಪ್ಪತೆಂಟುವರ್ಷ ಭೂಮಿಯನ್ನು ರಕ್ಷಿಸುವನು ಬಳಿಕ ಶಿವಶ್ರೀಪುಲೋಮನು ಏಳೇವರ್ಷ ರಾಜನಾಗಿರುವನು

೧೪ ಶಾಂತಿಕರ್ಣನ ಪುತ್ರನಾದ ಶಿವಸ್ಕಂಧನು ತರುವಾಯ ಒಂದು ವರ್ಷಕಾಲ ರಾಜ್ಯವಾಳುವನು ಯಜ್ಞಶ್ರೀಶಾಂತಿಕರ್ಣನೆಂಬಾತನು ಇಪ್ಪತ್ತೊಂಬತ್ತುವರ್ಷ ಅರಸನಾಗಿರುವನು

೧೫ ಅವನ ಮಗನಾದ ವಿಜಯನು ಆರುವರ್ಷ ಮಾತ್ರವೇ ರಾಜ್ಯವಾಳುವನು ಅವನ ತರುವಾಯ ಅವನ ಪುತ್ರನಾದ ಚಂಡಶ್ರೀಶಾಂತಿಕರ್ಣನು ಹತ್ತುವರ್ಷ ದೊರೆಯಾಗಿರುವನು

ಪುಲೋಮಾ ಸಪ್ತ ವರ್ಷಾಣಿ ಅನ್ಯಸ್ತೇಷಾಂ ಭವಿಷ್ಯತಿ ।
ಏಕೋನವಿಂಶತಿರ್ಹ್ಯೇತೇ ಆಂಧ್ರಾ ಭೋಕ್ಷ್ಯಂತಿ ವೈ ಮಹೀಂ ॥೧೬॥

ತೇಷಾಂ ವರ್ಷಶತಾನಿ ಸ್ಯುಶ್ಚತ್ವಾರಿ ಷಷ್ಟಿರೇವ ಚ ।
ಆಂಧ್ರಾಣಾಂ ಸಂಸ್ಥಿತಾ ರಾಜ್ಯೇ ತೇಷಾಂ ಭೃತ್ಯಾನ್ವಯೇ ನೃಪಾಃ ॥೧೭॥

ಸಪ್ತೈವಾಂಧ್ರಾ ಭವಿಷ್ಯಂತಿ ದಶಾಽಽಭೀರಾಸ್ತಥಾ ನೃಪಾಃ ।
ಸಪ್ತ ಗರ್ದಭಿಲಾಶ್ಚಾಪಿ ಶಕಾಶ್ಚಾಷ್ಟಾದಶೈವ ತು ॥೧೮॥

ಯವನಾಷ್ಟೌ ಭವಿಷ್ಯಂತಿ ತುಷಾರಾಶ್ಚ ಚತುರ್ದಶ ।
ತ್ರಯೋದಶ ಗುರುಂಡಾಶ್ಚ ಹೂಣಾ ಹ್ಯೇಕೋನವಿಂಶತಿಃ ॥೧೯॥

ಯವನಾಷ್ಟೌ ಭವಿಷ್ಯಂತಿ ಸಪ್ತಾಶೀತಿಂ ಮಹೀಮಿಮಾಂ ।
ಸಪ್ತ ಗರ್ದಭಿಲಾ ಭೂಪಾ ಭೋಕ್ಷ್ಯಂತೀಮಾಂ ವಸುಂಧರಾಂ ॥೨೦॥

---

೧೬ ಪುಲೋಮನೆಂಬ ಹೆಸರಿನ ಮತ್ತೊಬ್ಬರಾಜನು ಹುಟ್ಟಿ ಏಳುವರ್ಷ ರಾಜ್ಯವಾಳುವನು ಹೀಗೆ ಹತ್ತೊಂಬತ್ತು ಜನ ಆಂಧ್ರರಾಜರು ಭೂಮಿಯನ್ನು ಪಾಲಿಸುವರು

೧೭-೧೮ ಆಂಧ್ರರಾಜರು ಒಟ್ಟು ನಾಲ್ಕುನೂರ ಅರವತ್ತು ವರ್ಷಗಳ ಕಾಲ ಈ ದೇಶವನ್ನು ಆಳುವರು ಅವರ ರಾಜ್ಯದಲ್ಲಿ ಅವರ ಅಧಿಕಾರಿಗಳ ವಂಶದವರೂ ಇನ್ನೂ ಉಳಿದವರೂ ರಾಜ್ಯವಾಳುವರು ಅವರಲ್ಲಿ ಆಂಧ್ರರು ಏಳು ಮಂದಿ, ಆಭೀರರು ಹತ್ತು ಮಂದಿ, ಗರ್ದಭಿಲರು ಏಳು ಜನ, ಶಕರು ಹದಿನೆಂಟು ಜನ

೧೯ ಯವನರು ಎಂಟುಜನರೂ ತುಷಾರರು ಹದಿನಾಲ್ಕು ಜನರೂ ಇರುವರು ಗುರುಂಡರಾಜರು ಹದಿಮೂರು ಮಂದಿಯೂ ಹೂಣಭೂಪತಿಗಳು ಹತ್ತೊಂಬತ್ತು ಮಂದಿಯೂ ರಾಜ್ಯವಾಳುವರು

೨೦ ಎಂಟುಜನ ಯವನರಾಜರು ಈ ದೇಶವನ್ನು ಎಂಬತ್ತೇಳು ವರ್ಷ ಪರಿಪಾಲಿಸುವರು ಗರ್ದಭಿಲ ವಂಶದ ಏಳುಮಂದಿ ಅರಸರು ಈ ಭೂಮಿಯ ಅಧಿಪತಿಗಳಾಗುವರು

ಸಪ್ತ ವರ್ಷಸಹಸ್ರಾಣಿ ತುಷಾರಾಣಾಂ ಮಹೀ ಸ್ಮೃತಾ ।
ಶತಾನಿ ತ್ರೀಣ್ಯಶೀತಿಂ ಚ ಶತಾನ್ಯಷ್ಟಾದಶೈವ ತು ॥೨೧॥

ಶತಾನ್ಯರ್ಧಚತುಷ್ಕಾಣಿ ಭವಿತವ್ಯಾಸ್ತ್ರಯೋದಶ ।
ಗುರುಂಡಾ ವೃಷಲೈಃ ಸಾರ್ಧಂ ಭೋಕ್ಷ್ಯಂತೇ ಮ್ಲೇಚ್ಛಸಂಭವಾಃ ॥೨೨॥

ಶತಾನಿ ತ್ರೀಣಿ ಭೋಕ್ಷ್ಯಂತೇ ವರ್ಷಾಣ್ಯೇಕಾದಶೈವ ತು ।
ಆಂಧ್ರಾಃ ಶ್ರೀಪರ್ವತೀಯಾಶ್ಚ ತೇ ದ್ವಿಪಂಚಾಶತಂ ಸಮಾಃ ॥೨೩॥

ಸಪ್ತಷಷ್ಟಿಸ್ತು ವರ್ಷಾಣಿ ದಶಾಽಽಭೀರಾಸ್ತಥೈವ ಚ ।
ತೇಷೂತ್ಸನ್ನೇಷು ಕಾಲೇನ ತತಃ ಕಿಲಕಿಲಾ ನೃಪಾಃ ॥೨೪॥

ಭವಿಷ್ಯಂತೀಹ ಯವನಾ ಧರ್ಮತಃ ಕಾಮತೋಽರ್ಥತಃ ।
ತೈರ್ವಿಮಿಶ್ರಾ ಜನಪದಾ ಆರ್ಯಾ ಮ್ಲೇಚ್ಛಾಶ್ಚ ಸರ್ವಶಃ ॥೨೫॥

---

೨೧-೨೨ ರಾಜ್ಯವು ತುಷಾರರಾಜರ ಕೈಯಲ್ಲಿ ಏಳು ಸಾವಿರ ವರ್ಷಗಳ ಕಾಲ ಇರುವುದು ಮುಂದೆ ಬರಲಿರುವ ಹದಿಮೂರುಮಂದಿ ಗುರುಂಡರಾಜರು, ವೃಷಲರಾಜರು ಇವರೆಲ್ಲ ಸೇರಿ ಎರಡುಸಾವಿರದ ಮುನ್ನೂರ ಎಂಬತ್ತುವರ್ಷಗಳ ಕಾಲ ರಾಜ್ಯಭಾರ ಮಾಡುವರು ಗುರುಂಡ ಭೂಪತಿಗಳು ಮ್ಲೇಚ್ಛರಿಂದ ಉತ್ಪನ್ನರಾದವರು

೨೩ ಆಂಧ್ರರು ಮುನ್ನೂರ ಹನ್ನೊಂದು ವರ್ಷಗಳೂ, ಪಾರ್ವತೀಯರು ಎಪ್ಪತ್ತೆರಡು ವರ್ಷಗಳೂ ಭೂಮಿಯನ್ನು ಪರಿಪಾಲಿಸುವರು

೨೪-೨೫ ಹತ್ತುಜನ ಆಭೀರರಾಜರು ಅರವತ್ತೇಳುವರ್ಷ ರಾಜ್ಯವಾಳುವರು ಅವರ ಸಂತತಿ ಖಿಲವಾದ ಬಳಿಕ ಕಿಲಕಿಲರೆಂಬ ರಾಜರು ದೊರೆತನ ಮಾಡುವರು ಅವರು ಧರ್ಮ, ಅರ್ಥ, ಮತ್ತು ಕಾಮಗಳನ್ನು ಸಾಧಿಸುವ ಕ್ರಮದಲ್ಲಿ ಯವನರಂತೆಯೇ ಇರುವರು ಆರ್ಯರೂ ಮ್ಲೇಚ್ಛರೂ ಅವರೊಡನೆ ಎಲ್ಲೆಡೆಗಳಲ್ಲಿಯೂ ಬೆರೆತುಹೋಗುವರು

ವಿಪರ್ಯಯೇಣ ವರ್ತಂತೇ ಕ್ಷಯಮೇಷ್ಯಂತಿ ವೈ ಪ್ರಜಾಃ ।
ಲುಬ್ಧಾನೃತಬ್ರುವಾಶ್ಚೈವ ಭವಿತಾರೋ ನೃಪಾಸ್ತಥಾ ॥೨೬॥

ಕಲ್ಕಿನಾ ತು ಹತಾಃ ಸರ್ವೇ ಆರ್ಯಾ ಮ್ಲೇಚ್ಛಾಶ್ಚ ಸರ್ವತಃ ।
ಅಧಾರ್ಮಿಕಾಶ್ಚ ಯೇಽತ್ಯರ್ಥಂ ಪಾಷಂಡಾಶ್ಚೈವ ಸರ್ವಶಃ ॥೨೭॥

ಪ್ರನಷ್ಟೇ ನೃಪವಂಶೇ ತು ಸಂಧ್ಯಾಶಿಷ್ಟೇ ಕಲೌ ಯುಗೇ ।
ಕಿಂಚಿಚ್ಛಿಷ್ಟಾಃ ಪ್ರಜಾಸ್ತಾ ವೈ ಧರ್ಮೇ ನಷ್ಟೇಽಪರಿಗ್ರಹಾಃ ॥೨೮॥

ಅಸಾಧವೋ ಹ್ಯಸತ್ತ್ವಾಶ್ಚ ವ್ಯಾಧಿಶೋಕೇನ ಪೀಡಿತಾಃ ।
ಅನಾವೃಷ್ಟಿಹತಾಶ್ಚೈವ ಪರಸ್ಪರವಧೇಪ್ಸವಃ ॥೨೯॥

ಅಶರಣ್ಯಾಃ ಪರಿತ್ರಸ್ತಾಃ ಸಂಕಟಂ ಘೋರಮಾಶ್ರಿತಾಃ ।
ಸರಿತ್ಪರ್ವತವಾಸಿನ್ಯೋ ಭವಿಷ್ಯತ್ಯಖಿಲಾಃ ಪ್ರಜಾಃ ॥೩೦॥

---

೨೬ ಕಾಲಕ್ರಮದಲ್ಲಿ ಪ್ರಜೆಗಳು ಧರ್ಮಕ್ಕೆ ವಿರೋಧವಾಗಿ ನಡೆಯುತ್ತ ದುರ್ಗತಿಗೆ ಒಳಗಾಗುವರು ರಾಜರು ಜಿಪುಣರೂ ಅಸತ್ಯವಂತರೂ ಆಗುವರು

೨೭ ಎಲ್ಲೆಲ್ಲಿಯೂ ಆರ್ಯರನ್ನೂ ಮ್ಲೇಚ್ಛರನ್ನೂ ಕಲ್ಕಿಯು ಸಂಹರಿಸುವನು ಈವೇಳೆಗೆ ಜನರೆಲ್ಲರೂ ಅಧರ್ಮನಿರತರೂ ವೇದಧರ್ಮದೂಷಕರೂ ಆಗುವರು

೨೮ ರಾಜವಂಶವು ಅಳಿದುಹೋಗುವುದು ಕಲಿಯುಗದಲ್ಲಿ ಸಂಧ್ಯಾಂಶವು ಮಾತ್ರ ಉಳಿದಿರುವುದು ಧರ್ಮವು ಖಿಲವಾಗುವುದು ಆಗ ಸ್ವಲ್ಪಮಟ್ಟಿಗೆ ಧರ್ಮವನ್ನು ಆಚರಿಸುವ ಪ್ರಜೆಗಳಿಗೂ ಕೂಡ ಆಶ್ರಯ ತಪ್ಪಿಹೋಗುವುದು

೨೯-೩೦ ಜನರು ದುಷ್ಟರೂ ದುರ್ಬಲರೂ ಆಗುವರು ವ್ಯಾಧಿಯಿಂದಲೂ ಶೋಕದಿಂದಲೂ ಪೀಡಿತರಾಗುವರು ಅನಾವೃಷ್ಟಿಯ ಬಾಧೆಗೆ ತುತ್ತಾಗಿ ಒಬ್ಬರನ್ನೊಬ್ಬರು ಕೊಲ್ಲಬೇಕೆನ್ನುವರು ಅವರಿಗೆ ದಿಕ್ಕೇ ಇಲ್ಲ ಎಲ್ಲ ಕಡೆಯಿಂದಲೂ ಭೀತಿಯೊದಗುವುದು ಘೋರವಾದ ಸಂಕಟಕ್ಕೆ ಸಿಕ್ಕಿ ಬೆಟ್ಟಗುಡ್ಡಗಳಿಗೂ ನದನದಿಗಳಿಗೂ ಓಡಿಹೋಗಿ ಅವಿತುಕೊಂಡು ವಾಸಿಸುವರು

ನೃಪವಂಶೇಷು ನಷ್ಟೇಷು ಪ್ರಜಾಸ್ತ್ಯಕ್ತ್ವಾ ಗೃಹಾಣಿ ಚ ।
ನಷ್ಟಸ್ನೇಹಾ ನಿರಾಪತ್ರಾಸ್ತ್ಯಕ್ತಭ್ರಾತೃಸುಹೃದ್ಗಣಾಃ ||೩೧||

ವರ್ಣಾಶ್ರಮಪರಿಭ್ರಷ್ಟಾ ಅಧರ್ಮನಿರತಾಶ್ಚ ತಾಃ ।
ಪತ್ರಮೂಲಫಲಾಹಾರಾಶ್ಚೀರಪತ್ರಾಜಿನಾಂಬರಾಃ ।
ವೃತ್ತ್ಯರ್ಥಮಭಿಲಿಪ್ಸಂತ್ಯಶ್ಚರಿಷ್ಯಂತಿ ವಸುಂಧರಾಂ ||೩೨||

ಏವಂ ಕಷ್ಟಮನುಪ್ರಾಪ್ತಾಃ ಪ್ರಜಾಃ ಕಲಿಯುಗಾಂತಿಕೇ ।
ನಿಶ್ಶೇಷಾಸ್ತು ಭವಿಷ್ಯಂತಿ ಸಾರ್ಧಂ ಕಲಿಯುಗೇನ ತು ||೩೩||

ಕ್ಷೀಣೇ ಕಲಿಯುಗೇ ತಸ್ಮಿನ್ ದಿವ್ಯೇ ವರ್ಷಸಹಸ್ರಕೇ ।
ಸಸಂಧ್ಯಾಂಶೇ ಸುನಿಃಶೇಷೇ ಕೃತಂ ತು ಪ್ರತಿಪತ್ಸ್ಯತೇ ||೩೪||

ಏವಂ ವಂಶಕ್ರಮಃ ಕೃತ್ಸ್ನಃ ಕೀರ್ತಿತೋ ಯೋ ಮಯಾ ಕ್ರಮಾತ್ ।
ಅತೀತೋ ವರ್ತಮಾನಶ್ಚ ತಥೈವಾನಾಗತಶ್ಚ ಯಃ ||೩೫||

---

೩೧ ರಾಜವಂಶಗಳು ಅಳಿದ ಮೇಲೆ ಜನರು ತಮ್ಮ ಮನೆಮಠಗಳನ್ನು ತೊರೆದು ಓಡಿಹೋಗುವರು ಅವರಿಗೆ ಸ್ನೇಹವೆಂಬುದಾಗಲಿ ಲಜ್ಜೆಯಾಗಲಿ ಇಲ್ಲ ಸ್ನೇಹಿತರು ಅಣ್ಣತಮ್ಮಂದಿರು ಇವರನ್ನೆಲ್ಲ ಕೈಬಿಡುವರು

೩೨ ವರ್ಣಾಶ್ರಮಧರ್ಮಗಳನ್ನು ತೊರೆದು, ಅಧರ್ಮಗಳಲ್ಲಿ ಆಸಕ್ತರಾಗಿ, ಎಲೆ ಮತ್ತು ಗೆಡ್ಡೆಗೆಣಸುಗಳನ್ನು ತಿನ್ನುತ್ತ, ನಾರುಬಟ್ಟೆ, ಚರ್ಮ, ಎಲೆ ಮುಂತಾದುವುಗಳನ್ನು ಉಟ್ಟು ಹೊಟ್ಟೆಯ ಪಾಡಿಗೋಸ್ಕರ ಭೂಮಿಯಲ್ಲೆಲ್ಲ ಅಲೆಯುವರು

೩೩ ಕಲಿಯುಗದ ಕೊನೆಯ ವೇಳೆಗೆ ಪ್ರಜೆಗಳು ಹೀಗೆ ಕಷ್ಟವನ್ನು ಅನುಭವಿಸಿ ಆ ಯುಗವು ಮುಗಿದಾಗ ಅದರೊಡನೆ ತಾವೂ ನಷ್ಟವಾಗುವರು

೩೪ ದೇವಮಾನದ ಒಂದು ಸಾವಿರವರ್ಷಗಳ ಪರಿಮಾಣವುಳ್ಳ ಕಲಿಯುಗವೂ ಅದರ ಸಂಧ್ಯಾಂಶವೂ ಸಂಪೂರ್ಣವಾಗಿ ಕಳೆದುಹೋದ ಮೇಲೆ ಕೃತಯುಗವು ಪ್ರವೇಶಿಸುವುದು

೩೫ ಹಿಂದೆ ಇದ್ದ, ಈಗ ಇರುವ ಮತ್ತು ಮುಂದೆ ಬರುವ ರಾಜರ ವಂಶವೆಲ್ಲವನ್ನೂ ಕ್ರಮವಾಗಿ ವಿವರಿಸಿರುವೆನು

ಮಹಾಪದ್ಮಾಭಿಷೇಕಾತ್ತು ಯಾವಜ್ಜನ್ಮ ಪರೀಕ್ಷಿತಃ ।
ಏವಂ ವರ್ಷಸಹಸ್ರಂ ತು ಜ್ಞೇಯಂ ಪಂಚಾಶದುತ್ತರಂ ॥೩೬॥

ಪೌಲೋಮಾಸ್ತು ತಥಾಂಧ್ರಾಸ್ತು ಮಹಾಪದ್ಮಾಂತರೇ ಪುನಃ ।
ಅನಂತರಂ ಶತಾನ್ಯಷ್ಟೌ ಷಟ್ತ್ರಿಂಶತ್ತು ಸಮಾಸ್ತಥಾ ॥೩೭॥

ತಾವತ್ಕಾಲಾಂತರಂ ಭಾವ್ಯಮಾಂಧ್ರಾಂತಾದಾಪರೀಕ್ಷಿತಃ ।
ಭವಿಷ್ಯೇ ತೇ ಪ್ರಸಂಖ್ಯಾತಾಃ ಪುರಾಣಜ್ಞೈಃ ಶ್ರುತರ್ಷಿಭಿಃ ॥೩೮॥

ಸಪ್ತರ್ಷಯಸ್ತಥಾ ಪ್ರಾಂಶುಪ್ರದೀಪ್ತೇನಾಗ್ನಿನಾ ಸಮಾಃ ।
ಸಪ್ತವಿಂಶತಿಭಾವ್ಯಾನಾಮಾಂಧ್ರಾಣಾಂ ತು ಯದಾ ಪುನಃ ॥೩೯॥

ಸಪ್ತವಿಂಶತಿಪರ್ಯಂತೇ ಕೃತ್ಸ್ನೇ ನಕ್ಷತ್ರಮಂಡಲೇ ।
ಸಪ್ತರ್ಷಯಸ್ತು ತಿಷ್ಠಂತಿ ಪರ್ಯಾಯೇಣ ಶತಂ ಶತಂ ॥೪೦॥

---

೩೬ ಪರೀಕ್ಷಿದ್ರಾಜನು ಹುಟ್ಟಿದ ದಿನದಿಂದ ಮಹಾಪದ್ಮನಂದನ ಅಭಿಷೇಕದ ವರೆಗೆ ಒಂದು ಸಾವಿರದ ಐವತ್ತು ವರ್ಷಗಳಾಗುವುವೆಂದು ತಿಳಿಯಬೇಕು

೩೭-೩೮ ಮಹಾಪದ್ಮನ ತರುವಾಯ ಪೌಲೋಮರೂ ಆಂಧ್ರರೂ ಸೇರಿ ಎಂಟುನೂರ ಮೂವತ್ತಾರು ವರ್ಷಗಳಕಾಲ ಆಳುವರು ಎಂದರೆ ಪರೀಕ್ಷಿದ್ರಾಜನ ಕಾಲದಿಂದ ಆಂಧ್ರರ ಪತನದ ವರೆಗೆ ಒಂದುಸಾವಿರದ ಎಂಟುನೂರ ಎಂಬತ್ತಾರು ವರ್ಷಗಳು ಕಳೆದಂತಾಗುವುವು ಪುರಾಣಜ್ಞರೂ ಶಾಸ್ತ್ರಜ್ಞರೂ ಆದ ಮಹರ್ಷಿಗಳು ಮುಂದೆ ಹೀಗಾಗುವುದೆಂಬುದನ್ನು ಲೆಕ್ಕಮಾಡಿ ಹೇಳಿರುವರು

೩೯-೪೦ ಮುಂದೆ ಬರುವ ಇಪ್ಪತ್ತೇಳು ಜನ ಆಂಧ್ರರಾಜರ ಆಳ್ವಿಕೆಯು ನಡೆಯುವ ಕಾಲದಲ್ಲಿ ಸಪ್ತರ್ಷಿಗಳು ಉನ್ನತವಾದ ಜ್ವಾಲೆಯಿಂದ ಕೂಡಿದ ಅಗ್ನಿಯಂತೆ ತೇಜೋಯುಕ್ತರಾಗಿರುವರು ನಕ್ಷತ್ರಮಂಡಲದಲ್ಲಿರುವ ಅಶ್ವಿನಿ ಮೊದಲಾದ ಇಪ್ಪತ್ತೇಳು ನಕ್ಷತ್ರಗಳಲ್ಲಿ ಒಂದೊಂದರೊಡನೆಯೂ ಸಪ್ತರ್ಷಿಗಳ ಯೋಗವು ಕ್ರಮವಾಗಿ ನೂರು ನೂರು ವರ್ಷಗಳ ಕಾಲವಿರುವುದು

ಸಪ್ತರ್ಷೀಣಾಂ ತು ಪರ್ಯಾಯೋ ಸ್ಮೃತಂ ವೈ ದಿವ್ಯಸಂಖ್ಯಯಾ ।
ಸಮಾ ದಿವ್ಯಾಃ ಸ್ಮೃತಾಃ ಷಷ್ಟಿರ್ದಿವ್ಯಾಬ್ದಾನಿ ತು ಸಪ್ತಭಿಃ ॥೪೧॥

ಏಭಿಃ ಪ್ರವರ್ತತೇ ಕಾಲೋ ದಿವ್ಯಃ ಸಪ್ತರ್ಷಿಭಿಸ್ತು ವೈ ।
ಸಪ್ತರ್ಷೀಣಾಂ ತು ಯೌ ಪೂರ್ವೌ ದೃಶ್ಯೇತೇ ಹ್ಯುದಿತೌ ನಿಶಿ ॥೪೨॥

ತಯೋರ್ಮಧ್ಯೇ ತು ನಕ್ಷತ್ರಂ ದೃಶ್ಯತೇ ಯತ್ಸಮಂ ದಿವಿ ।
ತೇನ ಸಪ್ತರ್ಷಯೋ ಜ್ಞೇಯಾ ಯುಕ್ತಾ ವ್ಯೋಮ್ನಿ ಶತಂ ಸಮಾಃ ॥೪೩॥

ನಕ್ಷತ್ರಾಣಾಮೃಷೀಣಾಂ ಚ ಯೋಗಸ್ಯೈತನ್ನಿದರ್ಶನಂ ।
ಸಪ್ತರ್ಷಯೋ ಮಘಾಯುಕ್ತಾಃ ಕಾಲೇ ಪಾರೀಕ್ಷಿತೇ ಶತಂ ॥೪೪॥

ಬ್ರಾಹ್ಮಣಾಸ್ತು ಚತುರ್ವಿಂಶೇ ಭವಿಷ್ಯಂತಿ ಶತಂ ಸಮಾಃ ।
ತತಃ ಪ್ರಭೃತ್ಯಯಂ ಸರ್ವೋ ಲೋಕೋ ವ್ಯಾಪತ್ಸ್ಯತೇ ಭೃಶಂ ॥೪೫॥

---

೪೧ ಸಪ್ತರ್ಷಿಗಳ ಈ ಪರ್ಯಾಯಕಾಲವನ್ನು ದೇವಮಾನದಲ್ಲಿ ಎಣಿಸಿದರೆ ಅರವತ್ತೇಳು ವರ್ಷಗಳಾಗುವುವು

೪೨-೪೩ ಸಪ್ತರ್ಷಿಮಂಡಲವು ರಾತ್ರಿಯಲ್ಲಿ ಉದಿಸುವುದಷ್ಟೆ! ಆಗ ಮೊದಲಿನ ಎರಡು ನಕ್ಷತ್ರಗಳ ಮಧ್ಯಕ್ಕೆ ನೇರವಾಗಿ ಯಾವ ನಕ್ಷತ್ರವು ಕಾಣುತ್ತದೆಯೋ ಅದರೊಡನೆ ಸಪ್ತರ್ಷಿಗಳು ನೂರುವರ್ಷಗಳ ಕಾಲ ಯುಕ್ತರಾಗಿರುವರೆಂದು ಭಾವಿಸಬೇಕು

೪೪-೪೫ ಸಪ್ತರ್ಷಿಗಳಿಗೂ ನಕ್ಷತ್ರಗಳಿಗೂ ಆಗುವ ಯೋಗಕ್ಕೆ ಇದೇ ನಿದರ್ಶನ ಪರೀಕ್ಷಿದ್ರಾಜನ ಕಾಲದಲ್ಲಿ ಸಪ್ತರ್ಷಿಗಳು ಮಘಾನಕ್ಷತ್ರದಲ್ಲಿ ಒಂದು ನೂರು ವರ್ಷಗಳ ಕಾಲ ಇದ್ದರು ಅಲ್ಲಿಂದ ಮುಂದೆ ನೂರು ನೂರು ವರ್ಷಗಳಂತೆ ಇಪ್ಪತ್ತನಾಲ್ಕನೆಯ ಪರ್ಯಾಯ ನಡೆಯುವವರೆಗೂ ಬ್ರಾಹ್ಮಣ ಧರ್ಮವು ಆಚರಣೆಯಲ್ಲಿರುವುದು ಆ ಬಳಿಕ ಲೋಕವೆಲ್ಲ ಬಹುಮಟ್ಟಿಗೆ ಧರ್ಮಲೋಪದಿಂದ ಕಲುಷಿತವಾಗುವುದು

**ಅನೃತೋಪಹತಾ ಲುಬ್ಧಾ ಧರ್ಮತಃ ಕಾಮತೋಽರ್ಥತಃ ।**
**ಶ್ರೌತಸ್ಮಾರ್ತೇಽತಿಶಿಥಿಲೇ ನಷ್ಟವರ್ಣಾಶ್ರಮೇ ತಥಾ ॥೪೬॥**

**ಸಂಕರಂ ದುರ್ಬಲಾತ್ಮಾನಃ ಪ್ರತಿಪತ್ಸ್ಯಂತಿ ಮೋಹಿತಾಃ ।**
**ಬ್ರಾಹ್ಮಣಾಃ ಶೂದ್ರಯೋನಿಸ್ಥಾಃ ಶೂದ್ರಾ ವೈ ಮಂತ್ರಯೋನಯಃ ॥೪೭॥**

**ಉಪಸ್ಥಾಸ್ಯಂತಿ ತಾನ್ ವಿಪ್ರಾಸ್ತದರ್ಥಮಭಿಲಿಪ್ಸವಃ ।**
**ಕ್ರಮೇಣೈವ ಚ ದೃಶ್ಯಂತೇ ಸ್ವವರ್ಣಾಂತರದಾಯಕಂ ॥೪೮॥**

**ಕ್ಷಯಮೇವ ಗಮಿಷ್ಯಂತಿ ಕ್ಷೀಣಶೇಷಾ ಯುಗಕ್ಷಯೇ ।**
**ಯಸ್ಮಿನ್ ಕೃಷ್ಣೋ ದಿವಂ ಯಾತಸ್ತಸ್ಮಿನ್ನೇವ ತದಾಹನಿ ॥೪೯॥**

---

೪೬ ಪ್ರಜೆಗಳು ಅಸತ್ಯಕ್ಕೊಳಗಾಗುವರು ಧರ್ಮ, ಅರ್ಥ, ಕಾಮಗಳೆಂಬ ಮೂರು ವಿಧವಾದ ಪುರುಷಾರ್ಥಗಳಲ್ಲಿ ಯಾವುದನ್ನೂ ಗಳಿಸಲಾರದೆ ಹೋಗುವರು ಯಜ್ಞಯಾಗಗಳೂ, ಜಾತಕರ್ಮಾದಿ ಸಂಸ್ಕಾರಗಳೂ ಬಹು ಮಟ್ಟಿಗೆ ನಿಂತು ಹೋಗುವುವು ವರ್ಣಾಶ್ರಮ ಧರ್ಮವು ಲುಪ್ತವಾಗುವುದು ಮನಃಸ್ಥೈರ್ಯವಿಲ್ಲದೆ ಮೋಹವಶರಾಗಿ ಜನರು ಜಾತಿಸಾಂಕರ್ಯಗಳಿಗೆ ತುತ್ತಾಗುವರು

೪೭ ಕಟ್ಟುನಿಟ್ಟಿಲ್ಲದೆ ಬ್ರಾಹ್ಮಣಸ್ತ್ರೀಯರಲ್ಲಿ ಶೂದ್ರರೂ, ಶೂದ್ರಸ್ತ್ರೀಯರಲ್ಲಿ ಬ್ರಾಹ್ಮಣರೂ ಪ್ರವೇಶಿಸುವರು ಬ್ರಾಹ್ಮಣರು ಅರ್ಥಾಭಿಲಾಷೆಯಿಂದ ಶೂದ್ರರನ್ನು ಸೇವಿಸುವರು

೪೮ ಬರಬರುತ್ತ ತಮ್ಮ ವರ್ಣಕ್ಕಿಂತಲೂ ಬೇರೆಯವರ ವರ್ಣವೇ ಅಧಿಕ ಪ್ರಯುಜನಕರವೆಂದು ಭಾವಿಸುತ್ತಾರೆ ಹೀಗಾಗಿ ಉಳಿದಿರುವ ಬ್ರಾಹ್ಮಣರೂ ಸಹ ಯುಗವು ಮುಗಿಯುವವೇಳೆಗೆ ನಷ್ಟವಾಗುವರು

೪೯ ಯಾವದಿನ ಶ್ರೀಕೃಷ್ಣಪರಮಾತ್ಮನು ತನ್ನ ದಿವ್ಯಲೋಕಕ್ಕೆ ತೆರಳಿದನೋ ಅದೇ ದಿನ ಕಲಿಯುಗವು ಕಾಲಿಟ್ಟಿತು ಅದರ ಪ್ರಮಾಣವನ್ನು ಹೇಳುವೆನು

ಪ್ರತಿಪನ್ನಂ ಕಲಿಯುಗಂ ಪ್ರಮಾಣಂ ತಸ್ಯ ಮೇ ಶೃಣು ।
ಚತುಃಶತಸಹಸ್ರಂ ತು ವರ್ಷಾಣಾಂ ವೈ ಸ್ಮೃತಂ ಬುಧೈಃ ॥೫೦॥

ಚತ್ವಾರ್ಯಷ್ಟಸಹಸ್ರಾಣಿ ಸಂಖ್ಯಾತಂ ಮಾನುಷೇಣ ತು ।
ದಿವ್ಯಂ ವರ್ಷಸಹಸ್ರಂ ತು ತದಾ ಸಂಧ್ಯಾ ಪ್ರವರ್ತತೇ ॥೫೧॥

ನಿಶ್ಶೇಷೇ ತು ತದಾ ತಸ್ಮಿನ್ ಕೃತಂ ವೈ ಪ್ರತಿಪತ್ಸ್ಯತೇ ।
ಐಲಶ್ಚೇಕ್ಷ್ವಾಕುವಂಶಶ್ಚ ಸಹದೇವಃ ಪ್ರಕೀರ್ತಿತಃ ॥೫೨॥

ಇಕ್ಷ್ವಾಕೋಃ ಸಂಸ್ಮೃತಂ ಕ್ಷತ್ರಂ ಸುಮಿತ್ರಾಂತಂ ಭವಿಷ್ಯತಿ ।
ಐಲಂ ಕ್ಷತ್ರಂ ಸಮಾಕ್ರಾಂತಂ ಸೋಮವಂಶವಿದೋ ವಿದುಃ ॥೫೩॥

ಏತೇ ವಿವಸ್ವತಃ ಪುತ್ರಾಃ ಕೀರ್ತಿತಾಃ ಕೀರ್ತಿವರ್ಧನಾಃ ।
ಅತೀತಾ ವರ್ತಮಾನಾಶ್ಚ ತಥೈವಾನಾಗತಾಶ್ಚ ಯೇ ॥೫೪॥

---

೫೦-೫೧ ಸಂಧ್ಯಾಂಶವನ್ನೂ ಸೇರಿಸಿಕೊಂಡರೆ ಕಲಿಯುಗದ ಒಟ್ಟು ಪರಿಮಾಣವು ಮನುಷ್ಯಮಾನದಲ್ಲಿ ನಾಲ್ಕುಲಕ್ಷದ ಮೂವತ್ತೆರಡುಸಾವಿರ ವರ್ಷಗಳಾಗುತ್ತವೆ ಸಂಧ್ಯೆಯನ್ನು ಬಿಟ್ಟು ಯುಗಪ್ರಮಾಣವನ್ನು ಮಾತ್ರ ತೆಗೆದುಕೊಂಡರೆ ದೇವಮಾನದಲ್ಲಿ ಒಂದುಸಾವಿರ ವರ್ಷಗಳಾಗುತ್ತವೆ

೫೨ ಕಲಿಯುಗವು ಸಂಪೂರ್ಣವಾಗಿ ಕಳೆದ ಬಳಿಕ ಕೃತಯುಗವು ಪ್ರಾರಂಭವಾಗುತ್ತದೆ ಸಹದೇವನು ಪುರೂರವನವಂಶ ಮತ್ತು ಇಕ್ಷ್ವಾಕು ಮಹಾರಾಜನವಂಶ ಇವೆರಡಕ್ಕೂ ಸೇರಿದವನೆಂದು ಹೇಳುತ್ತಾರೆ

೫೩ ಇಕ್ಷ್ವಾಕು ರಾಜನಿಂದ ಪ್ರಾರಂಭವಾದ ಕ್ಷತ್ರಿಯವಂಶವು ಸುಮಿತ್ರನೊಡನೆ ಕೊನೆಗಾಣುತ್ತದೆ ಪುರೂರವನ ಸಂತತಿಯ ಕ್ಷತ್ರಿಯರು ಚಂದ್ರವಂಶಕ್ಕೆ ಸೇರಿದವರೆಂದು ಆ ವಂಶವೃತ್ತಾಂತವನ್ನು ಬಲ್ಲವರು ಹೇಳುತ್ತಾರೆ

೫೪ ಮೇಲೆ ಹೇಳಿದವರೆಲ್ಲರೂ ವಿವಸ್ವಂತನ ಸಂತತಿಯವರು ಕೀರ್ತಿಶಾಲಿಗಳು ಇವರಲ್ಲಿ ಹಿಂದೆ ಇದ್ದವರು, ಈಗ ಇರುವವರು ಮತ್ತು ಮುಂದೆ ಬರತಕ್ಕವರು ಎಲ್ಲರೂ ಸೇರಿರುವರು

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಸ್ತಥಾ ಶೂದ್ರಾಶ್ಚ ವೈ ಸ್ಮೃತಾಃ ।
ವೈವಸ್ವತೇಽಂತರೇ ತಸ್ಮಿನ್ನಿತಿ ವಂಶಃ ಸಮಾಪ್ಯತೇ ॥೫೫॥

ದೇವಾಪಿಃ ಪೌರವೋ ರಾಜಾ ಐಕ್ಷ್ವಾಕೋ ಯಶ್ಚ ತೇ ಮತಃ ।
ಮಹಾಯೋಗಬಲೋಪೇತೌ ಕಲಾಪಗ್ರಾಮಮಾಶ್ರಿತೌ ॥೫೬॥

ಏತೌ ಕ್ಷತ್ರಪ್ರಣೇತಾರೌ ನವವಿಂಶೇ ಚತುರ್ಯುಗೇ ।
ಸುವರ್ಚಾ ಮನುಪುತ್ರಸ್ತು ಐಕ್ಷ್ವಾಕಾದ್ಯೋ ಭವಿಷ್ಯತಿ ॥೫೭॥

ನವವಿಂಶೇ ಯುಗೇಽಸೌ ವೈ ವಂಶಸ್ಯಾಽಽದಿರ್ಭವಿಷ್ಯತಿ ।
ದೇವಾಪಿಪುತ್ರಃ ಸತ್ಯಸ್ತು ಐಲಾನಾಂ ಭವಿತಾ ನೃಪಃ ॥೫೮॥

ಕ್ಷತ್ರಪ್ರವರ್ತಕಾವೇತೌ ಭವಿಷ್ಯೇ ತು ಚತುರ್ಯುಗೇ ।
ಏವಂ ಸರ್ವೇಷು ವಿಜ್ಞೇಯಂ ಸಂತಾನಾರ್ಥಂ ತು ಲಕ್ಷಣಂ ॥೫೯॥

---

೫೫ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರೆಲ್ಲರೂ ಆ ವೈವಸ್ವತಮನ್ವಂತರದಲ್ಲಿ ಇರುವರು ಇಲ್ಲಿಗೆ ವಂಶವೃತ್ತಾಂತದ ವರ್ಣನವು ಮುಗಿಯಿತು

೫೬ ದೇವಾಪಿಯೂ ಇಕ್ಷ್ವಾಕುವಂಶದವನಾದ ಪೌರವನೂ ತಮ್ಮ ಅಸಾಧಾರಣವಾದ ಯೋಗಾಭ್ಯಾಸಬಲದಿಂದ ಪ್ರಖ್ಯಾತರಾಗಿ ಕಲಾಪಗ್ರಾಮದಲ್ಲಿ ನೆಲಸಿರುವರು

೫೭ ಇಪ್ಪತ್ತೊಂಬತ್ತನೆಯ ಚತುರ್ಯುಗದ ಪ್ರಾರಂಭದಲ್ಲಿ ಇವರಿಬ್ಬರೂ ಕ್ಷತ್ರಿಯವಂಶದ ಮೂಲಪುರುಷರಾಗುವರು ಮನುಪುತ್ರನಾದ ಸುವರ್ಚನು ಇಕ್ಷ್ವಾಕುಸಂತತಿಯವರಿಗೆ ಮೊದಲಿಗನಾಗುವನು

೫೮ ಇಪ್ಪತ್ತೊಂಬತ್ತನೆಯ ಚತುರ್ಯುಗದಲ್ಲಿ ಈತನು ವಂಶದ ಮೂಲ ಪುರುಷನಾಗುವನು ದೇವಾಪಿಯ ಮಗನಾದ ಸತ್ಯನು ಐಲವಂಶದವರ ಮೊದಲನೆಯ ಅರಸಾಗುವನು

೫೯ ಮುಂದೆ ಬರುವ ಚತುರ್ಯುಗದಲ್ಲಿ ಈ ಇಬ್ಬರು ರಾಜರೂ ಕ್ಷತ್ರಿಯ ವಂಶಗಳ ಸ್ಥಾಪಕರೆನಿಸುವರು ಎಲ್ಲ ಚತುರ್ಯುಗಗಳಲ್ಲಿಯೂ ವಂಶಾಭಿವೃದ್ಧಿಯಾಗುವ ಲಕ್ಷಣವೇ ಇದೆಂದು ತಿಳಿಯಬೇಕು

ಕ್ಷೀಣೇ ಕಲಿಯುಗೇ ಚೈವ ತಿಷ್ಠಂತೀತಿ ಕೃತೇ ಯುಗೇ
ಸಪ್ತರ್ಷಯಸ್ತು ತೈಃ ಸಾರ್ಧಂ ಮಧ್ಯೇ ತ್ರೇತಾಯುಗೇ ಪುನಃ ||೬೦||

ಬೀಜಾರ್ಥಂ ವೈ ಭವಿಷ್ಯಂತಿ ಬ್ರಹ್ಮಕ್ಷತ್ರಸ್ಯ ವೈ ಪುನಃ
ಏವಮೇವಂ ತು ಸರ್ವೇಷು ತಿಷ್ಠ್ಯಂತ್ಯೇಷ್ವಂತರೇಷು ಚ ||೬೧||

ಸಪ್ತರ್ಷಯೋ ನೃಪೈಃ ಸಾರ್ಧಂ ಸಂತಾನಾರ್ಥಂ ಯುಗೇ ಯುಗೇ ।
ಏವಂ ಕ್ಷತ್ರಸ್ಯ ಚೋತ್ಸೇಧಃ ಸಂಬಂಧೋ ವೈ ದ್ವಿಜೈಃ ಸ್ಮೃತಃ ||೬೨||

ಮನ್ವಂತರಾಣಾಂ ಸಂತಾನೇ ಸಂತಾನಾಶ್ಚ ಶ್ರುತೌ ಸ್ಮೃತಾಃ ।
ಅತಿಕ್ರಾಂತಯುಗಾಶ್ಚೈವ ಬ್ರಹ್ಮಕ್ಷತ್ರಸ್ಯ ಸಂಭವಾಃ ||೬೩||

ಯಥಾ ಪ್ರಶಾಂತಿಸ್ತೇಷಾಂ ವೈ ಪ್ರಕೃತೀನಾಂ ಯಥಾ ಕ್ಷಯಃ
ಸಪ್ತರ್ಷಯೋ ವಿದುಸ್ತೇಷಾಂ ದೀರ್ಘಾಯುಸ್ತ್ವಂ ಕ್ಷಯೋದಯೌ ||೬೪||

---

೬೦-೬೧ ಕಲಿಯುಗವು ಕ್ಷೀಣವಾಗಿ ಕೃತಯುಗವು ಪ್ರಾರಂಭವಾಗುವುದಷ್ಟೆ ಕ್ಷತ್ರಿಯರಾಜರೊಡನೆ ಸಪ್ತರ್ಷಿಗಳು ಆಗಲೂ ಇರುವರು ಅವರು ತ್ರೇತಾಯುಗದ ಮಧ್ಯದಲ್ಲಿ ಕ್ಷತ್ರಿಯ ಕುಲದ ಮತ್ತು ಬ್ರಾಹ್ಮಣಕುಲದ ಉತ್ಪತ್ತಿಗಾಗಿ ಮತ್ತೆ ಉದ್ಭವಿಸುವರು ಹೀಗೆಯೇ ಕಲಿಯುಗದವರೆಗೆ ಎಲ್ಲ ಯುಗಗಳಲ್ಲಿಯೂ, ಮನ್ವಂತರಗಳಲ್ಲಿಯೂ ಅವರು ವೃದ್ಧಿಯಾಗುತ್ತಲೇ ಇರುವರು

೬೨ ಒಂದೊಂದು ಯುಗದಲ್ಲಿಯೂ ಸಪ್ತರ್ಷಿಗಳು ರಾಜರೊಡನೆ ಉದ್ಭವಿಸುವರು ಹೀಗೆ ಕ್ಷತ್ರಿಯವಂಶಗಳ ಏಳಿಗೆಗೆ ಬ್ರಾಹ್ಮಣರ ಸಂಬಂಧವು ಬೆರೆತಿದೆಯೆಂದು ತಿಳಿಯಬೇಕು

೬೩ ಎಲ್ಲ ಮನ್ವಂತರಗಳಲ್ಲಿಯೂ ಬ್ರಾಹ್ಮಣರ ಮತ್ತು ಕ್ಷತ್ರಿಯರ ಬೇರೆ ಬೇರ ವಂಶಗಳು ಸ್ಥಾಪಿತವಾಗುವುವೆಂದು ವೇದದಲ್ಲಿ ಹೇಳಿದೆ ಕಳೆದ ಯುಗಗಳಲ್ಲಿ ಹೀಗೆಯೇ ಬ್ರಾಹ್ಮಣರ ಸಂತತಿಯೂ ಕ್ಷತ್ರಿಯರ ಸಂತತಿಯೂ ಎಷ್ಟೋ ಉತ್ಪನ್ನವಾಗಿವೆ

೬೪ ಆ ಸಂತತಿಗಳು ಕ್ಷೀಣವಾದರೂ, ಪ್ರಜಾವರ್ಗದ ಸಂಖ್ಯೆ ಕುಗ್ಗಿದರೂ ಅವು ಮತ್ತೆ ಉತ್ಪನ್ನವಾಗಿ ಚಿರಕಾಲ ಬಾಳುವುವು ನಾಶವೂ ಉತ್ಪತ್ತಿಯೂ ಪ್ರಕೃತಿಧರ್ಮಗಳು ಎಂಬುದು ಸಪ್ತರ್ಷಿಗಳ ಅಭಿಪ್ರಾಯ

ಏತೇನ ಕ್ರಮಯೋಗೇನ ಐಲಾ ಐಕ್ಷ್ವಾಕವೋ ನೃಪಾಃ ।
ಉತ್ಪದ್ಯಮಾನಾಸ್ತ್ರೇತಾಯಾಂ ಕ್ಷೀಯಮಾಣಾಃ ಕಲೌ ಯುಗೇ ॥೬೫॥

ಅನುಯಾಂತಿ ಯುಗಾಖ್ಯಂ ತು ಯಾದನ್ಮನ್ವಂತರಕ್ಷಯಂ ।
ಜಾಮದಗ್ನ್ಯೇನ ರಾಮೇಣ ಕ್ಷತ್ರೇ ನಿರವಶೇಷಿತೇ ॥೬೬॥

ರಿಕ್ತೇಯಂ ವಸುಧಾ ಸರ್ವಾ ಕ್ಷತ್ರಿಯೈರ್ವಸುಧಾಧಿಪೈಃ ।
ದ್ವಿವಂಶಕರಣಂ ಸರ್ವಂ ಕೀರ್ತಯಿಷ್ಯೇ ನಿಬೋಧ ಮೇ ॥೬೭॥

ಐಲಂ ಚೈಕ್ಷ್ವಾಕುವಂಶಂ ಚ ಪ್ರಕೃತಿಂ ಪರಿಚಕ್ಷತೇ ।
ರಾಜಾನಃ ಶ್ರೇಣಿಬದ್ಧಾಶ್ಚ ತಥಾಽನ್ಯೇ ಕ್ಷತ್ರಿಯಾ ಭುವಿ ॥೬೮॥

ಐಲವಂಶಾಸ್ತು ಭೂಯಾಂಸೋ ನ ತಥೈಕ್ಷ್ವಾಕವೋ ನೃಪಾಃ ।
ಉತ್ಪದ್ಯಮಾನಾ ತೇ ಚಾಶು ಕ್ಷೀಯಮಾಣಾಃ ಕಲೌ ಪುನಃ ॥೬೯॥

---

೬೫ ಈ ಕ್ರಮವನ್ನು ಅನುಸರಿಸಿ ಪುರೂರವ ವಂಶದ ರಾಜರೂ ಇಕ್ಷ್ವಾಕು ವಂಶದ ಅರಸರೂ ತ್ರೇತಾಯುಗದಲ್ಲಿ ಉತ್ಪನ್ನರಾಗುವರು ಕಲಿಯುಗದಲ್ಲಿ ಕ್ಷೀಣವಾಗುವರು ಹೀಗೆಯೇ ಮನ್ವಂತರಾವಸಾನದವರೆಗೂ ಆಯಾ ಯುಗಧರ್ಮವನ್ನು ಅನುಸರಿಸುತ್ತಿರುವರು

೬೬ ಜಮದಗ್ನಿಪುತ್ರನಾದ ಪರಶುರಾಮನು ಕ್ಷತ್ರಿಯವಂಶವನ್ನು ನಿರ್ಮೂಲ ಮಾಡಿದನು ಭೂಮಂಡಲದಲ್ಲೆಲ್ಲ ಕ್ಷತ್ರಿಯರಾಜರ ಹುಟ್ಟು ಅಡಗಿಹೋಯಿತು

೬೭-೬೮ ಈ ಎರಡು ವಂಶಗಳ ಶಾಖೆಯನ್ನೆಲ್ಲ ಹೇಳುವೆನು ಕೇಳು ಐಲವಂಶವೂ ಇಕ್ಷ್ವಾಕುವಂಶವೂ ಮೂಲಭೂತವಾದುವು ಭೂಮಿಯಲ್ಲಿರುವ ಎಲ್ಲ ರಾಜರೂ ಇನ್ನೂ ಉಳಿದ ಕ್ಷತ್ರಿಯರೂ ಇವುಗಳ ಪರಂಪರೆಗೇ ಸೇರಿದವರು

೬೯ ಐಲವಂಶದಲ್ಲಿ ಉತ್ಪನ್ನರಾದ ಅರಸರು ಬಹುಮಂದಿಯಿರುವರು ಇಕ್ಷ್ವಾಕುವಂಶದಲ್ಲಾದರೋ ಇಷ್ಟು ಜನರಿಲ್ಲ ಇವರು ತ್ರೇತಾಯುಗದಲ್ಲಿ ಉತ್ಪನ್ನರಾಗುವರು ಕಲಿಯುಗದಲ್ಲಿ ಕ್ಷಯಿಸುವರು

ತೇಷಾಮೇಕಶತಂ ಪೂರ್ಣಂ ಕುಲಾನಾಮಭಿರೋಚತೇ ।
ತಾವದೇವಂ ತು ಭೋಜಾನಾಂ ವಿಸ್ತಾರಾದ್ದ್ವಿಗುಣಂ ಸ್ಮೃತಂ ।
ಭೋಜಾನಾಂ ದ್ವಿಗುಣಂ ಕ್ಷತ್ರಂ ಚತುರ್ಧಾ ತದ್ಯಥಾತಥಂ ॥೭೦॥

ತೇ ಹ್ಯತೀತಾಃ ಸನಾಮಾನೋ ಬ್ರುವತಸ್ತಾನ್ನಿಬೋಧ ಮೇ ।
ಶತಂ ವೈ ಪ್ರತಿವಿಂಧ್ಯಾನಾಂ ಶತಂ ನಾಗಾಃ ಶತಂ ಹಯಾಃ ॥೭೧॥

ಶತಮೇಕಂ ಧಾರ್ತರಾಷ್ಟ್ರಾ ಹ್ಯಶೀತಿರ್ಜನಮೇಜಯಾಃ ।
ಶತಂ ವೈ ಬ್ರಹ್ಮದತ್ತಾನಾಂ ವೀರಾಣಾಂ ಕುರವಃ ಶತಂ ॥೭೨॥

ತತಃ ಶತಂ ಚ ಪಂಚಾಲಾಃ ಶತಂ ಕಾಶಿಕುಶಾದಯಃ ।
ತಥಾಽಪರೇ ಸಹಸ್ರೇ ದ್ವೇ ಯೇ ನೀಪಾಃ ಶಶಬಿಂದವಃ ॥೭೩॥

ಇಷ್ಟವಂತಶ್ಚ ತೇ ಸರ್ವೇ ಸರ್ವೇ ನಿಯುತದಕ್ಷಿಣಾಃ ।
ಏವಂ ರಾಜರ್ಷಯೋಽತೀತಾಃ ಶತಶೋಽಥ ಸಹಸ್ರಶಃ ॥೭೪॥

---

೭೦ ಅವರಲ್ಲಿ ಒಂದುನೂರು ಮನೆತನಗಳು ಪ್ರಸಿದ್ಧವಾದುವು ಹೀಗೆಯೇ ಭೋಜರಾಜರ ಕುಲಗಳು ಇದರ ಎರಡರಷ್ಟಿವೆ ಇನ್ನೂ ಉಳಿದ ಕ್ಷತ್ರಿಯರಾಜರ ಸಂತತಿಗಳು ಭೋಜರ ಮನೆತನಗಳ ಸಂಖ್ಯೆಗೆ ಇಮ್ಮಡಿಯಾಗಿಯೂ ನಾಲ್ಮಡಿಯಾಗಿಯೂ ಇವೆ

೭೧-೭೨ ಪ್ರತಿವಿಂಧ್ಯರು ನೂರುಜನ, ನಾಗರೂ ಹಯರೂ ನೂರುನೂರು ಮಂದಿ, ಧಾರ್ತರಾಷ್ಟ್ರರು ನೂರ್ವರು, ಜನಮೇಜಯನ ಸಂತತಿಯವರು ಎಂಬತ್ತುಮಂದಿ, ವೀರರಾದ ಬ್ರಹ್ಮದತ್ತರೂ ಕುರುಗಳೂ ನೂರುನೂರು ಜನ, ಈ ರೀತಿಯಾಗಿ ರಾಜರ ಸಂಖ್ಯೆ ಇರುವುದು

೭೩-೭೪ ತರುವಾಯ ನೂರುಜನ ಪಂಚಾಲರಾಜರೂ, ನೂರ್ವರು, ಕಾಶಿಕುಶಸಂತತಿಯವರೂ ಆಳಿದರು ಅಲ್ಲದೆ ನೀಪರು, ಶಶಬಿಂದುಗಳು ಮುಂತಾದ ಇನ್ನೂ ಎರಡುಸಾವಿರ ಜನ ಮಹೀಪತಿಗಳು ರಾಜ್ಯಭಾರ ಮಾಡಿದರು ಇವರೆಲ್ಲರೂ ಹಲವು ಯಜ್ಞಯಾಗಗಳನ್ನು ಮಾಡಿ ಲಕ್ಷಗಟ್ಟಲೆಯ ದ್ರವ್ಯವನ್ನು ದಕ್ಷಿಣೆಯಾಗಿ ಕೊಟ್ಟರು ಹೀಗೆ ನೂರಾರುಮಂದಿ, ಸಾವಿರಾರುಮಂದಿ ರಾಜರ್ಷಿಗಳು ಕೀರ್ತಿವಂತರಾಗಿ ಬಾಳಿ ಕಾಲವಶರಾದರು

ಮನೋರ್ವೈವಸ್ವತಸ್ಯಾಸ್ಮಿನ್ ವರ್ತಮಾನೇಽಂತರೇ ವಿಭೋಃ ।
ತೇಷಾಂ ತು ನಿಧನೋತ್ಪತ್ತೌ ಲೋಕಸಂಸ್ಥಿತಯಃ ಸ್ಥಿತಾಃ ||೭೫||

ನ ಶಕ್ಯೋ ವಿಸ್ತರಸ್ತೇಷಾಂ ಸಂತಾನಸ್ಯ ಪರಸ್ಪರಂ ।
ತತ್ಪೂರ್ವಾಪರಯೋಗೇನ ವಕ್ತುಂ ವರ್ಷಶತೈರಪಿ ||೭೬||

ಅಷ್ಟಾವಿಂಶತ್ಸಮಾಖ್ಯಾತಾ ಗತಾ ವೈವಸ್ವತೇಽಂತರೇ ।
ಏತೇ ದೇವಗಣೈಃ ಸಾರ್ಧಂ ಶಿಷ್ಟಾ ಯೇ ತಾನ್ನಿಬೋಧತ ||೭೭||

ಚತ್ವಾರಿಂಶತ್ತ್ರಯಶ್ಚೈವ ಭವಿಷ್ಯಾಸ್ತೇ ಮಹಾತ್ಮನಃ ।
ಅವಶಿಷ್ಟಾ ಯುಗಾಖ್ಯಾಸ್ತೇ ತತೋ ವೈವಸ್ವತೋ ಹ್ಯಯಂ ||೭೮||

ಏತದ್ವಃ ಕೀರ್ತಿತಂ ಸರ್ವಂ ಸಮಾಸವ್ಯಾಸಯೋಗತಃ ।
ಪುನರ್ವಕ್ತುಂ ಬಹುತ್ವಾತ್ತು ನ ಶಕ್ಯಂ ವಿಸ್ತರೇಣ ತು ||೭೯||

---

೭೫ ಹಿಂದೆ ಹೇಳಿದ ಅರಸರೆಲ್ಲ ಈಗ ನಡೆಯುತ್ತಿರುವ ವೈವಸ್ವತ ಮನುಚಕ್ರವರ್ತಿಯ ಅಂತರದಲ್ಲಿ ಇದ್ದರು ಅವರ ಉತ್ಪತ್ತಿವಿನಾಶಗಳು ಲೋಕ ಮರ್ಯಾದೆಯನ್ನು ಅನುಸರಿಸಿ ನಡೆದಿವೆ

೭೬ ಆ ರಾಜರ ವಂಶದಲ್ಲಿ ಹಿಂದೆ ಇದ್ದವರು ಮುಂದೆ ಬರತಕ್ಕವರು ಇವರೆಲ್ಲರ ವಿವರವನ್ನೂ ಸಂಪೂರ್ಣವಾಗಿ ಹೇಳುವುದಕ್ಕೆ ನೂರು ವರ್ಷವಾದರೂ ಸಾಲದು

೭೭ ವೈವಸ್ವತಮನ್ವಂತರದಲ್ಲಿ ಇಪ್ಪತ್ತೆಂಟು ಚತುರ್ಯುಗಗಳು ಮುಗಿದು ಹೋದುವು ಎಷ್ಟೋ ದೇವಗಣಗಳೂ ಇವುಗಳೊಡನೆ ಕಳೆದುವು ಇನ್ನೂ ಉಳಿದಿರುವ ಚತುರ್ಯುಗಗಳ ಸಂಖ್ಯೆಯನ್ನು ಹೇಳುವೆನು ಕೇಳಿ

೭೮ ಮಹಾನುಭಾವನಾದ ವೈವಸ್ವತಮನುವಿನ ಅಂತರದಲ್ಲಿ ಮುಂದೆ ಇನ್ನೂ ನಡೆಯಬೇಕಾದ ಚತುರ್ಯುಗಗಳು ನಲವತ್ತಮೂರು ಉಳಿದುಕೊಂಡಿವೆ ಅನಂತರ ಈ ಮನ್ವಂತರವು ಮುಗಿಯುವುದು

೭೯ ಓ ದ್ವಿಜೋತ್ತಮರೇ, ಇದೆಲ್ಲವನ್ನೂ ನಿಮಗೆ ಸಂಗ್ರಹವಾಗಿಯೂ ಆವಶ್ಯಕವಾದಕಡೆ ವಿಶದವಾಗಿಯೂ ತಿಳಿಸಿರುವೆನು ವಿಷಯಗಳು ಬಹಳವಾಗಿ ಇರುವುದರಿಂದ ಎಲ್ಲವನ್ನೂ ವಿಸ್ತಾರವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ

ಉಕ್ತಾ ರಾಜರ್ಷಯೋ ಯೇ ತು ಅತೀತಾಸ್ತೇ ಯುಗೈಃ ಸಹ ।
ಯೇ ತೇ ಯಯಾತಿವಂಶ್ಯಾನಾಂ ಯೇ ಚ ವಂಶಾ ವಿಶಾಂಪತೇ ॥೮೦॥

ಕೀರ್ತಿತಾ ದ್ಯುತಿಮಂತಸ್ತೇ ಯ ಏತಾನ್ ಧಾರಯೇನ್ನರಃ ।
ಲಭತೇ ಸ ವರಾನ್ ಪಂಚ ದುರ್ಲಭಾನಿಹ ಲೌಕಿಕಾನ್ ॥೮೧॥

ಆಯುಃ ಕೀರ್ತಿಂ ಧನಂ ಸ್ವರ್ಗಂ ಪುತ್ರವಾಂಶ್ಚಾಭಿಜಾಯತೇ ।
ಧಾರಣಾಚ್ಛ್ರವಣಾಚ್ಚೈವ ಪರಂ ಸ್ವರ್ಗಸ್ಯ ಧೀಮತಃ ॥೮೨॥

**ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ಭವಿಷ್ಯದ್ರಾಜಾನುಕೀರ್ತನಂ ನಾಮ ತ್ರಿಸಪ್ತತ್ಯಧಿಕದ್ವಿಶತತಮೋಽಧ್ಯಾಯಃ**

---

೮೦-೮೧ ಹಿಂದಿನ ಯುಗಗಳಲ್ಲಿ ರಾಜರ್ಷಿಗಳು, ಯಯಾತಿ ಮಹಾರಾಜನ ವಂಶಜರು, ಇನ್ನೂ ಉಳಿದ ಎಷ್ಟೋ ವಂಶದ ರಾಜರು ಉಂಟು ಇವರ ಚರಿತ್ರೆಯನ್ನು ಹೇಳಿದುದಾಯಿತು ಇವರೆಲ್ಲರೂ ಮಹಾತೇಜಸ್ವಿಗಳು ಅವರನ್ನು ಮನಸ್ಸಿನಲ್ಲಿ ಧ್ಯಾನಮಾಡುವ ಮನುಷ್ಯರು ಈ ಲೋಕದಲ್ಲಿ ದುರ್ಲಭವಾದ ಐದು ವರಗಳನ್ನು ಪಡೆಯುವರು

೮೨ ಧರ್ಮನಿಷ್ಠರಾದ ಈ ರಾಜರ ವೃತ್ತಾಂತವನ್ನು ಮನಸ್ಸಿನಲ್ಲಿ ಅನುಸಂಧಾನಮಾಡಲಿ, ಇತರರಿಂದ ಕೇಳಲಿ, ಮನುಷ್ಯನಿಗೆ ಆಯುಸ್ಸೂ, ಕೀರ್ತಿಯೂ, ಸಂಪತ್ತೂ, ಸ್ವರ್ಗವೂ, ಸಂತಾನಲಾಭವೂ ಆಗುವುವು ಆತನು ಜ್ಞಾನಿಯಾಗಿ ಸ್ವರ್ಗಸೌಖ್ಯವನ್ನು ಅನುಭವಿಸುವನು

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಸಹ ಮುಂದೆ ಬರಲಿರುವ ರಾಜರ ವಂಶಗಳನ್ನು ವರ್ಣಿಸಿದೆ

ಶುಂಗಸಂತತಿಯವರ ತರುವಾಯ ಕಣ್ವಸಂತತಿಯವರು ಭೂಮಿಗೆ ಅಧೀಶ್ವರರಾಗುವರು ಇವರಿಗೆ ಕಾಣ್ವಾಯನರೆಂದು ಹೆಸರು ಇವರ ಅನಂತರ ರಾಜ್ಯವು ಆಂಧ್ರರಾಜರ ವಶವಾಗುವುದು. ಅವರ ಬಳಿಕ ಯವನರೂ ಮ್ಲೇಚ್ಛರೂ ಆಧಿಪತ್ಯವನ್ನು ನಡೆಸುವರು ಕಲಿಯುಗವು ಕಳೆಯುತ್ತ ಬಂದಂತೆಲ್ಲ ರಾಜರೂ

ಪ್ರಜೆಗಳೂ ಅಧರ್ಮನಿರತರಾಗುವರು ವರ್ಣಾಶ್ರಮಧರ್ಮಗಳು ಲುಪ್ತವಾಗುವುವು ಬ್ರಹ್ಮವಂಶವೂ ಕ್ಷತ್ರಿಯವಂಶವೂ ಕ್ಷೀಣವಾಗುವುವು ಕೃತಯುಗವು ಹುಟ್ಟಿದಮೇಲೆ ಸಪ್ತರ್ಷಿಗಳು ಬ್ರಹ್ಮಕ್ಷತ್ರಿಯ ವಂಶಗಳೆರಡನ್ನೂ ಪುನರುಜ್ಜೀವನಗೊಳಿಸುವರು ಇಕ್ಷ್ವಾಕುಸಂತತಿಯೂ ಐಲಸಂತತಿಯೂ ಮೊಳೆತು ಬೆಳೆಯುತ್ತ ಬೆಳೆಯುತ್ತ ಮತ್ತೆ ಕಲಿಯುಗವು ಬಂದಾಗ ಕ್ಷಯಿಸುವುವು ವೈವಸ್ವತಮನ್ವಂತರದಲ್ಲಿ ಇದುವರೆಗೆ ಇಪ್ಪತ್ತೆಂಟು ಚತುರ್ಯುಗಗಳು ಕಳೆದುವು ಇನ್ನು ನಲವತ್ತು ಮೂರು ಉಳಿದಿವೆ

ಶ್ರೀಮತ್ಸ್ಯಮಹಾಪುರಾಣದಲ್ಲಿ ಭವಿಷ್ಯದ್ರಾಜಾನುಕೀರ್ತನವೆಂಬ
ಇನ್ನೂರ ಎಪ್ಪತ್ತಮೂರನೆಯ ಅಧ್ಯಾಯವು ಮುಗಿದುದು

## ಅಥ ಚತುಃಸಪ್ತತ್ಯಧಿಕದ್ವಿಶತತಮೋಽಧ್ಯಾಯಃ

॥ ಋಷಯ ಊಚುಃ ॥

ನ್ಯಾಯೇನಾರ್ಜನಮರ್ಥಾನಾಂ ವರ್ಧನಂ ಚಾಭಿರಕ್ಷಣಂ ।
ಸತ್ಪಾತ್ರಪ್ರತಿಪತ್ತಿಶ್ಚ ಸರ್ವಶಾಸ್ತ್ರೇಷು ಪಠ್ಯತೇ ॥ ೧ ॥

ಕೃತಕೃತ್ಯೋ ಭವೇತ್ಕೇನ ಮನಸ್ವೀ ಧನವಾನ್ ಬುಧಃ ।
ಮಹಾದಾನೇನ ದತ್ತೇನ ತನ್ನೋ ವಿಸ್ತರತೋ ವದ ॥ ೨ ॥

॥ ಸೂತ ಉವಾಚ ॥

ಅಥಾತಃ ಸಂಪ್ರವಕ್ಷ್ಯಾಮಿ ಮಹಾದಾನಾನುಕೀರ್ತನಂ ।
ದಾನಧರ್ಮೇಽಪಿ ಯತ್ಪ್ರೋಕ್ತಂ ವಿಷ್ಣುನಾ ಪ್ರಭವಿಷ್ಣುನಾ ॥ ೩ ॥

ತದಹಂ ಸಂಪ್ರವಕ್ಷ್ಯಾಮಿ ಮಹಾದಾನಮನುತ್ತಮಂ ।
ಸರ್ವಪಾಪಕ್ಷಯಕರಂ ನೃಣಾಂ ದುಸ್ಸ್ವಪ್ನನಾಶನಂ ॥ ೪ ॥

---

೧ ಋಷಿಗಳು ಹೇಳಿದರು —ನ್ಯಾಯಕ್ಕೆ ವಿರೋಧವಿಲ್ಲದಂತೆ ಹಣವನ್ನು ಸಂಪಾದಿಸಬೇಕು, ಅಭಿವೃದ್ಧಿಪಡಿಸಬೇಕು, ರಕ್ಷಿಸಬೇಕು, ಮತ್ತು ಸತ್ಪಾತ್ರದಲ್ಲಿ ವಿನಿಯೋಗಿಸಬೇಕು ಸಕಲಶಾಸ್ತ್ರಗಳೂ ಈ ವಿಷಯವನ್ನು ಹೇಳುತ್ತವೆ

೨ ಉದಾರಿಯೂ ವಿವೇಕಿಯೂ ಆದ ಧನವಂತನು ಯಾವ ಮಹಾದಾನವನ್ನು ಮಾಡಿದರೆ ಕೃತಾರ್ಥನಾಗುವನು ? ಅದನ್ನು ನಮಗೆ ವಿಸ್ತಾರವಾಗಿ ಹೇಳು

೩ ಸೂತಮುನಿಯಿಂತೆಂದನು —ಇನ್ನುಮುಂದೆ ಮಹಾದಾನಗಳ ಲಕ್ಷಣವನ್ನು ಹೇಳುವೆನು ದಾನಧರ್ಮಗಳ ಸ್ವರೂಪವನ್ನು ತಿಳಿಸುವಾಗ ಸರ್ವಶಕ್ತನಾದ ಮಹಾವಿಷ್ಣುವು ಇವುಗಳನ್ನು ವಿವರಿಸಿದನು

೪-೫ ಅತಿಶ್ರೇಷ್ಠವಾದ ಮಹಾದಾನಗಳ ವಿಧಾನವನ್ನು ಹೇಳುವೆನು ಅದರಿಂದ ಎಲ್ಲ ಪಾಪಗಳೂ ಪರಿಹಾರವಾಗುವುವು ದುಸ್ಸ್ವಪ್ನವು ದೂರವಾಗು

ಯತ್ತತ್ಷೋಡಶಧಾ ಪ್ರೋಕ್ತಂ ವಾಸುದೇವೇನ ಭೂತಲೇ ।
ಪುಣ್ಯಂ ಪವಿತ್ರಮಾಯುಷ್ಯಂ ಸರ್ವಪಾಪಹರಂ ಶುಭಂ ॥ ೫ ॥

ಪೂಜಿತಂ ದೇವತಾಭಿಶ್ಚ ಬ್ರಹ್ಮವಿಷ್ಣುಶಿವಾದಿಭಿಃ ।
ಆದ್ಯಂ ತು ಸರ್ವದಾನಾನಾಂ ತುಲಾಪುರುಷಸಂಜ್ಞಕಂ ॥ ೬ ॥

ಹಿರಣ್ಯಗರ್ಭದಾನಂ ಚ ಬ್ರಹ್ಮಾಂಡಂ ತದನಂತರಂ ।
ಕಲ್ಪಪಾದಪದಾನಂ ಚ ಗೋಸಹಸ್ರಂ ಚ ಪಂಚಕಂ ॥ ೭ ॥

ಹಿರಣ್ಯಕಾಮಧೇನುಶ್ಚ ಹಿರಣ್ಯಾಶ್ವಸ್ತಥೈವ ಚ ।
ಹಿರಣ್ಯಾಶ್ವರಥಸ್ತದ್ವದ್ಧೇಮಹಸ್ತಿರಥಸ್ತಥಾ ॥ ೮ ॥

ಪಂಚಲಾಂಗಲಕಂ ತದ್ವದ್ಧರಾದಾನಂ ತಥೈವ ಚ ।
ದ್ವಾದಶಂ ವಿಶ್ವಚಕ್ರಂ ತು ತತಃ ಕಲ್ಪಲತಾತ್ಮಕಂ ॥ ೯ ॥

ಸಪ್ತಸಾಗರದಾನಂ ಚ ರತ್ನಧೇನುಸ್ತಥೈವ ಚ ।
ಮಹಾಭೂತಘಟಸ್ತದ್ವತ್ಷೋಡಶಂ ಪರಿಕೀರ್ತಿತಂ ॥೧೦॥

---

ವುದು ಭಗವಂತನಾದ ವಾಸುದೇವನು ಆ ದಾನಗಳನ್ನು ಹದಿನಾರು ಬಗೆಯಾಗಿ ವಿಂಗಡಿಸಿರುವನು ಅವು ಪುಣ್ಯಕರವಾದುವು, ಪವಿತ್ರವಾದುವು, ಆಯುರ್ವರ್ಧಕವಾದುವು, ಎಲ್ಲ ಪಾಪಗಳನ್ನು ಕಳೆದು ಶುಭವನ್ನುಂಟುಮಾಡುವುವು ಬ್ರಹ್ಮ, ವಿಷ್ಣು, ಮಹೇಶ್ವರ ಮೊದಲಾದ ಎಲ್ಲ ದೇವತೆಗಳಿಂದಲೂ ಮನ್ನಣೆಯನ್ನು ಪಡೆದಿರುವುವು

೬-೧೦ ಈ ದಾನಗಳಲ್ಲೆಲ್ಲ ಮೊದಲನೆಯದು ತುಲಾಪುರುಷ ದಾನವೆಂಬ ತಕ್ಕುದು ಹಿರಣ್ಯಗರ್ಭದಾನ, ಬ್ರಹ್ಮಾಂಡದಾನ, ಕಲ್ಪವೃಕ್ಷದಾನ, ಗೋಸಹಸ್ರದಾನ, ಸುವರ್ಣಕಾಮಧೇನುದಾನ, ಸುವರ್ಣಾಶ್ವದಾನ, ಸುವರ್ಣಾಶ್ವರಥದಾನ, ಸುವರ್ಣಗಜರಥದಾನ, ಪಂಚಹಲದಾನ, ಭೂದಾನ, ವಿಶ್ವಚಕ್ರದಾನ, ಕಲ್ಪಲತಾದಾನ, ಸಪ್ತಸಾಗರದಾನ, ರತ್ನಧೇನುದಾನ, ಮಹಾಭೂತಘಟದಾನ ಇವು ಉಳಿದುವು

ಸರ್ವಾಣ್ಯೇತಾನಿ ಕೃತವಾ್ ಪುರಾ ಶಂಬರಸೂದನಃ ।
ವಾಸುದೇವಸ್ತು ಭಗವಾನಂಬರೀಷಸ್ತು ಭಾರ್ಗವಃ ॥೧೧॥

ಕಾರ್ತವೀರ್ಯಾರ್ಜುನೋ ನಾಮ ಪ್ರಹ್ಲಾದಃ ಪೃಥುರೇವ ಚ ।
ಕುರ್ಯುರನ್ಯೇ ಮಹೀಪಾಲಾಃ ಕೇಚಿಚ್ಚ ಭರತಾದಯಃ ॥೧೨॥

ಯಸ್ಮಾದ್ವಿಘ್ನಸಹಸ್ರೇಣ ಮಹಾದಾನಾನಿ ಸರ್ವದಾ ।
ರಕ್ಷಂತೇ ದೇವತಾಃ ಸರ್ವಾ ಏಕೈಕಮಪಿ ಭೂತಲೇ ॥೧೩॥

ಏಷಾಮನ್ಯತಮಂ ಕುರ್ಯಾದ್ವಾಸುದೇವಪ್ರಸಾದತಃ ।
ನ ಶಕ್ಯಮನ್ಯಥಾ ಕರ್ತುಮಪಿ ಶಕ್ರೇಣ ಭೂತಲೇ ॥೧೪॥

ತಸ್ಮಾದಾರಾಧ್ಯ ಗೋವಿಂದಮುಮಾಪತಿವಿನಾಯಕೌ ।
ಮಹಾದಾನಮಖಂ ಕುರ್ಯಾದ್ವಿಪ್ರೈಶ್ಚೈವಾನುಮೋದಿತಃ ॥೧೫॥

---

೧೧-೧೨ ಪೂರ್ವದಲ್ಲಿ ಮನ್ಮಥನು ಈ ಹದಿನಾರು ದಾನಗಳನ್ನೂ ಮಾಡಿದನು ಅನಂತರ ಶ್ರೀಕೃಷ್ಣಪರಮಾತ್ಮನು ವಿಧ್ಯುಕ್ತವಾಗಿ ಇವುಗಳನ್ನು ಕೊಟ್ಟನು ಅಂಬರೀಷ, ಪರಶುರಾಮ, ಕಾರ್ತವೀರ್ಯಾರ್ಜುನ, ಪ್ರಹ್ಲಾದ, ಪೃಥು, ಭರತ ಮೊದಲಾದ ಇನ್ನೂ ಹಲವು ರಾಜರೂ ಸಹ ಈ ದಾನಗಳನ್ನು ಮಾಡಿರುವರು

೧೩-೧೪ ಈ ಮಹಾದಾನಗಳನ್ನು ಸುಲಭವಾಗಿ ನೆರವೇರಿಸಲು ಆಗದಂತೆ ದೇವತೆಗಳು ಒಂದೊಂದಕ್ಕೂ ಸಾವಿರಾರು ವಿಘ್ನಗಳನ್ನು ತಂದೊಡ್ಡುವರು ಇವುಗಳಲ್ಲಿ ಯಾವುದೊಂದನ್ನು ಮಾಡಬೇಕಾದರೂ ವಾಸುದೇವನ ಅನುಗ್ರಹವು ಬೇಕು ಅದಿಲ್ಲದಿದ್ದರೆ ದೇವೇಂದ್ರನೇ ಆಗಲಿ, ಈ ಭೂಲೋಕದಲ್ಲಿ ಇವುಗಳನ್ನು ನಡೆಸಲಾರನು

೧೫ ಆದಕಾರಣ ಗೋವಿಂದನನ್ನೂ, ಪರಮೇಶ್ವರನನ್ನೂ, ಗಣಪತಿಯನ್ನೂ ಮೊದಲು ಪೂಜಿಸಿ, ಬ್ರಾಹ್ಮಣರ ಅನುಗ್ರಹವನ್ನು ಪಡೆದು ಈ ಮಹಾದಾನ ಯಜ್ಞವನ್ನು ಮಾಡಬೇಕು

**ಏತದೇವಾಹ ಮನವೇ ಪರಿಪೃಷ್ಟೋ ಜನಾರ್ದನಃ ।**
**ಯಥಾವದನುವಕ್ಷ್ಯಾಮಿ ಶೃಣುಧ್ವಮೃಷಿಸತ್ತಮಾಃ ॥೧೬॥**

**॥ ಮನುರುವಾಚ ॥**

**ಮಹಾದಾನಾನಿ ಯಾನೀಹ ಪವಿತ್ರಾಣಿ ಶುಭಾನಿ ಚ ।**
**ರಹಸ್ಯಾನಿ ಪ್ರದೇಯಾನಿ ತಾನಿ ಮೇ ಕಥಯಾಚ್ಯುತ ॥೧೭॥**

**॥ ಮತ್ಸ್ಯ ಉವಾಚ ॥**

**ಯಾನಿ ನೋಕ್ತಾನಿ ಗುಹ್ಯಾನಿ ಮಹಾದಾನಾನಿ ಷೋಡಶ ।**
**ತಾನಿ ತೇ ಕಥಯಿಷ್ಯಾಮಿ ಯಥಾವದನುಪೂರ್ವಶಃ ॥೧೮॥**

**ತುಲಾಪುರುಷಯೋಗೋಽಯಂ ಯೇಷಾಮಾದೌ ವಿಧೀಯತೇ ।**
**ಅಯನೇ ವಿಷುವೇ ಪುಣ್ಯೇ ವ್ಯತೀಪಾತೇ ದಿನಕ್ಷಯೇ ॥೧೯॥**

---

೧೬ ಮನುಚಕ್ರವರ್ತಿಯು ಪ್ರಶ್ನೆಮಾಡಲು ಜನಾರ್ದನನು ಅವನಿಗೆ ಇದನ್ನೇ ಹೇಳಿದನು ಓ ಋಷಿವರ್ಯರೇ, ಆ ಭಗವಂತನು ಹೇಳಿದುದನ್ನೇ ನಿಮಗೆ ಕ್ರಮವಾಗಿ ಹೇಳುವೆನು ಕೇಳಿರಿ

೧೭ ಮನುಚಕ್ರವರ್ತಿ ಹೇಳಿದನು —ಓ ಅಚ್ಯುತಾ, ಮನುಷ್ಯನು ಕೊಡಬೇಕಾದ ಅತಿಪವಿತ್ರವೂ ಶುಭಕರವೂ ಆದ ಮಹಾದಾನಗಳು ಯಾವುವು ? ಅವುಗಳ ವಿಧಾನವು ಅತಿ ರಹಸ್ಯವಾದುದಷ್ಟೆ ! ದಯವಿಟ್ಟು ಅವುಗಳನ್ನು ತಿಳಿಸು

೧೮ ಮತ್ಸ್ಯರೂಪನಾದ ಭಗವಂತನು ಹೇಳಿದನು —ಬಹು ರಹಸ್ಯವಾದ ಈ ಹದಿನಾರು ಮಹಾದಾನಗಳ ವಿಚಾರವನ್ನು ನಿನಗೆ ನಾನು ಹೇಳಿರಲಿಲ್ಲ ಅವುಗಳನ್ನೀಗ ಕ್ರಮವಾಗಿ ವಿವರಿಸುವೆನು

೧೯-೨೩ ಈ ಸಂಸಾರದ ಭೀತಿಯಿಂದ ಪಾರಾಗಬೇಕೆನ್ನುವವನು ಮಹಾದಾನಗಳನ್ನು ಕೊಡಬೇಕು ಅದಕ್ಕಾಗಿ ಶಾಸ್ತ್ರೋಕ್ತವಾದ ಕಾಲದೇಶಗಳನ್ನು ನೋಡಬೇಕು ಉತ್ತರಾಯಣ, ದಕ್ಷಿಣಾಯನ ಮತ್ತು ವಿಷುವತ್ಪುಣ್ಯಕಾಲಗಳು,

**ಯುಗಾದಿಷೂಪರಾಗೇಷು ತಥಾ ಮನ್ವಂತರಾದಿಷು ।**
**ಸಂಕ್ರಾಂತೌ ವೈಧೃತಿದಿನೇ ಚತುರ್ದಶ್ಯಷ್ಟಮೀಷು ಚ ॥೨೦॥**

**ಸಿತಪಂಚದಶೀಪರ್ವದ್ವಾದಶೀಷ್ವಷ್ಟಕಾಸು ಚ ।**
**ಯಜ್ಞೋತ್ಸವವಿವಾಹೇಷು ದುಃಸ್ವಪ್ನಾದ್ಭುತದರ್ಶನೇ ॥೨೧॥**

**ದ್ರವ್ಯಬ್ರಾಹ್ಮಣಲಾಭೇ ವಾ ಶ್ರದ್ಧಾ ವಾ ಯತ್ರ ಜಾಯತೇ ।**
**ತೀರ್ಥೇ ವಾಽಽಯತನೇ ಗೋಷ್ಠೇ ಕೂಪಾರಾಮಸರಿತ್ಸು ಚ ॥೨೩॥**

**ಗೃಹೇ ವಾಯತನೇ ವಾಪಿ ತಡಾಗೇ ರುಚಿರೇ ತಥಾ ।**
**ಮಹಾದಾನಾನಿ ದೇಯಾನಿ ಸಂಸಾರಭಯಭೀರುಣಾ ॥೨೪॥**

**ಅನಿತ್ಯಂ ಜೀವಿತಂ ಯಸ್ಮಾದ್ವಸು ಚಾತೀವ ಚಂಚಲಂ ।**
**ಕೇಶೇಷ್ವೇವ ಗೃಹೀತಃ ಸನ್ಮೃತ್ಯುನಾ ಧರ್ಮಮಾಚರೇತ್ ॥೨೫॥**

---

ವ್ಯತೀಪಾತ, ದಿನಕ್ಷಯ, ಯುಗಾದಿ, ಚಂದ್ರಸೂರ್ಯರ ಗ್ರಹಣಗಳು, ಮನ್ವಂತರಗಳು, ಸಂಕ್ರಮಣಗಳು, ವೈಧೃತಿ, ಚತುರ್ದಶಿ, ಅಷ್ಟಮಿ, ಹುಣ್ಣಿಮೆ, ಪರ್ವದಿನಗಳು, ದ್ವಾದಶಿ, ಅಷ್ಟಕಾಶ್ರಾದ್ಧದಿನಗಳು, ಯಜ್ಞೋತ್ಸವ, ವಿವಾಹ ಇವೇ ಮೊದಲಾದ ಸಮಯಗಳು ಪ್ರಶಸ್ತವಾಗಿವೆ ಅಲ್ಲದೆ ಕೆಟ್ಟಕನಸು ಬಿದ್ದಾಗಲೂ, ಉತ್ಪಾತಗಳನ್ನು ಕಂಡಾಗಲೂ, ದ್ರವ್ಯವೂ ಬ್ರಾಹ್ಮಣರೂ ದೊರೆತಾಗಲೂ, ಶ್ರದ್ಧೆ ಹುಟ್ಟಿದಾಗಲೂ ಈ ದಾನಗಳನ್ನು ಕೊಡಬಹುದು ಪುಣ್ಯತೀರ್ಥಗಳು, ದೇವಸ್ಥಾನ, ದನದಕೊಟ್ಟಿಗೆ, ಬಾವಿಯ ತೀರ, ತೋಟ, ನದೀತೀರ ಮನೆ, ಅಥವಾ ಮನೋಹರವಾದ ಕೆರೆಯ ದಡ ಇತ್ಯಾದಿ ಸ್ಥಳಗಳ ಈ ಸಮಾರಂಭಗಳಿಗೆ ಯೋಗ್ಯವಾದುವು ತುಲಾಪುರುಷದಾನವೆಂಬುದು ಷೋಡಶ ಮಹಾದಾನಗಳಲ್ಲಿ ಮೊದಲನೆಯದು

೨೫ ಮನುಷ್ಯ ಜೀವನವು ಶಾಶ್ವತವಲ್ಲ ಹಣವು ಒಂದೇಕಡೆ ಸ್ಥಿರವಾಗಿ ನಿಲ್ಲತಕ್ಕದೂ ಅಲ್ಲ ಆದುದರಿಂದ ಮೃತ್ಯು ಯಾವಾಗಲೂ ನಮ್ಮ ಜುಟ್ಟನ್ನು ಹಿಡಿದುಕೊಂಡಿರುವನೆಂದೇ ನಂಬಿಕೊಂಡು ತಡಮಾಡದೆ ಧರ್ಮಕಾರ್ಯವನ್ನು ಮಾಡಬೇಕು

ಪುಣ್ಯಾಂ ತಿಥಿಮಥಾಽಽಸಾದ್ಯ ಕೃತ್ವಾ ಬ್ರಾಹ್ಮಣವಾಚನಂ ।
ಷೋಡಶಾರತ್ನಿಮಾತ್ರಂ ತು ದಶ ದ್ವಾದಶ ವಾ ಕರಾ ॥೨೫॥

ಮಂಡಪಂ ಕಾರಯೇದ್ವಿದ್ವಾಂಶ್ಚತುರ್ಭದ್ರಾನನಂ ಬುಧಃ ।
ಸಪ್ತಹಸ್ತಾ ಭವೇದ್ವೇದೀ ಮಧ್ಯೇ ಪಂಚಕರಾಽಥವಾ ॥೨೬॥

ತನ್ಮಧ್ಯೇ ತೋರಣಂ ಕುರ್ಯಾತ್ಸಾರದಾರುಮಯಂ ಬುಧಃ ।
ಕುರ್ಯಾತ್ಕುಂಡಾನಿ ಚತ್ವಾರಿ ಚತುರ್ದಿಕ್ಷು ವಿಚಕ್ಷಣಃ ॥೨೭॥

ಸುಮೇಖಲಾಯೋನಿಯುತಾನಿ ಕುರ್ಯಾತ್
ಸಂಪೂರ್ಣಕುಂಭಾನಿ ಮಹಾಸನಾನಿ ।
ಸುತಾಮ್ರಪಾತ್ರದ್ವಯಸಂಯುತಾನಿ
ಸುಯಜ್ಞಪಾತ್ರಾಣಿ ಸುವಿಷ್ಟರಾಣಿ ॥೨೮॥

---

೨೫-೨೬ ಪುಣ್ಯತಿಥಿಯಲ್ಲಿ ಬ್ರಾಹ್ಮಣಾನುಗ್ರಹವನ್ನು ಪಡೆದು, ಶಾಸ್ತ್ರಜ್ಞನೂ ಆಸ್ತಿಕನೂ ಆದ ಯಜಮಾನನು ಹನ್ನೆರಡು ಅಥವಾ ಹದಿನಾರು ಗುದ್ದುಮೊಳ ಅಳತೆಯುಳ್ಳ ಮಂಟಪವನ್ನು ನಿರ್ಮಿಸಬೇಕು ಅದಕ್ಕೆ ನಾಲ್ಕುಕಡೆಯೂ ಬಾಗಿಲುಗಳಿರಬೇಕು ನಟ್ಟನಡುವೆ ಏಳು, ಇಲ್ಲವೇ ಐದುಮೊಳ ಅಳತೆಯ ವೇದಿಕೆಯನ್ನು ರಚಿಸಬೇಕು

೨೭ ಅದರ ನಡುವೆ ದೃಢವಾದ ಮರವನ್ನು ನೆಟ್ಟು ತೋರಣವನ್ನು ಕಟ್ಟಬೇಕು ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ಅಗ್ನಿಕುಂಡಗಳನ್ನು ನಿರ್ಮಿಸಬೇಕು

೨೮-೨೯ ಹೋಮಕುಂಡಗಳ ಅಳತೆ ಒಂದು ಮೊಳವಿರಬೇಕು ಅವುಗಳಿಗೆ ಮೇಖಲೆಗಳನ್ನೂ (ಸುತ್ತುಗಟ್ಟುಗಳನ್ನೂ) ಯೋನಿಗಳನ್ನೂ (ಹೋಮಮಾಡುವಾಗ ನೆಲದಮೇಲೆ ಚೆಲ್ಲಿದ ತುಪ್ಪವು ಕುಂಡದೊಳಕ್ಕೆ ಹರಿದುಹೋಗುವಂತೆ ಇಳಿಜಾರಾಗಿ ಮಾಡುವ ಒಂದು ಬಗೆಯ ಬಚ್ಚಲು) ಕಟ್ಟಬೇಕು ಶಾಸ್ತ್ರೋಕ್ತವಾದ ಆಸನಗಳನ್ನು ಹಾಕಿ ಅವುಗಳ ಮೇಲೆ ಪೂರ್ಣಕುಂಭಗಳನ್ನು ಸ್ಥಾಪಿಸಿ ಅವು

ಹಸ್ತಪ್ರಮಾಣಾನಿ ತಿಲಾಜ್ಯಧೂಪ
 ಪುಷ್ಪೋಪಹಾರಾಣಿ ಸುಶೋಭನಾನಿ ।
ಪೂರ್ವೋತ್ತರೇ ಹಸ್ತಮಿತಾಥ ವೇದೀ
ಗ್ರಹಾದಿದೇವೇಶ್ವರಪೂಜನಾಯ ॥೨೯॥

ಅಥಾರ್ಚನಂ ಬ್ರಹ್ಮಶಿವಾಚ್ಯುತಾನಾಂ
 ತತ್ರೈವ ಕಾರ್ಯಂ ಫಲಮಾಲ್ಯವಸ್ತ್ರೈಃ ।
ಲೋಕೇಶವರ್ಣಾಃ ಪರಿತಃ ಪತಾಕಾ
 ಮಧ್ಯೇ ಧ್ವಜಃ ಕಿಂಕಿಣಿಕಾಯುತಃ ಸ್ಯಾತ್ ॥೩೦॥

ದ್ವಾರೇಷು ಕಾರ್ಯಾಣಿ ಚ ತೋರಣಾನಿ
 ಚತ್ವಾರ್ಯಪಿ ಕ್ಷೀರವನಸ್ಪತೀನಾಂ ।
ದ್ವಾರೇಷು ಕುಂಭದ್ವಯಮತ್ರ ಕಾರ್ಯಂ
 ಸ್ರಗ್ಗಂಧಧೂಪಾಂಬರರತ್ನಯುಕ್ತಂ ॥೩೧॥

---

ಗಳೊಡನೆ ಎರಡು ತಾಮ್ರದ ಪಾತ್ರೆಗಳನ್ನು ಇಡಬೇಕು ಆಯಾಸ್ಥಳಗಳಲ್ಲಿ ಯಜ್ಞ ಪಾತ್ರೆಗಳನ್ನು ಆಸನಸಹಿತವಾಗಿ ಇರಿಸಬೇಕು ಎಳ್ಳು, ತುಪ್ಪ, ಧೂಪ, ಹೂ, ಹಣ್ಣು, ಮುಂತಾದ ಪೂಜೋಪಕರಣಗಳನ್ನು ಅಂದವಾಗಿ ಇಡಬೇಕು ನವಗ್ರಹ ಗಳನ್ನೂ, ದೇವತೆಗಳನ್ನೂ ಪೂಜಿಸುವುದಕ್ಕಾಗಿ ಪೂರ್ವದಿಕ್ಕಿನಲ್ಲಿಯೂ ಉತ್ತರ ದಿಕ್ಕಿನಲ್ಲಿಯೂ ಒಂದುಮೊಳ ಅಳತೆಯ ಜಗಲಿಯನ್ನು ಕಟ್ಟಬೇಕು

೩೦ ಈ ವೇದಿಕೆಯ ಮೇಲೆ ಬ್ರಹ್ಮ, ವಿಷ್ಣು, ಮಹೇಶ್ವರ ಇವರನ್ನು ಫಲ ಪುಷ್ಪಗಳಿಂದಲೂ ವಸ್ತ್ರಗಳಿಂದಲೂ ಪೂಜಿಸಬೇಕು ಸುತ್ತಲೂ ದಿಕ್ಪಾಲಕರ ವರ್ಣಾನುರೂಪವಾದ ಬಾವುಟಗಳನ್ನು ನೆಡಬೇಕು ಮಧ್ಯದಲ್ಲಿ ಕಿರುಗೆಜ್ಜೆಗಳಿಂದ ಕೂಡಿದ ಧ್ವಜವನ್ನು ಏರಿಸಬೇಕು

೩೧ ನಾಲ್ಕು ಕಡೆಯ ಬಾಗಿಲುಗಳಲ್ಲಿಯೂ ಅರಳಿ ಅಥವಾ ಅತ್ತಿಮರ ದಿಂದಾದ ತೋರಣಗಳನ್ನು ನೆಡಬೇಕು ಬಾಗಿಲ ಬಳಿ ಎರಡು ಕುಂಬಗಳನ್ನಿಟ್ಟು, ಗಂಧ, ಪುಷ್ಪ, ಧೂಪ, ವಸ್ತ್ರಗಳಿಂದ ಅರ್ಚಿಸಿ, ಅವುಗಳೊಳಗೆ ರತ್ನಗಳನ್ನು ಹಾಕಬೇಕು

ಶಾಲೇಂಗುದೀಚಂದನದೇವದಾರು
ಶ್ರೀಪರ್ಣಿಬಿಲ್ವಪ್ರಿಯಕಾಂಚನೋತ್ಥಂ।
ಸ್ತಂಭದ್ವಯಂ ಹಸ್ತಯುಗಾವಖಾತಂ
ಕೃತ್ವಾ ದೃಢಂ ಪಂಚಕರೋಚ್ಛ್ರಿತಂ ಚ ॥೩೨॥

ತದಂತರಂ ಹಸ್ತಚತುಷ್ಟಯಂ ಸ್ಯಾ
ದಥೋತ್ತರಂ ಯಚ್ಚ ತದಂಗಮೇವ।
ಸಮಾನಜಾತಿಶ್ಚ ತುಲಾವಲಂಬ್ಯಾ
ಹೈಮೇನ ಮಧ್ಯೇ ಪುರುಷೇಣ ಯುಕ್ತಾ ॥೩೩॥

ದೈರ್ಘ್ಯೇಣ ಸಾ ಹಸ್ತಚತುಷ್ಟಯಂ ಸ್ಯಾ
ತ್ಪೃಥುತ್ವಮಸ್ಯಾಸ್ತು ದಶಾಂಗುಲಾನಿ।
ಸುವರ್ಣಪಟ್ಟಾಭರಣಾ ತು ಕಾರ್ಯಾ
ಸಾ ಲೋಹಪಾತ್ರದ್ವಯಶೃಂಖಲಾಭಿಃ ॥೩೪॥

೩೨ ಮತ್ತಿ, ಇಂಗಳ, ಶ್ರೀಗಂಧ, ದೇವದಾರು, ಶಿವನೆ, ಬಿಲ್ವ, ಕಡಹ, ನಾಗಕೇಸರ ಇವುಗಳಲ್ಲಿ ಯಾವುದಾದರೊಂದು ಮರದ ಕಂಬಗಳೆರಡನ್ನು ನೆಲದೊಳಗೆ ಒಂದು ಮೊಳ ಹಳ್ಳವನ್ನು ತೋಡಿ ಬಲವಾಗಿ ಹೂಳಬೇಕು ಭೂಮಿಯ ಮೇಲೆ ಅದರ ಎತ್ತರ ಐದುಮೊಳವಿರಬೇಕು

೩೩ ಈ ಎರಡು ಕಂಬಗಳ ಅಂತರವು ನಾಲ್ಕು ಮೊಳವಿರಬೇಕು ಮೇಲ್ಗಡೆ ಹಾಕುವ ಅಡ್ಡಮರವೂ ಇದೇ ಜಾತಿಗೆ ಸೇರಿರಬೇಕು ಇದೇ ಮರದಿಂದ ಮಾಡಿದ ತಕ್ಕಡಿಯ ದಂಡಿಗೆಯನ್ನು ಅಡ್ಡಮರಕ್ಕೆ ನೇತುಹಾಕಬೇಕು ಬಂಗಾರದ ಪುರುಷ ವಿಗ್ರಹವು ತಕ್ಕಡಿಯನ್ನು ಮಧ್ಯದಲ್ಲಿ ಸರಿಯಾಗಿ ಹಿಡಿದುಕೊಂಡಿರುವಂತೆ ಕಲ್ಪಿಸಬೇಕು

೩೪ ದಂಡಿಗೆಯು ನಾಲ್ಕುಮೊಳ ಉದ್ದವೂ ಹತ್ತಂಗುಲ ದಪ್ಪವೂ ಇರಬೇಕು ಚಿನ್ನದ ಒಡವೆಗಳಿಂದಲೂ, ರೇಷ್ಮೆಯ ವಸ್ತ್ರದಿಂದಲೂ ಅದನ್ನು ಅಲಂಕರಿಸಬೇಕು ಎರಡು ತುದಿಗಳಲ್ಲೂ ಕಬ್ಬಿಣದ ತಟ್ಟೆಗಳಿಂದ ಕೂಡಿದ ಸರಪಣಿಗಳನ್ನು ತೂಗುಬಿಡಬೇಕು ಸುವರ್ಣಾಭರಣಗಳಿಂದಲೂ ರತ್ನಮಾಲೆಯಿಂದಲೂ, ಗಂಧಪುಷ್ಪಾದಿಗಳಿಂದಲೂ ಅದನ್ನು ಭೂಷಿಸಬೇಕು

ಯಥಾ ಸುವರ್ಣೇನ ತು ರತ್ನಮಾಲಾ
 ವಿಭೂಷಿತಾ ಮಾಲ್ಯವಿಲೇಪನಾಭ್ಯಾಂ ।
ಚಕ್ರಂ ಲಿಖೇದ್ವಾರಿಜಪತ್ರಯುಕ್ತಂ
 ನಾನಾರಜೋಭಿರ್ಭುವಿ ಪುಷ್ಪಕೀರ್ಣಂ ॥೩೫॥

ವಿತಾನಕಂ ಚೋಪರಿ ಪಂಚವರ್ಣಂ
 ಸಂಸ್ಥಾಪಯೇತ್ಪುಷ್ಪಫಲೋಪಶೋಭಂ ।
ಅಥರ್ತ್ವಿಜೋ ವೇದವಿದಶ್ಚ ಕಾರ್ಯಾಃ
 ಸುರೂಪವೇಷಾನ್ವಯಶೀಲಯುಕ್ತಾಃ ॥೩೬॥

ವಿಧಾನದಕ್ಷಾಃ ಪಟವೋಽನುಕೂಲಾ
 ಯೇ ಚಾಽಽರ್ಯದೇಶಪ್ರಭವಾ ದ್ವಿಜೇಂದ್ರಾಃ ।
ಗುರುಶ್ಚ ವೇದಾಂತವಿದಾರ್ಯವಂಶ
 ಸಮುದ್ಭವಃ ಶೀಲಕುಲಾಭಿರೂಪಃ ॥೩೭॥

---

೩೫ ಅರಳಿದ ತಾವರೆಯ ಆಕಾರವಾದ ಚಕ್ರವನ್ನು ನೆಲದ ಮೇಲೆ ನಾನಾ ಬಣ್ಣದ ಪುಡಿಗಳಿಂದ ಬರೆದು, ಅದರ ಮೇಲೆ ಹೂಗಳನ್ನು ಎರಚಬೇಕು ಮೇಲ್ಗಡೆ ಐದುಬಣ್ಣದ ಬಟ್ಟೆಗಳಿಂದ ಮೇಲ್ಗಟ್ಟನ್ನು ಕಟ್ಟಿ, ಹೂಗಳಿಂದಲೂ, ಹಣ್ಣುಗಳಿಂದಲೂ ಸಿಂಗರಿಸಬೇಕು

೩೬ ಅನಂತರ ವೇದಪಾರಂಗತರೂ, ರೂಪ, ವೇಷ, ವಂಶ, ಮತ್ತು ನಡತೆಗಳಲ್ಲಿ ಉತ್ತಮರೂ, ಕಾರ್ಯದಕ್ಷರೂ, ಚಟುವಟಿಕೆಯುಳ್ಳವರೂ, ಅನುಕೂಲ ಸ್ವಭಾವದವರೂ, ಆರ್ಯದೇಶದಲ್ಲಿ ಜನ್ಮತಾಳಿದವರೂ ಆದ ಬ್ರಾಹ್ಮಣೋತ್ತಮರನ್ನು ಋತ್ವಿಕ್ಕುಗಳನ್ನಾಗಿ ವರಿಸಬೇಕು

೩೭-೩೮ ಆಚಾರ್ಯನು ವೇದಾಂತವಿಶಾರದನೂ, ಆರ್ಯವಂಶ ಸಂಭೂತನೂ ಆಗಿ, ಕುಲಶೀಲರೂಪಗಳಲ್ಲಿ ಶ್ರೇಷ್ಠನೆನಿಸಿರಬೇಕು ಪುರಾಣಗಳಲ್ಲಿಯೂ ಶಾಸ್ತ್ರಗಳಲ್ಲಿಯೂ ಆತನಿಗೆ ಅಭಿರುಚಿಯಿರಬೇಕು ಅವನು ಕಾರ್ಯ

ಪುರಾಣಶಾಸ್ತ್ರಾಭಿರತೋಽತಿದಕ್ಷಃ
ಪ್ರಸನ್ನಗಂಭೀರಸರಸ್ವತೀಕಃ ।
ಸಿತಾಂಬರಃ ಕುಂಡಲಹೇಮಸೂತ್ರ
ಕೇಯೂರಕಂಠಾಭರಣಾಭಿರಾಮಃ ॥೩೮॥

ಪೂರ್ವೇಣ ಋಗ್ವೇದವಿದಾವಥಾಽಽಸ್ತಾಂ
ಯಜುರ್ವಿದೌ ದಕ್ಷಿಣತಶ್ಚ ಶಸ್ತೌ ।
ಸ್ಥಾಪ್ಯೌ ದ್ವಿಜೌ ಸಾಮವಿದೌ ತು ಪಶ್ಚಾ
ದಾಥರ್ವಣಾವುತ್ತರತಸ್ತು ಕಾರ್ಯೌ ॥೩೯॥

ವಿನಾಯಕಾದಿಗ್ರಹಲೋಕಪಾಲ
ವಸ್ವಷ್ಟಕಾದಿತ್ಯಮರುದ್ಗಣಾನಾಂ ।
ಬ್ರಹ್ಮಾಚ್ಯುತೇಶಾರ್ಕವನಸ್ಪತೀನಾಂ
ಸ್ವಮಂತ್ರತೋ ಹೋಮಚತುಷ್ಟಯಂ ಸ್ಯಾತ್ ॥೪೦॥

---

ದಲ್ಲಿ ಬಹು ಸಮರ್ಥನೆನಿಸಿ ಪ್ರಸನ್ನವೂ ಗಂಭೀರವೂ ಆದ ವಚನವುಳ್ಳವನಾಗಿರ ಬೇಕು ಶುಭ್ರವಸ್ತ್ರವನ್ನು ಧರಿಸಿ ಕುಂಡಲಗಳಿಂದಲೂ, ಚಿನ್ನದ ಉಡಿದಾರ ದಿಂದಲೂ, ತೋಳುಬಳೆಗಳಿಂದಲೂ, ರತ್ನಹಾರಗಳಿಂದಲೂ ಅಲಂಕೃತನಾಗಿರ ಬೇಕು

೩೯ ಋಗ್ವೇದಪಾರಂಗತರಾದ ದ್ವಿಜರಿಬ್ಬರು ಪೂರ್ವದಿಕ್ಕಿನಲ್ಲಿ ಕುಳಿತು ಕೊಳ್ಳುವರು ಯಜುರ್ವೇದಜ್ಞರಿಬ್ಬರೂ ದಕ್ಷಿಣದಲ್ಲಿರುವರು ಸಾಮವೇದವನ್ನು ಬಲ್ಲವರು ಪಶ್ಚಿಮದಲ್ಲೂ, ಅಥರ್ವಣವೇದಪಾರಿಗಳು ಉತ್ತರದಲ್ಲೂ ಆಸನಗಳನ್ನು ಅಲಂಕರಿಸುವರು

೪೦ ಗಣಪತಿ ಮೊದಲಾದ ಪ್ರಮಥಗಣಗಳು, ಆದಿತ್ಯಾದಿಗ್ರಹಗಳು, ಇಂದ್ರಾದಿಲೋಕಪಾಲಕರು, ಅಷ್ಟವಸುಗಳು, ದ್ವಾದಶಾದಿತ್ಯರು, ಮರುದ್ಗಣಗಳು, ತ್ರಿಮೂರ್ತಿಗಳಾದ ಬ್ರಹ್ಮ ವಿಷ್ಣು ಮಹೇಶ್ವರರು, ಸೂರ್ಯ ಮತ್ತು ವನಸ್ಪತಿಗಳು ಇವರಿಗೆ ಅವರವರ ಮಂತ್ರಗಳಿಂದ ನಾಲ್ಕು ನಾಲ್ಕು ಹೋಮಗಳನ್ನು ಮಾಡಬೇಕು

ಜಪ್ಯಾನಿ ಸೂಕ್ತಾನಿ ತಥೈವ ಚೈಷಾ
ಮನುಕ್ರಮೇಣಾऽಪಿ ಯಥಾಸ್ವರೂಪಂ ।
ಹೋಮಾವಸಾನೇ ಕೃತತೂರ್ಯನಾದೋ
ಗುರುರ್ಗೃಹೀತ್ವಾ ಬಲಿಪುಷ್ಪಧೂಪಂ ।
ಆವಾಹಯೇಲ್ಲೋಕಪತೀನ್ ಕ್ರಮೇಣ
ಮಂತ್ರೈರಮೀಭಿರ್ಯಜಮಾನಯುಕ್ತಃ ॥೪೧॥

ಏಹ್ಯೇಹಿ ಸರ್ವಾಮರಸಿದ್ಧಸಾಧ್ಯೈ
ರಭಿಷ್ಟುತೋ ವಜ್ರಧರೋऽಮರೇಶಃ ।
ಸಂವೀಜ್ಯಮಾನೋऽಪ್ಸರಸಾಂ ಗಣೇನ
ರಕ್ಷಾಧ್ವರಂ ನೋ ಭಗವನ್ನಮಸ್ತೇ ॥೪೨॥
ಓಂ ಇಂದ್ರಾಯನಮಃ

ಏಹ್ಯೇಹಿ ಸರ್ವಾಮರಹವ್ಯವಾಹ
ಮುನಿಪ್ರವೀರೈರಭಿತೋऽಭಿಜುಷ್ಟಃ ।

---

೪೧ ಅಲ್ಲದೆ ಈ ದೇವತೆಗಳಿಗೆ ಸಂಬಂಧಪಟ್ಟ ಸೂಕ್ತಗಳನ್ನು ಕ್ರಮವಾಗಿ ಜಪಿಸಬೇಕು ಹೋಮವು ಮುಗಿದಮೇಲೆ, ಮಂಗಳವಾದ್ಯಗಳು ಭೋರ್ಗರೆಯುತ್ತಿರಲು, ಆಚಾರ್ಯನು ಪೂಜಾಸಾಮಗ್ರಿಗಳನ್ನೂ, ಪುಷ್ಪಗಳನ್ನೂ, ಧೂಪವನ್ನೂ ಕೈಗೆ ತೆಗೆದುಕೊಂಡು, ಈ ಮುಂದಿನ ಮಂತ್ರಗಳನ್ನು ಹೇಳುತ್ತ, ಯಜಮಾನನೊಡಗೂಡಿ ಲೋಕಪಾಲಕರನ್ನು ಕ್ರಮವಾಗಿ ಆವಾಹನಮಾಡಬೇಕು

೪೨ ಅಮರರು ಸಿದ್ಧರು, ಸಾಧ್ಯರು ಇವರೆಲ್ಲರಿಂದಲೂ ಹೊಗಳಿಸಿಕೊಂಡು, ವಜ್ರಾಯುಧವನ್ನು ಧರಿಸಿ, ದೇವತೆಗಳ ಅಧಿಪತಿಯಾಗಿ, ಅಪ್ಸರಸ್ತ್ರೀಯರು ಬೀಸಣಿಗೆಗಳಿಂದ ಬೀಸುತ್ತಿರಲು, ತ್ರಿಲೋಕಾಧಿಪತಿಯಾಗಿ ಮೆರೆಯುವ ಓ ದೇವೇಂದ್ರಾ, ಬಾ ಬಾ, ನಮ್ಮ ಈ ಯಜ್ಞವನ್ನು ರಕ್ಷಿಸು ಪೂಜ್ಯನಾದ ಓ ದೇವಾ, ನಿನಗೆ ನಮಸ್ಕಾರ ಓಂ ಇಂದ್ರನಿಗೆ ನಮಸ್ಕಾರ

೪೩ ಸಕಲ ದೇವತೆಗಳಿಗೂ ಹವಿಸ್ಸನ್ನು ತಲಪಿಸುವ ಓ ಅಗ್ನಿದೇವಾ, ಬಾ ಬಾ ಮಹರ್ಷಿಗಳು ನಿನ್ನ ಸುತ್ತಲೂ ನೆರೆದು ನಿನ್ನನ್ನು ಆಶ್ರಯಿಸುತ್ತ ಓಲೈಸು

ತೇಜಸ್ವಿನಾ ಲೋಕಗಣೇನ ಸಾರ್ಧಂ
ಮಮಾಧ್ವರಂ ರಕ್ಷ ಕವೇ ನಮಸ್ತೇ ||೪೩||
ಓಂ ಅಗ್ನಯೇ ನಮಃ

ಏಹ್ಯೇಹಿ ವೈವಸ್ವತ ಧರ್ಮರಾಜ
ಸರ್ವಾಮರೈರರ್ಚಿತದಿವ್ಯಮೂರ್ತೇ ।
ಶುಭಾಶುಭಾನಾಂ ದದತಾಮಧೀಶ
ಶಿವಾಯ ನಃ ಪಾಹಿ ಮಖಂ ನಮಸ್ತೇ ||೪೪||
ಓಂ ಯಮಾಯ ನಮಃ

ಏಹ್ಯೇಹಿ ರಕ್ಷೋಗಣನಾಯಕಸ್ತ್ವಂ
ವಿಶಾಲವೇತಾಲಪಿಶಾಚಸಂಘೈಃ ।
ಮಮಾಧ್ವರಂ ಪಾಹಿ ಶುಭಾಧಿನಾಥ
ಲೋಕೇಶ್ವರಸ್ತ್ವಂ ಭಗವನ್ನಮಸ್ತೇ ||೪೫||
ಓಂ ನಿರ್ಋತಯೇ ನಮಃ

---

ವರು ತೇಜಸ್ವಿಗಳಾದ ಲೋಕಾಧಿಪತಿಗಳೊಡನೆ ಬಂದು ನನ್ನ ಈ ಯಜ್ಞವನ್ನು ನಿರ್ವಿಘ್ನವಾಗಿ ನೆರವೇರಿಸಿಕೊಡು ಎಲೈ ಸರ್ವಜ್ಞನೇ, ನಿನಗೆ ನಮಸ್ಕಾರ

೪೪ ಸೂರ್ಯಪುತ್ರನೂ ಸಕಲ ದೇವತೆಗಳಿಂದ ಪೂಜೆಯನ್ನು ಕೈಗೊಳ್ಳುವಾತನೂ ಆದ ಓ ಧರ್ಮರಾಜಾ, ಬಾಬಾ , ಶುಭಾಶುಭಗಳನ್ನು ಕೊಡತಕ್ಕವರಿಗಲ್ಲ ನೀನು ಅಧಿಪತಿ ನಮಗೆ ಕ್ಷೇಮವುಂಟಾಗುವಂತೆ ಈ ಯಜ್ಞವನ್ನು ರಕ್ಷಿಸು ನಿನಗೆ ನಮಸ್ಕಾರ ಓಂ ಯಮನಿಗೆ ನಮಸ್ಕಾರ

೪೫ ರಾಕ್ಷಸಗಣಗಳ ನಾಯಕನಾದ ಎಲೈ ನಿರ್ಋತೀ, ಬೇತಾಳಗಳ ಮತ್ತು ಪಿಶಾಚಗಳ ಗುಂಪಿನೊಡಗೂಡಿ ಬಾ ಬಾ ಕ್ಷೇಮವನ್ನು ಕೊಡಬಲ್ಲ ಓ ದೇವಾ, ನನ್ನ ಯಜ್ಞವನ್ನು ರಕ್ಷಿಸು. ನೀನು ಲೋಕೇಶ್ವರನಾಗಿರುವೆ ಭಗವಂತಾ, ನಿನಗೆ ನಮಸ್ಕಾರ ಓಂ ನಿರ್ಋತಿಗೆ ನಮಸ್ಕಾರ

ಏಹ್ಯೇಹಿ ಯಾದೋಗಣವಾರಿಧೀನಾಂ
ಗಣೇನ ಪರ್ಜನ್ಯಮಹಾಪ್ಸರೋಭಿಃ ।
ವಿದ್ಯಾಧರೇಂದ್ರಾಮರಗೀಯಮಾನ
ಪಾಹಿ ತ್ವಮಸ್ಮಾನ್ ಭಗವನ್ನಮೋಽಸ್ತೇ ॥೪೬॥
ಓಂ ವರುಣಾಯ ನಮಃ

ಏಹ್ಯೇಹಿ ಯಜ್ಞೇ ಮಮ ರಕ್ಷಣಾಯ
ಮೃಗಾಧಿರೂಢಃ ಸಹ ಸಿದ್ಧಸಂಘೈಃ ।
ಪ್ರಾಣಾಧಿಪಃ ಕಾಲಕಲಾಸಹಾಯೋ
ಗೃಹಾಣ ಪೂಜಾಂ ಭಗವನ್ನಮಸ್ತೇ ॥೪೭॥
ಓಂ ವಾಯವೇ ನಮಃ

ಏಹ್ಯೇಹಿ ಯಜ್ಞೇಶ್ವರ ಯಜ್ಞರಕ್ಷಾಂ
ವಿಧತ್ಸ್ವ ನಕ್ಷತ್ರಗಣೇನ ಸಾರ್ಧಂ ।

---

೪೬ ಓ ವರುಣಾ, ಜಲಜಂತುಗಳು, ಸಮುದ್ರಗಳು, ಗುಡುಗುಡಿಸುವ ಮೋಡಗಳು, ಅಪ್ಸರಸ್ತ್ರೀಯರು ಇವರೊಡಗೂಡಿ ಬಾ ಬಾ ವಿದ್ಯಾಧರರೂ ಅಮರೇಂದ್ರರೂ ನಿನ್ನ ಕೀರ್ತಿಯನ್ನು ಗಾನಮಾಡುವರು ನಮ್ಮನ್ನು ನೀನು ರಕ್ಷಿಸು ದೇವಾ, ನಿನಗೆ ನಮಸ್ಕಾರ ಓಂ ವರುಣನಿಗೆ ನಮಸ್ಕಾರ

೪೭ ಎಲೈ ವಾಯುದೇವಾ, ಜಿಂಕೆಯನ್ನೇರಿ, ಸಿದ್ಧಸಂಘಗಳೊಡಗೂಡಿ ನನ್ನ ಯಜ್ಞವನ್ನು ರಕ್ಷಿಸುವುದಕ್ಕಾಗಿ ಬಾ ಬಾ ನೀನು ಪ್ರಾಣಗಳ ಅಧಿಪತಿಯಾಗಿರುವೆ ಕಾಲಕ್ಕೂ ಕಾಲಾಂಶಗಳಿಗೂ ಸಹಾಯನಾಗಿರುವೆ ಭಗವಂತಾ, ನನ್ನ ಈ ಪೂಜೆಯನ್ನು ಸ್ವೀಕರಿಸು ನಿನಗೆ ನಮಸ್ಕಾರ ಓಂ ವಾಯುವಿಗೆ ನಮಸ್ಕಾರ

೪೮ ಯಜ್ಞೇಶ್ವರನಾದ ಎಲೈ ಚಂದ್ರನೇ, ನಕ್ಷತ್ರರಾಶಿಗಳೊಡಗೂಡಿ ಬಾ ಬಾ ಯಜ್ಞದ ರಕ್ಷಣವನ್ನು ಮಾಡು ಸಕಲೌಷಧಿಗಳೊಡನೆಯೂ

**ಸರ್ವೌಷಧೀಭಿಃ ಪಿತೃಭಿಃ ಸಹೈವ**
**ಗೃಹಾಣ ಪೂಜಾಂ ಭಗವನ್ನಮಸ್ತೇ ॥೪೮॥**
**ಓಂ ಸೋಮಾಯ ನಮಃ**

**ಏಹ್ಯೇಹಿ ವಿಶ್ವೇಶ್ವರ ನಸ್ತ್ರಿಶೂಲ**
**ಕಪಾಲಖಟ್ವಾಂಗಧರೇಣಸಾರ್ಧಂ।**
**ಲೋಕೇಶ ಯಜ್ಞೇಶರ ಯಜ್ಞಸಿದ್ಧ್ಯೈ**
**ಗೃಹಾಣ ಪೂಜಾಂ ಭಗವನ್ನಮಸ್ತೇ ॥೪೯॥**
**ಓಂ ಈಶಾನಾಯ ನಮಃ**

**ಏಹ್ಯೇಹಿ ಪಾತಾಲಧರಾಧರೇಂದ್ರ**
**ನಾಗಾಂಗನಾಕಿನ್ನರಗೀಯಮಾನ।**
**ಯಕ್ಷೋರಗೇಂದ್ರಾಮರಲೋಕಸಾರ್ಧ**
**ಮನಂತರಕ್ಷಾಧ್ವರಮಸ್ಮದೀಯಂ ॥೫೦॥**
**ಓಂ ಅನಂತಾಯ ನಮಃ**

---

ಪಿತೃಗಳೊಡನೆಯೂ ಸೇರಿ, ನಾನು ಮಾಡುವ ಪೂಜೆಯನ್ನು ಕೈಗೊಳ್ಳು ಓ ದೇವಾ, ನಿನಗೆ ನಮಸ್ಕಾರ ಓಂ ಚಂದ್ರನಿಗೆ ನಮಸ್ಕಾರ

೪೯ ತ್ರಿಶೂಲ, ಕಪಾಲ ಮತ್ತು ಖಟ್ವಾಂಗಗಳನ್ನು ಧರಿಸಿರುವ ಎಲೈ ಪರಮೇಶ್ವರಾ, ಬಾ ಬಾ ಲೋಕೇಶ್ವರಾ, ಯಜ್ಞೇಶ್ವರಾ, ನಮ್ಮ ಯಜ್ಞವು ಸಾಂಗವಾಗಿ ನೆರವೇರಲಿ ಅದಕ್ಕಾಗಿ ಪೂಜೆಯನ್ನು ಸ್ವೀಕರಿಸು, ಭಗವಂತಾ, ನಿನಗೆ ನಮಸ್ಕಾರ ಓಂ ಈಶಾನನಿಗೆ ನಮಸ್ಕಾರ

೫೦ ಪಾತಾಲಲೋಕದ ಅಧೀಶ್ವರನೂ, ನಾಗಕನ್ಯೆಯರಿಂದಲೂ ಕಿನ್ನರರಿಂದಲೂ ಸ್ತುತಿಸಲ್ಪಡುವವನೂ ಆದ ಓ ಆದಿಶೇಷಾ, ಬಾ ಬಾ ಯಕ್ಷರೊಡನೆಯೂ ಸರ್ಪೇಂದ್ರರೊಡನೆಯೂ, ದೇವಗಣಗಳೊಡನೆಯೂ ಕೂಡಿ ನಮ್ಮ ಯಜ್ಞವನ್ನು ರಕ್ಷಿಸು ಓಂ ಅನಂತನಿಗೆ ನಮಸ್ಕಾರ

ಏಹ್ಯೇಹಿ ವಿಶ್ವಾಧಿಪತೇ ಮುನೀಂದ್ರ
ಲೋಕೇನ ಸಾರ್ಧಂ ಪಿತೃದೇವತಾಭಿಃ ।
ಸರ್ವಸ್ಯ ಧಾತಾಽಸ್ಯಮಿತಪ್ರಭಾವ
ವಿಶಾಧ್ವರಂ ನೋ ಭಗವನ್ನಮಸ್ತೇ ॥೫೧॥
ಓಂ ಬ್ರಹ್ಮಣೇ ನಮಃ

ತ್ರೈಲೋಕ್ಯೇ ಯಾನಿ ಭೂತಾನಿ ಸ್ಥಾವರಾಣಿ ಚರಾಣಿ ಚ ।
ಬ್ರಹ್ಮವಿಷ್ಣುಶಿವೈಃ ಸಾರ್ಧಂ ರಕ್ಷಾಂ ಕುರ್ವಂತು ತಾನಿ ಮೇ ॥೫೨॥

ದೇವದಾನವಗಂಧರ್ವಾ ಯಕ್ಷರಾಕ್ಷಸಪನ್ನಗಾಃ ।
ಋಷಯೋ ಮನವೋ ಗಾವೋ ದೇವಮಾತರ ಏವ ಚ ॥೫೩॥

ಸರ್ವೇ ಮಮಾಧ್ವರೇ ರಕ್ಷಾಂ ಪ್ರಕುರ್ವಂತು ಮುದಾನ್ವಿತಾಃ ।
ಇತ್ಯಾವಾಹ್ಯ ಸುರಾನ್ ದದ್ಯಾದೃತ್ವಿಗ್ಭ್ಯೋ ಹೇಮಭೂಷಣಂ ॥೫೪॥

---

೫೧ ಜಗತ್ತಿನ ಅಧಿಪತಿಯೂ ಮುನಿಗಳಲ್ಲಿ ಶ್ರೇಷ್ಠನೂ ಆದ ಓ ಬ್ರಹ್ಮಾ, ಸಕಲಲೋಕದೊಡನೆಯೂ, ಪಿತೃದೇವತೆಗಳೊಡನೆಯೂ ಬಾ ಬಾ ಎಲ್ಲವನ್ನೂ ನೀನು ಸೃಷ್ಟಿಸಿರುವೆ ಓ ಮಹಾನುಭಾವಾ, ನಮ್ಮ ಯಾಗಕ್ಕೆ ಬಾ ದೇವಾ, ನಿನಗೆ ನಮಸ್ಕಾರ ಓಂ ಬ್ರಹ್ಮನಿಗೆ ನಮಸ್ಕಾರ

೫೨ ಮೂರು ಲೋಕಗಳಲ್ಲಿಯೂ ಇರುವ ಸ್ಥಾವರಜಂಗಮರೂಪವಾದ ಸಕಲ ಪ್ರಾಣಿಗಳೂ, ಬ್ರಹ್ಮವಿಷ್ಣುಮಹೇಶ್ವರರೂ ನನ್ನ ಈ ಯಾಗವು ನಿರ್ವಿಘ್ನ ವಾಗಿ ನೆರವೇರುವಂತೆ ಕರುಣಿಸಲಿ

೫೩-೫೪ ದೇವತೆಗಳು, ದಾನವರು, ಗಂಧರ್ವರು, ಯಕ್ಷರು, ರಾಕ್ಷಸರು, ಪನ್ನಗರು, ಋಷಿಗಳು, ಮನುಗಳು, ಹಸುಗಳು, ದೇವಮಾತೃಗಳು ಇವರೆಲ್ಲರೂ ಸಂತೋಷದಿಂದ ಬಂದು ನನ್ನ ಯಜ್ಞವನ್ನು ರಕ್ಷಿಸಲಿ ಎಂದು ದೇವತೆಗಳನ್ನು ಆವಾಹನ ಮಾಡಿ ಋತ್ವಿಕ್ಕುಗಳಿಗೆ ಸುವರ್ಣಾಭರಣಗಳನ್ನು ಕೊಡಬೇಕು

**ಕುಂಡಲಾನಿ ಚ ಹೈಮಾನಿ ಸೂತ್ರಾಣಿ ಕಟಿಕಾನಿ ಚ ।**
**ಅಂಗುಲೀಯಪವಿತ್ರಾಣಿ ವಾಸಾಂಸಿ ಶಯನಾನಿ ಚ ॥೫೫॥**

**ದ್ವಿಗುಣಂ ಗುರವೇ ದದ್ಯಾದ್ಭೂಷಣಾಚ್ಛಾದನಾನಿ ಚ ।**
**ಜಪೇಯುಃ ಶಾಂತಿಕಾಧ್ಯಾಯಂ ಜಾಪಕಾಃ ಸರ್ವತೋದಿಶಂ ॥೫೬॥**

**ತತ್ರೋಷಿತಾಸ್ತತಸ್ಸರ್ವೇ ಕೃತ್ವೈವಮಧಿವಾಸನಂ ।**
**ಆದಾವಂತೇ ಚ ಮಧ್ಯೇ ಚ ಕುರ್ಯಾದ್ಬ್ರಾಹ್ಮಣವಾಚನಂ ॥೫೭॥**

**ತತೋ ಮಂಗಲಶಬ್ದೇನ ಸ್ನಾಪಿತೋ ವೇದಪುಂಗವೈಃ ।**
**ತ್ರಿಃ ಪ್ರದಕ್ಷಿಣಮಾವೃತ್ಯ ಗೃಹೀತಕುಸುಮಾಂಜಲಿಃ ॥೫೮॥**

---

೫೫ ಅಲ್ಲದೆ ಚಿನ್ನದ ಕಡಕುಗಳನ್ನೂ, ಉಡಿದಾರಗಳನ್ನೂ, ಬಳೆಗಳನ್ನೂ, ಉಂಗುರಗಳನ್ನೂ, ಪವಿತ್ರಗಳನ್ನೂ, ವಸ್ತ್ರಗಳನ್ನೂ, ಹಾಸಿಗೆಗಳನ್ನೂ ಕೊಡಬೇಕು

೫೬ ಆಚಾರ್ಯನಿಗೆ ವಸ್ತ್ರಭೂಷಣಾದಿಗಳನ್ನು ಇದರ ಇಮ್ಮಡಿಯಾಗಿ ಕೊಡಬೇಕು ಎಲ್ಲ ದಿಕ್ಕುಗಳಲ್ಲಿಯೂ ಕುಳಿತಿರುವ ಮಂತ್ರಜ್ಞರು ಶಾಂತಿಕಾಧ್ಯಾಯವನ್ನು ಜಪಿಸುವರು

೫೭ ಹೀಗೆ ಗಂಧಮಾಲ್ಯಾದಿಗಳಿಂದ ಸಂಸ್ಕೃತರಾಗಿ ಎಲ್ಲರೂ ಮಂಟಪದಲ್ಲಿಯೇ ಇರುವರು ಪ್ರಾರಂಭದಲ್ಲಿಯೂ, ಮಧ್ಯದಲ್ಲಿಯೂ, ಕೊನೆಯಲ್ಲಿಯೂ ಬ್ರಾಹ್ಮಣರ ಆಶೀರ್ವಾದವನ್ನು ಪಡೆಯಬೇಕು

೫೮ ಬಳಿಕ ಮಂಗಲವಾದ್ಯಗಳು ನಡೆಯುತ್ತಿರಲು, ವೇದಪಾರಂಗತರಾದ ಋತ್ವಿಕ್ಕುಗಳು ಯಜಮಾನನಿಗೆ ಮಂತ್ರೋದಕದಿಂದ ಸ್ನಾನಮಾಡಿಸುವರು ಅವನು ಶುಭ್ರವಸ್ತ್ರವನ್ನು ಧರಿಸಿ, ಬೊಗಸೆಯಲ್ಲಿ ಹೂಗಳನ್ನು ತುಂಬಿಕೊಂಡು, ತಕ್ಕಡಿಯನ್ನು ಮೂರು ಸಾರಿ ಪ್ರದಕ್ಷಿಣ ಮಾಡಿ ಅಭಿಮಂತ್ರಿಸಬೇಕು

**ಶುಕ್ಲಮಾಲ್ಯಾಂಬರೋ ಭೂತ್ವಾ ತಾಂ ತುಲಾಮಭಿಮಂತ್ರಯೇತ್ ।**
**ನಮಸ್ತೇ ಸರ್ವದೇವಾನಾಂ ಶಕ್ತಿಸ್ತ್ವಂ ಸತ್ಯಮಾಸ್ಥಿತಾ ॥೪೯॥**

**ಸಾಕ್ಷಿಭೂತಾ ಜಗದ್ಧಾತ್ರೀ ನಿರ್ಮಿತಾ ವಿಶ್ವಯೋನಿನಾ ।**
**ಏಕತಃ ಸರ್ವಸತ್ಯಾನಿ ತಥಾಽನೃತಶತಾನಿ ಚ ॥೫೦॥**

**ಧರ್ಮಾಧರ್ಮಕೃತಾಂ ಮಧ್ಯೇ ಸ್ಥಾಪಿತಾಸಿ ಜಗದ್ಧಿತೇ ।**
**ತ್ವಂ ತುಲೇ ಸರ್ವಭೂತಾನಾಂ ಪ್ರಮಾಣಮಿಹ ಕೀರ್ತಿತಾ ॥೫೧॥**

**ಮಾಂ ತೋಲಯಂತೀ ಸಂಸಾರಾದುದ್ಧರಸ್ವ ನಮೋಽಸ್ತು ತೇ ।**
**ಯೋಽಸೌ ತತ್ವಾಧಿಪೋ ದೇವಃ ಪುರುಷಃ ಪಂಚವಿಂಶಕಃ ॥೫೨॥**

**ಸ ಏಕೋಽಧಿಷ್ಠಿತೋ ದೇವಿ ತ್ವಯಿ ತಸ್ಮಾನ್ನಮೋ ನಮಃ ।**
**ನಮೋ ನಮಸ್ತೇ ಗೋವಿಂದ ತುಲಾಪುರುಷಸಂಜ್ಞಕ ॥೫೩॥**

---

೪೯ ಓ ತಕ್ಕಡೀ, ನಿನಗೆ ನಮಸ್ಕಾರ ನೀನು ಸಕಲ ದೇವತೆಗಳ ಶಕ್ತಿರೂಪವಾಗಿರುವೆ ಸತ್ಯದ ಮೇಲೆಯೇ ನಿಂತಿರುವೆ ಸಕಲ ಸಾಕ್ಷಿಯೆನಿಸಿ ಜಗತ್ತನ್ನು ಹೊತ್ತಿರುವಂತೆ ಪರಮಾತ್ಮನು ನಿನ್ನನ್ನು ಸೃಷ್ಟಿಸಿರುವನು

೫೦-೫೧ ಸಕಲ ಸತ್ಯಗಳೂ ಒಂದುಕಡೆ, ಅಸತ್ಯಗಳೂ ಒಂದುಕಡೆ. ಧರ್ಮವೊಂದುಕಡೆ, ಅಧರ್ಮವೊಂದುಕಡೆ ಓ ತಕ್ಕಡೀ, ಜಗತ್ತಿನ ಹಿತಕ್ಕಾಗಿ ಇವುಗಳ ಮಧ್ಯದಲ್ಲಿ ನಿನ್ನನ್ನು ಬ್ರಹ್ಮನು ಇರಿಸಿರುವನು ಸಕಲ ಪ್ರಾಣಿಗಳೂ ನಿನ್ನನ್ನು ಪ್ರಮಾಣವೆಂದು ತಿಳಿದಿರುವುವು

೫೨ ನನ್ನನ್ನು ತೂಕಮಾಡಿ ಸಂಸಾರದಿಂದ ಪಾರುಮಾಡು, ನಿನಗೆ ನಮಸ್ಕಾರ ಮಹದಾದಿತತ್ವಗಳಿಗೆ ಅಧಿಪತಿಯೆನಿಸಿ ತಾನೇ ಇಪ್ಪತ್ತೈದನೆಯ ತತ್ವವೆನಿಸಿರುವ ಅದ್ವಿತೀಯನಾದ ಪರಮಪುರುಷನೇ ನಿನ್ನಲ್ಲಿ ನೆಲಸಿರುವನು ದೇವೀ, ಆದುದರಿಂದ ನಿನಗೆ ನಮಸ್ಕಾರ ನಮಸ್ಕಾರ

೫೩ ಓ ಗೋವಿಂದಾ, ನೀನು ತಕ್ಕಡಿಯ ಅಭಿಮಾನದೇವತೆಯೆನಿಸಿರುವೆ ನಿನಗೆ ಹಲವುಬಾರಿ ನಮಸ್ಕಾರ ಹರೀ, ಈ ಸಂಸಾರದ ಕೆಸರಿನಲ್ಲಿ ಮುಳುಗುತ್ತಿರುವ ನಮ್ಮನ್ನು ಉದ್ಧಾರಮಾಡು

ತ್ವಂ ಹರೇ ತಾರಯಸ್ವಾಸ್ಮಾನಸ್ಮಾತ್ಸಂಸಾರಕರ್ದಮಾತ್ ।
ಪುಣ್ಯಕಾಲಂ ಸಮಾಸಾದ್ಯ ಕೃತ್ವೈವಮಧಿವಾಸನಂ ॥೬೪॥

ಪುನಃ ಪ್ರದಕ್ಷಿಣಂ ಕೃತ್ವಾ ತುಲಾಮಾರೋಹಯೇದ್ಬುಧಃ ।
ಸಖಡ್ಗಚರ್ಮಕವಚಃ ಸರ್ವಾಭರಣಭೂಷಿತಃ ॥೬೫॥

ಧರ್ಮರಾಜಮಥಾದಾಯ ಹೈಮಂ ಸೂರ್ಯೇಣ ಸಂಯುತಂ ।
ಕರಾಭ್ಯಾಂ ಬದ್ಧಮುಷ್ಟಿಭ್ಯಾಮಾಸ್ತೇ ಪಶ್ಯನ್ ಹರೇರ್ಮುಖಂ ॥೬೬॥

ತತೋಽಪರೇ ತುಲಾಭಾಗೇ ನ್ಯಸೇಯುರ್ದ್ವಿಜಪುಂಗವಾಃ ।
ಸಮಾದಭ್ಯಧಿಕಂ ಯಾವತ್ಕಾಂಚನಂ ಚಾತಿನಿರ್ಮಲಂ ॥೬೭॥

ಪುಷ್ಟಿಕಾಮಸ್ತು ಕುರ್ವೀತ ಭೂಮಿಸಂಸ್ಥಂ ನರೇಶ್ವರಃ ।
ಕ್ಷಣಮಾತ್ರಂ ತತಃ ಸ್ಥಿತ್ವಾ ಪುನರೇವಮುದೀರಯೇತ್ ॥೬೮॥

---

೬೪ ಹೀಗೆ ಪ್ರಾರ್ಥಿಸಿ, ತಕ್ಕಡಿಗೆ ಗಂಧಪುಷ್ಪಾದಿಗಳನ್ನರ್ಪಿಸಿ, ಪುಣ್ಯಕಾಲವು ಬಂದೊಡನೆಯೇ ಮತ್ತೆ ಪ್ರದಕ್ಷಿಣಮಾಡಿ ಶಾಸ್ತ್ರಜ್ಞನಾದ ಯಜಮಾನನು ಅದರಲ್ಲಿ ಹತ್ತಿ ಕುಳಿತುಕೊಳ್ಳಬೇಕು

೬೫-೬೬ ಯಜಮಾನನು ಕವಚವನ್ನೂ ಕತ್ತಿಗುರಾಣಿಗಳನ್ನೂ ಧರಿಸಿ ಸರ್ವಾಭರಣಭೂಷಿತನಾಗಿರಬೇಕು ಚಿನ್ನದ ಸೂರ್ಯಪ್ರತಿಮೆಯನ್ನೂ ಧರ್ಮರಾಜನ ಪ್ರತಿಮೆಯನ್ನೂ ಎರಡು ಕೈಗಳ ಮುಷ್ಟಿಗಳಲ್ಲೂ ಹಿಡಿದುಕೊಂಡು, ದಂಡಿಗೆಯ ಮೇಲೆ ಇಟ್ಟಿರುವ ವಿಷ್ಣುವಿಗ್ರಹದ ಮುಖವನ್ನು ನೋಡುತ್ತ ಕುಳಿತಿರಬೇಕು

೬೭ ತರುವಾಯ ತಕ್ಕಡಿಯ ಮತ್ತೊಂದು ತಟ್ಟೆಯಲ್ಲಿ ಬ್ರಾಹ್ಮಣೋತ್ತಮರು ಸ್ವಚ್ಛವಾದ ಚಿನ್ನವನ್ನು ಯಜಮಾನನ ತೂಕವನ್ನು ಮೀರಿಸುವಷ್ಟು ಮಟ್ಟಿಗೆ ಹಾಕುವರು

೬೮ ಪುಷ್ಟಿಯನ್ನು ಬಯಸುವ ರಾಜನು ತಕ್ಕಡಿಯ ತಟ್ಟೆಯು ನೆಲದ ಮೇಲೆ ಕುಳಿತುಕೊಳ್ಳುವಷ್ಟು ಚಿನ್ನವನ್ನು ಹಾಕಬೇಕು ಕ್ಷಣಕಾಲ ಹೀಗೆ ಕುಳಿತಿದ್ದು ಮತ್ತೆ ಹೀಗೆ ಹೇಳಬೇಕು

ನಮಸ್ತೇ ಸರ್ವಭೂತಾನಾಂ ಸಾಕ್ಷಿಭೂತೇ ಸನಾತನಿ ।
ಪಿತಾಮಹೇನ ದೇವಿ ತ್ವಂ ನಿರ್ಮಿತಾ ಪರಮೇಷ್ಠಿನಾ ॥೬೯॥

ತ್ವಯಾ ಧೃತಂ ಜಗತ್ಸರ್ವಂ ತುಲೇ ಸ್ಥಾವರಜಂಗಮಮ್ ।
ಸರ್ವಭೂತಾತ್ಮಭೂತಸ್ಥೇ ನಮಸ್ತೇ ವಿಶ್ವಧಾರಿಣಿ ॥೭೦॥

ತತೋಽವತೀರ್ಯ ಗುರವೇ ಪೂರ್ವಮರ್ಧಂ ನಿವೇದಯೇತ್ ।
ಋತ್ವಿಗ್ಭ್ಯೋಽಪರಮರ್ಧಂ ತು ದದ್ಯಾದುದಕಪೂರ್ವಕಂ ॥೭೧॥

ಗುರವೇ ಗ್ರಾಮರತ್ನಾನಿ ಋತ್ವಿಗ್ಭ್ಯಶ್ಚ ನಿವೇದಯೇತ್ ।
ಪ್ರಾಪ್ಯ ತೇಷಾಮನುಜ್ಞಾಂ ತು ತಥಾನ್ಯೇಭ್ಯೋಽಪಿ ದಾಪಯೇತ್ ॥೭೨॥

ದೀನಾನಾಥವಿಶಿಷ್ಟಾದೀನ್ ಪೂಜಯೇದ್ಬ್ರಾಹ್ಮಣೈಃ ಸಹ ।
ನ ಚಿರಂ ಧಾರಯೇದ್ಗೇಹೇ ಸುವರ್ಣಂ ಪ್ರೇಕ್ಷಿತಂ ಬುಧಃ ॥೭೩॥

---

೬೯-೭೦ ಎಲೌ ತಕ್ಕಡಿಯೇ, ಸಕಲ ಜಂತುಗಳಿಗೂ ನೀನು ಸಾಕ್ಷಿಯಾಗಿರುವೆ ನೀನು ಸನಾತನಿ ದೇವೀ, ಲೋಕಪಿತಾಮಹನಾದ ಬ್ರಹ್ಮದೇವನು ನಿನ್ನನ್ನು ನಿರ್ಮಿಸಿದನು ಚರಾಚರಾತ್ಮಕವಾದ ಜಗತ್ತೆಲ್ಲವನ್ನೂ ನೀನು ಧರಿಸಿರುವೆ ಸಕಲ ಭೂತಗಳ ಅಂತರಾತ್ಮಕನಾದ ಮಹಾವಿಷ್ಣು ನಿನ್ನಲ್ಲಿ ನೆಲಸಿರುವನು ಜಗತ್ತಿಗೆ ಆಧಾರವಾಗಿರುವ ನಿನಗೆ ನಮಸ್ಕಾರ

೭೧ ಬಳಿಕ ಇಳಿದು ಆಚಾರ್ಯನಿಗೆ ಚಿನ್ನದ ಅರ್ಧಭಾಗವನ್ನು ಮೊದಲು ಒಪ್ಪಿಸಬೇಕು ಇನ್ನು ಉಳಿದ ಅರ್ಧವನ್ನು ಋತ್ವಿಕ್ಕುಗಳಿಗೆಲ್ಲ ಧಾರಾಪೂರ್ವಕವಾಗಿ ದಾನಮಾಡಬೇಕು

೭೨ ಗುರುವಿಗೂ ಋತ್ವಿಕ್ಕುಗಳಿಗೂ ಗ್ರಾಮಗಳನ್ನೂ ರತ್ನಗಳನ್ನೂ ದಾನಮಾಡಬೇಕು ಅವರ ಅನುಜ್ಞೆಯನ್ನು ಪಡೆದು ಉಳಿದವರಿಗೂ ಬೇಕಾದುದನ್ನು ಕೊಡಬಹುದು

೭೩-೭೪ ಬ್ರಾಹ್ಮಣರನ್ನೂ ದೀನರು, ಅನಾಥರು ಮತ್ತು ಸಾಧುಸಜ್ಜನರನ್ನೂ ದಕ್ಷಿಣೆಗಳಿಂದ ಪೂಜಿಸಬೇಕು ಜನರ ಕಣ್ಣಿಗೆ ಬಿದ್ದ ದ್ರವ್ಯವನ್ನು ಮನೆಯಲ್ಲಿ

ತಿಷ್ಠೇದ್ಭಯಾವಹಂ ಯಸ್ಮಾಚ್ಛೋಕವ್ಯಾಧಿಕರಂ ನೃಣಾಂ ।
ಶೀಘ್ರಂ ಪರಸ್ವೀಕರಣಾಚ್ಛ್ರೇಯಃ ಪ್ರಾಪ್ನೋತಿ ಮಾನವಃ ॥೭೪॥

ಅನೇನ ವಿಧಿನಾ ಯಸ್ತು ತುಲಾಪುರುಷಮಾಚರೇತ್ ।
ಪ್ರತಿಲೋಕಾಧಿಪಸ್ಥಾನೇ ಪ್ರತಿಮನ್ವಂತರಂ ವಸೇತ್ ॥೭೫॥

ವಿಮಾನೇನಾರ್ಕವರ್ಣೇನ ಕಿಂಕಿಣೀಜಾಲಮಾಲಿನಾ ।
ಪೂಜ್ಯಮಾನೋಽಪ್ಸರೋಭಿಶ್ಚ ತತೋ ವಿಷ್ಣುಪುರಂ ವ್ರಜೇತ್ ।
ಕಲ್ಪಕೋಟಿಶತಂ ಯಾವತ್ತಸ್ಮಿಂಲ್ಲೋಕೇ ಮಹೀಯತೇ ॥೭೬॥

ಕರ್ಮಕ್ಷಯಾದಿಹ ಪುನರ್ಭುವಿ ರಾಜರಾಜೋ
ಭೂಪಾಲಮೌಲಿಮಣಿರಂಜಿತಪಾದಪೀಠಃ ।
ಶ್ರದ್ಧಾನ್ವಿತೋ ಭವತಿ ಯಜ್ಞಸಹಸ್ರಯಾಜೀ
ದೀಪ್ತಪ್ರತಾಪಜಿತಸರ್ವಮಹೀಪಲೋಕಃ ॥೭೭॥

---

ಬಹಳ ಹೊತ್ತು ಇಟ್ಟುಕೊಳ್ಳಬಾರದು ಇಟ್ಟುಕೊಂಡರೆ ಅದರಿಂದ ಭಯವುಂಟು, ಶೋಕವೂ ವ್ಯಾಧಿಯೂ ಒದಗುವುವು ಆದುದರಿಂದ ಬೇಗನೆ ಆದನ್ನು ಇತರರ ಕೈಸೇರಿಸುವುದು ಶ್ರೇಯಸ್ಸಿಗೆ ಸಾಧನವಾಗುವುದು

೭೫ ಈ ವಿಧಾನದಿಂದ ತುಲಾಪುರುಷದಾನವನ್ನು ಮಾಡುವಾತನು ಒಂದೊಂದು ಮನ್ವಂತದಲ್ಲಿ ಒಬ್ಬೊಬ್ಬ ಲೋಕಾಧಿಪತಿಯ ಸ್ಥಾನದಲ್ಲಿ ವಾಸಿಸುವನು

೭೬ ಬಳಿಕ ಕಿರುಗಂಟೆಗಳ ಸಾಲು ಘಣಘಣಿಸುತ್ತಿರಲು, ಸೂರ್ಯನಂತೆ ಪ್ರಕಾಶಿಸುತ್ತಿರುವ ವಿಮಾನದಲ್ಲಿ ಕುಳಿತು, ಅಪ್ಸರಸ್ತ್ರೀಯರಿಂದ ಪೂಜೆಯನ್ನು ಕೈಗೊಳ್ಳುತ್ತ ವಿಷ್ಣುಲೋಕವನ್ನು ಸೇರುವನು ಅಲ್ಲಿ ಕೋಟಿಗಟ್ಟಲೆ ಕಲ್ಪಗಳ ಕಾಲ ಪೂಜ್ಯತೆಯನ್ನು ಪಡೆದು ವಾಸಿಸುವನು

೭೭ ಪುಣ್ಯಕರ್ಮವು ತೀರಿದ ಬಳಿಕ ಭೂಮಿಯಲ್ಲಿ ಚಕ್ರವರ್ತಿಯಾಗಿ ಜನಿಸುವನು ಸಾಮಂತರಾಜರ ರತ್ನಕಿರೀಟಗಳ ಕಾಂತಿಯಿಂದ ಅವನ ಪಾದ ಪೀಠವು ಬೆಳಗುವುದು ಶ್ರದ್ಧೆಯಿಂದ ಸಾವಿರಾರು ಯಜ್ಞಗಳನ್ನು ಮಾಡುವನು ಬೆಳಬೆಳಗುವ ತನ್ನ ಪ್ರತಾಪದಿಂದ ಎಲ್ಲ ರಾಜರನ್ನೂ ಜಯಿಸುವನು

**ಯೋ ದೀಯಮಾನಮಪಿ ಪಶ್ಯತಿ ಭಕ್ತಿಯುಕ್ತಃ**
**ಕಾಲಾಂತರೇ ಸ್ಮರತಿ ವಾಚಯತೀಹ ಲೋಕೇ ।**
**ಯೋ ವಾ ಶೃಣೋತಿ ಪಠತೀಂದ್ರಸಮಾನರೂಪಃ**
**ಪ್ರಾಪ್ನೋತಿ ಧಾಮ ಸಪುರಂದರದೇವಜುಷ್ಟಂ** **॥೭೮॥**

**ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ಮಹಾದಾನಾನುಕೀರ್ತನೇ ತುಲಾಪುರುಷದಾನಂ ನಾಮ ಚತುಃಸಪ್ತತ್ಯಧಿಕದ್ವಿಶತತಮೋಽಧ್ಯಾಯಃ**

---

೭೮ ಈ ದಾನವನ್ನು ಮಾಡುವ ಭಾಗ್ಯವು ತನಗಿಲ್ಲದಿದ್ದರೆ ಮತ್ತೊಬ್ಬರು ಕೊಡುವುದನ್ನಾದರೂ ಭಕ್ತಿಯಿಂದ ನೋಡಬೇಕು ಆಗಾಗ ಅದನ್ನು ನೆನಸಿಕೊಳ್ಳಬೇಕು ಆ ವೃತ್ತಾಂತವನ್ನು ಇತರರಿಗೆ ಹೇಳಬೇಕು ಇಂತಹ ಮನುಷ್ಯನು ಇಂದ್ರನಿಗೆ ಸಮಾನವಾದ ರೂಪವನ್ನು ಪಡೆದು, ಇಂದ್ರಾದಿ ದೇವತೆಗಳು ವಾಸಿಸುವಂತಹ ದಿವ್ಯಸ್ಥಾನವನ್ನೈದುವನು ಈ ದಾನವಿಧಾನವನ್ನು ಕೇಳುವವನೂ ಓದುವವನೂ ಇದೇ ಫಲವನ್ನು ಪಡೆಯುವರು

## ಅಧ್ಯಾಯದ ಸಾರಾಂಶ

ಈ ಅಧ್ಯಾಯವು ಷೋಡಶಮಹಾದಾನಗಳಲ್ಲಿ ಮೊದಲನೆಯದಾದ ತುಲಾಪುರುಷದಾನವನ್ನು ವಿವರಿಸುತ್ತದೆ

ಶಾಸ್ತ್ರದಲ್ಲಿ ಹೇಳಿರುವ ಅಳತೆಗೆ ತಕ್ಕಂತೆ ಮಂಟಪವನ್ನೂ ಅಗ್ನಿಕುಂಡವನ್ನೂ ನಿರ್ಮಿಸಿ, ತ್ರಿಮೂರ್ತ್ಯಾದಿ ದೇವತೆಗಳನ್ನು ಉದ್ದೇಶಿಸಿ ಅವರವರ ಮಂತ್ರಗಳಿಂದ ನಾಲ್ಕು ನಾಲ್ಕು ಹೋಮಗಳನ್ನು ಮಾಡಬೇಕು ಕುಂಡದ ಪೂರ್ವೋತ್ತರ ಭಾಗಗಳಲ್ಲಿ ರಚಿಸಿರುವ ದೇವತೆಗಳನ್ನು ಆವಾಹನೆಮಾಡಿ ಪೂಜಿಸಬೇಕು ಬಳಿಕ ಯಜಮಾನನು ಮಂಟಪದ ನಡುವೆ ಕಟ್ಟಿರುವ ತಕ್ಕಡಿಯನ್ನು ಪೂಜಿಸಿ ಅದರ ಒಂದು ಕಡೆ ತಟ್ಟೆಯಲ್ಲಿ ಕುಳಿತುಕೊಳ್ಳಬೇಕು ಇನ್ನೊಂದು ತಟ್ಟೆಗೆ ಅವನ ತೂಕ

ವನ್ನು ಮೀರಿಸುವಷ್ಟು ಚಿನ್ನವನ್ನು ಹಾಕಬೇಕು ಈ ಚಿನ್ನವನ್ನು ಆಚಾರ್ಯನಿಗೂ ಋತ್ವಿಕ್ಕುಗಳಿಗೂ ಧಾರಾಪೂರ್ವಕವಾಗಿ ದಾನಮಾಡಬೇಕು ಬಡಬಗ್ಗರೆಲ್ಲ ರನ್ನೂ ದಾನದಕ್ಷಿಣೆಗಳಿಂದ ತೃಪ್ತಿಪಡಿಸಬೇಕು ಈ ದಾನದಿಂದ ಬರುವ ಫಲವು ಅನಂತವಾದುದು ಈ ವರ್ಣನವನ್ನು ಕೇಳುವವನೂ ಸಹ ಪುಣ್ಯಭಾಗಿಯಾಗುವನು

ಶ್ರೀಮತ್ಸ್ಯಮಹಾಪುರಾಣದಲ್ಲಿ ಮಹಾದಾನಾನುಕೀರ್ತನದಲ್ಲಿ ತುಲಾಪುರುಷದಾನ ವೆಂಬ ಇನ್ನೂರ ಎಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿದುದು

## ಅಥ ಪಂಚಸಪ್ತತ್ಯಧಿಕದ್ವಿಶತತಮೋಽಧ್ಯಾಯಃ

|| ಮತ್ಸ್ಯ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಮಹಾದಾನಮನುತ್ತಮಂ ।
ನಾಮ್ನಾ ಹಿರಣ್ಯಗರ್ಭಾಖ್ಯಂ ಮಹಾಪಾತಕನಾಶನಂ || ೧ ||

ಪುಣ್ಯಂ ದಿನಮಥಾಽಽಸಾದ್ಯ ತುಲಾಪುರುಷದಾನವತ್ ।
ಋತ್ವಿಙ್ಮಂಡಪಸಂಭಾರಭೂಷಣಾಚ್ಛಾದನಾದಿಕಂ || ೨ ||

ಕುರ್ಯಾದುಪೋಷಿತಸ್ತದ್ವಲ್ಲೋಕೇಶಾವಾಹನಂ ಬುಧಃ ।
ಪುಣ್ಯಾಹವಾಚನಂ ಕೃತ್ವಾ ತದ್ವತ್ಕೃತ್ವಾಽಧಿವಾಸನಂ || ೩ ||

ಬ್ರಾಹ್ಮಣೈರಾನಯೇತ್ಕುಂಭಂ ತಪನೀಯಮಯಂ ಶುಭಂ ।
ದ್ವಿಸಪ್ತತ್ಯಂಗುಲೋಚ್ಛ್ರಾಯಂ ಹೇಮಪಂಕಜಗರ್ಭವತ್ || ೪ ||

---

೧ ಮತ್ಸ್ಯರೂಪನಾದ ಭಗವಂತನು ಹೇಳಿದನು —ಇನ್ನು ಮುಂದೆ ಅತ್ಯಂತಶ್ರೇಷ್ಠವಾದ ಹಿರಣ್ಯಗರ್ಭದಾನವೆಂಬ ಮಹಾದಾನದ ವಿಧಾನವನ್ನು ಹೇಳುವೆನು ಅದು ಮಹಾಪಾತಕಗಳನ್ನು ಕೂಡ ಪರಿಹರಿಸುವುದು

೨ ಪುಣ್ಯದಿನದಲ್ಲಿ ತುಲಾಪುರುಷದಾನವಿಧಿಯಲ್ಲಿ ಹೇಳಿದಂತೆಯೇ ಋತ್ವಿಕುಗಳನ್ನು ವರಿಸಿ, ಮಂಟಪವನ್ನೂ, ಸಾಮಗ್ರಿಗಳನ್ನೂ, ವಸ್ತ್ರಭೂಷಣಾದಿಗಳನ್ನೂ ಸಿದ್ಧಿಗೊಳಿಸಬೇಕು ಉಪವಾಸಮಾಡಿ ಅಲ್ಲಿನಂತೆಯೇ ಲೋಕಪಾಲಕರನ್ನು ಆವಾಹನಮಾಡಬೇಕು

೩ ಪುಣ್ಯಾಹವಾಚನವನ್ನೂ ಅಧಿವಾಸನವನ್ನೂ ಮಾಡಿದ ಬಳಿಕ ಬ್ರಾಹ್ಮಣರು ಶುಭಕರವಾದ ಸುವರ್ಣಕುಂಭವನ್ನು ತರಬೇಕು

೪-೬ ಆ ಕುಂಭವು ಎಪ್ಪತ್ತೆರಡು ಅಂಗುಲದಷ್ಟು ಉನ್ನತವಾಗಿ ತಾವರೆಯ ಮೊಗ್ಗಿನ ಆಕಾರದಿಂದಿರಬೇಕು ಮುಕ್ಕಾಲುಪಾಲಿಗಿಂತ ಸ್ವಲ್ಪಕಡಿಮೆಯಾಗಿ

ತ್ರಿಭಾಗಹೀನವಿಸ್ತಾರಮಾಜ್ಯಕ್ಷೀರಾದಿಪೂರಿತಂ ।
ದಶಾಸ್ತ್ರಾಣಿ ಚ ರತ್ನಾನಿ ದಾತ್ರಸೂಚೀಂ ತಥೈವ ಚ ॥ ೫ ॥

ಹೇಮನಾಲಂ ಸಪಿಟಕಂ ಬಹಿರಾದಿತ್ಯಸಂಯುತಂ ।
ತಥೈವಾವರಣಂ ನಾಭೇರುಪವೀತಂ ಚ ಕಾಂಚನಂ ॥ ೬ ॥

ಪಾರ್ಶ್ವತಃ ಸ್ಥಾಪಯೇತ್ತದ್ವದ್ದ್ವೈಮದಂಡಕಮಂಡಲೂ ।
ಪದ್ಮಾಕಾರಂ ಪಿಧಾನಂ ಸ್ಯಾತ್ಸಮಂತಾದಂಗುಲಾಧಿಕಂ ॥ ೭ ॥

ಮುಕ್ತಾವಲೀಸಮೋಪೇತಂ ಪದ್ಮರಾಗಸಮನ್ವಿತಂ ।
ತಿಲದ್ರೋಣೋಪರಿಗತಂ ವೇದಿಮಧ್ಯೇ ವ್ಯವಸ್ಥಿತಂ ॥ ೮ ॥

ತತೋ ಮಂಗಲಶಬ್ದೇನ ಬ್ರಹ್ಮಘೋಷರವೇಣ ಚ ।
ಸರ್ವೌಷಧ್ಯುದಕಸ್ನಾನಸ್ನಾಪಿತೋ ವೇದಪುಂಗವೈಃ ॥ ೯ ॥

---

ಹಾಲಿನಿಂದಲೂ ತುಪ್ಪದಿಂದಲೂ ತುಂಬಿರಬೇಕು ಹತ್ತುಬಗೆಯ ಅಸ್ತ್ರಗಳು, ರತ್ನಗಳು, ಚೂರಿ, ಸೂಜಿ, ಚಿನ್ನದ ಕೊಳವೆ ಬುಟ್ಟಿ, ಸೂರ್ಯನಪ್ರತಿಮೆ ಇವೆಲ್ಲವನ್ನೂ ಹೊರಗಡೆ ಸಮೀಪದಲ್ಲಿಡಬೇಕು. ನಾಭಿಸ್ಥಳಕ್ಕೆ ಆವರಣವನ್ನು ಹೊದಿಸಿ ಚಿನ್ನದ ಉಪವೀತವನ್ನು ಧರಿಸಬೇಕು

೭ ಎರಡು ಪಕ್ಕಗಳಲ್ಲಿಯೂ ಚಿನ್ನದಿಂದ ಮಾಡಿದ ದಂಡವನ್ನೂ ಕಮಂಡಲುವನ್ನೂ ಇರಿಸಬೇಕು ತಾವರೆಯ ಆಕಾರದ ಮುಚ್ಚಳವನ್ನು ಸುತ್ತಲೂ ಒಂದಂಗುಲಸ್ಥಳ ಬಿಡುವಂತೆ ಮುಚ್ಚಬೇಕು

೮ ಆ ಕುಂಭವನ್ನು ವೇದಿಕೆಯ ನಡುವೆ ಒಂದು ಕೊಳಗ ಎಳ್ಳನ್ನು ಹರಡಿ ಅದರ ಮೇಲೆ ಇಡಬೇಕು ಮುತ್ತಿನಹಾರಗಳಿಂದಲೂ ಪದ್ಮರಾಗಮಣಿಯಿಂದಲೂ ಅದನ್ನು ಅಲಂಕರಿಸಬೇಕು

೯-೧೦ ಬಳಿಕ ಮಂಗಲವಾದ್ಯಗಳು ಭೋರ್ಗರೆಯುವುವು ವೇದ ಘೋಷವು ಕೇಳಿಬರುವುದು ವೇದಪಾರಂಗತರಾದ ಬ್ರಾಹ್ಮಣೋತ್ತಮರು

ಶುಕ್ಲಮಾಲ್ಯಾಂಬರಧರಃ ಸರ್ವಾಭರಣಭೂಷಿತಃ ।
ಇಮಮುಚ್ಚಾರಯೇನ್ಮಂತ್ರಂ ಗೃಹೀತಕುಸುಮಾಂಜಲಿಃ ॥೧೦॥

ನಮೋ ಹಿರಣ್ಯಗರ್ಭಾಯ ಹಿರಣ್ಯಕವಚಾಯ ಚ ।
ಸಪ್ತಲೋಕಸುರಾಧ್ಯಕ್ಷ ಜಗದ್ಧಾತ್ರೇ ನಮೋ ನಮಃ ॥೧೧॥

ಭೂರ್ಲೋಕಪ್ರಮುಖಾ ಲೋಕಾಸ್ತವ ಗರ್ಭೇ ವ್ಯವಸ್ಥಿತಾಃ ।
ಬ್ರಹ್ಮಾದಯಸ್ತಥಾ ದೇವಾ ನಮಸ್ತೇ ವಿಶ್ವಧಾರಿಣೇ ॥೧೨॥

ನಮಸ್ತೇ ಭುವನಾಧಾರ ನಮಸ್ತೇ ಭುವನಾಶ್ರಯ ।
ನಮೋ ಹಿರಣ್ಯಗರ್ಭಾಯ ಗರ್ಭೇ ಯಸ್ಯ ಪಿತಾಮಹಃ ॥೧೩॥

ಯತಸ್ತ್ವಮೇವ ಭೂತಾತ್ಮಾ ಭೂತೇ ಭೂತೇ ವ್ಯವಸ್ಥಿತಃ ।
ತಸ್ಮಾನ್ಮಾಮುದ್ಧರಾಶೇಷದುಃಖಸಂಸಾರಸಾಗರಾತ್ ॥೧೪॥

---

ಯಜಮಾನನಿಗೆ ಸಕಲೌಷಧಿರಸಸಹಿತವಾದ ಮಂಗಳೋದಕದಿಂದ ಸ್ನಾನಮಾಡಿ ಸುವರು ಆತನು ಶುಭ್ರವಸ್ತ್ರವನ್ನು ಧರಿಸಿ, ಸರ್ವಾಲಂಕಾರಭೂಷಿತನಾಗಿ, ಬೊಗಸೆಯಲ್ಲಿ ಹೂಗಳನ್ನು ತುಂಬಿಕೊಂಡು ಈ ಮಂತ್ರವನ್ನು ಹೇಳುವನು

೧೧ ಸಪ್ತಲೋಕಗಳನ್ನೂ, ದೇವೇಂದ್ರನನ್ನೂ, ಜಗತ್ತನ್ನೂ ನಿರ್ಮಿಸಿದ, ಹಿರಣ್ಯಕವಚವನ್ನು ತೊಟ್ಟಿರುವ ಹಿರಣ್ಯಗರ್ಭನಾಮಕನಾದ ಪರಮಾತ್ಮಸ್ವರೂಪನಿಗೆ ನಮಸ್ಕಾರ

೧೨ ಭೂಲೋಕ ಮೊದಲಾದ ಸಕಲ ಲೋಕಗಳೂ ಬ್ರಹ್ಮಾದಿದೇವತೆಗಳೂ ನಿನ್ನ ಗರ್ಭದಲ್ಲಿ ಅಡಗಿರುವರು ಸರ್ವಾಧಾರನೆನಿಸಿದ ನಿನಗೆ ನಮಸ್ಕಾರ

೧೩ ಸಕಲ ಲೋಕಗಳಿಗೆ ಆಧಾರನೂ ಆಶ್ರಯನೂ ಆದ ನಿನಗೆ ನಮಸ್ಕಾರ ಬ್ರಹ್ಮದೇವನನ್ನು ಗರ್ಭದಲ್ಲಿ ಧರಿಸಿ, ಹಿರಣ್ಯಗರ್ಭನೆಂದು ಪ್ರಖ್ಯಾತನಾಗಿರುವ ನಿನಗೆ ನಮಸ್ಕಾರ

೧೪ ಒಂದೊಂದು ಪ್ರಾಣಿಯಲ್ಲೂ ನೀನು ಅಂತರಾತ್ಮನಾಗಿ ನಿಂತು ಭೂತಾತ್ಮನೆಂಬ ಪ್ರಸಿದ್ಧಿಯನ್ನು ಪಡೆದಿರುವೆ ಆದುದರಿಂದ ಈ ಸಂಸಾರಸಾಗರದ ಸಕಲ ದುಃಖಗಳಿಂದಲೂ ನನ್ನನ್ನು ಪಾರುಮಾಡು

ಏವಮಾಮಂತ್ರ್ಯ ತನ್ಮಧ್ಯಮಾವಿಶ್ಯಾಽಽಸ್ತ ಉದಙ್ಮುಖಃ ।
ಮುಷ್ಟಿಭ್ಯಾಂ ಪರಿಸಂಗೃಹ್ಯ ಧರ್ಮರಾಜಚತುರ್ಮುಖೌ ||೧೫||

ಜಾನುಮಧ್ಯೇ ಶಿರಃ ಕೃತ್ವಾ ತಿಷ್ಠೇದುಚ್ಛ್ವಾಸಪಂಚಕಂ ।
ಗರ್ಭಾದಾನಂ ಪುಂಸವನಂ ಸೀಮಂತೋನ್ನಯನಂ ತಥಾ ||೧೬||

ಕುರ್ಯುರ್ಹಿರಣ್ಯಗರ್ಭಸ್ಯ ತತಸ್ತೇ ದ್ವಿಜಪುಂಗವಾಃ ।
ಗೀತಮಂಗಲಘೋಷೇಣ ಗುರುರುತ್ಥಾಪಯೇತ್ತತಃ ||೧೭||

ಜಾತಕರ್ಮಾದಿಕಾಃ ಕುರ್ಯುಃ ಕ್ರಿಯಾಃ ಷೋಡಶ ಚಾಪರಾಃ ।
ಸೂಚ್ಯಾದಿಕಂ ಚ ಗುರವೇ ದದ್ಯಾನ್ಮಂತ್ರಮಿಮಂ ಜಪೇತ್ ||೧೮||

ನಮೋ ಹಿರಣ್ಯಗರ್ಭಾಯ ವಿಶ್ವಗರ್ಭಾಯ ವೈ ನಮಃ ।
ಚರಾಚರಸ್ಯ ಜಗತೋ ಗೃಹಭೂತಾಯ ವೈ ನಮಃ ||೧೯||

---

೧೫ ಹೀಗೆ ಪ್ರಾರ್ಥಿಸಿ, ಅದರೊಳಹೊಕ್ಕು ಉತ್ತರಾಭಿಮುಖವಾಗಿ ಕುಳಿತು ಕೊಳ್ಳಬೇಕು ಧರ್ಮರಾಜನ ಮತ್ತು ಬ್ರಹ್ಮನ ಪ್ರತಿಮೆಗಳನ್ನು ಮುಷ್ಟಿಗಳಲ್ಲಿ ಹಿಡಿದುಕೊಂಡು, ಮೊಣಕಾಲುಗಳ ನಡುವೆ ತಲೆಯಿಟ್ಟು ಐದುಸಾರಿ ಉಸಿರು ಆಡುವಷ್ಟುಕಾಲ ಕುಳಿತಿರಬೇಕು

೧೬-೧೭ ಬ್ರಾಹ್ಮಣೋತ್ತಮರು ಗರ್ಭಾಧಾನ, ಪುಂಸವನ, ಸೀಮಂತೋನ್ನಯನ ಈ ಸಂಸ್ಕಾರಗಳನ್ನು ಆ ಸುವರ್ಣಮಯವಾದ ಗರ್ಭಕ್ಕೆ ನಡೆಸುವರು ಬಳಿಕ ಮಂಗಳವಾದ್ಯಧ್ವನಿಗಳ ನಡುವೆ ಆಚಾರ್ಯನು ಯಜಮಾನನನ್ನು ಎಬ್ಬಿಸುವನು

೧೮ ಜಾತಕರ್ಮ ಮುಂತಾದ ಉಳಿದ ಷೋಡಶಸಂಸ್ಕಾರಗಳನ್ನು ಮಾಡಬೇಕು ಸೂಜಿ ಮೊದಲಾದ ವಸ್ತುಗಳನ್ನು ಆಚಾರ್ಯನಿಗೆ ಕೊಡಬೇಕು ಮತ್ತು ಮುಂದಿನ ಮಂತ್ರವನ್ನು ಜಪಿಸಬೇಕು

೧೯ ಹಿರಣ್ಯಗರ್ಭನಿಗೆ ನಮಸ್ಕಾರ ವಿಶ್ವಗರ್ಭನಿಗೆ ನಮಸ್ಕಾರ. ಸ್ಥಾವರ ಜಂಗಮರೂಪವಾದ ಜಗತ್ತಿಗೆ ಆವಾಸಸ್ಥಾನವೆನಿಸಿದವನಿಗೆ ನಮಸ್ಕಾರ

ಯಥಾಹಂ ಜನಿತಃ ಪೂರ್ವಂ ಮರ್ತ್ಯಧರ್ಮಾ ಸುರೋತ್ತಮ ।
ತ್ವದ್ಗರ್ಭಸಂಭವಾದೇಷ ದಿವ್ಯದೇಹೋ ಭವಾಮ್ಯಹಂ ॥೨೦॥

ಚತುರ್ಭಿಃ ಕಲಶೈರ್ಭೂಯಸ್ತತಸ್ತೇ ದ್ವಿಜಪುಂಗವಾಃ ।
ಸ್ನಾಪಯೇಯುಃ ಪ್ರಸನ್ನಾಂಗಾಃ ಸರ್ವಾಭರಣಭೂಷಿತಾಃ ॥೨೧॥

ದೇವಸ್ಯತ್ವೇತಿ ಮಂತ್ರೇಣ ಸ್ಥಿತಸ್ಯ ಕನಕಾಸನೇ ।
ಅದ್ಯ ಜಾತಸ್ಯ ತೇಽಂಗಾನಿ ಅಭಿಷೇಕ್ಷ್ಯಾಮಹೇ ವಯಂ ॥೨೨॥

ದಿವ್ಯೇನಾನೇನ ವಪುಷಾ ಚಿರಂ ಜೀವ ಸುಖೀ ಭವ ।
ತತೋ ಹಿರಣ್ಯಗರ್ಭಂ ತಂ ತೇಭ್ಯೋ ದದ್ಯಾದ್ವಿಚಕ್ಷಣಃ ॥೨೩॥

ತೇ ಪೂಜ್ಯಾಃ ಸರ್ವಭಾವೇನ ಬಹವೋ ವಾ ತದಾಜ್ಞಯಾ ।
ತತ್ರೋಪಕರಣಂ ಸರ್ವಂ ಗುರವೇ ವಿನಿವೇದಯೇತ್ ॥೨೪॥

---

೨೦ ದೇವೋತ್ತಮಾ, ನಾನು ಮೊದಲು ಮನುಷ್ಯಧರ್ಮಗಳಿಂದ ಕೂಡಿದವನಾಗಿ ಹುಟ್ಟಿದ್ದೆನು ನಿನ್ನ ಗರ್ಭದಿಂದ ಈಗ ಜನಿಸಿ ಬಂದೆನಾದಕಾರಣ ನನಗೆ ದಿವ್ಯದೇಹವು ಪ್ರಾಪ್ತವಾಗುವುದು

೨೧ ತರುವಾಯ ನಿರ್ಮಲದೇಹರೂ ಸರ್ವಾಭರಣಭೂಷಿತರೂ ಆದ ಆ ಬ್ರಾಹ್ಮಣೋತ್ತಮರು ನಾಲ್ಕು ಕಲಶಗಳ ಉದಕದಿಂದ ಯಜಮಾನನಿಗೆ ಸ್ನಾನ ಮಾಡಿಸುವರು

೨೨ ಈಗತಾನೆ ಜನಿಸಿ ಸುವರ್ಣ ಪೀಠದ ಮೇಲೆ ಕುಳಿತಿರುವ ನಿನ್ನ ಅವಯವಗಳಿಗೆ "ದೇವಸ್ಯ ತ್ವಾ" ಎಂಬ ಮಂತ್ರದಿಂದ ನಾವು ಪ್ರೋಕ್ಷಣ ಮಾಡುತ್ತೇವೆ

೨೩-೨೫ ಪ್ರಾಜ್ಞನಾದ ಯಜಮಾನನು ಬಳಿಕ ಆ ಸುವರ್ಣಮಯವಾದ ಗರ್ಭವನ್ನು ಋತ್ವಿಜರಿಗೆ ದಾನಮಾಡಬೇಕು ಅವರನ್ನೂ ಅವರ ಅಪ್ಪಣೆಪಡೆದು ಇನ್ನೂ ಹಲವರನ್ನೂ ಸಕಲೋಪಚಾರಗಳಿಂದಲೂ ಪೂಜಿಸಬೇಕು ಅಲ್ಲಿನ ಉಪ

ಪಾದುಕೋಪಾನಹಚ್ಛತ್ರಚಾಮರಾಸನಭಾಜನಂ ।
ಗ್ರಾಮಂ ವಾ ವಿಷಯಂವಾಽಪಿ ಯದನ್ಯದಪಿ ಸಂಭವೇತ್ ॥೨೫॥

ಅನೇನ ವಿಧಿನಾ ಯಸ್ತು ಪುಣ್ಯೇಽಹನಿ ನಿವೇದಯೇತ್ ।
ಹಿರಣ್ಯಗರ್ಭದಾನಂ ಸ ಬ್ರಹ್ಮಲೋಕೇ ಮಹೀಯತೇ ॥೨೬॥

ಪುರೇಷು ಲೋಕಪಾಲಾನಾಂ ಪ್ರತಿಮನ್ವಂತರಂ ವಸೇತ್ ।
ಕಲ್ಪಕೋಟಿಶತಂ ಯಾವದ್ಬ್ರಹ್ಮಲೋಕೇ ಮಹೀಯತೇ ॥೨೭॥

ಕಲಿಕಲುಷವಿಮುಕ್ತಃ ಪೂಜಿತಃ ಸಿದ್ಧಸಾಧ್ಯೈ
ರಮರಚಮರಮಾಲಾವೀಜ್ಯಮಾನೋಽಪ್ಸರೋಭಿಃ ।
ಪಿತೃಶತಮಥಬಂಧೂರ್ ಪುತ್ರಪೌತ್ರಾರ್ ಪ್ರಪೌತ್ರಾ
ನಪಿ ನರಕನಿಮಗ್ನಾಂಸ್ತಾರಯೇದೇಕ ಏವ ॥೨೮॥

---

ಕರಣಗಳನ್ನೆಲ್ಲ ಆಚಾರ್ಯನಿಗೆ ದಾನವಾಗಿ ಒಪ್ಪಿಸಬೇಕು ಪಾದುಕೆ ಪಾದರಕ್ಷೆ, ಛತ್ರಿ, ಚಾಮರ, ಆಸನ, ಪಾತ್ರೆ, ಗ್ರಾಮ ಅಥವಾ ದೇಶ ಮೊದಲಾದುವೆಲ್ಲವನ್ನೂ ಕೊಡಬಹುದು

೨೬ ಈ ಕ್ರಮದಿಂದ ಪುಣ್ಯದಿವಸದಲ್ಲಿ ಸುವರ್ಣಗರ್ಭವನ್ನು ದಾನ ಮಾಡುವ ಮನುಷ್ಯನು ಬ್ರಹ್ಮಲೋಕದಲ್ಲಿ ಮಾನ್ಯತೆಯನ್ನು ಪಡೆಯುವನು

೨೭ ಪ್ರತಿಯೊಂದು ಮನ್ವಂತರದಲ್ಲೂ ಲೋಕಪಾಲಕರ ನಗರಗಳಲ್ಲಿ ಸುಖದಿಂದ ವಾಸಿಸುವನು ಬಳಿಕ ಬ್ರಹ್ಮಲೋಕವನ್ನು ಸೇರಿ ಕೋಟಿಗಟ್ಟಲೆ ಕಲ್ಪಗಳ ಕಾಲ ಗೌರವದಿಂದಿರುವನು

೨೮ ಕಲಿದೋಷವು ಅವನ ಬಳಿ ಸೇರದು ಸಿದ್ಧರೂ ಸಾಧ್ಯರೂ ಅವನನ್ನು ಪೂಜಿಸುವರು ಅಪ್ಸರಸ್ತ್ರೀಯರು ಚಾಮರಗಳನ್ನು ಬೀಸುತ್ತ ಓಲೈಸುವರು ನರಕದಲ್ಲಿ ಬಿದ್ದು ತೊಳಲುವ ನೂರಾರು ಜನ ಪಿತೃಗಳು, ಬಂಧುಗಳು, ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಇವರೆಲ್ಲರನ್ನೂ ಅವನೊಬ್ಬನೇ ಉದ್ಧರಿಸುವನು

ಇತಿ ಪಠತಿ ಯ ಇತ್ಥಂ ಯಃ ಶೃಣೋತೀಹ ಸಮ್ಯ
ಙ್ಮಧುರಿಪುರಿವ ಲೋಕೇ ಪೂಜ್ಯತೇ ಸೋಽಪಿ ಸಿದ್ಧೈಃ ।
ಮತಿಮಪಿ ಚ ಜನಾನಾಂ ಯೋ ದದಾತಿ ಪ್ರಿಯಾರ್ಥಂ
ವಿಬುಧಪತಿಜನಾನಾಂ ನಾಯಕಃ ಸ್ಯಾದಮೋಘಂ ॥೨೯॥

ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ಮಹಾದಾನಾನುಕೀರ್ತನೇ ಹಿರಣ್ಯಗರ್ಭ ಪ್ರದಾನವಿಧಿರ್ನಾಮ ಪಂಚಸಪ್ತತ್ಯಧಿಕದ್ವಿಶತತಮೋಽಧ್ಯಾಯಃ

---

೨೯ ಈ ರೀತಿಯಾದ ಸುವರ್ಣಗರ್ಭದಾನವಿಧಿಯನ್ನು ಪಾರಾಯಣ ಮಾಡುವವನೂ, ಶ್ರದ್ಧೆಯಿಂದ ಕೇಳುವವನೂ ಲೋಕದಲ್ಲಿ ವಿಷ್ಣುವಿನಂತೆ ಸಿದ್ಧರಿಂದಲೂ ಸಹ ಪೂಜ್ಯನಾಗುವನು ಈ ವಿಚಾರವನ್ನು ಜನರಿಗೆ ತಿಳಿಸಿ ಯಾವನು ಸಂತೋಷಪಡಿಸುತ್ತಾನೋ ಅವನು ದೇವತೆಗಳ ಅಧಿಪತಿಯಾಗಿ ತನ್ನ ಬಾಳುವೆಯನ್ನು ಸಾರ್ಥಕಮಾಡಿಕೊಳ್ಳುವನು

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಸುವರ್ಣಮಯವಾದ ಗರ್ಭವನ್ನು ದಾನಮಾಡುವ ವಿಧಾನವನ್ನು ಹೇಳಿದೆ

ತುಲಾಪುರುಷದಾನವಿಧಿಯಲ್ಲಿ ಹೇಳಿದಂತೆಯೇ ಕುಂಡಮಂಟಪಾದಿಗಳನ್ನು ರಚಿಸಿ, ಋತ್ವಿಕ್ಕುಗಳನ್ನೂ ಆಚಾರ್ಯನನ್ನೂ ವರಿಸಬೇಕು ಹೋಮವೂ ಪೂಜೆಯೂ ಅಲ್ಲಿನಂತೆಯೇ ನಡೆಯುವುವು ತಾವರೆಯ ಮೊಗ್ಗಿನ ಆಕಾರವಾದ ದೊಡ್ಡ ಕುಂಭವನ್ನು ಚಿನ್ನದಿಂದ ಮಾಡಿಸಿ ಅದರಲ್ಲಿ ಮುಕ್ಕಾಲುಪಾಲಿಗೆ ಕಡಮೆಯಾಗಿ ಹಾಲನ್ನೂ ತುಪ್ಪವನ್ನೂ ತುಂಬಬೇಕು ಯಜಮಾನನು ದ್ವಿಜಪುಂಗವರ ಅನುಜ್ಞೆಯನ್ನು ಪಡೆದು ಅದರೊಳಗಡೆ ಕುಳಿತುಕೊಳ್ಳಬೇಕು ಋತ್ವಿಕ್ಕುಗಳು ತಾವರೆಯ ಆಕಾರದ ಮುಚ್ಚಳದಿಂದ ಅದನ್ನು ಮುಚ್ಚುವರು ಹೀಗೆ ಐದುಸಾರಿ ಉಸಿರಾಡುವವರೆಗೆ ಆ ಸುವರ್ಣಗರ್ಭದೊಳಗೆ ಇರಬೇಕು ಆಗ ಆ ಗರ್ಭಕ್ಕೆ ಗರ್ಭಾಧಾನಾದಿ ಸಂಸ್ಕಾರಗಳನ್ನು ಪುರೋಹಿತರು ಮಾಡುವರು ಯಜಮಾನನು ಹೊರಕ್ಕೆ ಬಂದ

ಬಳಿಕ ಆತನಿಗೆ ಜಾತಕರ್ಮಾದಿ ಸಂಸ್ಕಾರಗಳು ನಡೆಯುವುವು ತನ್ನ ಪೂರ್ವದೇಹವು ಹೋಗಿ, ದಿವ್ಯದೇಹವನ್ನು ಪಡೆದು ಗರ್ಭದಿಂದ ಹುಟ್ಟಿಬಂದಂತೆ ಅವನು ಭಾವಿಸುವನು ಸುವರ್ಣಕುಂಭವನ್ನೂ ಉಳಿದ ಸಾಮಗ್ರಿಗಳನ್ನೂ ಋತ್ವಿಕ್ಪುರೋಹಿತರಿಗೆ ದಾನಮಾಡಿ, ಉಳಿದವರಿಗೂ ಯಥೇಚ್ಛವಾಗಿ ದಾನದಕ್ಷಿಣೆಗಳನ್ನು ಕೊಡಬೇಕು ಈ ಮಹಾದಾನವನ್ನು ಮಾಡಿದವನ ಪಿತೃಗಳೂ ಬಾಂಧವರೂ ನರಕದಿಂದ ಪಾರಾಗುವರು ಅವನು ಅನಂತಕಾಲ ಬ್ರಹ್ಮಲೋಕದಲ್ಲಿ ಪೂಜ್ಯತೆಯನ್ನು ಪಡೆದು ವಾಸಿಸುವನು

ಶ್ರೀಮತ್ಸ್ಯಮಹಾಪುರಾಣದಲ್ಲಿ ಮಹಾದಾನಾನುಕೀರ್ತನದಲ್ಲಿ ಹಿರಣ್ಯಗರ್ಭಪ್ರಧಾನ ವಿಧಿಯೆಂಬ ಇನ್ನೂರ ಎಪ್ಪತ್ತೈದನೆಯ ಅಧ್ಯಾಯವು ಮುಗಿದುದು

## ಅಥ ಷಟ್ಸಪ್ತತ್ಯಧಿಕದ್ವಿಶತತಮೋಽಧ್ಯಾಯಃ

|| ಮತ್ಸ್ಯ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಬ್ರಹ್ಮಾಂಡವಿಧಿಮುತ್ತಮಂ ।
ಯಚ್ಛ್ರೇಷ್ಠಂ ಸರ್ವದಾನಾನಾಂ ಮಹಾಪಾತಕನಾಶನಂ || ೧ ||

ಪುಣ್ಯಂ ದಿನಮಥಾಸಾದ್ಯ ತುಲಾಪುರುಷದಾನವತ್ ।
ಋತ್ವಿಙ್ಮಂಡಪಸಂಭಾರಭೂಷಣಾಚ್ಛಾದನಾದಿಕಂ || ೨ ||

ಲೋಕೇಶಾವಾಹನಂ ಕುರ್ಯಾದಧಿವಾಸನಕಂ ತಥಾ ।
ಕುರ್ಯಾದ್ವಿಂಶಪಲಾದೂರ್ಧ್ವಮಾಸಹಸ್ರಾಚ್ಚ ಶಕ್ತಿತಃ || ೩ ||

ಕಲಶದ್ವಯಸಂಯುಕ್ತಂ ಬ್ರಹ್ಮಾಂಡಂ ಕಾಂಚನಂ ಬುಧಃ ।
ದಿಗ್ಗಜಾಷ್ಟಕಸಂಯುಕ್ತಂ ಷಡ್ವೇದಾಂಗಸಮನ್ವಿತಂ || ೪ ||

---

೧ ಮತ್ಸ್ಯರೂಪನಾದ ಭಗವಂತನು ಹೇಳಿದನು —ಇನ್ನು ಮುಂದೆ ಬ್ರಹ್ಮಾಂಡದಾನದ ವಿಧಿಯನ್ನು ವಿವರಿಸುವೆನು ದಾನಗಳಲ್ಲೆಲ್ಲ ಇದು ಶ್ರೇಷ್ಠವಾದುದು ಮಹಾಪಾತಕಗಳನ್ನೂ ಕಳೆಯುವುದು

೨ ಪುಣ್ಯದಿನವನ್ನು ನೋಡಿ ತುಲಾಪುರುಷದಾನವಿಧಿಯಲ್ಲಿ ಹೇಳಿದಂತೆಯೇ ಋತ್ವಿಕ್ಕುಗಳನ್ನು ವರಿಸಿ ಮಂಟಪವನ್ನೂ, ಕುಂಡಗಳನ್ನೂ ನಿರ್ಮಿಸಿ, ವಸ್ತ್ರಭೂಷಣಾದಿ ಸಕಲಸಂಭಾರಗಳನ್ನೂ ಸಿದ್ಧಗೊಳಿಸಬೇಕು ದಿಕ್ಪಾಲಕರ ಆವಾಹನವನ್ನೂ ಅಧಿವಾಸನವನ್ನೂ ಅಲ್ಲಿನಂತೆಯೇ ಮಾಡಬೇಕು

೩ ತನ್ನ ಯೋಗ್ಯತೆಗೆ ತಕ್ಕಂತೆ, ಇಪ್ಪತ್ತರಿಂದ ಒಂದುಸಾವಿರ ಪಲಗಳ ತೂಕದವರೆಗೆ, ಚಿನ್ನದಿಂದ ಎರಡು ಕಲಶಗಳು ಒಂದರೊಡನೊಂದು ಸೇರಿ ಆದಂತೆ ಬ್ರಹ್ಮಾಂಡವನ್ನು ನಿರ್ಮಿಸಬೇಕು

೪-೬ ಆ ಅಂಡವು ಎಂಟುದಿಗ್ಗಜಗಳಿಂದಲೂ, ಆರು ವೇದಾಂಗಗಳಿಂದಲೂ, ಅಷ್ಟದಿಕ್ಪಾಲಕರಿಂದಲೂ ಕೂಡಿರಬೇಕು ಬ್ರಹ್ಮದೇವನು ಅದರ ಮಧ್ಯದಲ್ಲಿ

ಲೋಕಪಾಲಾಷ್ಟಕೋಪೇತಂ ಮಧ್ಯಸ್ಥಿತಚತುರ್ಮುಖಂ।
ಶಿವಾಚ್ಯುತಾರ್ಕಶಿಖರಮುಮಾಲಕ್ಷ್ಮೀಸಮನ್ವಿತಂ ॥ ೫ ॥

ವಸ್ವಾದಿತ್ಯಮರುದ್ಗರ್ಭಂ ಮಹಾರತ್ನಸಮನ್ವಿತಂ।
ವಿತಸ್ತೇರಂಗುಲಶತಂ ಯಾವದಾಯಾಮವಿಸ್ತರಂ ॥ ೬ ॥

ಕೌಶೇಯವಸ್ತ್ರಸಂವೀತಂ ತಿಲದ್ರೋಣೋಪರಿ ನ್ಯಸೇತ್।
ತಥಾಷ್ಟಾದಶಧಾನ್ಯಾನಿ ಸಮಂತಾತ್ಪರಿಕಲ್ಪಯೇತ್ ॥ ೭ ॥

ಪೂರ್ವೇಣಾನಂತಶಯನಂ ಪ್ರದ್ಯುಮ್ನಂ ಪೂರ್ವದಕ್ಷಿಣೇ।
ಪ್ರಕೃತಿಂ ದಕ್ಷಿಣೇ ದೇಶೇ ಸಂಕರ್ಷಣಮತಃ ಪರಂ ॥ ೮ ॥

ಪಶ್ಚಿಮೇ ಚತುರೋ ವೇದಾನನಿರುದ್ಧಮತಃ ಪರಂ।
ಅಗ್ನಿಮುತ್ತರತೋ ಹೈಮಂ ವಾಸುದೇವಮತಃ ಪರಂ ॥ ೯ ॥

---

ರುವನು ಲಕ್ಷ್ಮೀನಾರಾಯಣರೂ, ಪಾರ್ವತೀಪರಮೇಶ್ವರರೂ ಮತ್ತು ಸೂರ್ಯನೂ ಶಿಖರಭಾಗವನ್ನು ಅಲಂಕರಿಸುವರು ಅಷ್ಟವಸುಗಳೂ, ದ್ವಾದಶಾದಿತ್ಯರೂ, ಮರುದ್ಗಣಗಳೂ ಒಳಭಾಗದಲ್ಲಿರುವರು ಅದರ ವಿಸ್ತಾರವು ಹನ್ನೆರಡರಿಂದ ನೂರು ಅಂಗುಲಗಳವರೆಗೂ ಇರಬಹುದು

೭ ರೇಷ್ಮೆಯ ವಸ್ತ್ರವನ್ನು ಸುತ್ತಲೂ ಧರಿಸಿ ಅದನ್ನು ಒಂದು ಕೊಳಗ ಎಳ್ಳಿನ ಮೇಲೆ ಇಡಬೇಕು ಅದರ ಸುತ್ತಲೂ ಹದಿನೆಂಟು ಬಗೆಯ ಧಾನ್ಯಗಳನ್ನು ಹರಡಬೇಕು

೮-೧೦ ಬ್ರಹ್ಮಾಂಡದ ಪೂರ್ವದಲ್ಲಿ ಅನಂತಶಯನ, ಆಗ್ನೇಯದಲ್ಲಿ ಪ್ರದ್ಯುಮ್ನ, ದಕ್ಷಿಣದಲ್ಲಿ ಪ್ರಕೃತಿ, ಹೀಗೆಯೇ ನೈಋತ್ಯಾದಿ ದಿಕ್ಕುಗಳಲ್ಲಿ ಕ್ರಮವಾಗಿ ಸಂಕರ್ಷಣ, ನಾಲ್ಕು ವೇದಗಳು, ಅನಿರುದ್ಧ, ಅಗ್ನಿ ಮತ್ತು ವಾಸುದೇವರ ಸುವರ್ಣ ಪ್ರತಿಮೆಗಳನ್ನು ಬೆಲ್ಲದ ಪೀಠಗಳ ಮೇಲೆ ಇರಿಸಿ ಪೂಜಿಸಬೇಕು ಹತ್ತು ಪೂರ್ಣ ಕುಂಭಗಳನ್ನು ಸ್ಥಾಪಿಸಿ ವಸ್ತ್ರಗಳಿಂದ ಅಲಂಕರಿಸಬೇಕು

ಸಮಂತಾದ್ಗುಡಪೀಠಸ್ಥಾನರ್ಚಯೇತ್ಕಾಂಚನಾನ್ ಬುಧಃ ।
ಸ್ಥಾಪಯೇದ್ವಸ್ತ್ರಸಂವೀತಾನ್ ಪೂರ್ಣಕುಂಭಾನ್ ದಶೈವ ತು ॥೧೦॥

ದಶೈವ ಧೇನವೋ ದೇಯಾಃ ಸಹೇಮಾಂಬರದೋಹನಾಃ ।
ಪಾದುಕೋಪಾನಹಚ್ಛತ್ರಚಾಮರಾಸನದರ್ಪಣೈಃ ।
ಭಕ್ಷ್ಯಭೋಜ್ಯಾನ್ನದೀಪೇಕ್ಷುಫಲಮಾಲ್ಯಾನುಲೇಪನೈಃ ॥೧೧॥

ಹೋಮಾಧಿವಾಸನಾಂತೇ ಚ ಸ್ನಾಪಿತೋ ವೇದಪುಂಗವೈಃ ।
ಇಮಮುಚ್ಚಾರಯೇನ್ಮಂತ್ರಂ ತ್ರಿಃ ಕೃತ್ವಾಥ ಪ್ರದಕ್ಷಿಣಂ ॥೧೨॥

ನಮೋಽಸ್ತು ವಿಶ್ವೇಶ್ವರ ವಿಶ್ವಧಾಮ
ಜಗತ್ಸವಿತ್ರೇ ಭಗವನ್ನಮಸ್ತೇ ।
ಸಪ್ತರ್ಷಿಲೋಕಾಮರಭೂತಲೇಶ
ಗರ್ಭೇಣ ಸಾರ್ಧಂ ವಿತರಾಭಿರಕ್ಷಾಂ ॥೧೩॥

---

೧೧ ಜರತಾರಿಯ ಬಟ್ಟೆಯನ್ನು ಹೊದಿಸಿದ ಹತ್ತು ಹಸುಗಳನ್ನು ಹಾಲ್ಗರೆವ ಪಾತ್ರೆಗಳ ಸಹಿತವಾಗಿ ದಾನಮಾಡಬೇಕು ಪಾದುಕೆ, ಪಾದರಕ್ಷೆ, ಛತ್ರಿ, ಚಾಮರ, ಆಸನ, ಮತ್ತು ಕನ್ನಡಿಗಳನ್ನು ಕೊಟ್ಟು, ಗಂಧಪುಷ್ಪ ದೀಪಾದಿಗಳಿಂದ ಉಪಚರಿಸಿ, ವಿಧವಿಧವಾದ ಅನ್ನವನ್ನೂ, ಭಕ್ಷ್ಯಭೋಜ್ಯಗಳನ್ನೂ, ಕಬ್ಬು ಮತ್ತು ಹಣ್ಣುಗಳನ್ನೂ ನೀಡಿ ತೃಪ್ತಿಪಡಿಸಬೇಕು

೧೨ ಹೋಮವೂ ಅಧಿವಾಸನವೂ ಮುಗಿದ ಬಳಿಕ ವೇದಜ್ಞರಾದ ಬ್ರಾಹ್ಮಣೋತ್ತಮರು ಯಜಮಾನನಿಗೆ ಸ್ನಾನಮಾಡಿಸುವರು ಆತನು ಬ್ರಹ್ಮಾಂಡವನ್ನು ಮೂರುಸಾರಿ ಬಲವಂದು ಈ ಮಂತ್ರವನ್ನು ಹೇಳುವನು

೧೩ ಜಗತ್ತಿನ ಅಧಿಪತಿಯೂ, ಅಂತರ್ಯಾಮಿಯೂ, ಸೃಷ್ಟಿಕರ್ತನೂ ಆದ ಓ ದೇವಾ, ನಿನಗೆ ನಮಸ್ಕಾರ ಸಪ್ತರ್ಷಿಗಳಿಗೂ, ಸಪ್ತಲೋಕಗಳಿಗೂ, ದೇವತೆಗಳಿಗೂ, ಭೂಮಿಗೂ ಒಡೆಯನಾದ ಎಲೈ ಪರಮಾತ್ಮಾ, ಪುನಃ ಮಾತೃಗರ್ಭದ ದರ್ಶನವಾಗದಂತೆ ನನಗೆ ಎಲ್ಲ ವಿಧದಿಂದಲೂ ರಕ್ಷಣೆಯನ್ನು ನೀಡು

ಯೇ ದುಃಖಿತಾಸ್ತೇ ಸುಖಿನೋ ಭವಂತು
ಪ್ರಯಾಂತು ಪಾಪಾನಿ ಚರಾಚರಾಣಾಂ ।
ತ್ವದ್ದಾನಶಸ್ತ್ರಾಹತಪಾತಕಾನಾಂ
ಬ್ರಹ್ಮಾಂಡ ದೋಷಾಃ ಪ್ರಲಯಂ ವ್ರಜಂತು ॥೧೪॥

ಏವಂ ಪ್ರಣಮ್ಯಾಮರವಿಶ್ವಗರ್ಭಂ
ದದ್ಯಾದ್ದ್ವಿಜೇಭ್ಯೋ ದಶಧಾ ವಿಭಜ್ಯ ।
ಭಾಗದ್ವಯಂ ತತ್ರ ಗುರೋಃ ಪ್ರಕಲ್ಪ್ಯ
ಸಮಂ ಭಜೇಚ್ಛೇಷಮನುಕ್ರಮೇಣ ॥೧೫॥

ಸ್ವಲ್ಪೇ ಚ ಹೋಮಂ ಗುರುರೇಕ ಏವ
ಕುರ್ಯಾದಥೈಕಾಗ್ನಿವಿಧಾನಯುಕ್ತ್ಯಾ ।
ಸ ಏವ ಸಂಪೂಜ್ಯತಮೋಽಲ್ಪವಿತ್ತೇ
ಯಥೋಕ್ತವಸ್ತ್ರಾಭರಣಾದಿಕೇನ ॥೧೬॥

---

೧೪ ಎಲೈ ಬ್ರಹ್ಮಾಂಡವೇ, ದುಃಖವುಳ್ಳವರು ಸುಖಿಗಳಾಗಲಿ, ಸ್ಥಾವರ ಜಂಗಮಗಳ ಪಾಪಗಳು ತೊಲಗಲಿ ನಿನ್ನ ದಾನವೇ ಸಕಲ ಪಾತಕಗಳನ್ನು ಪರಿಹರಿಸಬಲ್ಲ ದೊಡ್ಡ ಶಸ್ತ್ರ ಆದುದರಿಂದ ನನ್ನ ದೋಷಗಳೆಲ್ಲ ನಾಶವಾಗಲಿ

೧೫ ಹೀಗೆ ಪ್ರಾರ್ಥಿಸಿ ನಮಸ್ಕಾರಮಾಡಿ ಸಕಲ ದೇವತೆಗಳನ್ನೂ ಜಗತ್ತನ್ನೂ ಒಳಗೊಂಡಿರುವ ಆ ಬ್ರಹ್ಮಾಂಡವನ್ನು ಹತ್ತುಪಾಲಾಗಿ ವಿಭಾಗಿಸಿ, ದಾನಮಾಡಬೇಕು ಎರಡುಭಾಗವನ್ನು ಆಚಾರ್ಯನಿಗೂ ಉಳಿದ ಎಂಟು ಭಾಗಗಳನ್ನು ಸಮವಾಗಿ ಎಂಟುಜನ ಋತ್ವಿಕ್ಕುಗಳಿಗೂ ಹಂಚಬೇಕು

೧೬ ದ್ರವ್ಯವು ಸ್ವಲ್ಪವಾಗಿದ್ದರೆ ನಾಲ್ಕು ಕುಂಡಗಳಲ್ಲಿ ಅಗ್ನಿಯನ್ನು ಸ್ಥಾಪಿಸದೆ ಏಕಾಗ್ನಿ ವಿಧಾನದಿಂದ ಆಚಾರ್ಯನೊಬ್ಬನೇ ಹೋಮವನ್ನು ಮಾಡಬೇಕು ಮೇಲೆ ಹೇಳಿದ ವಸ್ತ್ರಾಭರಣಾದಿಗಳೆಲ್ಲವನ್ನೂ ಅವನೊಬ್ಬನಿಗೆ ಕೊಟ್ಟು ತೃಪ್ತಿಪಡಿಸಬೇಕು

ಇತ್ಥಂ ಯ ಏತದಖಿಲಂ ಪುರುಷೋಽತ್ರ ಕುರ್ಯಾ
ದ್ಬ್ರಹ್ಮಾಂಡದಾನಮಧಿಗಮ್ಯ ಮಹದ್ವಿಮಾನಂ ।
ನಿರ್ಧೂತಕಲ್ಮಷವಿಶುದ್ಧತನುರ್ಮುರಾರೇ
ರಾನಂದಕೃತ್ಪದಮುಪೈತಿ ಸಹಾಪ್ಸರೋಭಿಃ ॥೧೭॥
ಸಂತಾರಯೇತ್ಪಿತೃಪಿತಾಮಹಪುತ್ರಪೌತ್ರ
ಬಂಧುಪ್ರಿಯಾತಿಥಿಕಲತ್ರಶತಾಷ್ಟಕಂ ಸಃ ।
ಬ್ರಹ್ಮಾಂಡದಾನಶಕಲೀಕೃತಪಾತಕೌಘ
ಮಾನಂದಯೇಚ್ಚ ಜನನೀಕುಲಮಪ್ಯಶೇಷಂ ॥೧೮॥
ಇತಿ ಪಠತಿ ಶೃಣೋತಿ ವಾ ಯ ಏತ
ತ್ಸುರಭವನೇಷು ಗೃಹೇಷು ಧಾರ್ಮಿಕಾಣಾಂ ।
ಮತಿಮಪಿ ಚ ದದಾತಿ ಮೋದತೇಽಸಾ
ವಮರಪತೇರ್ಭವನೇ ಸಹಾಪ್ಸರೋಭಿಃ ॥೧೯॥

ಇತಿ ಶ್ರೀಮತ್ಸ್ಯೇ ಮಹಾಪುರಾಣೇ ಮಹಾದಾನಾನುಕೀರ್ತನೇ
ಬ್ರಹ್ಮಾಂಡಪ್ರದಾನವಿಧಿರ್ನಾಮ ಷಟ್ಸಪ್ತತ್ಯಧಿಕದ್ವಿಶತತಮೋಽಧ್ಯಾಯಃ

---

೧೭ ಈ ವಿಧಾನವೆಲ್ಲವನ್ನೂ ಅನುಸರಿಸಿ ಬ್ರಹ್ಮಾಂಡದಾನವನ್ನು ಮಾಡುವ ಮನುಷ್ಯನ ಪಾಪಗಳೆಲ್ಲವೂ ಪರಿಹಾರವಾಗುವುವು ಅವನು ದಿವ್ಯದೇಹವನ್ನು ತಾಳಿ ಶ್ರೇಷ್ಠವಾದ ವಿಮಾನದಲ್ಲಿ ಅಪ್ಸರಸ್ತ್ರೀಯರೊಡನೆ ಕುಳಿತು ಆನಂದದಾಯಕವಾದ ಶ್ರೀಮಹಾವಿಷ್ಣುವಿನ ಸಾನ್ನಿಧ್ಯಕ್ಕೆ ತೆರಳುವನು

೧೮ ಆತನು ತಂದೆ, ತಾತ, ಮಗ, ಮೊಮ್ಮಗ, ಬಂಧು, ಮಿತ್ರ, ಅತಿಥಿ, ಪತ್ನಿ ಮುಂತಾದ ಎಂಟುನೂರು ಜನ ಬಂಧುಗಳನ್ನು ಸದ್ಗತಿಗೆ ಒಯ್ಯುವನು ಬ್ರಹ್ಮಾಂಡದಾನದಿಂದ ಅವನ ಪಾಪರಾಶಿಯೆಲ್ಲವೂ ನುಚ್ಚುನೂರಾಗುವುದು ತನ್ನ ತಾಯಿಯ ಕುಲದವರೆಲ್ಲರಿಗೂ ಅವನು ಆನಂದವನ್ನೀಯುವನು

೧೯ ಈ ಬ್ರಹ್ಮಾಂಡ ದಾನವಿಧಾನವನ್ನು ದೇವಸ್ಥಾನದಲ್ಲಾಗಲಿ, ಧಾರ್ಮಿಕರ ಮನೆಗಳಲ್ಲಾಗಲಿ ಯಾವನು ಪಾರಾಯಣಮಾಡುತ್ತಾನೋ ಅಥವಾ ಇದರ ವಿಷಯವಾಗಿ ಇತರರಿಗೆ ತಿಳುವಳಿಕೆಯನ್ನು ಕೊಡುತ್ತಾನೋ ಅವನು ದೇವೇಂದ್ರನ ಮಂದಿರದಲ್ಲಿ ಅಪ್ಸರಸ್ತ್ರೀಯರೊಡನೆ ಆನಂದಪಡುವನು

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಬ್ರಹ್ಮಾಂಡದಾನದ ವಿಧಿಯನ್ನು ವಿವರಿಸಿದೆ

ಹಿಂದೆ ಹೇಳಿದಂತೆ ಹೋಮವನ್ನೂ ಲೋಕಪಾಲಕರ ಪೂಜೆಯನ್ನೂ ಮಾಡಿದ ಬಳಿಕ ಯಜಮಾನನು ಮಂತ್ರೋದಕದಿಂದ ಸ್ನಾನಮಾಡುವನು ಚಿನ್ನದಿಂದ ಮಾಡಿದ, ಸಕಲ ದೇವತೆಗಳನ್ನು ಒಳಗೊಂಡ ಬ್ರಹ್ಮಾಂಡವನ್ನು ಪೂಜಿಸಿ, ಪ್ರಾರ್ಥಿಸಿ ಋತ್ವಿಕ್ಪುರೋಹಿತರುಗಳಿಗೆ ಧಾರಾಪೂರ್ವಕವಾಗಿ ದಾನಮಾಡುವನು ಈ ದಾನದಿಂದ ಅವನ ಎರಡು ಕುಲದವರೂ ಸದ್ಗತಿಯನ್ನು ಪಡೆಯುವರು ಅವನು ಸ್ವರ್ಗದಲ್ಲಿ ವಾಸಿಸುತ್ತ ಆನಂದಸಾಗರದಲ್ಲಿ ಮುಳುಗಿ ತೇಲಾಡುವನು

ಶ್ರೀಮತ್ಸ್ಯಮಹಾಪುರಾಣದಲ್ಲಿ ಮಹಾದಾನಾನುಕೀರ್ತನದಲ್ಲಿ
ಬ್ರಹ್ಮಾಂಡಪ್ರಧಾನವಿಧಿಯೆಂಬ ಇನ್ನೂರೆಪ್ಪತ್ತಾರನೆಯ ಅಧ್ಯಾಯವು ಮುಗಿದುದು

## ಅಥ ಸಪ್ತಸಪ್ತತ್ಯಧಿಕದ್ವಿಶತತಮೋಽಧ್ಯಾಯಃ

|| ಮತ್ಸ್ಯ ಉವಾಚ ||

ಕಲ್ಪಪಾದಪದಾನಾಖ್ಯಮತಃ ಪರಮನುತ್ತಮಂ ।
ಮಹಾದಾನಂ ಪ್ರವಕ್ಷ್ಯಾಮಿ ಸರ್ವಪಾತಕನಾಶನಂ || ೧ ||

ಪುಣ್ಯಂ ದಿನಮಥಾಸಾದ್ಯ ತುಲಾಪುರುಷದಾನವತ್ ।
ಪುಣ್ಯಾಹವಾಚನಂ ಕೃತ್ವಾ ಲೋಕೇಶಾವಾಹನಂ ತಥಾ || ೨ ||

ಋತ್ವಿಙ್ಮಂಡಪಸಂಭಾರಭೂಷಣಾಚ್ಛಾದನಾದಿಕಂ ।
ಕಾಂಚನಂ ಕಾರಯೇದ್ವೃಕ್ಷಂ ನಾನಾಫಲಸಮನ್ವಿತಂ || ೩ ||

ನಾನಾವಿಹಗವಸ್ತ್ರಾಣಿ ಭೂಷಣಾನಿ ಚ ಕಾರಯೇತ್ ।
ಶಕ್ತಿತಸ್ತ್ರಿಪಲಾದೂರ್ಧ್ವಮಾಸಹಸ್ರಂ ಪ್ರಕಲ್ಪಯೇತ್ || ೪ ||

---

೧ ಮತ್ಸ್ಯರೂಪನಾದ ಭಗವಂತನು ಹೇಳಿದನು —ಅತ್ಯಂತ ಪವಿತ್ರವೂ ಸಕಲಪಾಪನಾಶಕವೂ ಆದ ಕಲ್ಪವೃಕ್ಷದಾನವೆಂಬ ಮಹಾದಾನವನ್ನು ಹೇಳುವೆನು

೨ ಪುಣ್ಯದಿವಸವನ್ನು ನೋಡಿ ತುಲಾಪುರುಷದಾನದಲ್ಲಿ ಹೇಳಿದಂತೆಯೇ ಪುಣ್ಯಾಹವಾಚನವನ್ನೂ, ದಿಕ್ಪಾಲಕರ ಆವಾಹನವನ್ನೂ ಮಾಡಬೇಕು ಋತ್ವಿಕ್ಕುಗಳನ್ನು ವರಿಸಿ, ಮಂಟಪವನ್ನೂ ಕುಂಡಗಳನ್ನೂ ನಿರ್ಮಿಸಿ, ವಸ್ತ್ರಭೂಷಣಾದಿ ಸಕಲವಿಧಸಾಮಗ್ರಿಗಳನ್ನೂ ಅನುಗೊಳಿಸಬೇಕು

೩-೪ ತನ್ನ ಶಕ್ತಿಗೆ ತಕ್ಕಂತೆ ಮೂರು ಪಲಗಳಿಗೆ ಮೇಲೆ ಒಂದುಸಾವಿರ ಪಲಗಳವರೆಗೆ ತೂಕವುಳ್ಳ ಚಿನ್ನದ ಮರವನ್ನು ಮಾಡಿಸಬೇಕು ಅದರಲ್ಲಿ ಬಗೆ ಬಗೆಯ ಹಣ್ಣುಕಾಯಿಗಳನ್ನೂ ಪಕ್ಷಿಗಳನ್ನೂ ನಿರ್ಮಿಸಿ, ವಸ್ತ್ರಗಳಿಂದಲೂ ಭೂಷಣಗಳಿಂದಲೂ ಅದನ್ನು ಅಲಂಕರಿಸಬೇಕು

ಅರ್ಧಕ್ಲೃಪ್ತಸುವರ್ಣಸ್ಯ ಕಾರಯೇತ್ಕಲ್ಪಪಾದಪಂ ।
ಗುಡಪ್ರಸ್ಥೋಪರಿಷ್ಟಾಚ್ಚ ಸಿತವಸ್ತ್ರಯುಗಾನ್ವಿತಂ ॥ ೫ ॥

ಬ್ರಹ್ಮವಿಷ್ಣುಶಿವೋಪೇತಂ ಪಂಚಶಾಖಂ ಸಭಾಸ್ಕರಂ ।
ಕಾಮದೇವಮಧಸ್ತಾಚ್ಚ ಸಕಲತ್ರಂ ಪ್ರಕಲ್ಪಯೇತ್ ॥ ೬ ॥

ಸಂತಾನಂ ಪೂರ್ವತಸ್ತದ್ವತ್ತುರೀಯಾಂಶೇನ ಕಲ್ಪಯೇತ್ ।
ಮಂದಾರಂ ದಕ್ಷಿಣೇ ಭಾಗೇ ಶ್ರಿಯಾ ಸಾರ್ಧಂ ಘೃತೋಪರಿ ॥ ೭ ॥

ಪಶ್ಚಿಮೇ ಪಾರಿಜಾತಂ ತು ಸಾವಿತ್ರ್ಯಾ ಸಹ ಜೀರಕೇ ।
ಸುರಭೀಸಂಯುತಂ ತದ್ವತ್ತಿಲೇಷು ಹರಿಚಂದನಂ ॥ ೮ ॥

ತುರೀಯಾಂಶೇನ ಕುರ್ವೀತ ಸೌಮ್ಯೇನ ಫಲಸಂಯುತಂ ।
ಕೌಶೇಯವಸ್ತ್ರಸಂವೀತಾನಿಕ್ಷುಮಾಲ್ಯಫಲಾನ್ವಿತಾನ್ ॥ ೯ ॥

---

೫-೬ ಗೊತ್ತಾದ ಚಿನ್ನದಲ್ಲಿ ಅರ್ಧಭಾಗದಿಂದ ಕಲ್ಪವೃಕ್ಷವನ್ನು ನಿರ್ಮಿಸಬೇಕು ಅದಕ್ಕೆ ಐದು ಕೊಂಬೆಗಳು ಇರಬೇಕು ಬ್ರಹ್ಮ, ವಿಷ್ಣು, ಶಿವ, ಸೂರ್ಯ, ರತಿದೇವಿಯೊಡಗೂಡಿದ ಮನ್ಮಥ ಇವರ ಪ್ರತಿಮೆಗಳನ್ನು ಮಾಡಿ ಕಲ್ಪವೃಕ್ಷದ ಕೆಳಗಡೆ ಇರಿಸಬೇಕು ಒಂದು ಬಳ್ಳ ಬೆಲ್ಲದ ಹುಡಿಯನ್ನು ಹರಡಿ ಅದರ ಮೇಲೆ ಇವೆಲ್ಲವನ್ನೂ ಇಡಬೇಕು ಕಲ್ಪವೃಕ್ಷಕ್ಕೆ ಒಂದು ಜೊತೆ ಬಿಳಿಯ ಪಂಚೆಯನ್ನೂ ಧರಿಸಬೇಕು

೭ ಉಳಿದ ಚಿನ್ನದಲ್ಲಿ ಕಾಲುಪಾಲಿನಿಂದ ಸಂತಾನವೃಕ್ಷವನ್ನು ವಿರಚಿಸಿ ಪೂರ್ವದಿಕ್ಕಿನಲ್ಲಿ ಬೆಲ್ಲದ ಮೇಲೆ ಇಡಬೇಕು ಅದರಂತೆಯೇ ದಕ್ಷಿಣಭಾಗದಲ್ಲಿ ಮಂದಾರವೃಕ್ಷವನ್ನು ಲಕ್ಷ್ಮೀಸಹಿತವಾಗಿ ತುಪ್ಪದ ಪಾತ್ರೆಯಲ್ಲಿ ಇರಿಸಬೇಕು

೮ ಪಶ್ಚಿಮದಲ್ಲಿ ಪಾರಿಜಾತವೃಕ್ಷವನ್ನು ಸಾವಿತ್ರೀಸಹಿತವಾಗಿ ಜೀರಿಗೆಯ ಮೇಲೂ, ಉತ್ತರದಲ್ಲಿ ಕಾಮಧೇನುಸಮೇತವಾಗಿ ಫಲಭರಿತವಾದ ಹರಿಚಂದನ ವೃಕ್ಷವನ್ನು ಎಳ್ಳಿನ ಮೇಲೂ ಸ್ಥಾಪಿಸಬೇಕು ಇದೂ ಸಹ ಮೇಲಿನವುಗಳಂತೆ ಕಾಲುಪಾಲು ಚಿನ್ನದಿಂದ ನಿರ್ಮಿತವಾಗಬೇಕು

೯-೧೧ ಕಬ್ಬು, ಹೂ, ಮತ್ತು ಹಣ್ಣುಗಳೊಡನೆ ಕೂಡಿದ ಎಂಟು ಪೂರ್ಣ ಕುಂಭಗಳನ್ನು ಸ್ಥಾಪಿಸಿ ರೇಷ್ಮೆಯ ವಸ್ತ್ರವನ್ನು ಒಂದೊಂದಕ್ಕೂ ಸುತ್ತಬೇಕು.

ತಥಾಷ್ಟೌ ಪೂರ್ಣಕಲಶಾ ಪಾದುಕಾಸನಭಾಜನಂ ।
ದೀಪಕೋಪಾನಹಚ್ಛತ್ರಚಾಮರಾಸನಸಂಯುತಂ ॥೧೦॥

ಫಲಮಾಲ್ಯಯುತಂ ತದ್ವದುಪರಿಷ್ಟಾದ್ವಿತಾನಕಂ ।
ತಥಾಷ್ಟಾದಶ ಧಾನ್ಯಾನಿ ಸಮಂತಾತ್ಪರಿಕಲ್ಪಯೇತ್ ॥೧೧॥

ಹೋಮಾಧಿವಾಸನಾಂತೇ ಚ ಸ್ನಾಪಿತೋ ವೇದಪುಂಗವೈಃ ।
ತ್ರಿಃ ಪ್ರದಕ್ಷಿಣಮಾವೃತ್ಯ ಮಂತ್ರಮೇತದುದೀರಯೇತ್ ॥೧೨॥

ನಮಸ್ತೇ ಕಲ್ಪವೃಕ್ಷಾಯ ಚಿಂತಿತಾರ್ಥಪ್ರದಾಯಿನೇ ।
ವಿಶ್ವಂಭರಾಯ ದೇವಾಯ ನಮಸ್ತೇ ವಿಶ್ವಮೂರ್ತಯೇ ॥೧೩॥

ಯಸ್ಮಾತ್ತ್ವಮೇವ ವಿಶ್ವಾತ್ಮಾ ಬ್ರಹ್ಮಾ ಸ್ಥಾಣುರ್ದಿವಾಕರಃ ।
ಮೂರ್ತೋಽಮೂರ್ತಃ ಪರಂ ಬೀಜಮತಃ ಪಾಹಿ ಸನಾತನ ॥೧೪॥

---

ಪಾದುಕೆ, ಆಸನ, ಪಾತ್ರೆ, ದೀಪ, ಪಾದರಕ್ಷೆ, ಛತ್ರಿ, ಚಾಮರ, ಆಸನ, ಫಲ, ಮತ್ತು ಪುಷ್ಪಗಳಿಂದ ಅವುಗಳಿಗೆ ಉಪಚಾರವನ್ನು ಸಮರ್ಪಿಸಬೇಕು ಹದಿನೆಂಟು ಬಗೆಯ ಧಾನ್ಯಗಳನ್ನು ಸುತ್ತಲೂ ಇಡಬೇಕು

೧೨ ಹೋಮವೂ ಅಧಿವಾಸನವೂ ಆದ ತರುವಾಯ, ವೇದಪಾರಂಗತರಾದ ಬ್ರಾಹ್ಮಣೋತ್ತಮರು ಮಂತ್ರೋದಕಗಳಿಂದ ಸ್ನಾನಮಾಡಿಸಿದ ಮೇಲೆ, ಯಜಮಾನನು ಕಲ್ಪವೃಕ್ಷವನ್ನು ಮೂರುಸಾರಿ ಪ್ರದಕ್ಷಿಣೆಮಾಡಿ ಈ ಮಂತ್ರವನ್ನು ಹೇಳಬೇಕು

೧೩ ಕೋರಿದ ಇಷ್ಟವನ್ನು ಕೊಡುವವನೂ, ಸರ್ವಾಧಾರನೂ, ಸರ್ವಾಕಾರನೂ, ದೇವಸ್ವರೂಪನೂ ಆದ ಓ ಕಲ್ಪವೃಕ್ಷವೇ, ನಿನಗೆ ನಮಸ್ಕಾರ

೧೪ ಸರ್ವಾಂತರ್ಯಾಮಿಯಾದ ವಿಷ್ಣು, ಬ್ರಹ್ಮ, ಈಶ್ವರ, ಸೂರ್ಯ ಎಲ್ಲ ನೀನೇ ಆಗಿರುವೆ ಸಾಕಾರನೂ ನಿರಾಕಾರನೂ ನೀನೇ ಲೋಕಕ್ಕೆ ಬೀಜಸ್ವರೂಪನಾದವನೂ ನೀನೇ ಆದುದರಿಂದ ಶಾಶ್ವತವೆನಿಸಿದ ಓ ಕಲ್ಪವೃಕ್ಷವೇ, ನಮ್ಮನ್ನು ಸಲಹು

ತ್ವಮೇವಾಮೃತಸರ್ವಸ್ವಮನಂತಃ ಪುರುಷೋಽವ್ಯಯಃ ।
ಸಂತಾನಾದ್ಯೈರುಪೇತಃ ಸನ್ಪಾಹಿ ಸಂಸಾರಸಾಗರಾತ್ ||೧೫||

ಏವಮಾಮಂತ್ರ್ಯ ತಂ ದದ್ಯಾದ್ಗುರವೇ ಕಲ್ಪಪಾದಪಂ ।
ಚತುರ್ಭ್ಯಶ್ಚಾಥ ಋತ್ವಿಗ್ಭ್ಯಃ ಸಂತಾನಾದೀನ್ ಪ್ರಕಲ್ಪಯೇತ್ ||೧೬||

ಸ್ವಲ್ಪೇ ತ್ವೇಕಾಗ್ನಿವತ್ಕುರ್ಯಾದ್ಗುರವೇ ಚಾಭಿಪೂಜನಂ ।
ನ ವಿತ್ತಶಾಠ್ಯಂ ಕುರ್ವೀತ ನ ಚ ವಿಸ್ಮಯವಾನ್ ಭವೇತ್ ||೧೭||

ಅನೇನ ವಿಧಿನಾ ಯಸ್ತು ಪ್ರದದ್ಯಾತ್ಕಲ್ಪಪಾದಪಂ ।
ಸರ್ವಪಾಪವಿನಿರ್ಮುಕ್ತಃ ಸೋಽಶ್ವಮೇಧಫಲಂ ಲಭೇತ್ ||೧೮||

ಅಪ್ಸರೋಭಿಃ ಪರಿವೃತಃ ಸಿದ್ಧಚಾರಣಕಿನ್ನರೈಃ ।
ಭೂತಾನ್ ಭವ್ಯಾಂಶ್ಚ ಮನುಜಾಂಸ್ತಾರಯೇದ್ಗೋತ್ರಸಂಯುತಾನ್ ||೧೯||

---

೧೫ ಸಂತಾನಾದಿ ದಿವ್ಯವೃಕ್ಷಪರಿವೃತನಾದ ನೀನೇ ಅಮೃತದ ಸಕಲಸಾರವಾಗಿರುವೆ ನಿನಗೆ ಅಂತವಿಲ್ಲ, ವಿಕಾರವಿಲ್ಲ ಆದಕಾರಣ ಈ ಸಂಸಾರ ಸಾಗರದಿಂದ ನಮ್ಮನ್ನು ಪಾರುಮಾಡು

೧೬ ಹೀಗೆ ಪ್ರಾರ್ಥಿಸಿ ಆ ಕಲ್ಪವೃಕ್ಷವನ್ನು ಆಚಾರ್ಯನಿಗೂ, ಸಂತಾನ ಮೊದಲಾದ ನಾಲ್ಕು ವೃಕ್ಷಗಳನ್ನು ನಾಲ್ಕು ಜನ ಋತ್ವಿಕ್ಕುಗಳಿಗೂ ಕೊಡಬೇಕು

೧೭ ದ್ರವ್ಯವು ಸ್ವಲ್ಪವಾಗಿದ್ದರೆ ಏಕಾಗ್ನಿವಿಧಾನದಿಂದ ಹೋಮವನ್ನು ನಡೆಸಿ ಎಲ್ಲವನ್ನೂ ಆಚಾರ್ಯನಿಗೆ ಕೊಟ್ಟು ಪೂಜಿಸಬೇಕು ಹಣವು ವೆಚ್ಚವಾಗುವುದೆಂದು ಜಿಪುಣತನವನ್ನಾಗಲಿ, ಓಹೋ! ಎಷ್ಟು ಕೊಟ್ಟುಬಿಟ್ಟೆನು! ಎಂದು ಗರ್ವವನ್ನಾಗಲಿ ತೋರ್ಪಡಿಸಬಾರದು

೧೮ ಮೇಲೆ ಹೇಳಿದ ವಿಧಾನದಿಂದ ಕಲ್ಪವೃಕ್ಷವನ್ನು ದಾನಮಾಡುವಾತನು ಸಕಲ ವಿಧವಾದ ಪಾಪಗಳಿಂದಲೂ ಬಿಡುಗಡೆ ಹೊಂದುವನು ಅವನಿಗೆ ಅಶ್ವಮೇಧ ಯಾಗದ ಫಲವು ಬರುವುದು

೧೯ ಅಪ್ಸರಸ್ತ್ರೀಯರೂ, ಸಿದ್ಧರೂ, ಚಾರಣರೂ, ಕಿನ್ನರರೂ ಆತನನ್ನು ಸುತ್ತಿಗಟ್ಟಿಕೊಂಡು ಸ್ತುತಿಸುವರು ಅವನ ವಂಶದಲ್ಲಿ ಹಿಂದೆ ಹುಟ್ಟಿದವರೂ ಮುಂದೆ ಹುಟ್ಟುವವರೂ ಸದ್ಗತಿಯನ್ನು ಪಡೆಯುವರು

ಸ್ತೂಯಮಾನೋ ದಿವಃ ಪೃಷ್ಠೇ ಪುತ್ರಪೌತ್ರಪ್ರಪೌತ್ರಕೈಃ ।
ವಿಮಾನೇನಾರ್ಕವರ್ಣೇನ ವಿಷ್ಣುಲೋಕಂ ಸ ಗಚ್ಛತಿ ॥೨೦॥

ದಿವಿ ಕಲ್ಪಶತಂ ತಿಷ್ಠೇದ್ರಾಜರಾಜೋ ಭವೇತ್ತತಃ ।
ನಾರಾಯಣಬಲೋಪೇತೋ ನಾರಾಯಣಪರಾಯಣಃ ।
ನಾರಾಯಣಕಥಾಸಕ್ತೋ ನಾರಾಯಣಪುರಂ ವ್ರಜೇತ್ ॥೨೧॥

ಯೋ ವಾ ಪಠೇತ್ಸಕಲಕಲ್ಪತರುಪ್ರದಾನಂ
ಯೋ ವಾ ಶೃಣೋತಿ ಪುರುಷೋಽಲ್ಪಧನಃ ಸ್ಮರೇದ್ವಾ ।
ಸೋಽಪೀಂದ್ರಲೋಕಮಧಿಗಮ್ಯ ಸಹಾಪ್ಸರೋಭಿ
ರ್ಮನ್ವಂತರಂ ವಸತಿ ಪಾಪವಿಮುಕ್ತದೇಹಃ ॥೨೨॥

ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ಮಹಾದಾನಾನುಕೀರ್ತನೇ
ಕಲ್ಪಪಾದಪಪ್ರದಾನವಿಧಿರ್ನಾಮ ಸಪ್ತಸಪ್ತತ್ಯಧಿಕದ್ವಿಶತತಮೋಽಧ್ಯಾಯಃ

---

೨೦ ಮಕ್ಕಳಿಂದಲೂ ಮೊಮ್ಮಕ್ಕಳಿಂದಲೂ ಮರಿಮಕ್ಕಳಿಂದಲೂ ಹೊಗಳಿಸಿಕೊಳ್ಳುತ್ತ ಆತನು ಸೂರ್ಯನಂತೆ ತೇಜೋಭರಿತವಾದ ವಿಮಾನದಲ್ಲಿ ಕುಳಿತು ವಿಷ್ಣುಲೋಕವನ್ನೈದುವನು

೨೧ ಸ್ವರ್ಗದಲ್ಲಿ ನೂರು ಕಲ್ಪಗಳಕಾಲ ವಾಸಿಸುವನು ಬಳಿಕ ಚಕ್ರವರ್ತಿಯಾಗಿ ಭೂಮಿಯಲ್ಲಿ ಜನಿಸುವನು ನಾರಾಯಣನ ಅನುಗ್ರಹದಿಂದ ಅಸದೃಶ ಬಲಶಾಲಿಯಾಗುವನು ಯಾವಾಗಲೂ ನಾರಾಯಣನನ್ನೇ ಧ್ಯಾಸಿಸುತ್ತ, ಅವನ ಕಥೆಯನ್ನು ಕೇಳುವುದರಲ್ಲೇ ಆಸಕ್ತನಾಗಿರುತ್ತ ಕೊನೆಗೆ ವೈಕುಂಠವನ್ನು ಸೇರುವನು

೨೨ ಸಂತಾನ ಮೊದಲಾದ ನಾಲ್ಕುಬಗೆಯ ಸುವರ್ಣವೃಕ್ಷಗಳ ಸಹಿತವಾಗಿ ಕಲ್ಪವೃಕ್ಷವನ್ನು ದಾನಮಾಡುವ ಈ ವಿಧಾನವನ್ನು ಯಾವನು ಓದುತ್ತಾನೋ, ಯಾವನು ಕೇಳುತ್ತಾನೋ, ಅಥವಾ ಕೊನೆಗೆ ದರಿದ್ರನಾದ ಯಾವನು ಇದನ್ನು ಸುಮ್ಮನೆ ಸ್ಮರಿಸಿಕೊಳ್ಳುತ್ತಾನೋ ಅವನು ಸಕಲಪಾಪವಿಮುಕ್ತನಾಗಿ, ಇಂದ್ರಲೋಕವನ್ನೈದಿ ಅಪ್ಸರಸ್ತ್ರೀಯರೊಡನೆ ಒಂದು ಮನ್ವಂತರಕಾಲ ಸುಖವಾಗಿ ವಾಸಿಸುವನು

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಕಲ್ಪವೃಕ್ಷವನ್ನು ದಾನಮಾಡುವ ವಿಧಿಯು ಹೇಳಲ್ಪಟ್ಟಿದೆ ಮಧ್ಯದಲ್ಲಿ ಕಲ್ಪವೃಕ್ಷವನ್ನೂ, ಅದರ ಸುತ್ತ ನಾಲ್ಕು ದಿಕ್ಕುಗಳಲ್ಲಿ ಸಂತಾನ, ಪಾರಿಜಾತ ಮುಂತಾದ ನಾಲ್ಕು ದಿವ್ಯವೃಕ್ಷಗಳನ್ನೂ ಸ್ಥಾಪಿಸಬೇಕು ಇವೆಲ್ಲವೂ ಸುವರ್ಣಮಯವಾಗಿರಬೇಕು. ಹಿಂದಿನಂತೆ ಹೋಮವಾದ ಬಳಿಕ ಯಜಮಾನನು ಮಂತ್ರೋದಕದಿಂದ ಸ್ನಾನಮಾಡಿ ಕಲ್ಪವೃಕ್ಷವನ್ನು ಬಲವಂದು ಪ್ರಾರ್ಥಿಸಿ ಋತ್ವಿಕ್ಪುರೋಹಿತರುಗಳಿಗೆ ಅದನ್ನು ದಾನಮಾಡುವನು ಹಿಂದಿನ ದಾನಗಳಂತೆಯೇ ಇದೂ ಕೂಡ ಅಪರಿಮಿತವಾದ ಪುಣ್ಯಫಲವನ್ನು ಕೊಡುವುದು

ಶ್ರೀಮತ್ಸ್ಯಮಹಾಪುರಾಣದಲ್ಲಿ ಮಹಾದಾನಾನುಕೀರ್ತನದಲ್ಲಿ ಕಲ್ಪವೃಕ್ಷದಾನವೆಂಬ ಇನ್ನೂರ ಎಪ್ಪತ್ತೇಳನೆಯ ಅಧ್ಯಾಯವು ಮುಗಿದುದು

## ಅಥಾಷ್ಟಸಪ್ತತ್ಯಧಿಕದ್ವಿಶತತಮೋಽಧ್ಯಾಯಃ

|| ಮತ್ಸ್ಯ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಮಹಾದಾನಮನುತ್ತಮಂ ।
ಗೋಸಹಸ್ರಪ್ರದಾನಾಖ್ಯಂ ಸರ್ವಪಾಪಹರಂ ಪರಂ || ೧ ||

ಪುಣ್ಯಾಂ ತಿಥಿಂ ಸಮಾಸಾದ್ಯ ಯುಗಮನ್ವಂತರಾದಿಕಂ ।
ಪಯೋವ್ರತಂ ತ್ರಿರಾತ್ರಂ ಸ್ಯಾದೇಕರಾತ್ರಮಥಾಽಪಿ ವಾ || ೨ ||

ಲೋಕೇಶಾವಾಹನಂ ಕುರ್ಯಾತ್ತುಲಾಪುರುಷದಾನವತ್ ।
ಪುಣ್ಯಾಹವಾಚನಂ ಕುರ್ಯಾದ್ಧೋಮಃ ಕಾರ್ಯಸ್ತಥೈವ ಚ || ೩ ||

ಋತ್ವಿಙ್ಮಂಡಪಸಂಭಾರಭೂಷಣಾಚ್ಛಾದನಾದಿಕಂ ।
ವೃಷಂ ಲಕ್ಷಣಸಂಯುಕ್ತಂ ವೇದಿಮಧ್ಯೇಽಧಿವಾಸಯೇತ್ || ೪ ||

---

೧ ಮತ್ಸ್ಯರೂಪನಾದ ಭಗವಂತನು ಹೇಳಿದನು —ಇನ್ನುಮುಂದೆ ಗೋಸಹಸ್ರದಾನವೆಂಬ ಅತಿಶ್ರೇಷ್ಠವಾದ ಮಹಾದಾನವಿಧಾನವನ್ನು ಹೇಳುವೆನು ಇದು ಎಲ್ಲ ಪಾಪಗಳನ್ನೂ ಪರಿಹರಿಸುವುದು

೨-೩ ಯುಗಾದಿ, ಮನ್ವಂತರಾದಿ ಮುಂತಾದ ಪುಣ್ಯದಿನಗಳನ್ನು ಆರಿಸಿ, ಅದಕ್ಕೆ ಪೂರ್ವಭಾವಿಯಾಗಿ ಮೂರುದಿನ ಅಥವಾ ಒಂದುದಿನ ಜಲಪಾನವ್ರತವನ್ನು ಮಾಡಿ ಉಪವಾಸವಿರಬೇಕು ತುಲಾಪುರುಷದಾನದಂತೆ ದಿಕ್ಪಾಲಕರ ಆವಾಹನ, ಪುಣ್ಯಾಹವಾಚನ, ಹೋಮ ಇವುಗಳನ್ನು ಮಾಡಬೇಕು

೪ ಋತ್ವಿಕ್ಕುಗಳನ್ನು ವರಿಸಿ, ಮಂಟಪವನ್ನು ನಿರ್ಮಿಸಿ ಹೋಮ ಸಾಮಗ್ರಿಗಳನ್ನೂ ವಸ್ತ್ರಭೂಷಣಾದಿಗಳನ್ನೂ ಸಿದ್ಧಪಡಿಸಬೇಕು ಸಲಕ್ಷಣವಾದ ಸುವರ್ಣವೃಷಭವನ್ನು ವೇದಿಕೆಯಲ್ಲಿ ಆಸನದ ಮೇಲೆ ಇರಿಸಿ ಗಂಧಪುಷ್ಪಾದಿಗಳಿಂದ ಅರ್ಚಿಸಬೇಕು

**ಗೋಸಹಸ್ರಾದ್ವಿನಿಷ್ಕೃಷ್ಯ ಗವಾಂ ದಶಕಮೇವ ಚ ।**
**ಗೋಸಹಸ್ರಂ ಬಹಿಃ ಕುರ್ಯಾದ್ವಸ್ತ್ರಮಾಲ್ಯವಿಭೂಷಿತಂ ।**
**ಸುವರ್ಣಶೃಂಗಾಭರಣಂ ರೌಪ್ಯಪಾದಸಮನ್ವಿತಂ** ॥ ೫ ॥

**ಅಂತಃ ಪ್ರವೇಶ್ಯ ದಶಕಂ ವಸ್ತ್ರಮಾಲ್ಯೈಶ್ಚ ಪೂಜಯೇತ್ ।**
**ಸುವರ್ಣಘಂಟಿಕಾಯುಕ್ತಂ ಕಾಂಸ್ಯದೋಹನಕಾನ್ವಿತಂ** ॥ ೬ ॥

**ಸುವರ್ಣತಿಲಕೋಪೇತಂ ಹೇಮಪಟ್ಟೈರಲಂಕೃತಂ ।**
**ಕೌಶೇಯವಸ್ತ್ರಸಂವೀತಂ ಮಾಲ್ಯಗಂಧಸಮನ್ವಿತಂ** ॥ ೭ ॥

**ಹೇಮರತ್ನಮಯೈಃ ಶೃಂಗೈಶ್ಚಾಮರೈರುಪಶೋಭಿತಂ ।**
**ಪಾದುಕೋಪಾನಹಚ್ಛತ್ರಭಾಜನಾಸನಸಂಯುತಂ** ॥ ೮ ॥

**ಗವಾಂ ದಶಕಮಧ್ಯೇ ಸ್ಯಾತ್ಕಾಂಚನೋ ನಂದಿಕೇಶ್ವರಃ ।**
**ಕೌಶೇಯವಸ್ತ್ರಸಂವಿತೋ ನಾನಾಭರಣಭೂಷಿತಃ** ॥ ೯ ॥

---

೫ ಸಾವಿರ ಹಸುಗಳಲ್ಲಿ ಹತ್ತನ್ನು ಆರಿಸಿ, ಬೇರೆ ನಿಲ್ಲಿಸಿ ಉಳಿದುವನ್ನು ಹೊರಗಡೆ ನಿಲ್ಲಿಸಬೇಕು ಎಲ್ಲವನ್ನೂ ಪುಷ್ಪಹಾರಗಳಿಂದಲೂ ವಸ್ತ್ರಗಳಿಂದಲೂ ಅಲಂಕರಿಸಬೇಕು ಕೊಂಬಿಗೆ ಚಿನ್ನದ ಆಭರಣವನ್ನೂ ಕಾಲುಗಳಿಗೆ ಬೆಳ್ಳಿಯ ಕಡಗಗಳನ್ನೂ ಹಾಕಬೇಕು

೬-೮ ಆ ಹತ್ತು ಹಸುಗಳನ್ನು ಮಂಟಪದೊಳಕ್ಕೆ ಅಟ್ಟಿತಂದು ವಸ್ತ್ರಗಳನ್ನು ಧರಿಸಿ ಹೂಗಳಿಂದ ಅರ್ಚಿಸಬೇಕು ಚಿನ್ನದ ಗಂಟೆಗಳನ್ನು ಕಟ್ಟಿ, ಸುವರ್ಣತಿಲಕವನ್ನಿಟ್ಟು ಭಂಗಾರದ ಪಟ್ಟೆಗಳಿಂದ ಅಲಂಕರಿಸಬೇಕು ರೇಷ್ಮೆಯ ವಸ್ತ್ರವನ್ನು ಹೊದೆಸಿ ಗಂಧಪುಷ್ಪಾದಿಗಳನ್ನು ಧರಿಸಬೇಕು ಕೊಂಬುಗಳಿಗೆ ಚಿನ್ನದ ಮತ್ತು ರತ್ನದ ಒಡವೆಗಳನ್ನೂ ಚಾಮರಗಳನ್ನೂ ಕಟ್ಟಬೇಕು ಪಾದುಕೆ, ಪಾದರಕ್ಷೆ, ಛತ್ರಿ, ಪಾತ್ರೆ, ಆಸನ ಮುಂತಾದುವನ್ನು ಒಪ್ಪಿಸಬೇಕು ಒಂದೊಂದಕ್ಕೂ ಹಾಲ್ಕರೆವ ಪಾತ್ರೆಯನ್ನಿರಿಸಬೇಕು

೯-೧೧ ಹತ್ತು ಹಸುಗಳ ನಡುವೆ ಸುವರ್ಣಮಯವಾದ ನಂದಿಕೇಶ್ವರನ ಪ್ರತಿಮೆಯಿರುವುದು ಅದಕ್ಕೆ ರೇಷ್ಮೆಯ ವಸ್ತ್ರವನ್ನು ಉಡಿಸಿ ಬಗೆಬಗೆಯ ಆಭರಣ

ಲವಣದ್ರೋಣಶಿಖರೇ ಮಾಲ್ಯೇಕ್ಷುಫಲಸಂಯುತಃ ।
ಕುರ್ಯಾತ್ಪಲರತಾದೂರ್ಧ್ವಂ ಸರ್ವಮೇತದಶೇಷತಃ ॥೧೦॥

ಶಕ್ತಿತಃ ಪಲಸಾಹಸ್ರತ್ರಿತಯಂ ಯಾವದೇವ ತು ।
ಗೋಶತೇಽಪಿ ದಶಾಂಶೇನ ಸರ್ವಮೇತತ್ಸಮಾಚರೇತ್ ॥೧೧॥

ಪುಣ್ಯಕಾಲಂ ಸಮಾಸಾದ್ಯ ಗೀತಮಂಗಲನಿಸ್ಸ್ವನೈಃ ।
ಸರ್ವೌಷಧ್ಯುದಕಸ್ನಾನಸ್ನಾಪಿತೋ ವೇದಪುಂಗವೈಃ ॥೧೨॥

ಇಮಮುಚ್ಚಾರಯೇನ್ಮಂತ್ರಂ ಗೃಹೀತಕುಸುಮಾಂಜಲಿಃ ।
ನಮೋಽಸ್ತು ವಿಶ್ವಮೂರ್ತಿಭ್ಯೋ ವಿಶ್ವಮಾತೃಭ್ಯ ಏವ ಚ ॥೧೩॥

ಲೋಕಾಧಿವಾಸಿನೀಭ್ಯಶ್ಚ ರೋಹಿಣೀಭ್ಯೋ ನಮೋ ನಮಃ ।
ಗವಾಮಂಗೇಷು ತಿಷ್ಠಂತಿ ಭುವನಾನ್ಯೇಕವಿಂಶತಿಃ ॥೧೪॥

---

ಗಳನ್ನು ತೊಡಿಸಬೇಕು ಅದನ್ನು ಒಂದು ಕೊಳಗ ಉಪ್ಪಿನ ರಾಶಿಯ ಮೇಲೆ ಇರಿಸಿ ಕಬ್ಬಿನ ಜಲ್ಲೆಯನ್ನು ಕೈಗೆ ಕೊಟ್ಟು, ಹೂಮಾಲೆಯನ್ನು ಧರಿಸಬೇಕು ಈ ವೃಷಭದ ತೂಕ ಒಂದು ಸಾವಿರ ಪಲದಿಂದ ಹಿಡಿದು ಮೂರು ಸಾವಿರ ಪಲಗಳ ವರೆಗೆ ಇರಬಹುದು ನೂರರಲ್ಲಿ ಹತ್ತು ಹಸುಗಳಿಗೆ ಈ ರೀತಿಯಾಗಿ ಸಕಲಾಲಂಕಾರಗಳನ್ನು ಮಾಡಬೇಕು

೧೨ ಪುಣ್ಯಕಾಲ ಬಂದಾಗ ಮಂಗಲವಾದ್ಯಗಳು ಮನೋಹರವಾಗಿ ಧ್ವನಿಮಾಡುತ್ತಿರಲು, ವೇದಪಾರಂಗತರಾದ ಬ್ರಾಹ್ಮಣೋತ್ತಮರು ಯಜಮಾನನಿಗೆ ಸಕಲೌಷಧೀರಸಮಿಶ್ರವಾದ ಮಂತ್ರೋದಕದಿಂದ ಸ್ನಾನಮಾಡಿಸುವರು ಅವನು ಬೊಗಸೆಯಲ್ಲಿ ಹೂಗಳನ್ನು ತುಂಬಿಕೊಂಡು ಈ ಮಂತ್ರವನ್ನು ಹೇಳಬೇಕು

೧೩-೧೪ ಜಗದ್ರೂಪವನ್ನು ತಾಳಿ ಜಗತ್ತಿನ ಮಾತೃಗಳೆನಿಸಿದ ಗೋವುಗಳಿಗೆ ನಮಸ್ಕಾರ ಲೋಕಕ್ಕೆ ತಮ್ಮ ಸದ್ಗುಣಗಳ ಪರಿಮಳವನ್ನು ಬೀರುವ ಗೋಮಾತೆಯರಿಗೆ ನಮಸ್ಕಾರ ಇಪ್ಪತ್ತೊಂದು ಲೋಕಗಳೂ ಹಸುಗಳ ಅವಯವಗಳಲ್ಲಿ ನೆಲಸಿವೆ

ಬ್ರಹ್ಮಾದಯಸ್ತಥಾ ದೇವಾ ರೌಹಿಣ್ಯಃ ಪಾಂತು ಮಾತರಃ ।
ಗಾವೋ ಮೇ ಅಗ್ರತಃ ಸಂತು ಗಾವಃ ಪೃಷ್ಠತ ಏವ ಚ ॥೧೫॥

ಗಾವಃ ಶಿರಸಿ ಮೇ ನಿತ್ಯಂ ಗವಾಂ ಮಧ್ಯೇ ವಸಾಮ್ಯಹಂ ।
ಯಸ್ಮಾತ್ತ್ವಂ ವೃಷರೂಪೇಣ ಧರ್ಮ ಏವ ಸನಾತನಃ ॥೧೬॥

ಅಷ್ಟಮೂರ್ತೇರಧಿಷ್ಠಾನಮತಃ ಪಾಹಿ ಸನಾತನ ।
ಇತ್ಯಾಮಂತ್ರ್ಯ ತತೋ ದದ್ಯಾದ್ಗುರವೇ ನಂದಿಕೇಶ್ವರಂ ॥೧೭॥

ಸರ್ವೋಪಕರಣೋಪೇತಂ ಗೋಯುತಂ ಚ ವಿಚಕ್ಷಣಃ ।
ಋತ್ವಿಗ್ಭ್ಯೋ ಧೇನುಮೇಕೈಕಾಂ ದಶಕಾದ್ವಿನಿವೇದಯೇತ್ ॥೧೮॥

ಗವಾಂ ಚ ಶತಮೇಕೈಕಂ ತದರ್ಧಂ ವಾಽಥ ವಿಂಶತಿಂ ।
ದಶ ಪಂಚಾಽಥ ವಾ ದದ್ಯಾದನ್ಯೇಭ್ಯಸ್ತದನುಜ್ಞಯಾ ॥೧೯॥

---

೧೫ ಬ್ರಹ್ಮಾದಿದೇವತೆಗಳೂ, ತಾಯಂದಿರಾದ ಗೋವುಗಳೂ ನಮ್ಮನ್ನು ಸಲಹಲಿ ಹಸುಗಳು ನನ್ನ ಮುಂದುಗಡೆಯಿರಲಿ ಹಸುಗಳು ಹಿಂದುಗಡೆಯೂ ಇರಲಿ ಹಸುಗಳು ನನ್ನ ತಲೆಯ ಮೇಲೆ ನಿಲ್ಲಲಿ ನಾನು ಸದಾ ಹಸುಗಳ ನಡುವೆ ವಾಸಿಸುವೆನು

೧೬-೧೮ "ನೀನು ವೃಷಭರೂಪದಿಂದ ಬಂದಿರುವ ಸಾಕ್ಷಾದ್ಧರ್ಮವೇ ಆಗಿರುವೆ ಪರಮೇಶ್ವರನಿಗೆ ವಾಹನವೆನಿಸಿರುವೆ ಆದುದರಿಂದ ಶಾಶ್ವತನಾದ ಓ ವೃಷಭಾ, ನಮ್ಮನ್ನು ಸಲಹು'' ಹೀಗೆ ಪ್ರಾರ್ಥಿಸಿ ಬಳಿಕ ಸಕಲ ಸಾಮಗ್ರಿಗಳೊಡನೆಯೂ ಹಸುವಿನೊಡನೆಯೂ ಆ ಸುವರ್ಣವೃಷಭವನ್ನು ಆಚಾರ್ಯನಿಗೆ ಕೊಡಬೇಕು ಹತ್ತು ಹಸುಗಳಲ್ಲಿ ಒಂದೊಂದನ್ನು ಒಬ್ಬೊಬ್ಬ ಋತ್ವಿಕ್ಕಿಗೆ ದಾನಮಾಡಬೇಕು

೧೯ ಇದಲ್ಲದೆ ಒಬ್ಬೊಬ್ಬನಿಗೂ ನೂರು, ಐವತ್ತು, ಇಪ್ಪತ್ತು, ಹತ್ತು, ಅಥವಾ ಐದನ್ನಾದರೂ ದಾನವಾಗಿ ಕೊಡಬೇಕು ಅವರ ಅಪ್ಪಣೆಯನ್ನು ಪಡೆದು ಮಿಕ್ಕ ಜನರಿಗೂ ಕೊಡಬಹುದು

ನೈಕಾ ಬಹುಭ್ಯೋ ದಾತವ್ಯಾ ಯತೋ ದೋಷಕರೀ ಭವೇತ್ ।
ಬಹ್ವ್ಯಶ್ಚೈಕಸ್ಯ ದಾತವ್ಯಾ ಧೀಮತಾಽಽರೋಗ್ಯವೃದ್ಧಯೇ ॥೨೦॥

ಪಯೋವ್ರತಃ ಪುನಸ್ತಿಷ್ಠೇದೇಕಾಹಂ ಗೋಸಹಸ್ರದಃ ।
ಶ್ರಾವಯೇಚ್ಛೃಣುಯಾದ್ವಾಪಿ ಮಹಾದಾನಾನುಕೀರ್ತನಂ ॥೨೧॥

ತದ್ದಿನೇ ಬ್ರಹ್ಮಚಾರೀ ಸ್ಯಾದ್ಯದೀಚ್ಛೇದ್ವಿಪುಲಾಂ ಶ್ರಿಯಂ ।
ಅನೇನ ವಿಧಿನಾ ಯಸ್ತು ಗೋಸಹಸ್ರಪ್ರದೋ ಭವೇತ್ ।
ಸರ್ವಪಾಪವಿನಿರ್ಮುಕ್ತಃ ಸಿದ್ಧಚಾರಣಸೇವಿತಃ ॥೨೨॥

ವಿಮಾನೇನಾರ್ಕವರ್ಣೇನ ಕಿಂಕಿಣೀಜಾಲಮಾಲಿನಾ ।
ಸರ್ವೇಷಾಂ ಲೋಕಪಾಲಾನಾಂ ಲೋಕೇ ಸಂಪೂಜ್ಯತೇಽಮರೈಃ ॥೨೩॥

---

೨೦ ಒಂದೇ ಹಸುವನ್ನು ಹಲವರಿಗೆ ಕೊಡಬಾರದು ಆದರಿಂದ ದೋಷ ವುಂಟಾಗುವುದು ಆದರೆ ಅನೇಕ ಹಸುಗಳನ್ನು ಒಬ್ಬನಿಗೆ ಕೊಡಬಹುದು ಆದರಿಂದ ಆರೋಗ್ಯವು ಹೆಚ್ಚುವುದು

೨೧ ಗೋಸಹಸ್ರದಾನಮಾಡಿದ ಮೇಲೆ ಯಜಮಾನನು ಆ ದಿನವೂ ಮತ್ತೆ ಜಲಪಾನವ್ರತವನ್ನು ಕೈಗೊಂಡು ಉಪವಾಸವಿರಬೇಕು ಮಹಾದಾನಗಳ ವರ್ಣನವನ್ನು ಎಲ್ಲರಿಗೂ ಹೇಳಬೇಕು ಮತ್ತು ತಾನೂ ಕೇಳಬೇಕು

೨೨ ಐಶ್ವರ್ಯವು ಯಥೇಚ್ಛವಾಗಿ ಬೆಳೆಯಬೇಕೆಂದು ಬಯಸುವವನು ಆ ದಿನ ಬ್ರಹ್ಮಚರ್ಯವ್ರತವನ್ನು ಕೈಗೊಳ್ಳಬೇಕು ಈ ವಿಧಾನದಿಂದ ಗೋಸಹಸ್ರ ದಾನವನ್ನು ಮಾಡಿದನು ಸರ್ವಪಾಪಗಳಿಂದ ಬಿಡುಗಡೆ ಹೊಂದುವನು ಸಿದ್ಧರೂ ಚಾರಣರೂ ಅವನ ಸೇವೆಮಾಡುವರು

೨೩ ಕಿರುಗಂಟೆಗಳ ಸಾಲು ಇಂಪಾಗಿ ಧ್ವನಿಮಾಡುತ್ತಿರಲು, ಸೂರ್ಯನಂತೆ ದೇದೀಪ್ಯಮಾನವಾಗಿ ಹೊಳೆಯುವ ವಿಮಾನದಲ್ಲಿ ಕುಳಿತು ಲೋಕಪಾಲಕರ ಲೋಕಗಳಲ್ಲೆಲ್ಲ ಸಂಚರಿಸುವನು ದೇವತೆಗಳು ಅವನನ್ನು ಪೂಜಿಸುವರು

ಪ್ರತಿಮನ್ವಂತರಂ ತಿಷ್ಠೇತ್ಪುತ್ರಪೌತ್ರಸಮನ್ವಿತಃ ।
ಸಪ್ತ ಲೋಕಾನತಿಕ್ರಮ್ಯ ತತಃ ಶಿವಪುರಂ ವ್ರಜೇತ್ ॥೨೪॥

ಶತಮೇಕೋತ್ತರಂ ತದ್ವತ್ಪಿತೄಣಾಂ ತಾರಯೇದ್ಬುಧಃ ।
ಮಾತಾಮಹಾನಾಂ ತದ್ವಚ್ಚ ಪುತ್ರಪೌತ್ರಸಮನ್ವಿತಃ ।
ಯಾವತ್ಕಲ್ಪಶತಂ ತಿಷ್ಠೇದ್ರಾಜರಾಜೋ ಭವೇತ್ಪುನಃ ॥೨೫॥

ಅಶ್ವಮೇಧಶತಂ ಕುರ್ಯಾಚ್ಛಿವಧ್ಯಾನಪರಾಯಣಃ ।
ವೈಷ್ಣವಂ ಲೋಕಮಾಸಾದ್ಯ ತತೋ ಮುಚ್ಯೇತ ಬಂಧನಾತ್ ॥೨೬॥

ಪಿತರಶ್ಚಾಭಿನಂದಂತಿ ಗೋಸಹಸ್ರಪ್ರದಂ ಸುತಂ ।
ಅಪಿ ಸ್ಯಾತ್ಸ ಕುಲೇಽಸ್ಮಾಕಂ ಪುತ್ರೋ ದೌಹಿತ್ರ ಏವ ವಾ ।
ಗೋಸಹಸ್ರಪ್ರದೋ ಭೂತ್ವಾ ನರಕಾದುದ್ಧರಿಷ್ಯತಿ ॥೨೭॥

---

೨೪ ಪುತ್ರಪೌತ್ರಸಹಿತನಾಗಿ ಪ್ರತಿಯೊಂದು ಮನ್ವಂತರದಲ್ಲೂ ಸಪ್ತ ಲೋಕಗಳಿಗಿಂತ ಉನ್ನತವಾದ ಸ್ಥಾನದಲ್ಲಿ ಸುಖಿಸುವನು ಬಳಿಕ ಶಿವಲೋಕವನ್ನೈದುವನು

೨೫ ತನ್ನ ತಂದೆಯ ವಂಶದಲ್ಲೂ ತಾಯಿಯ ವಂಶದಲ್ಲೂ ಒಂದು ನೂರೊಂದು ಜನ ಪಿತೃಗಳನ್ನು ಉದ್ಧರಿಸುವನು ಪುತ್ರಪೌತ್ರಸಹಿತನಾಗಿ ನೂರಾರು ಕಲ್ಪಗಳ ಕಾಲ ದಿವ್ಯಲೋಕಗಳಲ್ಲಿರುವನು ಮತ್ತೆ ಭೂಮಿಯಲ್ಲಿ ಚಕ್ರವರ್ತಿಯಾಗಿ ಜನಿಸುವನು

೨೬ ನೂರು ಅಶ್ವಮೇಧಯಾಗಗಳನ್ನು ಮಾಡುವನು ಶಿವಧ್ಯಾನದಲ್ಲಿ ನಿರತನಾಗಿರುವನು ಬಳಿಕ ವಿಷ್ಣುಲೋಕವನ್ನು ಸೇರಿ ಸಂಸಾರಬಂಧನದಿಂದ ಮುಕ್ತನಾಗುವನು

೨೭ ಗೋಸಹಸ್ರವನ್ನು ದಾನಮಾಡಿದ ಪುತ್ರನನ್ನು ಅವನ ಪಿತೃಗಳು ಶ್ಲಾಘಿಸುವರು "ನಮ್ಮ ಸಂತತಿಯಲ್ಲಿ ಗೋಸಹಸ್ರದಾನ ಮಾಡುವ ಪುತ್ರನಾಗಲಿ ದೌಹಿತ್ರನಾಗಲಿ ಹುಟ್ಟುವನೇ ! ನಮಗೆ ನರಕಬಾಧೆಯೊದಗದಂತೆ ಕಾಪಾಡಿಯಾನೇ ?" ಎಂದು ಅವರು ಹಾರೈಸುವರು

ತಸ್ಯ ಕರ್ಮಕರೋ ವಾ ಸ್ಯಾದಪಿ ದ್ರಷ್ಟಾ ತಥೈವ ಚ ।
ಸಂಸಾರಸಾಗರಾದಸ್ಮಾದ್ಯೋಽಸ್ಮಾನ್ ಸಂತಾರಯಿಷ್ಯತಿ ॥೨೮॥

ಇತಿ ಪಠತಿ ಯ ಏತದ್ಗೋಸಹಸ್ರಪ್ರದಾನಂ ।
ಸುರಭವನಮುಪೇಯಾತ್ಸಂಸ್ಮರೇದ್ವಾಥ ಪಶ್ಯೇತ್ ।
ಅನುಭವತಿ ಮುದಂ ವಾ ಮುಚ್ಯಮಾನೋ ನಿಕಾಮಂ ।
ಪ್ರಹತಕಲುಷದೇಹಃ ಸೋಽಪಿ ಯಾತೀಂದ್ರಲೋಕಂ ॥೨೯॥

ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ಮಹಾದಾನಾನುಕೀರ್ತನೇ
ಗೋಸಹಸ್ರಪ್ರದಾನವಿಧಿರ್ನಾಮಾಷ್ಟಸಪ್ತತ್ಯಧಿಕದ್ವಿಶತತಮೋಽಧ್ಯಾಯಃ

---

೨೮ "ತನಗೆ ಈ ಮಹಾದಾನವನ್ನು ಮಾಡುವ ಸಾಮರ್ಥ್ಯವಿಲ್ಲದಿದ್ದರೂ ಇತರರು ಇದನ್ನು ಮಾಡಿದರೆ ಈ ಸಮಾರಂಭಕ್ಕೆ ತನ್ನ ಕೈಲಾದಷ್ಟು ಒತ್ತಾಸೆ ಮಾಡಬೇಕು! ಅಥವಾ ಇದನ್ನು ಕಣ್ಣಿನಿಂದಲಾದರೂ ನೋಡಬೇಕು ಅಷ್ಟು ಮಾಡಿದರೂ ಸಾಕು ಆತನು ನಮ್ಮನ್ನು ಈ ಸಂಸಾರಸಾಗರದಿಂದ ಪಾರು ಮಾಡುವನು" ಎಂದು ಅವರು ಹಂಬಲಿಸುತ್ತಾರೆ

೨೯ ಗೋಸಹಸ್ರದಾನವೆಂಬ ಈ ಮಹಾದಾನದ ವಿಧಿಯನ್ನು ಯಾವನು ಓದುವನೋ ಅವನು ಸ್ವರ್ಗಲೋಕದಲ್ಲಿ ಸುಖಿಸುವನು ಇದನ್ನು ಸ್ಮರಿಸಿಕೊಳ್ಳಲಿ, ಕಣ್ಣಾರ ನೋಡಲಿ, ಅಂತಹವನೂ ಕೂಡ ಸಂತೋಷಭಾಗಿಯಾಗುವನು ಬಂಧನದಿಂದ ಬಿಡುಗಡೆಹೊಂದುವನು ಪಾಪಗಳನ್ನು ಕಳೆದುಕೊಂಡು ದಿವ್ಯದೇಹವನ್ನು ತಾಳುವನು ಇಂದ್ರಲೋಕವನ್ನು ಸೇರಿ ಆನಂದಪಡುವನು

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಗೋಸಹಸ್ರದಾನವೆಂಬ ಮಹಾದಾನದ ವಿಧಿಯನ್ನು ಹೇಳಿದೆ

ಒಂದು ಸಾವಿರ ಹಸುಗಳನ್ನು ವಸ್ತ್ರಭೂಷಣಗಳಿಂದ ಅಲಂಕರಿಸಬೇಕು ಅವುಗಳಲ್ಲಿ ಹತ್ತನ್ನು ಆರಿಸಿ ಮಂಟಪದೊಳಕ್ಕೆ ಕರೆತಂದು ವೇದಿಕೆಯ ಸುತ್ತಲೂ

ನಿಲ್ಲಿಸಬೇಕು ಅವುಗಳ ನಡುವೆ ಸುವರ್ಣನಿರ್ಮಿತವಾದ ವೃಷಭವನ್ನು ಇರಿಸಿ ಯಥಾವಿಧಿಯಾಗಿ ಪೂಜಿಸಬೇಕು ಲೋಕಪಾಲಕರ ಆವಾಹನವೂ, ಪೂಜೆಯೂ, ಹೋಮವೂ ಆದ ಬಳಿಕ ಯಜಮಾನನು ಮಂತ್ರೋದಕದಿಂದ ಸ್ನಾನಮಾಡಿ ಹಸುಗಳನ್ನು ಪ್ರಾರ್ಥಿಸಿ ಅವುಗಳನ್ನು ದಾನಮಾಡಬೇಕು ಈ ದಾನವು ಪಿತೃಗಳಿಗೆ ಅತ್ಯಂತ ಪ್ರಿಯವಾದುದು, ಯಜಮಾನನಿಗೆ ಅನಂತವಾದ ಪುಣ್ಯಫಲವನ್ನು ಕೊಡುವುದು

ಶ್ರೀಮತ್ಸ್ಯಮಹಾಪುರಾಣದಲ್ಲಿ ಮಹಾದಾನಾನುಕೀರ್ತನದಲ್ಲಿ ಗೋಸಹಸ್ರ ಪ್ರದಾನವಿಧಿಯೆಂಬ ಇನ್ನೂರೆಪ್ಪತ್ತೆಂಟನೆಯ ಅಧ್ಯಾಯವು ಮುಗಿದುದು

## ಅಥ ನವಸಪ್ತತ್ಯಧಿಕದ್ವಿಶತತಮೋಽಧ್ಯಾಯಃ

|| ಮತ್ಸ್ಯ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಕಾಮಧೇನುವಿಧಿಂ ಪರಂ ।
ಸರ್ವಕಾಮಪ್ರದಂ ನೃಣಾಂ ಮಹಾಪಾತಕನಾಶನಮ್ || ೧ ||

ಲೋಕೇಶಾವಾಹನಂ ತದ್ವದ್ಧೋಮಃ ಕಾರ್ಯೋಽಧಿವಾಸನಂ ।
ತುಲಾಪುರುಷವತ್ಕುರ್ಯಾತ್ಕುಂಡಮಂಡಪವೇದಿಕಂ || ೨ ||

ಸ್ವಲ್ಪೇ ತ್ವೇಕಾಗ್ನಿವತ್ಕುರ್ಯಾದ್ಗುರುರೇಕಃ ಸಮಾಹಿತಃ ।
ಕಾಂಚನಸ್ಯಾತಿಶುದ್ಧಸ್ಯ ಧೇನುಂ ವತ್ಸಂ ಚ ಕಾರಯೇತ್ || ೩ ||

ಉತ್ತಮಾ ಪಲಸಾಹಸ್ರಾ ತದರ್ಧೇನ ತು ಮಧ್ಯಮಾ ।
ಕನೀಯಸೀ ತದರ್ಧೇನ ಕಾಮಧೇನುಃ ಪ್ರಕೀರ್ತಿತಾ || ೪ ||

---

೧ ಮತ್ಸ್ಯರೂಪನಾದ ಭಗವಂತನು ಹೇಳಿದನು —ಇನ್ನುಮುಂದೆ ಕಾಮಧೇನುವನ್ನು ದಾನಮಾಡುವ ವಿಧಾನವನ್ನು ಹೇಳುವೆನು ಇದು ಮನುಜರಿಗೆ ಎಲ್ಲ ಇಷ್ಟಾರ್ಥಗಳನ್ನೂ ಸಲ್ಲಿಸುವುದು ಮಹಾಪಾತಕಗಳನ್ನೂ ಪರಿಹರಿಸುವುದು

೨ ತುಲಾಪುರುಷದಾನದಲ್ಲಿ ಮಾಡಿದಂತೆಯೇ ಲೋಕಪಾಲಕರ ಆವಾಹನ, ಹೋಮ, ಅಧಿವಾಸನ, ಕುಂಡನಿರ್ಮಾಣ ಮತ್ತು ಮಂಟಪರಚನೆ ಇವುಗಳನ್ನೆಲ್ಲ ಮಾಡಬೇಕು

೩ ದ್ರವ್ಯವು ಸ್ವಲ್ಪವಾಗಿದ್ದಲ್ಲಿ ಒಂದೇ ಕುಂಡವನ್ನು ರಚಿಸಿ, ಏಕಾಗ್ನಿ ವಿಧಾನದಿಂದ ಹೋಮವನ್ನು ಆಚಾರ್ಯನೊಬ್ಬನೇ ನಡೆಸಬೇಕು ಅಪ್ಪಟಚಿನ್ನದಿಂದ ಹಸುವನ್ನೂ ಕರುವನ್ನೂ ನಿರ್ಮಿಸಬೇಕು

೪ ಹೀಗೆ ನಿರ್ಮಿಸಿದ ಕಾಮಧೇನುವು ಸಾವಿರ ಪಲಗಳ ತೂಕವಿದ್ದರೆ ಉತ್ತಮವೆನಿಸುವುದು ಐನೂರು ಪಲಗಳಿದ್ದರೆ ಮಧ್ಯಮವೆಂದೂ, ಅದರಲ್ಲಿ ಅರ್ಧವಿದ್ದರೆ ಕನಿಷ್ಠವೆಂದೂ ಹೇಳುವರು ಅಶಕ್ತನಾದರೂ ಮೂರು ಪಲಗಳಿಗೆ ಕಡಿಮೆಯಿಲ್ಲದಂತೆ ತನ್ನ ಯೋಗ್ಯತೆಗನುಸಾರವಾಗಿ ಮಾಡಿಸಬೇಕು

ಶಕ್ತಿತಸ್ತ್ರಿಪಲಾದೂರ್ಧ್ವಮಶಕ್ತೋಽಪಿ ಚ ಕಾರಯೇತ್ ।
ವೇದ್ಯಾಂ ಕೃಷ್ಣಾಜಿನಂ ನ್ಯಸ್ಯ ಗುಡಪ್ರಸ್ಥಸಮನ್ವಿತಂ ॥ ೫ ॥

ನ್ಯಸೇದುಪರಿ ತಾಂ ಧೇನುಂ ಮಹಾರತ್ನೈರಲಂಕೃತಾಂ ।
ಕುಂಭಾಷ್ಟಕಸಮೋಪೇತಾಂ ನಾನಾಫಲಸಮನ್ವಿತಾಂ ॥ ೬ ॥

ತಥಾಷ್ಟಾದಶಧಾನ್ಯಾನಿ ಸಮಂತಾತ್ಪರಿಕಲ್ಪಯೇತ್ ।
ಇಕ್ಷುದಂಡಾಷ್ಟಕಂ ತದ್ವನ್ನಾನಾಫಲಸಮನ್ವಿತಂ ।
ಭಾಜನಂ ಚಾಸನಂ ತದ್ವತ್ತಾಮ್ರದೋಹನಕಂ ತಥಾ ॥ ೭ ॥

ಕೌಶೇಯವಸ್ತ್ರದ್ವಯಸಂಯುತಾಂ ಗಾಂ
ದೀಪಾತಪತ್ರಾಭರಣಾಭಿರಾಮಾಂ ।
ಸಚಾಮರಾಂ ಕುಂಡಲಿನೀಂ ಸಘಂಟಾಂ
ಸುವರ್ಣಶೃಂಗೀಂ ಪರಿರೂಪ್ಯಪಾದಾಂ ॥ ೮ ॥

---

೫-೬ ವೇದಿಕೆಯ ಮೇಲೆ ಕೃಷ್ಣಾಜಿನವನ್ನು ಹಾಸಿ, ಒಂದು ಬಳ್ಳ ಬೆಲ್ಲದ ಹುಡಿಯನ್ನು ಹರಡಿ, ಅದರ ಮೇಲೆ ಮಹಾರತ್ನಗಳಿಂದ ಅಲಂಕೃತವಾದ ಆ ಕಾಮಧೇನುವನ್ನು ಇರಿಸಬೇಕು ನಾನಾ ಬಗೆಯ ಫಲಗಳೊಡನೆ ಎಂಟು ಪೂರ್ಣ ಕುಂಭಗಳನ್ನು ಸ್ಥಾಪಿಸಬೇಕು

೭ ಸುತ್ತಲೂ ಹದಿನೆಂಟುಬಗೆಯ ಧಾನ್ಯಗಳನ್ನೂ ಬಗೆಬಗೆಯ ಹಣ್ಣುಗಳನ್ನೂ ಎಂಟು ಕಬ್ಬಿನ ಜಲ್ಲೆಗಳನ್ನೂ ಇಡಬೇಕು ಪಾತ್ರೆಯನ್ನೂ ಆಸನವನ್ನೂ ತಾಮ್ರದ ಹಾಲುಕರೆಯುವ ಪಾತ್ರೆಯನ್ನೂ ಬಳಿಯಲ್ಲಿರಿಸಬೇಕು

೮-೯ ಕಾಮಧೇನುವಿಗೆ ರೇಷ್ಮೆಯ ವಸ್ತ್ರಗಳೆರಡನ್ನು ಹೊದಿಸಿ, ಕಿವಿಗೆ ಕುಂಡಲಗಳನ್ನೂ, ಕೊರಳಿಗೆ ಘಂಟೆಯನ್ನೂ, ಕೊಂಬಿಗೆ ಚಿನ್ನದ ಒಡವೆಯನ್ನೂ, ಕಾಲಿಗೆ ಬೆಳ್ಳಿಯ ಕಾಲಂದಿಗೆಯನ್ನೂ ಧರಿಸಬೇಕು ದೀಪವನ್ನು ಹಚ್ಚಿಸಿ ಛತ್ರಿ ಚಾಮರಗಳ ಉಪಚಾರವನ್ನು ಸಮರ್ಪಿಸಬೇಕು ಸುತ್ತಲೂ ಎಲ್ಲ ಬಗೆಯ

ರಸ್ಯೈಶ್ಚ ಸರ್ವೈಃ ಪರಿತೋಽಭಿಜುಷ್ಟಾಂ
ಹರಿದ್ರಯಾ ಪುಷ್ಪಫಲೈರನೇಕೈಃ ।
ಅಜಾಜಿಕುಸ್ತುಂಭರಶರ್ಕರಾದಿಭಿ
ರ್ವಿತಾನಕಂ ಚೋಪರಿ ಪಂಚವರ್ಣಂ ॥ ೯ ॥

ಸ್ನಾತಸ್ತತೋ ಮಂಗಲವೇದಘೋಷೈಃ
ಪ್ರದಕ್ಷಿಣೀಕೃತ್ಯ ಸಪುಷ್ಪಹಸ್ತಃ ।
ಆವಾಹಯೇತ್ತ್ವಾಂ ಗುರುಣೋಕ್ತಮಂತ್ರೈ
ರ್ದ್ವಿಜಾಯ ದದ್ಯಾದಥ ದರ್ಭಪಾಣಿಃ ॥೧೦॥

ತ್ವಂ ಸರ್ವದೇವಗಣಮಂದಿರಮಂಗಭೂತಾ
ವಿಶ್ವೇಶ್ವರಿ ತ್ರಿಪಥಗೋದಧಿಪರ್ವತಾನಾಂ ।
ತ್ವದ್ದಾನಶಸ್ತ್ರಶಕಲೀಕೃತಪಾತಕೌಘಃ
ಪ್ರಾಪ್ತೋಽಸ್ಮಿ ನಿರ್ವೃತಿಮತೀವ ಪರಾಂ ನಮಾಮಿ ॥೧೧॥

---

ರಸದ್ರವ್ಯಗಳನ್ನೂ, ಬಗಬಗೆಯ ಹೂಹಣ್ಣುಗಳನ್ನೂ ಜೀರಿಗೆ, ಕೊತ್ತುಂಬರಿ, ಸಕ್ಕರೆ ಮುಂತಾದ ವಸ್ತುಗಳನ್ನೂ ಅಂದವಾಗಿ ಇಡಬೇಕು. ಮೇಲ್ಗಡೆ ಐದು ಬಗೆಯ ಬಣ್ಣದ ಬಟ್ಟೆಗಳಿಂದ ಮೇಲುಗಟ್ಟನ್ನು ಕಟ್ಟಬೇಕು

೧೦ ಮಂಗಲವಾದ್ಯಗಳೂ ವೇದಘೋಷವೂ ಆಗುತ್ತಿರಲು ಯಜಮಾನನು ಮಂತ್ರೋದಕದಿಂದ ಸ್ನಾನಮಾಡಿ, ಕೈಗಳಲ್ಲಿ ಹೂವನ್ನು ತುಂಬಿಕೊಂಡು, ಕಾಮಧೇನುವನ್ನು ಪ್ರದಕ್ಷಿಣಮಾಡಿ, ಗುರು ಹೇಳಿದ ಮಂತ್ರಗಳನ್ನು ಉಚ್ಚರಿಸುತ್ತ ಅದನ್ನು ಪ್ರಾರ್ಥಿಸಿ, ಕೈಗಳಲ್ಲಿ ದರ್ಭೆಯ ಪವಿತ್ರವು ಶೋಭಿಸುತ್ತಿರಲು ಬ್ರಾಹ್ಮಣನಿಗೆ ಅದನ್ನು ದಾನಮಾಡಬೇಕು

೧೧ ಓ ಜಗದೀಶ್ವರೀ, ಸಕಲ ದೇವಗಣಗಳೂ ನಿನ್ನಲ್ಲಿ ವಾಸಿಸುತ್ತಿವೆ ನೀನು ಗಂಗಾನದಿ, ಸಾಗರಗಳು ಮತ್ತು ಪರ್ವತಗಳು ಇವುಗಳ ಅಂಗವಾಗಿರುವೆ ನಿನ್ನ ದಾನವೆಂಬ ಶಸ್ತ್ರದಿಂದ ನನ್ನ ಪಾಪರಾಶಿಯೆಲ್ಲ ನುಚ್ಚುನೂರಾಗಿದೆ ಅಪರಿಮಿತವಾದ ಆನಂದವು ನನಗುಂಟಾಗಿದೆ ದೇವೀ, ನಿನಗೆ ನಮಸ್ಕಾರ

**ಲೋಕೇ ಯಥೇಪ್ಸಿತಫಲಾರ್ಥವಿದಾಯಿನೀಂ ತ್ವಾ**
**ಮಾಸಾದ್ಯ ಕೋ ಹಿ ಭವದುಃಖಮುಪೈತಿ ಮರ್ತ್ಯಃ ।**
**ಸಂಸಾರದುಃಖಶಮನಾಯ ಯತಸ್ವ ಕಾಮಂ**
**ತ್ವಾಂ ಕಾಮಧೇನುಮಿತಿ ದೇವಗಣಾ ವದಂತಿ ॥೧೨॥**

**ಆಮಂತ್ರ್ಯ ಶೀಲಕುಲರೂಪಗುಣಾನ್ವಿತಾಯ**
**ವಿಪ್ರಾಯ ಯಃ ಕನಕಧೇನುಮಿಮಾಂ ಪ್ರದದ್ಯಾತ್ ।**
**ಪ್ರಾಪ್ನೋತಿ ಧಾಮ ಸ ಪುರಂದರದೇವಜುಷ್ಟಂ**
**ಕನ್ಯಾಗಣೈಃ ಪರಿವೃತಃ ಪದಮಿಂದುಮೌಲೇಃ ॥೧೩॥**

**ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ಮಹಾದಾನಾನುಕೀರ್ತನೇ ಹಿರಣ್ಯಕಾಮಧೇನುಪ್ರದಾನವಿಧಿರ್ನಾಮೈಕೋನಾಶೀತ್ಯಧಿಕ-ದ್ವಿಶತತಮೋಽಧ್ಯಾಯಃ**

---

೧೨ ಲೋಕದಲ್ಲಿ ಮನುಜರು ಬಯಸುವ ಕೋರಿಕೆಗಳನ್ನೆಲ್ಲ ನೀನು ಈಡೇರಿಸುವೆ ನಿನ್ನನ್ನು ಮೊರೆಹೊಕ್ಕವನಿಗೆ ಸಂಸಾರದ ದುಃಖವೆಂದರೇನು ? ನಮ್ಮ ಭವಭೀತಿಯನ್ನು ಪರಿಹರಿಸಲು ಯತ್ನಿಸು ದೇವತೆಗಳು ನಿನ್ನನ್ನು ಕಾಮಧೇನು ಎಂದರೆ ಇಷ್ಟಾರ್ಥಗಳನ್ನು ನೆರವೇರಿಸುವವಳು ಎಂದೇ ವರ್ಣಿಸುತ್ತಾರೆ

೧೩ ಹೀಗೆ ಪ್ರಾರ್ಥಿಸಿದ ಬಳಿಕ ಶೀಲ, ಕುಲ, ರೂಪ, ಮತ್ತು ಗುಣಗಳಲ್ಲಿ ಶ್ರೇಷ್ಠನಾದ ಬ್ರಾಹ್ಮಣನಿಗೆ ಆ ಸುವರ್ಣಕಾಮಧೇನುವನ್ನು ಕೊಡಬೇಕು ಈ ದಾನಮಾಡಿದವನು ದೇವತಾಸ್ತ್ರೀಯರಿಂದ ಪರಿವೃತನಾಗಿ ಇಂದ್ರಾದಿದೇವತೆಗಳಿಂದ ಪೂಜೆಯನ್ನು ಸ್ವೀಕರಿಸುವ ಪರಮೇಶ್ವರನ ಸಾನ್ನಿಧ್ಯವನ್ನೈದುವನು

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಸುವರ್ಣಕಾಮಧೇನುದಾನವನ್ನು ವಿವರಿಸಿದೆ

ಮೂರು ಪಲಗಳಿಗೆ ಕಡಿಮೆಯಿಲ್ಲದಂತೆ ತನ್ನ ಯೋಗ್ಯತೆಗೆ ತಕ್ಕಹಾಗೆ ಚಿನ್ನದಿಂದ ಹಸುವಿನ ಮತ್ತು ಕರುವಿನ ಪ್ರತಿಮೆಗಳನ್ನು ಮಾಡಿಸಿ, ಸಕಲೋಪಚಾರ

ಗಳಿಂದ ಪೂಜೆಯನ್ನು ಸಲ್ಲಿಸಬೇಕು ಲೋಕಪಾಲಕರ ಆವಾಹನವೂ ಪೂಜೆಯೂ ಹೋಮವೂ ಆದ ತರುವಾಯ ಯಜಮಾನನು ಮಂತ್ರೋದಕದಲ್ಲಿ ಸ್ನಾನಮಾಡಿ ಕಾಮಧೇನುವನ್ನು ಪ್ರಾರ್ಥಿಸಿ ಕುಲಶೀಲಗುಣಗಳಿಂದ ಕೂಡಿದ ಬ್ರಾಹ್ಮಣನಿಗೆ ಅದನ್ನು ದಾನಮಾಡಬೇಕು ಹೀಗೆ ಮಾಡಿದವನಿಗೆ ಸಂಸಾರಪಾಶದ ಭೀತಿಯಿಲ್ಲ

ಶ್ರೀಮತ್ಸ್ಯಮಹಾಪುರಾಣದಲ್ಲಿ ಮಹಾದಾನಾನುಕೀರ್ತನದಲ್ಲಿ ಹಿರಣ್ಯ
ಕಾಮಧೇನುದಾನವಿಧಾನವೆಂಬ ಇನ್ನೂರ ಎಪ್ಪತ್ತೊಂಬತ್ತನೆಯ
ಅಧ್ಯಾಯವು ಮುಗಿದುದು

## ಅಥಾಶೀತ್ಯಧಿಕದ್ವಿಶತತಮೋಽಧ್ಯಾಯಃ

॥ ಮತ್ಸ್ಯ ಉವಾಚ ॥

ಅಥಾತಃ ಸಂಪ್ರವಕ್ಷ್ಯಾಮಿ ಹಿರಣ್ಯಾಶ್ವವಿಧಿಂ ಪರಂ ।
ಯಸ್ಯ ಪ್ರದಾನಾದ್ಭುವನೇ ಚಾನಂತಂ ಫಲಮುಶ್ನುತೇ ॥ ೧ ॥

ಪುಣ್ಯಾಂ ತಿಥಿಮಥಾಸಾದ್ಯ ಕೃತ್ವಾ ಬ್ರಾಹ್ಮಣವಾಚನಂ ।
ಲೋಕೇಶಾವಾಹನಂ ಕುರ್ಯಾತ್ತುಲಾಪುರುಷದಾನವತ್ ॥ ೨ ॥

ಋತ್ವಿಙ್ಮಂಡಪಸಂಭಾರಭೂಷಣಾಚ್ಛಾದನಾದಿಕಂ ।
ಸ್ವಲ್ಪೇ ತ್ವೇಕಾಗ್ನಿವತ್ಕುರ್ಯಾದ್ಧೇಮವಾಜಿಮುಖಂ ಬುಧಃ ॥ ೩ ॥

ಸ್ಥಾಪಯೇದ್ವೇದಿಮಧ್ಯೇ ತು ಕೃಷ್ಣಾಜಿನತಿಲೋಪರಿ ।
ಕೌಶೇಯವಸ್ತ್ರಸಂವೀತಂ ಕಾರಯೇದ್ಧೇಮವಾಜಿನಂ ॥ ೪ ॥

---

೧ ಮತ್ಸ್ಯರೂಪನಾದ ಭಗವಂತನು ಹೇಳಿದನು —ಇನ್ನುಮುಂದೆ ಚಿನ್ನದ ಕುದುರೆಯನ್ನು ದಾನಮಾಡುವ ವಿಧಾನವನ್ನು ಹೇಳುವೆನು ಇದರಿಂದ ಲೋಕದಲ್ಲಿ ಅನಂತವಾದ ಪುಣ್ಯಫಲವು ಪ್ರಾಪ್ತವಾಗುತ್ತದೆ

೨ ಪುಣ್ಯದಿನವನ್ನು ನೋಡಿ ಬ್ರಾಹ್ಮಣರ ಅನುಗ್ರಹವನ್ನು ಪಡೆದು, ತುಲಾಪುರುಷದಾನದ ವಿಧಿಯಂತೆಯೇ ಲೋಕಪಾಲಕರ ಆವಾಹನವನ್ನು ಮಾಡಬೇಕು

೩ ಋತ್ವಿಕ್ಕುಗಳನ್ನು ವರಿಸಿ, ಮಂಟಪವನ್ನು ಶಾಸ್ತ್ರೋಕ್ತವಾಗಿ ನಿರ್ಮಿಸಿ, ಸಾಮಗ್ರಿಗಳನ್ನು ಸಿದ್ಧಗೊಳಿಸಿ, ವಸ್ತ್ರಭೂಷಣಾದಿಗಳನ್ನು ಸಜ್ಜುಗೊಳಿಸಬೇಕು ದ್ರವ್ಯವು ಸ್ವಲ್ಪವಾಗಿದ್ದಲ್ಲಿ ಈ ಸುವರ್ಣಾಶ್ವದಾನವೆಂಬ ಯಜ್ಞವನ್ನು ಏಕಾಗ್ನಿವಿಧಾನದಿಂದ ನಡೆಸಬೇಕು

೪-೬ ವೇದಿಕೆಯ ನಡುವೆ ಕೃಷ್ಣಾಜಿನದ ಮೇಲೆ ಎಳ್ಳನ್ನು ಹರಡಿ ಅದರ ಮೇಲೆ ಚಿನ್ನದಿಂದ ಮಾಡಿದ ಕುದುರೆಯ ಪ್ರತಿಮೆಯನ್ನು ರೇಷ್ಮೆಯ ವಸ್ತ್ರದಲ್ಲಿ

ಶಕ್ತಿತಸ್ತ್ರಿಪಲಾದೂರ್ಧ್ವಮಾಸಹಸ್ರಪಲಾದ್ಪೃಥಃ ।
ಪಾದುಕೋಪಾನಹಚ್ಛತ್ರಚಾಮರಾಸನಭಾಜನೈಃ ॥ ೫ ॥

ಪೂರ್ಣಕುಂಭಾಷ್ಟಕೋಪೇತಂ ಮಾಲ್ಯೇಕ್ಷುಫಲಸಂಯುತಂ ।
ಶಯ್ಯಾಂ ಸೋಪಸ್ಕರಾಂ ತದ್ವದ್ಧೇಮಮಾರ್ತಂಡಸಂಯುತಾಂ ॥ ೬ ॥

ತತಃ ಸರ್ವೌಷಧಿಸ್ನಾನಸ್ನಾಪಿತೋ ವೇದಪುಂಗವೈಃ ।
ಇಮಮುಚ್ಚಾರಯೇನ್ಮಂತ್ರಂ ಗೃಹೀತಕುಸುಮಾಂಜಲಿಃ ॥ ೭ ॥

ನಮಸ್ತೇ ಸರ್ವದೇವೇಶ ವೇದಾಹರಣಲಂಪಟ ।
ವಾಜಿರೂಪೇಣ ಮಾಮಸ್ಮಾತ್ಪಾಹಿ ಸಂಸಾರಸಾಗರಾತ್ ॥ ೮ ॥

---

ಸುತ್ತಿ ಇರಿಸಬೇಕು ತನ್ನ ಯೋಗ್ಯತಾನುಸಾರವಾಗಿ ಪ್ರತಿಮೆಯನ್ನು ಮೂರು ಪಲಗಳಿಂದ ಹಿಡಿದು ಸಾವಿರಪಲಗಳವರೆಗೆ ಮಾಡಬಹುದು ಪಾದುಕೆ, ಪಾದರಕ್ಷೆ, ಛತ್ರಿ, ಚಾಮರ, ಆಸನ, ಪಾತ್ರೆ ಮುಂತಾದ ಉಪಚಾರದ ಸಾಮಗ್ರಿಗಳನ್ನು ಜೊತೆಯಲ್ಲಿ ಇರಿಸಬೇಕು ಕಬ್ಬು, ಹೂ, ಹಣ್ಣುಗಳೊಡನ ಕೂಡಿದ ಎಂಟು ಪೂರ್ಣಕುಂಭಗಳನ್ನು ಸ್ಥಾಪಿಸಬೇಕು ಸಕಲೋಪಕರಣಸಹಿತವಾಗಿ ಹಾಸಿಗೆಯನ್ನು ಸಿದ್ಧಪಡಿಸಿ ಸೂರ್ಯನ ಸುವರ್ಣಪ್ರತಿಮೆಯನ್ನು ಅದರಲ್ಲಿ ಇರಿಸಬೇಕು

೭ ಬಳಿಕ ವೇದಪಾರಂಗತರಾದ ದ್ವಿಜೋತ್ತಮರು ಸಕಲವಿಧವಾದ ವನಸ್ಪತಿಗಳಿಂದ ಪರಿಶುದ್ಧವಾದ ಮಂತ್ರೋದಕದಲ್ಲಿ ಯಜಮಾನನಿಗೆ ಸ್ನಾನ ಮಾಡಿಸುವರು ಆತನು ಬೊಗಸೆಯಲ್ಲಿ ಹೂಗಳನ್ನು ತುಂಬಿಕೊಂಡು ಈ ಮಂತ್ರವನ್ನು ಹೇಳುವನು

೮ ವೇದಗಳನ್ನು ತರುವುದಕ್ಕೋಸ್ಕರ ಅಕ್ಕರೆಯಿಂದ ಹಯಗ್ರೀವಾವತಾರವನ್ನು ಮಾಡಿದ ಓ ದೇವಾಧಿದೇವಾ, ಈ ಸಂಸಾರಸಾಗರದಿಂದ ನನ್ನನ್ನು ಪಾರುಮಾಡು

**ತ್ವಮೇವ ಸಪ್ತಧಾ ಭೂತ್ವಾ ಛಂದೋರೂಪೇಣ ಭಾಸ್ಕರ ।**
**ಯಸ್ಮಾದ್ಪಾಸಯಸೇ ಲೋಕಾನತಃ ಪಾಹಿ ಸನಾತನ ॥ ೯ ॥**

**ಏವಮುಚ್ಚಾರ್ಯ ಗುರವೇ ತಮಶ್ವಂ ವಿನಿವೇದಯೇತ್ ।**
**ದತ್ವಾ ಪಾಪಕ್ಷಯಾದ್ಭಾನೋರ್ಲೋಕಮಭ್ಯೇತಿ ಶಾಶ್ವತಂ ॥೧೦॥**

**ಗೋಭಿರ್ವಿಭವತಃ ಸರ್ವಾನೃತ್ವಿಜಶ್ಚಾಪಿ ಪೂಜಯೇತ್ ।**
**ಸರ್ವಧಾನ್ಯೋಪಕರಣಂ ಗುರವೇ ವಿನಿವೇದಯೇತ್ ॥೧೧॥**

**ಸರ್ವಂ ಶಯ್ಯಾದಿಕಂ ದತ್ವಾ ಭುಂಜೀತಾತ್ತೈಲಮೇವ ಹಿ ।**
**ಪುರಾಣಶ್ರವಣಂ ತದ್ವತ್ಕಾರಯೇದ್ಭೋಜನಾದನು ॥೧೨॥**

---

೯ ಓ ಸೂರ್ಯದೇವಾ, ಛಂದಸ್ಸಿನ ರೂಪದಿಂದ ಏಳುಬಗೆಯ ಆಕಾರವನ್ನು ತಾಳಿ ಲೋಕಗಳನ್ನೆಲ್ಲ ನೀನೇ ಬೆಳಗುತ್ತಿರುವೆ ಎಲೈ ಸನಾತನಾ, ನನ್ನನ್ನು ಸಲಹು

೧೦ ಹೀಗೆ ಮಂತ್ರವನ್ನು ಹೇಳಿ ಪ್ರಾರ್ಥಿಸಿ, ಆ ಚಿನ್ನದ ಕುದುರೆಯನ್ನು ಆಚಾರ್ಯನಿಗೆ ಒಪ್ಪಿಸಬೇಕು ಈ ದಾನದಿಂದ ಪಾಪಗಳೆಲ್ಲ ಕ್ಷಯವಾಗುವುವು ಶಾಶ್ವತವಾದ ಸೂರ್ಯಲೋಕವು ಪ್ರಾಪ್ತವಾಗುವುದು

೧೧ ಋತ್ವಿಜರೆಲ್ಲರಿಗೂ ಗೋದಾನವನ್ನು ವಿಶೇಷವಾದ ವೈಭವದಿಂದ ಕೊಟ್ಟು ಸತ್ಕರಿಸಬೇಕು ಸಕಲಧಾನ್ಯಗಳನ್ನೂ ಉಪಕರಣಗಳನ್ನೂ ಆಚಾರ್ಯನಿಗೆ ಒಪ್ಪಿಸಬೇಕು

೧೨ ಹಾಸಿಗೆ ಮೊದಲಾದ ಪರಿಕರಗಳೆಲ್ಲವನ್ನೂ ದಾನಮಾಡಿ ಯಜಮಾನನು ಎಣ್ಣೆಯನ್ನು ಉಪಯೋಗಿಸದೆ ಊಟಮಾಡಬೇಕು ಭೋಜನಾನಂತರ ಪುರಾಣಶ್ರವಣವನ್ನು ಮಾಡಬೇಕು

ಇಮಂ ಹಿರಣ್ಯಾಶ್ವವಿಧಿಂ ಕರೋತಿ ಯಃ
ಪುಣ್ಯಂ ಸಮಾಸಾದ್ಯ ದಿನಂ ನರೇಂದ್ರ ।
ವಿಮುಕ್ತಪಾಪಃ ಸ ಪುರಂ ಮುರಾರೇಃ
ಪ್ರಾಪ್ನೋತಿ ಸಿದ್ಧೈರಭಿಪೂಜಿತಃ ಸ್ಸ ||೧೩||

ಇತಿ ಪಠತಿ ಯ ಏತದ್ಧೇಮವಾಜಿಪ್ರದಾನಂ ।
ಸಕಲಕಲುಷಮುಕ್ತಃ ಸೋಽಶ್ವಮೇಧೇನ ಯುಕ್ತಃ ।
ಕನಕಮಯವಿಮಾನೇನಾರ್ಕಲೋಕಂ ಪ್ರಯಾತಿ
ತ್ರಿದಶಪತಿವಧೂಭಿಃ ಪೂಜ್ಯತೇ ಯೋಽಭಿಪಶ್ಯೇತ್ ||೧೪||

ಯೋ ವಾ ಶೃಣೋತಿ ಪುರುಷೋಽಲ್ಪಧನಃ ಸ್ಮರೇದ್ವಾ
ಹೇಮಾಶ್ವದಾನಮಭಿನಂದಯತೀಹ ಲೋಕೇ ।
ಸೋಽಪಿ ಪ್ರಯಾತಿ ಹತಕಲ್ಮಷಶುದ್ಧದೇಹಃ
ಸ್ಥಾನಂ ಪುರಂದರಮಹೇಶ್ವರದೇವಜುಷ್ಟಂ ||೧೫||

ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ಮಹಾದಾನಾನುಕೀರ್ತನೇ
ಹಿರಣ್ಯಾಶ್ವಪ್ರದಾನವಿಧಿರ್ನಾಮಾಶೀತ್ಯಧಿಕದ್ವಿಶತತಮೋಽಧ್ಯಾಯಃ

---

೧೩. ರಾಜಾ, ಪುಣ್ಯದಿವಸದಲ್ಲಿ ಈ ಸುವರ್ಣಾಶ್ವದಾನವನ್ನು ಯಾವನು ಮಾಡುತ್ತಾನೋ ಅವನು ಸಕಲ ಪಾಪಮುಕ್ತನಾಗುವನು ಸಿದ್ಧರಿಂದ ಎಲ್ಲೆಲ್ಲೂ ಪೂಜೆಯನ್ನು ಕೈಗೊಳ್ಳುತ್ತ, ಮಹಾವಿಷ್ಣುವಿನ ದಿವ್ಯಸಾನ್ನಿಧ್ಯವನ್ನು ಸೇರುವನು

೧೪. ಈ ಸುವರ್ಣಾಶ್ವದಾನವಿಧಾನವನ್ನು ಯಾವನು ಪಾರಾಯಣ ಮಾಡುತ್ತಾನೋ ಅವನ ಪಾಪಗಳೆಲ್ಲ ದೂರವಾಗುವುವು ಅವನಿಗೆ ಅಶ್ವಮೇಧ ಯಾಗದ ಫಲ ಬರುವುದು ಈ ದಾನದ ಸಮಾರಂಭವನ್ನು ಕಣ್ಣಾರ ನೋಡುವಾತನನ್ನು ದೇವಸುಂದರಿಯರು ಗೌರವಿಸುವರು ಆತನು ಸುವರ್ಣಮಯವಾದ ವಿಮಾನದಲ್ಲಿ ಕುಳಿತು ಸೂರ್ಯಲೋಕವನ್ನೈದುವನು

೧೫. ದರಿದ್ರನಾದ ಯಾವ ಮನುಷ್ಯನಾದರೂ ಈ ಸುವರ್ಣಾಶ್ವದಾನದ ವರ್ಣನವನ್ನು ಕೇಳಲಿ, ಸ್ಮರಿಸಲಿ, ಲೋಕದಲ್ಲಿ ಹೊಗಳಲಿ, ಅವನ ಪಾತಕಗಳು ತೊಲಗಿ ದೇಹವು ಶುದ್ಧವಾಗುವುದು ಆತನು ದೇವಲೋಕ, ಇಂದ್ರಲೋಕ, ಮಹೇಶ್ವರಲೋಕ ಮುಂತಾದ ದಿವ್ಯಲೋಕಗಳಲ್ಲಿ ಸುಖಿಸುವನು

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಚಿನ್ನದ ಕುದುರೆಯನ್ನು ದಾನಮಾಡುವ ವಿಧಾನವು ಹೇಳಲ್ಪಟ್ಟಿದೆ

ಮೂರು ಪಲಗಳಿಂದ ಹಿಡಿದು ಒಂದುಸಾವಿರ ಪಲಗಳವರೆಗೆ ತೂಕವಿರುವ ಕುದುರೆಯ ಪ್ರತಿಮೆಯನ್ನು ತನ್ನ ಶಕ್ತಿಗೆ ತಕ್ಕಂತೆ ಚಿನ್ನದಿಂದ ಮಾಡಿಸಿ, ಹಿಂದೆ ಹೇಳಿದರೀತಿಯಲ್ಲಿ ಅಧಿವಾಸನವನ್ನು ನಡೆಸಬೇಕು ಲೋಕಪಾಲಕರ ಆವಾಹನ, ಪೂಜೆ, ಹೋಮ ಇವು ಮುಗಿದ ಬಳಿಕ ಯಜಮಾನನು ಮಂತ್ರೋದಕಸ್ನಾನದಿಂದ ಪರಿಶುದ್ಧನಾಗಿ ಆ ಪ್ರತಿಮೆಯನ್ನೂ ಸುವರ್ಣನಿರ್ಮಿತವಾದ ಸೂರ್ಯವಿಗ್ರಹವನ್ನೂ ಆಚಾರ್ಯನಿಗೆ ದಾನಮಾಡಬೇಕು ಋತ್ವಿಕ್ಕುಗಳಿಗೆ ಗೋದಾನವನ್ನು ವೈಭವದಿಂದ ಕೊಡಬೇಕು ಈ ಮಹಾದಾನವನ್ನು ಮಾಡಿದಾತನ ಪಾಪಗಳೆಲ್ಲ ಪರಿಹಾರವಾಗುವುವು ಅವನು ವಿಷ್ಣುಸಾಯುಜ್ಯವನ್ನೈದುವನು

ಶ್ರೀಮತ್ಸ್ಯಮಹಾಪುರಾಣದಲ್ಲಿ ಮಹಾದಾನಾನುಕೀರ್ತನದಲ್ಲಿ ಹಿರಣ್ಯಾಶ್ವಪ್ರದಾನ ವಿಧಿಯೆಂಬ ಇನ್ನೂರೆಂಬತ್ತನೆಯ ಅಧ್ಯಾಯವು ಮುಗಿದುದು

## ಅಥೈಕಾಶೀತ್ಯಧಿಕದ್ವಿಶತತಮೋಽಧ್ಯಾಯಃ

|| ಮತ್ಸ್ಯ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಮಹಾದಾನಮನುತ್ತಮಂ ।
ಪುಣ್ಯಮಶ್ವರಥಂ ನಾಮ ಮಹಾಪಾತಕನಾಶನಂ || ೧ ||

ಪುಣ್ಯಂ ದಿನಮಥಾಸಾದ್ಯ ಕೃತ್ವಾ ಬ್ರಾಹ್ಮಣವಾಚನಂ ।
ಲೋಕೇಶಾವಾಹನಂ ಕುರ್ಯಾತ್ತುಲಾಪುರುಷದಾನವತ್ || ೨ ||

ಋತ್ವಿಙ್ಮಂಡಪಸಂಭಾರಭೂಷಣಾಚ್ಛಾದನಾದಿಕಂ ।
ಕೃಷ್ಣಾಜಿನೇ ತಿಲಾನ್ ಕೃತ್ವಾ ಕಾಂಚನಂ ಸ್ಥಾಪಯೇದ್ರಥಂ || ೩ ||

ಸಪ್ತಾಶ್ವಂ ಚತುರಶ್ವಂ ವಾ ಚತುಶ್ಚಕ್ರಂ ಸಕೂಬರಂ ।
ಇಂದ್ರನೀಲೇನ ಕುಂಭೇನ ಧ್ವಜರೂಪೇಣ ಸಂಯುತಂ || ೪ ||

---

೧ ಮತ್ಸ್ಯರೂಪನಾದ ಭಗವಂತನು ಹೇಳಿದನು —ಮಹಾದಾನಗಳಲ್ಲಿ ಅತಿಶ್ರೇಷ್ಠವಾದ ಅಶ್ವರಥದಾನದ ವಿಧಾನವನ್ನು ಇನ್ನುಮುಂದೆ ಹೇಳುವೆನು. ಇದು ಮಹಾಪಾತಕಗಳನ್ನು ಪರಿಹರಿಸುವಂತಹುದು ಬಹು ಪುಣ್ಯಕರವಾದುದು

೨ ಪುಣ್ಯದಿನದಲ್ಲಿ ಬ್ರಾಹ್ಮಣಾನುಗ್ರಹವವನ್ನು ಪಡೆದು ತುಲಾಪುರುಷ ದಾನದಲ್ಲಿ ಮಾಡಿದಂತೆಯೇ ಲೋಕಪಾಲಕರ ಆವಾಹನವನ್ನು ಮಾಡಬೇಕು

೩ ಋತ್ವಿಕ್ಕುಗಳನ್ನು ವರಿಸಿ, ಮಂಡಪವನ್ನು ನಿರ್ಮಿಸಿ, ಸಾಮಗ್ರಿಗಳನ್ನು ಸಿದ್ಧಗೊಳಿಸಿ, ವಸ್ತ್ರಭೂಷಣಾದಿಗಳನ್ನು ಅನುಗೊಳಿಸಿಕೊಳ್ಳಬೇಕು. ಕೃಷ್ಣಾಜಿನದಲ್ಲಿ ಎಳ್ಳನ್ನು ಹರಡಿ ಅದರ ಮೇಲೆ ಚಿನ್ನದ ತೇರನ್ನಿಡಬೇಕು ಅದಕ್ಕೆ ನಾಲ್ಕು ಅಥವಾ ಏಳು ಕುದುರೆಗಳೂ, ನಾಲ್ಕು ಗಾಲಿಗಳೂ, ನೊಗವೂ ಇರಬೇಕು

೪ ಇಂದ್ರ ನೀಲರತ್ನದಿಂದ ಕುಂಭವನ್ನು ರಚಿಸಿ ಅದನ್ನು ಧ್ವಜರೂಪವಾಗಿ ಇರಿಸಬೇಕು ಎಂಟು ಜನ ಲೋಕಪಾಲಕರಿಂದ ಕೂಡಿ ಪದ್ಮರಾಗಮಣಿಯ ದಳಗಳುಳ್ಳದಾಗಿರಬೇಕು

ಲೋಕಪಾಲಾಷ್ಟಕೋಪೇತಂ ಪದ್ಮರಾಗದಲಾನ್ವಿತಂ ।
ಚತುರಃ ಪೂರ್ಣಕಲಶಾನ್ ಧಾನ್ಯಾನ್ಯಷ್ಟಾದಶೈವ ತು ॥ ೫ ॥

ಕೌಶೇಯವಸ್ತ್ರಸಂಯುಕ್ತಮುಪರಿಷ್ಟಾದ್ವಿತಾನಕಂ ।
ಮಾಲ್ಯೇಕ್ಷುಫಲಸಂಯುಕ್ತಂ ಪುರುಷೇಣ ಸಮನ್ವಿತಂ ॥ ೬ ॥

ಯೋ ಯದ್ಭಕ್ತಃ ಪುಮಾನ್ ಕುರ್ಯಾತ್ಸ ತನ್ನಾಮ್ನಾಧಿವಾಸನಂ ।
ಛತ್ರಚಾಮರಕೌಶೇಯವಸ್ತ್ರೋಪಾನಹಪಾದುಕಂ ॥ ೭ ॥

ಗೋಭಿರ್ವಿಭವತಃ ಸಾರ್ಧಂ ದದ್ಯಾಚ್ಚ ಶಯನಾದಿಕಂ ।
ಅಭಾವಾತ್ತ್ರಿಪಲಾದೂರ್ಧ್ವಂ ಶಕ್ತಿತಃ ಕಾರಯೇದ್ಬುಧಃ ॥ ೮ ॥

ಅಶ್ವಾಷ್ಟಕೇನ ಸಂಯುಕ್ತಂ ಚತುರ್ಭಿರಥ ವಾಜಿಭಿಃ ।
ದ್ವಾಭ್ಯಾಮಪಿ ಯುತಂ ದದ್ಯಾದ್ಧೇಮಸಿಂಹಧ್ವಜಾನ್ವಿತಂ ॥ ೯ ॥

---

೫-೬ ನಾಲ್ಕು ಪೂರ್ಣಕುಂಭಗಳನ್ನು ಸ್ಥಾಪಿಸಿ ಅದರ ಸುತ್ತಲೂ ಹದಿನೆಂಟು ಬಗೆಯ ಧಾನ್ಯಗಳನ್ನಿಡಬೇಕು ಸಾರಥಿಯುಕ್ತವಾದ ರಥವನ್ನು ರೇಷ್ಮೆಯವಸ್ತ್ರಸಹಿತವಾಗಿ ಎಳ್ಳಿನ ಮೇಲಿರಿಸಬೇಕು ಹೂಮಾಲೆಗಳನ್ನೂ ಹಣ್ಣುಗಳನ್ನೂ ತಟ್ಟೆಯಲ್ಲಿಟ್ಟು ಕಬ್ಬಿನ ಜಲ್ಲೆಗಳನ್ನು ಬಳಿಯಲ್ಲಿರಿಸಬೇಕು ಮೇಲ್ಗಡೆ ಮೇಲುಗಟ್ಟನ್ನು ಕಟ್ಟಬೇಕು

೭ ಯಜಮಾನನು ಯಾವ ದೇವರ ಭಕ್ತನೋ ಆ ದೇವರ ಹೆಸರಿನಿಂದ ಅಧಿವಾಸನವನ್ನು ಮಾಡಬೇಕು ಕೊಡೆ, ಚಾಮರ, ರೇಷ್ಮೆಯವಸ್ತ್ರ, ಪಾದರಕ್ಷೆ, ಪಾದುಕೆ, ಶಯನ ಮುಂತಾದುವನ್ನೂ ಹಸುಗಳನ್ನೂ ವೈಭವದಿಂದ ದಾನ ಮಾಡಬೇಕು

೮-೯ ದ್ರವ್ಯವು ಸ್ವಲ್ಪವಾಗಿದ್ದರೆ ಮೂರು ಪಲಗಳಿಗೆ ಕಡಿಮೆಯಿಲ್ಲದಂತೆ ಎಷ್ಟು ಚಿನ್ನದಿಂದಲಾದರೂ ರಥವನ್ನು ಮಾಡಬಹುದು ಅದಕ್ಕೆ ಎಂಟು, ನಾಲ್ಕು, ಅಥವಾ ಕೊನೆಗೆ ಎರಡು ಕುದುರೆಗಳನ್ನು ಹೂಡಬಹುದು ಧ್ವಜದಲ್ಲಿ ಚಿನ್ನದ ಸಿಂಹವು ಮೆರೆಯುತ್ತಿರಬೇಕು ಚಕ್ರದ ಕಾವಲಿಗೆ ಇಬ್ಬರನ್ನು ನಿರ್ಮಿಸಬೇಕು ಕುದುರೆಯ ಮೇಲೆ ಅಶ್ವಿನೀ ದೇವತೆಗಳು ಕುಳಿತಿರುವಂತೆ ರಚಿಸಬೇಕು

ಚಕ್ರರಕ್ಷಾವುಭೌ ತಸ್ಯ ತುರಗಸ್ಥಾವಥಾಶ್ವಿನೌ ।
ಪುಣ್ಯಕಾಲಮಥಾವಾಪ್ಯ ಪೂರ್ವವತ್ಸ್ನಾಪಿತೋ ದ್ವಿಜೈಃ ॥೧೦॥

ತ್ರಿಃ ಪ್ರದಕ್ಷಿಣಮಾವೃತ್ಯ ಗೃಹೀತಕುಸುಮಾಂಜಲಿಃ ।
ಶುಕ್ಲಮಾಲ್ಯಾಂಬರೋ ದದ್ಯಾದಿಮಂ ಮಂತ್ರಮುದೀರಯೇತ್ ॥೧೧॥

ನಮೋ ನಮಃ ಪಾಪವಿನಾಶನಾಯ
ವಿಶ್ವಾತ್ಮನೇ ವೇದತುರಂಗಮಾಯ ।
ಧಾಮ್ನಾಮಧೀಶಾಯ ದಿವಾಕರಾಯ
ಪಾಪೌಘದಾವಾನಲ ದೇಹಿ ಶಾಂತಿಂ ॥೧೨॥

ವಸ್ವಷ್ಟಕಾದಿತ್ಯಮರುದ್ಗಣಾನಾಂ
ತ್ವಮೇವ ಧಾತಾ ಪರಮಂ ನಿಧಾನಂ ।
ಯತಸ್ತತೋ ಮೇ ಹೃದಯಂ ಪ್ರಯಾತು
ಧರ್ಮೈಕತಾನತ್ವಮಘೌಘನಾಶಾತ್ ॥೧೩॥

---

೧೦-೧೧ ಪುಣ್ಯಕಾಲವು ಬಂದಕೂಡಲೆ ಹಿಂದೆ ಹೇಳಿದ ರೀತಿಯಲ್ಲಿ ಋತ್ವಿಕ್ಕುಗಳು ಮಂತ್ರೋದಕದಿಂದ ಸ್ನಾನಮಾಡಿಸಲು, ಯಜಮಾನನು ಶುಭ್ರ ವಸ್ತ್ರವನ್ನುಟ್ಟು, ಕೈತುಂಬ ಹೂವನ್ನು ತುಂಬಿಕೊಂಡು, ರಥವನ್ನು ಮೂರುಸಾರಿ ಪ್ರದಕ್ಷಿಣೆಮಾಡಿ ಈ ಮಂತ್ರವನ್ನು ಹೇಳಬೇಕು

೧೨ ಪಾಪನಾಶಕನೂ, ಸರ್ವಾತ್ಮನೂ, ವೇದಗಳೆಂಬ ಕುದುರೆಗಳುಳ್ಳವನೂ, ತೇಜಸ್ಸುಗಳಿಗೆ ಅಧೀಶ್ವರನೂ ಆದ ಸೂರ್ಯದೇವನಿಗೆ ನಮಸ್ಕಾರ ನಮಸ್ಕಾರ ಪಾಪರಾಶಿಯನ್ನು ಸುಟ್ಟು ಬೂದಿಮಾಡುವ ಓ ಭಗವಂತಾ, ಶಾಂತಿಯನ್ನು ನೀಡು

೧೩ ಅಷ್ಟವಸುಗಳು, ದ್ವಾದಶಾದಿತ್ಯರು ಮರುದ್ಗಣಗಳು ಇವರಿಗೆಲ್ಲ ನೀನೇ ಅಧಿಪತಿ ನನ್ನ ಪಾಪರಾಶಿಯನ್ನು ಪರಿಹರಿಸು ನನ್ನ ಹೃದಯದಲ್ಲಿ ಯಾವಾಗಲೂ ಧರ್ಮಾಸಕ್ತಿ ಸ್ಥಿರವಾಗಿ ನಿಲ್ಲಲಿ

ಇತಿ ತುರಗರಥಪ್ರದಾನಮೇತ
ದ್ಭವಭಯಸೂದನಮತ್ರ ಯಃ ಕರೋತಿ ।
ಸ ಕಲುಷಪಟಲೈರ್ವಿಮುಕ್ತದೇಹಃ
ಪರಮುಪೈತಿ ಪದಂ ಪಿನಾಕಪಾಣೇಃ ॥೧೪॥

ದೇದೀಪ್ಯಮಾನವಪುಷಾ ವಿಜಿತಪ್ರಭಾವ
ಮಾಕ್ರಮ್ಯ ಮಂಡಲಮಖಂಡಿತಚಂಡಭಾನೋಃ ।
ಸಿದ್ಧಾಂಗನಾನಯನಷಟ್ಪದದೀಯಮಾನ
ವಕ್ತ್ರಾಂಬುಜೋಽಂಬುಜಭವೇನ ಚಿರಂ ಸಹಾಽಽಸ್ತೇ ॥೧೫॥

ಇತಿ ಪಠತಿ ಶೃಣೋತಿ ವಾ ಯ ಏತ
ತ್ತುರಗರಥಸ್ಯ ಮಹಾಪ್ರದಾನಮಸ್ಮಿನ್ ।
ನ ಸ ನರಕಪುರಂ ವ್ರಜೇತ್ಕದಾಚಿ
ನ್ನರಕರಿಪೋರ್ಭವನಂ ಪ್ರಯಾತಿ ಭೂಯಃ ॥೧೬॥

ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ಹಿರಣ್ಯಾಶ್ವರಥಪ್ರದಾನ-
ವಿಧಿರ್ನಾಮೈಕಾಶೀತ್ಯಧಿಕದ್ವಿಶತತಮೋಽಧ್ಯಾಯಃ

---

೧೪ ಈ ರೀತಿಯಾಗಿ ಸಂಸಾರಭಯವನ್ನು ಪರಿಹರಿಸುವ ಸುವರ್ಣಾಶ್ವ ರಥದಾನವನ್ನು ಮಾಡುವಾತನು ಸಕಲಪಾಪಗಳನ್ನೂ ಪರಿಹರಿಸಿಕೊಂಡು ಪರಮೇಶ್ವರನ ದಿವ್ಯಸಾನ್ನಿಧ್ಯವನ್ನು ಸೇರುವನು

೧೫ ಪ್ರಕಾಶಭರಿತವಾದ ದಿವ್ಯದೇಹದಿಂದ ಸೂರ್ಯಮಂಡಲವನ್ನು ಭೇದಿಸಿ ಕೊಂಡು ಹೋಗಿ, ಸಿದ್ಧಾಂಗನೆಯರು ಬಿಟ್ಟ ಕಣ್ಣುಗಳಿಂದ ಕಾಂತಿಯುಕ್ತ ವಾದ ಆತನ ಮುಖಮಂಡಲವನ್ನು ನೋಡುತ್ತಿರಲು, ಬ್ರಹ್ಮದೇವನೊಡನೆ ಚಿರಕಾಲ ಸುಖವಾಗಿರುವನು

೧೬ ಚಿನ್ನದ ತೇರನ್ನೂ ಕುದುರೆಯನ್ನೂ ದಾನಮಾಡುವ ಈ ವಿಧಾನ ವನ್ನು ಯಾವನು ಪಾರಾಯಣಮಾಡುತ್ತಾನೋ, ಅಥವಾ ಕೇಳುತ್ತಾನೋ ಅವನು ನರಕಕ್ಕೆಂದಿಗೂ ಹೋಗನು ಅಷ್ಟೇ ಅಲ್ಲ, ನರಕಾಸುರನನ್ನು ಸಂಹಾರಮಾಡಿದ ಶ್ರೀ ಕೃಷ್ಣಪರಮಾತ್ಮನ ಸಾನ್ನಿಧ್ಯವನ್ನು ಸೇರುವನು

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಚಿನ್ನದ ತೇರನ್ನೂ ಕುದುರೆಯನ್ನೂ ದಾನಮಾಡುವ ವಿಧಾನವನ್ನು ವರ್ಣಿಸಿದೆ

ತನ್ನ ಯೋಗ್ಯತೆಗೆ ತಕ್ಕಂತೆ, ಮೂರು ಪಲಗಳಿಗೆ ಕಡಿಮೆಯಿಲ್ಲದೆ ಚಿನ್ನದಿಂದ ತೇರನ್ನೂ ಕುದುರೆಗಳನ್ನೂ ಮಾಡಿಸಿ ಹಿಂದೆ ಹೇಳಿದ ರೀತಿಯಲ್ಲಿ ಅಧಿವಾಸನವನ್ನು ಮಾಡಬೇಕು ಲೋಕಪಾಲಕರ ಆವಾಹನವೂ, ಪೂಜೆಯೂ, ಹೋಮವೂ ಆದ ಬಳಿಕ ಯಜಮಾನನು ಮಂತ್ರೋದಕದಿಂದ ಸ್ನಾನಮಾಡಿ, ಸುವರ್ಣರಥವನ್ನು ಮೂರುಸಾರಿ ಬಲವಂದು ಪ್ರಾರ್ಥಿಸಿ ಆಚಾರ್ಯನಿಗೆ ಅದನ್ನು ದಾನಮಾಡಬೇಕು ಉಳಿದ ಋತ್ವಿಕ್ಕುಗಳನ್ನು ಗೋದಾನಾದಿಗಳಿಂದ ವಿಶೇಷವಾಗಿ ಸತ್ಕರಿಸಬೇಕು ಈ ಮಹಾದಾನವನ್ನು ಮಾಡುವವನು ಸೂರ್ಯಮಂಡಲವನ್ನು ಭೇದಿಸಿಕೊಂಡು ಬ್ರಹ್ಮಲೋಕವನ್ನು ಸೇರಿ ಅಲ್ಲಿ ಚಿರಕಾಲ ಸುಖವಾಗಿರುವನು

ಶ್ರೀಮತ್ಸ್ಯಮಹಾಪುರಾಣದಲ್ಲಿ ಮಹಾದಾನಾನುಕೀರ್ತನದಲ್ಲಿ ಹಿರಣ್ಯಾಶ್ವರಥ ಪ್ರದಾನವಿಧಿಯೆಂಬ ಇನ್ನೂರ ಎಂಬತ್ತೊಂದನೆಯ ಅಧ್ಯಾಯವು ಮುಗಿದುದು

## ಅಥ ದ್ವ್ಯಶೀತ್ಯಧಿಕದ್ವಿಶತತಮೋಽಧ್ಯಾಯಃ

|| ಮತ್ಸ್ಯ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಹೇಮಹಸ್ತಿರಥಂ ಶುಭಂ ।
ಯಸ್ಯ ಪ್ರದಾನಾದ್ಭವನಂ ವೈಷ್ಣವಂ ಯಾತಿ ಮಾನವಃ || ೧ ||

ಪುಣ್ಯಾಂ ತಿಥಿಮಥಾಸಾದ್ಯ ತುಲಾಪುರುಷದಾನವತ್ ।
ವಿಪ್ರವಾಚನಕಂ ಕುರ್ಯಾಲ್ಲೋಕೇಶಾವಾಹನಂ ಬುಧಃ ।
ಋತ್ವಿಙ್ಮಂಡಪಸಂಭಾರಭೂಷಣಾಚ್ಛಾದನಾದಿಕಂ || ೨ ||

ಅತ್ರಾಪ್ಯುಪೋಷಿತಸ್ತದ್ವದ್ಬ್ರಾಹ್ಮಣೈಃ ಸಹ ಭೋಜನಂ ।
ಕುರ್ಯಾತ್ಪುಷ್ಪರಥಾಕಾರಂ ಕಾಂಚನಂ ಮಣಿಮಂಡಿತಂ || ೩ ||

ವಲಭೀಭಿರ್ವಿಚಿತ್ರಾಭಿಶ್ಚತುಶ್ಚಕ್ರಸಮನ್ವಿತಂ ।
ಕೃಷ್ಣಾಜಿನೇ ತಿಲದ್ರೋಣಂ ಕೃತ್ವಾ ಸಂಸ್ಥಾಪಯೇದ್ರಥಂ || ೪ ||

---

೧ ಮತ್ಸ್ಯರೂಪನಾದ ಭಗವಂತನು ಹೇಳಿದನು --ಇನ್ನುಮುಂದೆ ಚಿನ್ನದ ಆನೆಯನ್ನೂ ರಥವನ್ನೂ ದಾನಮಾಡುವ ವಿಧಿಯನ್ನು ಹೇಳುವೆನು ಈ ದಾನದಿಂದ ಮನುಜನು ವಿಷ್ಣುಸಾನ್ನಿಧ್ಯವನ್ನು ಸೇರುತ್ತಾನೆ

೨ ಪುಣ್ಯತಿಥಿಯನ್ನು ನೋಡಿ, ಬ್ರಾಹ್ಮಣಾಶೀರ್ವಾದವನ್ನು ಪಡೆದು, ತುಲಾಪುರುಷದಾನದಲ್ಲಿ ಮಾಡಿದಂತೆಯೇ ಲೋಕಪಾಲಕರ ಆವಾಹನೆ, ಋತ್ವಿಕ್ಕುಗಳ ವರಣ, ಮತ್ತು ವಸ್ತ್ರಭೂಷಣಾದಿಸಾಮಗ್ರಿಗಳ ಸಂಗ್ರಹವನ್ನು ಮಾಡಬೇಕು

೩ ಈ ದಾನವಿಧಿಯಲ್ಲಿಯೂ ಸಹ ಉಪವಾಸವಿದ್ದು ಕೊನೆಯಲ್ಲಿ ಬ್ರಾಹ್ಮಣರೊಡನೆ ಭೋಜನಮಾಡಬೇಕು ರತ್ನಖಚಿತವಾದ ಸುವರ್ಣರಥವನ್ನು ಚಿನ್ನದಿಂದ ಮಾಡಬೇಕು ಅದು ಚಿತ್ರಕೆಲಸದ ಸೂರುಪಟ್ಟಿಗಳಿಂದಲೂ ನಾಲ್ಕು ಚಕ್ರಗಳಿಂದಲೂ ಕೂಡಿರಬೇಕು

೪-೫ ರಥದಲ್ಲಿ ಎಂಟುಜನ ದಿಕ್ಪಾಲಕರು, ಬ್ರಹ್ಮ, ಸೂರ್ಯ, ಮತ್ತು ಈಶ್ವರ ಇವರೆಲ್ಲರೂ ಕುಳಿತಿರಬೇಕು ಮಧ್ಯದಲ್ಲಿ ಲಕ್ಷ್ಮಿಯೊಡನೆಯೂ ಪುಷ್ಟಿ

**ಲೋಕಪಾಲಾಷ್ಟಕೋಪೇತಂ ಬ್ರಹ್ಮಾರ್ಕಶಿವಸಂಯುತಂ ।**
**ಮಧ್ಯೇ ನಾರಾಯಣೋಪೇತಂ ಲಕ್ಷ್ಮೀಪುಷ್ಟಿಸಮನ್ವಿತಂ ॥ ೫ ॥**

**ತಥಾಷ್ಟಾದಶಧಾನ್ಯಾನಿ ಭಾಜನಾಸನಚಂದನೈಃ ।**
**ದೀಪಕೋಪಾನಹಚ್ಛತ್ರದರ್ಪಣಂ ಪಾದುಕಾನ್ವಿತಂ ॥ ೬ ॥**

**ಧ್ವಜೇ ತು ಗರುಡಂ ಕುರ್ಯಾತ್ಕೂಬರಾಗ್ರೇ ವಿನಾಯಕಂ ।**
**ನಾನಾಫಲಸಮಾಯುಕ್ತಮುಪರಿಷ್ಟಾದ್ವಿತಾನಕಂ ॥ ೭ ॥**

**ಕೌಶೇಯಂ ಪಂಚವರ್ಣಂ ತು ಅಮ್ಲಾನಕುಸುಮಾನ್ವಿತಂ ।**
**ಚತುರ್ಭಿಃ ಕಲಶೈಃ ಸಾರ್ಧಂ ಗೋಭಿರಿಷ್ಟಾಭಿರನ್ವಿತಂ ॥ ೮ ॥**

---

ಯೊಡನೆಯೂ ಸಹಿತನಾದ ನಾರಾಯಣನು ವಿರಾಜಿಸುತ್ತಿರಬೇಕು ಕೃಷ್ಣಾಜಿನದ ಮೇಲೆ ಒಂದು ಕೊಳಗ ಎಳ್ಳನ್ನು ಹರಡಿ ಅದರಮೇಲೆ ಆ ರಥವನ್ನು ಇರಿಸಬೇಕು

೬ ಹದಿನೆಂಟು ಬಗೆಯ ಧಾನ್ಯಗಳನ್ನು ಸುತ್ತಲೂ ಇಟ್ಟು, ಪಾತ್ರೆ, ಆಸನ, ಗಂಧ, ದೀಪ, ಪಾದರಕ್ಷೆ, ಕೊಡೆ, ಕನ್ನಡಿ, ಪಾದುಕ ಮುಂತಾದ ಉಪಚಾರಗಳನ್ನು ಸಮರ್ಪಿಸಬೇಕು

೭ ಧ್ವಜದಲ್ಲಿ ಗರುಡನನ್ನೂ, ನೊಗದ ತುದಿಯಲ್ಲಿ ವಿನಾಯಕನನ್ನೂ ನಿರ್ಮಿಸಬೇಕು ಮೇಲ್ಗಡೆ ಬಗೆಬಗೆಯ ಹಣ್ಣುಗೊಂಚಲುಗಳಿಂದ ವಿರಾಜಿಸುವ ಮೇಲ್ಗಟ್ಟನ್ನು ಐದು ಬಣ್ಣದ ರೇಷ್ಮೆಯ ಬಟ್ಟೆಗಳಿಂದ ಕಟ್ಟಿ, ಬಾಡದ ಹೊಸದಾಗಿರುವ ಹೂಗಳಿಂದ ಅದನ್ನು ಅಲಂಕರಿಸಬೇಕು

೮-೯ ನಾಲ್ಕು ಕಲಶಗಳು ಮತ್ತು ಎಂಟು ಹಸುಗಳು ಇವುಗಳ ಸಹಿತವಾಗಿ ಸುವರ್ಣರಥವನ್ನು ದಾನವಾಗಿ ಕೊಡಬೇಕು ಅದಕ್ಕೆ ಮುಕ್ತಾಹಾರಗಳಿಂದ ಅಲಂಕೃತವಾದ ನಾಲ್ಕು ಚಿನ್ನದ ಆನೆಗಳನ್ನು, ಅಷ್ಟು ಯೋಗ್ಯತೆಯಿಲ್ಲದಿದ್ದರೆ

**ಚತುರ್ಭಿರ್ಹೇಮಮಾತಂಗೈರ್ಮುಕ್ತಾದಾಮವಿಭೂಷಿತೈಃ ।**
**ಸ್ವರೂಪತಃ ಕರಿಭ್ಯಾಂ ಚ ಯುಕ್ತಂ ಕೃತ್ವಾ ನಿವೇದಯೇತ್ ॥ ೯ ॥**

**ಕುರ್ಯಾತ್ಪಂಚಪಲಾದೂರ್ಧ್ವಮಾಭಾರಾದಪಿ ಶಕ್ತಿತಃ ।**
**ತಥಾ ಮಂಗಲಶಬ್ದೇನ ಸ್ನಾಪಿತೋ ವೇದಪುಂಗವೈಃ ॥೧೦॥**

**ತ್ರಿಃ ಪ್ರದಕ್ಷಿಣಮಾವೃತ್ಯ ಗೃಹೀತಕುಸುಮಾಂಜಲಿಃ ।**
**ಇಮಮುಚ್ಚಾರಯೇನ್ಮಂತ್ರಂ ಬ್ರಾಹ್ಮಣೇಭ್ಯೋ ನಿವೇದಯೇತ್ ॥೧೧॥**

**ನಮೋ ನಮಃ ಶಂಕರಪದ್ಮಜಾರ್ಕ**
**ಲೋಕೇಶವಿದ್ಯಾಧರವಾಸುದೇವೈಃ ।**
**ತ್ವಂ ಸೇವ್ಯಸೇ ವೇದಪುರಾಣಯಜ್ಞೈ**
**ಸ್ತೇಜೋಮಯಸ್ಯಂದನ ಪಾಹಿ ತಸ್ಮಾತ್ ॥೧೨॥**

---

ಎರಡು ಆನೆಗಳನ್ನು ಹೂಡಿರಬೇಕು ತನ್ನ ಶಕ್ತಿಗೆ ತಕ್ಕಂತೆ ಐದು ಪಲಗಳಿಗೆ ಕಡಿಮೆಯಿಲ್ಲದಂತೆ ಒಂದು ಭಾರ*ತೂಕದ ವರೆಗೂ ರಥವನ್ನು ನಿರ್ಮಿಸಬಹುದು

೧೦-೧೧ ಮಂಗಲವಾದ್ಯಗಳು ಧ್ವನಿಮಾಡುತ್ತಿರಲು, ವೇದಪಾರಂಗತರಾದ ಬ್ರಾಹ್ಮಣೋತ್ತಮರು ಯಜಮಾನನಿಗೆ ಕುಂಭೋದಕಗಳಿಂದ ಸ್ನಾನ ಮಾಡಿಸುವರು ಅವನು ಹೂಗಳನ್ನು ಅಂಜಲಿಯಲ್ಲಿ ಹಿಡಿದು, ಸುವರ್ಣರಥವನ್ನು ಮೂರುಸಾರಿ ಪ್ರದಕ್ಷಿಣಮಾಡಿ, ಈ ಮಂತ್ರವನ್ನು ಹೇಳಿ ಅದನ್ನು ಬ್ರಾಹ್ಮಣರಿಗೆ ದಾನಮಾಡಬೇಕು

೧೨ ತೇಜೋಯುಕ್ತವಾದ ಎಲೈ ಸುವರ್ಣರಥವೇ, ನಿನಗೆ ನಮಸ್ಕಾರ ನಮಸ್ಕಾರ ಈಶ್ವರ, ಬ್ರಹ್ಮ, ಸೂರ್ಯ, ಲೋಕಪಾಲಕರು, ವಿದ್ಯಾಧರರು, ವಾಸುದೇವ, ವೇದಗಳು, ಪುರಾಣಗಳು ಮತ್ತು ಯಜ್ಞಗಳು ಎಲ್ಲ ನಿನ್ನನ್ನು ಸೇವಿಸುತ್ತವೆ ಆದುದರಿಂದ ನನ್ನ ಪೂಜೆಯನ್ನು ಸ್ವೀಕರಿಸಿ ನನ್ನನ್ನು ರಕ್ಷಿಸು

---

* ಭಾರವೆಂದರೆ ೨೦೦೦ ಪಲಗಳ ತೂಕ ಒಂದು ಪಲವು ೩೨೦ ಗುಲಗಂಜಿಗಳ ತೂಕವಾಗುತ್ತದೆ

ಯತ್ತತ್ಪದಂ ಪರಮಗುಹ್ಯತಮಂ ಮುರಾರೇ
ರಾನಂದಹೇತು ಗುಣರೂಪವಿಮುಕ್ತಮಂತಃ ।
ಯೋಗೈಕಮಾನಸದೃಶೋ ಮುನಯಃ ಸಮಾಧೌ
ಪಶ್ಯಂತಿ ತತ್ತ್ವಮಸಿ ನಾಥಪದೇಽಧಿರೂಢ ||೧೩||

ಯಸ್ಮಾತ್ತ್ವಮೇವ ಭವಸಾಗರಸಂಪ್ಲುತಾನಾ
ಮಾನಂದಭಾಂಡಮೃತಮಧ್ವರಪಾನಪಾತ್ರಂ ।
ತಸ್ಮಾದಘೌಘಶಮನೇನ ಕುರು ಪ್ರಸಾದಂ
ಚಾಮೀಕರೇಭರಥಮಾಧವ ಸಂಪ್ರದಾನಾತ್ ||೧೪||

ಇತ್ಥಂ ಪ್ರಣಮ್ಯ ಕನಕೇಭರಥಪ್ರದಾನಂ
ಯಃ ಕಾರಯೇತ್ಸಕಲಪಾಪವಿಮುಕ್ತದೇಹಃ ।
ವಿದ್ಯಾಧರಾಮರಮುನೀಂದ್ರಗಣಾಭಿಜುಷ್ಟಂ
ಪ್ರಾಪ್ನೋತ್ಯಸೌ ಪದಮತೀಂದ್ರಿಯಮಿಂದುಮೌಲೇಃ ||೧೫||

---

೧೩ ಶ್ರೀಮಹಾವಿಷ್ಣುವಿಗೆ ಕುಳಿತುಕೊಳ್ಳಲು ಎಡೆಯನ್ನು ಕೊಡುವ ಎಲ್ಲೈ ರಥವೇ, ಅತ್ಯಂತ ರಹಸ್ಯವೂ, ಆನಂದಪ್ರದವೂ, ಅಮಂಗಲ ಗುಣರೂಪ ರಹಿತವೂ ಆದ ಮುರಾರಿಯ ಯಾವ ದಿವ್ಯಪದವನ್ನು ಯೋಗನಿಷ್ಠರಾದ ಮುನಿಗಳು ಸಮಾಧಿಸ್ಥಿತಿಯಲ್ಲಿ ತಮ್ಮ ಮನಸ್ಸಿನಲ್ಲಿಯೇ ಸಾಕ್ಷಾತ್ಕಾರಮಾಡಿಕೊಳ್ಳುತ್ತಾರೆಯೋ ಆ ಶ್ರೇಷ್ಠವಾದ ಸ್ಥಾನವೇ ನೀನಾಗಿರುವ

೧೪ ಸುವರ್ಣರಥದಲ್ಲಿ ಮಂಡಿಸಿರುವ ಲಕ್ಷ್ಮೀಪತಿಯಾದ ಓ ನಾರಾಯಣಾ, ಸಂಸಾರಸಾಗರದಲ್ಲಿ ಮುಳುಗಿ ತೇಲಿಹೋಗುತ್ತಿರುವವರನ್ನು ರಕ್ಷಿಸಿ ಆನಂದಗೊಳಿಸುವವನು ನೀನೇ ಆದಕಾರಣ ಈ ಸುವರ್ಣರಥದ ದಾನದಿಂದ ನನ್ನ ಪಾಪರಾಶಿಯೆಲ್ಲವೂ ಪರಿಹಾರವಾಗುವಂತೆ ಅನುಗ್ರಹಿಸು

೧೫ ಹೀಗೆ ನಮಸ್ಕಾರಮಾಡಿ, ಚಿನ್ನದ ಆನೆಯನ್ನು ಹೂಡಿದ ತೇರನ್ನು ಯಾವನು ದಾನಮಾಡುತ್ತಾನೋ, ಅವನು ಪಾಪಗಳೆಲ್ಲವನ್ನೂ ಕಳೆದುಕೊಂಡು ದಿವ್ಯದೇಹದಿಂದ ವಿರಾಜಿಸುವನು ವಿದ್ಯಾಧರರು, ದೇವತೆಗಳು, ಮತ್ತು ಮಹರ್ಷಿಗಳು ಎಡೆಬಿಡದೆ ಸೇವೆಮಾಡುತ್ತಿರುವ, ಪ್ರಾಕೃತೇಂದ್ರಿಯಗಳಿಗೆ ಗೋಚರವಾಗದ ಆ ಪರಮೇಶ್ವರನ ಸಾನ್ನಿಧ್ಯವನ್ನು ಸೇರುವನು

**ಕೃತದುರಿತವಿತಾನಪ್ರಜ್ವಲದ್ವಹ್ನಿಜಾಲ**
**ವ್ಯತಿಕರಕೃತದಾಹೋದ್ವೇಗಭಾಜೋಽಪಿ ಬಂಧೂನ್ ।**
**ನಯತಿ ಸ ಪಿತೃಪುತ್ರಾನ್ ಬಾಂಧವಾನಪ್ಯಶೇಷಾನ್**
**ಕೃತಗಜರಥದಾನಾಚ್ಛಾಶ್ವತಂ ಸದ್ಮ ವಿಷ್ಣೋಃ ॥೧೬॥**

**ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ಮಹಾದಾನಾನುಕೀರ್ತನೇ ಹೇಮಹಸ್ತಿರಥಪ್ರದಾನವಿಧಿರ್ನಾಮ ದ್ವ್ಯಶೀತ್ಯಧಿಕದ್ವಿಶತತಮೋಽಧ್ಯಾಯಃ**

---

೧೬ ಹಿಂದೆ ಮಾಡಿದ ಅನಂತವಾದ ಪಾಪರಾಶಿಗಳೆಂಬ ಕಾಳ್ಗಿಚ್ಚಿನ ಬೇಗೆಗೆ ಸಿಕ್ಕಿ ಸಂಕಟಪಡುತ್ತಿದ್ದರೂ, ಈ ಹೇಮರಥದಾನವನ್ನು ಮಾಡಿದವನು ತಾನು ಪಾಪಮುಕ್ತನಾಗುವುದು ಮಾತ್ರವಲ್ಲದೆ ಬಂಧುಗಳು, ಮಕ್ಕಳು, ಮೊಮ್ಮಕ್ಕಳು, ಜ್ಞಾತಿಗಳು ಇವರೆಲ್ಲರನ್ನೂ ಮಹಾವಿಷ್ಣುವಿನ ದಿವ್ಯಸಾನ್ನಿಧ್ಯ ಕ್ಕೊಯ್ಯುವನು

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಸುವರ್ಣಗಜರಥದಾನದ ವಿಧಿಯನ್ನು ಹೇಳಿದೆ

ತನ್ನ ಯೋಗ್ಯತಾನುಸಾರವಾಗಿ ಚಿನ್ನದಿಂದ ಆನೆಯನ್ನು ಹೂಡಿದ ತೇರನ್ನು ಸಪರಿಕರವಾಗಿ ನಿರ್ಮಿಸಿ ಅಧಿವಾಸವನ್ನು ನಡೆಸಬೇಕು ಲೋಕಪಾಲಕರ ಪೂಜೆಯೂ ಹೋಮವೂ ಆದ ಬಳಿಕ, ಮಂತ್ರೋದಕದಿಂದ ಸ್ನಾನಮಾಡಿ, ಯಜಮಾನನು ಆ ರಥವನ್ನು ಮೂರು ಸಾರಿ ಬಲವಂದು, ಮಂತ್ರಪೂರ್ವಕವಾಗಿ ಆಚಾರ್ಯನಿಗೆ ದಾನಮಾಡಬೇಕು ಇದರಿಂದ ಆತನ ಪಾಪಗಳೆಲ್ಲ ದಗ್ಧವಾಗುವುವು ಲಕ್ಷ್ಮೀನಾರಾಯಣನು ಪ್ರೀತನಾಗುವನು ಬಂಧುವರ್ಗದವರೆಲ್ಲರೂ ವಿಷ್ಣು ಸಾನ್ನಿಧ್ಯವನ್ನೈದುವರು

ಶ್ರೀಮತ್ಸ್ಯಮಹಾಪುರಾಣದಲ್ಲಿ ಮಹಾದಾನಾನುಕೀರ್ತನದಲ್ಲಿ ಹೇಮಹಸ್ತಿರಥ ಪ್ರದಾನವಿಧಿಯೆಂಬ ಇನ್ನೂರೆಂಬತ್ತೆರಡನೆಯ ಅಧ್ಯಾಯವು ಮುಗಿದುದು

## ಅಥ ತ್ರ್ಯಶೀತ್ಯಧಿಕದ್ವಿಶತತಮೋಽಧ್ಯಾಯಃ

॥ ಮತ್ಸ್ಯ ಉವಾಚ ॥

ಅಥಾತಃ ಸಂಪ್ರವಕ್ಷ್ಯಾಮಿ ಮಹಾದಾನಮನುತ್ತಮಂ ।
ಪಂಚಲಾಂಗಲಕಂ ನಾಮ ಮಹಾಪಾತಕನಾಶನಂ ॥ ೧ ॥

ಪುಣ್ಯಾಂ ತಿಥಿಮಥಾಸಾದ್ಯ ಯುಗಾದಿಗ್ರಹಣಾದಿಕಂ ।
ಭೂಮಿದಾನಂ ನರೋ ದದ್ಯಾತ್ಪಂಚಲಾಂಗಲಕಾನ್ವಿತಂ ॥ ೨ ॥

ಖರ್ವಟಂ ಖೇಟಕಂ ವಾಽಪಿ ಗ್ರಾಮಂ ವಾ ಸಸ್ಯಶಾಲಿನಂ ।
ನಿವರ್ತನಶತಂ ವಾಽಪಿ ತದರ್ಧಂ ವಾಽಪಿ ಶಕ್ತಿತಃ ॥ ೩ ॥

ಸಾರದಾರುಮಯಾನ್ ಕೃತ್ವಾ ಹಲಾನ್ ಪಂಚ ವಿಚಕ್ಷಣಃ ।
ಸರ್ವೋಪಕರಣೈರ್ಯುಕ್ತಾನನ್ಯಾನ್ ಪಂಚ ಚ ಕಾಂಚನಾನ್ ॥
ಕುರ್ಯಾತ್ಪಂಚಪಲಾದೂರ್ಧ್ವಮಾಸಹಸ್ರಪಲಾವಧಿ ॥ ೪ ॥

---

೧ ಮತ್ಸ್ಯರೂಪನಾದ ಭಗವಂತನು ಹೇಳಿದನು —ಇನ್ನು ಮುಂದೆ ಪಂಚಲಾಂಗಲಕದಾನವೆಂಬ (ಐದು ನೇಗಿಲುಗಳದಾನ) ಮಹಾದಾನದ ವಿಧಿಯನ್ನು ಹೇಳುವೆನು ಇದು ಘೋರಪಾತಕಗಳನ್ನು ಪರಿಹರಿಸುವ ಅತ್ಯಂತ ಶ್ರೇಷ್ಠವಾದ ದಾನವೆನಿಸುವುದು

೨ ಯುಗಾದಿ, ಗ್ರಹಣ ಮೊದಲಾದ ಪುಣ್ಯದಿನಗಳಲ್ಲಿ ಆಸ್ತಿಕನಾದ ಮನುಷ್ಯನು ಐದು ನೇಗಿಲುಗಳೊಡನೆ ಭೂಮಿಯನ್ನು ದಾನಮಾಡಬೇಕು

೩-೪ ಯಜಮಾನನು ತನ್ನ ಶಕ್ತಿಗೆ ತಕ್ಕಂತೆ ಪಟ್ಟಣವನ್ನೋ, ಊರನ್ನೋ, ಸಸ್ಯಸಮೃದ್ಧವಾದ ಹಳ್ಳಿಯನ್ನೋ ದಾನಮಾಡಬಹುದು ಅಥವಾ ನೂರು ನಿವರ್ತನಗಳಷ್ಟು, ಇಲ್ಲವೇ ಅದರ ಅರ್ಧವಷ್ಟು ಭೂಮಿಯನ್ನಾದರೂ ಕೊಡಬಹುದು (ನಿವರ್ತನವೆಂದರೆ ಸುಮಾರು ೨೫ ಗುಂಟೆ ) ದಾನವಿಧಿಯನ್ನರಿತ ಯಜಮಾನನು ಗಟ್ಟಿಯಾದ ಮರದಿಂದ ಐದು ನೇಗಿಲುಗಳನ್ನು ಮಾಡಿಸಬೇಕು ಅಲ್ಲದೆ ಸಕಲೋಪಕರಣಸಹಿತವಾದ ಬೇರೆ ಐದು ನೇಗಿಲುಗಳನ್ನು ಚಿನ್ನದಿಂದ ನಿರ್ಮಿಸಬೇಕು ಒಂದೊಂದರ ತೂಕ ಐದರಿಂದ ಒಂದುಸಾವಿರ ಪಲಗಳವರಗೆ ಇರಬಹುದು

ವೃಷಾಂಲ್ಲಕ್ಷಣಸಂಯುಕ್ತಾನ್ ದಶ ಚೈನ ಧುರಂಧರಾನ್ ।
ಸುವರ್ಣಶೃಂಗಾಭರಣಾನ್ ಮುಕ್ತಾಲಾಂಗೂಲಭೂಷಣಾನ್ ॥ ೫ ॥

ರೂಪ್ಯಪಾದಾಗ್ರತಿಲಕಾನ್ ರಕ್ತಕೌಶೇಯಭೂಷಣಾನ್ ।
ಸ್ರಗ್ದಾಮಚಂದನಯುತಾಞ್ಶಾಲಾಯಾಮಧಿವಾಸಯೇತ್ ॥ ೬ ॥

ಪರ್ಜನ್ಯಾದಿತ್ಯರುದ್ರೇಭ್ಯಃ ಪಾಯಸಂ ನಿರ್ವಪೇಚ್ಚರುಂ ।
ಏಕಸ್ಮಿನ್ನೇವ ಕುಂಡೇ ತು ಗುರುಸ್ತೇಭ್ಯೋ ನಿವೇದಯೇತ್ ॥ ೭ ॥

ಪಲಾಶಸಮಿಧಸ್ತದ್ವದಾಜ್ಯಕೃಷ್ಣತಿಲಾಂಸ್ತಥಾ ।
ತುಲಾಪುರುಷವತ್ಕುರ್ಯಾಲ್ಲೋಕೇಶಾವಾಹನಂ ಬುಧಃ ॥ ೮ ॥

ತತೋ ಮಂಗಲಶಬ್ದೇನ ಶುಕ್ಲಮಾಲ್ಯಾಂಬರೋ ಬುಧಃ
ಆಹೂಯ ದ್ವಿಜದಾಂಪತ್ಯಂ ಹೇಮಸೂತ್ರಾಂಗುಲೀಯಕೈಃ ॥ ೯ ॥

---

೫-೬ ಸಲಕ್ಷಣವಾಗಿಯೂ ದೃಢವಾಗಿಯೂ ಇರುವ ಹತ್ತು ಎತ್ತುಗಳನ್ನು ಯಜ್ಞಶಾಲೆಯಲ್ಲಿ ಗಂಧಪುಷ್ಪಾದಿಗಳಿಂದ ಅರ್ಚಿಸಬೇಕು ಕೊಂಬಿಗೆ ಚಿನ್ನದ ಒಡವೆಗಳನ್ನೂ, ಬಾಲಕ್ಕೆ ಮುತ್ತಿನ ಹಾರಗಳನ್ನೂ, ಕಾಲಿಗೆ ಬೆಳ್ಳಿಯ ಅಂದಿಗೆಯನ್ನೂ, ಮುಖಕ್ಕೆ ತಿಲಕವನ್ನೂ ಇಟ್ಟು ರೇಷ್ಮೆಯ ವಸ್ತ್ರವನ್ನು ಧರಿಸಿ, ಹೂಮಾಲೆಯನ್ನು ಹಾಕಿ ಗಂಧವನ್ನು ಧರಿಸಬೇಕು

೭ ಆಚಾರ್ಯನು ಇಂದ್ರ, ಸೂರ್ಯ, ಮತ್ತು ರುದ್ರರಿಗೋಸ್ಕರವಾಗಿ ಕ್ಷೀರಮಿಶ್ರವಾದ ಚರುವನ್ನು ಸಿದ್ಧಪಡಿಸಿ ಒಂದೇ ಕುಂಡದಲ್ಲಿ ಅವರಿಗೆ ಹೋಮ ಮಾಡಬೇಕು

೮ ಬಳಿಕ ಮುತ್ತುಗದ ಸಮಿತ್ತುಗಳನ್ನೂ, ತುಪ್ಪವನ್ನೂ, ಕರಿಯ ಎಳ್ಳನ್ನೂ ಹೋಮಮಾಡಿ ತುಲಾಪುರುಷದಾನವಿಧಿಯಂತೆಯೇ ಲೋಕಪಾಲಕರನ್ನು ಆವಾಹಿಸಬೇಕು

೯-೧೦ ತರುವಾಯ ಮಂಗಲವಾದ್ಯಗಳು ಧ್ವನಿಮಾಡುತ್ತಿರಲು, ಯಜಮಾನನು ಶುಭ್ರವಸ್ತ್ರವನ್ನು ಧರಿಸಿ, ಬ್ರಾಹ್ಮಣದಂಪತಿಗಳನ್ನು ಕರೆದು

ಕೌಶೇಯವಸ್ತ್ರಕಟಕೈರ್ಮಣಿಭಿಶ್ಚಾಭಿಪೂಜಯೇತ್ ।
ಶಯ್ಯಾಂ ಸೋಪಸ್ಕರಾಂ ದದ್ಯಾದ್ಧೇನುಮೇಕಾಂ ಪಯಸ್ವಿನೀಂ ||೧೦||

ತಥಾಷ್ಟಾದಶ ಧಾನ್ಯಾನಿ ಸಮಂತಾದಧಿವಾಸಯೇತ್ ।
ತತಃ ಪ್ರದಕ್ಷಿಣೀಕೃತ್ಯ ಗೃಹೀತಕುಸುಮಾಂಜಲಿಃ ||೧೧||

ಇಮಮುಚ್ಚಾರಯೇನ್ಮಂತ್ರಮಥ ಸರ್ವಂ ನಿವೇದಯೇತ್ ।
ಯಸ್ಮಾದ್ದೇವಗಣಾಃ ಸರ್ವೇ ಸ್ಥಾವರಾಣಿ ಚರಾಣಿ ಚ ||೧೨||

ಧುರಂಧರಾಂಗೇ ತಿಷ್ಠಂತಿ ತಸ್ಮಾದ್ಭಕ್ತಿಃ ಶಿವೇಽಸ್ತು ಮೇ ।
ಯಸ್ಮಾಚ್ಚ ಭೂಮಿದಾನಸ್ಯ ಕಲಾಂ ನಾರ್ಹಂತಿ ಷೋಡಶೀಂ ||೧೩||

ದಾನಾನ್ಯನ್ಯಾನಿ ಮೇ ಭಕ್ತಿರ್ಧರ್ಮೆ ಏವ ದೃಢಾ ಭವೇತ್ ।
ದಂಡೇನ ಸಪ್ತಹಸ್ತೇನ ತ್ರಿಂಶದ್ದಂಡಂ ನಿವರ್ತನಂ ||೧೪||

---

ಚಿನ್ನದ ಸರಗಳು, ಉಂಗುರಗಳು, ರೇಷ್ಮೆಯ ವಸ್ತ್ರಗಳು, ಬಳೆಗಳು, ರತ್ನಗಳು ಇವುಗಳನ್ನು ಕೊಟ್ಟು ಸತ್ಕರಿಸಬೇಕು ಸಪರಿಕರವಾದ ಹಾಸಿಗೆಯನ್ನೂ, ಚೆನ್ನಾಗಿ ಹಾಲುಕೊಡುವ ಒಂದು ಹಸುವನ್ನೂ ದಾನಮಾಡಬೇಕು

೧೧ ಹದಿನೆಂಟು ಬಗೆಯ ಧಾನ್ಯಗಳನ್ನು ಚಿನ್ನದ ನೇಗಿಲಿನ ಸುತ್ತಲೂ ಇಡಬೇಕು ಬಳಿಕ ಬೊಗಸೆಯಲ್ಲಿ ಹೂವನ್ನು ತುಂಬಿಕೊಂಡು ಪ್ರದಕ್ಷಿಣೆಮಾಡಿ, ಈ ಮಂತ್ರವನ್ನು ಹೇಳಿ ಎಲ್ಲವನ್ನೂ ದಾನಮಾಡಬೇಕು

೧೨-೧೩ ಸಕಲ ದೇವಗಣಗಳೂ ಚರಾಚರಪ್ರಾಣಿಗಳೂ ಎತ್ತಿನ ದೇಹದಲ್ಲಿ ಇರುವುವು ಆದಕಾರಣ ಈಶ್ವರನಲ್ಲಿ ನನಗೆ ಭಕ್ತಿ ಸ್ಥಿರವಾಗಲಿ ಉಳಿದ ದಾನಗಳು ಭೂದಾನದ ಹದಿನಾರರಲ್ಲೊಂದು ಪಾಲು ಫಲವನ್ನುಕೂಡ ಕೊಡಲಾರವು ಆದುದರಿಂದ ನನಗೆ ಧರ್ಮದಲ್ಲಿ ದೃಢವಾಗಿ ಭಕ್ತಿ ನೆಲಸಲಿ

೧೪-೧೫ ಏಳುಮೊಳದ ಕೋಲಿನಲ್ಲಿ ಉದ್ದವಾಗಿಯೂ ಅಗಲವಾಗಿಯೂ ಮೂವತ್ತುಸಾರಿ ಅಳೆದರೆ ಆಗುವ ವಿಸ್ತಾರದ ಪ್ರದೇಶಕ್ಕೆ ನಿವರ್ತನವೆಂದೂ, ಇದರ

ತ್ರಿಭಾಗಹೀನಂ ಗೋಚರ್ಮವಾನಮಾಹ ಪ್ರಜಾಪತಿಃ ।
ಮಾನೇನಾನೇನ ಯೋ ದದ್ಯಾನ್ನಿವರ್ತನಶತಂ ಬುಧಃ ।
ವಿಧಿನಾನೇನ ತಸ್ಯಾಽಽಶು ಕ್ಷೀಯತೇ ಪಾಪಸಂಹತಿಃ ॥೧೫॥

ತದರ್ಧಮಥವಾ ದದ್ಯಾದಪಿ ಗೋಚರ್ಮಮಾತ್ರಕಂ ।
ಭವನಸ್ಥಾನಮಾತ್ರಂ ವಾ ಸೋಽಪಿ ಪಾಪೈಃ ಪ್ರಮುಚ್ಯತೇ ॥೧೬॥

ಯಾವಂತಿ ಲಾಂಗಲಕಮಾರ್ಗಮುಖಾನಿ ಭೂಮೇ ।
ಭರ್ತಾಸಾಂ ಪತೇದ್ದುಹಿತುರಂಗಜರೋಮಕಾಣಿ ।
ತಾವಂತಿ ಶಂಕರಪುರೇ ಸ ಸಮಾ ಹಿ ತಿಷ್ಠೇ
ದ್ಭೂಮಿಪ್ರದಾನಮಿಹ ಯಃ ಕುರುತೇ ಮನುಷ್ಯಃ ॥೧೭॥

---

ಮೂರರಲ್ಲೊಂದು ಪಾಲಿಗೆ ಗೋಚರ್ಮವೆಂದೂ ಬ್ರಹ್ಮನು ಹೇಳಿರುವನು ಈ ಅಳತೆಯನ್ನನುಸರಿಸಿ ನೂರು ನಿವರ್ತನಗಳ ಭೂಮಿಯನ್ನು ಮೇಲೆ ಹೇಳಿದ ವಿಧಿಯಿಂದ ಯಾವನು ದಾನಮಾಡುತ್ತಾನೋ, ಅವನ ಪಾಪಗಳೆಲ್ಲ ಬೇಗನೆ ಪರಿಹಾರವಾಗುತ್ತವೆ

೧೬ ಅವರಲ್ಲಿ ಅರ್ಧವನ್ನಾಗಲಿ ಅಥವಾ ಗೋಚರ್ಮಪರಿಮಾಣದಷ್ಟನ್ನಾಗಲಿ ದಾನಮಾಡಬೇಕು ಅದೂ ಆಗದಿದ್ದರೆ ಒಂದು ಮನೆಯ ನಿವೇಶನದಷ್ಟು ಭೂಮಿಯನ್ನಾದರೂ ಕೊಡಬೇಕು ಅವನೂ ಸಹ ಪಾಪಮುಕ್ತನಾಗುವನು

೧೭ ಈ ಲೋಕದಲ್ಲಿ ಭೂದಾನವನ್ನು ಯಾವನು ಮಾಡುತ್ತಾನೋ ಆ ಮನುಷ್ಯನು ಭೂಮಿಯ ಮೇಲೆ ನೇಗಿಲಿನ ಸಾಲುಗಳು ಎಷ್ಟಿರುವುವೋ, ಹಸುವಿನ ಮೈಯಲ್ಲಿ ಕೂದಲುಗಳು ಎಷ್ಟು ಬೆಳೆದಿರುವುವೋ ಅಷ್ಟು ಸಂಖ್ಯೆಯ ವರ್ಷಗಳ ಕಾಲ ಶಿವಲೋಕದಲ್ಲಿ ಸುಖವಾಗಿ ಬಾಳುವನು

ಗಂಧರ್ವಕಿನ್ನರಸುರಾರಸುರಸಿದ್ಧಸಂಘೈ ।
ರಾಧೂತಚಾಮರಮುಪೇತ್ಯ ಮಹದ್ವಿಮಾನಂ ।
ಸಂಪೂಜ್ಯತೇ ಪಿತೃಪಿತಾಮಹಬಂಧುಯುಕ್ತಃ ।
ಶಂಭೋಃ ಪದಂ ವ್ರಜತಿ ಚಾಮರನಾಯಕಃ ಸಃ ||೧೮||

ಇಂದ್ರತ್ವಮಪ್ಯಧಿಗತಂ ಕ್ಷಯಮಭ್ಯುಪೈತಿ ।
ಗೋಭೂಮಿಲಾಂಗಲಧುರಂಧರಸಂಪ್ರದಾನಾತ್ ।
ತಸ್ಮಾದಘೌಘಪಟಲಕ್ಷಯಕಾರಿ ಭೂಮೇ ।
ರ್ದಾನಂ ವಿಧೇಯಮಭಿಭೂತಿಭವಾಭವಾಯ ||೧೯||

ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ಮಹಾದಾನಾನುಕೀರ್ತನೇ ಪಂಚ
ಲಾಂಗಲಪ್ರದಾನವಿಧಿರ್ನಾಮ ತ್ರ್ಯಶೀತ್ಯಧಿಕದ್ವಿಶತತಮೋಽಧ್ಯಾಯಃ

---

೧೮ ಎರಡು ಕಡೆಗಳಲ್ಲೂ ಚಾಮರಗಳನ್ನು ಬೀಸುತ್ತಿರಲು ಆತನು ಶ್ರೇಷ್ಠವಾದ ವಿಮಾನದಲ್ಲಿ ಕುಳಿತು ಗಂಧರ್ವರು, ಕಿನ್ನರರು, ಸುರರು, ಅಸುರರು, ಸಿದ್ಧರು ಇವರಿಂದ ಪೂಜೆಯನ್ನು ಕೈಗೊಳ್ಳುವನು ತಂದೆ, ತಾತ ಮೊದಲಾದ ಬಂಧುಗಳೊಡಗೂಡಿ ಈಶ್ವರನ ಸಾನ್ನಿಧ್ಯವನ್ನು ಸೇರುವನು ದೇವತೆಗಳ ನಾಯಕನೆನಿಸುವನು

೧೯ ಯಜ್ಞಯಾಗಾದಿಗಳಿಂದ ಸಂಪಾದಿಸಿದ ಇಂದ್ರಪದವಿಯೂ ಸಹ ಸ್ಥಿರವಾಗಿರುವುದಿಲ್ಲ ಪುಣ್ಯಫಲವನ್ನನುಭವಿಸಿದ ಮೇಲೆ ನಾಶವಾಗುತ್ತದೆ ಗೋದಾನ, ಭೂದಾನ, ಹಲದಾನ, ವೃಷಭದಾನಗಳಿಂದ ಬರುವ ಫಲವಾದರೋ ಶಾಶ್ವತವಾದುದು ಆದುದರಿಂದ ಭೂದಾನವನ್ನು ಮಾಡಬೇಕು ಅದರಿಂದ ಪಾಪರಾಶಿಗಳೆಲ್ಲವೂ ಕ್ಷಯಿಸಿಹೋಗುತ್ತವೆ ಸಕಲಸಂಪತ್ತುಗಳೂ ಪ್ರಾಪ್ತವಾಗುವುವು ಅಷ್ಟೇ ಅಲ್ಲ, ಮುಕ್ತಿಯೂ ಲಭಿಸುವುದು

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಚಿನ್ನದ ನೇಗಿಲನ್ನು ದಾನಮಾಡುವುದರಿಂದ ಬರುವ ಫಲವನ್ನೂ ಅದರ ವಿಧಾನವನ್ನೂ ಹೇಳಿದೆ

ಪುಣ್ಯದಿನದಲ್ಲಿ ತುಲಾಪುರುಷದಾನದ ವಿಧಿಯನ್ನನುಸರಿಸಿ ಲೋಕಪಾಲಕರ ಆವಾಹನವನ್ನೂ ಪೂಜೆಯನ್ನೂ ನಡೆಸಬೇಕು ಒಳ್ಳೆಯ ಮರದಿಂದಲೂ, ತನ್ನ ಶಕ್ತಿಗೆ ಅನುಸಾರವಾಗಿ ಚಿನ್ನದಿಂದಲೂ ಐದೈದು ನೇಗಿಲುಗಳನ್ನು ಮಾಡಿ ಗಂಧ ಪುಷ್ಪಾದಿಗಳಿಂದ ಅರ್ಚಿಸಬೇಕು ಬ್ರಾಹ್ಮಣದಂಪತಿಗಳನ್ನು ಪೂಜಿಸಿ ಸಕಲ ಪರಿಕರದೊಡನೆ ಹಾಸಿಗೆಯನ್ನೂ, ಕರೆಯುವ ಹಸುವನ್ನೂ ದಾನವಾಗಿ ಕೊಡಬೇಕು ಬಳಿಕ ಮಂತ್ರೋದಕಸ್ನಾನದಿಂದ ಪರಿಶುದ್ಧನಾಗಿ ಚಿನ್ನದ ನೇಗಿಲನ್ನು ಪ್ರದಕ್ಷಿಣಮಾಡಿ ಮಂತ್ರವನ್ನು ಉಚ್ಚರಿಸುತ್ತ ವೃಷಭವನ್ನೂ, ಭೂಮಿಯನ್ನೂ, ನೇಗಿಲುಗಳನ್ನೂ ಆಚಾರ್ಯನಿಗೂ ಋತ್ವಿಕ್ಕುಗಳಿಗೂ ಧಾರೆಯೆರೆಯಬೇಕು ಇದಕ್ಕೆ ಸಮಾನವಾದ ಮತ್ತೊಂದು ದಾನವಿಲ್ಲ ಸ್ವರ್ಗಾದಿಸುಖಭೋಗಗಳೂ ಮೋಕ್ಷವೂ ಇದರಿಂದ ಲಭಿಸುವುವು

ಶ್ರೀಮತ್ಸ್ಯಮಹಾಪುರಾಣದಲ್ಲಿ ಮಹಾದಾನಾನುಕೀರ್ತನದಲ್ಲಿ ಐದು ನೇಗಿಲುಗಳ ದಾನವಿಧಿಯೆಂಬ ಇನ್ನೂರೆಂಬತ್ತಮೂರನೆಯ ಅಧ್ಯಾಯವು ಮುಗಿದುದು

## ಅಥ ಚತುರಶೀತ್ಯಧಿಕದ್ವಿಶತತಮೋಽಧ್ಯಾಯಃ

|| ಮತ್ಸ್ಯ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಧರಾದಾನಮನುತ್ತಮಂ ।
ಪಾಪಕ್ಷಯಕರಂ ನೃಣಾಮಮಂಗಲ್ಯವಿನಾಶನಂ || ೧ ||

ಕಾರಯೇತ್ಪೃಥಿವೀಂ ಹೈಮೀಂ ಜಂಬೂದ್ವೀಪಾನುಕಾರಿಣೀಂ ।
ಮರ್ಯಾದಾಪರ್ವತವತೀಂ ಮಧ್ಯೇ ಮೇರುಸಮನ್ವಿತಾಂ || ೨ ||

ಲೋಕಪಾಲಾಷ್ಟಕೋಪೇತಾಂ ನವವರ್ಷಸಮನ್ವಿತಾಂ ।
ನದೀನದಸಮೋಪೇತಾಂ ಸಪ್ತಸಾಗರವೇಷ್ಟಿತಾಂ || ೩ ||

ಮಹಾರತ್ನಸಮಾಕೀರ್ಣಾಂ ವಸುರುದ್ರಾರ್ಕಸಂಯುತಾಂ ।
ಹೇಮ್ನಃ ಪಲಸಹಸ್ರೇಣ ತದರ್ಧೇನಾಥ ಶಕ್ತಿತಃ || ೪ ||

---

೧ ಮತ್ಸ್ಯರೂಪನಾದ ಭಗವಂತನು ಹೇಳಿದನು —ಇನ್ನುಮುಂದೆ ಅತ್ಯಂತ ಪವಿತ್ರವಾದ ಭೂದಾನದ ವಿಧಿಯನ್ನು ಹೇಳುವೆನು ಇದು ಮಾನವರ ಪಾಪಗಳನ್ನು ಕಳೆಯುವುದು ಅಮಂಗಲವನ್ನು ದೂರಮಾಡುವುದು

೨-೪ ಜಂಬೂದ್ವೀಪವನ್ನು ಹೋಲುವ ಭೂಮಂಡಲವನ್ನು ಚಿನ್ನದಿಂದ ನಿರ್ಮಿಸಬೇಕು ನಟ್ಟನಡುವೆ ಮೇರುಪರ್ವತವೂ ಉಳಿದ ಕಡೆಗಳಲ್ಲಿ ಎಲ್ಲೆಯ ಪರ್ವತಗಳೂ ಇರುವುವು ಭಾರತ ಮೊದಲಾದ ಒಂಬತ್ತು ವರ್ಷಗಳಿಗೂ, ನದೀ ನದಗಳೂ, ಸಪ್ತಸಾಗರಗಳೂ ಆಯಾ ಸ್ಥಳಗಳನ್ನು ಆಕ್ರಮಿಸುವುವು ಎಂಟುಜನ ಲೋಕಪಾಲಕರೂ, ಅಷ್ಟವಸುಗಳೂ, ಏಕಾದಶರುದ್ರರೂ, ದ್ವಾದಶಾದಿತ್ಯರೂ ಗೊತ್ತಾದ ಕಡೆಗಳಲ್ಲಿ ವಿರಾಜಿಸುತ್ತಿರುವರು ಉತ್ತಮವಾದ ರತ್ನಗಳು ಅಲ್ಲಲ್ಲಿ ಹೊಳೆಯುತ್ತಿರುವುವು ಸಾವಿರ, ಐನೂರು, ಮುನ್ನೂರು, ಇನ್ನೂರು ಅಥವಾ

ಶತತ್ರಯೇಣ ವಾ ಕುರ್ಯಾದ್ದ್ವಿಶತೇನ ಶತೇನ ವಾ ।
ಕುರ್ಯಾತ್ಪಂಚಪಲಾದೂರ್ಧ್ವಮಶಕ್ತೋಽಪಿ ವಿಚಕ್ಷಣಃ ॥ ೫ ॥

ತುಲಾಪುರುಷವತ್ಕುರ್ಯಾಲ್ಲೋಕೇಶಾವಾಹನಂ ಬುಧಃ ।
ಋತ್ವಿಙ್ಮಂಡಪಸಂಭಾರಭೂಷಣಾಚ್ಛಾದನಾದಿಕಂ ॥ ೬ ॥

ವೇದ್ಯಾಂ ಕೃಷ್ಣಾಜಿನಂ ಕೃತ್ವಾ ತಿಲಾನುಪರಿ ವಿನ್ಯಸೇತ್ ।
ತಥಾಷ್ಟಾದಶ ಧಾನ್ಯಾನಿ ರಸಾಂಶ್ಚ ಲವಣಾದಿಕಾನ್ ॥ ೭ ॥

ತಥಾಷ್ಟೌ ಪೂರ್ಣಕಲಶಾನ್ ಸಮಂತಾತ್ಪರಿಕಲ್ಪಯೇತ್ ।
ವಿತಾನಕಂ ಚ ಕೌಶೇಯಂ ಫಲಾನಿ ವಿವಿಧಾನಿ ಚ ॥ ೮ ॥

ತಥಾಂಶುಕಾನಿ ರಮ್ಯಾಣಿ ಶ್ರೀಖಂಡಶಕಲಾನಿ ಚ ।
ಇತ್ಯೇವಂ ಕಾರಯಿತ್ವಾ ತಾಮಧಿವಾಸನಪೂರ್ವಕಂ ॥ ೯ ॥

---

ಒಂದುನೂರು ಪಲಗಳ ಚಿನ್ನದಿಂದ ಇದನ್ನು ಮಾಡಿಸಬೇಕು ಯಜಮಾನನು ಎಷ್ಟು ಅಶಕ್ತನೇ ಆಗಿರಲಿ ಐದು ಪಲಗಳಿಗಿಂತ ಕಡಿಮೆಯಾಗಿ ಮಾತ್ರ ಇದು ತೂಗಬಾರದು

೬ ಶಾಸ್ತ್ರಜ್ಞನಾದ ಯಜಮಾನನು ತುಲಾಪುರುಷದಾನದಲ್ಲಿ ಮಾಡಿದಂತೆಯೇ ದಿಕ್ಪಾಲಕರನ್ನು ಆವಾಹಿಸಿ, ಋತ್ವಿಕ್ಕುಗಳನ್ನು ವರಿಸಿ, ಮಂಟಪವನ್ನು ನಿರ್ಮಿಸಿ, ವಸ್ತ್ರಭೂಷಣಾದಿ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಳ್ಳಬೇಕು

೭ ವೇದಿಕೆಯ ಮೇಲೆ ಕೃಷ್ಣಾಜಿನವನ್ನು ಹಾಸಿ ಅದರ ಮೇಲೆ ಎಳ್ಳನ್ನು ಹರಡಬೇಕು ಅಲ್ಲದೆ ಹದಿನೆಂಟು ಬಗೆಯ ಧಾನ್ಯಗಳು, ಉಪ್ಪು ಮುಂತಾದ ಆರು ಬಗೆಯ ರಸದ್ರವ್ಯಗಳು, ಎಂಟು ಪೂರ್ಣಕುಂಭಗಳು ಇವನ್ನು ಸುತ್ತಲೂ ಕ್ರಮವಾಗಿ ಇರಿಸಬೇಕು

೮-೯ ರೇಷ್ಮೆಯ ವಸ್ತ್ರದಿಂದ ಮೇಲ್ಗಟ್ಟನ್ನು ಕಟ್ಟಬೇಕು ಬಗೆಬಗೆಯ ಹಣ್ಣುಗಳು, ಮನೋಹರವಾದ ವಸ್ತ್ರಗಳು, ಶ್ರೀಗಂಧದ ತುಂಡುಗಳು ಇವನ್ನೆಲ್ಲ ಯಥಾವಿಧಿಯಾಗಿ ಇಡಬೇಕು ಈರೀತಿಯಾಗಿ ಸುವರ್ಣಭೂಮಂಡಲಕ್ಕೆ ಧಾನ್ಯಾದಿ ಸಾಮಗ್ರಿಗಳಿಂದ ಸಂಸ್ಕಾರವನ್ನು ನಡೆಸಬೇಕು.

ಶುಕ್ಲಮಾಲ್ಯಾಂಬರಧರಃ ಶುಕ್ಲಾಭರಣಭೂಷಿತಃ ।
ಪ್ರದಕ್ಷಿಣಂ ತತಃ ಕೃತ್ವಾ ಗೃಹೀತಕುಸುಮಾಂಜಲಿಃ ॥೧೦॥

ಪುಣ್ಯಂ ಕಾಲಮಥಾಸಾದ್ಯ ಮಂತ್ರಾನೇತಾನುದೀರಯೇತ್ ।
ನಮಸ್ತೇ ಸರ್ವದೇವಾನಾಂ ತ್ವಮೇವ ಭವನಂ ಯತಃ ॥೧೧॥

ಧಾತ್ರೀ ತ್ವಂ ಸರ್ವಭೂತಾನಾಮತಃ ಪಾಹಿ ವಸುಂಧರೇ ।
ವಸು ಧಾರಯಸೇ ಯಸ್ಮಾದ್ವಸು ಚಾತೀವ ನಿರ್ಮಲಂ ॥೧೨॥

ವಸುಂಧರಾ ತತೋ ಜಾತಾ ತಸ್ಮಾತ್ಪಾಹಿ ಭಯಾದಲಂ ।
ಚತುರ್ಮುಖೋಽಪಿ ನೋ ಗಚ್ಛೇದ್ಯಸ್ಮಾದಂತಂ ತವಾಚಲೇ ॥೧೩॥

ಅನಂತಾಯೈ ನಮಸ್ತಸ್ಮಾತ್ಪಾಹಿ ಸಂಸಾರಕರ್ದಮಾತ್ ।
ತ್ವಮೇವ ಲಕ್ಷ್ಮೀರ್ಗೋವಿಂದೇ ಶಿವೇ ಗೌರೀತಿ ಚಾಽಽಸ್ಥಿತಾ ॥೧೪॥

---

೧೦ ಪುಣ್ಯಕಾಲವು ಬಂದಬಳಿಕ ಯಜಮಾನನು ಬಿಳಿಯ ಹೂಮಾಲೆಯನ್ನೂ, ಬಿಳಿಯ ವಸ್ತ್ರವನ್ನೂ ಧರಿಸಿ, ಬಿಳಿಯಬಣ್ಣದ ಒಡವೆಗಳನ್ನು ತೊಟ್ಟು, ಬೊಗಸೆಯಲ್ಲಿ ಹೂಗಳನ್ನು ತುಂಬಿಕೊಂಡು ಪ್ರದಕ್ಷಿಣ ಮಾಡಿ ಈ ಮಂತ್ರಗಳನ್ನು ಹೇಳಬೇಕು

೧೧-೧೨ ಎಲೌ ಭೂದೇವೀ, ನಿನಗೆ ನಮಸ್ಕಾರ ಸಕಲ ದೇವತೆಗಳಿಗೂ ನೀನೇ ನೆಲೆಯಾಗಿರುವೆ ಎಲ್ಲಪ್ರಾಣಿಗಳನ್ನೂ ನೀನು ಧರಿಸಿರುವೆ ಆದುದರಿಂದ ನನ್ನನ್ನೂ ಸಲಹು ನೀನು ಚಿನ್ನ, ಬೆಳ್ಳಿ, ರತ್ನ ಮುಂತಾದ ಬಹುಮನೋಹರವಾದ ಸಂಪತ್ತನ್ನು ಒಳಗೊಂಡಿರುವೆ ಆದುದರಿಂದ ನಿನಗೆ ವಸುಂಧರೆಯೆಂಬ ಪ್ರಖ್ಯಾತಿ ಬಂದಿದೆ ಭಯವನ್ನು ಸಂಪೂರ್ಣವಾಗಿ ತೊಲಗಿಸಿ ನಮ್ಮನ್ನು ರಕ್ಷಿಸು

೧೩ ನಿನ್ನಲ್ಲಿರುವ ಪರ್ವತಗಳ ತುದಿಯನ್ನು ಮುಟ್ಟಲು ಬ್ರಹ್ಮನಿಗೂ ಸಾಧ್ಯವಾಗದು ಆದಕಾರಣ ನೀನು ಅನಂತೆಯೆನಿಸಿಕೊಂಡಿರುವೆ ಈ ಸಂಸಾರವೆಂಬ ಕೆಸರಿನಿಂದ ನಮ್ಮನ್ನು ಪಾರುಮಾಡಿ ರಕ್ಷಿಸು

೧೪-೧೫ ದೇವೀ, ವಿಷ್ಣುವಿನ ಸಮೀಪದಲ್ಲಿ ಲಕ್ಷ್ಮಿಯೆಂದೂ ಈಶ್ವರನ ಪಕ್ಕದಲ್ಲಿ ಪಾರ್ವತಿಯೆಂದೂ, ಬ್ರಹ್ಮನ ಪಾರ್ಶ್ವದಲ್ಲಿ ಗಾಯತ್ರಿಯೆಂದೂ ನೀನು

ಗಾಯತ್ರೀ ಬ್ರಹ್ಮಣಃ ಪಾರ್ಶ್ವೇ ಜ್ಯೋತ್ಸ್ನಾ ಚಂದ್ರೇ ರವೌ ಪ್ರಭಾ ।
ಬುದ್ಧಿರ್ಬೃಹಸ್ಪತೌ ಖ್ಯಾತಾ ಮೇಧಾ ಮುನಿಷು ಸಂಸ್ಥಿತಾ ॥೧೫॥

ವಿಶ್ವಂ ವ್ಯಾಪ್ಯ ಸ್ಥಿತಾ ಯಸ್ಮಾತ್ತತೋ ವಿಶ್ವಂಭರಾ ಸ್ಮೃತಾ ।
ಧೃತಿಃ ಸ್ಥಿತಿಃ ಕ್ಷಮಾ ಕ್ಷೋಣೀ ಪೃಥ್ವೀ ವಸುಮತೀ ರಸಾ ॥೧೬॥

ಏತಾಭಿರ್ಮೂರ್ತಿಭಿಃ ಪಾಹಿ ದೇವಿ ಸಂಸಾರಸಾಗರಾತ್ ।
ಏವಮುಚ್ಚಾರ್ಯ ತಾಂ ದೇವೀಂ ಬ್ರಾಹ್ಮಣೇಭ್ಯೋ ನಿವೇದಯೇತ್ ॥೧೭॥

ಧರಾರ್ಧಂ ವಾ ಚತುರ್ಭಾಗಂ ಗುರವೇ ಪ್ರತಿಪಾದಯೇತ್ ।
ಶೇಷಂ ಚೈವಾಥ ಋತ್ವಿಗ್ಭ್ಯಃ ಪ್ರಣಿಪತ್ಯ ವಿಸರ್ಜಯೇತ್ ॥೧೮॥

ಅನೇನ ವಿಧಿನಾ ಯಸ್ತು ದದ್ಯಾದ್ಧೇಮಧರಾಂ ಶುಭಾಂ ।
ಪುಣ್ಯಕಾಲೇ ತು ಸಂಪ್ರಾಪ್ತೇ ಸ ಪದಂ ಯಾತಿ ವೈಷ್ಣವಂ ॥೧೯॥

---

ಪ್ರಸಿದ್ಧಳಾಗಿರುವೆ ಚಂದ್ರನಲ್ಲಿ ಬೆಳದಿಂಗಳೂ, ಸೂರ್ಯನಲ್ಲಿ ಕಾಂತಿಯೂ, ಬೃಹಸ್ಪತಿಯಲ್ಲಿ ಬುದ್ಧಿಯೂ, ಮುನಿಗಳಲ್ಲಿ ಜ್ಞಾನವೂ ನೀನೇ ಆಗಿರುವೆ

೧೬-೧೭ ಎಲ್ಲವನ್ನೂ ವ್ಯಾಪಿಸಿಕೊಂಡಿರುವೆಯಾದ ಕಾರಣ ನಿನ್ನನ್ನು ವಿಶ್ವಂಭರೆಯೆಂದು ಕರೆಯುವರು ಧೃತಿ, ಸ್ಥಿತಿ, ಕ್ಷಮೆ, ಕ್ಷೋಣಿ, ಪೃಥ್ವಿ, ವಸುಮತಿ, ರಸೆ ಎಂಬುವೆಲ್ಲ ನಿನ್ನ ರೂಪಭೇದಗಳು ದೇವೀ, ಇವುಗಳ ಮೂಲಕ ನನ್ನನ್ನು ಈ ಸಂಸಾರಸಾಗರದಿಂದ ಕಾಪಾಡು ಹೀಗೆಂದು ಹೇಳಿ ಆ ಭೂಮಂಡಲ ವನ್ನು ಬ್ರಾಹ್ಮಣರಿಗೆ ದಾನಮಾಡಬೇಕು

೧೮ ಆ ಸುವರ್ಣಭೂಮಿಯಲ್ಲಿ ಅರ್ಧವನ್ನೋ ಕಾಲುಪಾಲನ್ನೋ ಆಚಾರ್ಯನಿಗೆ ಕೊಡಬೇಕು ಉಳಿದುದನ್ನು ಋತ್ವಿಕ್ಕುಗಳಿಗೆ ಒಪ್ಪಿಸಿ ನಮಸ್ಕರಿಸ ಬೇಕು

೧೯ ಮನ್ವಾದಿ ಪುಣ್ಯಕಾಲಗಳೊದಗಿದಾಗ ಈ ವಿಧಾನದಿಂದ ಶುಭಕರ ವಾದ ಈ ಸುವರ್ಣಭೂಮಂಡಲದಾನವನ್ನು ಮಾಡುವ ಪುರುಷನು ವಿಷ್ಣುವಿನ ಸಾನ್ನಿಧ್ಯವನ್ನು ಸೇರುವನು

ವಿಮಾನೇನಾರ್ಕವರ್ಣೇನ ಕಿಂಕಿಣೀಜಾಲಮಾಲಿನಾ ।
ನಾರಾಯಣಪುರಂ ಗತ್ವಾ ಕಲ್ಪತ್ರಯಮಥಾಽಽವಸೇತ್ ।
ಪಿತೄನ್ ಪುತ್ರಾಂಶ್ಚ ಪೌತ್ರಾಂಶ್ಚ ತಾರಯೇದೇಕವಿಂಶತಿಂ ॥೨೦॥

ಇತಿ ಪಠತಿ ಯ ಇತ್ಥಂ ಯಃ ಶೃಣೋತಿ ಪ್ರಸಂಗಾ
ದಪಿ ಕಲುಷವಿತಾನೈರ್ಮುಕ್ತದೇಹಃ ಸಮಂತಾತ್ ।
ದಿವಮಮರವಧೂಭಿರ್ಯಾತಿ ಸಂಪ್ರಾರ್ಥ್ಯಮಾನೋ
ಪದಮಮರಸಹಸ್ರೈಃ ಸೇವಿತಂ ಚಂದ್ರಮೌಲೇಃ ॥೨೧॥

ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ಮಹಾದಾನಾನುಕೀರ್ತನೇ
ಹೇಮಪೃಥಿವೀದಾನಮಾಹಾತ್ಮ್ಯಂ ನಾಮ ಚತುರಶೀತ್ಯಧಿಕ-
ದ್ವಿಶತತಮೋಽಧ್ಯಾಯಃ

---

೨೦ ಕಿರುಗಂಟೆಗಳ ಸಾಲಿನಿಂದ ಮನೋಹರವಾಗಿ ಧ್ವನಿಮಾಡುತ್ತ, ಸೂರ್ಯನಂತೆ ಪ್ರಕಾಶಿಸುವ ವಿಮಾನದಲ್ಲಿ ಕುಳಿತು, ನಾರಾಯಣನ ದಿವ್ಯನಗರ ವನ್ನೈದಿ ಮೂರು ಕಲ್ಪಗಳ ಕಾಲ ಅಲ್ಲಿ ವಾಸಿಸುವನು ಇಪ್ಪತ್ತೊಂದು ತಲೆಯ ವರೆಗೆ ತನ್ನ ಪಿತೃಗಳನ್ನೂ, ಪುತ್ರಪೌತ್ರರನ್ನೂ ಸದ್ಗತಿಗೊಯ್ಯುವನು

೨೧ ಈ ಮಹಾದಾನವರ್ಣನವನ್ನು ಯಾವನು ಪಾರಾಯಣ ಮಾಡು ತ್ತಾನೋ, ಅಥವಾ ಪ್ರಸಂಗವಶದಿಂದ ಕೇಳುತ್ತಾನೋ ಅವನು ಸಕಲಪಾಪ ಗಳಿಂದಲೂ ಬಿಡುಗಡೆಹೊಂದುವನು ದಿವ್ಯದೇಹವನ್ನು ಧರಿಸಿ ಸುರಸುಂದರಿ ಯರಿಂದ ಪ್ರಾರ್ಥಿತನಾಗಿ ಸ್ವರ್ಗವನ್ನೈದುವನು ಬಳಿಕ ಸಾವಿರಾರು ದೇವಗಣಗಳು ಓಲೈಸುತ್ತಿರುವ ಮಹಾದೇವನ ಸಾನ್ನಿಧ್ಯವನ್ನು ಸೇರುವನು

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಸುವರ್ಣಭೂಮಂಡಲದಾನದ ವಿಧಿಯನ್ನು ವರ್ಣಿಸಿದೆ

ತನ್ನ ಯೋಗ್ಯತೆಗೆ ತಕ್ಕಂತೆ ಚಿನ್ನದಿಂದ ಜಂಬೂದ್ವೀಪದ ಆಕಾರವಾಗಿ ಭೂಮಂಡಲವನ್ನು ರಚಿಸಿ, ಅದರಲ್ಲಿ ಭಾರತವೊದಲಾದ ಒಂಬತ್ತು ವರ್ಷಗಳನ್ನೂ, ಪರ್ವತಗಳನ್ನೂ, ಸಾಗರಗಳನ್ನೂ ನಿರ್ಮಿಸಬೇಕು ತುಲಾಪುರುಷದಾನವಿಧಿಯಲ್ಲಿ ನಡೆಸಿದಂತೆಯೇ ಲೋಕಪಾಲಕರ ಆವಾಹನೆ, ಪೂಜೆ, ಹೋಮ ಇವೆಲ್ಲವೂ ನಡೆಯುವುವು ಯಥಾವಿಧಿಯಾಗಿ ಧಾನ್ಯ ಗಂಧಪುಷ್ಪ ಧೂಪಾದಿಗಳಿಂದ ಸಂಸ್ಕಾರ ವನ್ನು ಮಾಡಿದ ಬಳಿಕ, ಯಜಮಾನನು ಆ ಭೂಮಂಡಲವನ್ನು ಪ್ರದಕ್ಷಿಣೆಮಾಡಿ, ಪ್ರಾರ್ಥಿಸಿ, ಋತ್ವಿಜರಿಗೂ ಆಚಾರ್ಯನಿಗೂ ಅದನ್ನು ದಾನಮಾಡುವನು ಈ ದಾನ ದಿಂದ ಪಾಪಗಳೆಲ್ಲವೂ ಪರಿಹಾರವಾಗುವುವು ಇಪ್ಪತ್ತೊಂದು ತಲೆಯುವರೆಗೆ ಪಿತೃಗಳೂ ಪುತ್ರಪೌತ್ರರೂ ಸದ್ಗತಿಯನ್ನು ಪಡೆಯುವರು

ಶ್ರೀಮತ್ಸ್ಯಮಹಾಪುರಾಣದಲ್ಲಿ ಮಹಾದಾನಾನುಕೀರ್ತನದಲ್ಲಿ ಸುವರ್ಣ ಭೂಮಂಡಲದಾನವೆಂಬ ಇನ್ನೂರೆಂಬತ್ತನಾಲ್ಕನೆಯ ಅಧ್ಯಾಯವು ಮುಗಿದುದು

## ಅಥ ಪಂಚಾಶೀತ್ಯಧಿಕದ್ವಿಶತತಮೋಽಧ್ಯಾಯಃ

॥ ಮತ್ಸ್ಯ ಉವಾಚ ॥

ಅಥಾತಃ ಸಂಪ್ರವಕ್ಷ್ಯಾಮಿ ಮಹಾದಾನಮನುತ್ತಮಂ ।
ವಿಶ್ವಚಕ್ರಮಿತಿ ಖ್ಯಾತಂ ಮಹಾಪಾತಕನಾಶನಂ ॥ ೧ ॥

ತಪನೀಯಸ್ಯ ಶುದ್ಧಸ್ಯ ವಿಶ್ವಚಕ್ರಂ ತು ಕಾರಯೇತ್ ।
ಶ್ರೇಷ್ಠಂ ಪಲಸಹಸ್ರೇಣ ತದರ್ಧೇನ ತು ಮಧ್ಯಮಂ ॥ ೨ ॥

ತಸ್ಯಾರ್ಧೇನ ಕನಿಷ್ಠಂ ಸ್ಯಾದ್ವಿಶ್ವಚಕ್ರಮುದಾಹೃತಂ ।
ಅನ್ಯದ್ವಿಂಶತ್ಪಲಾದೂರ್ಧ್ವಮಶಕ್ತೋಽಪಿ ನಿವೇದಯೇತ್ ॥ ೩ ॥

ಷೋಡಶಾರಂ ತತಶ್ಚಕ್ರಂ ಭ್ರಮನ್ನೇಮ್ಯಷ್ಟಕಾವೃತಂ ।
ನಾಭಿಪದ್ಮೇ ಸ್ಥಿತಂ ವಿಷ್ಣುಂ ಯೋಗಾರೂಢಂ ಚತುರ್ಭುಜಂ ॥ ೪ ॥

---

೧ ಮತ್ಸ್ಯರೂಪನಾದ ಭಗವಂತನು ಹೇಳಿದನು —ಇನ್ನುಮುಂದೆ ವಿಶ್ವ ಚಕ್ರವೆಂಬ ಅತಿಶ್ರೇಷ್ಠವಾದ ಮಹಾದಾನದ ವಿಧಾನವನ್ನು ಹೇಳುವೆನು ಅದು ಮಹಾಪಾತಕಗಳನ್ನು ಕಳೆಯುವುದು

೨-೩ ಅಪ್ಪಟ ಚಿನ್ನದಿಂದ ವಿಶ್ವಚಕ್ರವನ್ನು ನಿರ್ಮಿಸಬೇಕು ಅದು ಸಾವಿರ ಪಲಗಳ ತೂಕವಿದ್ದರೆ ಉತ್ತಮವೆಂದೂ, ಅದರಲ್ಲಿ ಅರ್ಧವಿದ್ದರೆ ಮಧ್ಯಮವೆಂದೂ ಅದರಲ್ಲೂ ಅರ್ಧವಿದ್ದರೆ ಕನಿಷ್ಠವೆಂದೂ ಎನಿಸಿಕೊಳ್ಳುವುದು ಎಷ್ಟೇ ಅಶಕ್ತನಾದರೂ ಇಪ್ಪತ್ತು ಪಲ ಚಿನ್ನಕ್ಕಿಂತ ಕಡಿಮೆಯಿಲ್ಲದಂತೆ ಮಾಡಿಸಿ ದಾನಮಾಡಬೇಕು

೪ ಹೀಗೆ ನಿರ್ಮಿಸಿದ ಚಕ್ರಕ್ಕೆ ಹದಿನಾರು ಅರೆಗಾಲುಗಳೂ ಎಂಟು ಸುತ್ತುಪಟ್ಟಿಗಳೂ ಇರುವುವು ಪದ್ಮಾಕಾರವಾದ ಗುಂಬದಲ್ಲಿ ಯೋಗಾಸಕ್ತನಾದ ಮಹಾವಿಷ್ಣುವು ಶಂಖಚಕ್ರಗಳನ್ನು ಧರಿಸಿ ನಾಲ್ಕು ತೋಳುಗಳಿಂದ ವಿರಾಜಿಸುವನು. ಅವನ ಪಕ್ಕದಲ್ಲಿ ಅಷ್ಟಮಹಿಷಿಯರು ಕಂಗೊಳಿಸುತ್ತಿರುವರು

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಸುವರ್ಣಭೂಮಂಡಲದಾನದ ವಿಧಿಯನ್ನು ವರ್ಣಿಸಿದೆ

ತನ್ನ ಯೋಗ್ಯತೆಗೆ ತಕ್ಕಂತೆ ಚಿನ್ನದಿಂದ ಜಂಬೂದ್ವೀಪದ ಆಕಾರವಾಗಿ ಭೂಮಂಡಲವನ್ನು ರಚಿಸಿ, ಅದರಲ್ಲಿ ಭಾರತವೊದಲಾದ ಒಂಬತ್ತು ವರ್ಷಗಳನ್ನೂ, ಪರ್ವತಗಳನ್ನೂ, ಸಾಗರಗಳನ್ನೂ ನಿರ್ಮಿಸಬೇಕು ತುಲಾಪುರುಷದಾನವಿಧಿಯಲ್ಲಿ ನಡೆಸಿದಂತೆಯೇ ಲೋಕಪಾಲಕರ ಆವಾಹನೆ, ಪೂಜೆ, ಹೋಮ ಇವೆಲ್ಲವೂ ನಡೆಯುವುವು ಯಥಾವಿಧಿಯಾಗಿ ಧಾನ್ಯ ಗಂಧಪುಷ್ಪ ಧೂಪಾದಿಗಳಿಂದ ಸಂಸ್ಕಾರ ವನ್ನು ಮಾಡಿದ ಬಳಿಕ, ಯಜಮಾನನು ಆ ಭೂಮಂಡಲವನ್ನು ಪ್ರದಕ್ಷಿಣೆಮಾಡಿ, ಪ್ರಾರ್ಥಿಸಿ, ಋತ್ವಿಜರಿಗೂ ಆಚಾರ್ಯನಿಗೂ ಅದನ್ನು ದಾನಮಾಡುವನು ಈ ದಾನ ದಿಂದ ಪಾಪಗಳೆಲ್ಲವೂ ಪರಿಹಾರವಾಗುವುವು ಇಪ್ಪತ್ತೊಂದು ತಲೆಯವರೆಗೆ ಪಿತೃಗಳೂ ಪುತ್ರಪೌತ್ರರೂ ಸದ್ಗತಿಯನ್ನು ಪಡೆಯುವರು

ಶ್ರೀಮತ್ಸ್ಯಮಹಾಪುರಾಣದಲ್ಲಿ ಮಹಾದಾನಾನುಕೀರ್ತನದಲ್ಲಿ ಸುವರ್ಣ
ಭೂಮಂಡಲದಾನವೆಂಬ ಇನ್ನೂರೆಂಬತ್ತನಾಲ್ಕನೆಯ ಅಧ್ಯಾಯವು ಮುಗಿದುದು

## ಅಥ ಪಂಚಾಶೀತ್ಯಧಿಕದ್ವಿಶತತಮೋಽಧ್ಯಾಯಃ

॥ ಮತ್ಸ್ಯ ಉವಾಚ ॥

ಅಥಾತಃ ಸಂಪ್ರವಕ್ಷ್ಯಾಮಿ ಮಹಾದಾನಮನುತ್ತಮಂ ।
ವಿಶ್ವಚಕ್ರಮಿತಿ ಖ್ಯಾತಂ ಮಹಾಪಾತಕನಾಶನಂ ॥ ೧ ॥

ತಪನೀಯಸ್ಯ ಶುದ್ಧಸ್ಯ ವಿಶ್ವಚಕ್ರಂ ತು ಕಾರಯೇತ್ ।
ಶ್ರೇಷ್ಠಂ ಪಲಸಹಸ್ರೇಣ ತದರ್ಧೇನ ತು ಮಧ್ಯಮಂ ॥ ೨ ॥

ತಸ್ಯಾರ್ಧೇನ ಕನಿಷ್ಠಂ ಸ್ಯಾದ್ವಿಶ್ವಚಕ್ರಮುದಾಹೃತಂ ।
ಅನ್ಯದ್ವಿಂಶತ್ಪಲಾದೂರ್ಧ್ವಮಶಕ್ತೋಽಪಿ ನಿವೇದಯೇತ್ ॥ ೩ ॥

ಷೋಡಶಾರಂ ತತಶ್ಚಕ್ರಂ ಭ್ರಮನ್ನೇಮ್ಯಷ್ಟಕಾವೃತಂ ।
ನಾಭಿಪದ್ಮೇ ಸ್ಥಿತಂ ವಿಷ್ಣುಂ ಯೋಗಾರೂಢಂ ಚತುರ್ಭುಜಂ ॥ ೪ ॥

---

೧ ಮತ್ಸ್ಯರೂಪನಾದ ಭಗವಂತನು ಹೇಳಿದನು —ಇನ್ನುಮುಂದೆ ವಿಶ್ವ ಚಕ್ರವೆಂಬ ಅತಿಶ್ರೇಷ್ಠವಾದ ಮಹಾದಾನದ ವಿಧಾನವನ್ನು ಹೇಳುವೆನು ಅದು ಮಹಾಪಾತಕಗಳನ್ನು ಕಳೆಯುವುದು

೨-೩ ಅಪ್ಪಟ ಚಿನ್ನದಿಂದ ವಿಶ್ವಚಕ್ರವನ್ನು ನಿರ್ಮಿಸಬೇಕು ಅದು ಸಾವಿರ ಪಲಗಳ ತೂಕವಿದ್ದರೆ ಉತ್ತಮವೆಂದೂ, ಅದರಲ್ಲಿ ಅರ್ಧವಿದ್ದರೆ ಮಧ್ಯಮವೆಂದೂ ಅದರಲ್ಲೂ ಅರ್ಧವಿದ್ದರೆ ಕನಿಷ್ಠವೆಂದೂ ಎನಿಸಿಕೊಳ್ಳುವುದು ಎಷ್ಟೇ ಅಶಕ್ತನಾದರೂ ಇಪ್ಪತ್ತು ಪಲ ಚಿನ್ನಕ್ಕಿಂತ ಕಡಿಮೆಯಿಲ್ಲದಂತೆ ಮಾಡಿಸಿ ದಾನಮಾಡಬೇಕು

೪ ಹೀಗೆ ನಿರ್ಮಿಸಿದ ಚಕ್ರಕ್ಕೆ ಹದಿನಾರು ಅರೆಗಾಲುಗಳೂ ಎಂಟು ಸುತ್ತುಪಟ್ಟಿಗಳೂ ಇರುವುವು ಪದ್ಮಾಕಾರವಾದ ಗುಂಬದಲ್ಲಿ ಯೋಗಾಸಕ್ತನಾದ ಮಹಾವಿಷ್ಣುವು ಶಂಖಚಕ್ರಗಳನ್ನು ಧರಿಸಿ ನಾಲ್ಕು ತೋಳುಗಳಿಂದ ವಿರಾಜಿಸುವನು. ಅವನ ಪಕ್ಕದಲ್ಲಿ ಅಷ್ಟಮಹಿಷಿಯರು ಕಂಗೊಳಿಸುತ್ತಿರುವರು

ಶಂಖಚಕ್ರೇऽಸ್ಯ ಪಾರ್ಶ್ವೇ ತು ದೇವ್ಯಷ್ಟಕಸಮಾವೃತಂ ।
ದ್ವಿತೀಯಾವರಣೇ ತದ್ವತ್ಪೂರ್ವತೋ ಜಲಶಾಯಿನಂ ॥ ೫ ॥

ಅತ್ರಿರ್ಭೃಗುರ್ವಸಿಷ್ಠಶ್ಚ ಬ್ರಹ್ಮಾ ಕಶ್ಯಪ ಏವ ಚ ।
ಮತ್ಸ್ಯಃ ಕೂರ್ಮೋ ವರಾಹಶ್ಚ ನರಸಿಂಹೋऽಥ ವಾಮನಃ ॥ ೬ ॥

ರಾಮೋ ರಾಮಶ್ಚ ಕೃಷ್ಣಶ್ಚ ಬುದ್ಧಃ ಕಲ್ಕೀತಿ ಚ ಕ್ರಮಾತ್ ।
ತೃತೀಯಾವರಣೇ ಗೌರೀ ಮಾತೃಭಿರ್ವಸುಭಿರ್ಯುತಾ ॥ ೭ ॥

ಚತುರ್ಥೇ ದ್ವಾದಶಾದಿತ್ಯಾ ವೇದಾಶ್ಚತ್ವಾರ ಏವ ಚ ।
ಪಂಚಮೇ ಪಂಚಭೂತಾನಿ ರುದ್ರಾಶ್ಚೈಕಾದಶೈವ ತು ॥ ೮ ॥

ಲೋಕಪಾಲಾಷ್ಟಕಂ ಷಷ್ಠೇ ದಿಙ್ಮಾತಂಗಾಸ್ತಥೈವ ಚ ।
ಸಪ್ತಮೇऽಸ್ತ್ರಾಣಿ ಸರ್ವಾಣಿ ಮಂಗಲಾನಿ ಚ ಕಾರಯೇತ್ ॥ ೯ ॥

---

೫-೬ ಎರಡನೆಯ ಆವರಣದಲ್ಲಿ ಪೂರ್ವದಿಕ್ಕಿನಿಂದ ಪ್ರಾರಂಭಿಸಿ ಸಮುದ್ರದಲ್ಲಿ ಪವಡಿಸಿರುವ ಮಹಾವಿಷ್ಣು, ಅತ್ರಿ, ಭೃಗು, ವಸಿಷ್ಠ, ಬ್ರಹ್ಮ, ಕಶ್ಯಪ, ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಘುರಾಮ, ಶ್ರೀಕೃಷ್ಣ, ಬುದ್ಧ, ಕಲ್ಕಿ ಇವರನ್ನು ಒಂದೊಂದು ಅರೆಗಾಲಿನಲ್ಲಿ ಒಬ್ಬೊಬ್ಬರಂತೆ ನಿರ್ಮಿಸಬೇಕು

೭-೮ ಮೂರನೆಯ ಆವರಣದಲ್ಲಿ ಪಾರ್ವತಿಯೂ, ಸಪ್ತಮಾತೃಗಳೂ, ಅಷ್ಟವಸುಗಳೂ ನೆಲಸಿರುವರು ನಾಲ್ಕನೆಯದರಲ್ಲಿ ದ್ವಾದಶಾದಿತ್ಯರೂ ನಾಲ್ವರು ವೇದಪುರುಷರೂ ವಿರಾಜಿಸುತ್ತಿರುವರು ಐದನೆಯದರಲ್ಲಿ ಪಂಚಭೂತಗಳೂ ಏಕಾದಶರುದ್ರರೂ ಪ್ರಕಾಶಿಸುವರು

೯ ಆರನೆಯ ಆವರಣದಲ್ಲಿ ಅಷ್ಟದಿಕ್ಪಾಲಕರನ್ನೂ ಅಷ್ಟದಿಗ್ಗಜಗಳನ್ನೂ ವಿರಚಿಸಬೇಕು ಏಳನೆಯದರಲ್ಲಿ ಮಹಾವಿಷ್ಣುವಿನ ಮಂಗಲಕರವಾದ ಹದಿನಾರು ದಿವ್ಯಾಯುಧಗಳನ್ನು ನಿರ್ಮಿಸಬೇಕು

ಅಂತರಾಂತರತೋ ದೇವಾನ್ ವಿನ್ಯಸೇದಷ್ಟಮೇ ಪುನಃ ।
ತುಲಾಪುರುಷವಚ್ಛೇಷಂ ಸಮಂತಾತ್ಪರಿಕಲ್ಪಯೇತ್ ॥೧೦॥

ಋತ್ವಿಙ್ಮಂಡಪಸಂಭಾರಭೂಷಣಾಚ್ಛಾದನಾದಿಕಂ ।
ವಿಶ್ವಚಕ್ರಂ ತತಃ ಕುರ್ಯಾತ್ಕೃಷ್ಣಾಜಿನತಿಲೋಪರಿ ॥೧೧॥

ತಥಾಷ್ಟಾದಶ ಧಾನ್ಯಾನಿ ರಸಾಂಶ್ಚ ಲವಣಾದಿಕಾನ್ ।
ಪೂರ್ಣಕುಂಭಾಷ್ಟಕಂ ಚೈವ ವಸ್ತ್ರಾಣಿ ವಿವಿಧಾನಿ ಚ ॥೧೨॥

ಮಾಲ್ಯೇಕ್ಷುಫಲರತ್ನಾನಿ ವಿತಾನಂ ಚಾಽಪಿ ಕಾರಯೇತ್ ।
ತತೋ ಮಂಗಲಶಬ್ದೇನ ಸ್ನಾತಃ ಶುಕ್ಲಾಂಬರೋ ಗೃಹೀ ।
ಹೋಮಾಧಿವಾಸನಾಂತೇ ವೈ ಗೃಹೀತಕುಸುಮಾಂಜಲಿಃ ॥೧೩॥

---

೧೦ ಕೊನೆಯದಾದ ಎಂಟನೆಯ ಆವರಣದಲ್ಲಾದರೋ ಸಕಲದೇವತೆಗಳನ್ನೂ ಎಡೆಬಿಡದೆ ವಿರಚಿಸಬೇಕು ಬಳಿಕ ತುಲಾಪುರುಷದಾನದಂತೆ ಋತ್ವಿಗ್ವರಣ, ಮಂಟಪನಿರ್ಮಾಣ, ವಸ್ತ್ರಭೂಷಣಾದಿ ಸಾಮಗ್ರೀಸಂಗ್ರಹ ಇವುಗಳನ್ನು ಮಾಡಬೇಕು

೧೧-೧೨ ಬಳಿಕ ಕೃಷ್ಣಾಜಿನದ ಮೇಲೆ ಎಳ್ಳನ್ನು ಹರಡಿ ಅದರಮೇಲೆ ವಿಶ್ವಚಕ್ರವನ್ನಿರಿಸಬೇಕು ಅದರ ಸುತ್ತಲೂ ಹದಿನೆಂಟು ಬಗಯ ಧಾನ್ಯಗಳು, ಉಪ್ಪು ಮೊದಲಾದ ಷಡ್ರಸವಸ್ತುಗಳು, ಎಂಟು ಪೂರ್ಣಕುಂಭಗಳು, ಬಗೆಬಗೆಯ ವಸ್ತ್ರಗಳು, ಹೂ, ಹಣ್ಣು, ಕಬ್ಬು, ರತ್ನ ಇವುಗಳನ್ನು ಕ್ರಮವಾಗಿ ಇಡಬೇಕು ಮೇಲುಗಟ್ಟನ್ನು ಕಟ್ಟಬೇಕು

೧೩ ಅನಂತರ ಮಂಗಲವಾದ್ಯಗಳು ಧ್ವನಿಮಾಡುತ್ತಿರಲು, ಹೋಮವೂ ಅಧಿವಾಸನವೂ ಮುಗಿದ ಮೇಲೆ ಯಜಮಾನನು ಮಂತ್ರೋದಕದಿಂದ ಸ್ನಾನ ಮಾಡಿ, ಬಿಳಿಯ ಪಂಚೆಯುನ್ನುಟ್ಟು, ಬೊಗಸೆಯಲ್ಲಿ ಹೂಗಳನ್ನು ತುಂಬಿಕೊಂಡು, ಮೂರುಸಾರಿ ವಿಶ್ವಚಕ್ರವನ್ನು ಪ್ರದಕ್ಷಿಣ ಮಾಡಿ ಈ ಮಂತ್ರವನ್ನು ಹೇಳಬೇಕು

ಇಮಮುಚ್ಚಾರಯೇನ್ಮಂತ್ರಂ ತ್ರಿಃ ಕೃತ್ವಾ ತು ಪ್ರದಕ್ಷಿಣಂ ।
ನಮೋ ವಿಶ್ವಮಯಾಯೇತಿ ವಿಶ್ವಚಕ್ರಾತ್ಮನೇ ನಮಃ ॥೧೪॥

ಪರಮಾನಂದರೂಪೀ ತ್ವಂ ಪಾಹಿ ನಃ ಪಾಪಕರ್ದಮಾತ್ ।
ತೇಜೋಮಯಮಿದಂ ಯಸ್ಮಾತ್ಸದಾ ಪಶ್ಯಂತಿ ಯೋಗಿನಃ ॥೧೫॥

ಹೃದಿ ತತ್ವಂ ಗುಣಾತೀತಂ ವಿಶ್ವಚಕ್ರಂ ನಮಾಮ್ಯಹಂ ।
ವಾಸುದೇವೇ ಸ್ಥಿತಂ ಚಕ್ರಂ ಚಕ್ರಮಧ್ಯೇ ತು ಮಾಧವಃ ॥೧೬॥

ಅನ್ಯೋನ್ಯಾಧಾರರೂಪೇಣ ಪ್ರಣಮಾಮಿ ಸ್ಥಿತಾವಿಹ ।
ವಿಶ್ವಚಕ್ರಮಿದಂ ಯಸ್ಮಾತ್ಸರ್ವಪಾಪಹರಂ ಪರಂ ॥೧೭॥

ಆಯುಧಂ ಚಾಪಿ ವಾಸಶ್ಚ ಭವಾದುದ್ಧರ ಮಾಮತಃ ।
ಇತ್ಯಾಮಂತ್ರ್ಯ ಚ ಯೋ ದದ್ಯಾದ್ವಿಶ್ವಚಕ್ರಂ ವಿಮತ್ಸರಃ ॥೧೮॥

---

೧೪ ಜಗನ್ಮಯನಿಗೆ ನಮಸ್ಕಾರ ವಿಶ್ವಚಕ್ರದಲ್ಲಿ ಅಂತರಾತ್ಮನಾಗಿರುವ ವಾಸುದೇವನಿಗೆ ನಮಸ್ಕಾರ ದೇವಾ, ಪರಮಾನಂದಸ್ವರೂಪನಾದ ನೀನು ಪಾಪ ವೆಂಬ ಕೆಸರಿನಿಂದ ನಮ್ಮನ್ನು ಪಾರುಮಾಡಿ ರಕ್ಷಿಸು

೧೫ ತೇಜೋಮಯವಾಗಿ, ಸತ್ವರಜಸ್ತಮಸ್ಸುಗಳೆಂಬ ತ್ರಿಗುಣಗಳನ್ನು ಅತಿಕ್ರಮಿಸಿ, ಸಕಲತತ್ವರೂಪವಾಗಿರುವ ಈ ವಿಶ್ವಚಕ್ರವನ್ನು ಯೋಗಿಗಳು ತಮ್ಮ ಮನಸ್ಸಿನಲ್ಲಿ ಸಾಕ್ಷಾತ್ಕಾರಮಾಡಿಕೊಳ್ಳಬಲ್ಲರು ಇದನ್ನು ನಾನು ನಮಸ್ಕರಿಸುತ್ತೇನೆ

೧೬ ವಾಸುದೇವನಿಂದ ಚಕ್ರವು ನಿಂತಿದೆ ಚಕ್ರಮಧ್ಯದಲ್ಲಿ ವಾಸುದೇವನು ನೆಲಸಿದ್ದಾನೆ ಪರಸ್ಪರ ಆಧಾರರೂಪವಾಗಿರುವ ವಿಷ್ಣುವನ್ನೂ ವಿಶ್ವಚಕ್ರವನ್ನೂ ನಾನು ನಮಸ್ಕರಿಸುತ್ತೇನೆ

೧೭ ಈ ವಿಶ್ವಚಕ್ರವು ಸರ್ವಪಾಪವನ್ನೂ ಪರಿಹರಿಸುವುದು ಅತ್ಯಂತ ಪವಿತ್ರವಾದುದು ಮಹಾವಿಷ್ಣುವಿನ ಆಯುಧವೂ ಆವಾಸಸ್ಥಾನವೂ ಆಗಿರುವುದು ಇದು ನನ್ನನ್ನು ಸಂಸಾರಬಂಧನದಿಂದ ರಕ್ಷಿಸಲಿ

೧೮-೧೯ ಈ ರೀತಿಯಾಗಿ ಪ್ರಾರ್ಥಿಸಿ, ಮತ್ಸರರಹಿತನಾಗಿ ವಿಶ್ವಚಕ್ರ ವನ್ನು ದಾನಮಾಡುವಾತನು ಸಕಲಪಾಪಮುಕ್ತನಾಗಿ, ವಿಷ್ಣುಲೋಕವನ್ನೈದಿ

ವಿಮುಕ್ತಃ ಸರ್ವಪಾಪೇಭ್ಯೋ ವಿಷ್ಣುಲೋಕೇ ಮಹೀಯತೇ
ವೈಕುಂಠಲೋಕಮಾಸಾದ್ಯ ಚತುರ್ಬಾಹುಃ ಸನಾತನಃ ॥೧೯॥

ಸೇವ್ಯತೇಽಪ್ಸರಸಾಂ ಸಂಘೈಸ್ತ್ರಿಷ್ವೇತ್ಕಲ್ಪಶತತ್ರಯಂ ।
ಪ್ರಣಮೇದ್ವಾಥ ಯಃ ಕೃತ್ವಾ ವಿಶ್ವಚಕ್ರಂ ದಿನೇ ದಿನೇ ।
ತಸ್ಯಾಯುರ್ವರ್ಧತೇ ನಿತ್ಯಂ ಲಕ್ಷ್ಮೀಶ್ಚ ವಿಪುಲಾ ಭವೇತ್ ॥೨೦॥

ಇತಿ ಸಕಲಜಗತ್ಸುರಾಧಿವಾಸಂ
ವಿತರತಿ ಯಸ್ತಪನೀಯಷೋಡಶಾರಂ ।
ಹರಿಭವನಮುಪಾಗತಃ ಸ ಸಿದ್ಧೈ
ಶ್ಚಿರಮಭಿಗಮ್ಯ ನಮಸ್ಯತೇ ಶಿರೋಭಿಃ ॥೨೧॥

ಅಸುದರ್ಶನತಾಂ ಪ್ರಯಾತಿ ಶತ್ರೋಃ ।
ಮದನಸುದರ್ಶನತಾಂ ಚ ಕಾಮಿನೀಭ್ಯಃ ।

---

ಅಲ್ಲಿ ಮನ್ನಣೆಯನ್ನು ಪಡೆಯುವನು ವೈಕುಂಠಲೋಕಕ್ಕೆ ಹೋಗಿ ನಾಲ್ಕು ಬಾಹುಗಳಿಂದ ವಿರಾಜಿಸುತ್ತ ಅನಂತಕಾಲ ಆನಂದಿಸುವನು ಅಪ್ಸರಸ್ತ್ರೀಯರಿಂದ ಸೇವೆಯನ್ನು ಕೈಗೊಳ್ಳುತ್ತ ಮುನ್ನೂರುಕಲ್ಪಗಳ ಕಾಲ ಸ್ವರ್ಗದಲ್ಲಿ ಸುಖದಿಂದಿರುವನು

೨೦ ವಿಶ್ವಚಕ್ರವನ್ನು ನಿರ್ಮಿಸಿ ದಿನದಿನವೂ ಅದಕ್ಕೆ ನಮಸ್ಕಾರ ಮಾಡಿದರೂ ಸಾಕು, ಅವನ ಆಯುಸ್ಸು ಹೆಚ್ಚುವುದು ಐಶ್ವರ್ಯವು ಅಪರಿಮಿತವಾಗಿ ಬೆಳೆಯುವುದು

೨೧ ಹೀಗೆ ಸಕಲಲೋಕಗಳಿಗೂ ದೇವತೆಗಳಿಗೂ ಆವಾಸಸ್ಥಾನವೆನಿಸಿ ಹದಿನಾರು ಅರೆಗಾಲುಗಳಿಂದ ಕೂಡಿದ ಚಿನ್ನದ ಚಕ್ರವನ್ನು ಯಾವನು ದಾನ ಮಾಡುತ್ತಾನೊ ಅವನು ವಿಷ್ಣುಲೋಕವನ್ನೈದುವನು ಸಿದ್ಧರು ಅವನ ಬಳಿಗೆ ಬಂದು ನಮಸ್ಕರಿಸಿ ಅನಂತಕಾಲ ಸೇವೆಮಾಡುವರು

೨೨ ಚಿನ್ನದ ಚಕ್ರವನ್ನು ದಾನಮಾಡಿದವನ ಪಾಪವೆಲ್ಲವೂ ದಗ್ಧವಾಗುತ್ತದೆ ಅವನು ಶತ್ರುವಿಗೆ ಬಹುಭಯಂಕರನಾಗುವನು ಸುಂದರಿಯರಿಗೆ

ಸ ಸುದರ್ಶನಕೇಶವಾನುರೂಪಃ ।
ಕನಕಸುದರ್ಶನದಾನದಗ್ಧಪಾಪಃ ॥೨೨॥
ಕೃತಗುರುದುರಿತಾನಿ ಷೋಡಶಾರ ।
ಪ್ರವಿತರಣೇ ಪ್ರವರಾಕೃತಿರ್ಮುರಾರೇಃ ।
ಅಭಿಭವತಿ ಭವೋದ್ಭವಾನಿ ಭಿತ್ವಾ ।
ಭವಮಭಿತೋ ಭುವನೇ ಭಯಾನಿ ಭೂಯಃ ॥೨೩॥

ಇತಿ ಶ್ರೀಮತ್ಸ್ಯೇ ಮಹಾಪುರಾಣೇ ಮಹಾದಾನಾನುಕೀರ್ತನೇ
ವಿಶ್ವಚಕ್ರಪ್ರದಾನವಿಧಿರ್ನಾಮ ಪಂಚಾಶೀತ್ಯಧಿಕದ್ವಿಶತತಮೋಽಧ್ಯಾಯಃ

---

ಮನ್ಮಥನಂತೆ ಸುಂದರಾಂಗನಾಗಿ ತೋರುವನು ಚಕ್ರಧಾರಿಯಾದ ಶ್ರೀ ಮಹಾವಿಷ್ಣುವಿನಂತೆ ಚತುರ್ಭುಜಧಾರಿಯಾಗಿ ವಿರಾಜಿಸುವನು

೨೩ ಸುವರ್ಣಚಕ್ರವನ್ನು ದಾನಕೊಟ್ಟವನು ತಾನು ಮಾಡಿದ ಮಹಾಪಾತಕಗಳನ್ನು ಕಳೆದುಕೊಂಡು ಮಹಾವಿಷ್ಣುವಿನಂತೆ ದಿವ್ಯಾಕೃತಿಯನ್ನು ತಾಳುವನು ಪುನರ್ಜನ್ಮಗಳ ಕೋಟಲೆಗೆ ಅವನು ಸಿಕ್ಕನು ಲೋಕದಲ್ಲಿ ಯಾವ ಕಡೆಯೂ ಅವನಿಗೆ ಮತ್ತೆ ಭಯವೆಂಬುದೇ ಬಾರದು

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಸುವರ್ಣಮಯವಾದ ವಿಶ್ವಚಕ್ರವನ್ನು ದಾನಮಾಡುವ ವಿಧಿಯನ್ನು ಹೇಳಿದೆ

ತನ್ನ ಯೋಗ್ಯತೆಗೆ ತಕ್ಕಂತೆ ಚಿನ್ನದಿಂದ ಹದಿನಾರು ಅರೆಕಾಲುಗಳೂ ಎಂಟು ಸುತ್ತುಪಟ್ಟಿಗಳೂ ಉಳ್ಳ ಚಕ್ರವನ್ನು ನಿರ್ಮಿಸಬೇಕು ಅದರಲ್ಲಿ ಸಕಲ ದೇವತೆಗಳನ್ನು ವಿನ್ಯಾಸಮಾಡಬೇಕು ತುಲಾಪುರುಷದಾನದಲ್ಲಿ ಮಾಡಿದಂತೆಯೇ ಆವಾಹನ, ಹೋಮ, ಅಧಿವಾಸನ ಇವೆಲ್ಲವನ್ನೂ ನಡೆಸಿ, ಮಂತ್ರೋದಕ ಸ್ನಾನಮಾಡಿ, ಚಕ್ರವನ್ನು ಬಲವಂದು, ಪ್ರಾರ್ಥಿಸಿ ಆಚಾರ್ಯನಿಗೆ ಅದನ್ನು ದಾನಮಾಡಬೇಕು ಇದರಿಂದ ಸಕಲಪಾಪಗಳೂ ಪರಿಹಾರವಾಗುವುವು ಮೋಕ್ಷ ಸಾಮ್ರಾಜ್ಯವು ಕೈವಶವಾಗುವುದು

ಶ್ರೀಮತ್ಸ್ಯಮಹಾಪುರಾಣದಲ್ಲಿ ಮಹಾದಾನಾನುಕೀರ್ತನದಲ್ಲಿ ವಿಶ್ವಚಕ್ರಪ್ರದಾನ ವಿಧಿಯೆಂಬ ಇನ್ನೂರೆಂಬತ್ತೈದನೆಯ ಅಧ್ಯಾಯವು ಮುಗಿದುದು

## ಅಥ ಷಡಶೀತ್ಯಧಿಕದ್ವಿಶತತಮೋಽಧ್ಯಾಯಃ

|| ಮತ್ಸ್ಯ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಮಹಾದಾನಮನುತ್ತಮಂ ।
ಮಹಾಕಲ್ಪಲತಾನಾಮ ಮಹಾಪಾತಕನಾಶನಂ || ೧ ||

ಪುಣ್ಯಾಂ ತಿಥಿಮಥಾಸಾದ್ಯ ಕೃತ್ವಾ ಬ್ರಾಹ್ಮಣವಾಚನಂ ।
ಋತ್ವಿಙ್ಮಂಡಪಸಂಭಾರಭೂಷಣಾಚ್ಛಾದನಾದಿಕಂ || ೨ ||

ತುಲಾಪುರುಷವತ್ಕುರ್ಯಾಲ್ಲೋಕೇಶಾವಾಹನಂ ಬುಧಃ ।
ಚಾಮೀಕರಮಯೀಃ ಕುರ್ಯಾದ್ದಶ ಕಲ್ಪಲತಾಃ ಸಮಾಃ || ೩ ||

ನಾನಾಪುಷ್ಪಫಲೋಪೇತಾ ನಾನಾಂಶುಕವಿಭೂಷಿತಾಃ ।
ವಿದ್ಯಾಧರಸುಪರ್ಣಾನಾಂ ಮಿಥುನೈರುಪಶೋಭಿತಾಃ || ೪ ||

---

೧ ಮತ್ಸ್ಯರೂಪನಾದ ಭಗವಂತನು ಹೇಳಿದನು — ಇನ್ನುಮುಂದೆ ಅತ್ಯಂತ ಶ್ರೇಷ್ಠವಾದ ಮಹಾಕಲ್ಪಲತಾದಾನವೆಂಬ ಮಹಾದಾನದ ವಿಧಿಯನ್ನು ಹೇಳುವೆನು ಅದು ಘೋರವಾದ ಪಾಪಗಳನ್ನೆಲ್ಲ ಪರಿಹರಿಸುವುದು

೨ ಪುಣ್ಯತಿಥಿಯಲ್ಲಿ ಬ್ರಾಹ್ಮಣರ ಆಶೀರ್ವಾದವನ್ನು ಪಡೆದು, ಋತ್ವಿಗ್ವರಣ, ಮಂಟಪನಿರ್ಮಾಣ, ವಸ್ತ್ರಭೂಷಣಾದಿ ಸಂಭಾರಸಂಗ್ರಹ ಇವೆಲ್ಲವನ್ನೂ ಮಾಡಿ ಶಾಸ್ತ್ರಜ್ಞನಾದ ಆಚಾರ್ಯನು ಲೋಕಪಾಲಕರನ್ನು ಆವಾಹಿಸಬೇಕು

೩-೪ ಚಿನ್ನದಿಂದ ಒಂದೇ ಸಮನಾದ ಹತ್ತು ಕಲ್ಪಲತೆಗಳನ್ನು ನಿರ್ಮಿಸ ಬೇಕು. ಅವು ಬಗೆಬಗೆಯ ಹೂಹಣ್ಣುಗಳಿಂದ ತುಂಬಿ ವಿಧವಿಧವಾದ ವಸ್ತ್ರ ಗಳಿಂದ ಅಲಂಕೃತವಾಗಿರಬೇಕು ಅವುಗಳಲ್ಲಿ ವಿದ್ಯಾಧರದಂಪತಿಗಳೂ ಗರುಡ ದಂಪತಿಗಳೂ ವಿರಾಜಿಸುತ್ತಿರಬೇಕು

ಪುಷ್ಪಾಣ್ಯಾದಿತ್ಸುಭಿಃ ಸಿದ್ಧೈಃ ಫಲಾನಿ ಚ ವಿಹಂಗಮೈಃ ।
ಲೋಕಪಾಲಾನುಕಾರಿಣ್ಯಃ ಕರ್ತವ್ಯಾಸ್ತಾಸು ದೇವತಾಃ ॥ ೫ ॥

ಬ್ರಾಹ್ಮೀಮನಂತಶಕ್ತಿಂ ಚ ಲವಣಸ್ಯೋಪರಿ ನ್ಯಸೇತ್ ।
ಅಧಸ್ತಾಲ್ಲತಯೋರ್ಮಧ್ಯೇ ಪದ್ಮಶಂಖಕರೇ ಶುಭೇ ॥ ೬ ॥

ಇಭಾಸನಸ್ಥಾ ತು ಗುಡೇ ಪೂರ್ವತಃ ಕುಲಿಶಾಯುಧಾ ।
ರಜನೀ ಸಂಸ್ಥಿತಾಗ್ನಾಯೀ ಸ್ರುವಪಾಣಿರಥಾನಲೇ ॥ ೭ ॥

ಯಾಮ್ಯೇ ಚ ಮಹಿಷಾರೂಢಾ ಗದಿನೀ ತಂಡುಲೋಪರಿ ।
ಘೃತೇ ತು ನೈರ್ಋತೀ ಸ್ಥಾಪ್ಯಾ ಸಖಡ್ಗಾ ದಕ್ಷಿಣೇ ಕರೇ ॥ ೮ ॥

---

೫ ಸಿದ್ಧರು ಹೂಗಳನ್ನು ಕುಯ್ಯುತ್ತಿರುವಂತೆಯೂ, ಪಕ್ಷಿಗಳು ಹಣ್ಣುಗಳನ್ನು ಕೀಳುತ್ತಿರುವಂತೆಯೂ ಚಿತ್ರಿಸಬೇಕು ಲೋಕಪಾಲರಿಗೆ ಅನುರೂಪವಾಗಿ ದೇವಿಯರನ್ನು ನಿರ್ಮಿಸಬೇಕು

೬ ಎರಡು ಬಳ್ಳಿಗಳ ನಡುವೆ ಕೆಳಭಾಗದಲ್ಲಿ ಉಪ್ಪನ್ನು ಹರಡಿ, ಅದರ ಮೇಲೆ ಬ್ರಾಹ್ಮಿಯ ಮತ್ತು ಅನಂತಶಕ್ತಿಯ ಮಂಗಳಮೂರ್ತಿಗಳನ್ನು ಇರಿಸಬೇಕು ಅವರು ಕೈಯಲ್ಲಿ ಪದ್ಮವನ್ನೂ ಶಂಖವನ್ನೂ ಧರಿಸಿರುವರು

೭ ಪೂರ್ವದಿಕ್ಕಿನಲ್ಲಿ ಇಂದ್ರಾಣಿಯು ಆನೆಯ ಮೇಲೆ ಕುಳಿತು ವಜ್ರಾಯುಧವನ್ನು ಹಿಡಿದಿರುವಂತೆ ಕಲ್ಪಿಸಿ ಬೆಲ್ಲದ ಪೀರದಲ್ಲಿ ಕೂರಿಸಬೇಕು ಆಗ್ನೇಯದಿಕ್ಕಿನಲ್ಲಿ ಅಗ್ನಿದೇವನ ಪತ್ನಿಯಾದ ಆಗ್ನಾಯಿಯು ಸ್ರುವವನ್ನು ಕೈಯಲ್ಲಿ ಹಿಡಿದು ಅರಸಿನದ ಮೇಲೆ ಕುಳಿತಿರಬೇಕು

೮ ದಕ್ಷಿಣದಿಕ್ಕಿನಲ್ಲಿ ಯಮಧರ್ಮರಾಯನ ಮಹಿಷಿಯು ಗವೆಯನ್ನು ಹಿಡಿದು ಅಕ್ಕಿಯ ಮೇಲೆ ಕುಳಿತಿರುವಳು ನೈರ್ಋತಿಯು ಬಲಗೈಯಲ್ಲಿ ಕತ್ತಿಯನ್ನು ಧರಿಸಿ ನೈಋತ್ಯದಿಕ್ಕಿನಲ್ಲಿ ತುಪ್ಪದ ಮೇಲೆ ಮಂಡಿಸಿರುವಳು

ವಾರುಣೀ ವಾರುಣೀ ಕ್ಷೀರೇ ಝುಷಸ್ಥಾ ನಾಗಪಾಶಿನೀ ।
ಪತಾಕಿನೀ ಚ ವಾಯವ್ಯೇ ಮೃಗಸ್ಥಾ ಶರ್ಕರೋಪರಿ ॥ ೯ ॥

ಸೌಮ್ಯಾ ತಿಲೇಷು ಸಂಸ್ಥಾಪ್ಯಾ ಶಂಖಿನೀ ನಿಧಿಸಂಸ್ಥಿತಾ ।
ಮಾಹೇಶ್ವರೀ ವೃಷಾರೂಢಾ ನವನೀತೇ ತ್ರಿಶೂಲಿನೀ ॥೧೦॥

ಮೌಲಿನ್ಯೋ ವರದಾಸ್ತದ್ವತ್ಕರ್ತವ್ಯಾ ಬಾಲಕಾನ್ವಿತಾಃ ।
ಶಕ್ತ್ಯಾ ಪಂಚಪಲಾದೂರ್ಧ್ವಮಾಸಹಸ್ರಾತ್ಪ್ರಕಲ್ಪಯೇತ್ ॥೧೧॥

ಸರ್ವಾಸಾಮುಪರಿ ಸ್ಥಾಪ್ಯಂ ಪಂಚವರ್ಣಂ ವಿತಾನಕಂ ।
ಧೇನವೋ ದಶ ಕುಂಭಾಶ್ಚ ವಸ್ತ್ರಯುಗ್ಮಾಣಿ ಚೈವ ಹಿ ॥೧೨॥

---

೯ ವಾರುಣಿಯು ಮತ್ಸ್ಯವನ್ನೇರಿ ನಾಗಪಾಶವನ್ನು ಕೈಯಲ್ಲಿ ಹಿಡಿದು ಪಶ್ಚಿಮದಿಕ್ಕನ್ನು ಅಲಂಕರಿಸುವಳು ವಾಯುವ್ಯದಲ್ಲಿ ಪತಾಕಿನಿಯು ಜಿಂಕೆಯನ್ನೇರಿ ಕುಳಿತು ಸಕ್ಕರೆಯ ಮೇಲೆ ವಿರಾಜಿಸುತ್ತಿರುವಳು

೧೦ ಸೋಮನ ಪತ್ನಿಯಾದ ಸೌಮ್ಯೆ ಎಳ್ಳಿನ ಮೇಲೂ ಕುಬೇರನ ಸಹಧರ್ಮಿಣಿಯಾದ ಶಂಖಿನಿ ನಿಧಿಯ ಮೇಲೂ ಕುಳಿತಿರುವರು ಈಶಾನ್ಯದಿಕ್ಕಿನಲ್ಲಿ ಮಾಹೇಶ್ವರಿಯು ವೃಷಭವನ್ನೇರಿ, ತ್ರಿಶೂಲವನ್ನು ಹಿಡಿದು ಬೆಣ್ಣೆಯ ಮೇಲೆ ಒಪ್ಪುತ್ತಿರುವಳು

೧೧ ದೇವಿಯರನ್ನೆಲ್ಲ ಕಿರೀಟವನ್ನು ಧರಿಸಿ, ಬಾಲಕರೊಡಗೂಡಿ ವರವನ್ನು ನೀಡುತ್ತಿರುವಂತೆ ನಿರ್ಮಿಸಬೇಕು ತನ್ನ ಯೋಗ್ಯತಾನುಸಾರವಾಗಿ ಐದು ಪಲಗಳಿಂದ ಸಾವಿರಪಲಗಳ ತೂಕದವರೆಗೂ ಪ್ರತಿಮೆಗಳನ್ನು ಮಾಡಿಸಬಹುದು

೧೨ ಎಲ್ಲರ ಮೇಲ್ಗಡೆಯೂ ಐದು ಬಣ್ಣದ ಬಟ್ಟೆಗಳಿಂದ ಮೇಲ್ಗಟ್ಟನ್ನು ಕಟ್ಟಬೇಕು ಹಸುಗಳು, ಹತ್ತು ಕುಂಭಗಳು, ಜೋಡಿಜೋಡಿ ಪಂಚೆಗಳು ಇವೆಲ್ಲವೂ ಆಯಾ ಸ್ಥಳದಲ್ಲಿ ಕ್ರಮವಾಗಿ ಇರಬೇಕು ನಡುವಣ ಪ್ರತಿಮೆಗಳೆರಡೂ ಗುರುವಿಗೂ, ಉಳಿದುವು ಋತ್ವಿಕ್ಕುಗಳಿಗೂ ದಾನಮಾಡಬೇಕಾದುವು

ಮಧ್ಯಮೇ ಧ್ವೇ ತು ಗುರವೇ ಋತ್ವಿಗ್ಭ್ಯೋನ್ಯಾಸ್ತಥೈವ ಚ ।
ತತೋ ಮಂಗಲಶಬ್ದೇನ ಸ್ನಾತಃ ಶುಕ್ಲಾಂಬರೋ ಬುಧಃ ।
ತ್ರಿಃ ಪ್ರದಕ್ಷಿಣಮಾವೃತ್ಯ ಮಂತ್ರಮೇನಮುದೀರಯೇತ್ ||೧೩||

ನಮೋ ನಮಃ ಪಾಪವಿನಾಶಿನೀಭ್ಯೋ ।
ಬ್ರಹ್ಮಾಂಡಲೋಕೇಶ್ವರಪಾಲಿನೀಭ್ಯಃ ।
ಆಶಂಸಿತಾಧಿಕ್ಯಫಲಪ್ರದಾಭ್ಯೋ ।
ದಿಗ್ಭ್ಯಸ್ತಥಾ ಕಲ್ಪಲತಾವಧೂಭ್ಯಃ ||೧೪||

ಇತಿ ಸಕಲದಿಗಂಗನಾಪ್ರದಾನಂ ।
ಭವಭಯಸೂದನಕಾರಿ ಯಃ ಕರೋತಿ ।
ಅಭಿಮತಫಲದೇ ಸ ನಾಗಲೋಕೇ ।
ವಸತಿ ಪಿತಾಮಹವತ್ಸರಾಣಿ ತ್ರಿಂಶತ್ ||೧೫||

---

೧೩ ಬಳಿಕ ಯಜಮಾನನು ಮಂಗಲವಾದ್ಯಧ್ವನಿಗಳೊಡನೆ ಮಂತ್ರೋದಕದಿಂದ ಸ್ನಾನಮಾಡಿ, ಬಿಳಿಯ ವಸ್ತ್ರಗಳನ್ನು ಧರಿಸಿ, ದೇವಿಯರನ್ನು ಮೂರು ಸಾರಿ ಪ್ರದಕ್ಷಿಣೆಮಾಡಿ ಈ ಮಂತ್ರವನ್ನು ಉಚ್ಚರಿಸಬೇಕು

೧೪ ಪಾಪಗಳನ್ನು ಪರಿಹರಿಸುವ, ಬ್ರಹ್ಮಾಂಡವನ್ನೂ ದಿಕ್ಪಾಲಕರನ್ನೂ ರಕ್ಷಿಸುವ, ಬೇಡಿದುದಕ್ಕಿಂತ ಅಧಿಕವಾಗಿ ಫಲವನ್ನು ಕರುಣಿಸುವ, ಕಲ್ಪಲತಾಸಹಿತೆಯರಾದ ದಿಗ್ದೇವತೆಗಳಿಗೆ ನಮಸ್ಕಾರ ನಮಸ್ಕಾರ

೧೫ ಸುವರ್ಣನಿರ್ಮಿತವಾದ ದಿಗ್ದೇವಿಯರ ಪ್ರತಿಮೆಗಳನ್ನು ಶಾಸ್ತ್ರೋಕ್ತವಾಗಿ ಯಾವನು ದಾನಮಾಡುತ್ತಾನೋ, ಅವನಿಗೆ ಸಂಸಾರದ ಭಯವೆಲ್ಲವೂ ಪರಿಹಾರವಾಗುತ್ತದೆ ಅವನು ನಾಗಲೋಕದಲ್ಲಿ ಇಷ್ಟಾರ್ಥಗಳೆಲ್ಲವನ್ನೂ ಅನುಭವಿಸುತ್ತ ಬ್ರಹ್ಮನ ಆಯುರ್ಮಾನದಲ್ಲಿ ಮೂವತ್ತು ವರ್ಷಗಳ ಕಾಲ ಸುಖವಾಗಿ ಬಾಳುವನು

ಪಿತೃಶತಮಥ ತಾರಯೇದ್ಭವಾಬ್ಧೇ ।
ರ್ಭವದುರಿತಾಘವಿಘಾತಶುದ್ಧದೇಹಃ ।
ಸುರಪತಿವನಿತಾಸಹಸ್ರಸಂಖ್ಯೈಃ ।
ಪರಿವೃತಮಂಬುಜಸಂಭವಾಭಿವಂದ್ಯಃ ॥೧೬॥

ಇತಿ ವಿಧಾನಮಿದಂ ದಿಗಂಗನಾನಾಂ ।
ಕನಕಕಲ್ಪಲತಾವಿನಿವೇದಕಂ ।
ಪಠತಿ ಯಃ ಸ್ಮರತೀಹ ತಥೇಕ್ಷತೇ ।
ಸ ಪದಮೇತಿ ಪುರಂದರಸೇವಿತಂ ॥೧೭॥

ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ಮಹಾದಾನಾನುಕೀರ್ತನೇ
ಕನಕಕಲ್ಪಲತಾಪ್ರದಾನವಿಧಿರ್ನಾಮ ಷಡಶೀತ್ಯಧಿಕ-
ದ್ವಿಶತತಮೋಽಧ್ಯಾಯಃ

---

೧೬. ಆತನು ನೂರಾರು ಜನ ಪಿತೃಗಳನ್ನು ಸಂಸಾರಸಾಗರದಿಂದ ಪಾರು ಮಾಡುವನು ಜನ್ಮಾಂತರಗಳಲ್ಲಿ ಮಾಡಿದ ಪಾಪರಾಶಿಗಳೆಲ್ಲ ತೊಲಗಿ ಆತನ ದೇಹವು ಶುದ್ಧವಾಗುತ್ತದೆ ಸಾವಿರಗಟ್ಟಲೆಯಾಗಿ ದೇವತಾಸ್ತ್ರೀಯರು ಆತನನ್ನು ಸುತ್ತುಗಟ್ಟಿಕೊಂಡು ಓಲೈಸುವರು ಬ್ರಹ್ಮನೂ ಕೂಡ ಅವನಿಗೆ ಮನ್ನಣೆ ಯನ್ನೀಯುವನು

೧೭. ದಿಗ್ದೇವಿಯರೊಡಗೂಡಿದ ಸುವರ್ಣಕಲ್ಪಲತೆಗಳನ್ನು ದಾನಮಾಡುವ ಈ ಕ್ರಮವನ್ನು ಯಾವನು ಪಾರಾಯಣಮಾಡುತ್ತಾನೋ, ಜ್ಞಾಪಿಸಿಕೊಳ್ಳು ತ್ತಾನೋ, ಅಥವಾ ಕಣ್ಣಿನಿಂದ ನೋಡುತ್ತಾನೋ ಅವನು ದೇವಲೋಕವನ್ನೈದಿ ಸುಖದಿಂದಿರುವನು

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಚಿನ್ನದಿಂದ ಮಾಡಿದ ಕಲ್ಪಲತೆಗಳನ್ನು ದಾನಮಾಡುವ ವಿಧಾನವನ್ನು ಹೇಳಿದೆ

ಚಿನ್ನದಿಂದ ಹತ್ತು ಕಲ್ಪಲತೆಗಳನ್ನು ಮಾಡಿಸಬೇಕು ಅವುಗಳ ಕೆಳಗೆ ದಿಕ್ಪಾಲಕರ ಪತ್ನಿಯರು ತಮ್ಮ ತಮ್ಮ ಆಸನಗಳನ್ನೇರಿ, ಆಯುಧಗಳನ್ನು ಹಿಡಿದು

ಬಾಲಕರೊಡನೆ ಕುಳಿತಿರುವಂತೆ ಪ್ರತಿಮೆಗಳನ್ನು ನಿರ್ಮಿಸಬೇಕು ತುಲಾಪುರುಷ ದಾನದಂತೆಯೇ ಆವಾಹನ, ಪೂಜೆ, ಹೋಮ, ಅಧಿವಾಸನ ಇವೆಲ್ಲವೂ ನಡೆದ ಬಳಿಕ ಯಜಮಾನನು ಮಂತ್ರೋದಕದಿಂದ ಸ್ನಾನಮಾಡಿ, ಶುಭ್ರವಸ್ತ್ರವನ್ನು ಧರಿಸಿ, ದೇವತಾಮೂರ್ತಿಗಳನ್ನು ಬಲವಂದು ಪ್ರಾರ್ಥಿಸಿ, ಆಚಾರ್ಯನಿಗೂ ಋತ್ವಿಕ್ಕುಗಳಿಗೂ ಅವುಗಳನ್ನು ದಾನಮಾಡಬೇಕು ಈ ದಾನದಿಂದ ಸಕಲಪಾಪಗಳೂ ಪರಿಹಾರವಾಗುವುವು ಪಿತೃಗಳು ಸದ್ಗತಿಯನ್ನು ಪಡೆಯುವರು ದಿವ್ಯ ಲೋಕಗಳು ಲಭಿಸುವುವು

ಶ್ರೀಮತ್ಸ್ಯಮಹಾಪುರಾಣದಲ್ಲಿ ಮಹಾದಾನಾನುಕೀರ್ತನದಲ್ಲಿ ಕನಕಕಲ್ಪಲತಾ ಪ್ರದಾನವೆಂಬ ಇನ್ನೂರೆಂಬತ್ತಾರನೆಯ ಅಧ್ಯಾಯವು ಮುಗಿದುದು

## ಅಥ ಸಪ್ತಾಶೀತ್ಯಧಿಕದ್ವಿಶತತಮೋಽಧ್ಯಾಯಃ

|| ಮತ್ಸ್ಯ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಮಹಾದಾನಮನುತ್ತಮಂ ।
ಸಪ್ತಸಾಗರಕಂ ನಾಮ ಸರ್ವಪಾಪಪ್ರಣಾಶನಂ || ೧ ||

ಪುಣ್ಯಂ ದಿನಮಥಾಸಾದ್ಯ ಕೃತ್ವಾ ಬ್ರಾಹ್ಮಣವಾಚನಂ ।
ತುಲಾಪುರುಷವತ್ಕುರ್ಯಾಲ್ಲೋಕೇಶಾವಾಹನಂ ಬುಧಃ || ೨ ||

ಋತ್ವಿಙ್ಮಂಡಪಸಂಭಾರಭೂಷಣಾಚ್ಛಾದನಾದಿಕಂ ।
ಕಾರಯೇತ್ಸಪ್ತ ಕುಂಡಾನಿ ಕಾಂಚನಾನಿ ವಿಚಕ್ಷಣಃ । || ೩ ||

ಪ್ರಾದೇಶಮಾತ್ರಾಣಿ ತಥಾಽರತ್ನಿಮಾತ್ರಾಣಿ ವಾ ಪುನಃ ।
ಕುರ್ಯಾತ್ಸಪ್ತಪಲಾದೂರ್ಧ್ವಮಾಸಹಸ್ರಾಚ್ಚ ಶಕ್ತಿತಃ || ೪ ||

---

೧ ಮತ್ಸ್ಯರೂಪನಾದ ಭಗವಂತನು ಹೇಳಿದನು —ಸಕಲಪಾಪಪರಿಹಾರಕವಾದ ಸಪ್ತಸಾಗರದಾನವೆಂಬ ಅತಿಶ್ರೇಷ್ಠವಾದ ಮಹಾದಾನದ ವಿಧಾನವನ್ನು ಇನ್ನುಮುಂದೆ ಹೇಳುವೆನು

೨ ಯಜಮಾನನು ಪುಣ್ಯಕರವಾದ ದಿನದಲ್ಲಿ ಬ್ರಾಹ್ಮಣರ ಆಶೀರ್ವಾದವನ್ನೂ ಅನುಗ್ರಹವನ್ನೂ ಪಡೆದು, ತುಲಾಪುರುಷದಾನದ ವಿಧಿಯಲ್ಲಿ ಮಾಡಿದಂತೆಯೇ ದಿಕ್ಪಾಲಕರನ್ನು ಆವಾಹಿಸಿ, ಋತ್ವಿಕ್ಕುಗಳನ್ನು ವರಿಸಿ, ಮಂಟಪವನ್ನು ನಿರ್ಮಿಸಿ, ವಸ್ತ್ರಭೂಷಣಾದಿ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಳ್ಳಬೇಕು

೩-೪ ಶಾಸ್ತ್ರಜ್ಞನಾದ ಯಜಮಾನನು ತನ್ನ ಶಕ್ತಿಗೆ ತಕ್ಕಂತೆ ಚಿನ್ನದಿಂದ ಏಳು ಕುಂಡಗಳನ್ನು ಮಾಡಿಸಬೇಕು ಅವುಗಳ ಅಳತೆ ಒಂದು ಗೇಣಿರಬೇಕು ಅಥವಾ ಗುದ್ದುಮೊಳವಿದ್ದರೂ ಇರಬಹುದು ಅವು ಏಳುಪಲಗಳಿಂದ ಹಿಡಿದು ಸಾವಿರಪಲಗಳವರೆಗ ತೂಗಬಹುದು

ಸಂಸ್ಥಾಪ್ಯಾನಿ ಚ ಸರ್ವಾಣಿ ಕೃಷ್ಣಾಜಿನತಿಲೋಪರಿ ।
ಪ್ರಥಮಂ ಪೂರಯೇತ್ಕುಂಡಂ ಲವಣೇನ ವಿಚಕ್ಷಣಃ ॥ ೫ ॥

ದ್ವಿತೀಯಂ ಪಯಸಾ ತದ್ವತ್ತೃತೀಯಂ ಸರ್ಪಿಷಾ ಪುನಃ ।
ಚತುರ್ಥಂ ತು ಗುಡೇನೈವ ದಧ್ನಾ ಪಂಚಮಮೇವ ಚ ॥ ೬ ॥

ಷಷ್ಠಂ ಶರ್ಕರಯಾ ತದ್ವತ್ಸಪ್ತಮಂ ತೀರ್ಥವಾರಿಣಾ ।
ಸ್ಥಾಪಯೇಲ್ಲವಣಸ್ಥಂ ತು ಬ್ರಹ್ಮಾಣಂ ಕಾಂಚನಂ ಶುಭಂ ॥ ೭ ॥

ಕೇಶವಂ ಕ್ಷೀರಮಧ್ಯೇ ತು ಘೃತಮಧ್ಯೇ ಮಹೇಶ್ವರಂ ।
ಭಾಸ್ಕರಂ ಗುಡಮಧ್ಯೇ ತು ದಧಿಮಧ್ಯೇ ನಿಶಾಧಿಪಂ ॥ ೮ ॥

ಶರ್ಕರಾಯಾಂ ನ್ಯಸೇಲ್ಲಕ್ಷ್ಮೀಂ ಜಲಮಧ್ಯೇ ತು ಪಾರ್ವತೀಂ ।
ಸರ್ವೇಷು ಸರ್ವರತ್ನಾನಿ ಧಾನ್ಯಾನಿ ಚ ಸಮಂತತಃ ॥ ೯ ॥

---

೫ ಕೃಷ್ಣಾಜಿನದ ಮೇಲೆ ಎಳ್ಳನ್ನು ಹರಡಿ ಅದರ ಮೇಲೆ ಅವುಗಳನ್ನು ಇಡಬೇಕು ಮೊದಲನೆಯ ಕುಂಡದಲ್ಲಿ ಉಪ್ಪನ್ನು ತುಂಬಬೇಕು

೬ ಎರಡನೆಯ ಕುಂಡವನ್ನು ಹಾಲಿನಿಂದಲೂ, ಮೂರನೆಯದನ್ನು ತುಪ್ಪದಿಂದಲೂ, ನಾಲ್ಕನೆಯದನ್ನು ಬೆಲ್ಲದಿಂದಲೂ, ಐದನೆಯದನ್ನು ಮೊಸರಿನಿಂದಲೂ ತುಂಬಬೇಕು ಆರು ಮತ್ತು ಏಳನೆಯ ಕುಂಡಗಳಲ್ಲಿ ಕ್ರಮವಾಗಿ ಸಕ್ಕರೆಯನ್ನೂ ಪುಣ್ಯತೀರ್ಥದ ನೀರನ್ನೂ ಇಡಬೇಕು

೭-೮ ಉಪ್ಪು ತುಂಬಿರುವ ಕುಂಡದಲ್ಲಿ ಸುವರ್ಣನಿರ್ಮಿತವಾದ ಬ್ರಹ್ಮದೇವನ ಪ್ರತಿಮೆಯನ್ನು ಇರಿಸಬೇಕು ಹೀಗೆಯೇ ಹಾಲಿನ ಮಧ್ಯದಲ್ಲಿ ವಿಷ್ಣುವನ್ನೂ ತುಪ್ಪದಲ್ಲಿ ಮಹೇಶ್ವರನನ್ನೂ, ಬೆಲ್ಲದಲ್ಲಿ ಸೂರ್ಯನನ್ನೂ, ಮೊಸರಿನಲ್ಲಿ ಚಂದ್ರನನ್ನೂ ಸಕ್ಕರೆಯಲ್ಲಿ ಲಕ್ಷ್ಮಿಯನ್ನೂ, ತೀರ್ಥೋದಕದಲ್ಲಿ ಪಾರ್ವತಿಯನ್ನೂ ಸ್ಥಾಪಿಸಬೇಕು

೯ ಎಲ್ಲ ಕುಂಡಗಳಲ್ಲಿಯೂ ನವರತ್ನಗಳನ್ನು ಹಾಕಿ, ಸುತ್ತಲೂ ಹದಿನೆಂಟು ಬಗೆಯ ಧಾನ್ಯಗಳನ್ನಿಡಬೇಕು ತುಲಾಪುರುಷದಾನದಂತೆಯೇ ಅಧಿವಾಸನಾದಿಗಳೆಲ್ಲವನ್ನೂ ಇಲ್ಲಿಯೂ ಸಹ ಮಾಡಬೇಕು

ತುಲಾಪುರುಷವಚ್ಚೇಷಮತ್ರಾಪಿ ಪರಿಕಲ್ಪಯೇತ್ ।
ತತೋ ವಾರುಣಹೋಮಾಂತೇ ಸ್ನಾಪಿತೋ ವೇದಪುಂಗವೈಃ ॥೧೦॥

ತ್ರಿಃ ಪ್ರದಕ್ಷಿಣಮಾವೃತ್ಯ ಮಂತ್ರಮೇನಮುದೀರಯೇತ್ ।
ನಮೋ ವಃ ಸರ್ವಸಿಂಧೂನಾಮಾಧಾರೇಭ್ಯಃ ಸನಾತನಾಃ ।
ಜಂತೂನಾಂ ಪ್ರಾಣದೇಭ್ಯಶ್ಚ ಸಮುದ್ರೇಭ್ಯೋ ನಮೋ ನಮಃ ॥೧೧॥

ಕ್ಷೀರೋದಕಾಜ್ಯದಧಿಮಾಧುರಲಾವಣೇಕ್ಷು ।
ಸಾರಾಮೃತೇನ ಭುವನತ್ರಯಜೀವಸಂಘಾಃ
ಆನಂದಯಂತಿ ವಸುಭಿಶ್ಚ ಯತೋ ಭವಂತ ।
ಸ್ತಸ್ಮಾನ್ಮಮಾಪ್ಯಘವಿಘಾತಮಲಂ ದಿಶಂತು ॥೧೨॥

ಯಸ್ಮಾತ್ಸಮಸ್ತಭುವನೇಷು ಭವಂತ ಏವ ।
ತೀರ್ಥಾಮರಾಸುರಸುಬದ್ಧಮಣಿಪ್ರತಾನಂ ।

---

೧೦ ವರುಣಹೋಮವಾದ ಬಳಿಕ ವೇದಪಾರಂಗತರಾದ ಬ್ರಾಹ್ಮಣೋತ್ತಮರು ಯಜಮಾನನಿಗೆ ಮಂತ್ರೋದಕದಿಂದ ಸ್ನಾನಮಾಡಿಸುವರು ಆತನು ಕುಂಡಗಳನ್ನು ಮೂರುಸಾರಿ ಪ್ರದಕ್ಷಿಣಮಾಡಿ ಈ ಮಂತ್ರವನ್ನು ಹೇಳಬೇಕು

೧೧ ಅನಾದಿಯಾದ ಸಮುದ್ರಗಳೇ, ಸಕಲನದಿಗಳಿಗೂ ಆಧಾರ ಭೂತರಾದ ನಿಮಗೆ ನಮಸ್ಕಾರ ನೀರನ್ನು ಕೊಡುವುದರ ಮೂಲಕ ಜಂತುಗಳ ಪ್ರಾಣವನ್ನು ಉಳಿಸತಕ್ಕ ನಿಮಗೆ ನಮಸ್ಕಾರ ನಮಸ್ಕಾರ

೧೨ ಓ ಸಪ್ತಸಾಗರಗಳೇ, ನೀವು ಹಾಲು, ನೀರು, ತುಪ್ಪ, ಮೊಸರು, ಜೇನು, ಉಪ್ಪು, ಕಬ್ಬಿನರಸ ಇವುಗಳಿಂದ ಮೂರು ಲೋಕದಲ್ಲಿರುವ ಪ್ರಾಣಿಗಳನ್ನು ಆನಂದಗೊಳಿಸುತ್ತೀರಿ ಅವುಗಳಿಗೆ ಬೇಕಾದ ದ್ರವ್ಯಸಂಪತ್ತನ್ನೂ ಒದಗಿಸುತ್ತೀರಿ ಆದುದರಿಂದ ನನ್ನ ಮೇಲೂ ಕರುಣವಿಟ್ಟು ನನ್ನ ಪಾಪಗಳೆಲ್ಲವನ್ನೂ ಪರಿಹರಿಸಿರಿ

೧೩ ಎಲ್ಲ ಲೋಕಗಳಲ್ಲಿಯೂ ಇರುವ ತೀರ್ಥಗಳು, ದೇವತೆಗಳು, ಅಸುರರು, ರತ್ನರಾಶಿಗಳು, ಇವೆಲ್ಲಕ್ಕೂ ನೀವೇ ಆಶ್ರಯವಾಗಿರುವಿರಿ ಜನಗಳ

ಪಾಪಕ್ಷಯಾಮೃತವಿಲೇಪನಭೂಷಣಾಯ
ಲೋಕಸ್ಯ ಬಿಭ್ರತಿ ತದಸ್ತು ಮಮಾಪಿ ಲಕ್ಷ್ಮೀಃ ||೧೩||

ಇತಿ ದದಾತಿ ರಸಾಮೃತಸಂಯುತಾ
ಇಚ್ಛುಚಿರವಿಸ್ಮಯವಾನಿಹ ಸಾಗರಾ೯ ।
ಅಮಲಕಾಂಚನವರ್ಣಮಯಾನಸೌ
ಪದಮುಪೈತಿ ಹರೇರಮರಾರ್ಚಿತಃ ||೧೪||

ಸಕಲಪಾಪವಿಧೌತವಿರಾಜಿತಃ
ಪಿತೃಪಿತಾಮಹಪುತ್ರಕಳತ್ರಕಂ ।
ನರಕಲೋಕಸಮಾಕುಲಮುಪ್ಯಯಂ
ಝಟಿತಿ ಸೋಽಪಿ ನಯೇಚ್ಛಿವಮಂದಿರಂ ||೧೫||

ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ಮಹಾದಾನಾನುಕೀರ್ತನೇ
ಸಪ್ತಸಾಗರಪ್ರದಾನವಿಧಿರ್ನಾಮ ಸಪ್ತಾಶೀತ್ಯಧಿಕದ್ವಿಶತತಮೋಽಧ್ಯಾಯಃ

---

ಪಾಪರಾಶಿಯನ್ನು ಕಳೆದು ಸದ್ಗತಿಯನ್ನು ಕೊಡುವುದಕ್ಕಾಗಿಯೇ ನೀವು ಸಕಲ ಸಂಪತ್ತುಗಳನ್ನೂ ಧರಿಸಿರುವಿರಿ ಆ ಸಂಪತ್ತನ್ನು ನನಗೂ ಕರುಣಿಸಿ

೧೪ ಈ ರೀತಿಯಾಗಿ ಲವಣಾದಿರಸಗಳಿಂದ ಕೂಡಿದ ಶುದ್ಧಸುವರ್ಣಮಯವಾದ ಸಾಗರಗಳನ್ನು ಪರಿಶುದ್ಧನಾಗಿ ಗರ್ವವಿಲ್ಲದೆ ಯಾವನು ದಾನ ಮಾಡುತ್ತಾನೋ ಅವನು ದೇವತೆಗಳಿಂದ ಮಾನಿತನಾಗಿ ಮಹಾವಿಷ್ಣುವಿನ ಸಾನ್ನಿಧ್ಯವನ್ನು ಸೇರುವನು

೧೫ ಅವನು ಸಕಲ ಪಾಪಗಳಿಂದಲೂ ಬಿಡುಗಡೆಹೊಂದಿ, ನಿಷ್ಕಲ್ಮಷನಾಗುವನು ತನ್ನ ತಂದೆ, ತಾತ, ಮಗ, ಹೆಂಡತಿ ಇವರು ನರಕಗಳಲ್ಲಿ ಬಿದ್ದು ಕೊಳೆಯುತ್ತಿದ್ದರೂ ಕೂಡ ಅವರನ್ನು ಬೇಗನೆ ಕೈಲಾಸಕ್ಕೊಯ್ಯುವನು

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಸಪ್ತಸಾಗರಗಳ ದಾನವಿಧಾನವನ್ನು ಹೇಳಿದೆ

ಚಿನ್ನದಿಂದ ಏಳು ಕುಂಡಗಳನ್ನು ಮಾಡಿಸಿ ಅವುಗಳಲ್ಲಿ ಉಪ್ಪು, ಹಾಲು, ತುಪ್ಪ, ಬೆಲ್ಲ ಮುಂತಾದ ಏಳು ಪದಾರ್ಥಗಳನ್ನು ತುಂಬಬೇಕು ಅವುಗಳಲ್ಲಿ ವಿಷ್ಣು, ಬ್ರಹ್ಮ, ಈಶ್ವರ ಮುಂತಾದವರ ಪ್ರತಿಮೆಗಳನ್ನು ಕ್ರಮವಾಗಿ ಇರಿಸಬೇಕು ತುಲಾಪುರುಷದಾನದಂತೆಯೇ ಆವಾಹನ, ಹೋಮ, ಅಧಿವಾಸನ ಇವನ್ನು ನಡೆಸಿ, ಮಂತ್ರೋದಕದಿಂದ ಸ್ನಾನಮಾಡಿ, "ಸಪ್ತಸಾಗರ" ಗಳನ್ನೂ ಬಲವಂದು ಋತ್ವಿಕ್ಪುರೋಹಿತರಿಗೆ ಅವುಗಳನ್ನು ದಾನಮಾಡಬೇಕು ಇದರಿಂದ ಸಮಸ್ತಪಾಪಗಳೂ ಪರಿಹಾರವಾಗುತ್ತವೆ ನರಕದಲ್ಲಿ ಬಿದ್ದಿರುವ ಪಿತೃಗಳೂ ಕೂಡ ಸದ್ಗತಿಯನ್ನು ಪಡೆಯುತ್ತಾರೆ

ಶ್ರೀಮತ್ಸ್ಯಮಹಾಪುರಾಣದಲ್ಲಿ ಮಹಾದಾನಾನುಕೀರ್ತನದಲ್ಲಿ ಸಪ್ತಸಾಗರದಾನ ವಿಧಿಯೆಂಬ ಇನ್ನೂರೆಂಬತ್ತೇಳನೆಯ ಅಧ್ಯಾಯವು ಮುಗಿದುದು

---

## ಅಥಾಷ್ಟಾಶೀತ್ಯಧಿಕದ್ವಿಶತತಮೋಽಧ್ಯಾಯಃ

|| ಮತ್ಸ್ಯ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಮಹಾದಾನಮನುತ್ತಮಂ ।
ರತ್ನಧೇನ್ವಿತಿ ವಿಖ್ಯಾತಂ ಗೋಲೋಕಫಲದಂ ನೃಣಾಂ || ೧ ||

ಪುಣ್ಯಂ ದಿನಮಥಾಸಾದ್ಯ ತುಲಾಪುರುಷದಾನವತ್ ।
ಲೋಕೇಶಾವಾಹನಂ ಕೃತ್ವಾ ತತೋ ಧೇನುಂ ಪ್ರಕಲ್ಪಯೇತ್ || ೨ ||

ಭೂಮೌ ಕೃಷ್ಣಾಜಿನಂ ಕೃತ್ವಾ ಲವಣದ್ರೋಣಸಂಯುತಂ ।
ಧೇನುಂ ರತ್ನಮಯೀಂ ಕುರ್ಯಾತ್ಸಂಕಲ್ಪ್ಯ ವಿಧಿಪೂರ್ವಕಂ || ೩ ||

ಸ್ಥಾಪಯೇತ್ಪದ್ಮರಾಗಾಣಾಮೇಕಾಶೀತಿಂ ಮುಖೇ ಬುಧಃ ।
ಪುಷ್ಪರಾಗಶತಂ ತದ್ವದ್ಘೋಣಾಯಾಂ ಪರಿಕಲ್ಪಯೇತ್ || ೪ ||

---

೧ ಮತ್ಸ್ಯರೂಪನಾದ ಭಗವಂತನು ಹೇಳಿದನು —ಇನ್ನು ಮುಂದೆ ರತ್ನಧೇನುದಾನವೆಂಬ ಅತಿಶ್ರೇಷ್ಠವಾದ ಮಹಾದಾನವನ್ನು ಹೇಳುವೆನು ಇದನ್ನು ಮಾಡಿದ ಮನುಷ್ಯರಿಗೆ ಗೋಲೋಕವು ಪ್ರಾಪ್ತವಾಗುತ್ತದೆ

೨ ಪುಣ್ಯದಿನದಲ್ಲಿ ತುಲಾಪುರುಷದಾನದಲ್ಲಿ ಮಾಡಿದ್ದಂತೆಯೇ ಲೋಕಪಾಲಕರನ್ನು ಆವಾಹಿಸಬೇಕು ಬಳಿಕ ಮುಂದೆ ಹೇಳುವಂತ ರತ್ನಗಳನ್ನು ಕೆತ್ತಿ ಮಾಡಿದ ಹಸುವನ್ನು ಅಧಿವಾಸನಕ್ಕಾಗಿ ಇಡಬೇಕು

೩ ನೆಲದ ಮೇಲೆ ಕೃಷ್ಣಾಜಿನವನ್ನು ಹಾಸಿ ಅದರ ಮೇಲೆ ಒಂದು ಕೊಳಗ ಉಪ್ಪನ್ನು ಹರಡಬೇಕು ಶಾಸ್ತ್ರೋಕ್ತವಿಧಿಯಿಂದ ಸಂಕಲ್ಪವನ್ನು ಮಾಡಿ ಅದರ ಮೇಲೆ ರತ್ನಮಯವಾದ ಹಸುವನ್ನಿರಿಸಬೇಕು

೪ ಆ ಹಸುವಿನ ಮುಖದಲ್ಲಿ ಎಂಬತ್ತೊಂದು ಪದ್ಮರಾಗರತ್ನಗಳನ್ನೂ, ಮೂಗಿನ ಮೇಲ್ಗಡೆಯಲ್ಲಿ ಒಂದುನೂರು ಪದ್ಮರಾಗ ಮಣಿಗಳನ್ನೂ ಕೆತ್ತಿರಬೇಕು

ಲಲಾಟೇ ಹೇಮತಿಲಕಂ ಮುಕ್ತಾಫಲಶತಂ ದೃಶೋಃ ।
ಭ್ರೂಯುಗೇ ವಿದ್ರುಮಶತಂ ಶುಕ್ತೀ ಕರ್ಣದ್ವಯೇ ಸ್ಮೃತೇ ॥ ೫ ॥

ಕಾಂಚನಾನಿ ಚ ಶೃಂಗಾಣಿ ಶಿರೋ ವಜ್ರಶತಾತ್ಮಕಂ ।
ಗ್ರೀವಾಯಾಂ ನೇತ್ರಪಟಲಂ ಗೋಮೇದಕಶತಾನ್ವಿತಂ ॥ ೬ ॥

ಇಂದ್ರನೀಲಶತಂ ಪೃಷ್ಠೇ ವೈದೂರ್ಯಶತಪಾರ್ಶ್ವಕೇ ।
ಸ್ಫಾಟಿಕೈರುದರಂ ತದ್ವತ್ಸೌಗಂಧಿಕಶತೈಃ ಕಟಿಂ ॥ ೭ ॥

ಖುರಾ ಹೇಮಮಯಾಃ ಕಾರ್ಯಾಃ ಪುಚ್ಛಂ ಮುಕ್ತಾವಲೀಮಯಂ ।
ಸೂರ್ಯಕಾಂತೇಂದುಕಾಂತೌ ಚ ಘ್ರಾಣೇ ಕರ್ಪೂರಚಂದನೇ ॥ ೮ ॥

---

೫ ಹಣೆಯಲ್ಲಿ ಚಿನ್ನದ ತಿಲಕವೂ, ಕಣ್ಣುಗಳಲ್ಲಿ ನೂರು ಮುತ್ತುಗಳೂ, ಹುಬ್ಬುಗಳಲ್ಲಿ ನೂರು ಹವಳಗಳೂ, ಕಿವಿಗಳಲ್ಲಿ ಎಂಟು ಮುತ್ತಿನ ಚಿಪ್ಪುಗಳೂ ಕಂಗೊಳಿಸುತ್ತಿರುವುವು

೬ ಕೊಂಬುಗಳು ಚಿನ್ನದಿಂದಾಗಿರುವುವು ತಲೆಯು ನೂರು ವಜ್ರಗಳಿಂದ ಕೂಡಿರುವುದು ಕತ್ತಿನಲ್ಲಿ ಒಂದುನೂರು ಗೋಮೇದಕರತ್ನಗಳಿಂದ ಕೂಡಿದ ಗಂದೊಗಲು ಜೋಲಾಡುವುದು

೭ ಬೆನ್ನಿನ ಮೇಲೆ ನೂರು ಇಂದ್ರನೀಲರತ್ನಗಳೂ, ಪಾರ್ಶ್ವಗಳಲ್ಲಿ ನೂರು ವೈಡೂರ್ಯ ರತ್ನಗಳೂ ಶೋಭಿಸುವುವು ಹೊಟ್ಟೆಗೆ ಸ್ಫಟಿಕಮಣಿಗಳನ್ನು ಸೊಂಟಕ್ಕೆ ಸೌಗಂಧಿಕಮಣಿಗಳನ್ನೂ ಕಟ್ಟಿರುವರು

೮ ಚಿನ್ನದ ಗೊರಸುಗಳೂ, ಮುತ್ತಿನ ಕುಚ್ಚುಗಳ ಬಾಲವೂ ಕಂಗೊಳಿಸುವುವು ಸೂರ್ಯಕಾಂತಶಿಲೆಯಿಂದಲೂ ಚಂದ್ರಕಾಂತಶಿಲೆಯಿಂದಲೂ ದೇಹವು ಮೆರೆಯುವುದು ಮೂಗಿನ ಹೊಳ್ಳೆಗಳು ಪಚ್ಚಕರ್ಪೂರದಿಂದಲೂ ಚಂದನದಿಂದಲೂ ಪ್ರಕಾಶಿಸುವುವು

**ಕುಂಕುಮಾನಿ ಚ ರೋಮಾಣಿ ರೌಪ್ಯನಾಭಿಂ ಚ ಕಾರಯೇತ್ ।**
**ಗಾರುತ್ಮತಶತಂ ತದ್ವದಪಾನೇ ಪರಿಕಲ್ಪಯೇತ್ ॥ ೯ ॥**

**ತಥಾನ್ಯಾನಿ ಚ ರತ್ನಾನಿ ಸ್ಥಾಪಯೇತ್ಸರ್ವಸಂಧಿಷು ।**
**ಕುರ್ಯಾಚ್ಛರ್ಕರಯಾ ಜಿಹ್ವಾಂ ಗೋಮಯಂ ಚ ಗುಡಾತ್ಮಕಂ ॥೧೦॥**

**ಗೋಮೂತ್ರಮಾಜ್ಯೇನ ತಥಾ ದಧಿ ದುಗ್ಧಂ ಸ್ವರೂಪತಃ ।**
**ಪುಚ್ಛಾಗ್ರೇ ಚಾಮರಂ ದದ್ಯಾತ್ಸಮೀಪೇ ತಾಮ್ರದೋಹನಂ ॥೧೧॥**

**ಕುಂಡಲಾನಿ ಚ ಹೈಮಾನಿ ಭೂಷಣಾನಿ ಚ ಶಕ್ತಿತಃ ।**
**ಕಾರಯೇದೇವಮೇವಂ ತು ಚತುರ್ಥಾಂಶೇನ ವತ್ಸಕಂ ॥೧೨॥**

**ತಥಾ ಧಾನ್ಯಾನಿ ಸರ್ವಾಣಿ ಪಾದಾಶ್ಚೇಕ್ಷುಮಯಾಃ ಸ್ಮೃತಾಃ ।**
**ನಾನಾಫಲಾನಿ ಸರ್ವಾಣಿ ಪಂಚವರ್ಣಂ ವಿತಾನಕಂ ॥೧೩॥**

---

೯ ಕೇಸರಿಯಿಂದ ಕೂದಲುಗಳನ್ನೂ, ಬೆಳ್ಳಿಯಿಂದ ಹೊಕ್ಕಳನ್ನೂ ನಿರ್ಮಿಸಬೇಕು ಅಪಾನಸ್ಥಳದಲ್ಲಿ ನೂರು ಗಾರುತ್ಮತ ಮಣಿಗಳನ್ನು ಕೆತ್ತಿರಬೇಕು

೧೦ ಸಂಧಿಸ್ಥಾನಗಳಲ್ಲೆಲ್ಲ ಬೇರೆಬೇರೆ ರತ್ನಗಳನ್ನು ಮೆಟ್ಟಬೇಕು ಸಕ್ಕರೆಯಿಂದ ನಾಲಗೆಯನ್ನೂ, ಬೆಲ್ಲದಿಂದ ಗೋಮಯವನ್ನೂ ರಚಿಸಬೇಕು

೧೧ ಈ ಹಸುವಿಗೆ ತುಪ್ಪವೇ ಗೋಮೂತ್ರವೆನಿಸುವುದು ಬಾಲದ ತುದಿಗೆ ಚಾಮರವನ್ನು ಕಟ್ಟಿ, ತಾಮ್ರದ ಕರೆಯುವ ಪಾತ್ರೆಯನ್ನೂ ಹಾಲುಮೊಸರುಗಳನ್ನೂ ಸಮೀಪದಲ್ಲಿರಿಸಬೇಕು

೧೨ ತನ್ನ ಶಕ್ತಿಗೆ ತಕ್ಕಂತೆ ಚಿನ್ನದ ಕುಂಡಲಗಳನ್ನೂ ಇತರ ಒಡವೆಗಳನ್ನೂ ತೊಡಿಸಬೇಕು ಹಸುವನ್ನು ನಿರ್ಮಿಸಲು ಉಪಯೋಗಿಸಿದ ಸಾಮಗ್ರಿಗಳಲ್ಲಿ ನಾಲ್ಕರಲ್ಲೊಂದು ಪಾಲಿನಿಂದ ಕರುವನ್ನು ಮಾಡಬೇಕು

೧೩ ಹದಿನೆಂಟು ಬಗೆಯ ಧಾನ್ಯಗಳನ್ನೂ, ಬಗೆಬಗೆಯ ಹಣ್ಣುಗಳನ್ನೂ ಸುತ್ತಲೂ ಇರಿಸಿ ಐದು ಬಣ್ಣದ ಬಟ್ಟೆಗಳಿಂದ ಮೇಲ್ಗಟ್ಟನ್ನು ಕಟ್ಟಬೇಕು ಹಸುವಿನ ಮತ್ತು ಕರುವಿನ ಕಾಲುಗಳನ್ನು ಕಬ್ಬಿನ ಜಲ್ಲೆಗಳಿಂದ ಮಾಡಬೇಕು

ಏವಂ ವಿರಚನಂ ಕೃತ್ವಾ ತದ್ವದ್ಧೋಮಾಧಿವಾಸನಂ ।
ಋತ್ವಿಗ್ಭ್ಯೋ ದಕ್ಷಿಣಾಂ ದದ್ಯಾದ್ಧೇನುಮಾಮಂತ್ರಯೇತ್ತತಃ ।
ಗುಡಧೇನುವದಾವಾಹ್ಯ ಇದಂ ಚೋದಾಹರೇತ್ತತಃ ॥೧೪॥

ತ್ವಾಂ ಸರ್ವದೇವಗಣಧಾಮ ಯತಃ ಪಠಂತಿ ।
ರುದ್ರೇಂದ್ರಸೂರ್ಯಕಮಲಾಸನವಾಸುದೇವಾಃ ।
ತಸ್ಮಾತ್ಸಮಸ್ತಭುವನತ್ರಯದೇಹಯುಕ್ತಾ
ಮಾಂ ಪಾಹಿ ದೇವಿ ಭವಸಾಗರಪೀಡ್ಯಮಾನಂ ॥೧೫॥

ಆಮಂತ್ರ್ಯ ಚೇತ್ಥಮಭಿತಃ ಪರಿವೃತ್ಯ ಭಕ್ತ್ಯಾ
ದದ್ಯಾದ್ದ್ವಿಜಾಯ ಗುರವೇ ಜಲಪೂರ್ವಿಕಾಂ ತಾಂ ।
ಯಃ ಪುಣ್ಯಮಾಪ್ಯ ದಿನಮತ್ರ ಕೃತೋಪವಾಸಃ ।
ಪಾಪೈರ್ವಿಮುಕ್ತತನುರೇತಿ ಪದಂ ಮುರಾರೇಃ ೧೬॥

---

೧೪ ಈ ಬಗೆಯ ಲಕ್ಷಣಗಳಿಂದ ಕೂಡಿದ ಹಸುವನ್ನೂ ಕರುವನ್ನೂ ನಿರ್ಮಿಸಿ, ಸಲಕರಣಗಳನ್ನು ಒದಗಿಸಿಕೊಂಡ ಬಳಿಕ, ತುಲಾಪುರುಷದಾನ ದಂತೆಯೇ ಹೋಮವನ್ನೂ ಅಧಿವಾಸನವನ್ನೂ ನಡೆಸಬೇಕು. ಋತ್ವಿಕ್ಕುಗಳಿಗೆ ದಕ್ಷಿಣೆಕೊಟ್ಟು ರತ್ನಧೇನುವನ್ನು ಸಂಬೋಧಿಸಿ ಪ್ರಾರ್ಥಿಸಬೇಕು. ಬೆಲ್ಲದ ಹಸುವನ್ನು ದಾನಕೊಡುವ ವಿಧಾನದಲ್ಲಿ ಹೇಳಿದಂತೆ ಆವಾಹನಮಾಡಿ ಈ ಮುಂದಿನ ಮಂತ್ರ ಗಳನ್ನು ಹೇಳಬೇಕು

೧೫ ಎಲೌ ಗೋಮಾತೇ, ಈಶ್ವರ, ಇಂದ್ರ, ಸೂರ್ಯ, ಬ್ರಹ್ಮ, ವಿಷ್ಣು ಇವರೆಲ್ಲರೂ ನಿನ್ನನ್ನು ದೇವಗಣಗಳಿಗೆಲ್ಲ ಆವಾಸನಸ್ಥಾನವೆಂದು ಹೇಳುತ್ತಾರೆ ಆದುದರಿಂದ ನಿನ್ನ ದೇಹದಲ್ಲಿ ಚರಾಚರಾತ್ಮಕವಾದ ಮೂರು ಲೋಕಗಳೂ ಅಡಗಿವೆಯೆಂಬುದು ಸ್ಪಷ್ಟವಾಗಿದೆ ದೇವೀ, ಸಂಸಾರಸಾಗರದ ಪೀಡೆಗೆ ಸಿಕ್ಕಿ ಬಳಲುತ್ತಿರುವ ನನ್ನನ್ನು ರಕ್ಷಿಸು

೧೬ ಹೀಗೆ ಪ್ರಾರ್ಥಿಸಿ ಭಕ್ತಿಯಿಂದ ಪ್ರದಕ್ಷಿಣಮಾಡಿ, ಆ ರತ್ನಧೇನುವನ್ನು ಬ್ರಾಹ್ಮಣೋತ್ತಮನಾದ ಆಚಾರ್ಯನಿಗೆ ಧಾರಾಪೂರ್ವಕವಾಗಿ ಕೊಡಬೇಕು ಪುಣ್ಯ ಕರವಾದ ಈ ದಾನವನ್ನು ಮಾಡಿದ ದಿವಸ ಯಜಮಾನನು ಉಪವಾಸವಿರಬೇಕು ಅವನು ಸಕಲಪಾಪಗಳಿಂದ ಮುಕ್ತನಾಗಿ ಮಹಾವಿಷ್ಣುವಿನ ಸಾನ್ನಿಧ್ಯವ ನ್ನೈದುವನು

**ಇತಿ ಸಕಲವಿಧಿಜ್ಞೋ ರತ್ನಧೇನುಪ್ರದಾನಂ ।**
**ವಿತರತಿ ಸ ವಿಮಾನಂ ಪ್ರಾಪ್ಯ ದೇದೀಪ್ಯಮಾನಂ ।**
**ಸಕಲಕಲುಷಮುಕ್ತೋ ಬಂಧುಭಿಃ ಪುತ್ರಪೌತ್ರೈಃ ।**
**ಸಹಿ ಮದನಸರೂಪಃ ಸ್ಥಾನಮಭ್ಯೇತಿ ಶಂಭೋಃ ॥೧೭॥**

**ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ಮಹಾದಾನಾನುಕೀರ್ತನೇ ರತ್ನಧೇನುಪ್ರದಾನವಿಧಿರ್ನಾಮಾಷ್ಟಾಶೀತ್ಯಧಿಕದ್ವಿಶತತಮೋಽಧ್ಯಾಯಃ**

---

೧೭ ಹೀಗೆ ಶಾಸ್ತ್ರವಿಧಿಗಳೆಲ್ಲವನ್ನೂ ಅನುಸರಿಸಿ ರತ್ನಧೇನುವನ್ನು ಯಾವನು ದಾನಮಾಡುತ್ತಾನೋ ಅವನು ತೇಜೋಭರಿತವಾದ ವಿಮಾನದಲ್ಲಿ ಕುಳಿತು ಸಂಚರಿಸುವನು ಸಕಲಪಾಪಗಳಿಂದಲೂ ಮುಕ್ತನಾಗುವನು ಮನ್ಮಥನಂತೆ ದಿವ್ಯರೂಪದಿಂದ ಪ್ರಕಾಶಿಸುವನು ಬಂಧುಬಳಗದವರೊಡನೆಯೂ ಮಕ್ಕಳು ಮೊಮ್ಮಕ್ಕಳೊಡನೆಯೂ ಕೂಡಿ ಪರಮೇಶ್ವರನ ಸಾನ್ನಿಧ್ಯವನ್ನು ಸೇರುವನು

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ರತ್ನಖಚಿತವಾದ ಹಸುವನ್ನು ದಾನಮಾಡುವ ವಿಧಾನವನ್ನು ಹೇಳಿದೆ

ಶಾಸ್ತ್ರೋಕ್ತವಾದ ರೀತಿಯಲ್ಲಿ ಆಯಾ ಅಂಗಗಳಿಗೆ ಗೊತ್ತಾದ ಸಂಖ್ಯೆಯ ರತ್ನಗಳನ್ನು ಮೆಟ್ಟಿಸಿ ಹಸುವನ್ನೂ ಕರುವನ್ನೂ ನಿರ್ಮಿಸಬೇಕು ತುಲಾಪುರುಷ ದಾನದಲ್ಲಿ ಹೇಳಿರುವಂತೆ ಹೋಮ, ಆವಾಹನ, ಅಧಿವಾಸನ ಇವು ಕ್ರಮವಾಗಿ ನಡೆದ ಬಳಿಕ, ಯಜಮಾನನು ಹಸುವನ್ನು ಭಕ್ತಿಯಿಂದ ಪ್ರದಕ್ಷಿಣಮಾಡಿ, ವೇದ ಪಾರಂಗತನಾದ ಆಚಾರ್ಯನಿಗ ಉದಕಧಾರಾಪೂರ್ವಕವಾಗಿ ಅದನ್ನು ದಾನಮಾಡಬೇಕು ಆ ದಿನ ಉಪವಾಸವಿರಬೇಕು

ಈ ದಾನಮಾಡಿದವನು ಸಕಲಪಾಪಗಳಿಂದಲೂ ಬಿಡುಗಡೆಹೊಂದಿ, ಬಂಧು ಪುತ್ರಪೌತ್ರಾದಿಗಳೊಡನೆ ಪರಮೇಶ್ವರನ ಸಾನ್ನಿಧ್ಯವನ್ನು ಸೇರುವನು

ಶ್ರೀಮತ್ಸ್ಯಮಹಾಪುರಾಣದಲ್ಲಿ ಮಹಾದಾನಾನುಕೀರ್ತನದಲ್ಲಿ
ರತ್ನಧೇನುಪ್ರದಾನವಿಧಿಯೆಂಬ ಇನ್ನೂರೆಂಬತ್ತೆಂಟನೆಯ ಅಧ್ಯಾಯವು ಮುಗಿದುದು

## ಅಥೈಕೋನನವತ್ಯಧಿಕದ್ವಿಶತತಮೋಽಧ್ಯಾಯಃ

|| ಮತ್ಸ್ಯ ಉವಾಚ ||

ಅಥಾತಃ ಸಂಪ್ರವಕ್ಷ್ಯಾಮಿ ಮಹಾದಾನಮನುತ್ತಮಂ ।
ಮಹಾಭೂತಘಟಂ ನಾಮ ಮಹಾಪಾತಕನಾಶನಂ || ೧ ||

ಪುಣ್ಯಾಂ ತಿಥಿಮಥಾಸಾದ್ಯ ಕೃತ್ವಾ ಬ್ರಾಹ್ಮಣವಾಚನಂ ।
ಋತ್ವಿಙ್ಮಂಡಪಸಂಭಾರಭೂಷಣಾಚ್ಛಾದನಾದಿಕಂ || ೨ ||

ತುಲಾಪುರುಷವತ್ಕುರ್ಯಾಲ್ಲೋಕೇಶಾವಾಹನಾದಿಕಂ ।
ಕಾರಯೇತ್ಕಾಂಚನಂ ಕುಂಭಂ ಮಹಾರತ್ನಾಂಚಿತಂ ಬುಧಃ || ೩ ||

ಪ್ರಾದೇಶಾದಂಗುಲಶತಂ ಯಾವತ್ಕುರ್ಯಾತ್ಪ್ರಮಾಣತಃ ।
ಕ್ಷೀರಾಜ್ಯಪೂರಿತಂ ತದ್ವತ್ಕಲ್ಪವೃಕ್ಷಸಮನ್ವಿತಂ || ೪ ||

---

೧ ಮತ್ಸ್ಯರೂಪನಾದ ಭಗವಂತನು ಹೇಳಿದನು —ಇನ್ನುಮುಂದೆ ಮಹಾಭೂತಘಟದಾನವೆಂಬ ಅತಿಶ್ರೇಷ್ಠವಾದ ಮಹಾದಾನದ ವಿಧಾನವನ್ನು ಹೇಳುವೆನು ಇದು ಮಹಾಪಾತಕಗಳನ್ನೂ ಪರಿಹರಿಸುತ್ತದೆ

೨ ಪುಣ್ಯತಿಥಿಯಲ್ಲಿ ಬ್ರಾಹ್ಮಣರ ಆಶೀರ್ವಾದವನ್ನು ಪಡೆದು, ಋತ್ವಿಗ್ವರಣ, ಮಂಟಪನಿರ್ಮಾಣ, ವಸ್ತ್ರಭೂಷಣಾದಿ ಸಾಮಗ್ರೀಸಂಗ್ರಹ ಇವುಗಳನ್ನು ಮಾಡಬೇಕು ತುಲಾಪುರುಷದಾನದಂತೆಯೇ ಲೋಕಪಾಲಕರ ಆವಾಹನ, ಹೋಮ ಮುಂತಾದುವನ್ನು ನಡೆಸಬೇಕು

೩-೪ ಶ್ರೇಷ್ಠವಾದ ರತ್ನಗಳನ್ನು ಕೆತ್ತಿದ ಚಿನ್ನದ ಕುಂಭವನ್ನು ಮಾಡಿಸಬೇಕು ಅದು ಒಂದು ಗೇಣಿನಿಂದ ಹಿಡಿದು ನೂರು ಅಂಗುಲದವರೆಗೂ ಎತ್ತರವಾಗಿರಬಹುದು ಅದರಲ್ಲಿ ಹಾಲನ್ನೂ ತುಪ್ಪವನ್ನೂ ತುಂಬಿ ಕಲ್ಪವೃಕ್ಷದ ರೆಂಬೆಯನ್ನಿಡಬೇಕು

ಪದ್ಮಾಸನಗತಾಂಸ್ತತ್ರ ಬ್ರಹ್ಮವಿಷ್ಣುಮಹೇಶ್ವರಾನ್ ।
ಲೋಕಪಾಲಾನ್ ಮಹೇಂದ್ರಾಂಶ್ಚ ಸ್ವಸ್ವವಾಹನಮಾಸ್ಥಿತಾನ್
ವರಾಹೇಣೋದ್ಧೃತಾಂ ತದ್ವತ್ಕುರ್ಯಾತ್ಪೃಥ್ವೀಂ ಸಪಂಕಜಾಂ ॥ ೫ ॥

ವರುಣಂ ಚಾಸನಗತಂ ಕಾಂಚನಂ ಮಕರೋಪರಿ ।
ಹುತಾಶನಂ ಮೇಷಗತಂ ವಾಯುಂ ಕೃಷ್ಣಮೃಗಾಸನಂ ॥ ೬ ॥

ತಥಾ ಕೋಶಾಧಿಪಂ ಕುರ್ಯಾನ್ಮೂಷಕಸ್ಥಂ ವಿನಾಯಕಂ ।
ವಿನ್ಯಸ್ಯ ಘಟಮಧ್ಯೇ ತಾನ್ ವೇದಪಂಚಕಸಂಯುತಾನ್ ॥ ೭ ॥

ಋಗ್ವೇದಸ್ಯಾಕ್ಷಸೂತ್ರಂ ಸ್ಯಾದ್ಯಜುರ್ವೇದಸ್ಯ ಪಂಕಜಂ ।
ಸಾಮವೇದಸ್ಯ ವೀಣಾ ಸ್ಯಾದ್ವೇಣುಂ ದಕ್ಷಿಣತೋ ನ್ಯಸೇತ್ ॥ ೮ ॥

ಅಥರ್ವವೇದಸ್ಯ ಪುನಃ ಸ್ರುಕ್ಸ್ರುವೌ ಕಮಲಂ ಕರೇ ।
ಪುರಾಣವೇದೋ ವರದಃ ಸಾಕ್ಷಸೂತ್ರಕಮಂಡಲುಃ ॥ ೯ ॥

---

೫ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರು ಪದ್ಮಾಸನದಲ್ಲಿ ಕುಳಿತಿರುವಂತೆಯೂ, ಲೋಕಪಾಲಕರೂ ಮಹೇಂದ್ರರೂ ತಮ್ಮತಮ್ಮ ವಾಹನಗಳನ್ನೇರಿರುವಂತೆಯೂ, ಕೈಯಲ್ಲಿ ತಾವರೆ ಹಿಡಿದಿರುವ ಭೂದೇವಿಯನ್ನು ವರಾಹಮೂರ್ತಿಯು ಎತ್ತುತ್ತಿರುವಂತೆಯೂ ಪ್ರತಿಮೆಗಳನ್ನು ನಿರ್ಮಿಸಬೇಕು

೬ ಮೊಸಳೆಯಮೇಲೆ ಚಿನ್ನದ ಪೀಠದಲ್ಲಿ ಕುಳಿತ ವರುಣ, ಆಡನ್ನು ಏರಿರುವ ಅಗ್ನಿ, ಹುಲ್ಲೆಯಮೇಲೆ ಕುಳಿತಿರುವ ವಾಯು, ನರವಾಹನನಾದ ಕುಬೇರ, ಇಲಿಯನ್ನೇರಿದ ವಿನಾಯಕ ಇವರ ವಿಗ್ರಹಗಳನ್ನು ಸಹ ವಿರಚಿಸಬೇಕು

೭-೯ ಈ ವಿಗ್ರಹಗಳನ್ನೆಲ್ಲ ಘಟದ ಮಧ್ಯದಲ್ಲಿ ಇಡಬೇಕು ಇವುಗಳ ಸಂಗಡ ಚತುರ್ವೇದಗಳ ಮತ್ತು ಪುರಾಣವೇದದ ಮೂರ್ತಿಗಳನ್ನೂ ಇರಿಸಬೇಕು ಋಗ್ವೇದಪುರುಷನಿಗೆ ಜಪಸರವೂ, ಯಜುರ್ವೇದಪುರುಷನಿಗೆ ತಾವರೆಯೂ, ಹಸ್ತಾಲಂಕಾರವಾಗಿರುವುವು ಸಾಮವೇದಪುರುಷನು ಎಡಗೈಯಲ್ಲಿ ವೀಣೆಯನ್ನೂ ಬಲಗೈಯಲ್ಲಿ ಕೊಳಲನ್ನೂ ಧರಿಸಿರುವನು ಅಥರ್ವಪುರುಷನಾದರೋ ಸ್ರುಕ್ಕು, ಸ್ರುವ ಮತ್ತು ಕಮಲಗಳನ್ನು ಹಿಡಿದುಕೊಂಡಿರುವನು ಪುರಾಣವೇದ ಪುರುಷನು ಜಪಸರವನ್ನೂ ಕಮಂಡಲುವನ್ನೂ ಧರಿಸಿ ವರದಹಸ್ತದಿಂದ ಕಂಗೊಳಿಸುತ್ತಿರುವನು

ಪರಿತಃ ಸರ್ವಧಾನ್ಯಾನಿ ಚಾಮರಾಸನದರ್ಪಣಂ ।
ಪಾದುಕೋಪಾನಹಚ್ಛತ್ರಂ ದೀಪಿಕಾಭೂಷಣಾನಿ ಚ ॥೧೦॥

ಶಯ್ಯಾಂ ಚ ಜಲಕಂಭಾಂಶ್ಚ ಪಂಚವರ್ಣಂ ವಿತಾನಕಂ ।
ಸ್ನಾತ್ವಾಧಿವಾಸನಾಂತೇ ತು ಮಂತ್ರಮೇತಮುದೀರಯೇತ್ ॥೧೧॥

ನಮೋ ವಃ ಸರ್ವದೇವಾನಾಮಾಧಾರೇಭ್ಯಶ್ಚರಾಚರೇ ।
ಮಹಾಭೂತಾಧಿದೇವೇಭ್ಯಃ ಶಾಂತಿರಸ್ತು ಶಿವಂ ಮಮ ॥೧೨॥

ಯಸ್ಮಾನ್ನ ಕಿಂಚಿದಪ್ಯಸ್ತಿ ಮಹಾಭೂತೈರ್ವಿನಾಕೃತಂ ।
ಬ್ರಹ್ಮಾಂಡೇ ಸರ್ವಭೂತೇಷು ತಸ್ಮಾಚ್ಛ್ರೀರಕ್ಷಯಾಸ್ತು ಮೇ ॥೧೩॥

ಇತ್ಯುಚ್ಚಾರ್ಯ ಮಹಾಭೂತಘಟಂ ಯೋ ವಿನಿವೇದಯೇತ್ ।
ಸರ್ವಪಾಪವಿನಿರ್ಮುಕ್ತಃ ಸ ಯಾತಿ ಪರಮಾಂ ಗತಿಂ ॥೧೪॥

---

೧೦-೧೧ ಸುವರ್ಣಕುಂಭದ ಸುತ್ತಲೂ ಹದಿನೆಂಟು ಬಗೆಯ ಧಾನ್ಯಗಳು, ಚಾಮರಗಳು, ಆಸನ, ಕನ್ನಡಿ, ಪಾದುಕೆ, ಪಾದರಕ್ಷೆ, ಕೊಡೆ, ದೀಪ, ಒಡವೆಗಳು ಹಾಸಿಗೆ, ಜಲಕುಂಭಗಳು ಇವನ್ನು ಕ್ರಮವಾಗಿ ಇರಿಸಬೇಕು ಪಂಚವರ್ಣದ ಬಟ್ಟೆಗಳಿಂದ ಮೇಲ್ಗಟ್ಟನ್ನು ಕಟ್ಟಬೇಕು ಹೋಮವೂ ಅಧಿವಾಸನವೂ ಮುಗಿದ ಮೇಲೆ ಈ ಮುಂದಿನ ಮಂತ್ರವನ್ನು ಹೇಳಬೇಕು

೧೨ ಚರಾಚರಾತ್ಮಕವಾದ ಈ ಜಗತ್ತಿನ ಸಕಲದೇವತೆಗಳಿಗೂ ಆಧಾರ ಭೂತವೆನಿಸಿರುವ, ಮಹಾಭೂತದ ಅಧಿದೇವತೆಗಳಾದ ನಿಮಗೆ ನಮಸ್ಕಾರ ನನಗೆ ಶಾಂತಿಯೂ ಮಂಗಳವೂ ಆಗಲಿ

೧೩ ಪಂಚಮಹಾಭೂತಗಳಿಲ್ಲದೆ ನಿರ್ಮಿತವಾದ ಯಾವುದೊಂದು ವಸ್ತುವೂ ಈ ಬ್ರಹ್ಮಾಂಡದಲ್ಲಿಲ್ಲ ಸಕಲ ಪ್ರಾಣಿಗಳಲ್ಲೂ ಇವು ಇದ್ದೇ ಇರುವುವು ಆದಕಾರಣ ನನಗೆ ಇವುಗಳ ಅನುಗ್ರಹದಿಂದ ಅಕ್ಷಯವಾದ ಸಂಪತ್ತು ಪ್ರಾಪ್ತವಾಗಲಿ

೧೪ ಹೀಗೆ ಹೇಳಿ ಮಹಾಭೂತಘಟವನ್ನು ಯಾವನು ದಾನಮಾಡುತ್ತಾನೋ ಅವನು ಸಕಲ ಪಾಪನಿರ್ಮುಕ್ತನಾಗಿ ಅತ್ಯಂತ ಶ್ರೇಷ್ಠವಾದ ಗತಿಯನ್ನು ಪಡೆಯುವನು

ವಿಮಾನೇನಾರ್ಕವರ್ಣೇನ ಪಿತೃಬಂಧುಸಮನ್ವಿತಃ ।
ಸ್ತೂಯಮಾನೋ ವರಸ್ತ್ರೀಭಿಃ ಪದಮಭ್ಯೇತಿ ವೈಷ್ಣವಂ ॥೧೫॥

ಷೋಡಶೈತಾನಿ ಯಃ ಕುರ್ಯಾನ್ಮಹಾದಾನಾನಿ ಮಾನವಃ ।
ನ ತಸ್ಯ ಪುನರಾವೃತ್ತಿರಿಹ ಲೋಕೇಽಭಿಜಾಯತೇ ॥೧೬॥

ಇತಿ ಪಠತಿ ಯ ಇತ್ಥಂ ವಾಸುದೇವಸ್ಯ ಪಾರ್ಶ್ವೇ
ಸಸುತಪಿತೃಕಲತ್ರಃ ಸಂಶೃಣೋತೀಹ ಸಮ್ಯಕ್ ।
ಮುರರಿಪುಭವನೇ ವೈ ಮಂದಿರೇಽವಾರ್ಕಲಕ್ಷ್ಮ್ಯಾ
ತ್ವಮರಪುರವಧೂಭಿರ್ಮೋದತೇ ಸೋಽಪಿ ಕಲ್ಪಂ ॥೧೭॥

ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ಮಹಾದಾನಾನುಕೀರ್ತನಂ
ನಾಮೈಕೋನನವತ್ಯಧಿಕದ್ವಿಶತತಮೋಽಧ್ಯಾಯಃ

---

೧೫ ಸೂರ್ಯನಂತೆ ಜಾಜ್ವಲ್ಯಮಾನವಾದ ವಿಮಾನದಲ್ಲಿ ಕುಳಿತು, ದಿವ್ಯ ಸುಂದರಿಯರಿಂದ ಗುಣಗಾನಮಾಡಿಸಿಕೊಳ್ಳುತ್ತ ಪಿತೃಗಳೊಡನೆಯೂ ಬಂಧುಗಳೊಡನೆಯೂ ಕೂಡಿ ವಿಷ್ಣುಸಾನ್ನಿಧ್ಯವನ್ನೈದುವನು

೧೬ ಈ ಹದಿನಾರು ಮಹಾದಾನಗಳನ್ನು ಮಾಡುವ ಮನುಷ್ಯನು ಈ ಲೋಕದಲ್ಲಿ ಪುನಃ ಜನ್ಮವನ್ನು ತಾಳುವುದಿಲ್ಲ

೧೭ ಈ ಮಹಾದಾನಗಳ ವರ್ಣನವನ್ನು ವಾಸುದೇವನ ಸಮೀಪದಲ್ಲಿ ಪಾರಾಯಣಮಾಡಲಿ, ಮಗ, ತಂದೆ, ಹೆಂಡತಿ ಇವರೊಡಗೂಡಿ ಶ್ರದ್ಧೆಯಿಂದ ಕೇಳಲಿ, ಆತನು ವೈಕುಂಠಲೋಕದಲ್ಲಿ ಸಂತೋಷದಿಂದ ವಾಸಿಸುವನು ಸೂರ್ಯನಂತೆ ಕಾಂತಿಯುಕ್ತನಾಗಿ ದಿವ್ಯಲೋಕಗಳಲ್ಲಿ ದೇವತಾಸ್ತ್ರೀಯರೊಡನೆ ಅನಂತಕಾಲ ಆನಂದಿಸುವನು

## ಅಧ್ಯಾಯ ೨೮೯

## **ಅಧ್ಯಾಯದ ಸಾರಾಂಶ**

ಮಹಾದಾನಗಳಲ್ಲಿ ಕೊನೆಯದಾದ ಮಹಾಭೂತಘಟದಾನವನ್ನು ಈ ಅಧ್ಯಾಯದಲ್ಲಿ ಹೇಳಿದೆ

ತನ್ನ ಯೋಗ್ಯತಾನುಸಾರವಾಗಿ ಚಿನ್ನದಿಂದ ಗುಡಾಣವನ್ನು ಮಾಡಿಸಿ ಅದರಲ್ಲಿ ಹಾಲನ್ನೂ ತುಪ್ಪವನ್ನೂ ತುಂಬಬೇಕು ತ್ರಿಮೂರ್ತಿಗಳ, ಅಷ್ಟದಿಕ್ಪಾಲಕರ ಮತ್ತು ವೇದಪುರುಷರ ಸುವರ್ಣಪ್ರತಿಮೆಗಳನ್ನು ನಿರ್ಮಿಸಿ ಅದರೊಳಗಡೆ ಹಾಕಬೇಕು ಯಥಾವಿಧಿಯಾಗಿ ಆವಾಹನ, ಪೂಜೆ, ಹೋಮ ಮತ್ತು ಅಧಿವಾಸನಗಳು ಮುಗಿದ ಮೇಲೆ ಯಜಮಾನನು ಮಂತ್ರೋದಕಸ್ನಾನದಿಂದ ಪರಿಶುದ್ಧನಾಗಿ ಮಹಾಕುಂಭವನ್ನು ಪ್ರದಕ್ಷಿಣಮಾಡಿ, ಸ್ತೋತ್ರಿಸಿ ಆಚಾರ್ಯನಿಗೆ ದಾನಮಾಡಬೇಕು ಬಂಧುಮಿತ್ರಕಲತ್ರರೊಡನೆ ಆತನು ವಿಷ್ಣುಸಾನಿಧ್ಯವನ್ನು ಸೇರುವನು

ಶ್ರೀಮತ್ಸ್ಯಮಹಾಪುರಾಣದಲ್ಲಿ ಮಹಾದಾನಾನುಕೀರ್ತನವೆಂಬ
ಇನ್ನೂರೆಂಬತ್ತೊಂಬತ್ತನೆಯ ಅಧ್ಯಾಯವು ಮುಗಿದುದು

---

## ಅಥ ನವತ್ಯಧಿಕದ್ವಿಶತತಮೋಽಧ್ಯಾಯಃ

॥ ಮನುರುವಾಚ ॥

ಕಲ್ಪಮಾನಂ ತ್ವಯಾ ಪ್ರೋಕ್ತಂ ಮನ್ವಂತರಯುಗೇಷು ಚ ।
ಇದಾನೀಂ ಕಲ್ಪನಾಮಾನಿ ಸಮಾಸಾತ್ಕಥಯಾಚ್ಯುತ ॥ ೧ ॥

॥ ಮತ್ಸ್ಯ ಉವಾಚ ॥

ಕಲ್ಪಾನಾಂ ಕೀರ್ತನಂ ವಕ್ಷ್ಯೇ ಮಹಾಪಾತಕನಾಶನಂ ।
ಯಸ್ಯಾನುಕೀರ್ತನಾದೇವ ವೇದಪುಣ್ಯೇನ ಯುಜ್ಯತೇ ॥ ೨ ॥

ಪ್ರಥಮಃ ಶ್ವೇತಕಲ್ಪಸ್ತು ದ್ವಿತೀಯೋ ನೀಲಲೋಹಿತಃ ।
ವಾಮದೇವಸ್ತೃತೀಯಸ್ತು ತತೋ ರಾಥಂತರೋಽಪರಃ ॥ ೩ ॥

---

೧ ಮನುಚಕ್ರವರ್ತಿ ಹೇಳಿದನು —ನಿರ್ವಿಕಾರನಾದ ಓ ಪರಮಾತ್ಮಾ, ಮನ್ವಂತರಗಳ ವರ್ಣನವನ್ನೂ ಯುಗಗಳ ವರ್ಣನವನ್ನೂ ಮಾಡಿದಾಗ ಕಲ್ಪದ* ಪರಿಮಾಣವನ್ನು ನೀನು ಹೇಳಿದೆ ಈಗ ಕಲ್ಪಗಳ ಹೆಸರನ್ನು ಸಂಗ್ರವಾಗಿ ತಿಳಿಸು

೨ ಮತ್ಸ್ಯರೂಪನಾದ ಭಗವಂತನು ಹೇಳಿದನು —ಇನ್ನು ಮುಂದೆ ಕಲ್ಪಗಳ ಹೆಸರನ್ನು ತಿಳಿಸುವೆನು ಇವುಗಳ ನಾಮೋಚ್ಚಾರಣವು ಘೋರವಾದ ಪಾತಕಗಳೆಲ್ಲವನ್ನೂ ಪರಿಹರಿಸುವುದು ಸಕಲವೇದಗಳ ಪಾರಾಯಣದಿಂದ ಬರುವ ಪುಣ್ಯವನ್ನು ಕೊಡುವುದು

೩ ಮೊದಲನೆಯದು ಶ್ವೇತಕಲ್ಪ ಎರಡನೆಯದು ನೀಲಲೋಹಿತಕಲ್ಪ ಮೂರನೆಯದಕ್ಕೆ ವಾಮದೇವಕಲ್ಪವೆಂದೂ ನಾಲ್ಕನೆಯವಕ್ಕೆ ರಾಥಂತರಕಲ್ಪವೆಂದೂ ಹೆಸರು

---

*ಕಲ್ಪವೆಂದರೆ ಬ್ರಹ್ಮನ ಒಂದು ದಿವಸ ಚತುರ್ಯುಗಗಳು ಒಂದುಸಾವಿರ ಸಾರಿ ನಡೆದರೆ ಆಗುವಷ್ಟು ಕಾಲ.

ರೌರವಃ ಪಂಚಮಃ ಪ್ರೋಕ್ತಃ ಷಷ್ಠೋ ದೇವ ಇತಿ ಸ್ಮೃತಃ ।
ಸಪ್ತಮೋಽಥ ಬೃಹತ್ಕಲ್ಪಃ ಕಂದರ್ಪೋಽಷ್ಟಮ ಉಚ್ಯತೇ ॥ ೪ ॥

ಸದ್ಯೋಽಥ ನವಮಃ ಪ್ರೋಕ್ತ ಈಶಾನೋ ದಶಮಃ ಸ್ಮೃತಃ ।
ತಮ ಏಕಾದಶ ಪ್ರೋಕ್ತಸ್ತಥಾ ಸಾರಸ್ವತಃ ಪರಃ ॥ ೫ ॥

ತ್ರಯೋದಶ ಉದಾನಸ್ತು ಗಾರುಡೋಽಥ ಚತುರ್ದಶಃ ।
ಕೌರ್ಮಃ ಪಂಚದಶಃ ಪ್ರೋಕ್ತಃ ಪೌರ್ಣಮಾಸ್ಯಾಮಜಾಯತ ॥ ೬ ॥

ಷೋಡಶೋ ನಾರಸಿಂಹಸ್ತು ಸಮಾನಸ್ತು ತತೋಽಪರಃ ।
ಆಗ್ನೇಯೋಽಷ್ಟಾದಶಃ ಪ್ರೋಕ್ತಃ ಸೋಮಕಲ್ಪಸ್ತಥಾ ಪರಃ ॥ ೭ ॥

ಮಾನವೋ ವಿಂಶತಿಃ ಪ್ರೋಕ್ತಸ್ತತ್ಪುಮಾನಿತಿ ಚಾಪರಃ
ವೈಕುಂಠಶ್ಚಾಪರಸ್ತದ್ವಲ್ಲಕ್ಷ್ಮೀಕಲ್ಪಸ್ತಥಾಪರಃ ॥ ೮ ॥

---

೪ ಐದನೆಯ ಕಲ್ಪವನ್ನು ರೌರವವೆಂದೂ, ಆರನೆಯದನ್ನು ದೇವವೆಂದೂ, ಏಳನೆಯದನ್ನು ಬೃಹತ್ಕಲ್ಪವೆಂದೂ, ಎಂಟನೆಯದನ್ನು ಕಂದರ್ಪವೆಂದೂ ಹೇಳುತ್ತಾರೆ

೫ ಒಂಬತ್ತನೆಯದು ಸದ್ಯಕಲ್ಪವೆಂದೂ, ಹತ್ತನಯದು ಈಶಾನಕಲ್ಪವೆಂದೂ ಪ್ರಸಿದ್ಧವಾಗಿವೆ ಹನ್ನೊಂದನೆಯದಕ್ಕೆ ತಮಃಕಲ್ಪವೆಂದು ಹಸರು ಅದರ ಮುಂದಿನದು ಸಾರಸ್ವತಕಲ್ಪವೆನಿಸುವುದು

೬ ಹದಿಮೂರನೆಯ ಕಲ್ಪವನ್ನು ಉದಾನವೆಂದೂ, ಹದಿನಾಲ್ಕನೆಯದನ್ನು ಗಾರುಡವೆಂದೂ ಹೇಳುತ್ತಾರೆ ಹದಿನೈದನೆಯ ಕಲ್ಪವನ್ನು ಕೌರ್ಮವೆಂದು ಕರೆಯುತ್ತಾರೆ ಇದು ಹುಣ್ಣಿಮೆಯಿಂದ ಹುಟ್ಟಿತು

೭ ಹದಿನಾರನೆಯ ಕಲ್ಪವು ನಾರಸಿಂಹವೆನಿಸುವುದು ಅದರ ಮುಂದಿನದಕ್ಕೆ ಸಮಾನವೆಂದು ಹೆಸರು ಹದಿನೆಂಟನೆಯ ಕಲ್ಪವನ್ನು ಆಗ್ನೇಯವೆಂದೂ ಹತ್ತೊಂಬತ್ತನೆಯದನ್ನು ಸೋಮಕಲ್ಪವೆಂದೂ ಹೇಳುತ್ತಾರೆ

೮ ಇಪ್ಪತ್ತನೆಯದು ಮಾನಸಕಲ್ಪ, ಅಲ್ಲಿಂದ ಮುಂದೆ ಕ್ರಮವಾಗಿ ತತ್ಪುರುಷಕಲ್ಪ, ವೈಕುಂಠಕಲ್ಪ, ಲಕ್ಷ್ಮೀಕಲ್ಪ ಇವು ಬರುವುವು

ಚತುರ್ವಿಂಶತಿಮಃ ಪ್ರೋಕ್ತಃ ಸಾವಿತ್ರಿಕಲ್ಪಸಂಜ್ಞಕಃ ।
ಪಂಚವಿಂಶಸ್ತತೋ ಘೋರೋ ವಾರಾಹಸ್ತು ತತೋಽಪರಃ ॥ ೯ ॥

ಸಪ್ತವಿಂಶೋಽಥ ವೈರಾಜೋ ಗೌರೀಕಲ್ಪಸ್ತಥಾ ಪರಃ ।
ಮಾಹೇಶ್ವರಸ್ತು ಸ ಪ್ರೋಕ್ತಸ್ತ್ರಿಪುರಂ ಯತ್ರ ಘಾತಿತಂ ॥೧೦॥

ಪಿತೃಕಲ್ಪಸ್ತಥಾಂತೇ ತು ಯಾ ಕುಹೂರ್ಬ್ರಹ್ಮಣಃ ಪುರಾ ।
ಇತ್ಯೇವಂ ಬ್ರಹ್ಮಣೋ ಮಾಸಃ ಸರ್ವಪಾತಕನಾಶನಃ ॥೧೧॥

ಆದಾವೇವ ಹಿ ಮಾಹಾತ್ಮ್ಯಂ ಯಸ್ಮಿನ್ ಯಸ್ಯ ವಿಧೀಯತೇ ।
ತಸ್ಯ ಕಲ್ಪಸ್ಯ ತನ್ನಾಮ ವಿಹಿತಂ ಬ್ರಹ್ಮಣಾ ಪುರಾ ॥೧೨॥

ಸಂಕೀರ್ಣಾಸ್ತಾಮಸಾಶ್ಚೈವ ರಾಜಸಾಃ ಸಾತ್ವಿಕಾಸ್ತಥಾ ।
ರಜಸ್ತಮೋಮಯಾಸ್ತದ್ವದೇತೇ ತ್ರಿಂಶದುದಾಹೃತಾಃ ॥೧೩॥

---

೯ ಇಪ್ಪತ್ತನಾಲ್ಕನೆಯದನ್ನು ಸಾವಿತ್ರೀ ಕಲ್ಪವೆಂದುಕರೆಯುತ್ತಾರೆ ಇಪ್ಪತ್ತೈದನೆಯದನ್ನು ಘೋರಕಲ್ಪವೆಂದೂ ಅದರ ಮುಂದಿನದನ್ನು ವಾರಾಹ ಕಲ್ಪವೆಂದೂ ಹೇಳುವರು

೧೦ ಇಪ್ಪತ್ತೇಳನೆಯದು ವೈರಾಜಕಲ್ಪ, ಇಪ್ಪತ್ತೆಂಟನೆಯದು ಗೌರೀಕಲ್ಪ ಇದರ ಮುಂದಿನದಕ್ಕೆ ಮಾಹೇಶ್ವರಕಲ್ಪವೆಂದು ಹೆಸರು ತ್ರಿಪುರಾಸುರಸಂಹಾರವು ನಡೆದುದು ಈ ಕಲ್ಪದಲ್ಲಿಯೇ

೧೧ ಕೊನೆಯದು ಪಿತೃಕಲ್ಪವೆನಿಸಿಕೊಳ್ಳುವುದು ಇದಕ್ಕೆ ಕುಹೂಕಲ್ಪ ವೆಂದು ಬ್ರಹ್ಮನು ಹೆಸರು ಕೊಟ್ಟಿದ್ದಾನೆ ಈ ಮೂವತ್ತು ಕಲ್ಪಗಳು ಸೇರಿ ಬ್ರಹ್ಮನಿಗೆ ಒಂದು ತಿಂಗಳಾಗುತ್ತದೆ ಇವುಗಳ ನಾಮಸ್ಮರಣದಿಂದ ಪಾತಕಗಳೆಲ್ಲ ಪರಿಹಾರವಾಗುತ್ತವೆ

೧೨-೧೩ ಬ್ರಹ್ಮನು ಈಶ್ವರ, ವಿಷ್ಣು ಮುಂತಾದವರಲ್ಲಿ ಯಾರ ಮಾಹಾತ್ಮ್ಯವನ್ನು ಯಾವ ಕಲ್ಪದ ಪ್ರಾರಂಭದಲ್ಲಿ ಮಾಡುತ್ತಾನೆಯೋ ಆ ಕಲ್ಪಕ್ಕೆ ಅದೇ ಹೆಸರು ಬರುತ್ತದೆ ಈ ಮೂವತ್ತು ಕಲ್ಪಗಳನ್ನು ಸಂಕೀರ್ಣ, ತಾಮಸ, ರಾಜಸ ಮತ್ತು ಸಾತ್ವಿಕಗಳೆಂದು ವಿಂಗಡಿಸಿದ್ದಾರ ಇವು ಸತ್ವರಜಸ್ತಮಸ್ಸುಗಳೆಂಬ ಗುಣಗಳಿಂದ ಪ್ರಚುರವಾಗಿವೆ

ಸಂಕೀರ್ಣೇಷು ಸರಸ್ವತ್ಯಾಃ ಪಿತೃಣಾಂ ವೃಷ್ಟಿರುಚ್ಯತೇ ।
ಅಗ್ನೇಃ ಶಿವಸ್ಯ ಮಾಹಾತ್ಮ್ಯಂ ತಾಮಸೇಷು ದಿವಾಕರೇ
ರಾಜಸೇಷು ಚ ಮಾಹಾತ್ಮ್ಯಮಧಿಕಂ ಬ್ರಹ್ಮಣಃ ಸ್ಮೃತಂ ||೧೪||

ಯಸ್ಮಿನ್ ಕಲ್ಪೇ ತು ಯತ್ಪ್ರೋಕ್ತಂ ಪುರಾಣಂ ಬ್ರಹ್ಮಣಾ ಪುರಾ ।
ತಸ್ಯ ತಸ್ಯ ತು ಮಾಹಾತ್ಮ್ಯಂ ತತ್ಸ್ವರೂಪೇಣ ವರ್ಣ್ಯತೇ ||೧೫||

ಸಾತ್ವಿಕೇಷ್ವಧಿಕಂ ತದ್ವದ್ವಿಷ್ಣೋರ್ಮಾಹಾತ್ಮ್ಯಮುತ್ತಮಂ ।
ಶಷ್ಟೈವ ಯೋಗಸಂಸಿದ್ಧಾ ಗಮಿಷ್ಯಂತಿ ಪರಾಂ ಗತಿಂ ||೧೬||

ಬ್ರಾಹ್ಮಂ ಪಾದ್ಮಮಿಮಂ ಯಸ್ತು ಪಠೇತ್ಪರ್ವಣಿ ಪರ್ವಣಿ ।
ತಸ್ಯ ಧರ್ಮೇ ಮತಿರ್ಬ್ರಹ್ಮಾ ಕರೋತಿ ವಿಪುಲಾಂ ಶ್ರಿಯಂ ||೧೭||

---

೧೪ ಸಂಕೀರ್ಣ ಕಲ್ಪಗಳಲ್ಲಿ ಸರಸ್ವತಿಯ ಮತ್ತು ಪಿತೃಗಳ ಮಾಹಾತ್ಮ್ಯವು ವರ್ಣಿತವಾಗಿದೆ ತಾಮಸಕಲ್ಪಗಳಲ್ಲಿ ಅಗ್ನಿಯ, ಶಿವನ ಮತ್ತು ಸೂರ್ಯನ ಮಹಿಮೆಯು ಉಕ್ತವಾಗಿದೆ ರಾಜಸಕಲ್ಪಗಳಲ್ಲಿ ವಿಶೇಷವಾಗಿ ಬ್ರಹ್ಮನ ಹಿರಿಮೆಯು ಪ್ರತಿಪಾದಿತವಾಗಿದೆ ಪರಿಶೇಷನ್ಯಾಯದಿಂದ ಸಾತ್ವಿಕಕಲ್ಪಗಳಲ್ಲಿ ವಿಷ್ಣುವಿನ ಪ್ರಭಾವವು ಹೇಳಲ್ಪಟ್ಟಿದೆಯೆಂದು ತಿಳಿಯಬೇಕು

೧೫ ಬ್ರಹ್ಮನು ಯಾವ ಯಾವ ಕಲ್ಪದಲ್ಲಿ ಯಾವ ಯಾವ ಪುರಾಣವನ್ನು ಹೇಳಿರುವನೋ ಆಯಾ ಪುರಾಣದಲ್ಲಿ ಆ ಕಲ್ಪದ ಸ್ವರೂಪಕ್ಕೆ ಅನುಸಾರವಾಗಿ ವಿಷ್ಣು ಸರಸ್ವತಿ, ಶಿವ ಮುಂತಾದವರ ಮಹಿಮೆಯು ವರ್ಣಿಸಲ್ಪಟ್ಟಿರುವುದು ಆ ಪುರಾಣಗಳೂ ಸಹ ಸಾತ್ವಿಕ, ರಾಜಸ, ತಾಮಸ ಮತ್ತು ಸಂಕೀರ್ಣಗಳೆಂದು ವ್ಯವಹರಿಸಲ್ಪಡುವುವು

೧೬ ಸಾತ್ವಿಕಪುರಾಣಗಳಲ್ಲಿ ವಿಷ್ಣುವಿನ ಮಹಿಮೆಯು ಅತಿಶಯವಾಗಿ ಪ್ರತಿಪಾದಿತವಾಗಿರುವುದು ಅವುಗಳಲ್ಲಿ ಹೇಳಿರುವಂತೆ ನಡೆದು, ಯೋಗಸಿದ್ಧಿಯನ್ನು ಪಡೆದು ಜ್ಞಾನಿಗಳು ಸದ್ಗತಿಯನ್ನೈದುವರು

೧೭ ಸಾತ್ವಿಕಕಲ್ಪದಲ್ಲಿ ಬ್ರಹ್ಮನು ಹೇಳಿದ ಪಾದ್ಮಪುರಾಣವನ್ನು ಪ್ರತಿಯೊಂದು ಪರ್ವದಲ್ಲಿಯೂ ಯಾವನು ಪಾರಾಯಣಮಾಡುವನೋ ಅವನಿಗೆ ಬ್ರಹ್ಮನ ಅನುಗ್ರಹದಿಂದ ಧರ್ಮದಲ್ಲಿ ಬುದ್ಧಿಯು ಸ್ಥಿರವಾಗಿ ನಿಲ್ಲುವುದು ಅಪಾರವಾದ ಸಂಪತ್ತು ಲಭಿಸುವುದು

ಯಸ್ತು ದದ್ಯಾದಿಮಾಂ ಕೃತ್ವಾ ಹೈಮಾಂ ಪರ್ವಣಿ ಪರ್ವಣಿ ।
ಬ್ರಹ್ಮವಿಷ್ಣುಪುರೇ ವಾಸಂ ಮುನಿಭಿಃ ಪೂಜ್ಯತೇ ದಿವಿ ॥೧೮॥

ಸರ್ವಪಾಪಕ್ಷಯಕರಂ ಕಲ್ಪದಾನಂ ಯತೋ ಭವೇತ್ ।
ಮುನಿರೂಪಾಂಸ್ತತಃ ಕೃತ್ವಾ ದದ್ಯಾತ್ಕಲ್ಪಾನ್ ವಿಚಕ್ಷಣಃ ॥೧೯॥

ಪುರಾಣಸಂಹಿತಾ ಚೇಯಂ ತವ ಭೂಪ ಮಯೋದಿತಾ ।
ಸರ್ವಪಾಪಹರಾ ನಿತ್ಯಮಾರೋಗ್ಯಶ್ರೀಫಲಪ್ರದಾ ॥೨೦॥

ಬ್ರಹ್ಮಸಂವತ್ಸರಶತಾದೇಕಾಹಂ ಶೈವಮುಚ್ಯತೇ ।
ಶಿವವರ್ಷಶತಾದೇಕಂ ನಿಮೇಷಂ ವೈಷ್ಣವಂ ವಿದುಃ ॥೨೧॥

ಯದಾ ಸ ವಿಷ್ಣುರ್ಜಾಗರ್ತಿ ತದೇದಂ ಚೇಷ್ಟತೇ ಜಗತ್ ।
ಯದಾ ಸ್ವಪಿತಿ ಶಾಂತಾತ್ಮಾ ತದಾ ಸರ್ವಂ ನಿಮೀಲತಿ ॥೨೨॥

---

೧೮-೧೯ ಮೇಲೆ ಹೇಳಿದ ಕಲ್ಪಗಳನ್ನು ಅವುಗಳ ವಿಶೇಷಲಕ್ಷಣಕ್ಕೆ ಅನುಸಾರವಾಗಿ ಚಿನ್ನದಿಂದ ಮುನಿಗಳ ರೂಪದಲ್ಲಿ ರಚಿಸಿ ಒಂದೊಂದು ಪರ್ವಕಾಲದಲ್ಲಿಯೂ ದಾನಮಾಡಬಹುದು ಇದಕ್ಕೆ ಕಲ್ಪದಾನವೆಂದು ಹೆಸರು ಇದು ಸಕಲ ಪಾಪಗಳನ್ನೂ ಪರಿಹರಿಸುತ್ತದೆ ಈ ದಾನವನ್ನು ಮಾಡಿದವನು ಬ್ರಹ್ಮಲೋಕದಲ್ಲಿಯೂ, ವಿಷ್ಣುಲೋಕದಲ್ಲಿಯೂ ವಾಸಿಸುವನು ದೇವರ್ಷಿಗಳಿಂದ ಮನ್ನಣೆಯನ್ನು ಪಡೆಯುವನು

೨೦ ಓ ರಾಜೇಂದ್ರಾ, ವೇದಮಂತ್ರಗಳಂತೆ ಪವಿತ್ರವಾದ ಈ ಮತ್ಸ್ಯ ಮಹಾಪುರಾಣವನ್ನು ನಿನಗೆ ಹೇಳಿರುವೆನು ಇದು ಪಾಪಗಳನ್ನೆಲ್ಲ ಪರಿಹರಿಸಿ ನಿತ್ಯವೂ ಆರೋಗ್ಯವನ್ನೂ ಸಂಪತ್ತನ್ನೂ ಕರುಣಿಸುವುದು

೨೧ ಬ್ರಹ್ಮದೇವನಿಗೆ ನೂರು ವರ್ಷಗಳು ಮುಗಿದರೆ ಶಿವನಿಗೆ ಒಂದು ಹಗಲಾಗುತ್ತದ ಈ ಪರಿಮಾಣದಲ್ಲಿ ಶಿವವರ್ಷಗಳು ನೂರು ನಡೆದರೆ ವಿಷ್ಣುವಿಗೆ ಒಂದು ನಿಮೇಷ—ಎಂದರೆ ರೆಪ್ಪೆಬಡಿಯುವಷ್ಟು ಕಾಲವಾಗುತ್ತದೆ

೨೨ ಸರ್ವವ್ಯಾಪಕನಾದ ವಾಸುದೇವನು ಎಚ್ಚರವಾಗಿದ್ದನೆಂದರೆ ಈ ಜಗತ್ತೆಲ್ಲವೂ ಸಜೀವವಾಗಿ ತನ್ನ ವ್ಯಾಪಾರದಲ್ಲಿ ತೊಡಗಿರುತ್ತದೆ ಆ ಶಾಂತಾತ್ಮನು ಯೋಗನಿದ್ರೆಯಲ್ಲಿ ತೊಡಗಿದಾಗ ಎಲ್ಲವೂ ಲಯವಾಗುತ್ತದೆ

## ಅಧ್ಯಾಯ ೨೯೦

## ॥ ಸೂತ ಉವಾಚ ॥

ಇತ್ಯುಕ್ತ್ವಾ ದೇವದೇವೇಶೋ ಮತ್ಸ್ಯರೂಪೀ ಜನಾರ್ದನಃ ।
ಪಶ್ಯತಾಂ ಸರ್ವಭೂತಾನಾಂ ತತ್ರೈವಾಂತರಧೀಯತ ॥೨೩॥

ವೈವಸ್ವತೋ ಹಿ ಭಗವಾನ್ ವಿಸೃಜ್ಯ ವಿವಿಧಾಃ ಪ್ರಜಾಃ ।
ಸ್ವಾಂತರಂ ಪಾಲಯಾಮಾಸ ಮಾರ್ತಂಡಕುಲವರ್ಧನಃ ॥೨೪॥

ಯಸ್ಯ ಮನ್ವಂತರಂ ಚೈತದಧುನಾ ಚಾನುವರ್ತತೇ ।
ಪುಣ್ಯಂ ಪವಿತ್ರಮೇತದ್ವಃ ಕಥಿತಂ ಮತ್ಸ್ಯಭಾಷಿತಂ
ಪುರಾಣಂ ಸರ್ವಶಾಸ್ತ್ರಾಣಾಂ ಯದೇತನ್ಮೂರ್ಧ್ನಿ ಸಂಸ್ಥಿತಂ ॥೨೫॥

ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ಕಲ್ಪಾನುಕೀರ್ತನಂ
ನಾಮ ನವತ್ಯಧಿಕದ್ವಿಶತತಮೋಽಧ್ಯಾಯಃ

---

೨೩ ಸೂತಪೌರಾಣಿಕನು ಹೇಳಿದನು —ದೇವದೇವನೂ ಮತ್ಸ್ಯರೂಪಧಾರಿಯೂ ಆದ ಮಹಾವಿಷ್ಣು ವೈವಸ್ವತ ಮನುವಿಗೆ ಹೀಗೆ ಹೇಳಿ, ಸಕಲಪ್ರಾಣಿಗಳೂ ನೋಡುತ್ತಿರಲು ಅಲ್ಲಿಯೇ ಅದೃಶ್ಯನಾದನು

೨೪ ಸೂರ್ಯವಂಶಕ್ಕೆ ಕೀರ್ತಿತರುವವನೂ ಪೂಜ್ಯನೂ ಆದ ವೈವಸ್ವತ ಮನುಚಕ್ರವರ್ತಿಯು ನಾನಾಜಾತಿಯ ಪ್ರಜೆಗಳನ್ನು ಸೃಷ್ಟಿಸಿ ತನ್ನ ಮನ್ವಂತರದಲ್ಲಿ ರಾಜ್ಯಭಾರಕ್ಕೆ ತೊಡಗಿದನು

೨೫ ಈಗಲೂ ಕೂಡ ವೈವಸ್ವತಮನ್ವಂತರವೇ ನಡೆಯುತ್ತಿದೆ ಎಲೈ ಬ್ರಾಹ್ಮಣೋತ್ತಮರೇ, ಮತ್ಸ್ಯಭಗವಂತನು ಹೇಳಿದ ಪುಣ್ಯಕರವೂ ಪವಿತ್ರವೂ ಆದ ಪುರಾಣವನ್ನು ನಿಮಗೆ ತಿಳಿಸಿದೆನು ಇದು ಸಕಲಶಾಸ್ತ್ರಗಳ ಶಿರೋಭೂಷಣವಾಗಿ ನಿಲ್ಲತಕ್ಕ ಮಹಾಪುರಾಣವಾಗಿರುವುದು

## ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಕಲ್ಪಗಳ ಹೆಸರನ್ನು ತಿಳಿಸಿದೆ

ಶ್ವೇತಕಲ್ಪ ನೀಲಲೋಹಿತಕಲ್ಪ, ವಾಮದೇವಕಲ್ಪ ಮೊದಲಾಗಿ ಮೂವತ್ತು ಕಲ್ಪಗಳಿವೆ ಇವೆಲ್ಲ ಒಂದುಸಾರಿ ಮುಗಿದರೆ ಬ್ರಹ್ಮನಿಗೆ ಒಂದು ತಿಂಗಳಾಗುತ್ತದೆ ಬ್ರಹ್ಮನ ನೂರು ವರ್ಷಗಳಿಗೆ ಪರಮೇಶ್ವರನ ಒಂದು ಹಗಲು ಸಮ. ಆವನಿಗೆ ನೂರು ವರ್ಷಗಳಾದರೆ ವಿಷ್ಣುವಿಗೆ ಒಂದು ನಿಮೇಷಕಾಲವಾಗುತ್ತದೆ

ಕಲ್ಪಗಳಲ್ಲಿ ಸಾತ್ವಿಕ, ರಾಜಸ, ತಾಮಸ ಮತ್ತು ಸಂಕೀರ್ಣಗಳೆಂದು ನಾಲ್ಕು ವಿಧ ಯಾವ ಕಲ್ಪದಲ್ಲಿ ಬ್ರಹ್ಮನು ಯಾವ ಪುರಾಣವನ್ನು ಹೇಳುತ್ತಾನೋ ಆ ಪುರಾಣಕ್ಕೆ ಅದೇ ತಾಮಸ, ಸಾತ್ವಿಕ ಅಥವಾ ರಾಜಸವೆಂಬ ಹೆಸರು ಬರುತ್ತದೆ ಸಾತ್ವಿಕಪುರಾಣಗಳಲ್ಲಿ ವಿಷ್ಣುವಿನ ಮಾಹಾತ್ಮ್ಯವನ್ನೂ, ತಾಮಸಪುರಾಣಗಳಲ್ಲಿ ಶಿವನ ಮಹಿಮೆಯನ್ನೂ, ರಾಜಸಪುರಾಣಗಳಲ್ಲಿ ಬ್ರಹ್ಮನ ಹಿರಿಮೆಯನ್ನೂ, ಸಂಕೀರ್ಣಪುರಾಣಗಳಲ್ಲಿ ಸರಸ್ವತಿಯ ಪ್ರಭಾವವನ್ನೂ ವಿಶೇಷವಾಗಿ ವರ್ಣಿಸಿದೆ

ಶ್ರೀಮತ್ಸ್ಯಮಹಾಪುರಾಣದಲ್ಲಿ ಕಲ್ಪಾನುಕೀರ್ತನವೆಂಬ ಇನ್ನೂರತೊಂಬತ್ತನೆಯ ಅಧ್ಯಾಯವು ಮುಗಿದುದು

# ಅಷ್ಟೈಕನವತ್ಯಧಿಕದ್ವಿಶತತಮೋಽಧ್ಯಾಯಃ

|| ಸೂತ ಉವಾಚ ||

ಏತದ್ವಃ ಕಥಿಕಂ ಸರ್ವಂ ಯದುಕ್ತಂ ವಿಶ್ವರೂಪಿಣಾ ।
ಮಾತ್ಸ್ಯಂ ಪುರಾಣಮಖಿಲಂ ಧರ್ಮಕಾಮಾರ್ಥಸಾಧನಂ || ೧ ||

ಯತ್ರಾದೌ ಮನುಸಂವಾದೋ ಬ್ರಹ್ಮಾಂಡಕಥನಂ ತಥಾ ।
ಸಾಂಖ್ಯಂ ಶಾರೀರಕಂ ಪ್ರೋಕ್ತಂ ಚತುರ್ಮುಖಮುಖೋದ್ಭವಂ || ೨ ||

ದೇವಾಸುರಾಣಾಮುತ್ಪತ್ತಿರ್ಮಾರುತೋತ್ಪತ್ತಿರೇವ ಚ ।
ಮದನದ್ವಾದಶೀ ತದ್ವಲ್ಲೋಕಪಾಲಾಭಿಪೂಜನಂ || ೩ ||

ಮನ್ವಂತರಾಣಾಮುದ್ದೇಶೋ ವೈನ್ಯರಾಜಾಭಿವರ್ಣನಂ ।
ಸೂರ್ಯವೈವಸ್ವತೋತ್ಪತ್ತಿರ್ಬುಧಸಂಗಮನಂ ತಥಾ || ೪ ||

---

೧ ಸೂತಪೌರಾಣಿಕನು ಹೇಳಿದನು --ಸರ್ವಶರೀರಿಯಾದ ಭಗವಂತನು ಮನುಚಕ್ರವರ್ತಿಗೆ ಹೇಳಿದ ಮತ್ಸ್ಯಮಹಾಪುರಾಣವೆಲ್ಲವನ್ನೂ ನಿಮಗೆ ವಿಸ್ತರಿಸಿ ಹೇಳಿರುವೆನು ಇದು ಧರ್ಮ, ಅರ್ಥ, ಕಾಮ ಎಂಬ ಪುರುಷಾರ್ಥಗಳನ್ನು ಸಾಧಿಸಲು ಉತ್ತಮವಾದ ಸಾಧನವಾಗಿರುವುದು

೨ ಈ ಪುರಾಣದ ಪ್ರಾರಂಭದಲ್ಲಿ ಮನುಚಕ್ರವರ್ತಿಗೂ ಮತ್ಸ್ಯರೂಪಿಯಾದ ಭಗವಂತನಿಗೂ ಸಂವಾದವು ನಡೆಯಿತು ಬಳಿಕ ಬ್ರಹ್ಮಾಂಡದ ಉತ್ಪತ್ತಿಯನ್ನೂ, ಸಾಂಖ್ಯಶಾಸ್ತ್ರದಲ್ಲಿ ಹೇಳಿರುವಂತೆ ಇಪ್ಪತ್ತನಾಲ್ಕು ತತ್ವಗಳಿಂದ ಕೂಡಿದ ಜಗತ್ತಿನ ಸೃಷ್ಟಿವಿಧಾನವನ್ನೂ ಹೇಳಿದುದಾಯಿತು ಆ ಮೇಲೆ ಬ್ರಹ್ಮನಿಗೆ ನಾಲ್ಕು ತಲೆಗಳು ಹುಟ್ಟಿದ ವಿವರವು ತಿಳಿಸಲ್ಪಟ್ಟಿತು

೩-೪ ದೇವತೆಗಳ ಮತ್ತು ಅಸುರರ ಉತ್ಪತ್ತಿಕ್ರಮ, ಮರುದ್ಗಣಗಳು ಹುಟ್ಟಿದರೀತಿ, ಮದನದ್ವಾದಶೀವ್ರತ, ಲೋಕಪಾಲಕರ ಪೂಜೆ, ಮನ್ವಂತರಗಳ ವರ್ಣನೆ, ಪೃಥುಚಕ್ರವರ್ತಿಯ ರಾಜ್ಯಾಭಿಷೇಕವೃತ್ತಾಂತ, ಸೂರ್ಯನ ಮತ್ತು ಯಮನ ಉತ್ಪತ್ತಿ, ಬುಧನಿಗೂ ಇಲೆಗೂ ಸಮಾಗಮ ಈ ವಿಷಯಗಳನ್ನು ಕ್ರಮವಾಗಿ ವರ್ಣಿಸಿದೆ

ಪಿತೃವಂಶಾನುಕಥನಂ ಶ್ರಾದ್ಧಕಾಲಸ್ತಥೈವ ಚ ।
ಪಿತೃತೀರ್ಥಪ್ರವಾಸಶ್ಚ ಸೋಮೋತ್ಪತ್ತಿಸ್ತಥೈವ ಚ ॥ ೫ ॥

ಕೀರ್ತನಂ ಸೋಮವಂಶಸ್ಯ ಯಯಾತಿಚರಿತಂ ತಥಾ ।
ಕಾರ್ತವೀರ್ಯಸ್ಯ ಮಾಹಾತ್ಮ್ಯಂ ವೃಷ್ಣಿವಂಶಾನುಕೀರ್ತನಂ ॥ ೬ ॥

ಭೃಗುಶಾಪಸ್ತಥಾ ವಿಷ್ಣೋರ್ದೈತ್ಯಶಾಪಸ್ತಥೈವ ಚ
ಕೀರ್ತನಂ ಪುರುವಂಶಸ್ಯ ವಂಶೋ ಹೌತಾಶನಸ್ತಥಾ ॥ ೭ ॥

ಪುರಾಣಕೀರ್ತನಂ ತದ್ವತ್ಕ್ರಿಯಾಯೋಗಸ್ತಥೈವ ಚ
ವ್ರತಂ ನಕ್ಷತ್ರಸಂಖ್ಯಾಕಂ ಮಾರ್ತಂಡಶಯನಂ ತಥಾ ॥ ೮ ॥

ಕೃಷ್ಣಾಷ್ಟಮೀವ್ರತಂ ತದ್ವದ್ರೋಹಿಣೀಚಂದ್ರಸಂಜ್ಞಿತಂ ।
ತಡಾಗವಿಧಿಮಾಹಾತ್ಮ್ಯಂ ಪಾದಪೋತ್ಸರ್ಗ ಏವ ಚ ॥ ೯ ॥

ಸೌಭಾಗ್ಯಶಯನಂ ತದ್ವದಗಸ್ತ್ಯವ್ರತಮೇವ ಚ ।
ತಥಾನಂತತೃತೀಯಾ ತು ರಸಕಲ್ಯಾಣಿನೀ ತಥಾ ॥೧೦॥

---

೫-೬ ಪಿತೃವಂಶವರ್ಣನೆ, ಶ್ರಾದ್ಧಕ್ಕೆ ಯೋಗ್ಯವಾದ ಕಾಲ, ಪಿತೃಗಳಿಗೆ ಪ್ರಿಯವಾದ ಪುಣ್ಯತೀರ್ಥಗಳು, ಅವುಗಳ ಯಾತ್ರೆಯಿಂದ ಬರುವ ಫಲ, ಚಂದ್ರನ ಉತ್ಪತ್ತಿ, ಚಂದ್ರವಂಶದ ವರ್ಣನೆ, ಯಯಾತಿಮಹಾರಾಜನ ವೃತ್ತಾಂತ, ಕಾರ್ತವೀರ್ಯಾರ್ಜುನನ ಮಾಹಾತ್ಮ್ಯ, ಯಾದವವಂಶದ ವರ್ಣನೆ ಇವು ಅನಂತರ ಉಕ್ತವಾಗಿವೆ

೭-೮ ವಿಷ್ಣುವಿಗೆ ಭೃಗುಋಷಿಯ ಶಾಪ, ದೈತ್ಯರಿಗೆ ಶುಕ್ರಾಚಾರ್ಯರ ಶಾಪ, ಪುರುವಂಶವರ್ಣನೆ, ಅಗ್ನಿವಂಶವರ್ಣನೆ, ಪುರಾಣಸಂಖ್ಯಾನುಕ್ರಮಣಿಕೆ, ಕರ್ಮಯೋಗದ ಶ್ರೇಷ್ಠತೆ, ನಕ್ಷತ್ರಪುರುಷವ್ರತ, ಆದಿತ್ಯಶಯನವ್ರತ ಇವುಗಳನ್ನು ಬಳಿಕ ಯಥಾಕ್ರಮವಾಗಿ ವರ್ಣಿಸಿದೆ

೯-೧೦ ತರುವಾಯ ಕೃಷ್ಣಾಷ್ಟಮೀವ್ರತ, ರೋಹಿಣೀಚಂದ್ರಶಯನವ್ರತ, ತಟಾಕಪ್ರತಿಷ್ಠಾವಿಧಿ, ಸೌಭಾಗ್ಯಶಯನವ್ರತ, ಅಗಸ್ತ್ಯವ್ರತ, ಅನಂತತೃತೀಯಾ ವ್ರತ, ರಸಕಲ್ಯಾಣತೃತೀಯಾವ್ರತ, ಆರ್ದ್ರಾನಂದತೃತೀಯಾವ್ರತ, ಸಾರಸ್ವತ

ಆದ್ರಾ್ನಂದಕರೀ ತದ್ವದ್ವ್ರತಂ ಸಾರಸ್ವತಂ ಪುನಃ ।
ಉಪರಾಗಾಭಿಷೇಕಶ್ಚ ಸಪ್ತಮೀಸ್ನಪನಂ ಪುನಃ ॥೧೧॥

ಭೀಮಾಖ್ಯಾ ದ್ವಾದಶೀ ತದ್ವದನಂಗಶಯನಂ ತಥಾ ।
ಅಶೂನ್ಯಶಯನಂ ತದ್ವತ್ತಥೈವಾಂಗಾರಕವ್ರತಂ ॥೧೨॥

ಸಪ್ತಮೀಸಪ್ತಕಂ ತದ್ವದ್ವಿಶೋಕದ್ವಾದಶೀ ತಥಾ ।
ಮೇರುಪ್ರದಾನಂ ದಶಧಾ ಗ್ರಹಶಾಂತಿಸ್ತಥೈವ ಚ ॥೧೩॥

ಗ್ರಹಸ್ವರೂಪಕಥನಂ ತಥಾ ಶಿವಚತುರ್ದಶೀ ।
ತಥಾ ಸರ್ವಫಲತ್ಯಾಗಃ ಸೂರ್ಯವಾರವ್ರತಂ ತಥಾ ॥೧೪॥

ಸಂಕ್ರಾಂತಿಸ್ನಪನಂ ತದ್ವದ್ವಿಭೂತಿದ್ವಾದಶೀವ್ರತಂ ।
ಷಷ್ಟಿವ್ರತಾನಾಂ ಮಾಹಾತ್ಮ್ಯಂ ತಥಾ ಸ್ನಾನವಿಧಿಕ್ರಮಃ ॥೧೫॥

---

ವ್ರತ, ಗ್ರಹಣಸ್ನಾನವಿಧಿ, ಸಪ್ತಮೀಸ್ನಪನವ್ರತ, ಭೀಮದ್ವಾದಶೀವ್ರತ, ಅನಂಗಶಯನವ್ರತ, ಅಶೂನ್ಯಶಯನವ್ರತ, ಅಂಗಾರಕವ್ರತ, ಕಲ್ಯಾಣಸಪ್ತಮಿ, ವಿಶೋಕಸಪ್ತಮಿ, ಫಲಸಪ್ತಮಿ, ಶರ್ಕರಾಫಲಸಪ್ತಮಿ, ಕಮಲಸಪ್ತಮಿ, ಮಂದಾರಸಪ್ತಮಿ, ಮತ್ತು ಶುಭಸಪ್ತಮಿಗಳೆಂಬ ಏಳು ಸಪ್ತಮೀ ವ್ರತಗಳು, ವಿಶೋಕದ್ವಾದಶೀವ್ರತ ಎಂಬ ವ್ರತಗಳ ವಿಧಾನವನ್ನು ಮುಂದೆ ವಿಸ್ತರಿಸಿ ಹೇಳಿದೆ

೧೩-೧೮ ಧಾನ್ಯಪರ್ವತ, ಲವಣಪರ್ವತ, ಗುಡಪರ್ವತ, ಸುವರ್ಣಪರ್ವತ, ತಿಲಪರ್ವತ, ಕಾರ್ಪಾಸಪರ್ವತ, ಘೃತಪರ್ವತ, ರತ್ನಪರ್ವತ, ರೌಪ್ಯಪರ್ವತ ಮತ್ತು ಶರ್ಕರಾಪರ್ವತಗಳೆಂಬ ಹತ್ತುಬಗೆಯ ಪರ್ವತಗಳ ದಾನಕ್ರಮ, ಗ್ರಹಶಾಂತಿ, ಗ್ರಹಸ್ವರೂಪವರ್ಣನ, ಶಿವಚತುರ್ದಶೀವ್ರತ, ಫಲತ್ಯಾಗವ್ರತ, ಆದಿತ್ಯವಾರವ್ರತ, ಸಂಕ್ರಾಂತ್ಯುದ್ಯಾಪನವ್ರತ, ವಿಭೂತಿದ್ವಾದಶೀವ್ರತ, ದೇವವ್ರತ ಮೊದಲಾದ ಅರವತ್ತು ಬಗೆಯ ವ್ರತಗಳ ಮಾಹಾತ್ಮ್ಯ, ಸ್ನಾನವಿಧಿ, ಪ್ರಯಾಗ ಕ್ಷೇತ್ರಮಾಹಾತ್ಮ್ಯ, ಭೂಗೋಳವರ್ಣನ, ಪುರೂರವನು ಆಶ್ರಮದಲ್ಲಿ ಮಾಡಿದ

ಪ್ರಯಾಗಸ್ಯ ತು ಮಾಹಾತ್ಮ್ಯಂ ಭವನಸ್ಯಾನುಕೀರ್ತನಂ ।
ಐಲಾಶ್ರಮವ್ರತಂ ತದ್ವದ್ದ್ವೀಪಲೋಕಾನುಕೀರ್ತನಂ ॥೧೭॥

ಸೂರ್ಯಚಂದ್ರಗತಿಸ್ತದ್ವದಾದಿತ್ಯರಥವರ್ಣನಂ ।
ತಥಾಂತರಿಕ್ಷಚಾರಶ್ಚ ಧ್ರುವಮಾಹಾತ್ಮ್ಯಮೇವ ಚ ॥೧೭॥

ಭುವನಾನಿ ಸುರೇಂದ್ರಾಣಾಂ ತ್ರಿಪುರಾಘೋಷಣಂ ತಥಾ ।
ಪಿತೃಪಿಂಡದಮಾಹಾತ್ಮ್ಯಂ ಮನ್ವಂತರವಿನಿರ್ಣಯಃ ॥೧೮॥

ವಜ್ರಾಂಗಸ್ಯ ತು ಸಂಭೂತಿಸ್ತಾರಕೋತ್ಪತ್ತಿರೇವ ಚ ।
ತಾರಕಾಸುರಮಾಹಾತ್ಮ್ಯಂ ಬ್ರಹ್ಮದೇವಾನುಮಂತ್ರಣಂ ॥೧೯॥

ಪಾರ್ವತೀಸಂಭವಸ್ತದ್ವತ್ತಥಾ ಶಿವತಪೋವನಂ ।
ಅನಂಗದೇಹದಾಹಸ್ತು ರತಿಶೋಕಸ್ತಥೈವ ಚ ॥೨೦॥

ಗೌರೀತಪೋವನಂ ತದ್ವದ್ವಿಶ್ವನಾಥಪ್ರಸಾದನಂ ।
ಪಾರ್ವತೀಋಷಿಸಂವಾದಸ್ತಥೈವೋದ್ವಾಹಮಂಗಲಂ ॥೨೧॥

---

ವ್ರತಶೇಷವರ್ಣನ, ದ್ವೀಪಗಳ ಮತ್ತು ಲೋಕಗಳ ವರ್ಣನ, ಸೂರ್ಯಚಂದ್ರರ ಸಂಚಾರವರ್ಣನ, ಸೂರ್ಯರಥವರ್ಣನ, ಸೂರ್ಯಸಂಚಾರಕಥನ, ಧ್ರುವಮಾಹಾತ್ಮ್ಯ ದೇವಲೋಕಗಳ ವರ್ಣನ, ತ್ರಿಪುರಾಸುರೋಪಾಖ್ಯಾನ, ಪಿತೃಗಳಿಗಾಗಿ ಕೊಡುವ ಪಿಂಡದಾನದ ಮಹಿಮೆ, ಮನ್ವಂತರ ಕಾಲನಿರ್ಣಯ ಈ ವಿಷಯಗಳು ಒಂದಾದ ಮೇಲೆ ಮತ್ತೊಂದರಂತೆ ವರ್ಣಿಸಲ್ಪಟ್ಟವೆ

೧೯-೨೩ ವಜ್ರಾಂಗನ ಉತ್ಪತ್ತಿ, ತಾರಕಾಸುರನ ಜನನ, ತಾರಕಾಸುರನ ಮಹಿಮೆ, ತಾರಕಾಸುರನ ವಧೆ, ಬ್ರಹ್ಮನ ಆಲೋಚನೆ, ಪಾರ್ವತೀ ಜನನ, ಶಿವ ತಪೋವನವರ್ಣನ, ಸಪ್ತರ್ಷಿಗಳು ಪರಮೇಶ್ವರನ ಬಳಿಗೆ ಹೋಗಿ ಅವನನ್ನು ವಿವಾಹಕ್ಕೆ ಒಡಂಬಡಿಸಿದುದು, ಪಾರ್ವತಿಗೂ ಋಷಿಗಳಿಗೂ ನಡೆದ ಸಂವಾದ,

**ಕುಮಾರಸಂಭವಸ್ತದ್ವತ್ಕುಮಾರವಿಜಯಸ್ತಥಾ ।**
**ತಾರಕಸ್ಯ ವಧೋ ಘೋರೋ ನರಸಿಂಹೋಪವರ್ಣನಂ ||೨೨||**

**ಪದ್ಮೋದ್ಭವವಿಸರ್ಗಸ್ತು ತಥೈವಾಂಧಕಘಾತನಂ ।**
**ವಾರಾಣಸ್ಯಾಸ್ತು ಮಾಹಾತ್ಮ್ಯಂ ನರ್ಮದಾಯಾಸ್ತಥೈವ ಚ ||೨೩||**

**ಪ್ರವರಾನುಕ್ರಮಸ್ತದ್ವತ್ಪಿತೃಗಾಥಾನುಕೀರ್ತನಂ ।**
**ತಥೋಭಯಮುಖೀದಾನಂ ದಾನಂ ಕೃಷ್ಣಾಜಿನಸ್ಯ ಚ ||೨೪||**

**ತಥಾ ಸಾವಿತ್ರ್ಯುಪಾಖ್ಯಾನಂ ರಾಜಧರ್ಮಸ್ತಥೈವ ಚ**
**ಯಾತ್ರಾನಿಮಿತ್ತಕಥನಂ ಸ್ವಪ್ನಮಾಂಗಲ್ಯಕೀರ್ತನಂ ||೨೫||**

**ವಾಮನಸ್ಯ ತು ಮಾಹಾತ್ಮ್ಯಂ ತಥೈವಾಥ ವರಾಹಜಂ**
**ಕ್ಷೀರೋದಮಥನಂ ತದ್ವತ್ಕಾಲಕೂಟಾಭಿಶಾಸನಂ ||೨೬||**

---

ಪಾರ್ವತೀಪರಮೇಶ್ವರರ ವಿವಾಹಮಂಗಳದ ವರ್ಣನ, ಷಣ್ಮುಖನ ಉತ್ಪತ್ತಿ, ಷಣ್ಮುಖಜಯವರ್ಣನ, ತಾರಕಾಸುರವಧೆ, ನೃಸಿಂಹಾವತಾರವರ್ಣನ, ಪದ್ಮೋದ್ಭವ ಪ್ರಾದುರ್ಭಾವ, ಅಂಧಕಾಸುರನ ವಧೆ, ವಾರಾಣಸೀಮಾಹಾತ್ಮ್ಯ, ನರ್ಮದಾ ಮಾಹಾತ್ಮ್ಯ ಇವುಗಳನ್ನು ಮತ್ಸ್ಯಮೂರ್ತಿಯು ಅನುಕ್ರಮವಾಗಿ ವಿಸ್ತರಿಸಿ ಹೇಳಿರುವನು

೨೪-೨೬ ಗೋತ್ರಪ್ರವರಾದಿನಿರ್ಣಯ, ಪಿತೃಗಾಥಾವರ್ಣನ, ಕರುಹಾಕುತ್ತಿರುವ ಹಸುವನ್ನು ದಾನಮಾಡುವ ವಿಧಾನ, ಕೃಷ್ಣಾಜಿನದಾನವಿಧಿ, ಸಾವಿತ್ರ್ಯುಪಾಖ್ಯಾನ, ರಾಜಧರ್ಮವರ್ಣನ, ಪ್ರಯಾಣಕಾಲದ ಶುಭಾಶುಭಶಕುನಗಳ ವರ್ಣನ, ಶುಭಸ್ವಪ್ನಫಲವರ್ಣನ, ವಾಮನಮೂರ್ತಿಯ ಮಹಿಮೆ, ವರಾಹಾವತಾರವರ್ಣನ, ಕ್ಷೀರಸಮುದ್ರಮಥನ, ಪರಮೇಶ್ವರನು ಕಾಲಕೂಟವನ್ನು ಪಾನಮಾಡಿದ ವೃತ್ತಾಂತ ಇವುಗಳೆಲ್ಲವೂ ವಿವರವಾಗಿ ಪ್ರತಿಪಾದಿತವಾಗಿವೆ

ದೇವಾಸುರವಿಮರ್ದಶ್ಚ ವಾಸ್ತುವಿದ್ಯಾಸ್ತಥೈವ ಚ ।
ಪ್ರತಿಮಾಲಕ್ಷಣಂ ತದ್ವದ್ದೇವತಾರಾಧನಂ ತತಃ ॥೨೭॥

ಪ್ರಾಸಾದಲಕ್ಷಣಂ ತದ್ವನ್ಮಂಡಪಾನಾಂ ತು ಲಕ್ಷಣಂ ।
ಭವಿಷ್ಯದ್ರಾಜನಿರ್ದೇಶೋ ಮಹಾದಾನಾನುಕೀರ್ತನಂ ।
ಕಲ್ಪಾನುಕೀರ್ತನಂ ತದ್ವದ್ಗ್ರಂಥಾನುಕ್ರಮಣೀ ತಥಾ ॥೨೮॥

ಏತತ್ಪವಿತ್ರಮಾಯುಷ್ಯಮೇತತ್ಕೀರ್ತಿವಿವರ್ಧನಂ ।
ಏತತ್ಪವಿತ್ರಂ ಕಲ್ಯಾಣಂ ಮಹಾಪಾಪಹರಂ ಶುಭಂ ॥೨೯॥

ಅಸ್ಮಾತ್ಪುರಾಣಾತ್ಸುಕೃತಂ ನರಾಣಾಂ
ತೀರ್ಥಾವಲೀನಾಮವಗಾಹನಾನಾಂ ।
ಸಮಸ್ತಧರ್ಮಾಚರಣೋದ್ಭವಾನಾಂ
ಸದೈವ ಲಾಭಶ್ಚ ಮಹಾಫಲಾನಾಂ ॥೩೦॥

---

೨೭-೨೮ ದೇವಾಸುರಯುದ್ಧವರ್ಣನ, ವಾಸ್ತುಶಾಸ್ತ್ರವಿಚಾರ, ಪ್ರತಿಮಾಲಕ್ಷಣ, ದೇವತಾರಾಧನಕ್ರಮ, ದೇವಾಲಯಲಕ್ಷಣ, ಮಂಟಪಲಕ್ಷಣ, ಭವಿಷ್ಯದ್ರಾಜವಂಶವರ್ಣನ, ತುಲಾಪುರುಷಾದಿ ಷೋಡಶಮಹಾದಾನಾನುವರ್ಣನ, ಶ್ವೇತ, ನೀಲಲೋಹಿತ ಮುಂತಾದ ಮೂವತ್ತು ಕಲ್ಪಗಳ ನಾಮಾನುಕೀರ್ತನ, ಗ್ರಂಥಾನುಕ್ರಮಣಿಕೆ ಇವುಗಳನ್ನು ತಿಳಿಸಿ ಪುರಾಣವು ಸಮಾಪ್ತವಾಗಿದೆ

೨೯ ಈ ಪುರಾಣವು ಪವಿತ್ರವೂ ಆಯುರ್ವರ್ಧಕವೂ ಆದುದು ಇದು ಕೀರ್ತಿಯನ್ನು ಹೆಚ್ಚಿಸುವುದು ಇದು ಪಾವನವೂ ಮಂಗಳವೂ ಆಗಿರುವುದು ಮಹಾಪಾಪಗಳನ್ನು ಪರಿಹರಿಸಿ ಕ್ಷೇಮವನ್ನು ಉಂಟುಮಾಡುವುದು

೩೦ ಮನುಜರಿಗೆ ಸಕಲಪುಣ್ಯತೀರ್ಥಗಳ ಸ್ನಾನದಿಂದ ಯಾವ ಪುಣ್ಯವು ಲಭಿಸುವುದೋ, ಶಾಸ್ತ್ರೋಕ್ತವಾದ ಸಮಸ್ತ ಧರ್ಮಗಳ ಆಚರಣೆಯಿಂದ ಯಾವ ಮಹಾಫಲವು ಪ್ರಾಪ್ತವಾಗುವುದೋ, ಅದೆಲ್ಲವೂ ಈ ಮತ್ಸ್ಯಮಹಾಪುರಾಣದ ಪಾರಾಯಣದಿಂದ ನಿತ್ಯವೂ ದೊರಕುವುದು

ಏತತ್ಪುರಾಣಂ ಪರಮಂ ಸರ್ವದೋಷವಿಘಾತಕಂ ।
ಮತ್ಸ್ಯರೂಪೇಣ ಹರಿಣಾ ಕಥಿತಂ ಮನವೇಽರ್ಣವೇ ॥೩೧॥

ಅಸ್ಮಾತ್ಪುರಾಣಾದಪಿ ಪಾದಮೇಕಂ
ಪಠೇತ್ತು ಯಃ ಸೋಽಪಿ ವಿಮುಕ್ತಪಾಪಃ ।
ನಾರಾಯಣಸ್ಯಾಸ್ಪದಮೇತಿ ನೂನ
ಮನಂಗವದ್ದಿವ್ಯವಪುಃ ಸುಖೀ ಸ್ಯಾತ್ ॥೩೨॥

ಪುರಾಣಮೇತತ್ಸಕಲಂ ರಹಸ್ಯಂ
ಶ್ರದ್ಧಾನ್ವಿತಃ ಪುಣ್ಯಮಿದಂ ಶೃಣೋತಿ ।
ಸ ಚಾಶ್ವಮೇಧಾವಭೃಥಪ್ರಭಾವಂ
ಫಲಂಸಮಾಪ್ನೋತಿ ಹರಪ್ರಸಾದಾತ್ ॥೩೩॥

---

೩೧ ಸಕಲದೋಷಗಳನ್ನೂ ತೊಲಗಿಸುವ ಈ ಶ್ರೇಷ್ಠವಾದ ಪುರಾಣವನ್ನು ಮತ್ಸ್ಯರೂಪಧಾರಿಯಾದ ಮಹಾವಿಷ್ಣುವು ವೈವಸ್ವತಮನುಚಕ್ರವರ್ತಿಗೆ ಪ್ರಳಯಸಾಗರದ ಮಧ್ಯದಲ್ಲಿ ವಿಸ್ತರಿಸಿ ಹೇಳಿದನು

೩೨ ಈ ಮಹಾಪುರಾಣದ ಶ್ಲೋಕಗಳಲ್ಲಿ ಒಂದು ಪಾದವನ್ನು ಓದಿದರೂ ಸಾಕು, ಆತನು ಪಾಪಗಳೆಲ್ಲವನ್ನೂ ಕಳೆದುಕೊಂಡು ನಾರಾಯಣನ ಸಾನ್ನಿಧ್ಯವನ್ನು ಸೇರುವನು ಮನ್ಮಥನಂತೆ ದಿವ್ಯಸುಂದರವಾದ ಶರೀರವನ್ನೆತ್ತಿ ಸುಖವಾಗಿ ಬಾಳುವನು ಸಂದೇಹವಿಲ್ಲ

೩೩ ರಹಸ್ಯಾರ್ಥಗಳಿಂದ ತುಂಬಿರುವ ಪುಣ್ಯಕರವಾದ ಈ ಪುರಾಣವನ್ನು ಶ್ರದ್ಧೆಯಿಂದ ಪೂರ್ಣವಾಗಿ ಯಾವನು ಕೇಳುವನೋ, ಅವನು ಪರಮೇಶ್ವರನ ಅನುಗ್ರಹದಿಂದ ಅಶ್ವಮೇಧಯಾಗವನ್ನು ಸಾಂಗವಾಗಿ ನೆರವೇರಿಸಿ ಅವಭೃಥ ಸ್ನಾನವನ್ನು ಮಾಡಿದಷ್ಟು ಮಹಾಫಲವನ್ನು ಪಡೆಯುತ್ತಾನೆ

ಶಿವಂ ವಿಷ್ಣುಂ ಸಮಭ್ಯರ್ಚ್ಯ ಬ್ರಹ್ಮಾಣಂ ಸದಿವಾಕರಂ ।
ಶ್ಲೋಕಂ ಶ್ಲೋಕಾರ್ಧಪಾದಂ ವಾ ಶ್ರದ್ಧಯಾ ಯಃ ಶೃಣೋತಿ ವಾ ।
ಶ್ರಾವಯೇದ್ವಾಪಿ ಧರ್ಮಜ್ಞಸ್ತತ್ಫಲಂ ಶೃಣುತ ದ್ವಿಜಾಃ ॥೩೪॥

ಬ್ರಾಹ್ಮಣೋ ಲಭತೇ ವಿದ್ಯಾಂ ಕ್ಷತ್ರಿಯೋ ಲಭತೇ ಮಹೀಂ ।
ವೈಶ್ಯೋ ಧನಮವಾಪ್ನೋತಿ ಸುಖಂ ಶೂದ್ರಸ್ತು ವಿಂದತಿ ॥೩೫॥

ಆಯುಷ್ಮಾನ್ ಪುತ್ರವಾಂಶ್ಚೈವ ಲಕ್ಷ್ಮೀವಾನ್ ಪಾಪವರ್ಜಿತಃ ।
ಶ್ರುತ್ವಾ ಪುರಾಣಮಖಿಲಂ ಶತ್ರುಭಿಶ್ಚಾಪರಾಜಿತಃ ॥೩೬॥

ಇತಿ ಶ್ರೀಮಾತ್ಸ್ಯೇ ಮಹಾಪುರಾಣೇ ಮತ್ಸ್ಯಮನುಸಂವಾದೇ
ಚತುರ್ದಶಸಾಹಸ್ರ್ಯಾಂ ಸಂಹಿತಾಯಾಮೇತತ್ಪುರಾಣಾನುಕ್ರಮಣಿಕಾದಿ-
ಕಥನಂ ನಾಮೈಕನವತ್ಯಧಿಕದ್ವಿಶತತಮೋಽಧ್ಯಾಯಃ

---

೩೪ ಬ್ರಾಹ್ಮಣೋತ್ತಮರೇ, ಧರ್ಮವನ್ನರಿತ ಮನುಜನು ಶಿವ, ವಿಷ್ಣು, ಬ್ರಹ್ಮ, ಸೂರ್ಯ ಇವರನ್ನು ಪೂಜಿಸಿ ಒಂದು ಶ್ಲೋಕವನ್ನೋ, ಅರ್ಧಶ್ಲೋಕವನ್ನೋ, ಕೊನೆಗೆ ಒಂದು ಪಾದವನ್ನೋ ಶ್ರದ್ಧೆಯಿಂದ ಕೇಳಿದರೂ ಸಾಕು, ಅಥವಾ ಇತರರಿಗೆ ಹೇಳಿದರೂ ಸಾಕು, ಅವನಿಗೆ ಬರುವ ಸುಕೃತವನ್ನು ಹೇಳುವೆನು ಕೇಳಿರಿ

೩೫ ಬ್ರಾಹ್ಮಣನು ವಿದ್ಯಾವಂತನಾಗುವನು ಕ್ಷತ್ರಿಯನು ರಾಜ್ಯವನ್ನು ಸಂಪಾದಿಸುವನು ವೈಶ್ಯನು ಧನಿಕನಾಗುವನು ಶೂದ್ರನು ಸುಖವನ್ನು ಪಡೆಯುವನು

೩೬ ಈ ಪುರಾಣವನ್ನು ಸಮಗ್ರವಾಗಿ ಕೇಳಿದವನು ಆಯುಷ್ಮಂತನೂ, ಪುತ್ರವಂತನೂ ಆಗುವನು. ಅವನಿಗೆ ಸಂಪತ್ತು ಹೆಚ್ಚುವುದು ಪಾಪಗಳು ದೂರವಾಗುವುವು ಅವನ ಶತ್ರುಗಳೆಲ್ಲರೂ ಅಡಗಿ ಹೋಗುವರು

## ಅಧ್ಯಾಯದ ಸಾರಾಂಶ

ಮತ್ಸ್ಯಮಹಾಪುರಾಣದಲ್ಲಿ ಹೇಳಿರುವ ವಿಷಯಗಳ ಸೂಚಿಕೆಯನ್ನು ಈ ಅಧ್ಯಾಯವು ತಿಳಿಸುತ್ತದೆ

ಮತ್ಸ್ಯಮಹಾಪುರಾಣವು ವೈವಸ್ವತಮನುಚಕ್ರವರ್ತಿಗೆ ಮತ್ಸ್ಯರೂಪಧಾರಿಯಾದ ಮಹಾವಿಷ್ಣುವೇ ಹೇಳಿದಂತಹುದು ಸೃಷ್ಟಿಕ್ರಮದಿಂದ ತೊಡಗಿ ಮಹಾದಾನಗಳವರೆಗೆ ನೂರಾರು ಶ್ರೇಷ್ಠವಾದ ವಿಷಯಗಳು ಇದರಲ್ಲಿ ವಿವರಿಸಲ್ಪಟ್ಟಿವೆ ಈ ಪುರಾಣದ ಒಂದು ಶ್ಲೋಕವನ್ನು ಪಾರಾಯಣ ಮಾಡಿದರೂ ಸಾಕು, ಅನಂತವಾದ ಫಲವು ಲಭಿಸುವುದು ಇದನ್ನು ಭಕ್ತಿಯಿಂದ ಕೇಳಿದವನಿಗೂ ಹೇಳಿದವನಿಗೂ ಸಕಲ ವಿಧವಾದ ಶ್ರೇಯಸ್ಸು ಉಂಟಾಗುವುದು

ಮತ್ಸ್ಯಮನುಸಂವಾದರೂಪವಾಗಿ ಹದಿನಾಲ್ಕುಸಾವಿರ ಗ್ರಂಥಗಳಿಂದ
ಪರಿಮಿತವಾದ ಶ್ರೀಮತ್ಸ್ಯಮಹಾಪುರಾಣದಲ್ಲಿ ಪುರಾಣಾನುಕ್ರಮಣಿಕೆಯೆಂಬ
ಇನ್ನೂರತೊಂಬತ್ತೊಂದನೆಯ ಅಧ್ಯಾಯವು ಮುಗಿದುದು

## ಅಥ ಪುರಾಣಶ್ರವಣಕಾಲೀನಧರ್ಮಾಃ

ಶ್ರದ್ಧಾಭಕ್ತಿಸಮಾಯುಕ್ತಾ ನಾನ್ಯಕಾರ್ಯೇಷು ಲಾಲಸಾಃ ।
ವಾಗ್ಯತಾಃ ಶುಚಯೋಽವ್ಯಗ್ರಾಃ ಶ್ರೋತಾರಃ ಪುಣ್ಯಭಾಗಿನಃ ॥ ೧ ॥

ಅಭಕ್ತ್ಯಾ ಯೇ ಕಥಾಂ ಪುಣ್ಯಾಂ ಶೃಣ್ವಂತಿ ಮನುಜಾಧಮಾಃ ।
ತೇಷಾಂ ಪುಣ್ಯಫಲಂ ನಾಸ್ತಿ ದುಃಖಂ ಸ್ಯಾಜ್ಜನ್ಮಜನ್ಮನಿ ॥ ೨ ॥

ಪುರಾಣಂ ಯೇ ಚ ಸಂಪೂಜ್ಯ ತಾಂಬೂಲಾದ್ಯೈರುಪಾಯನೈಃ ।
ಶೃಣ್ವಂತಿ ಚ ಕಥಾಂ ಭಕ್ತ್ಯಾಽದರಿದ್ರಾಃ ಸ್ಯುರ್ನ ಸಂಶಯಃ ॥ ೩ ॥

ಕಥಾಯಾಂ ಕೀರ್ತ್ಯಮಾನಾಯಾಂ ಯೇ ಗಚ್ಛಂತ್ಯನ್ಯತೋ ನರಾಃ
ಭೋಗಾಂತರೇ ಪ್ರಣಶ್ಯಂತಿ ತೇಷಾಂ ದಾರಾಶ್ಚ ಸಂಪದಃ ॥ ೪ ॥

---

## ಪುರಾಣವನ್ನು ಕೇಳುವಾಗ ಅನುಸರಿಸಬೇಕಾದ ನಿಯಮಗಳು

೧ ಪುರಾಣವನ್ನು ಕೇಳುವವರು ಶ್ರದ್ಧಾಭಕ್ತಿಗಳಿಂದ ಕೂಡಿದವರಾಗಿರಬೇಕು ಬೇರೆ ಕೆಲಸಗಳಿಗೆ ಆ ಸಮಯದಲ್ಲಿ ಗಮನವನ್ನು ಕೊಡಬಾರದು ಪರಿಶುದ್ಧರಾಗಿ, ಏಕಾಗ್ರಚಿತ್ತದಿಂದ ಮೌನವಾಗಿ ಕೇಳಬೇಕು ಈ ನಿಯಮಗಳನ್ನು ಅನುಸರಿಸಿದರೆ ಪುಣ್ಯಭಾಗಿಗಳಾಗುವರು

೨ ಪುಣ್ಯಕಥೆಯನ್ನು ಭಕ್ತಿಯಿಲ್ಲದೆ ಯಾರು ಕೇಳುತ್ತಾರೋ, ಅವರನ್ನು ಮನುಷ್ಯರಲ್ಲಿ ಅಧಮರೆನ್ನಬೇಕು ಅವರಿಗೆ ಪುಣ್ಯದ ಫಲವು ಲಭಿಸುವುದಿಲ್ಲ ಪ್ರತಿಯೊಂದು ಜನ್ಮದಲ್ಲೂ ದುಃಖವೇ ಒದಗುವುದು

೩ ಗಂಧ, ಪುಷ್ಪ, ಧೂಪ, ದೀಪ, ತಾಂಬೂಲ ಮುಂತಾದುವುಗಳನ್ನು ಸಮರ್ಪಿಸಿ ಪೂಜೆಮಾಡಿ ಭಕ್ತಿಯಿಂದ ಪುರಾಣವನ್ನು ಕೇಳತಕ್ಕ ಸುಕೃತಶಾಲಿಗಳಿಗೆ ಬಡತನವು ಎಂದೆಂದಿಗೂ ಬಾರದು ಇದರಲ್ಲಿ ಸಂಶಯವೇ ಇಲ್ಲ

೪ ಕಥೆಯು ನಡೆಯುತ್ತಿರುವಾಗ ಸುಖಾಂತರಗಳಿಗೆ ಮನಸ್ಸುಕೊಟ್ಟು ನಡುವೆ ಎದ್ದು ಹೋಗುವವರು ಪತ್ನಿಯನ್ನೂ ಸಂಪತ್ತನ್ನೂ ಕಳೆದುಕೊಳ್ಳುವರು

ಸೋಷ್ಣೀಷಮಸ್ತಕಾ ಯೇ ಚ ಕಥಾಂ ಶೃಣ್ವಂತಿ ಪಾವನೀಂ ।
ತೇ ಬಲಾಕಾಃ ಪ್ರಜಾಯಂತೇ ಪಾಪಿನೋ ಮನುಜಾಧಮಾಃ ॥ ೫ ॥

ತಾಂಬೂಲಂ ಭಕ್ಷಯಂತೋ ಯೇ ಕಥಾಂ ಶೃಣ್ವಂತಿ ಪಾವನೀಂ ।
ಶ್ವವಿಷ್ಠಾಂ ಸ್ವಾದಯಂತ್ಯೇತಾನ್ನಯಂತಿ ಯಮಕಿಂಕರಾಃ ॥ ೬ ॥

ಯೇ ಚ ತುಂಗಾಸನಾರೂಢಾಃ ಕಥಾಂ ಶೃಣ್ವಂತಿ ದಾಂಭಿಕಾಃ ।
ಅಕ್ಷಯ್ಯಾನ್ನರಕಾನ್ ಭುಕ್ತ್ವಾ ತೇ ಭವಂತ್ಯೇವ ವಾಯಸಾಃ ॥ ೭ ॥

ಯೇ ವೈ ವರಾಸನಾರೂಢಾ ಯೇ ಚ ಮಧ್ಯಾಸನಸ್ಥಿತಾಃ ।
ಶೃಣ್ವಂತಿ ಸತ್ಕಥಾಂ ತೇ ವೈ ಭವಂತ್ಯರ್ಜುನಪಾದಪಾಃ ॥ ೮ ॥

---

೫ ತಲೆಗೆ ರುಮಾಲನ್ನು ಹಾಕಿಕೊಂಡು ಪವಿತ್ರವಾದ ಪುರಾಣಕಥೆಯನ್ನು ಕೇಳಬಾರದು ಹಾಗೆ ಮಾಡಿದರೆ ಪಾಪ ಬರುತ್ತದೆ ಅಂತಹವರು ಜನ್ಮಾಂತರದಲ್ಲಿ ಕೊಕ್ಕರೆಯಾಗಿ ಹುಟ್ಟುತ್ತಾರೆ ಅವರು ಮನುಷ್ಯರಲ್ಲಿ ಅಧಮರೆನಿಸಿಕೊಳ್ಳುತ್ತಾರೆ

೬ ತಾಂಬೂಲವನ್ನು ಹಾಕಿಕೊಳ್ಳುತ್ತ ಪುಣ್ಯಕಥೆಯನ್ನು ಯಾರು ಕೇಳುತ್ತಾರೋ, ಅವರನ್ನು ಯಮದೂತರು ಎಳೆದುಯ್ದು ನಾಯಿಯ ಮಲವನ್ನು ತಿನ್ನಿಸುತ್ತಾರೆ

೭ ಉನ್ನತವಾದ ಆಸನದ ಮೇಲೆ ಕುಳಿತುಕೊಂಡು ಕಥೆಯನ್ನು ಕೇಳುವ ಡಂಭಾಚಾರದವರು ಅನಂತಕಾಲ ನರಕದಲ್ಲಿ ಬಿದ್ದು ಗೋಳಾಡುವರು ಬಳಿಕ ಕಾಗೆಗಳಾಗಿ ಹುಟ್ಟುವರು

೮ ಸೋಫ, ಕುರ್ಚಿ, ಮುಂತಾದ ಉತ್ತಮವಾದ ಆಸನಗಳಲ್ಲಾಗಲಿ, ಬೆಂಚು, ಕಾಲುಮಣೆ ಮುಂತಾದ ಮಧ್ಯಮವಾದ ಆಸನಗಳಲ್ಲಾಗಲಿ ಕುಳಿತು ಸತ್ಕಥೆಯನ್ನು ಯಾರು ಕೇಳುವರೋ ಅವರು ಮತ್ತೀಮರವಾಗಿ ಜನಿಸುತ್ತಾರೆ

**ಅಸಂಪ್ರಣಮ್ಯ ಶೃಣ್ವಂತಿ ವಿಷಭಕ್ಷಾ ಭವಂತಿ ತೇ ।**
**ತಥಾ ಶಯಾನಾಃ ಶೃಣ್ವಂತಿ ಭವಂತ್ಯಜಗರಾ ನರಾಃ ॥ ೯ ॥**

**ಯಃ ಶೃಣೋತಿ ಕಥಾಂ ವಕ್ತುಃ ಸಮಾನಾಸನಸಂಸ್ಥಿತಃ ।**
**ಗುರುತಲ್ಪಸಮಂ ಪಾಪಂ ಸಂಪ್ರಾಪ್ಯ ನರಕಂ ವ್ರಜೇತ್ ॥೧೦॥**

**ಯೇ ನಿಂದಂತಿ ಪುರಾಣಜ್ಞಾನ್ ಕಥಾಂ ವೈ ಪಾಪಹಾರಿಣೀಂ ।**
**ತೇ ವೈ ಜನ್ಮಶತಂ ಮರ್ತ್ಯಾಃ ಸೂಕರಾಃ ಸಂಭವಂತಿ ಹಿ ॥೧೧॥**

**ಕಥಾಯಾಂ ಕೀರ್ತ್ಯಮಾನಾಯಾಂ ಯೇ ವದಂತಿ ದುರುತ್ತರಂ ।**
**ತೇ ಗರ್ದಭಾಃ ಪ್ರಜಾಯಂತೇ ಕೃಕಲಾಸಾಸ್ತಥೈವ ಚ ॥೧೨॥**

**ಕದಾಚಿದಪಿ ಯೇ ಪುಣ್ಯಾಂ ನ ಶೃಣ್ವಂತಿ ಕಥಾಂ ನರಾಃ ।**
**ತೇ ಭುಕ್ತ್ವಾ ನರಕಾನ್ ಘೋರಾನ್ ಭವಂತಿ ವನಸೂಕರಾಃ ॥೧೩॥**

---

೯ ಬಂದಕೂಡಲೆ ನಮಸ್ಕಾರಮಾಡದೆ ಕಥೆಯನ್ನು ಕೇಳುವುದಕ್ಕೆ ತೊಡಗುವ ಜನರು ವಿಷಭಕ್ಷಕರಾಗುವರು ಮಲಗಿಕೊಂಡು ಕೇಳಿದರೆ ಹೆಬ್ಬಾವಾಗಿ ಹುಟ್ಟುವರು

೧೦ ಕಥೆಯನ್ನು ಹೇಳುವವನಿಗೆ ಸರಿಸಮನಾದ ಆಸನದ ಮೇಲೆ ಕುಳಿತು ಕೊಂಡು ಕೇಳುವವನು ಗುರುಪತ್ನೀಸಮಾಗಮದ ಪಾಪಕ್ಕೆ ಗುರಿಯಾಗುವನು ನರಕದಲ್ಲಿ ಬೀಳುವನು

೧೧ ಪುರಾಣಗಳನ್ನು ಬಲ್ಲವರನ್ನೂ ಪಾಪಹಾರಕವಾದ ಪುಣ್ಯಕಥೆಯನ್ನೂ ನಿಂದಿಸುವ ಮನುಷ್ಯರು ನೂರು ಜನ್ಮಗಳಲ್ಲಿ ಹಂದಿಗಳಾಗಿ ಹುಟ್ಟುವರು

೧೨ ಕಥೆಯನ್ನು ಹೇಳುತ್ತಿರುವ ಕಾಲದಲ್ಲಿ ಅಸಭ್ಯವಾದ ಮಾತುಗಳನ್ನು ಆಡುವವರು ಕತ್ತೆಗಳಾಗಿಯೂ ಕೋಳಿಗಳಾಗಿಯೂ ಜನಿಸುತ್ತಾರೆ

೧೩ ಒಂದುಸಲವಾದರೂ ಪುಣ್ಯಕರವಾದ ಸತ್ಕಥೆಯನ್ನು ಕೇಳದ ಮನುಷ್ಯರು ಘೋರವಾದ ನರಕಗಳಿಗೆ ತುತ್ತಾಗುವರು ಬಳಿಕ ಕಾಡುಹಂದಿಯ ಜನ್ಮವನ್ನೆತ್ತುವರು

ಯೇ ಕಥಾಮನುಮೋದಂತೇ ಕೀರ್ತ್ಯಮಾನಾಂ ನರೋತ್ತಮಾಃ ।
ಅಶೃಣ್ವಂತೋऽಪಿ ತೇ ಯಾಂತಿ ಶಾಶ್ವತಂ ಪರಮಂ ಪದಂ ॥೧೪॥

ಕಥಾಯಾಂ ಕೀರ್ತ್ಯಮಾನಾಯಾಂ ವಿಘ್ನಂ ಕುರ್ವಂತಿ ಯೇ ಶಠಾಃ ।
ಕೋಟ್ಯಬ್ದಂ ನರಕಾನ್ ಭುಕ್ತ್ವಾ ಭವಂತಿ ಗ್ರಾಮಸೂಕರಾಃ ॥೧೫॥

ಯೇ ಶ್ರಾವಯಂತಿ ಮನುಜಾನ್ ಪುಣ್ಯಾಂ ಪೌರಾಣಿಕೀಂ ಕಥಾಂ ।
ಕಲ್ಪಕೋಟಿಶತಂ ಸಾಗ್ರಂ ತಿಷ್ಠಂತಿ ಬ್ರಹ್ಮಣಃ ಪದೇ ॥೧೬॥

ಆಸನಾರ್ಥಂ ಪ್ರಯಚ್ಛಂತಿ ಪುರಾಣಜ್ಞಸ್ಯ ಯೇ ನರಾಃ ।
ಕಂಬಲಾಜಿನವಾಸಾಂಸಿ ಮಂಚಂ ಫಲಕಮೇವ ಚ ॥೧೭॥

ಸ್ವರ್ಗಲೋಕಂ ಸಮಾಸಾದ್ಯ ಭುಕ್ತ್ವಾ ಭೋಗಾನ್ ಯಥೇಪ್ಸಿತಾನ್ ।
ಸ್ಥಿತ್ವಾ ಬ್ರಹ್ಮಾದಿಲೋಕೇಷು ಪದಂ ಯಾಂತಿ ನಿರಾಮಯಂ ॥೧೮॥

---

೧೪ ಸತ್ಕಥೆಯು ನಡೆಯುವುದಕ್ಕೆ ತಮ್ಮ ಸಂಮತಿಯನ್ನು ಕೊಡತಕ್ಕವರು ಸತ್ಪುರುಷರೆನಿಸುವರು ಅವರು ಕಥೆಯನ್ನು ಕೇಳದಿದ್ದರೂ ಶಾಶ್ವತವಾದ ಸದ್ಗತಿಯನ್ನು ಪಡೆಯುವರು

೧೫ ಕಥೆಯನ್ನು ಹೇಳುತ್ತಿರುವಾಗ ಅದಕ್ಕೆ ಅಡ್ಡಿಯನ್ನು ತಂದೊಡ್ಡುವ ಮೂರ್ಖರು ಕೋಟಿವರ್ಷಗಳಕಾಲ ನರಕದಲ್ಲಿ ದುಃಖಪಡುವರು ತರುವಾಯ ಊರುಹಂದಿಗಳಾಗಿ ಹುಟ್ಟುವರು

೧೬ ಪುಣ್ಯಪ್ರದವಾದ ಪುರಾಣಕಥೆಯನ್ನು ಜನರಿಗೆ ಹೇಳುವ ಧರ್ಮಾತ್ಮರು ಕೋಟಿಗಟ್ಟಲೆ ಕಲ್ಪಗಳಕಾಲ ಬ್ರಹ್ಮಲೋಕದಲ್ಲಿ ವಾಸಿಸುವರು

೧೭-೧೮ ಪೌರಾಣಿಕನಿಗೆ ಆಸನಕ್ಕಾಗಿ ಕಂಬಳಿ, ಕೃಷ್ಣಾಜಿನ, ವಸ್ತ್ರ, ಕಾಲುಮಣೆ, ಮಣೆ ಮುಂತಾದುವನ್ನು ಯಾರು ಕೊಡುತ್ತಾರೋ, ಅವರು ಸ್ವರ್ಗಲೋಕವನ್ನೈದಿ ಮನಸ್ಸಿನಲ್ಲಿ ಕೋರಿದ ಸುಖಗಳನ್ನೆಲ್ಲ ಅನುಭವಿಸುವರು ಬ್ರಹ್ಮ, ಇಂದ್ರ ಮುಂತಾದ ದೇವತೆಗಳ ಲೋಕಗಳಲ್ಲಿ ವಾಸಿಸುವರು ತರುವಾಯ ಉಪದ್ರವರಹಿತವಾದ ಮೋಕ್ಷಪದವಿಯನ್ನು ಪಡೆಯುವರು

ಪುರಾಣಸ್ಯ ಪ್ರಯಚ್ಛಂತಿ ಯೇ ವರಾಸನಮುತ್ತಮಂ ।
ಭೋಗಿನೋ ಜ್ಞಾನಸಂಪನ್ನಾ ಭವಂತಿ ಚ ಭವೇ ಭವೇ ॥೧೯॥

ಯೇ ಮಹಾಪಾತಕೈರ್ಯುಕ್ತಾ ಉಪಪಾತಕಿನಶ್ಚ ಯೇ ।
ಪುರಾಣಶ್ರವಣಾದೇವ ತೇ ಪ್ರಯಾಂತಿ ಪರಂ ಪದಂ ॥೨೦॥

ಏವಂವಿಧವಿಧಾನೇನ ಪುರಾಣಂ ಶೃಣುಯಾನ್ನರಃ ।
ಭುಕ್ತ್ವಾ ಭೋಗಾನ್ ಯಥಾಕಾಮಂ ವಿಷ್ಣುಲೋಕಂ ಪ್ರಯಾತಿ ಸಃ ॥೨೧॥

ಪುಸ್ತಕಂ ಪೂಜಯೇತ್ಪಶ್ಚಾದ್ವಸ್ತ್ರಾಲಂಕರಣಾದಿಭಿಃ ।
ವಾಚಕಂ ವಿಪ್ರಸಂಯುಕ್ತಂ ಪೂಜಯೀತ ಪ್ರಯತ್ನವಾನ್ ॥೨೨॥

---

೧೯ ಪುರಾಣಗ್ರಂಥಕ್ಕೆ ಉತ್ತಮವಾದ ಪೀಠವನ್ನು ತಂದುಕೊಟ್ಟವರು ಪ್ರತಿಯೊಂದು ಜನ್ಮದಲ್ಲಿಯೂ ಸುಖಶಾಲಿಗಳೂ ಜ್ಞಾನವಂತರೂ ಆಗುತ್ತಾರೆ

೨೦ ಮದ್ಯಪಾನ, ಸ್ವರ್ಣಸ್ತೇಯ ಮುಂತಾದ ಮಹಾಪಾತಕಗಳನ್ನು ಮಾಡಿದವರೂ, ಉಳಿದ ಸಾಮಾನ್ಯಪಾಪಗಳನ್ನು ಮಾಡಿದವರೂ ಪುರಾಣದ ಕಥೆಯನ್ನು ಕೇಳಿದ ಮಾತ್ರದಿಂದಲೇ ಪಾಪಮುಕ್ತರಾಗಿ ಸದ್ಗತಿಯನ್ನು ಪಡೆಯುವರು

೨೧ ಈ ನಿಯಮಗಳನ್ನು ಅನುಸರಿಸಿ ಪುರಾಣಕಥೆಯನ್ನು ಕೇಳುವ ಮನುಷ್ಯನು ತನ್ನ ಇಷ್ಟಬಂದಂತಹ ಸುಖಗಳನ್ನು ಅನುಭವಿಸಿ ವಿಷ್ಣುಲೋಕವನ್ನು ಸೇರುವನು

೨೨ ಬಳಿಕ ಪಾರಾಯಣಮಾಡಿದ ಪುಸ್ತಕವನ್ನು ವಸ್ತ್ರಭೂಷಣದಿಂದ ಪೂಜಿಸಬೇಕು ಪುರಾಣವೋದಿದವನನ್ನೂ, ಬ್ರಾಹ್ಮಣರನ್ನೂ ಪ್ರಯತ್ನದಿಂದ ಸತ್ಕರಿಸಬೇಕು

**ಗೋಭೂಮಿಹೇಮವಸ್ತ್ರಾಣಿ ವಾಚಕಾಯ ನಿವೇದಯೇತ್ ।**
**ಬ್ರಾಹ್ಮಣಾನ್ ಭೋಜಯೇತ್ಪಶ್ಚಾನ್ಮಂಡಲಡ್ಡುಕಪಾಯಸೈಃ ॥೨೩॥**

**ತ್ವಂ ವ್ಯಾಸರೂಪೀ ಭಗವಾನ್ ಬುಧ್ಯಾ ಚಾಂಗಿರಸೋಪಮಃ ।**
**ಪುಣ್ಯವಾನ್ಶೀಲಸಂಪನ್ನಃ ಸತ್ಯವಾದೀ ಜಿತೇಂದ್ರಿಯಃ ॥೨೪॥**

**ಪ್ರಸನ್ನಮಾನಸಂ ಕುರ್ಯಾದ್ದಾನಮಾನೋಪಚಾರತಃ ।**
**ತ್ವತ್ಪ್ರಸಾದಾದಿಮಾನ್ ಧರ್ಮಾನ್ ಸಂಪೂರ್ಣಾನ್ಶ್ರುತವಾನಹಂ ॥೨೫॥**

**ಏವಂ ಪ್ರಾರ್ಥನಕಂ ಕೃತ್ವಾ ವ್ಯಾಸಸ್ಯ ಪರಮಾತ್ಮನಃ ।**
**ಯಶಸ್ವೀ ಚ ಭವೇನ್ನಿತ್ಯಂ ಯಃ ಕುರ್ಯಾದೇವಮಾದರಾತ್ ॥೨೬॥**

---

೨೩ ಹಸು, ಭೂಮಿ, ಚಿನ್ನ, ವಸ್ತ್ರ ಇವೆಲ್ಲವನ್ನೂ ಪುರಾಣವೋದಿದಾತನಿಗೆ ಕೊಟ್ಟು ಗೌರವಿಸಬೇಕು ಮಂಡಿಗೆ, ಲಾಡು, ಪಾಯಸ ಮುಂತಾದವುಗಳನ್ನು ಬಡಿಸಿ ಬ್ರಾಹ್ಮಣರಿಗೆ ತೃಪ್ತಿಯಾಗುವಂತೆ ಭೋಜನಮಾಡಿಸಬೇಕು

೨೪–೨೬ "ಪುರಾಣಜ್ಞನಾದ ಎಲೈ ಬ್ರಾಹ್ಮಣೋತ್ತಮನೇ, ನೀನು ಪರಮಪೂಜ್ಯನಾದ ಸಾಕ್ಷಾದ್ವ್ಯಾಸನೇ ಸರಿ ಬುದ್ಧಿಯಲ್ಲಿ ಬೃಹಸ್ಪತಿಗೆ ಸಮಾನನಾಗಿರುವೆ ನೀನು ಸುಕೃತಶಾಲಿ, ಸದಾಚಾರನಿಷ್ಠ, ಸತ್ಯವಾದಿ, ಜಿತೇಂದ್ರಿಯ ನಿನ್ನ ಅನುಗ್ರಹದಿಂದ ಉತ್ಕೃಷ್ಟವಾದ ಈ ಧರ್ಮಗಳನ್ನೆಲ್ಲ ನಾನು ಚೆನ್ನಾಗಿ ತಿಳಿದುಕೊಂಡೆನು'' ಎಂದು ಸ್ತುತಿಸಿ ಪೌರಾಣಿಕನನ್ನು ವಸ್ತ್ರಭೂಷಣಾದಿಗಳಿಂದ ಆದರಿಸಿ ಸಂತೋಷಪಡಿಸಬೇಕು ದಿನದಿನವೂ ಪುರಾಣಶ್ರವಣಕಾಲದಲ್ಲಿ ಹೀಗೆ ಆದರದಿಂದ ಸತ್ಕರಿಸಿ ಪ್ರಾರ್ಥಿಸಿದರೆ ಭಗವತ್ಸ್ವರೂಪನಾದ ವ್ಯಾಸಮಹರ್ಷಿಯ ಪ್ರಸಾದದಿಂದ ಆತನು ಕೀರ್ತಿವಂತನಾಗಿ ಚಿರಕಾಲ ಬಾಳುವನು

**ನಾರದೋಕ್ತಾನಿಮಾನ್ ಧರ್ಮಾನ್ ಯಃ ಕುರ್ಯಾನ್ನಿಯತೇಂದ್ರಿಯಃ ।**
**ಕೃತ್ಸ್ನಂ ಫಲಮವಾಪ್ನೋತಿ ಪುರಾಣಶ್ರವಣಸ್ಯ ವೈ ॥೨೭॥**

**॥ ಸೂತ ಉವಾಚ ॥**

**ಮತ್ಸ್ಯರೂಪೀ ಸ ಭಗವಾನ್ಮನವೇ ಬುದ್ಧಿಶಾಲಿನೇ ।**
**ಅವಾಪೋದ್ಘಾತಸಹಿತಮುಕ್ತ್ವಾ ಹ್ಯಂತರ್ದಧೌ ತದಾ ॥೨೮॥**

**॥ ಇತಿ ಪುರಾಣಶ್ರವಣಕಾಲೀನಧರ್ಮಾಃ ॥**

---

**ಇತಿ ಶ್ರೀಮದ್ದ್ವೈಪಾಯನ ಮುನಿಪ್ರಣೀತಂ ಮತ್ಸ್ಯಮಹಾಪುರಾಣಂ ಸಮಾಪ್ತಂ**

---

೨೭ ನಾರದಮಹಾಮುನಿಯು ಹೇಳಿದ ಈ ಧರ್ಮಗಳನ್ನು ಯಾವ ಮನುಷ್ಯನು ಜಿತೇಂದ್ರಿಯನಾಗಿ ಆಚರಣೆಗೆ ತರುತ್ತಾನೆಯೋ, ಅವನು ಪುರಾಣ ಶ್ರವಣದಿಂದ ಸಂಪೂರ್ಣವಾದ ಫಲವನ್ನು ಪಡೆಯುತ್ತಾನೆ

೨೮ ಮತ್ಸ್ಯಾವತಾರವನ್ನೆತ್ತಿದ ಪೂಜ್ಯನಾದ ಮಹಾವಿಷ್ಣುವು ಬಹು ಪ್ರಾಜ್ಞನಾದ ವೈವಸ್ವತಮನುವಿಗೆ ಸಾಂಗೋಪಾಂಗವಾಗಿ ಈ ಪುರಾಣವನ್ನು ಹೇಳಿ ಅದೃಶ್ಯನಾದನು

ಪುರಾಣವನ್ನು ಕೇಳುವಾಗ ಅನುಸರಿಸಬೇಕಾದ ನಿಯಮಗಳನ್ನು ಹೇಳಿದುದಾಯಿತು

---

**ಶ್ರೀಕೃಷ್ಣದ್ವೈಪಾಯನಮಹರ್ಷಿಗಳಿಂದ ವಿರಚಿತವಾದ ಮತ್ಸ್ಯಮಹಾಪುರಾಣವು ಸಮಾಪ್ತವಾಯಿತು**

---

**ಶುಭಂ**

# ಶ್ರೀಮತ್ಸ್ಯಮಹಾಪುರಾಣದ ಆದ್ಯಂತ ವಿಷಯ ಸೂಚಿಕೆ


| ಸಂಖ್ಯೆ. | ವಿಷಯ | ಅಧ್ಯಾಯ | ಸಂಪುಟ | ಪುಟ |
|---|---|---|---|---|
| ೧ | ವೈವಸ್ವತಮನುವಿಗೂ ಮತ್ಸ್ಯಮೂರ್ತಿಗೂ ನಡೆದ ಸಂವಾದ | ೧ | ೧ | ೧ |
| ೨ | ಬ್ರಹ್ಮಾಂಡದ ಉತ್ಪತ್ತಿ | ೨ | ,, | ೮ |
| ೩ | ಆದಿಸೃಷ್ಟಿ | ೩-೪ | ,, | ೧೬ |
| ೪ | ದೇವಾಸುರಾದಿಗಳ ಸೃಷ್ಟಿ | ೫-೮ | ,, | ೩೮ |
| ೫ | ಮನ್ವಂತರಗಳ ವಿವರಣೆ | ೯ | ,, | ೭೨ |
| ೬ | ವೇನಮಹಾರಾಜನ ವೃತ್ತಾಂತ | ೧೦ | ,, | ೮೦ |
| ೭. | ಸೂರ್ಯವಂಶವರ್ಣನೆ | ೧೧, ೧೨ | ,, | ೧೦೧ |
| ೮ | ಪಿತೃವಂಶವರ್ಣನೆ | ೧೩-೧೫ | ,, | ೧೧೩ |
| ೯ | ಶ್ರಾದ್ಧವಿಧಿ-ಶ್ರಾದ್ಧಭೇದಗಳು | ೧೬-೧೮ | ,, | ೧೪೨ |
| ೧೦ | ಶ್ರಾದ್ಧದಿಂದ ಪಿತೃಗಳಿಗೆ ತೃಪ್ತಿಯಾಗುವ ರೀತಿ | ೧೯ | ,, | ೧೭೭ |
| ೧೧ | ಶ್ರಾದ್ಧಮಾಹಾತ್ಮ್ಯ, ಪಿತೃಮಾಹಾತ್ಮ್ಯ | ೨೦-೨೨ | ,, | ೧೮೧ |
| ೧೨ | ಚಂದ್ರವಂಶವರ್ಣನೆ | ೨೩-೨೪ | ,, | ೨೧೫ |
| ೧೩ | ಯಯಾತಿಚರಿತ | ೨೫-೪೨ | ,, | ೨೪೫ |
| ೧೪ | ಯದುವಂಶವರ್ಣನೆ | ೪೩-೪೫ | ,, | ೩೮೩ |
| ೧೫ | ವೃಷ್ಣಿವಂಶವರ್ಣನೆ | ೪೪ | ,, | ೪೨೦ |
| ೧೬ | ವಿಷ್ಣುವಿಗೆ ಭೃಗುಮಹರ್ಷಿಯ ಶಾಪ | ೪೭ | ,, | ೪೨೭ |
| ೧೭ | ದ್ರುಹ್ಯ, ಅನು ಮುಂತಾದವರ ಸಂತತಿಯ ವರ್ಣನೆ | ೪೮-೫೦ | ,, | ೪೮೫ |

# ಆದ್ಯಂತ ವಿಷಯ ಸೂಚಿಕೆ


| ಸಂಖ್ಯೆ | ವಿಷಯ | ಅಧ್ಯಾಯ | ಸಂಪುಟ | ಪುಟ |
|---|---|---|---|---|
| ೧೮ | ಅಗ್ನಿವಂಶವರ್ಣನೆ | ೫೧ | ೨ | ೧ |
| ೧೯ | ಕರ್ಮಯೋಗದ ಮೇಲ್ಮೆ | ೫೨ | ,, | ೧೩ |
| ೨೦ | ಪುರಾಣಾನುಕ್ರಮಣಿಕೆ | ೫೩ | ,, | ೧೯ |
| ೨೧ | ನಕ್ಷತ್ರಪುರುಷವ್ರತ | ೫೪ | ,, | ೩೬ |
| ೨೨ | ಆದಿತ್ಯಶಯನ ವ್ರತ | ೫೫ | , | ೪೫ |
| ೨೩ | ಕೃಷ್ಣಾಷ್ಟಮೀವ್ರತ | ೫೬ | ,, | ೫೫ |
| ೨೪ | ರೋಹಿಣೀಚಂದ್ರಶಯನವ್ರತ | ೫೭ | ,, | ೫೮ |
| ೨೫ | ತಟಾಕನಿರ್ಮಾಣವಿಧಿ | ೫೮ | ,, | ೬೬ |
| ೨೬ | ವೃಕ್ಷೋತ್ಸವವಿಧಿ | ೫೯ | ,, | ೭೯ |
| ೨೭ | ಸೌಭಾಗ್ಯಶಯನವ್ರತ | ೬೦ | ,, | ೮೨ |
| ೨೮ | ಅಗಸ್ತ್ಯಪೂಜಾವ್ರತ | ೬೧ | ,, | ೯೫ |
| ೨೯ | ಅನಂತತೃತೀಯಾವ್ರತ | ೬೨ | ,, | ೧೦೮ |
| ೩೦ | ರಸಕಲ್ಯಾಣಿನೀವ್ರತ | ೬೩ | ,, | ೧೧೭ |
| ೩೧ | ಆದ್ರಾ್ರನಂದಕರೀವ್ರತ | ೬೪ | ,, | ೧೨೪ |
| ೩೨ | ಅಕ್ಷಯ್ಯತೃತೀಯಾವ್ರತ | ೬೫ | ,, | ೧೩೧ |
| ೩೩ | ಸಾರಸ್ವತವ್ರತ | ೬೬ | ,, | ೧೩೩ |
| ೩೪ | ಗ್ರಹಣಸ್ನಾನವಿಧಿ | ೬೭ | ,, | ೧೩೮ |
| ೩೫ | ಸಪ್ತಮೀಸ್ನಪನವ್ರತ | ೬೮ | ,, | ೧೪೪ |
| ೩೬ | ಭೀಮದ್ವಾದಶೀವ್ರತ | ೬೯ | ,, | ೧೫೪ |
| ೩೭ | ಅನಂಗದಾನವ್ರತ | ೭೦ | ,, | ೧೬೯ |
| ೩೮ | ಅಶೂನ್ಯಶಯನವ್ರತ | ೭೧ | ,, | ೧೮೩ |
| ೩೯ | ಅಂಗಾರಕವ್ರತ | ೭೨ | ,, | ೧೮೮ |
| ೪೦ | ಗುರುಶುಕ್ರಪೂಜಾವ್ರತ | ೭೩ | ,, | ೧೯೯ |

# ಆದ್ಯಂತ ವಿಷಯ ಸೂಚಿಕೆ


| ಸಂಖ್ಯೆ | ವಿಷಯ | ಅಧ್ಯಾಯ | ಸಂಪುಟ | ಪುಟ |
|---|---|---|---|---|
| ೪೧ | ಕಲ್ಯಾಣಸಪ್ತಮೀವ್ರತ | ೭೪ | ೨ | ೨೦೨ |
| ೪೨ | ವಿಶೋಕಸಪ್ತಮೀವ್ರತ | ೭೫ | ,, | ೨೦೭ |
| ೪೩ | ಫಲಸಪ್ತಮೀವ್ರತ | ೭೬ | ,, | ೨೧೧ |
| ೪೪ | ಶರ್ಕರಾಸಪ್ತಮೀವ್ರತ | ೭೭ | ,, | ೨೧೫ |
| ೪೫ | ಕಮಲಸಪ್ತಮೀವ್ರತ | ೭೮ | ,, | ೨೧೯ |
| ೪೬ | ಮಂದಾರಸಪ್ತಮೀವ್ರತ | ೭೯ | ,, | ೨೨೨ |
| ೪೭ | ಶುಭಸಪ್ತಮೀವ್ರತ | ೮೦ | ,, | ೨೨೬ |
| ೪೮ | ವಿಶೋಕದ್ವಾದಶೀವ್ರತ | ೮೧-೮೨ | ,, | ೨೩೦ |
| ೪೯ | ದಾನಮಾಹಾತ್ಮ್ಯ | ೮೩ | ,, | ೨೪೫ |
| ೫೦ | ಲವಣಪರ್ವತದಾನ | ೮೪ | ,, | ೨೫೭ |
| ೫೧ | ಗುಡಪರ್ವತದಾನ | ೮೫ | ,, | ೨೬೦ |
| ೫೨ | ಸುವರ್ಣಪರ್ವತದಾನ | ೮೬ | ,, | ೨೬೩ |
| ೫೩ | ತಿಲಪರ್ವತದಾನ | ೮೭ | ,, | ೨೬೫ |
| ೫೪ | ಕಾರ್ಪಾಸಪರ್ವತದಾನ | ೮೮ | ,, | ೨೬೭ |
| ೫೫ | ಘೃತಪರ್ವತದಾನ | ೮೯ | ,, | ೨೬೯ |
| ೫೬ | ರತ್ನಪರ್ವತದಾನ | ೯೦ | ,, | ೨೭೨ |
| ೫೭ | ರಜತಪರ್ವತದಾನ | ೯೧ | ,, | ೨೭೫ |
| ೫೮ | ಶರ್ಕರಾಪರ್ವತದಾನ | ೯೨ | ,, | ೨೭೮ |
| ೫೯ | ನವಗ್ರಹಹೋಮ | ೯೩ | ,, | ೨೮೭ |
| ೬೦ | ನವಗ್ರಹಸ್ವರೂಪಕಥನ | ೯೪ | ,, | ೩೦೩ |
| ೬೧ | ಶಿವಚತುರ್ದಶೀವ್ರತ | ೯೫ | ,, | ೩೨೬ |
| ೬೨ | ಫಲತ್ಯಾಗಮಾಹಾತ್ಮ್ಯ | ೯೬ | ,, | ೩೩೬ |
| ೬೩ | ಆದಿತ್ಯವಾರಕಲ್ಪ | ೯೭ | ,, | ೩೪೨ |

## ಆದ್ಯಂತ ವಿಷಯ ಸೂಚಿಕೆ


| ಸಂಖ್ಯೆ | ವಿಷಯ | ಅಧ್ಯಾಯ | ಸಂಪುಟ | ಪುಟ |
|---|---|---|---|---|
| ೬೪ | ಸಂಕ್ರಾಂತ್ಯುದ್ಯಾಪನವಿಧಿ | ೯೮ | ೨ | ೩೪೮ |
| ೬೫ | ವಿಭೂತಿದ್ವಾದಶೀವ್ರತ | ೯೯-೧೦೦ | ,, | ೩೫೩ |
| ೬೬ | ಷಷ್ಠಿವ್ರತಮಾಹಾತ್ಮ್ಯ | ೧೦೧ | ,, | ೩೭೦ |
| ೬೭ | ಸ್ನಾನವಿಧಿ | ೧೦೨ | ,, | ೩೯೧ |
| ೬೮ | ಪ್ರಯಾಗಮಾಹಾತ್ಮ್ಯ | ೧೦೩-೧೧೨ | ,, | ೩೯೯ |
| ೬೯ | ಭೂಗೋಳವರ್ಣನ | ೧೧೩-೧೨೩ | ೩ | ೧ |
| ೭೦ | ಖಗೋಳವರ್ಣನ | ೧೨೪-೧೨೮ | ,, | ೧೪೫ |
| ೭೧ | ತ್ರಿಪುರಾಸುರೋಪಾಖ್ಯಾನ | ೧೨೯-೧೪೦ | ,, | ೨೨೩ |
| ೭೨ | ಮನ್ವಂತರಾನುಕೀರ್ತನ | ೧೪೧-೧೪೫ | ,, | ೩೭೩ |
| ೭೩ | ವಜ್ರಾಂಗನ ಉತ್ಪತ್ತಿ | ೧೪೬ | ೪ | ೧ |
| ೭೪ | ತಾರಕಾಸುರನ ಜನನ | ೧೪೭ | ,, | ೧೮ |
| ೭೫ | ತಾರಕಾಸುರನಿಗೆ ಬ್ರಹ್ಮನ ವರಪ್ರದಾನ | ೧೪೮ | ,, | ೨೫ |
| ೭೬ | ದೇವಾಸುರರ ಯುದ್ಧ | ೧೪೯-೧೫೩ | ,, | ೪೭ |
| ೭೭ | ಪಾರ್ವತೀಜನನ—ಪಾರ್ವತೀಪರಮೇಶ್ವರರ ವಿವಾಹ | ೧೫೪ | ,, | ೧೬೯ |
| ೭೮ | ಪಾರ್ವತಿಯ ತಪಸ್ಸಿನ ವರ್ಣನೆ | ೧೫೫-೧೫೭ | ,, | ೩೦೬ |
| ೭೯ | ಕುಮಾರಸ್ವಾಮಿಯ ಜನನ | ೧೫೮ | ,, | ೩೩೦ |
| ೮೦ | ಯುದ್ಧದಲ್ಲಿ ಕುಮಾರಸ್ವಾಮಿಯಿಂದ ತಾರಕಾಸುರನ ವಧೆ | ೧೫೯-೧೬೦ | ,, | ೩೪೩ |
| ೮೧ | ನರಸಿಂಹಾವತಾರ ವರ್ಣನ | ೧೬೧-೧೬೩ | ,, | ೩೬೩ |
| ೮೨ | ಪಾದ್ಮಕಲ್ಪ ವೃತ್ತಾಂತ | ೧೬೪-೧೭೧ | ,, | ೪೧೩ |

# ಆದ್ಯಂತ ವಿಷಯ ಸೂಚಿಕೆ


| ಸಂಖ್ಯೆ | ವಿಷಯ | ಅಧ್ಯಾಯ | ಸಂಪುಟ | ಪುಟ |
|---|---|---|---|---|
| ೮೩ | ಮಯ, ವಿರೋಚನ ಮುಂತಾದ ಅಸುರ ವೀರರಿಗೂ ದೇವತೆಗಳಿಗೂ ಯುದ್ಧ | ೧೭೨-೧೭೮ | ೫ | ೧ |
| ೮೪ | ಅಂಧಕಾಸುರನ ಸಂಹಾರ | ೧೭೯ | ,, | ೯೦ |
| ೮೫ | ವಾರಾಣಸೀಮಾಹಾತ್ಮ್ಯ | ೧೮೦-೧೮೫ | ,, | ೧೦೯ |
| ೮೬ | ನರ್ಮದಾಮಾಹಾತ್ಮ್ಯ | ೧೮೬-೧೯೪ | ,, | ೨೦೭ |
| ೮೭ | ಪ್ರವರಾನುಕೀರ್ತನ | ೧೯೫-೨೦೩ | ,, | ೩೩೧ |
| ೮೮ | ಪಿತೃಗಾಥಾನುಕೀರ್ತನ | ೨೦೪ | ,, | ೩೮೫ |
| ೮೯ | ಗೋದಾನಪ್ರಶಂಸೆ | ೨೦೫ | ,, | ೩೯೦ |
| ೯೦ | ಕೃಷ್ಣಾಜಿನದಾನ | ೨೦೬ | ,, | ೩೯೩ |
| ೯೧ | ವೃಷೋತ್ಸರ್ಗವಿಧಿ | ೨೦೭ | ,, | ೪೦೩ |
| ೯೨ | ಸಾವಿತ್ರೀಚರಿತ್ರೆ | ೨೦೮-೨೧೪ | ,, | ೪೧೩ |
| ೯೩ | ರಾಜಧರ್ಮ | ೨೧೫-೨೩೮ | ೬ | ೧ |
| ೯೪ | ಯಾತ್ರಾಪ್ರಕರಣ | ೨೪೦-೨೪೨ | ,, | ೨೦೭ |
| ೯೫ | ಶುಭಾಶುಭಶಕುನ ವರ್ಣನ | ೨೪೩ | ,, | ೨೨೫ |
| ೯೬ | ವಾಮನಾವತಾರ ವೃತ್ತಾಂತ | ೨೪೪-೨೪೬ | ,, | ೨೪೬ |
| ೯೭ | ವರಾಹಾವತಾರ ವೃತ್ತಾಂತ | ೨೪೭-೨೪೮ | ,, | ೨೯೧ |
| ೯೮ | ಅಮೃತಮಂಥನ | ೨೪೯-೨೫೧ | ,, | ೩೧೮ |
| ೯೯ | ವಾಸ್ತುಶಿಲ್ಪ ವರ್ಣನ | ೨೫೨-೨೫೭ | ೭ | ೧ |
| ೧೦೦ | ಪ್ರತಿಮಾಲಕ್ಷಣ | ೨೫೮-೨೬೩ | ,, | ೪೮ |
| ೧೦೧ | ದೇವತಾಪ್ರತಿಷ್ಠಾವಿಧಿ | ೨೬೪-೨೬೮ | ,, | ೧೧೧ |

# ಆದ್ಯಂತ ವಿಷಯ ಸೂಚಿಕೆ


| ಸಂಖ್ಯೆ | ವಿಷಯ | ಅಧ್ಯಾಯ | ಸಂಪುಟ | ಪುಟ |
|---|---|---|---|---|
| ೧೦೨ | ದೇವಾಲಯದ ಮತ್ತು ಮಂಟಪದ ಪ್ರಭೇದಗಳು | ೨೭೯-೨೮೦ | ೮ | ೧೬೨ |
| ೧೦೩ | ಭವಿಷ್ಯದ್ರಾಜವಂಶ ವರ್ಣನ | ೨೮೧-೨೮೩ | ,, | ೧೮೩ |
| ೧೦೪. | ತುಲಾಪುರುಷಾದಿಷೋಡಶ ಮಹಾದಾನಗಳು | ೨೮೪-೨೮೯ | ,, | ೨೧೬ |
| ೧೦೫ | ಕಲ್ಪಗಳ ವರ್ಣನ | ೨೯೦ | ,, | ೩೨೬ |
| ೧೦೬ | ಅನುಕ್ರಮಣಿಕಾಧ್ಯಾಯ | ೨೯೧ | ,, | ೩೩೩ |
| | ಪುರಾಣಶ್ರವಣದ ನಿಯಮಗಳು | | | ೩೪೨ |


ಶ್ರೀನಿವಾಸ್ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.